ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ: ಉಗಮ ಮತ್ತು ಬೆಳವಣಿಗೆ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಹೆಚ್.ಡಿ. ಪದವಿಯ ಸಲುವಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಪ್ರಕಾಶ್ ಕೆ.

ಮಾರ್ಗದರ್ಶಕರು
ಡಾ. ವಿಜಯ್ ಪೂಣಚ್ಚ ತಂಬಂಡ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೭

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ: ಉಗಮ ಮತ್ತು ಬೆಳವಣಿಗೆ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಹೆಚ್.ಡಿ. ಪದವಿಯ ಸಲುವಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಪ್ರಕಾಶ್ ಕೆ.

ಮಾರ್ಗದರ್ಶಕರು
ಡಾ. ವಿಜಯ್ ಪೂಣಚ್ಚ ತಂಬಂಡ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೭

ಸಂಶೋಧಕರ ಪ್ರಮಾಣ ಪತ್ರ

'ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ: ಉಗಮ ಮತ್ತು ಬೆಳವಣಿಗೆ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಹೆಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 30.11.2017
ಸ್ಥಳ : ವಿದ್ಯಾರಣ್ಯ

ಪ್ರಕಾಶ್ ಕೆ.
ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ583 276

ಮಾರ್ಗದರ್ಶಕರ ದೃಢೀಕರಣ ಪತ್ರ

'ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ: ಉಗಮ ಮತ್ತು ಬೆಳವಣಿಗೆ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪಿಹೆಚ್.ಡಿ. ಪದವಿಗಾಗಿ ಪ್ರಕಾಶ್ ಕೆ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 30.11.2017
ಸ್ಥಳ: ವಿದ್ಯಾರಣ್ಯ

ಡಾ. ವಿಜಯ್ ಪೂಣಚ್ಚ ತಂಬಂಡ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583 276

ಪರಿವಿಡಿ

ABBREVIATIONS ಸಂಕ್ಷೇಪಣೆಗಳು

ಎಐಸಿಸಿ	–	ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ
ಎಐಡಿಡಬ್ಲ್ಯುಎ	–	ಆಲ್ ಇಂಡಿಯಾ ಡೆಮಾಕ್ರಟಿಕ್ ವುಮೆನ್ಸ್ ಅಸೋಸಿಯೇಷನ್
ಎಐಕೆಎಸ್	–	ಆಲ್ ಇಂಡಿಯಾ ಕಿಸಾನ್ ಸಭಾ
ಎಐಪಿಡಬ್ಲ್ಯುಎ	–	ಆಲ್ ಇಂಡಿಯಾ ಪ್ರೋಗ್ರೆಸಿವ್ ರೈಟರ್ಸ್ ಅಸೋಸಿಯೇಷನ್
ಎಐಎಸ್ಎಫ್	–	ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್
ಎಐಟಿಯುಸಿ	–	ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್
ಎಐಡಬ್ಲ್ಯುಪಿಪಿ	–	ಆಲ್ ಇಂಡಿಯಾ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ
ಎಐವೈಎಫ್	–	ಆಲ್ ಇಂಡಿಯಾ ಯೂತ್ ಫೆಡರೇಷನ್
ಸಿಬಿ	–	ಕಾನ್ಫಿಡೆನ್ಶಿಯಲ್ ಬ್ರಾಂಚ್
ಸಿಐಟಿಯು	–	ಸೆಂಟರ್ ಫಾರ್ ಇಂಡಿಯನ್ ಟ್ರೇಡ್ ಯೂನಿಯನ್ಸ್
ಸಿಪಿಐ	–	ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ
ಸಿಪಿಐ(ಎಂ)	–	ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸಿಸ್ಟ್)
ಸಿಪಿಐ(ಮಾವೋವಾದಿ)	–	ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾವೋವಾದಿ)
ಸಿಪಿಐ(ಎಂ–ಎಲ್)	–	ಕಮ್ಯುನಿಸ್ಟ್ ಪಾರ್ಟಿ ಆಫ್ಇಂಡಿಯಾ (ಮಾರ್ಕ್ಸಿಸ್ಟ್–ಲೆನಿನಿಸ್ಟ್)
ಸಿಆರ್ಆರ್	–	ಕ್ರೌನ್ ರೆಪ್ರೆಸೆಂಟೇಟೀವ್ ರೆಕಾರ್ಡ್ಸ್
ಡಿವೈಎಫ್ಐ	–	ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ
ಡಿಐಆರ್	–	ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್
ಎಫ್ಎನ್ಆರ್	–	ಫೋರ್ಟ್ ನೈಟ್ಲಿ ರಿಪೋರ್ಟ್
ಐಎಲ್ಸಿ	–	ಇಂಟರ್ನ್ಯಾಷನಲ್ ಲೇಬರ್ ಕಾನ್ಫರೆನ್ಸ್
ಐಎಲ್ಓ	–	ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಷನ್
ಐಎನ್ಸಿ	–	ಇಂಡಿಯನ್ ನ್ಯಾಷನಲ್ ಕಾಂಗ್ರೆಸ್
ಇನ್ಪ್ರೆಕರ್ (INPRECORR)	–	ಇಂಟರ್ನ್ಯಾಷನಲ್ ಪ್ರೆಸ್ ಕರೆಸ್ಪಾಂಡೆನ್ಸ್ ಆಫ್ ಕಮ್ಯುನಿಸ್ಟ್ ಇಂಟರ್ನ್ಯಾಷನಲ್
ಐಪಿಟಿಎ	–	ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ (ಇಪ್ಟಾ)

ಕೆಪಿಸಿಸಿ	–	ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ
ಕೆಪಿಆರ್‌ಎಸ್	–	ಕರ್ನಾಟಕ ಪ್ರಾಂತ ರೈತ ಸಂಘ
ಕೆಪಿಟಿಯುಸಿ	–	ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್
ಕೆಎಸ್‌ಎ	–	ಕರ್ನಾಟಕ ಸ್ಟೇಟ್ ಆರ್ಕೈವ್ಸ್
ಎಲ್‌ಪಿಜಿ	–	ಲಿಬರಲೈಸೇಷನ್ ಪ್ರೈವಟೈಸೇಷನ್ ಗ್ಲೋಬಲೈಸೇಷನ್
ಎಂಸಿಸಿ	–	ಮಾವೋಯಿಸ್ಟ್ ಕೋ–ಆರ್ಡಿನೇಷನ್ ಸೆಂಟರ್
ಎಂಎಆರ್	–	ಮೈಸೂರು ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್
ಎಂಐಎಸ್‌ಎ	–	ಮೈಂಟನೆನ್ಸ್ ಆಫ್ ಇಂಟರ್ನಲ್ ಸೆಕ್ಯೂರಿಟಿ ಆಕ್ಟ್
ಎಂಎಸ್‌ಎಂ	–	ಮೈಸೂರು ಅಂಡ್ ಸದರ್ನ್ ಮರಾಠ
ಎಂಎಸ್‌ಎಸ್‌ಎಫ್	–	ಮೈಸೂರು ಸ್ಟೇಟ್ ಸ್ಟೂಡೆಂಟ್ಸ್ ಫೆಡರೇಷನ್
ಎನ್‌ಎಫ್‌ಐಡಬ್ಲ್ಯು	–	ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮನ್
ಎನ್‌ಎಐ	–	ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ
ಪಿಡಬ್ಲ್ಯುಜಿ	–	ಪೀಪಲ್ಸ್ ವಾರ್ ಗ್ರೂಪ್
ಎಸ್‌ಎಫ್‌ಐ	–	ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ

ಅಧ್ಯಾಯ 1

ಪ್ರಸ್ತಾವನೆ

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಕುರಿತಾದ ಪ್ರಸ್ತುತ ಮಹಾಪ್ರಬಂಧವು ಅದರ ಹುಟ್ಟಿನಿಂದ ನವ-ಉದಾರವಾದಿ ಘಟ್ಟದವರೆಗಿನ ವಿವಿಧ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಲು ಉದ್ದೇಶಿಸಿದೆ. ಪ್ರಸ್ತುತ ಅಧ್ಯಯನವು ಕಮ್ಯುನಿಸ್ಟ್ ಚಳುವಳಿಯು ಕರ್ನಾಟಕದಲ್ಲಿ ಬೆಳೆದ ಚಾರಿತ್ರಿಕ ಚೌಕಟ್ಟನ್ನು ವಿಶ್ಲೇಷಿಸುವುದರ ಜೊತೆಗೆ, ಅದು ಸಂಘಟಿಸಿದ ಚಳುವಳಿಗಳು ಮತ್ತು ಅದರಿಂದಾದ ಸಾಮಾಜಿಕ-ರಾಜಕೀಯ ಬದಲಾವಣೆಗಳ ಬಗ್ಗೆ ಚರ್ಚಿಸಲಿದೆ.

ಕನ್ನಡ ಭಾಷೆಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಚರಿತ್ರೆಯಿದೆಯೆಂದು ಭಾಷಾಶಾಸ್ತ್ರಜ್ಞರು ಗುರುತಿಸಿದ್ದಾರೆ. ಕನ್ನಡ ಮಾತನಾಡುವ ಜನತೆಯ ಚರಿತ್ರೆಯು ಇದಕ್ಕಿಂತಲೂ ಸಾವಿರಾರು ವರ್ಷಗಳ ಹಿಂದಿನದು. ಈ ದೀರ್ಘ ಅವಧಿಯಲ್ಲಿ ಕನ್ನಡದ ಜೊತೆಯಲ್ಲೇ ಹಲವು ಭಾಷೆಗಳನ್ನಾಡುವ ಜನತೆ ವಿವಿಧ ಆಡಳಿತಗಳಲ್ಲಿ ಒಂದು ಭೌಗೋಳಿಕ ಪ್ರದೇಶಕ್ಕೆ ಒಳಪಟ್ಟಿರುವುದನ್ನು ಊಳಿಗಮಾನ್ಯ ಅವಧಿಯಲ್ಲೂ ಮತ್ತು ಆಧುನಿಕ-ಪೂರ್ವ ವಸಾಹತು ಕಾಲಘಟ್ಟದಲ್ಲೂ ಕಾಣಬಹುದು. ಹೀಗಾಗಿ ಕರ್ನಾಟಕ ಎಂದರೆ ಅದು ಯಾವಾಗಲೂ ಒಂದೇ ಏಕೀಕೃತ ಆಡಳಿತ ಘಟಕವಾಗಿರಲಿಲ್ಲ. ಭಾರತ ಉಪಖಂಡದ ವಿವಿಧ ಪ್ರದೇಶಗಳ ಜೊತೆಯಲ್ಲಿ ವಿಭಿನ್ನ ಕಾಲಘಟ್ಟಗಳಲ್ಲಿ ಹಲವು ಹಂತಗಳ ಆರ್ಥಿಕ-ಸಾಮಾಜಿಕ-ರಾಜಕೀಯ ಸಂಬಂಧಗಳನ್ನು ಅದು ಹೊಂದಿತ್ತು. ಈ ಹಿನ್ನೆಲೆಯಲ್ಲಿ, ಆಧುನಿಕ-ಪೂರ್ವ ಕರ್ನಾಟಕದ ಚರಿತ್ರೆಯು ಸಹಸ್ರಮಾನಗಳ ಅವಧಿಯ ಭಾರತ ಉಪಖಂಡದ ಚಾರಿತ್ರಿಕ ಬೆಳವಣಿಗೆಯ ಚರಿತ್ರೆಯೂ ಆಗಿದೆ. ಚರಿತ್ರೆಕಾರರಾದ ಡಿ.ಡಿ.ಕೊಸಾಂಬಿಯವರು ಪೂನಾ ಜಿಲ್ಲೆಯಲ್ಲಿ ತಾವು ಕಂಡುಹಿಡಿದ ಮೈಕ್ರೋಶಿಲೆಗಳ ಮೂಲಕ ಡೆಖನ್ ಮತ್ತು ಮಧ್ಯ ಭಾರತದ ನಡುವಿನ ಚರಿತ್ರೆ-ಪೂರ್ವ ಸಂಬಂಧಗಳನ್ನು ನಿರೂಪಿಸುತ್ತಾ ಪ್ರಾಚೀನ ಮಾನವರ ಚಲನೆಯನ್ನು ವಿವರಿಸಿದರು (ಜ್ಹಾ 2012: 14). ಒಂದು ಭಾಷಿಕ ಮತ್ತು ಸಾಂಸ್ಕೃತಿಕ ಐಕ್ಯತೆಯು ಜನಜೀವನಗಳ ನಿರಂತರವಾದ ಬೆಳವಣಿಗೆ ಮತ್ತು ಬದಲಾವಣೆಗಳೊಂದಿಗೆ ಬೆಸೆದುಕೊಂಡಿದೆ ಎಂಬುದನ್ನು ಸಾಧಿಸಿದರು. ಈ ಪ್ರಕ್ರಿಯೆ ಬೆಳೆಯುತ್ತಾ ಸಾಗುತ್ತಾ ಮತ್ತು ಬದಲಾಗುತ್ತಾ ಬಂದು 1956 ರಲ್ಲಿ ಪ್ರತ್ಯೇಕವಾದ ರಾಜಕೀಯ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕವು ಉದಯಿಸಿತೆನ್ನಬಹುದಾಗಿದೆ.

ಕನ್ನಡ ಭೂಪ್ರದೇಶದ ಜನತೆಯ ಚರಿತ್ರೆಯು ನಿರಂತರವಾದ ಪ್ರತಿರೋಧದ ಚರಿತ್ರೆಯಾಗಿಯೇ ಬೆಳೆದು ಬಂದಿದೆ. ಮಾನವನ ಘನತೆಗಾಗಿ, ಸಮಾನತೆಗಾಗಿ, ಸ್ವಾತಂತ್ರ್ಯಕ್ಕಾಗಿ ಮತ್ತು ನ್ಯಾಯಕ್ಕಾಗಿನ ತುಡಿತಗಳು ಹಲವು ರೂಪಗಳಲ್ಲಿ ಪ್ರತಿರೋಧವನ್ನು ಪ್ರಕಟಿಸಿವೆ. 12 ನೇ ಶತಮಾನದ ವಚನ ಚಳುವಳಿಯು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಪ್ರಚ್ಛನ್ನವಾಗಿ ಪ್ರತಿಪಾದಿಸಿತು. ಬ್ರಿಟಿಷ್ ಪೂರ್ವ ಊಳಿಗಮಾನ್ಯ ಸಂಕಷ್ಟಗಳ ವಿರುದ್ಧ ಹಲವು

ದಂಗೆಗಳು ಮತ್ತು ಹೋರಾಟಗಳಲ್ಲಿ ಇದು ಪ್ರತಿಫಲನಗೊಂಡಿತ್ತು. 18–19 ನೇ ಶತಮಾನಗಳಲ್ಲಿ ನಡೆದ ಸಂಗೊಳ್ಳಿ ರಾಯಣ್ಣನ ಬಂಡಾಯ, ನಗರ ದಂಗೆ, ಅಮರ ಸುಳ್ಯ ಬಂಡಾಯ ಮುಂತಾದವುಗಳ ಈ ನಿಟ್ಟಿನಲ್ಲೇ ನಡೆದಿತ್ತು. ಸ್ವಾತಂತ್ರ್ಯ–ಪೂರ್ವ ಕನ್ನಡ ಭಾಷಿಕ ಪ್ರದೇಶಗಳನ್ನು ಬ್ರಿಟಿಷರು ಪೂರ್ಣವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗಿದ್ದು ಟಿಪ್ಪು ಸುಲ್ತಾನನನ್ನು ಯುದ್ಧದಲ್ಲಿ ಕೊಂದ ನಂತರವೇ. ಮೈಸೂರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಕರ್ನಾಟಕ ಪ್ರದೇಶದ ಕೆಲವು ಭಾಗಗಳನ್ನು ನೇರವಾಗಿ ತಮ್ಮ ಆಡಳಿತಕ್ಕೆ ಮತ್ತು ಕೆಲವು ಪ್ರದೇಶಗಳನ್ನು ವಿವಿಧ ರಾಜರುಗಳ ಆಡಳಿತಕ್ಕೆ ವಿಭಜನೆ ಮಾಡಿದರು. ಈ ವಿಭಜನೆಗೆ ಯಾವುದೇ ತಾತ್ವಿಕ ತಳಹದಿ ಇರಲಿಲ್ಲ. ಟಿಪ್ಪುವನ್ನು ಸೋಲಿಸಲು ಸಹಕರಿಸಿದ ಮರಾಠರಿಗೂ ಮತ್ತು ಹೈದರಾಬಾದಿನ ನಿಜಾಮನಿಗೂ ಕೆಲವು ಪ್ರದೇಶಗಳನ್ನು ಹಂಚಿದರು. ತಮ್ಮ ನೇರ ಆಡಳಿತಕ್ಕೂ ಕೆಲವು ಪ್ರದೇಶಗಳನ್ನು ಇಟ್ಟುಕೊಂಡರು ಮತ್ತು ಉಳಿದ ಪ್ರದೇಶಗಳನ್ನು ಮೈಸೂರಿನ ಒಡೆಯರಿಗೆ ನೀಡಿದರು. ಇದಲ್ಲದೆ ಕೆಲವು ಪ್ರದೇಶಗಳನ್ನು ಜಹಗೀರುಗಳ ರೂಪದಲ್ಲೂ ಕೆಲವರಿಗೆ ನೀಡಿದರು (ಗೋವಿಂದರಾಜು 2010: 426). ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದೇ ರಾಜಕೀಯ ಮತ್ತು ಅಡಳಿತಾತ್ಮಕ ಘಟಕವನ್ನಾಗಿ ಮಾಡಬೇಕೆಂದು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಧ್ವನಿ ಮೊಳಗಿದಾಗ ಕನ್ನಡ ಭಾಷಿಕ ಪ್ರದೇಶಗಳು ಪ್ರಧಾನವಾಗಿ ಐದು ವಿಭಿನ್ನ ಆಡಳಿತ ಪ್ರದೇಶಗಳಿಗೆ ಒಳಪಟ್ಟಿತ್ತು. ಮೈಸೂರು ಮತ್ತು ಹೈದರಾಬಾದ್ ರಾಜ ಸಂಸ್ಥಾನಗಳ ಆಡಳಿತಕ್ಕೆ ಒಳಪಟ್ಟ ಕನ್ನಡ ಪ್ರದೇಶಗಳು, ಬ್ರಿಟಿಷ್ ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ಮಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳು, ಮತ್ತು ಬ್ರಿಟಿಷ್ ಬಾಂಬೆ ಆಡಳಿತಕ್ಕೆ ಒಳಪಟ್ಟ ಕನ್ನಡ ಪ್ರದೇಶಗಳು ಹಾಗೂ ಕೊಡಗು ರಾಜ್ಯವಾಗಿ ವಿಭಜನೆ ಮಾಡಲ್ಪಟ್ಟಿದ್ದವು. ಇವಲ್ಲದೆ ಕೆಲವು ಸಣ್ಣ ಸಣ್ಣ ರಾಜಾಡಳಿತ ಪ್ರದೇಶಗಳಿದ್ದವು.

ಏಕೀಕರಣ ಪೂರ್ವದ ಈ ಪ್ರದೇಶಗಳ ರಾಜಕೀಯ ಆಡಳಿತದ ಪ್ರಧಾನ ಭಾಷೆ ಮತ್ತು ಆರ್ಥಿಕ–ಸಾಮಾಜಿಕ ಸಂಸ್ಕೃತಿಗಳು ಇಲ್ಲಿನ ಕನ್ನಡ ಭಾಷಿಕ ಸಮುದಾಯಗಳನ್ನು ಪ್ರಭಾವಿಸಿವೆ. ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಮರಾಠಿ ಮತ್ತು ಉತ್ತರ ಭಾರತೀಯ ಪ್ರಭಾವಗಳು, ಹೈದರಾಬಾದ್ ಕರ್ನಾಟಕದಲ್ಲಿ ಮರಾಠಿ ಮತ್ತು ಉರ್ದು ನಿಜಾಂಶಾಹಿ ಪ್ರಭಾವಗಳು, ಮೈಸೂರಿನಲ್ಲಿ ರಾಜಪ್ರಭುತ್ವದ ಪ್ರಭಾವಗಳಾಗಿವೆ. ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿದ್ದ ಮಂಗಳೂರು ಮತ್ತು ಬಳ್ಳಾರಿಯಲ್ಲಿ ವಿಭಿನ್ನ ಪ್ರಭಾವಗಳು ಬೀರಿವೆ. ಕೊಡಗು ವಿಶಿಷ್ಟವಾದ ಹಲವಾರು ಬುಡಕಟ್ಟುಗಳ ಮತ್ತು ಬ್ರಿಟಿಷ್ ಪ್ಲಾಂಟರುಗಳ ಪ್ರಭಾವಗಳಿಗೆ ಒಳಪಟ್ಟಿತ್ತು. ಇಂತಹ ವಿಭಿನ್ನ ಪರಿಸ್ಥಿತಿಗಳ ಜೊತೆಗೆ ಬ್ರಿಟಿಷ್ ಪಾಶ್ಚಾತ್ಯ ಪ್ರಭಾವಗಳು ಸಹ ಮೇಳೈಸಿಕೊಂಡಿವೆ. ಈ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿದ್ದ ಭೂ ಗೇಣಿ, ಹಿಡುವಳಿ ಪ್ರಮಾಣ, ತೆರಿಗೆ ಪದ್ಧತಿಗಳು, ಕೃಷಿ ವಿಧಾನಗಳು ಮತ್ತು ಕೈಗಾರಿಕೆಗಳು, ಅದರಲ್ಲಿ ದುಡಿಯುವ ಕಾರ್ಮಿಕರಿಗೆ ಸಂಬಂಧಿಸಿದ ಕಾಯ್ದೆಗಳು, ಹೀಗೆ ಇಡಿಯಾಗಿ ಅಲ್ಲಿನ ಉತ್ಪಾದನಾ ವ್ಯವಸ್ಥೆಯು ಅಲ್ಲಿನ ಸಾಮಾಜಿಕ ಚರಿತ್ರೆಯನ್ನು ರೂಪಿಸಿದೆ. ಬ್ರಿಟಿಷ್ ವಸಾಹತುಶಾಹಿಯು ಪಶ್ಚಿಮದ ಆಧುನಿಕತೆಯನ್ನು ಯೂರೋಪಿಗಿಂತ ಭಿನ್ನವಾಗಿ ಭಾರತದಲ್ಲಿ ಜಾರಿಗೊಳಿಸಿತು. ಇಲ್ಲಿನ ಊಳಿಗಮಾನ್ಯ ಅಥವಾ ಪಾಳೇಗಾರಿ ಸಾಮಾಜಿಕ ಸಂಬಂಧಗಳ ಜೊತೆ ರಾಜಿ ಮಾಡಿಕೊಂಡ ಆಧುನಿಕತೆಯ

ಸಂಬಂಧಗಳಾಗಿ ಅದು ಜಾರಿಯಾಯಿತು. ಇದೂ ಕೂಡಾ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಆಯಿತು. ಹೀಗಾಗಿ ಏಕೀಕರಣ ಪೂರ್ವ ಕರ್ನಾಟಕವು ಹಲವು ಸಂಸ್ಕೃತಿಗಳ, ಹಲವು ಜೀವನ ವಿಧಾನಗಳ ಪ್ರದೇಶವಾಗಿತ್ತು. ಬಹುತ್ವಗಳ ಕರ್ನಾಟಕವನ್ನು ಒಂದುಗೂಡಿಸುವ ಕೆಲಸದಲ್ಲಿ ಭಾಷಾ ರಾಷ್ಟ್ರೀಯತೆಯು ಒಂದು ಹಂತದ ಕೆಲಸ ಮಾಡಿತು.

ಮೈಸೂರು ಸಂಸ್ಥಾನವು ಹೈದರ್ ಮತ್ತು ಟಿಪ್ಪುವಿನ ಆಡಳಿತದಲ್ಲಿ ಆಧುನಿಕತೆಯ ಸ್ಥಿತ್ಯಂತರಕ್ಕೆ ಒಳಗಾಯಿತು. ಫ್ರೆಂಚ್ ಕ್ರಾಂತಿಯ ಪ್ರಭಾವಕ್ಕೆ ಒಳಗಾಗಿದ್ದ ಟಿಪ್ಪು ತನ್ನನ್ನು 'ಸಿಟಿಜನ್' ಎಂದು ಕರೆದುಕೊಂಡಿದ್ದ. ಇದು ಆಧುನಿಕತೆಯ ಅನಿವಾರ್ಯ ಬೆಳವಣಿಗೆಯಲ್ಲಿ ಒಂದು ಗಮನಾರ್ಹ ಅಂಶವಾಗಿತ್ತು. ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಸಂಕೇತವಾಗಿದ್ದ ಟಿಪ್ಪು ನಿಧನಾ ನಂತರ ಈ ಬೆಳವಣಿಗೆಗೆ ಅಡ್ಡಿಯಾಯಿತು. ಮೈಸೂರಿನ ಅರಸರು ನೇರವಾಗಿ ಬ್ರಿಟಿಷರ ಕೃಪಾಶಯಕ್ಕೆ ಬಂದದ್ದರಿಂದ ಮೈಸೂರು ಸಂಸ್ಥಾನದ ಜನರ ಸಾಮಾಜಿಕ ಮನೋಭಾವದ ಮೇಲೆ ಇದು ಪರಿಣಾಮ ಬೀರಿತು. 69,165 ಚದರ ಮೈಲಿಗಳೊಂದಿಗೆ ಮೈಸೂರು ಉಳಿದ ಭಾಗಗಳಿಗಿಂತ ವಿಸ್ತಾರದಲ್ಲಿ ದೊಡ್ಡದಾಗಿತ್ತು. ಜನಸಂಖ್ಯೆ, ನಗರೀಕರಣ, ಆರ್ಥಿಕ ಬೆಳವಣಿಗೆ, ಶಿಕ್ಷಣ ಮುಂತಾದ ಎಲ್ಲಾ ವಿಚಾರಗಳಲ್ಲೂ ಮೈಸೂರು ಸಂಸ್ಥಾನವು ಇತರೆ ಭಾಗಗಳಿಗಿಂತ ಮುಂದಿತ್ತು. ಇಲ್ಲಿನ ರಾಜಕೀಯವು ನಗರ ಕೇಂದ್ರಿತ, ಶಿಕ್ಷಿತ ಮತ್ತು ಮಧ್ಯಮ ವರ್ಗಗಳಿಗೆ ಸೇರಿದ ಒಕ್ಕಲಿಗರ ಹಿಡಿತದಲ್ಲಿತ್ತು. ಇವರು ಜನಸಂಖ್ಯೆಯ ಶೇಕಡಾ ಇಪ್ಪತ್ತರಷ್ಟಿದ್ದರು (ರಾಘವೇಂದ್ರ ರಾವ್ 2010: 29). ಆದರೆ ಮೈಸೂರಿನ ಅಧಿಕಾರ ವರ್ಗ ಬಹುತೇಕ ಮದ್ರಾಸಿನ ಬ್ರಾಹ್ಮಣರ ಕೈಯಲ್ಲಿತ್ತು. ಈ ಹಿನ್ನೆಲೆಯ ಮೈಸೂರು ಮತ್ತು ಮದ್ರಾಸಿ ಬ್ರಾಹ್ಮಣರ ನಡುವಿನ ಅಧಿಕಾರದ ಸಂಘರ್ಷಕ್ಕೆ ದೀರ್ಘ ಇತಿಹಾಸವೇ ಇದೆ. ಮುಸ್ಲಿಮರು ಮತ್ತು ದಲಿತ ಜಾತಿಗಳು ಪ್ರಭಾವಶಾಲಿ ಸಂಖ್ಯೆಯನ್ನು ಹೊಂದಿದ್ದವು. ಮೈಸೂರು ಸಂಸ್ಥಾನದ ಜನರ ಭಾಷೆ ಪ್ರಧಾನವಾಗಿ ಕನ್ನಡವೇ ಆದರೂ ತೆಲುಗು ಮತ್ತು ತಮಿಳಿನ ಪ್ರಭಾವದಿಂದಾಗಿ, ಸಾಂಸ್ಕೃತಿಕವಾಗಿ ದಕ್ಷಿಣ ಭಾರತೀಯ ಸ್ವರೂಪವನ್ನು ಹೊಂದಿತ್ತು.

ಬಾಂಬೆ-ಕರ್ನಾಟಕ ಪ್ರದೇಶದಲ್ಲಿ ಬ್ರಿಟಿಷರು ಜಾರಿಗೊಳಿಸಿದ ಭೂ ಕಾಯ್ದೆಗಳು ಮತ್ತು ಕೈಗಾರಿಕಾ ಕಾಯ್ದೆಗಳು ಒಂದು ನಿರ್ದಿಷ್ಟ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ರೂಪಿಸಿತು. ಮಾತ್ರವಲ್ಲ, ಮರಾಠಿ ಭಾಷೆಯ ಪ್ರಾಬಲ್ಯದಿಂದಾಗಿ, ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಸಾಂಸ್ಕೃತಿಕ ಪ್ರಭಾವಗಳು ಇಲ್ಲಿ ಹೆಚ್ಚಿಗಾದವು. ಆರ್ಥಿಕವಾಗಿ ಬಾಂಬೆ ಭಾರತೀಯ ಬಂಡವಾಳದಾರರ ಕೇಂದ್ರವಾಗಿತ್ತು (ಕಲ್ಕತ್ತಾ ನಗರವನ್ನು ಬ್ರಿಟಿಷ್ ಬಂಡವಾಳದ ಕೇಂದ್ರವೆಂದು ಕರೆಯಲಾಗುತ್ತಿತ್ತು) ಮತ್ತು ಇದರ ಪರಿಣಾಮವಾಗಿ ಕೆಲವು ಕೈಗಾರಿಕೆಗಳು ಕರ್ನಾಟಕ ಭಾಗದಲ್ಲಿ ಆರಂಭವಾಗಿದ್ದವು. ಮೈಸೂರಿನ ನಂತರ ದೊಡ್ಡದಾದ ಬಾಂಬೆ ಕರ್ನಾಟಕ ಪ್ರದೇಶವು 54,464 ಚದರ ಮೈಲಿಗಳಷ್ಟು ವಿಸ್ತಾರವಾಗಿತ್ತು. ಬಾಂಬೆ ಮತ್ತು ಮದ್ರಾಸ್ ಪ್ರಾಂತಗಳೆರಡರಲ್ಲೂ ರೈತವಾರಿ ಪದ್ಧತಿ ಜಾರಿಯಲ್ಲಿದ್ದರೂ ಭಿನ್ನವಾದ ಗೇಣಿ ಕಾಯ್ದೆಗಳಿದ್ದವು. ಬಾಂಬೆ ಟೆನೆನ್ಸಿ ಕಾಯ್ದೆಯು ಹೋಲಿಕೆಯಲ್ಲಿ ಉತ್ತಮವಾಗಿದ್ದರೂ, ಅದೂ ಕೂಡಾ ಗೇಣಿದಾರರಿಗೆ ರಕ್ಷಣೆಯಾಗಿರಲಿಲ್ಲ. ಈ ಭಾಗದಲ್ಲಿ ವಚನ ಚಳುವಳಿಯ

ಮೂಲಕ ವೈದಿಕಶಾಹಿ ಪದ್ಧತಿಗೆ ಪ್ರತಿರೋಧವಾಗಿ ಬೆಳೆದ ಲಿಂಗಾಯತರು ಜನಸಂಖ್ಯೆಯಲ್ಲಿ ಶೇ.28 ರಷ್ಟಿದ್ದರು. ವಚನ ಚಳುವಳಿಯು ಬ್ರಾಹ್ಮಣರ ಅಧಿಪತ್ಯವನ್ನು ಸಂಕೇತಿಸುವ ಸಂಸ್ಕೃತ ಮತ್ತು ಸಂಸ್ಕೃತಿಯನ್ನು ತಿರಸ್ಕರಿಸಿ ಜನ ಭಾಷೆ ಕನ್ನಡಕ್ಕೆ ಪ್ರಾಮುಖ್ಯತೆ ನೀಡಿತ್ತು. ಲಿಂಗಾಯತರನ್ನು ಹೊರತುಪಡಿಸಿದರೆ ಈ ಭಾಗದಲ್ಲಿ ಮರಾಠರು ನಂತರದ ಪ್ರಾಬಲ್ಯವನ್ನು ಹೊಂದಿದ್ದರು. ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿದ್ದರು ಮತ್ತು ಹುಬ್ಬಳ್ಳಿ-ಧಾರವಾಡ, ಬೆಳಗಾಂ ಮತ್ತು ಬಿಜಾಪುರದಂತಹ ನಗರಗಳಲ್ಲಿ ಕೇಂದ್ರೀಕೃತವಾಗಿದ್ದರು. ಮರಾಠರು ಮತ್ತು ಮುಸ್ಲಿಮರು ಸರಿಸುಮಾರು ಒಂದೇ ಪ್ರಮಾಣದಲ್ಲಿದ್ದರು. ದಲಿತ ವರ್ಗಗಳು ಈ ಭಾಗದ ಜನಸಂಖ್ಯೆಯ ಶೇಕಡಾ ಹತ್ತರಷ್ಟು ಇದ್ದರೂ ಸಹ ವಿಭಜಿತವಾಗಿದ್ದರು. ಇವರು ಬಹುತೇಕ ಭೂರಹಿತರಾಗಿದ್ದರು. ಬಾಂಬೆ ಕರ್ನಾಟಕ ಪ್ರದೇಶದ ಭೂಮಿಯ ಹಿಡಿತ ಬಹುತೇಕ ಬ್ರಾಹ್ಮಣರು, ಲಿಂಗಾಯತರು, ಮರಾಠರು ಇಂತಹ ಜಾತಿಗಳ ಮೇಲ್‌ಸ್ತರದ ಜನರ ಹಿಡಿತದಲ್ಲಿದ್ದವು.

ಹೈದರಾಬಾದ್ ಕರ್ನಾಟಕ ಪ್ರದೇಶವು ಹೈದರಾಬಾದ್ ನಿಜಾಮನ ಆಳ್ವಿಕೆಗೆ ದೀರ್ಘಕಾಲ ಒಳಪಟ್ಟಿತ್ತು. ಕೆಲವೊಮ್ಮೆ ಈ ಪ್ರದೇಶ ಮರಾಠರ ಅಧೀನದಲ್ಲಿಯೂ ಇತ್ತು. ಹೈದರಾಬಾದ್ ಕರ್ನಾಟಕ ಪ್ರದೇಶವು 35,687 ಚದರ ಮೈಲಿ ವಿಸ್ತಾರವಾಗಿತ್ತು. ಜಮೀನ್ದಾರಿ ಕೃಷಿ ಪದ್ಧತಿಯನ್ನು ಹೊಂದಿದ್ದ ಈ ಪ್ರದೇಶವು ಉಳಿದ ಎಲ್ಲ ಪ್ರದೇಶಗಳಿಗಿಂತ ಹಿಂದುಳಿದಿತ್ತು. ನಿಜಾಂ ಆಳ್ವಿಕೆಯ ಪರಿಣಾಮವಾಗಿ ಬಹಳ ದೀರ್ಘ ಕಾಲ ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆ ಕಾಣಲಿಲ್ಲ. ಹೀಗಾಗಿ ಈ ಪ್ರದೇಶದ ಬಹುತೇಕ ಜನರಿಗೆ ಭೂಮಿ ಮತ್ತು ಇತರೆ ಆಸ್ತಿಗಳು ಇರಲಿಲ್ಲ. ಶಿಕ್ಷಣ, ಸಾರಿಗೆ, ಸಂಪರ್ಕ, ವಿದ್ಯುತ್, ಕೈಗಾರಿಕೆ, ಭೂಮಿ ವಿತರಣೆ ಹೀಗೆ ಎಲ್ಲಾ ರಂಗಗಳಲ್ಲೂ ಹಿಂದುಳಿದಿತ್ತು. ಈ ಪ್ರದೇಶದ ಜನಸಂಖ್ಯೆಯಲ್ಲಿ ಲಿಂಗಾಯತರು ಸುಮಾರು ಶೇಕಡಾ ಮೂವತ್ತರಷ್ಟಿದ್ದರು. ಮೈಸೂರು ಮತ್ತು ಬಾಂಬೆ ಕರ್ನಾಟಕ ಪ್ರದೇಶಗಳಲ್ಲಿ ಇದ್ದ ಹಾಗೆ ಇಲ್ಲಿ ಬ್ರಾಹ್ಮಣರು ಅಧಿಕಾರ ಮತ್ತು ಆಡಳಿತಗಳಲ್ಲಿ ಪ್ರಾಬಲ್ಯವನ್ನು ಹೊಂದಿರಲಿಲ್ಲ. ಹೀಗಾಗಿ ಬಾಂಬೆ ಕರ್ನಾಟಕದ ಲಿಂಗಾಯತರಿಗಿಂತ ಇಲ್ಲಿನ ಲಿಂಗಾಯತರು ಭಿನ್ನವಾದ ನೆಲೆಗಟ್ಟನ್ನು ಹೊಂದಿದ್ದರು. ನಿಜಾಂ ಮುಸ್ಲಿಮನಾಗಿದ್ದರೂ, ಬಹುತೇಕ ಮುಸ್ಲಿಮರು ಬಡವರಾಗಿದ್ದರು. ಕೆಲವೇ ಕೆಲವು ಜನರ ಬಳಿ ಹೆಚ್ಚಿನ ಭೂಮಿ ಕೇಂದ್ರೀಕೃತವಾಗಿತ್ತು. ಸರಿಸುಮಾರು ಶೇಕಡಾ ಇಪ್ಪತ್ತರಷ್ಟಿದ್ದ ದಲಿತರು ಬೇರೆಲ್ಲಾ ಪ್ರದೇಶಗಳಿಗಿಂತ ಬಡವರಾಗಿದ್ದರು.

ಮದ್ರಾಸ್ ಕರ್ನಾಟಕ ಪ್ರದೇಶವು ಮುಖ್ಯವಾಗಿ ಎರಡು – ದಕ್ಷಿಣ ಕನ್ನಡ ಮತ್ತು ಬಳ್ಳಾರಿ – ಜಿಲ್ಲೆಗಳನ್ನು ಒಳಗೊಂಡಿತ್ತು. ಇವುಗಳ ವಿಸ್ತಾರ 18,333 ಚದರ ಮೈಲಿಗಳು. ಚಾರಿತ್ರಿಕವಾಗಿ ಮತ್ತು ರಾಜಕೀಯವಾಗಿ ಒಂದಕ್ಕೊಂದು ಕೊಂಡಿಯಿಲ್ಲದ ಆಡಳಿತದ ಪ್ರದೇಶಗಳಾಗಿದ್ದವು. ದಕ್ಷಿಣ ಕನ್ನಡ ಜಿಲ್ಲೆಯು ಹೆಚ್ಚಾಗಿ ಮಲಬಾರ್, ಬಾಂಬೆ ಮತ್ತು ಮೈಸೂರು-ಕೊಡಗಿನ ಜೊತೆ, ಬಳ್ಳಾರಿ ಜಿಲ್ಲೆ ಆಂಧ್ರ ಮತ್ತು ಬಾಂಬೆ ಕರ್ನಾಟಕದ ಪ್ರದೇಶಗಳ ಜೊತೆ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿತ್ತು. ಎರಡೂ ಜಿಲ್ಲೆಗಳ ಭೂ ಸಂಬಂಧಗಳು ಭಿನ್ನವಾಗಿದ್ದವು. ಬಳ್ಳಾರಿ ಜಿಲ್ಲೆಯಲ್ಲಿ ಭೂಮಿಯ ಕೇಂದ್ರೀಕರಣವು ಹೈದರಾಬಾದ್-ಕರ್ನಾಟಕವನ್ನು ಹೋಲುತ್ತಿದ್ದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಷ್ಟು ತೀವ್ರವಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವ ದಕ್ಷಿಣ ಕನ್ನಡ ಜಿಲ್ಲೆಯು ಮಲಬಾರಿನ ಭೂ ಹೋರಾಟಗಳಿಂದ ಪ್ರಭಾವಿತವಾದರೆ, ಬಳ್ಳಾರಿ ಜಿಲ್ಲೆ ಅಂತಹ ಪ್ರಭಾವಕ್ಕೆ ಒಳಗಾಗಲಿಲ್ಲ. ಕರಾವಳಿ ಪ್ರದೇಶಗಳು

16 ನೇ ಶತಮಾನದಿಂದಲೇ ಪಾಶ್ಚಿಮಾತ್ಯ ಅಧಿಕಾರ ಕೇಂದ್ರಗಳ ಪ್ರಭಾವವನ್ನು ಕಂಡಿದ್ದವು. ಶಿಕ್ಷಣ, ಆರೋಗ್ಯ, ಕೈಗಾರಿಕೆ, ಸಂಪರ್ಕ, ಸಾರಿಗೆ ಇವೆಲ್ಲವೂ ಸಾಕಷ್ಟು ಮುಂದುವರಿದಿತ್ತು. ಕನ್ನಡದ ಮೊದಲ 'ಕಿಟ್ಟೆಲ್ ನಿಘಂಟು' ಬಾಸೆಲ್ ಮಿಷನ್‌ರವರ ಪ್ರೆಸ್‌ನಲ್ಲಿ ಮುದ್ರಿಸಲಾಗಿತ್ತು.

ಬಳ್ಳಾರಿಯಲ್ಲಿ ಮಾತನಾಡುವ ಮತ್ತು ಬರೆಯುವ ಭಾಷೆ ಕನ್ನಡವಾಗಿತ್ತು. ತೆಲುಗು ಮಾತನಾಡಲಾಗುತ್ತಿತ್ತು. ದಕ್ಷಿಣ ಕನ್ನಡದಲ್ಲಿ ಲಿಪಿ ಕನ್ನಡವಾಗಿದ್ದರೂ ಮಾತನಾಡುವ ಭಾಷೆ ಕನ್ನಡ, ತುಳು ಮತ್ತು ಕೊಂಕಣಿಯಾಗಿತ್ತು. ರೈತವಾರಿ ಪದ್ಧತಿಯಲ್ಲಿ ಭೂಮಿಯ ಒಡೆತನವನ್ನು ಬಹುತೇಕ ಬ್ರಾಹ್ಮಣರು ಮತ್ತು ಬಂಟ್ಸ್ ಜಾತಿಯವರು ಹೊಂದಿದ್ದರು. ಅಲ್ಲಿನ ಬಹುಸಂಖ್ಯಾತ ಬಿಲ್ಲವ ಜಾತಿಯವರು ಗೇಣಿದಾರರಾಗಿದ್ದರು. ಮೀನುಗಾರರು, ನೇಕಾರರು, ಆಚಾರಿಗಳು ಮುಂತಾದ ಜಾತಿಗಳಿಗೆ ಹೆಚ್ಚಿನ ಆಸ್ತಿ ಮತ್ತು ಅಧಿಕಾರಗಳು ಇರಲಿಲ್ಲ.

ಕೊಡಗು ಪ್ರಧಾನವಾಗಿ ಪ್ಲಾಂಟೇಷನ್‌ಗಳ ಮತ್ತು ಬೆಟ್ಟ ಗುಡ್ಡಗಳ 4,110 ಚದರ ಮೈಲಿ ವಿಸ್ತೀರ್ಣವಿರುವ ಪ್ರದೇಶವಾಗಿತ್ತು. ಯೂರೋಪಿಯನ್ ಪ್ಲಾಂಟರ್‌ಗಳ ಮೆಚ್ಚಿನ ತಾಣವಾಗಿದ್ದ ಕೊಡಗು ಹಲವು ಬುಡಕಟ್ಟುಗಳ ಪ್ರದೇಶ. ಆರ್ಥಿಕವಾಗಿ ಬಲಾಢ್ಯರಾಗಿರುವ ಕೊಡವ ಸಮುದಾಯದೊಂದಿಗೆ ವಿವಿಧ ಕೃಷಿಕ ಸಮುದಾಯಗಳು, ಕೃಷಿ ಕಾರ್ಮಿಕ ಸಮುದಾಯಗಳು ಹಾಗೂ ವಿಭಿನ್ನ ಭಾಷೆಗಳು ಕೊಡಗಿನಲ್ಲಿ ಕಂಡು ಬರುತ್ತವೆ.

ಇಂತಹ ಹಿನ್ನೆಲೆಯಲ್ಲಿ ಬ್ರಿಟಿಷರ ನೇರ ಆಡಳಿತ ಮತ್ತು ಪರೋಕ್ಷ ಆಡಳಿತಗಳು ಕರ್ನಾಟಕದ ವಿವಿಧ ಜನವಿಭಾಗಗಳ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರಿತು. ಪಾಳೇಗಾರಿ ರಾಜ ಪ್ರಭುತ್ವಗಳು ಜನತೆಯ ಮೇಲೆ ಹೊಂದಿದ್ದ ಸಾಮಾಜಿಕ ಹಿಡಿತ ಮತ್ತು ರಾಜಪ್ರಭುತ್ವಗಳ ವಿರುದ್ಧ ಹೋರಾಟವನ್ನು ನಿರಾಕರಿಸಿದ ಕಾಂಗ್ರೆಸ್ ಧೋರಣೆ ಎರಡೂ ಸೇರಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರತೆಯನ್ನು ಪಡೆಯಲಿಲ್ಲ. ಆದರೆ ಸಣ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಪಕ್ಷ ಚೌಕಟ್ಟನ್ನು ಒಡೆಯಲು ಪ್ರಯತ್ನಿಸಿತು. ಬೆಂಗಳೂರು ಮತ್ತು ಕೆಜಿಎಫ್ ಕೇಂದ್ರಿತವಾಗಿ ನಡೆಸಿದ ಕಾರ್ಮಿಕ ಮತ್ತು ಇತರ ಹೋರಾಟಗಳು, ಒಟ್ಟೊಟ್ಟಿಗೇ ವರ್ಗ ಹೋರಾಟ ಮತ್ತು ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಪಡೆದಿತ್ತು. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ತೀವ್ರತೆ ಪಡೆಯದಿರುವುದಕ್ಕೂ ರಾಜಪ್ರಭುತ್ವ ಮತ್ತು ಕಾಂಗ್ರೆಸ್‌ನ ಧೋರಣೆಗಳಿಗೂ ಸಂಬಂಧವಿದೆ. ನಿಜಾಂಶಾಹಿ ಆಡಳಿತದ ದಮನಕಾರಿ ನೀತಿಗಳು ಮತ್ತು ಅದಕ್ಕೆ ಬೆಂಬಲವಾಗಿದ್ದ ಪಾಳೇಗಾರಿ ಶಕ್ತಿಗಳು ಕರ್ನಾಟಕದ ಬೇರಾವುದೇ ಪ್ರದೇಶಗಳಿಗಿಂತ ಬಲಿಷ್ಟವಾಗಿದ್ದುದರಿಂದ, ಸ್ವಾತಂತ್ರ್ಯ ಹೋರಾಟ ಪ್ರಭಾವಶಾಲಿಯಾಗಿ ಬೆಳೆಯಲಿಲ್ಲ. ತೆಲಂಗಾಣ ಹೋರಾಟವು ಸ್ವಾತಂತ್ರ್ಯದ ಸಮೀಪದಲ್ಲಿ ನಡೆದ ಕಾರಣದಿಂದ ಅದರ ಪ್ರಭಾವವನ್ನು ಸ್ವಾತಂತ್ರ್ಯಾ ನಂತರದ ಕಮ್ಯುನಿಸ್ಟ್ ಚಳುವಳಿಯಲ್ಲಿ ಗುರುತಿಸಬಹುದು. ಸ್ವಾತಂತ್ರ್ಯ ಹೋರಾಟದ ಒಂದು ಕೇಂದ್ರ ಬಿಂದುವಾಗಿ ಬಾಂಬೆ ಇದ್ದುದರಿಂದ ಬಾಂಬೆ ಕರ್ನಾಟಕ ಭಾಗದಲ್ಲಿ ಅದರ ಪ್ರಭಾವ ತೀವ್ರವಾಗಿ ಬೀರಿದೆ. ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ, ರೈತ ಹೋರಾಟಗಳು ಮತ್ತು ಕರ್ನಾಟಕ ಏಕೀಕರಣ ಹೋರಾಟಗಳು ಪ್ರಬಲವಾಗಿ ನಡೆದ ಪ್ರದೇಶವಿದು. ಅದೇ ರೀತಿಯಲ್ಲಿ ಮದ್ರಾಸ್‌ನ ಭಾಗವಾಗಿ ದಕ್ಷಿಣ ಕನ್ನಡದಲ್ಲಿ ವ್ಯಾಪಕವಾದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಮಲಬಾರಿನ ಕಮ್ಯುನಿಸ್ಟ್ ಚಳುವಳಿಗಳೂ ಮೇಳೈಸಿಕೊಂಡು ಪರಿಣಾಮವನ್ನು ಬೀರಿದೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನಡೆದ ಚಳುವಳಿಗಳು ವಿವಿಧ ನೆಲೆಗಳನ್ನು ಹೊಂದಿವೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನೇರವಾದ ಹೋರಾಟ ಒಂದು ನೆಲೆಯದು, ಬ್ರಿಟಿಷರ ಅಧೀನದ ರಾಜ ಸಂಸ್ಥಾನಗಳಲ್ಲಿ ಇನ್ನೊಂದು ನೆಲೆಯದು, ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ವಿರುದ್ಧದ ಹೋರಾಟ ಮತ್ತೊಂದು ಬಗೆಯದು. ಹೀಗಾಗಿ ಸ್ವಾತಂತ್ರ್ಯ ಪೂರ್ವ ಕರ್ನಾಟಕದ ಹೋರಾಟಗಳು ಏಕ ಸ್ವರೂಪದ್ದಲ್ಲ, ಬಹುಮುಖೀ ನೆಲೆಗಟ್ಟಿನದು. ಇವುಗಳಿಗೆ ಸ್ಥಳೀಯ ಸ್ವರೂಪ ಇದ್ದಾಗಲೂ, ಪ್ರಧಾನವಾಗಿ ಅವು ಅಖಿಲ ಭಾರತ ವಿದ್ಯಮಾನಗಳ ಭಾಗವಾಗಿಯೂ ನಡೆದಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ-ಪೂರ್ವ ಮತ್ತು ನಂತರ ಎರಡೂ ಘಟ್ಟಗಳಲ್ಲಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ವಹಿಸಿದ ಪಾತ್ರ ಮತ್ತು ಬೀರಿದ ಪ್ರಭಾವದ ಅಧ್ಯಯನ ಮಹತ್ವದ್ದಾಗಿದೆ.

ಮಾರ್ಕ್ಸ್‌ವಾದಿ ಚಿಂತನೆಗಳ ಪ್ರಭಾವ

ಬ್ರಿಟಿಷ್ ವಸಾಹತುಶಾಹಿ ವಿರೋಧಿ ಭಾರತ ರಾಷ್ಟ್ರೀಯ ಚಳುವಳಿ ಬಹು ಆಯಾಮಗಳನ್ನು ಹೊಂದಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ಇದರ ಪ್ರಧಾನ ಸೆಲೆಯಾಗಿದ್ದರೆ, ಕ್ರಾಂತಿಕಾರಿಗಳದ್ದು ಮತ್ತೊಂದು ಸೆಲೆ. ಐಎನ್‌ಸಿಯೊಳಗೇ ರೂಪುಗೊಂಡ ತೀವ್ರಗಾಮಿಗಳು, ಸ್ವತಂತ್ರವಾಗಿ ಬೆಳೆದು ಬಂದ ಹಲವು ಕ್ರಾಂತಿಕಾರಿ ಗುಂಪುಗಳು ಮತ್ತು ವ್ಯಕ್ತಿಗಳು, ದೇಶದೊಳಗೂ ಮತ್ತು ಹೊರಗೂ ಅಸ್ತಿತ್ವದಲ್ಲಿದ್ದ ಕ್ರಾಂತಿಕಾರಿ ಗುಂಪುಗಳು, ಇವುಗಳ ಸಂಗಮದೊಂದಿಗೆ ಜನಿಸಿದ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಸ್ವಾತಂತ್ರ್ಯ ಹೋರಾಟದ ಅರ್ಥ ಮತ್ತು ವ್ಯಾಪ್ತಿಯನ್ನು ಬದಲಾಯಿಸಿದ ಮತ್ತೊಂದು ಸೆಲೆಯಾಗಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಕ್ರಾಂತಿಕಾರಿಗಳ ಮತ್ತು ಸಿಪಿಐನ ಪ್ರವೇಶ ಮತ್ತು ಪಾತ್ರ ಭಾರತದ ಆಧುನಿಕ ಚರಿತ್ರೆಯ ಅಂತರ್ಗತ ಬೆಳವಣಿಗೆಯಾಗಿದೆ. ಬ್ರಿಟಿಷರಿಂದ ಸ್ವಾತಂತ್ರ್ಯವೆಂದರೆ ಅದು ಕೇವಲ ರಾಜಕೀಯ ಪ್ರಶ್ನೆ ಮಾತ್ರವಲ್ಲ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವೂ ಹೌದು ಎಂಬ ಆಯಾಮವನ್ನು ಅದಕ್ಕೆ ಕೊಟ್ಟಿದ್ದು ಕ್ರಾಂತಿಕಾರಿಗಳು. ಇಂತಹ ದೃಷ್ಟಿಯನ್ನು ಕಟ್ಟಿಕೊಡುವಲ್ಲಿ ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಚಿಂತನೆಗಳು ನಿರ್ಣಾಯಕವಾದ ಪ್ರಭಾವವನ್ನು ಬೀರಿದೆ.

ಹದಿನೇಳು ಮತ್ತು ಹತ್ತೊಂಬತ್ತನೇ ಶತಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ವೇಗವಾದ ಬೆಳವಣಿಗೆಯ ಫಲವಾಗಿ, ಮೊದಲಿಗೆ ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿ ಆಧುನಿಕ ಕಾರ್ಮಿಕ ವರ್ಗ ಉಗಮವಾಯಿತು. ಇದರೊಂದಿಗೆ ಜ್ಞಾನೋದಯ ಪರಂಪರೆಯೂ ಸೇರಿಕೊಂಡು ಸಮಾನತೆ, ಸ್ವಾತಂತ್ರ್ಯ, ಶೋಷಣಾ ರಹಿತ ಸಮಾಜ ಮುಂತಾದ ಹೊಸ ಚಿಂತನೆಗಳು ಹುಟ್ಟಿಕೊಂಡವು. ನೂತನ ಚಿಂತನೆಗಳ ಸರಮಾಲೆಯನ್ನು ಮಾರ್ಕ್ಸ್ ಸ್ಪಷ್ಟವಾಗಿ ಪೋಣಿಸಿದರು. ಮಾನವ ಸಮಾಜದ ಸ್ವರೂಪ, ಅದರ ವಿಕಾಸ ಮತ್ತು ಬೆಳವಣಿಗೆ, ಪ್ರಕೃತಿಯೊಂದಿಗೆ ಅದರ ಸಂಬಂಧಗಳನ್ನು ವಿವರಿಸುತ್ತಾ, ಸಮಾಜದಲ್ಲಿರುವ ಅಸಮಾನತೆ, ಶೋಷಣೆಗೆ ಕಾರಣವನ್ನು ಮತ್ತು ಅದನ್ನು ಬದಲಾಯಿಸಬೇಕಾದ ಅವಶ್ಯಕತೆಯನ್ನು ಪ್ರತಿಪಾದಿಸಿದರು. 'ತತ್ವಜ್ಞಾನಿಗಳು ಜಗತ್ತನ್ನು ಹಲವು ರೀತಿಯಲ್ಲಿ ಕೇವಲ ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಶ್ನೆಯಿರುವುದು ಅದನ್ನು ಬದಲಾವಣೆ ಮಾಡುವ ಬಗ್ಗೆ' ಎಂದು ಮಾರ್ಕ್ಸ್ ಇದನ್ನು

ಕ್ರೋಢೀಕರಿಸಿದರು. ಅದುವರೆಗೂ ಅಸ್ತಿತ್ವಕ್ಕೆ ಬಂದಿದ್ದ ವಿವಿಧ ರೀತಿಯ ಸಮಾಜವಾದಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಿ ಅವುಗಳಲ್ಲಿದ್ದ ದೋಷಗಳನ್ನು ಸರಿಪಡಿಸುವ ರೀತಿಯಲ್ಲಿ 'ವೈಜ್ಞಾನಿಕ ಸಮಾಜವಾದ' ಅಥವಾ 'ಕಮ್ಯುನಿಸಂ'[1] ತತ್ವವನ್ನು ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಕೃತಿಯಲ್ಲಿ ಪ್ರತಿಪಾದಿಸಿದರು. ವಿಶ್ವದ ಅಸ್ತಿತ್ವ ಮತ್ತು ಸಮಾಜದ ಸ್ವರೂಪದ ಕುರಿತ ಅದುವರೆಗಿನ ತಿಳುವಳಿಕೆಯನ್ನು ಇದು ಪುಡಿಗುಟ್ಟಿತು. ಮನುಷ್ಯನ ಸಮಸ್ಯೆಗಳಿಗೆ ಅಗೋಚರ ಶಕ್ತಿ ಕಾರಣವಲ್ಲ, ಬದಲಿಗೆ ಲಾಭಕ್ಕಾಗಿ ಶ್ರಮವನ್ನು ಲೂಟಿ ಮಾಡುವ ಶೋಷಕ ವರ್ಗಗಳು ಕಾರಣವಾಗಿರುವುದರಿಂದ, ಶೋಷಣೆಗೆ ಒಳಗಾದ ದುಡಿಯುವ ಜನ ಒಂದಾಗಿ ಸಾಮಾಜಿಕ ಕ್ರಾಂತಿಯನ್ನು ಮಾಡಲು 'ವಿಶ್ವದ ಕಾರ್ಮಿಕರೇ ಒಂದಾಗಿ' ಎಂದು ಮ್ಯಾನಿಫೆಸ್ಟೋ ಮೂಲಕ ಮಾರ್ಕ್ಸ್ ಕರೆ ನೀಡಿದರು.

ಮ್ಯಾನಿಫೆಸ್ಟೋ ಕುರಿತು ಇತಿಹಾಸಕಾರರಾದ ಐಜಾಜ್ ಅಹಮದ್ ಅವರು, 'ಮಾನವ ಸಮಾಜದ ಪ್ರಗತಿಪರ ಬದಲಾವಣೆಯ ಚರಿತ್ರೆಯಲ್ಲಿ ಇಷ್ಟೊಂದು ಪ್ರಭಾವ ಬೀರಿದ ಕೃತಿ ಮತ್ತೊಂದಿಲ್ಲ. ಕಮ್ಯುನಿಸ್ಟ್ ಪ್ರಣಾಳಿಕೆಗಿಂತ ಹೆಚ್ಚಿನ ಆವೃತ್ತಿಗಳು ಮುದ್ರಣವಾಗಿರುವ ಮತ್ತು ಪ್ರಸಾರವಾಗಿರುವ ಎರಡು ಕೃತಿಗಳೆಂದರೆ ಕೇವಲ ಬೈಬಲ್ ಮತ್ತು ಕುರಾನ್ ಮಾತ್ರ' (ಐಜಾಜ್ ಅಹಮದ್ 1999: 14) ಎಂದಿದ್ದಾರೆ. ಇತಿಹಾಸಕಾರರಾದ ಇರ್ಫಾನ್ ಹಬೀಬ್‌ರವರು, ಮ್ಯಾನಿಫೆಸ್ಟೋ 'ತತ್ವಶಾಸ್ತ್ರ, ಚರಿತ್ರೆ, ಆರ್ಥಶಾಸ್ತ್ರ ಮತ್ತು ರಾಜಕೀಯದ ಕುರಿತು ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಚಿಂತನೆಗಳ ಜನಪ್ರಿಯ ರೂಪ ಮತ್ತು ಇದರ ಆಧಾರದಲ್ಲಿರುವ ಒಂದು ಪ್ರಾಯೋಗಿಕ ಕಾರ್ಯಕ್ರಮ' (ಇರ್ಫಾನ್ ಹಬೀಬ್ 1999: 48) ಎಂದು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳ ಪ್ರಭಾವ ಪ್ರಧಾನವಾಗಿ 1917 ರ ರಷ್ಯಾದ ಅಕ್ಟೋಬರ್ ಕ್ರಾಂತಿ ನಂತರದಲ್ಲಿ ಆಯಿತು. ಇದಕ್ಕಿಂತ ಮುಂಚೆ, 1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಕಾರ್ಲ್ ಮಾರ್ಕ್ಸ್‌ರ ಬರಹಗಳನ್ನು ಬಿಟ್ಟರೆ ಇಲ್ಲಿ ಮೊದಲನೆ ಹಾಗೂ ಎರಡನೆ ಇಂಟರ್‌ನ್ಯಾಷನಲ್[2] ಚಟುವಟಿಕೆಗಳ ಬಗ್ಗೆ ಬಹಳ ಉಲ್ಲೇಖಗಳೇನೂ ಸಿಗುವುದಿಲ್ಲ.

ಭಾರತ ಇಂಗ್ಲೆಂಡಿನ ಬೃಹತ್ ವಸಾಹತುವಾಗಿ ಪರಿವರ್ತನೆಯಾದ ಸಂದರ್ಭಕ್ಕೆ ಕಾರ್ಲ್ ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಹಲವು ಲೇಖನಗಳ ಕೇಂದ್ರ ವಿಷಯ ಭಾರತವಾಗಿತ್ತು. 1853 ರಲ್ಲಿ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್ ಪತ್ರಿಕೆಯಲ್ಲಿ ಭಾರತದ ಕುರಿತು ಮಾರ್ಕ್ಸ್, ದಿ ಬ್ರಿಟಿಷ್ ರೂಲ್ ಇನ್ ಇಂಡಿಯಾ ಮತ್ತು ದಿ ಫ್ಯೂಚರ್ ರಿಸಲ್ಟ್ಸ್ ಆಫ್ ಬ್ರಿಟಿಷ್ ರೂಲ್ ಇನ್ ಇಂಡಿಯಾ ಎಂಬ ಎರಡು ಪ್ರಮುಖ ಲೇಖನಗಳನ್ನು ಬರೆದು ಬ್ರಿಟಿಷರ ಲೂಟಿಯ ನಿರ್ದಿಷ್ಟ ವಿಧಾನಗಳನ್ನು ಗುರುತಿಸಿದರು. ಬ್ರಿಟಿಷರ ವಸಾಹತು ವಿಧಾನಗಳಿಂದಾಗಿ ಭಾರತದಲ್ಲಿ ಸೀಮಿತ ಸ್ವರೂಪದ ಬಂಡವಾಳಶಾಹಿ ಬೆಳವಣಿಗೆ ಆಯಿತು. ದಿವಾಳಿಯಾಗಿದ್ದ ರೈತರು ಮತ್ತು ಕರಕುಶಲ ಕೆಲಸಗಳು ನಾಶವಾಗಿ ಅದರಿಂದ ಹೊರಬಂದ ವಿಭಾಗಗಳಿಂದ ಕಾರ್ಮಿಕ ವರ್ಗ ಭಾರತದಲ್ಲಿ ಜನ್ಮ ತಾಳಿತು. ಇದರ ಜೊತೆಯಲ್ಲೇ ಬ್ರಿಟಿಷರ ಸಹಕಾರದೊಂದಿಗೆ ಭಾರತೀಯ ಬಂಡವಾಶಾಹಿ ವರ್ಗವೂ ಗಟ್ಟಿಗೊಳ್ಳುತ್ತಾ ಬೆಳೆಯಿತು. ಬ್ರಿಟಿಷರು ತಮಗಾಗೇ ಜಾರಿಗೊಳಿಸಿಕೊಂಡ ಆಧುನಿಕ ಶಿಕ್ಷಣವು ಭಾರತದೊಳಗೆ ಹೊಸ ವಿಭಾಗಗಳ ಉಗಮಕ್ಕೆ ಕಾರಣವಾಯಿತು. ಆಧುನಿಕ ಬುದ್ಧಿಜೀವಿ ವರ್ಗ ಮತ್ತು ಮಧ್ಯಮ ವರ್ಗಗಳೂ ಬೆಳೆದವು. ಸಾಮಾಜಿಕ ಸುಧಾರಕರು ಬೆಳೆದು ಬಂದರು ಮತ್ತು

ಸುಧಾರಣಾ ಚಳುವಳಿಗಳೂ ಬೆಳೆದವು. ಕ್ರಾಂತಿಕಾರಿ ರಾಷ್ಟ್ರೀಯತೆಯ ಪ್ರವೃತ್ತಿಗಳು ಕ್ರಮೇಣ ಬೆಳವಣಿಗೆಯಾಯಿತು. ಕೈಗಾರಿಕಾ ಕಾರ್ಮಿಕರು ಸಂಘಟಿತರಾಗತೊಡಗಿದರು. ಮುಂಬೈ, ಕಲ್ಕತ್ತಾ, ಲಾಹೋರ್, ಮದ್ರಾಸ್ ಮುಂತಾದ ನಗರಗಳು ಕೈಗಾರಿಕಾ ಕೇಂದ್ರಗಳಾಗುವುದರ ಜೊತೆಯಲ್ಲೇ ಕಾರ್ಮಿಕ ಹೋರಾಟಗಳ ಪ್ರಮುಖ ಕೇಂದ್ರಗಳಾದವು. ಹೋರಾಟಗಳು ಕೇವಲ ಆರ್ಥಿಕ ಸ್ವರೂಪದ್ದಾಗಿರದೇ, ಸ್ವಾತಂತ್ರ್ಯ ಹೋರಾಟದ ರಾಜಕೀಯ ಸ್ವರೂಪವನ್ನೂ ಪಡೆದಿದ್ದವು. ಕಾರ್ಮಿಕರು ಮತ್ತು ರೈತರು ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚೆಚ್ಚು ಭಾಗವಹಿಸತೊಡಗಿದರು. ಇದರಿಂದ ಗಾಬರಿಗೊಂಡ ಬ್ರಿಟಿಷರು ಮುಂದಿನ ಹೋರಾಟಗಳನ್ನು ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲು ಶುರು ಮಾಡಿದರು.

ರಾಷ್ಟ್ರೀಯ ಬಂಡವಾಳದಾರರು, ವೃತ್ತಿಪರರು ಮತ್ತು ಜಮೀನ್ದಾರರನ್ನು ಪ್ರತಿನಿಧಿಸಿದ ಐಎನ್‌ಸಿ, ಬ್ರಿಟಿಷ್ ಅಧಿಕಾರಿ ಎ.ಓ.ಹ್ಯೂಮ್‌ರವರ ಮುತುವರ್ಜಿಯಲ್ಲಿ, ವಸಾಹತು ದೊರೆಗಳ ಅನುಮತಿಯೊಂದಿಗೆ ಆರಂಭವಾಯಿತಾದರೂ, ಕ್ರಮೇಣ ಇದು ಭಾರತದ ಬೃಹತ್ ವಸಾಹತು ವಿರೋಧಿ ವೇದಿಕೆಯಾಗಿ ಮಾರ್ಪಟ್ಟಿತು (ಹಿಸ್ಟರಿ 2005: 11). ವಸಾಹತು ಆಡಳಿತದ ವಿರುದ್ಧ ಭಾರತೀಯರು ಒಗ್ಗಟ್ಟಾಗುವುದನ್ನು ತಡೆಯಲು ಹಿಂದು–ಮುಸ್ಲಿಂ ವಿಭಜನೆಯನ್ನು ತರಲು ಬ್ರಿಟಿಷರು 1905 ರಲ್ಲಿ ಬಂಗಾಳ ವಿಭಜನೆಯನ್ನು ಮಾಡಿದರು. ಇದರ ವಿರುದ್ಧ ವ್ಯಾಪಕ ಪ್ರತಿರೋಧ ಬೆಳೆಯಿತು. ಈ ಪ್ರಕ್ರಿಯೆಯಲ್ಲಿ ಐಎನ್‌ಸಿಯೊಳಗೆ 'ತೀವ್ರಗಾಮಿ' ಬಣ ನಿರ್ಮಾಣವಾಯಿತು. ಲಾಲ ಲಜಪತ್ ರಾಯ್, ಬಾಲ ಗಂಗಾಧರ್ ತಿಲಕ್ ಮತ್ತು ಬಿಪಿನ್ ಚಂದ್ರ ಪಾಲ್ ಇವರುಗಳು ರಾಷ್ಟ್ರೀಯ ಉತ್ಸಾಹದ ಸಂಕೇತಗಳಾದರು.

ಭಾರತದಲ್ಲಿ ಸಮಾಜವಾದಿ ಚಿಂತನೆಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭಕ್ಕೇ ಆರಂಭವಾಗಿದೆ. ಬಂಗಾಳದ ಹಿಂದೂ ಪೇಟ್ರಿಯಟ್ ಪತ್ರಿಕೆಯು ಸಮಾಜವಾದಿ ಸಿದ್ಧಾಂತ, ಕಮ್ಯುನಿಸ್ಟ್ ಸಿದ್ಧಾಂತ ಎಂಬ ಹೆಸರಿನಲ್ಲಿ ಲೇಖನಗಳನ್ನು 1858 ರ ಜುಲೈ 13 ರ ಸಂಚಿಕೆಯಲ್ಲಿ ಪ್ರಕಟಿಸಿತು (ಹಿಸ್ಟರಿ 2005: 14). ಅಸ್ಸಾಮಿನ ಟೀ ತೋಟಗಳಿಗೆ ಭೇಟಿ ನೀಡಿ ಬಿಳಿ ತೋಟ ಮಾಲೀಕರು ಕಾರ್ಮಿಕರನ್ನು ಗುಲಾಮರಂತೆ ದುಡಿಸಿಕೊಳ್ಳುತ್ತಿರುವ ಬಗ್ಗೆ ಬಂಗಾಳಿ ದಿನಪತ್ರಿಕೆ ಸಂಜೀವನಿ ಸರಣಿ ಲೇಖನಗಳನ್ನು ಬರೆಯಿತು(ಹಿಸ್ಟರಿ 2005: 16). 1879 ರಲ್ಲಿ ಬಂಕಿಮಚಂದ್ರರು 'ಸಾಮ್ಯ' (Equality) ಲೇಖನದಲ್ಲಿ ಉತ್ಪಾದನಾ ಸಾಧನಗಳ ಖಾಸಗಿ ಒಡೆತನವನ್ನು ವಿರೋಧಿಸಿದರು ಮತ್ತು ಸಮಾಜವಾದದ ಆಶಯಗಳನ್ನು ಬೆಂಬಲಿಸಿದರು. ಸಮಾಜವಾದಿ, ಸಮತಾವಾದಿ ಮತ್ತು ಇಂಟರ್‌ನ್ಯಾಷನಲ್ ಎಂಬ ಶಬ್ದಗಳನ್ನು ಸರಿಯಾದ ಅರ್ಥದಲ್ಲಿ ದೇಶದಲ್ಲಿ ಮೊದಲ ಬಾರಿಗೆ ಬಳಸಿದವರು ಇವರೆಂದು ಹೇಳಲಾಗಿದೆ. ಅಭಯಚರಣ್ ಮಿತ್ರ ಎಂಬುವರು ಕಾರ್ಷಿಕ ವಿಷಯಗಳಿಗೆ ಸಂಬಂಧಿಸಿ ಸಮಾಜವಾದಿ ಕಣ್ಣೋಟದ 'ಇಂಡಿಯನ್ ರಯತ್' (The Indian Ryot) ಗ್ರಂಥವನ್ನು 1881 ರಲ್ಲಿ ಪ್ರಕಟಿಸಿದರು (ಹಿಸ್ಟರಿ 2005: 14). ರವೀಂದ್ರನಾಥ ಟಾಗೋರ್‌ರವರು 1892 ರಲ್ಲಿ 'ಸಮಾಜವಾದ' ಎಂಬ ಲೇಖನದಲ್ಲಿ ಸರಕು ಉತ್ಪಾದನೆ ಮತ್ತು ವಿತರಣೆಯು ಯಾವುದೇ ವ್ಯಕ್ತಿಯ ಬದಲಿಗೆ ಸಮಾಜದ ಅಧೀನದಲ್ಲಿ ಇರಬೇಕೆಂದು, ಸಂಪತ್ತಿನ ಸಮಾನ ವಿತರಣೆಯಿಂದ

ಸ್ವಾತಂತ್ರ್ಯದ ಹೆಚ್ಚಿನ ಹಕ್ಕುಗಳು ಬರುತ್ತವೆ ಎಂದರು. ಅರವಿಂದರು 1893 ರಲ್ಲಿ 'ಕೆಳ ವರ್ಗಗಳ ಶಕ್ತಿ ಮತ್ತು ನಾಗರೀಕತೆಯನ್ನು ಆಧರಿಸಿದ ಇಡೀ ಭಾರತದ ಭವಿಷ್ಯ ಮಾನವ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಮೇಲೆ ನಿಂತಿದೆ' ಎಂದರು. ಭಾರತದಲ್ಲಿ ಮೊದಲ ಬಾರಿಗೆ 'ಪ್ರಾಲಟೇರಿಯಟ್' (Proletariat) ಎಂಬ ಶಬ್ದವನ್ನು ಬಳಸಿದ್ದು ಬಹುಶಃ ಅರವಿಂದರು (ಹಿಸ್ಟರಿ 2005: 17).1896 ರಲ್ಲಿ ವಿವೇಕಾನಂದರು, ಪ್ರಪಂಚದ ಮೊದಲನೆ ಮತ್ತು ಎರಡನೇ ಕಾಲಘಟ್ಟವು ಕ್ರಮವಾಗಿ ಬ್ರಾಹ್ಮಣರ ಮತ್ತು ಕ್ಷತ್ರಿಯರ ಅಡಿಯಲ್ಲಿತ್ತು, ಈಗ '. . . ಪ್ರಪಂಚವು ವೈಶ್ಯರ (ವ್ಯಾಪಾರಿಗಳ) ಅಧಿಪತ್ಯದಲ್ಲಿ ಮೂರನೇ ಕಾಲಘಟ್ಟದಲ್ಲಿದೆ, ನಾಲ್ಕನೇ ಕಾಲಘಟ್ಟವು ಶೂದ್ರರ (Proletariat) ನಿರ್ದೇಶನದಲ್ಲಿ ವಿಕಾಸವಾಗಲಿದೆ' ಎಂದರು (ಗೌತಮ್ ಚಟ್ಟೋಪಾಧ್ಯಾಯ 1970: 6). ಭಾರತದಲ್ಲಿ ಕಾರ್ಲ್ ಮಾರ್ಕ್ಸ್ ಅವರ ಹೆಸರನ್ನು ಮೊದಲಿಗೆ ಬಳಸಿದ್ದು ಯಾವಾಗ ಎಂಬ ಬಗ್ಗೆ ಖಚಿತವಾದ ಮಾಹಿತಿಗಳಿಲ್ಲ. ಅಮೃತ ಬಜಾರ್ ಪತ್ರಿಕಾದಲ್ಲಿ 1903 ರಲ್ಲಿ ಬಂದ ಲೇಖನದಲ್ಲಿ ಮೊದಲ ಬಾರಿಗೆ ಮಾರ್ಕ್ಸ್ ಹೆಸರು ಪ್ರಸ್ತಾಪವಾದ ಬಗ್ಗೆ ಪಿ.ಸಿ.ಜೋಷಿ ಮತ್ತು ಕೆ.ದಾಮೋದರನ್ ಅವರು ಮಾರ್ಕ್ಸ್ ಕಮ್ಸ್ ಟು ಇಂಡಿಯಾ (1975) ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ತಿಲಕರು 1881 ರಲ್ಲಿ ಮಾರ್ಕ್ಸ್ ಅವರ ಬಗ್ಗೆ ಮಾಡಿರುವ ಪ್ರಸ್ತಾಪದ ಬಗ್ಗೆ ಜೆ.ವಿ.ನಾಯಕ್ ಪ್ರಸ್ತಾಪಿಸಿದ್ದಾರೆ (ಜೆ.ವಿ.ನಾಯಕ್ 1999).

1917 ರ **ರಷ್ಯನ್ ಸಮಾಜವಾದಿ ಕ್ರಾಂತಿಯು** ಜಗತ್ತಿನೆಲ್ಲೆಡೆ ಸ್ವಾತಂತ್ರ್ಯಕ್ಕಾಗಿ ಹೋರಾಟಗಳನ್ನು ನಡೆಸುತ್ತಿದ್ದ ಜನರಲ್ಲಿ ಒಂದು ಹೊಸ ಆದರ್ಶವನ್ನು ಸೃಷ್ಟಿಸಿತು ಮತ್ತು ಸಾಮ್ರಾಜ್ಯವಾದದ ನೊಗವನ್ನು ಕಿತ್ತು ಹಾಕಲು ಜನತೆಯನ್ನು ಪ್ರೇರೇಪಿಸಿತು. 1919 ರಲ್ಲಿ ಲೆನಿನ್ ನೇತೃತ್ವದಲ್ಲಿ ಆರಂಭವಾದ ಮೂರನೇ ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಪ್ರಭಾವದಿಂದ ಹಲವಾರು ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಪ್ರಾರಂಭವಾದವು. ಭಾರತೀಯ ಕ್ರಾಂತಿಕಾರಿಗಳು ಜರ್ಮನಿ ಕೇಂದ್ರವಾಗಿ ರಚಿಸಿದ 'ಬರ್ಲಿನ್ ಸಮಿತಿ'ಯ ಜೊತೆ ಸಂಪರ್ಕಗಳನ್ನು ಹೊಂದಿದ ಅಮೇರಿಕ ಮತ್ತು ಕೆನಡಾದಲ್ಲಿದ್ದ ಕ್ರಾಂತಿಕಾರಿಗಳು 1913 ರಲ್ಲಿ ಸ್ಯಾನ್ ಫ್ರಾನ್ಸಿಸ್ಕೊ ನಗರದಲ್ಲಿ ಗದರ್ ಪಾರ್ಟಿಯನ್ನು ಸ್ಥಾಪಿಸಿದರು[3]. ನಂತರ ಗದರ್ ಪಾರ್ಟಿಯ ಬಹುತೇಕರು ಕಮ್ಯುನಿಸ್ಟರಾದರು[4]. ಭಾರತದಲ್ಲಿ ಹಲವಾರು ಕ್ರಾಂತಿಕಾರಿಗಳು, ಕ್ರಾಂತಿಕಾರಿ ಗುಂಪುಗಳು ಮತ್ತು ಸಂಘಟನೆಗಳು ಒಳಗೊಂಡು ಕಮ್ಯುನಿಸ್ಟ್ ಪಕ್ಷದ ಆರಂಭಕ್ಕೆ ವೇದಿಕೆ ಸಜ್ಜುಗೊಂಡಿತು. ಕಮ್ಯುನಿಸಂ ಎಂಬುದು ಸಾಮ್ರಾಜ್ಯವಾದದ ವಿರೋಧಕ್ಕೆ ಸಂಕೇತವಾಯಿತು. ಸಂಪೂರ್ಣ ಸ್ವಾತಂತ್ರ್ಯಕ್ಕೆ ಒಂದು ಸ್ಪಷ್ಟತೆಯನ್ನು ಒದಗಿಸಿತು. ಅಕ್ಟೋಬರ್ ಕ್ರಾಂತಿಯನ್ನು 'ರಷ್ಯನ್ ಜ್ವಾಲಾಮುಖಿ' (Russian Volcano) ಎಂದು ಅಮೃತ್ ಬಜಾರ್ ಪತ್ರಿಕಾ ಬರೆಯಿತು. ಬಿಪಿನ್ ಚಂದ್ರ ಪಾಲ್‌ರವರು 'ಶ್ರೀಮಂತ ವರ್ಗಗಳಿಂದ ಮತ್ತು ಮೇಲ್‌ವರ್ಗಗಳಿಂದ ಶೋಷಣೆ ಮತ್ತು ದೌರ್ಜನ್ಯ ರಹಿತವಾಗಿ, ಸಂತೋಷವಾಗಿ ಮತ್ತು ಸ್ವತಂತ್ರವಾಗಿ ಬದುಕುವ ಜನತೆಯ ಹಕ್ಕುಗಳನ್ನು ರಕ್ಷಿಸುವ, ಜನತೆಯ ಶಕ್ತಿ, ವಿಶ್ವದಾದ್ಯಂತ ಪಸರಿಸಿದೆ. ಇದೇ ಬೋಲ್ಶವಿಕ್‌ವಾದ'ಎಂದು ಹೇಳಿದರು. ಕವಿ ಕಾಝಿ ನಜ್ರುಲ್ ಇಸ್ಲಾಂ ರಷ್ಯನ್ ಕ್ರಾಂತಿಯನ್ನು ಕುರಿತು 'ಬೈತರ್ ದನ್' ಸಣ್ಣ ಕಥೆಯನ್ನು ಬರೆದರು (ಹಿಸ್ಟರಿ 2005: 29). ಹಿಂದಿ ಕಾದಂಬರಿಕಾರರಾದ ಪ್ರೇಮ್‌ಚಂದ್ ಸಮಾಜವಾದಿ ಕ್ರಾಂತಿಯಿಂದ ಪ್ರಭಾವಿತರಾಗಿ

ತಮ್ಮ ಸ್ನೇಹಿತರಿಗೆ ಬರೆದ ಪತ್ರದಲ್ಲಿ, 'ನಾನೀಗ ಬಹುತೇಕ ಬೋಲ್ಶೆವಿಕ್ ತತ್ವಗಳಿಂದ ಒಪ್ಪಿತನಾಗಿದ್ದೇನೆ' (ಹಿಸ್ಟರಿ 2005: 30) ಎಂದು ಬರೆದರು. 1919–20 ರ ಅವಧಿಯಲ್ಲಿ ತಿಲಕರು ತಮ್ಮ ಕೇಸರಿ ಪತ್ರಿಕೆಯಲ್ಲಿ ರಷ್ಯನ್ ಕ್ರಾಂತಿಯ ಕುರಿತು ಹಲವಾರು ಲೇಖನಗಳನ್ನು ಬರೆದರು.ಲಾಲ ಲಜಪತ್ ರಾಯ್ ಅವರು 'ಬೋಲ್ಶೆವಿಸಂ ಮತ್ತು ಆಂಟಿ–ಬೋಲ್ಶೆವಿಸಂ" ಎಂಬ ಲೇಖನದಲ್ಲಿ ಅದು ಖಂಡಿತವಾಗಿ ಯಶಸ್ವಿಯಾಗುವ ಬಗ್ಗೆ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು. ಈ ರೀತಿ ಹೆಚ್ಚುತ್ತಿದ್ದ ರಷ್ಯನ್ ಕ್ರಾಂತಿಯ ಪ್ರಭಾವದಿಂದ ಗಾಬರಿಗೊಂಡ ಬ್ರಿಟಿಷ್ ಸರ್ಕಾರದ ಗೃಹ ಕಾರ್ಯದರ್ಶಿ ಸರ್ ವಿಲಿಯಂ ಮೊರ್ರಿಸ್ 1919 ರ ನವೆಂಬರ್ 25 ರಂದು ಆದೇಶ ಹೊರಡಿಸಿ, 'ಭಾರತದಲ್ಲಿ ಬೋಲ್ಶೆವಿಕ್ ಚಟುವಟಿಕೆಗಳು ತುಂಬಾ ಸಣ್ಣವಾದರೂ ಕೂಡಾ, ವ್ಯವಸ್ಥಿತ ರಕ್ಷಣಾ ಕ್ರಮಗಳನ್ನು ಅಳವಡಿಸದಿದ್ದಲ್ಲಿ ಗಂಭೀರ ಪರಿಸ್ಥಿತಿ ಉದ್ಭವಿಸಬಹುದೆಂದು ಭಾರತ ಸರ್ಕಾರವು ಭಾವಿಸುತ್ತದೆ' (ಹಿಸ್ಟರಿ 2005: 32) ಎಂದು ಸ್ಪಷ್ಟಪಡಿಸಿದರು.

ಭಾರತದಲ್ಲಿ ಕ್ರಾಂತಿಕಾರಿ ಚಳುವಳಿಗೆ ಸಂಬಂಧಿಸಿದಂತೆ ಕ್ರಿಮಿನಲ್ ಪಿತೂರಿಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ತನಿಖೆ ಮತ್ತು ವರದಿ ಮಾಡಲು ನೇಮಕವಾಗಿದ್ದ ಜಸ್ಟೀಸ್ ಎಸ್.ಎ.ರೌಲತ್ ಸಮಿತಿಯ ಶಿಫಾರಸುಗಳ ವಿರುದ್ಧ ಹೋರಾಟಗಳು ತೀವ್ರಗೊಂಡವು. ಇದರ ಭಾಗವಾಗಿ 1918 ರ ಏಪ್ರಿಲ್ 13 ರಂದು ನಡೆದ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ಜನರಲ್ ಡಯರ್‌ನ ಪೈಶಾಚಿಕ ಆದೇಶದಿಂದಾಗಿ 379 ಮಂದಿ ಸಾವಿಗೀಡಾದರು ಎಂದು ಸರ್ಕಾರದ ಸಂಖ್ಯೆಗಳು ಹೇಳಿದವು. ಭಾರತೀಯರ ರಕ್ತದಲ್ಲಿ ಬರೆಯಲ್ಪಟ್ಟ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವು ರಾಷ್ಟ್ರೀಯ ಚಳುವಳಿಯ ದಿಕ್ಕನ್ನೇ ಬದಲಾಯಿಸಿತು. ಕಾರ್ಮಿಕರ ಮುಷ್ಕರಗಳು ತೀವ್ರಗೊಂಡವು ಮತ್ತು ಸಂಘಟನೆಗಳು ಬೆಳೆಯಲು ಪ್ರಾರಂಭವಾದವು. ಮೊದಲಿಗೆ ಬುರ್ಜ್ವಾ ರಾಷ್ಟ್ರೀಯವಾದಿಗಳು ಮತ್ತು ಉದಾರವಾದಿಗಳು ಇದರಲ್ಲಿ ತೊಡಗಿಸಿಕೊಂಡರು. 1918 ರ ಏಪ್ರಿಲ್ 17 ರಂದು ಬಿ.ಪಿ.ವಾಡಿಯಾ ಅವರು ಮದ್ರಾಸ್ ಲೇಬರ್ ಯೂನಿಯನ್ ಪ್ರಾರಂಭಿಸಿದರು. ಇದೇ ರೀತಿ ಬಾಂಬೆ ಮುಂತಾದ ನಗರಗಳಲ್ಲಿ ಇಂತಹ ಪ್ರಯತ್ನಗಳು ನಡೆದವು ಮತ್ತು ಇದರ ಪರಿಣಾಮ ತಕ್ಷಣದಲ್ಲೇ ಕಾಣುವಂತಾಯಿತು. 1918 ರಲ್ಲಿ ಬಾಂಬೆ ಜವಳಿ ಕಾರ್ಮಿಕರ ಮುಷ್ಕರ ನಡೆದು ಅದರಲ್ಲಿ 1.25 ಲಕ್ಷ ಕಾರ್ಮಿಕರು ಭಾಗವಹಿಸಿದರು. 1920 ರಷ್ಟರಲ್ಲಿ ಕಾರ್ಮಿಕ ಮುಷ್ಕರುಗಳು ಮತ್ತು ಹೋರಾಟಗಳು ತೀವ್ರಗೊಂಡು ರಾಷ್ಟ್ರ ಮಟ್ಟದ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸುವ ಅಗತ್ಯವನ್ನು ಇವು ಸೃಷ್ಟಿಸಿದವು[5]. ಈ ರೀತಿಯಾಗಿ ಭಿನ್ನ ಭಿನ್ನ ತೊರೆಗಳಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿದ್ದ, ಸಮಾಜವಾದ ಮತ್ತು ರಷ್ಯನ್ ಕ್ರಾಂತಿಯಿಂದ ಪ್ರಭಾವಿತರಾಗಿದ್ದ ಕ್ರಾಂತಿಕಾರಿಗಳು ಮತ್ತು ಪ್ರಗತಿಪರ ಗುಂಪುಗಳು ಮತ್ತು ವ್ಯಕ್ತಿಗಳನ್ನು ಒಟ್ಟಿಗೆ ತರುವ ಮತ್ತು ರಾಷ್ಟ್ರೀಯ ಹೋರಾಟವನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಎಂ.ಎನ್. ರಾಯ್, ಅಬನಿ ಮುಖರ್ಜಿ[6] ಮುಂತಾದವರು ಸೇರಿ ಮೊದಲಿಗೆ 1920 ರಲ್ಲಿ ತಾಷ್ಕೆಂಟ್‌ನಲ್ಲಿ, ನಂತರ 1925 ರಲ್ಲಿ ಕಾನ್ಪುರದಲ್ಲಿ ಸಿಪಿಐ ಸ್ಥಾಪನೆಯಾಯಿತು.

ವಸಾಹತು ವಿರೋಧಿ ಹೋರಾಟದ ಚಾರಿತ್ರಿಕ ಬೆಳವಣಿಗೆಯಾಗಿ ಸಿಪಿಐನ ಸ್ಥಾಪನೆಯು ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಒಂದು ಸ್ಪಷ್ಟವಾದ ರಾಜಕೀಯ ಸಿದ್ಧಾಂತವನ್ನು ಹೊಂದಿದ ಕ್ರಿಯಾಶೀಲತೆಯನ್ನು ಮತ್ತು ಮಿಲಿಟೆನ್ಸಿಯನ್ನು ಸೃಷ್ಟಿಸಿತು. ಸಂಪೂರ್ಣ ಸ್ವರಾಜ್ಯದ ನಿರ್ಣಯವನ್ನು ಅಂಗೀಕರಿಸಲು ಐಎನ್‌ಸಿ ಹಿಂದೇಟು ಹಾಕುತ್ತಿದ್ದಾಗ 1921 ರಲ್ಲೇ ಕಮ್ಯುನಿಸ್ಟರು ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಮಂಡಿಸಿದರು. 1929 ರಲ್ಲಿ ಕಾಂಗ್ರೆಸ್ ಇದನ್ನು ನಿರ್ಣಯವಾಗಿ ಅಂಗೀಕರಿಸುವವರೆಗೂ ಎಐಸಿಸಿಯ ಪ್ರತಿಯೊಂದು ಅಧಿವೇಶನದಲ್ಲೂ ಇದಕ್ಕಾಗಿ ಒತ್ತಾಯಿಸಿದರು. ಅಸಹಕಾರ ಚಳುವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ, ಕಾರ್ಮಿಕ, ರೈತ, ವಿದ್ಯಾರ್ಥಿ, ಬರಹಗಾರರು, ಕಲಾವಿದರು ಹೀಗೆ ಸಮಾಜದ ಎಲ್ಲಾ ವಿಭಾಗಗಳ ಚಳುವಳಿಗಳನ್ನು ನಡೆಸುವುದರಲ್ಲಿ ಸಿಪಿಐ ಕ್ರಿಯಾಶೀಲ ಪಾತ್ರವನ್ನು ವಹಿಸಿತು. ಸ್ವಾತಂತ್ರ್ಯದ ಮುನ್ನಾ ಕಾಲದ ಕಮ್ಯುನಿಸ್ಟರ ನೇತೃತ್ವದ ರೈತ ಮತ್ತು ಕಾರ್ಮಿಕ ಹೋರಾಟಗಳು ಬ್ರಿಟಿಷ್ ಸಾಮ್ರಾಜ್ಯವನ್ನು ಧೃತಿಗೆಡಿಸಿದವು. ಇವೆಲ್ಲವುಗಳ ಪರಿಣಾಮವಾಗಿ 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಈ ಸ್ವಾತಂತ್ರ್ಯವನ್ನು ಸಿಪಿಐ ಪರಿಭಾವಿಸಿದ ರೀತಿ ಮತ್ತು ಸ್ವಾತಂತ್ರ್ಯಾ ನಂತರದಲ್ಲಿ ಕಮ್ಯುನಿಸ್ಟ್ ಪಕ್ಷಗಳು ನಡೆಸುತ್ತಿರುವ ಚಳುವಳಿಯ ಚರಿತ್ರೆಯನ್ನು ಹಲವಾರು ಚರಿತ್ರಕಾರರು ದಾಖಲು ಮಾಡಿರುವುದನ್ನು ಕಾಣಬಹುದು.

❖ ❖ ❖

ರಾಷ್ಟ್ರೀಯ ಚಳುವಳಿಯ ಕುರಿತು ಮಾರ್ಕ್ಸ್‌ವಾದಿಗಳು ಬರೆದ ಚರಿತ್ರೆಯು ಆರ್.ಪಿ.ದತ್ ಅವರ *ಇಂಡಿಯ ಟುಡೆ* ಯಿಂದ ಆರಂಭವಾಗಿ ಇಎಂಎಸ್ ನಂಬೂದಿರಿಪಾದ್ ಅವರ *ಎ ಹಿಸ್ಟರಿ ಆಫ್ ಇಂಡಿಯಾಸ್ ಫ್ರೀಡಂ ಸ್ಟ್ರಗಲ್* ವರೆಗೆ ಮತ್ತು ನಂತರವೂ ಮುಂದುವರೆದಿದೆ. ರಾಷ್ಟ್ರೀಯ ಚಳುವಳಿಯು, ದೊಡ್ಡ ಜಮೀನ್ದಾರರು ಮತ್ತು ರಾಜರನ್ನು ಹೊರತುಪಡಿಸಿದ, ರೈತರು, ಕಾರ್ಮಿಕ ವರ್ಗ, ಪೆಟಿ ಬಂಡವಾಳದಾರರು ಮತ್ತು ಬಂಡವಾಳದಾರರ ಸಂಯುಕ್ತ ರಂಗವೆಂದು ಕಮ್ಯುನಿಸ್ಟ್ ಪಕ್ಷಗಳ ಸಾಮಾನ್ಯ ಅಭಿಪ್ರಾಯವೆಂಬುದಾಗಿ ಇವರ ಬರವಣಿಗೆಗಳಿಂದ ತಿಳಿಯುತ್ತದೆ. ಐಎನ್‌ಸಿಯು 1930 ರಲ್ಲಿ ಸ್ವಲ್ಪ ಮಟ್ಟಿಗೆ ಅಂತಹ ಒಂದು ಸ್ಥಿತಿಗೆ ಬಂದಿತ್ತು ಎಂಬುದನ್ನು ಬಿಟ್ಟರೆ, ಎಲ್ಲ ಕಾಲಕ್ಕೂ ಅದು ಸಂಯುಕ್ತ ರಂಗವಾಗಿರಲಿಲ್ಲ. ರಾಷ್ಟ್ರೀಯ ಚಳುವಳಿಯು ಐಎನ್‌ಸಿಗಿಂತ ದೊಡ್ಡದಾದುದು ಮತ್ತು ಅದು ಭಾರತದ ಜನತೆಯ ಸಾಮಾನ್ಯ ಪರಂಪರೆಯಾಗಿದೆ. ಗಾಂಧಿ ಮುಂತಾದ ವ್ಯಕ್ತಿಗಳ ಪಾತ್ರವನ್ನೂ ಒಳಗೊಂಡು, ಅದಕ್ಕೆ ಎಷ್ಟೇ ಮಿತಿಯಿದ್ದರೂ, ಭಾರತದ ಜನತೆಗೆ ಅವರ ಸೇವೆಗಳನ್ನು ನಗಣ್ಯಗೊಳಿಸಲಾಗದು. ಕೇಂಬ್ರಿಡ್ಜ್ ಮತ್ತು ಸಬಾಲ್ಟರ್ನ್ ಪಂಥದವರು, ಎಡಪಂಥೀಯರನ್ನೂ ಎಲೈಟ್ ನಾಯಕತ್ವದ ಭಾಗವೆಂದು ಹೇಳುವ ಹಾಗೆ, ಇವನ್ನು ಭ್ರಮೆ ಅಥವಾ ಮಹತ್ವವಲ್ಲದ್ದು ಎಂದು ಕರೆಯುವುದರ ವಿರುದ್ಧ ಮಾರ್ಕ್ಸ್‌ವಾದಿಗಳು ಎಚ್ಚರಿಕೆ ವಹಿಸುವುದು ಅಗತ್ಯವೆಂದು ಇರ್ಫಾನ್ ಹಬೀಬ್ ಅವರು 'ಪ್ರಾಬ್ಲಮ್ಸ್ ಆಫ್ ಮಾರ್ಕ್ಸಿಸ್ಟ್ ಹಿಸ್ಟೋರಿಯೋಗ್ರಫಿ' ಎಂಬ ಲೇಖನದಲ್ಲಿ ಅಭಿಪ್ರಾಯಪಡುತ್ತಾರೆ (ಇರ್ಫಾನ್ ಹಬೀಬ್ 1988: 3–13). ರಾಷ್ಟ್ರೀಯ ಚಳುವಳಿಯನ್ನು ಸರಿಯಾಗಿ ಅರ್ಥೈಸುವುದರ ಕುರಿತು ಎಚ್ಚರಿಕೆಯ ಮಾತುಗಳನ್ನು ಆಡುತ್ತಲೇ, ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆ

ರಚನೆಯಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರವನ್ನು ತೀರಾ ಟೀಕಾತ್ಮಕವಾಗಿ ನೋಡುವ ಇತಿಹಾಸಕಾರರಾದ ಬಿಪನ್ ಚಂದ್ರ ಅವರು ನಿಲುವುಗಳನ್ನೂ ಹಬೀಬ್ ಆಕ್ಷೇಪಿಸುತ್ತಾರೆ. ಈ ಹಿನ್ನೆಲೆಯಲ್ಲಿ ಆಧುನಿಕ ಭಾರತದ ಚರಿತ್ರೆಯಲ್ಲಿ ಕಮ್ಯುನಿಸ್ಟ್ ಪಕ್ಷಗಳ ಮತ್ತು ವ್ಯಕ್ತಿಗಳ ಪಾತ್ರವನ್ನು ಸರಿಯಾದ ನೆಲೆಯಲ್ಲಿ ರೂಪಿಸುವುದು ಮಹತ್ವದ ವಿಷಯವಾಗಿದೆ.

ಮಾರ್ಕ್ಸ್‌ನ ಚಾರಿತ್ರಿಕ ಭೌತವಾದವನ್ನು ಅಂತರ್‌ಶಿಸ್ತೀಯ ವಿಧಾನದಲ್ಲಿ ಅಭ್ಯಸಿಸಬೇಕೆಂಬ ಕೊಸಾಂಬಿಯವರ ಚರಿತ್ರೆ ಅಧ್ಯಯನ ಕ್ರಮವು ಭಾರತದ ಚರಿತ್ರೆಯನ್ನು ನೋಡುವ ವಿಧಾನದಲ್ಲೇ ಮೂಲಭೂತ ಬದಲಾವಣೆಯನ್ನು ತಂದಿದೆ. ಪುರಾತತ್ವ ಆಧಾರಗಳನ್ನು ಬಳಸಿ ಚರಿತ್ರೆ ಕಟ್ಟುವ ಕ್ರಮವು ಜನ ಚರಿತ್ರೆಯನ್ನು ನೋಡುವ ನೋಟಕ್ಕೆ ಹೊಸ ಆಯಾಮವನ್ನು ನೀಡಿತು. ಈ ಕ್ರಮವು ಭಾರತದ ಚರಿತ್ರೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದಕ್ಕೆ ಸಾಧ್ಯ ಮಾಡಿತು ಮತ್ತು ಈ ವಿಧಾನದ ಚರಿತ್ರೆಕಾರರ ಪಂಥವೇ ಆರಂಭವಾಯಿತು. ಈ ಅಧ್ಯಯನ ಕ್ರಮವನ್ನು ತೀವ್ರವಾಗಿ ಪ್ರಶ್ನಿಸಿದ ಎಡ್ವರ್ಡ್ ಸೈದ್ ತನ್ನ ಓರಿಯಂಟಲಿಸಂನಲ್ಲಿ ಪೌರಾತ್ಯವನ್ನು ವೈಜ್ಞಾನಿಕ ಮತ್ತು ಕ್ರಿಟಿಕಲ್ ಟೂಲ್‌ಗಳ ಮೂಲಕ ನೋಡಲು ಸಾಧ್ಯವಿಲ್ಲವೆಂದು ಹೇಳಿದರೆ, ಲೂಯಿ ಡ್ಯೂಪಾಂಟ್ ಅಷ್ಟೊತ್ತಿಗಾಗಲೇ ಹೋಮೋ ಹೈರಾರ್ಕಿಕಸ್‌ನಲ್ಲಿ ಭಾರತದ ಮತ್ತು ಪಶ್ಚಿಮದ ಮೌಲ್ಯ ವ್ಯವಸ್ಥೆಗಳು ಭಿನ್ನಾವಾದ್ದರಿಂದ ಪಶ್ಚಿಮದಲ್ಲಿ ಪ್ರತಿಪಾದಿಸಿದ ರೀತಿಯಲ್ಲಿ ಭಾರತದ ಚರಿತ್ರೆ ಇರಲು ಸಾಧ್ಯವೇ ಇಲ್ಲವೆಂದು ಪ್ರತಿಪಾದಿಸಿದರು. 1982 ರಲ್ಲಿ ಅನಿವಾಸಿ ಭಾರತೀಯ ವಿದ್ವಾಂಸರಾದ ರಂಜಿತ್ ಗುಹಾ ಸಬಾಲ್ಟರ್ನ್ ಸಮುದಾಯಗಳ ಹೆಸರಲ್ಲಿ ಈ ವಾದವನ್ನು ಮುಂದುವರಿಸಿದರು. ವಸಾಹತುವಾದ, ಮತ್ತು ಇದರ ವಿರೋಧಿಗಳಾದ ರಾಷ್ಟ್ರೀಯವಾದಿಗಳು ಮತ್ತು ಕಾರ್ಮಿಕ ವರ್ಗ ಇವೆಲ್ಲವನ್ನೂ 'ಎಲೈಟ್' ಎಂದು ಕರೆದರು. ವಿಭಿನ್ನ ಸಂಸ್ಕೃತಿಗಳಿಗೆ ವಿಭಿನ್ನವಾದ ಸತ್ಯಗಳಿರುತ್ತವೆ, ಅಂದರೆ ಸಾಮಾನ್ಯ ಸತ್ಯವೆಂಬುದು ಇರಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ ಮೈಕೆಲ್ ಫೂಕೋ ಮುಂತಾದವರ ಆಧುನಿಕೋತ್ತರವಾದದ ಪರಿಧಿಯಲ್ಲಿ ಇಂತಹ ವಾದಗಳು ಬೆಳೆದು ಬಂದವು.

ಈ ಹಿನ್ನೆಲೆಯಲ್ಲೇ ಕಮ್ಯುನಿಸ್ಟ್ ಪಕ್ಷಗಳ ಭವಿಷ್ಯದ ಕಾರ್ಯಾಚರಣೆಗೆ ಅಗತ್ಯವಾದ ಭಾರತೀಯ ಸಮಾಜದ ವಿಶ್ಲೇಷಣೆಯಲ್ಲಿ 'ಊಳಿಗಮಾನ್ಯ' (ಪಾಳೇಗಾರಿ) ಉತ್ಪಾದನಾ ವ್ಯವಸ್ಥೆಯ ಕುರಿತು ದೀರ್ಘವಾದ ಚರ್ಚೆಗಳು ಬೆಳೆದು ಬಂದಿವೆ. ಇದು ಭಾರತ ಇತಿಹಾಸ ಬರವಣಿಗೆಯ ಮೂಲ ಚರ್ಚೆಗಳಲ್ಲಿ ಒಂದಾಗಿದೆ. ಮಾರ್ಕ್ಸ್ ಸಾಮಾಜಿಕ ಸಂರಚನೆಗಳನ್ನು ವ್ಯಾಖ್ಯಾನಿಸುವಾಗ ಬಂಡವಾಳಶಾಹಿ ಪೂರ್ವ ವ್ಯವಸ್ಥೆಯನ್ನು ಊಳಿಗಮಾನ್ಯ ವ್ಯವಸ್ಥೆಯೆಂದು ನಿರೂಪಿಸಿದರು. ಚರಿತ್ರಕಾರರು ಸಾಮಾಜಿಕ ವರ್ಗಗಳನ್ನು ನಿಗದಿಪಡಿಸಿಕೊಳ್ಳದೆ ವರ್ಗ ಹೋರಾಟಗಳನ್ನು ಅಧ್ಯಯನ ಮಾಡಲಾಗದು ಎಂಬ ಕಾರಣಕ್ಕೆ ಸಾಮಾಜಿಕ ಸಂರಚನೆಗಳನ್ನು ವ್ಯಾಖ್ಯಾನಿಸುವುದು ಅಗತ್ಯವಾಗಿದೆ. ಡಿ.ಡಿ.ಕೊಸಾಂಬಿ ಮತ್ತು ಆರ್.ಎಸ್.ಶರ್ಮ ಅವರು ಊಳಿಗಮಾನ್ಯದ ಅಸ್ತಿತ್ವದ ಬಗ್ಗೆ ಚರ್ಚಿಸುತ್ತಾ, ಭಾರತವು ಗುಲಾಮಗಿರಿ ಹಂತವನ್ನು ಕಾಣಲಿಲ್ಲ, ಬದಲಿಗೆ ಮೊದಲ ಸಹಸ್ರಮಾನದ ಮಧ್ಯದಿಂದ ವಸಾಹತು ಆಕ್ರಮಣದವರೆಗೆ ಊಳಿಗಮಾನ್ಯದ (ವಿವಿಧ) ರೂಪಗಳು ಅಸ್ತಿತ್ವದಲ್ಲಿದ್ದವು ಎನ್ನುತ್ತಾರೆ. ಇರ್ಫಾನ್ ಹಬೀಬ್ ಅವರೂ ಸಹ ಎಲ್ಲಾ ಬಂಡವಾಳಶಾಹಿ–ಪೂರ್ವ ವ್ಯವಸ್ಥೆಗಳನ್ನು 'ಊಳಿಗಮಾನ್ಯ'ದ ಸಾರ್ವತ್ರೀಕರಣದ ನೆರಳಲ್ಲಿ

ನೋಡುವುದನ್ನು ವಿರೋಧಿಸಿದ್ದಾರೆ. 'ಊಳಿಗಮಾನ್ಯ'ದ ಸಾರ್ವತ್ರೀಕರಣವನ್ನು ಒಪ್ಪಲಾಗದು ಎಂದ ಕೂಡಲೇ ವಿವಿಧ ಪ್ರದೇಶಗಳಲ್ಲಿ ಬಹು-ಸಾಮಾಜಿಕ ಸಂರಚನೆಗಳ ಅಸ್ತಿತ್ವವನ್ನು ಒಪ್ಪಬೇಕಾಗುತ್ತದೆ. ಹಾಗೆ ಒಪ್ಪುವುದರಲ್ಲಿ ಯಾವುದೇ ತಪ್ಪಿಲ್ಲವೆಂದು ಇರ್ಫಾನ್ ಹಬೀಬ್‌ರವರು ಅಭಿಪ್ರಾಯಪಡುತ್ತಾರೆ. ಬಂಡವಾಳಶಾಹಿಯು 'ಉತ್ಪಾದನೆಯ ಮೊದಲ ಸಾರ್ವತ್ರಿಕ ವಿಧಾನ'ವೆಂದು ಮತ್ತು ಇದಕ್ಕೂ ಮೊದಲು ಸಂಕೀರ್ಣ ವರ್ಗ ರಚನೆಗಳು ಇತ್ತೆಂದು ಸ್ವತಃ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಪರಿಗಣಿಸಿರುವಾಗ, ಊಳಿಗಮಾನ್ಯ ವ್ಯವಸ್ಥೆಯೂ ಸಹ ಹಲವು ಸಂಕೀರ್ಣ ಸ್ತರಗಳನ್ನು ಹೊಂದಿದೆ ಎಂಬುದನ್ನು ಒಪ್ಪಬೇಕಾಗುತ್ತದೆ ಎನ್ನುತ್ತಾರೆ (ಇರ್ಫಾನ್ ಹಬೀಬ್ 1988: 3–13). ಕರ್ನಾಟಕದ ಚರಿತ್ರೆಯನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿರುವ ಸಾಕೇತ್ ರಾಜನ್(ಸಾಕಿ)ರವರ ಮೇಕಿಂಗ್ ಹಿಸ್ಟರಿ ಈ ನಿಟ್ಟಿನಲ್ಲಿ ಒಂದು ಪ್ರಮುಖ ಕೃತಿಯಾಗಿದೆ. ಇತಿಹಾಸವನ್ನು ಕೇವಲ ರಾಜರ ವಂಶಾವಳಿಯನ್ನು ಕ್ರಮಾನುಗತವಾಗಿ ಅಧ್ಯಯನ ಮಾಡುವುದಲ್ಲ, ಬದಲಿಗೆ ಸಾಮಾಜದ ಬೆಳವಣಿಗೆ ಮತ್ತು ಬದಲಾವಣೆಯನ್ನು ಚಾರಿತ್ರಿಕ ಭೌತವಾದಿ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕೆಂದು ಇದು ನಿರೂಪಿಸಿದೆ. ಡಿ.ಡಿ.ಕೋಸಾಂಬಿ ಮತ್ತು ಆರ್.ಎಸ್.ಶರ್ಮ ಇವರ ವಾದಗಳನ್ನು ಅನುಸರಿಸಿ ಸರಕು ಉತ್ಪಾದನೆಯ ಬೆಳವಣಿಗೆಯನ್ನು ಆಧರಿಸಿ ಕರ್ನಾಟಕ ಚರಿತ್ರೆಯಲ್ಲಿ ಊಳಿಗಮಾನ್ಯದ ಮೂರು ಹಂತಗಳನ್ನು ಇದರಲ್ಲಿ ಗುರುತಿಸಲಾಗಿದೆ (ಸಾಕಿ 1998: 5). ಇದರ ಮೂಲಕ ಕರ್ನಾಟಕದಲ್ಲಿ ಬೆಳೆದ ವಸಾಹತು ವಿರೋಧಿ ಹೋರಾಟಗಳನ್ನು ಅಧ್ಯಯನ ಮಾಡಲಾಗಿದೆ. ಚರಿತ್ರೆ ಬರವಣಿಗೆಯ ಕ್ರಮಗಳಿಗೆ ಸಂಬಂಧಿಸಿ, ಮಾರ್ಕ್ಸ್‌ವಾದಿ ಚರಿತ್ರೆಕಾರರು 'ಸಾರ್ವಕಾಲಿಕ' ವಿಧಾನಗಳನ್ನು ಮತ್ತು 'ಯೂರೋಪ್ ಕೇಂದ್ರಿತ' ವಾದಗಳನ್ನು ವಸಾಹತೋತ್ತರ ಕಾಲಘಟ್ಟದಲ್ಲೂ ಮುಂದುವರಿಸಿರುವ ಬಗ್ಗೆ ಸಬಾಲ್ಟರ್ನ್ ಚರಿತ್ರೆಕಾರರು ಟೀಕಿಸಿರುವುದನ್ನು ವಿಜಯ್ ತಂಬಂಡ ಪೂಣಚ್ಚರವರು ಪ್ರಸ್ತಾಪಿಸಿದ್ದಾರೆ (ವಿಜಯ್ ತಂಬಂಡ 2010: 566). ಮಾರ್ಕ್ಸ್‌ವಾದಿ ನೆಲೆಯಲ್ಲೇ ಆರಂಭಿಸಿ, ಗ್ರಾಂಷಿಯ ಚಿಂತನೆಗಳು ಎಂಬಂತೆ ಬಿಂಬಿಸಿ, ಅಂತಿಮವಾಗಿ ಮಾರ್ಕ್ಸ್‌ವಾದಕ್ಕೆ ವಿರೋಧವನ್ನೇ ಮೂಲ ತಳಹದಿಯಾಗಿಟ್ಟುಕೊಂಡು ರಚಿತವಾದ ಮಾರ್ಕ್ಸೋತ್ತರ ಚರಿತ್ರೆ ಬರವಣಿಗೆ ಕ್ರಮಗಳ ಬಗ್ಗೆಯೂ ಇದರಲ್ಲಿ ಗಮನ ಸೆಳೆಯುತ್ತಾರೆ. ಸಾರ್ವತ್ರಿಕದೊಳಗೇ ಸಬಾಲ್ಟರ್ನ್ ಚರಿತ್ರೆಯನ್ನು ಬರೆಯುವ ಕೆಲಸವನ್ನು ಈಗಾಗಲೇ ಮಾರ್ಕ್ಸ್‌ವಾದಿಗಳು ರೈತ, ಕಾರ್ಮಿಕ ಮುಂತಾದ ಹೋರಾಟಗಳ ಚರಿತ್ರೆ ಬರೆಯುವ ಮೂಲಕ ಮಾಡಿರುವ ಚರ್ಚೆಗಳನ್ನು ಇದರಲ್ಲಿ ತಂದಿದ್ದಾರೆ. ಈ ನಿಟ್ಟಿನಲ್ಲಿ ಪ್ರಸಕ್ತ ಲೇಖಕರು ಅನುವಾದಿಸಿರುವ ಐಜಾಜ್ ಅಹಮದ್‌ರವರ 'ಆಧುನಿಕೋತ್ತರವಾದ'ವು ಇಂತಹ ಚರ್ಚೆಗಳಿಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನೀಡುತ್ತದೆ. ಈ ರೀತಿಯಲ್ಲಿ ಭಾರತದ ಚರಿತ್ರೆಯನ್ನು ಮತ್ತು ಕರ್ನಾಟಕ ಚರಿತ್ರೆಯನ್ನು ಅಧ್ಯಯನ ಮಾಡುವ ಕುರಿತು ಒಳನೋಟಗಳನ್ನು ಮಾರ್ಕ್ಸ್‌ವಾದಿ ಚರಿತ್ರೆಕಾರರು ನಿರೂಪಿಸಿದ್ದಾರೆ.

ಕಮ್ಯುನಿಸ್ಟ್ ಪಕ್ಷದ ಬೇಡಿಕೆಗಳು ಭಾರತ ಚರಿತ್ರೆಯ ಮಾರ್ಕ್ಸ್‌ವಾದಿ ವಿಶ್ಲೇಷಣೆಯ ಆಧಾರದಲ್ಲಿ ರೂಪುಗೊಳ್ಳುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ಇಪ್ಪತ್ತನೇ ಶತಮಾನಕ್ಕೂ ಹಿಂದಿನ ಹೋರಾಟಗಳು ಒಂದು ಬಲಿಷ್ಟ ಸಿದ್ಧಾಂತದ ಕೊರತೆಯನ್ನು ಅನುಭವಿಸಿದರೆ, ಭಾರತೀಯ ಸಮಾಜಕ್ಕೆ ವೈಜ್ಞಾನಿಕತೆಯನ್ನು ಮತ್ತು ವೈಚಾರಿಕತೆಯನ್ನು

ಅನ್ವಯಿಸುವ ಪ್ರಕ್ರಿಯೆಯಿಂದಾಗಿ ಇಪ್ಪತ್ತನೇ ಶತಮಾನದ ಮೂರನೇ ದಶಕದಿಂದ ಇದು ಬದಲಾಗುತ್ತಾ ಬಂದಿದೆ. ಕಮ್ಯುನಿಸ್ಟರ ಒಳಗೆ ವಿಸ್ತರಿಸುತ್ತಾ ಬಂದ ಇಂತಹ ಚಿಂತನೆಗಳ ಫಲವಾಗಿ ಅವರ ರಾಜಕೀಯ ಮತ್ತು ಸೈದ್ಧಾಂತಿಕ ನಿಲುವುಗಳು ರೂಪುಗೊಂಡಿವೆ. ಈ ಬೆಳವಣಿಗೆಯಲ್ಲಿ ಭಾರತ ರಾಷ್ಟ್ರೀಯ ಹೋರಾಟದ ವಿವಿಧ ಪ್ರಶ್ನೆಗಳು ಮತ್ತು ಭಾಷಾವಾರು ರಾಜ್ಯ ರಚನೆಯಂತಹ ಪ್ರಶ್ನೆಗಳಲ್ಲಿ ಕಮ್ಯುನಿಸ್ಟರ ಭಾಗವಹಿಸುವಿಕೆ ಮತ್ತು ಹೋರಾಟಗಳನ್ನು ಗುರುತಿಸಬಹುದು. 1960 ರ ದಶಕದವರೆಗೂ ಪ್ರತಿಪಾದಿಸುತ್ತಿದ್ದ 'ಸ್ವಯಂ ನಿರ್ಣಯಾಧಿಕಾರದ ಹಕ್ಕು'ಗಳ ವಿಚಾರವನ್ನು ಸಿಪಿಐ(ಎಂ) ತನ್ನ ಎಂಟನೇ ಮಹಾಧಿವೇಶನದಲ್ಲಿ ಕೈಬಿಟ್ಟಿತು. ಸಿಪಿಐ ಮತ್ತು ಸಿಪಿಐ(ಎಂ)ಗಳ ಈ ನಿಲುವನ್ನು 'ರಾಷ್ಟ್ರೀಯತೆ–ವಿರೋಧಿ ಪ್ರತಿಗಾಮಿ'ಯೆಂದು ಮತ್ತು 'ಕೋಮುವಾದಿ'ಯೆಂದು ಮಾವೋವಾದಿ ಗುಂಪುಗಳು ಟೀಕಿಸಿದವು. ರಾಷ್ಟ್ರೀಯತೆಗಳ ಮೇಲೆ ವರ್ಗ ಶೋಷಣೆ ಮತ್ತು ದಬ್ಬಾಳಿಕೆಯನ್ನು ಹೇರುವ ಭಾರತದ ಆಳುವ ವರ್ಗಗಳ ಪ್ರಭುತ್ವವನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡುತ್ತಿವೆ ಎಂದು ಟೀಕಿಸಿದವು. ರಷ್ಯನ್ ಕ್ರಾಂತಿಯ ನಿರ್ದಿಷ್ಟ ಸಂದರ್ಭದಲ್ಲಿ ರೂಪುಗೊಂಡ ಈ ತಿಳುವಳಿಕೆ ಭಾರತದ ಬದಲಾದ ಸಂದರ್ಭದಲ್ಲಿ ಮುಂದುವರಿಸುವುದು ಪ್ರಾಯೋಗಿಕವಲ್ಲ ಎಂದು ಸಿಪಿಐ(ಎಂ) ಭಾವಿಸಿತು. ಈಶಾನ್ಯ ಭಾರತದಲ್ಲಿ ಪ್ರತಿಗಾಮಿಗಳು, ವಿದೇಶೀ ನಿಧಿಯ ಜಾಲದ ಕ್ರಿಶ್ಚಿಯನ್ ಮಿಶಿನರಿಗಳು ಮತ್ತು ವಿದೇಶೀ ಏಜೆನ್ಸಿಗಳ ಮೂಲಕ ಅಮೇರಿಕದ ಸಿಐಎ 'ಪ್ರಾಜೆಕ್ಟ್ ಬ್ರಹ್ಮಪುತ್ರ' ಹೆಸರಿನಲ್ಲಿ ಭಾರತವನ್ನು ವಿಭಜಿಸಲು ನಡೆಸುತ್ತಿದ್ದ ಹುನ್ನಾರವನ್ನು ಸೋಲಿಸುವುದು ಮುಖ್ಯವೆಂದು ಅದು ಅಂದಾಜಿಸಿತು. ಪ್ರಸ್ತುತ ಭಾರತದ ಸಂಕಥನದಲ್ಲಿ ಬಹುಮುಖ್ಯ ಚರ್ಚೆ ರಾಷ್ಟ್ರೀಯತೆ ಕುರಿತದ್ದಾಗಿದೆ. ಧಾರ್ಮಿಕ ನೆಲೆಗಟ್ಟಿನ ಸಂಸ್ಕೃತಿಯನ್ನು ಆಧರಿಸಿದ ರಾಷ್ಟ್ರೀಯತೆಯನ್ನು ಒಪ್ಪಿಸುವ ಪ್ರಯತ್ನಗಳು ನಡೆಯುತ್ತಿವೆ. ಭಾರತದ ರಾಷ್ಟ್ರೀಯತೆಯು ಯೂರೋಪಿಯನ್ ಮಾದರಿಯದ್ದಲ್ಲ, ಬದಲಿಗೆ ಸಾಮ್ರಾಜ್ಯಶಾಹಿ ವಿರೋಧಿ ನೆಲೆಯಲ್ಲಿ ರೂಪುಗೊಂಡಿದ್ದು. ಈ ಹಿನ್ನೆಲೆಯಲ್ಲಿ ಬಿ.ಸುರೇಂದ್ರರಾವ್ ಅವರು ರಾಷ್ಟ್ರೀಯತೆಯ ಕುರಿತು ಬಂದಿರುವ ಚರಿತ್ರೆ ಬರವಣಿಗೆ ವಿಧಾನಗಳನ್ನು ಸ್ಥೂಲವಾಗಿ 'ಭಾರತದ ರಾಷ್ಟ್ರೀಯತೆಯ ವಿವಿಧ ಆಯಾಮಗಳು' ಲೇಖನದಲ್ಲಿ (ಸುರೇಂದ್ರರಾವ್ 2010: 1–14) ತಂದಿದ್ದಾರೆ.

ರಾಷ್ಟ್ರೀಯ ಚಳುವಳಿ ಸಂದರ್ಭದ ಮತ್ತು ನಂತರದ ಭಾರತದ ಎಡ ಚಳುವಳಿಯ ಕುರಿತು ಇತಿಹಾಸಕಾರರಾದ ಬಿಪನ್ ಚಂದ್ರ ಅವರ ವಿಮರ್ಶೆಗಳು ಶೈಕ್ಷಣಿಕ ಮತ್ತು ಎಡ ವಲಯಗಳಲ್ಲಿ ಮೂಡಿಸಿದ್ದ ಸಂಚಲನವು ಇನ್ನೂ ಜೀವಂತವಾಗಿದೆ. ಅವಿಭಜಿತ ಸಿಪಿಐ ಸದಸ್ಯರಾಗಿದ್ದ ಬಿಪನ್ ಚಂದ್ರ ಅವರು ವಿಭಜನೆಯ ನಂತರ ಎಡ ಪಕ್ಷಗಳನ್ನು ತೀವ್ರವಾಗಿ ವಿಮರ್ಶಿಸಿದರು. ಭಾರತೀಯ ಸಮಾಜಕ್ಕೆ ಕಾಂಗ್ರೆಸ್‌ನ ಚಾರಿತ್ರಿಕ ಅನಿವಾರ್ಯತೆಯ ಕುರಿತು ಮತ್ತು ಕಾಂಗ್ರೆಸ್‌ನ ಬಗ್ಗೆ ಸಿಪಿಐನ ಧೋರಣೆಯ ಬಗ್ಗೆ ಬಿಪನ್ ಚಂದ್ರ ಅವರಿಗಿದ್ದ ನಿಲುವನ್ನು ಸಲೀಲ್ ಮಿಶ್ರ ಅವರು ಹೀಗೆ ಹೇಳಿದ್ದಾರೆ:

> ರಾಷ್ಟ್ರೀಯ ಚಳುವಳಿಯು 1930' ರಲ್ಲಿ ತೆರೆದ–ಸ್ಥಿತಿಯನ್ನು ಕಾಪಾಡಿಕೊಂಡಿತ್ತು. ಅದಿನ್ನೂ ದ್ರವೀಕರಣ ಸ್ಥಿತಿಯಲ್ಲಿತ್ತು ಮತ್ತು ಅದನ್ನು ಎಡಪಂಥೀಯ ದಿಕ್ಕಿಗೆ

> ತಿರುಗಿಸಲು ಸಾಧ್ಯವಾಗಬೇಕಿತ್ತು. ಸಾಕಷ್ಟು ಬಲವಾಗಿ ಪ್ರಯತ್ನಿಸದೇ ಎಡವು ತಪ್ಪು ಮಾಡಿತು. ಕಾಂಗ್ರೆಸ್‌ನ್ನು ಮತ್ತು ರಾಷ್ಟ್ರೀಯ ಚಳುವಳಿಯನ್ನು ಸೈದ್ಧಾಂತಿಕವಾಗಿ ರೂಪಾಂತರಗೊಳಿಸಲು ಇನ್ನೂ ಸಾಧ್ಯವಿತ್ತು ಮತ್ತು ಪರಿಸ್ಥಿತಿಯಿತ್ತು. ಎಡವು ಅದನ್ನು ಕೈಬಿಡಬಾರದಾಗಿತ್ತು ಮತ್ತು ಬದಲಿಗೆ ಅದರೊಳಗೇ ಅದನ್ನು ರೂಪಾಂತರಿಸಬೇಕಿತ್ತು. ಅವಕಾಶವನ್ನು ಬಿಟ್ಟುಕೊಟ್ಟ ಪ್ರಕರಣವಿದು (ಸಲೀಲ್ ಮಿಶ್ರ 2014, ಅನುವಾದ ಲೇಖಕರದು)[7].

1974 ರಲ್ಲಿ ಬಿಪನ್ ಚಂದ್ರ ಅವರು ಬರೆದ 'ಮಾರ್ಕ್ಸಿಸಂ ಇನ್ ಇಂಡಿಯಾ: ನೀಡ್ ಫಾರ್ ಟೋಟಲ್ ರೆಕ್ಟಿಫಿಕೇಷನ್' ಎಂಬ ಲೇಖನವು ಭಾರತದ ಎಡ ಚಳುವಳಿಯ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿತು. ದೇಶದ ಸಂಘಟಿತ ಎಡ ಚಳುವಳಿಯ ಕುರಿತು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಅಂಶಗಳನ್ನು ಚರ್ಚಿಸಿದರು. ಇದನ್ನು ಅಂದಿನ ಎಡ ಚಳುವಳಿಯು ಅದನ್ನು ಪೂರ್ತಿಯಾಗಿ ತಳ್ಳಿ ಹಾಕುವುದರ ಬದಲು ಅದರ ಜೊತೆ ಸಂವಾದಿಸಬೇಕಿತ್ತು ಎಂಬ ಅಭಿಪ್ರಾಯಗಳೂ ಬಂದವು. ಇದೇನೇ ಆದರೂ, ಮಾರ್ಕ್ಸ್‌ವಾದಿಗಳ ಕೊಡುಗೆಯ ಕುರಿತು ಬಿಪನ್ ಚಂದ್ರ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹೀಗಿವೆ:

> ವಸಾಹತು ಪ್ರಭುತ್ವದ ಎಲ್ಲಾ ಕಠಿಣ ಅಡೆ-ತಡೆ ಮತ್ತು ದಾಳಿಗಳನ್ನು ಮತ್ತು ಸಂಪ್ರದಾಯವಾದಿಗಳ ಹಾಗೂ ಆಧುನಿಕ ಬೂರ್ಜ್ವಾ ರಾಜಕೀಯ ನಾಯಕತ್ವದ ಸೈದ್ಧಾಂತಿಕ ವಿರೋಧವನ್ನು ಎದುರಿಸಿಯೂ ಭಾರತೀಯ ಮಾರ್ಕ್ಸ್‌ವಾದಿಗಳು, ಮಾರ್ಕ್ಸ್‌ವಾದಿ ಚಿಂತನೆಗಳನ್ನು ಜನಪ್ರಿಯಗೊಳಿಸಿದರು ಮತ್ತು ಸಂಘಟಿತ ರೈತ ಮತ್ತು ಕಾರ್ಮಿಕ ಚಳುವಳಿಗಳಿಗೆ ಅಡಿಪಾಯವನ್ನು ಹಾಕಿದರು, ಸಾಮಾಜಿಕ ಕ್ರಾಂತಿ ಮಾಡಲು ಬೇಕಾದ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು.
>
> ಭಾರತದಲ್ಲಿ ವಿಚಾರವಾದಿ ಮತ್ತು ಮಾನವತಾವಾದಿ ಚಿಂತನೆಗಳನ್ನು ನಿರಂತರವಾಗಿ ಪ್ರಚಾರ ಮಾಡಿದವರು ಮಾರ್ಕ್ಸ್‌ವಾದಿಗಳು ಮಾತ್ರ. ಹಿಂದು-ಮುಸ್ಲಿಂ ಭಾಯ್-ಭಾಯ್ ಎಂಬ ಅವೈಜ್ಞಾನಿಕ ಮತ್ತು ತೋರಿಕೆಯ ದೃಷ್ಟಿಕೋನಕ್ಕಿಂತ ಮೇಲ್ಮಟ್ಟದ ನೈಜವಾದ ಸೆಕ್ಯುಲರ್ ವಿಚಾರಗಳಿಗೆ ಹೋರಾಟ ನಡೆಸಿದರು.
>
> 1930 ರ ನಂತರದ ಭಾರತದ ರಾಜಕಾರಣದ ಲಕ್ಷಣವಾದ ಅಂತರರಾಷ್ಟ್ರೀಯ ದೃಷ್ಟಿಕೋನದ ಪ್ರಚಾರಕ್ಕೆ ಅಪಾರವಾದ ಕಾಣಿಕೆಯನ್ನು ನೀಡಿದ್ದಾರೆ. 1942-1945 ರ ಪೀಪಲ್ಸ್ ವಾರ್ ಪರಿಕಲ್ಪನೆಯನ್ನು ಜಾರಿಮಾಡುವುದರಲ್ಲಿನ ತಪ್ಪುಗಳ ನಡುವೆಯೂ, ಅದರಿಂದಾಗಿ ಉಂಟಾದ ವ್ಯಾಪಕ ರಾಷ್ಟ್ರೀಯ ಪ್ರತಿಕೂಲವನ್ನು ಧೈರ್ಯವಾಗಿ ಎದುರಿಸಿದ್ದಾರೆ. 1950 ರ ನಂತರ ಈ ಬದ್ಧತೆ ಕಡಿಮೆಯಾಗುತ್ತಿರುವುದನ್ನು ಗಮನಿಸಬೇಕಾಗಿದೆ.
>
> ಬೌದ್ಧಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ, ಮಾರ್ಕ್ಸ್‌ವಾದಿಗಳು ಹಲವು ಸಾಮಾಜ ವಿಜ್ಞಾನಗಳಿಗೆ ಮೂಲಭೂತ ಬದಲಾವಣೆಯನ್ನು ನೀಡಿದ್ದಾರೆ. ಸಾಮಾಜಿಕ ವರ್ಗಗಳ ಪಾತ್ರದ ಬಗ್ಗೆ, ಸಾಮಾಜಿಕ ವ್ಯವಸ್ಥೆಯ ಮೂಲಭೂತ ಲಕ್ಷಣವಾಗಿ ಉತ್ಪಾದನಾ ವಿಧಾನದ ಬಗ್ಗೆ, ಧಾರ್ಮಿಕ ಮತ್ತು ತಾತ್ವಿಕ ಚಿಂತನೆಗಳ ಬಗ್ಗೆ, ವಸಾಹತು ವ್ಯವಸ್ಥೆ ಮತ್ತು ವಸಾಹತು ಆರ್ಥಿಕ ಸ್ವರೂಪದ ಬಗ್ಗೆ, ಎಲ್ಲಾ ರಾಷ್ಟ್ರೀಯವಾದಿ ಮತ್ತು ಇತರೆ ಜನಪ್ರಿಯ ಚಳುವಳಿಗಳ ವರ್ಗ ಗುಣದ ಬಗ್ಗೆ, ಚರಿತ್ರೆಯಲ್ಲಿ ಗಮನ ಸೆಳೆಯಲು ಅವರಿಗೆ

> ಸಾಧ್ಯವಾಗಿದೆ. ಅರ್ಥಶಾಸ್ತ್ರದಲ್ಲಿ, ತನ್ನದೇ ಆಕರ್ಷಕ ಭಿನ್ನ ಎಡ–ವಾದಿ ವೈವಿಧ್ಯತೆಯನ್ನು ಹೊಂದಿದ್ದ, ಅತ್ಯಂತ ಮುಂದುವರಿದ ಬೂರ್ಜ್ವಾ ಸೈದ್ಧಾಂತಿಕ ರೂಪದ ಒಟ್ಟು ಶಕ್ತಿಯನ್ನು ಮಾರ್ಕ್ಸ್‌ವಾದಿಗಳು ಎದುರಿಸಬೇಕಾಯಿತು. ಇದರಲ್ಲಿ ಅವರಿಗೆ ಕಡಿಮೆ ಶಕ್ತಿ ಇದ್ದಾಗಲೂ, ಕಾರ್ಷಿಕ ಸಂಬಂಧಗಳ ಬಗ್ಗೆ, ವಿದೇಶಿ ಬಂಡವಾಳದ ಪಾತ್ರದ ಬಗ್ಗೆ, ಭಾರತೀಯ ಕೈಗಾರಿಕಾ ಮತ್ತು ವಾಣಿಜ್ಯ ಬಂಡವಾಳದ ಮೂಲ ಗುಣದ ಬಗ್ಗೆ ಗಮನವನ್ನು ಕೇಂದ್ರೀಕರಿಸುವಂತೆ ಮಾಡಿದರು. ಸಾಮಾನ್ಯವಾಗಿ ಬೂರ್ಜ್ವಾ ದೃಷ್ಟಿಕೋನಗಳ ಪ್ರಭಾವದಲ್ಲಿರುವ ರಾಜಕೀಯ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ತತ್ವಶಾಸ್ತ್ರಗಳಲ್ಲಿ ಕೂಡಾ ಹಲವು ಮಾರ್ಕ್ಸ್‌ವಾದಿ ವಿದ್ವಾಂಸರು ಕೊಡುಗೆಯನ್ನು ನೀಡಿದರು. ಪ್ರಗತಿಪರ ಬರಹಗಾರರ ಸಂಘ 1936 ರಲ್ಲಿ ಆರಂಭವಾದಾಗಿನಿಂದ, ಬಹುತೇಕ ಎಲ್ಲಾ ಭಾರತೀಯ ಭಾಷೆಗಳ ಸಾಹಿತ್ಯ ಮತ್ತು ಸಾಹಿತ್ಯಿಕ ವಿಮರ್ಶೆಯಲ್ಲಿ ಮಾರ್ಕ್ಸ್‌ವಾದಿಗಳು ಒಂದು ಪ್ರಮುಖ ಶಕ್ತಿಯಾಗಿದ್ದಾರೆ. ನಾಟಕ ಮತ್ತು ಸಿನಿಮಾ ಕ್ಷೇತ್ರಗಳಲ್ಲೂ ಅವರ ಕೊಡುಗೆ ಗಮನಾರ್ಹವಾದುದು (ಬಿಪನ್ 1974: 198–199) (ಅನುವಾದ ಲೇಖಕರದು).

ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಚಳುವಳಿಯ ಮಹತ್ವವನ್ನು, ಅದರ ಏಳು–ಬೀಳುಗಳನ್ನು ತಿಳಿಯುವ ಮತ್ತು ಅದರ ವೈವಿಧ್ಯತೆಗಳನ್ನು ಮತ್ತು ಸಂಕೀರ್ಣತೆಗಳ ಒಡಲಾಳವನ್ನು ಅರಿಯುವ ಚಾರಿತ್ರಿಕ ಅಗತ್ಯತೆಯ ಕಾರಣಕ್ಕೆ ಪ್ರಸಕ್ತ ಅಧ್ಯಯನವನ್ನು ಮಾಡಲಾಗಿದೆ. ಅಖಿಲ ಭಾರತ ಮಟ್ಟದ ಮತ್ತು ಕೇರಳ, ಪಶ್ಚಿಮ ಬಂಗಾಳದಂತಹ ಕೆಲವು ರಾಜ್ಯಗಳ ಚರಿತ್ರೆಯು ಗಣನೀಯವಾಗಿ ದಾಖಲಾಗಿದೆ. ಕರ್ನಾಟಕವೂ ಸೇರಿದಂತೆ ಬಹುತೇಕ ರಾಜ್ಯಗಳ ಕಮ್ಯುನಿಸ್ಟ್ ಚರಿತ್ರೆಯು ಸಮರ್ಪಕವಾಗಿ ದಾಖಲಾಗಿಲ್ಲ. ಸ್ವಾತಂತ್ರ್ಯ–ಪೂರ್ವ ಕನ್ನಡ ಮಾತನಾಡುವ ಮತ್ತು ಸಂಬಂಧಿತ ಪ್ರದೇಶಗಳು ಮತ್ತು ಸ್ವಾತಂತ್ರ್ಯಾ–ನಂತರ ಹಾಗೂ ಏಕೀಕರಣ–ನಂತರ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿ ಆರಂಭಗೊಂಡ ಕಾಲದಿಂದ ಹಿಡಿದು 1990 ರವರೆಗೆ ಪ್ರಸಕ್ತ ಅಧ್ಯಯನವು ಕರ್ನಾಟಕದಲ್ಲಿ ನಡೆದ ಕಮ್ಯುನಿಸ್ಟ್ ಚಳುವಳಿಯನ್ನು ದಾಖಲಿಸಲು ಉದ್ದೇಶಿಸಿದೆ. ಕಮ್ಯುನಿಸ್ಟ್ ಚಳುವಳಿ ಕರ್ನಾಟಕಕ್ಕೆ ಪ್ರತ್ಯೇಕವಾದದ್ದಲ್ಲ. ಅದಕ್ಕೆ ರಾಷ್ಟ್ರೀಯ ಹಿನ್ನೆಲೆಯಿದೆ ಹಾಗೆಯೇ ಅಂತರರಾಷ್ಟ್ರೀಯ ಹಿನ್ನೆಲೆಯೂ ಇದೆ. ಇವುಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ವಿವಿಧ ಆಯಾಮಗಳ ಅಧ್ಯಯನವನ್ನು ಮಾಡಲಾಗಿದೆ.

ಪ್ರಸಕ್ತ ಮಹಾಪ್ರಬಂಧವು ಶೈಕ್ಷಣಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಯಾವುದೇ ವಿಶ್ವವಿದ್ಯಾಲಯದಿಂದಲೂ ಇದುವರೆಗೂ 'ಕರ್ನಾಟಕದ ಕಮ್ಯುನಿಸ್ಟ್ ಚಳುವಳಿ' ವಿಷಯದ ಕುರಿತು ಸಂಶೋಧನೆಗಳು ನಡೆದಿಲ್ಲ. ಯಾವುದೇ ರೀತಿಯ ಶೈಕ್ಷಣಿಕ ಪ್ರಬಂಧಗಳು ಮಂಡನೆಯಾಗಿಲ್ಲ. ಮೈಸೂರು ಸಂಸ್ಥಾನದ ವ್ಯಾಪ್ತಿಯಲ್ಲಿ ಕಾರ್ಮಿಕ ಚಳುವಳಿಯ ಕುರಿತು ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಜಾನಕಿ ನಾಯರ್ (2016) ಅವರು ಮೈನರ್ಸ್ ಅಂಡ್ ಮಿಲ್ ಹ್ಯಾಂಡ್ಸ್ ಎಂಬ ಕೃತಿಯನ್ನು ರಚಿಸಿ ಪ್ರಕಟಿಸಿದ್ದಾರೆ. ಇದು ಬೆಂಗಳೂರು ಮತ್ತು ಕೆ.ಜಿ.ಎಫ್.ನ ಕಾರ್ಮಿಕ ಚಳುವಳಿಗಳ ವಿವಿಧ ಆಯಾಮಗಳ ಬಗ್ಗೆ ಬೆಳಕನ್ನು ಚೆಲ್ಲುವ ಕೃತಿಯಾಗಿದೆ. ಎರಡೂ ನಗರಗಳನ್ನು ಸಾಪೇಕ್ಷವಾಗಿ ಹೋಲಿಸುತ್ತಾ ಕಾರ್ಮಿಕ ವರ್ಗ ಇಲ್ಲಿ ಬೆಳೆದ ಬಗ್ಗೆ ಚಾರಿತ್ರಿಕ ವಿಶ್ಲೇಷಣೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಶೋಭಾ ಪಿ.ಎಸ್.ರವರು (1994) ಲೆಫ್ಟ್ ಮೂವ್‌ಮೆಂಟ್ ಇನ್ ಪ್ರಿನ್ಸ್‌ಲಿ ಮೈಸೂರು 1932–

947 ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ಅಪ್ರಕಟಿತವಾದ ಇದು ಮೈಸೂರು ಪ್ರಾಂತ್ಯದಲ್ಲಿ ಕಮ್ಯುನಿಸ್ಟರ ಆರಂಭಿಕ ಚಟುವಟಿಕೆಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಮೈಸೂರು ಸಂಸ್ಥಾನದಲ್ಲಿ ಆರಂಭವಾದ ನ್ಯಾಷನಲ್ ಯೂತ್ ಲೀಗ್‌ನ ಬೆಳವಣಿಗೆ, ಜನ ಜಾಗೃತಿ ಸಂಘದ ಮೂಲಕ ರೂಪುಗೊಂಡ ಕಮ್ಯುನಿಸ್ಟರ ಕುರಿತು, ಕಾರ್ಮಿಕ ವರ್ಗದ ಚಳುವಳಿಗಳಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರದ ಕುರಿತು ಮತ್ತು ಸ್ವಾತಂತ್ರ್ಯದ ಅಂತಿಮ ಘಟ್ಟದಲ್ಲಿ ಕಮ್ಯುನಿಸ್ಟರ ಪಾತ್ರದ ಬಗ್ಗೆ ಶೋಭಾರವರು ತಮ್ಮ ಸಂಶೋಧನೆಯಲ್ಲಿ ಪ್ರತಿಪಾದಿಸಿದ್ದಾರೆ. ಇದನ್ನು ಹೊರತುಪಡಿಸಿದರೆ ಮೈಸೂರು ಪ್ರಾಂತ್ಯದಲ್ಲಿ ಕಮ್ಯುನಿಸ್ಟ್ ಚಳುವಳಿ ಕುರಿತು ವಿಶೇಷ ಅಧ್ಯಯನಗಳು ನಡೆದಿಲ್ಲ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಜಯ್‌ಕುಮಾರ್ ಕೆ. (2008) ಇವರು 'ದಿ ಲೆಫ್ಟ್ ಮೂವ್‌ಮೆಂಟ್ ಇನ್ ಮಲಬಾರ್ (1938–1964)' ಎಂಬ ಮಹಾ ಪ್ರಬಂಧವನ್ನು ಮಂಡಿಸಿದ್ದು, ಅಂದಿನ ಮಲಬಾರ್‌ನ ಭಾಗವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯು ಉತ್ತರ ಕೇರಳದ ಕಮ್ಯುನಿಸ್ಟ್ ಚಳುವಳಿಯಿಂದ ಆಗಿರಬಹುದಾದ ಪ್ರಭಾವಗಳನ್ನು ಗುರುತಿಸಿದ್ದಾರೆ. ಈ ಮಹಾ ಪ್ರಬಂಧವು ಬಹುತೇಕ ಕೇರಳ ಭಾಗದ ಕಮ್ಯುನಿಸ್ಟ್ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಹೈದರಾಬಾದ್ ಸೆಂಟ್ರಲ್ ಯೂನಿವರ್ಸಿಟಿಯಲ್ಲಿ ಇನುಗುರ್ತಿ ನರಸಯ್ಯ (2010) ರವರು 'ಲೆಫ್ಟ್ ಅಂಡ್ ನ್ಯಾಷನಲ್ ಮೂವ್‌ಮೆಂಟ್ಸ್ ಇನ್ ಮದ್ರಾಸ್ ಪ್ರೆಸಿಡೆನ್ಸಿ (1930–1947): ಎ ಸ್ಟಡಿ ಇನ್ ಪೊಲಿಟಿಕ್ಸ್ ಆಫ್ ಹೆಜಮನಿ' ಎಂಬ ಮಹಾ ಪ್ರಬಂಧವನ್ನು ಮಂಡಿಸಿದ್ದು, ಇದು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿದ್ದ ಆಂಧ್ರಪ್ರದೇಶಕ್ಕೆ ಸೀಮಿತವಾಗಿ ಅಧ್ಯಯನವನ್ನು ಒಳಗೊಂಡಿದೆ. ಆದರೆ ಇದು ಅಲ್ಲಿನ ಕಮ್ಯುನಿಸ್ಟ್ ಚಳುವಳಿಯ ಕುರಿತು ಒಂದು ಕಣ್ಣೋಟವನ್ನು ನೀಡುತ್ತದೆ. ಇನ್ನು ಕರ್ನಾಟಕದ ಇತರೆ ಪ್ರಾಂತ್ಯಗಳು ಮತ್ತು ಸಂಸ್ಥಾನಗಳ ವ್ಯಾಪ್ತಿಯಲ್ಲಿ ಈ ರೀತಿಯಲ್ಲಿ ಕಮ್ಯುನಿಸ್ಟ್ ಚಳುವಳಿ ಕುರಿತು ಶೈಕ್ಷಣಿಕ ಸಂಶೋಧನೆಗಳು ನಡೆದಿಲ್ಲ. ಹೀಗಾಗಿ ಪ್ರಸ್ತುತ ಮಹಾ ಪ್ರಬಂಧವು ಕರ್ನಾಟಕವನ್ನು ಕೇಂದ್ರವಾಗಿಟ್ಟುಕೊಂಡು ಕಮ್ಯುನಿಸ್ಟ್ ಚಳುವಳಿಯ ವಿವಿಧ ನೆಲೆಗಳ ಬಗ್ಗೆ ಸಮಗ್ರ ಅಧ್ಯಯನವನ್ನು ನಡೆಸಲು ಉದ್ದೇಶಿಸಿದೆ.

ಪ್ರಸಕ್ತ ವಿಷಯದ ಕುರಿತು ಶೈಕ್ಷಣಿಕೇತರ ಕೆಲವು ಕೃತಿಗಳು ಪ್ರಕಟವಾಗಿವೆ. ಸಿ.ಆರ್.ಕೃಷ್ಣರಾವ್ (2012) ಅವರು ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ನಾನು ಕಂಡಂತೆ ಕೃತಿಯನ್ನು ಪ್ರಕಟಿಸಿದ್ದಾರೆ. ಸ್ವತಃ ಕಮ್ಯುನಿಸ್ಟ್ ಚಳುವಳಿಯಲ್ಲಿದ್ದ ಇವರು ತಮ್ಮ ಅನುಭವಗಳು ಮತ್ತು ನೆನಪುಗಳ ಆಧಾರದಲ್ಲಿ ಹಲವಾರು ಅಂಶಗಳನ್ನು ಬರೆದಿದ್ದಾರೆ. ಇದನ್ನು ಹೊರತುಪಡಿಸಿದರೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಕೆಲಸ ಮಾಡಿದ, ಸಿಪಿಐ ಮತ್ತು ಸಿಪಿಐ(ಎಂ) ಎರಡೂ ಪಕ್ಷಗಳ ನಾಯಕರು ಬರೆದಿರುವ ಆತ್ಮಕಥೆಗಳು, ಜೀವನಚರಿತ್ರೆಗಳು ಮತ್ತು ಹೋರಾಟಗಳ ಅನುಭವಗಳ ಕೃತಿಗಳು ವಿವಿಧ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿಯ ಕುರಿತು ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಇವುಗಳನ್ನು ಆಧಾರವಾಗಿ ಪರಿಗಣಿಸುವಾಗ ಅದಕ್ಕಿರುವ ವ್ಯಕ್ತಿನಿಷ್ಠ ಮಿತಿಗಳನ್ನು ಸಾಧ್ಯವಾದಷ್ಟೂ ಪ್ರಾಥಮಿಕ ದಾಖಲೆಗಳೊಂದಿಗೆ ಪರಿಶೀಲಿಸಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ. ಹೀಗಾಗಿ ಪ್ರಸ್ತುತ ಮಹಾಪ್ರಬಂಧವು ತನ್ನ ಸ್ವರೂಪದಿಂದ ಕರ್ನಾಟಕದಲ್ಲಿ ಮೊದಲನೆಯದಾಗಿದೆ. ಶೈಕ್ಷಣಿಕ ವಲಯವೂ ಸೇರಿದಂತೆ ಇದು ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳಿಗೆ ಮಹತ್ವದ ದಾಖಲೆಯಾಗಲಿದೆ.

❖ ❖ ❖

ಪ್ರಸಕ್ತ ಅಧ್ಯಯನವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯವು ಜಾಗತಿಕವಾಗಿ ಕಮ್ಯುನಿಸ್ಟ್ ಸಿದ್ಧಾಂತ ರೂಪುಗೊಂಡ ಹಿನ್ನೆಲೆಯನ್ನು ಮತ್ತು ಭಾರತದಲ್ಲಿ ಅದು ಪ್ರಭಾವ ಬೀರಿದ ರೀತಿಯನ್ನು ಮತ್ತು ಆರಂಭಿಕ ನೆಲೆಗಳನ್ನು ವಿವರಿಸುತ್ತದೆ. ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯ ಕಾರಣದಿಂದ ಯೂರೋಪಿನಲ್ಲಿ ಉಂಟಾದ ಕೈಗಾರಿಕೀಕರಣದ ಹಿನ್ನೆಲೆಯಲ್ಲಿ ರೂಪುಗೊಂಡ ಚಿಂತನೆಗಳು ಅಂತಿಮವಾಗಿ ಮಾರ್ಕ್ಸ್‌ವಾದದ ಉಗಮಕ್ಕೆ ಕಾರಣವಾಯಿತು. ಇದು ಜಾಗತಿಕವಾಗಿ ಶ್ರಮಜೀವಿ ವರ್ಗದ ನಡುವೆ ಜಾಗೃತಿ ಮೂಡಿಸಿದ ಪರಿಣಾಮವಾಗಿ ರಷ್ಯಾದಲ್ಲಿ ಮಾನವ ಸಮಾಜದ ಚರಿತ್ರೆಯಲ್ಲಿ ಮೊದಲ ಸಮಾಜವಾದಿ ಕ್ರಾಂತಿ ಸಂಭವಿಸಿತು. ಇದು ಭಾರತದಲ್ಲಿ ಅಷ್ಟೊತ್ತಿಗಾಗಲೇ ಬೆಳೆಯುತ್ತಿದ್ದ ರಾಷ್ಟ್ರೀಯ ಚಳುವಳಿಯ ವಿವಿಧ ಕ್ರಾಂತಿಕಾರಿ ಗುಂಪುಗಳ ಮೇಲೆ ಪ್ರಭಾವ ಬೀರಿತು. ರಷ್ಯನ್ ಕ್ರಾಂತಿಯು ಭಾರತದ ಜನತೆಯ ಮೇಲೆ ಬೀರಿದ ಪ್ರಭಾವ ಮತ್ತು ಮಾರ್ಕ್ಸ್‌ವಾದಿ ವಿಚಾರಧಾರೆಗಳು ಪ್ರಸಾರಗೊಂಡು ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೆ ದಾರಿಯಾದ ಬಗ್ಗೆ ಮೊದಲ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಸ್ವಾತಂತ್ರ್ಯ–ಪೂರ್ವ ಭಾರತದ ಕಮ್ಯುನಿಸ್ಟ್ ಚಳುವಳಿಯ ಆರಂಭಿಕ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಭಾರತ ಕಮ್ಯುನಿಸ್ಟ್ ಪಕ್ಷದ ಆರಂಭವು ರಾಷ್ಟ್ರೀಯ ಚಳುವಳಿಗೆ ಒಂದು ತಿರುವನ್ನು ನೀಡಿತು. ಮೊದಲಿಗೆ ಅನಿವಾಸಿ ಭಾರತೀಯರಿಂದ ತಾಷ್ಕೆಂಟ್‌ನಲ್ಲಿ 1920 ರಲ್ಲಿ ಆರಂಭವಾಯಿತಾದರೂ, ಭಾರತದೊಳಗೆ 1925 ರಲ್ಲಿ ಕಾನ್ಪುರದಲ್ಲಿ ಆರಂಭವಾಯಿತು. ಭಾರತದ ವಿವಿಧ ಪ್ರದೇಶಗಳಲ್ಲಿ ಬಿಡಿಬಿಡಿಯಾಗಿ ಕೆಲಸ ಮಾಡುತ್ತಿದ್ದ ಕಮ್ಯುನಿಸ್ಟ್ ಕ್ರಾಂತಿಕಾರಿಗಳನ್ನು ಒಂದು ವೇದಿಕೆಗೆ ತಂದು ಬಲಿಷ್ಟವಾದ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯತೆಯ ನೆಲೆಯಲ್ಲಿ ಚಳುವಳಿಯನ್ನು ರೂಪಿಸಲಾಯಿತು. ಸಿಪಿಐ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಮೊದಲ ಬಾರಿಗೆ 1921 ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿತು. ಇಂತಹದೊಂದು ಬೇಡಿಕೆಯನ್ನು ನಿರ್ಣಯಿಸಲು ಕಾಂಗ್ರೆಸ್ ಆ ನಂತರದಲ್ಲಿ 9 ವರ್ಷಗಳನ್ನು ತೆಗೆದುಕೊಂಡಿತು. ಸಂಯುಕ್ತ ರಂಗದ ಕಾರ್ಯತಂತ್ರವನ್ನು ಅನುಸರಿಸಿದ ಸಿಪಿಐ ಅಸಹಕಾರ ಚಳುವಳಿ, ನಾಗರಿಕ ಕಾನೂನುಭಂಗ ಚಳುವಳಿಗಳಲ್ಲಿ ದೇಶವ್ಯಾಪಿ ಸಕ್ರಿಯವಾಗಿ ಪಾಲ್ಗೊಂಡಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಿಪಿಐನ ನಿಲುವು ಕೆಲಕಾಲ ಅದು ಜನರಿಂದ ಪ್ರತ್ಯೇಕಗೊಳ್ಳುವಂತೆ ಮಾಡಿತು. ಎರಡನೇ ಮಹಾಯುದ್ಧ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಿದ್ದ ಸಿಪಿಐ, 1941 ರಲ್ಲಿ ಫ್ಯಾಸಿಸ್ಟ್ ಜರ್ಮನಿಯು ಸೋವಿಯತ್ ರಷ್ಯಾ ಮೇಲೆ ಆಕ್ರಮಣ ಮಾಡಿದ ನಂತರ ಅದು ಜನತಾ ಯುದ್ಧವೆಂಬ ಕಾರಣಕ್ಕೆ ತನ್ನ ನಿಲುವನ್ನು ಬದಲಾಯಿಸಿದ್ದರಿಂದ ಮುಖ್ಯ ವಾಹಿನಿಯಿಂದ ಅದು ಬೇರ್ಪಟ್ಟಿತು. ಅದರ ನಂತರ ಸಿಪಿಐ ನೇತೃತ್ವದ ಸಂಘಟನೆಗಳಿಂದ ದೇಶದೆಲ್ಲೆಡೆ ತೀವ್ರವಾದ ಹೋರಾಟಗಳು ನಡೆದವು. ಹೆಚ್ಚುತ್ತಿದ್ದ ಕಮ್ಯುನಿಸ್ಟರ ಚಟುವಟಿಕೆಗಳನ್ನು ಸದೆಬಡಿಯಲು ಬ್ರಿಟಿಷರು ಹಲವಾರು ಪಿತೂರಿ ಮೊಕದ್ದಮೆಗಳನ್ನು ಹೂಡಿದರು. ಪೇಶಾವರ್, ಕಾನ್ಪುರ್ ಮತ್ತು ಮೀರತ್ ಪಿತೂರಿ ಮೊಕದ್ದಮೆಗಳೆಂದು ಅವು ಚರಿತ್ರೆಯಲ್ಲಿ ಹೆಸರಾಗಿವೆ. ಸ್ವಾತಂತ್ರ್ಯ ಪೂರ್ವದ ಬಹುತೇಕ ಕಾಲ ನಿಷೇಧಕ್ಕೊಳಗಾಗಿದ್ದ ಸಿಪಿಐ 1930 ರ ದಶಕದಲ್ಲಿ ಹಲವಾರು ಸಂಘಟನೆಗಳನ್ನು, ಅದರಲ್ಲಿ ಮುಖ್ಯವಾಗಿ 1920 ರಲ್ಲೇ ಆರಂಭವಾದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ), 1936

ರಲ್ಲಿ ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್), ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ (ಎಐಎಸ್ಎಫ್), ಆಲ್ ಇಂಡಿಯಾ ಪ್ರೋಗ್ರೆಸ್ಸೀವ್ ರೈಟರ್ಸ್ ಅಸೋಸಿಯೇಷನ್ (ಎಐಪಿಡಬ್ಲ್ಯುಎ) ಸ್ಥಾಪಿಸುವುದರಲ್ಲಿ ಮುಂಚೂಣಿ ಪಾತ್ರ ವಹಿಸಿತು ಮತ್ತು ಚಳುವಳಿಗಳನ್ನು ವಿಸ್ತರಣೆ ಮಾಡಿತು. ಇವುಗಳ ಪರಿಣಾಮವಾಗಿ ತೆಲಂಗಾಣ ರೈತ ಬಂಡಾಯ, ಕಯ್ಯೂರು ರೈತ ಬಂಡಾಯ, ತೇಭಾಗ ಹೋರಾಟ, ವಾರ್ಲಿ ಆದಿವಾಸಿಗಳ ಹೋರಾಟ, ರಾಯಲ್ ಇಂಡಿಯನ್ ನೇವಿ ನಾವಿಕರ ಬಂಡಾಯ ಮುಂತಾದ ಹೋರಾಟಗಳ ಮೂಲಕ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಬೇಕಾದ ಒತ್ತಡವನ್ನು ನಿರ್ಮಿಸಿದರು. ಪರಿಣಾಮವಾಗಿ 1947 ರಲ್ಲಿ ಗಳಿಸಿದ ಸ್ವಾತಂತ್ರ್ಯವನ್ನು ಸಿಪಿಐ ವಿಶ್ಲೇಷಣೆ ಮಾಡಿ ಅದು ನಿಜವಾದ ಸ್ವಾತಂತ್ರ್ಯವಲ್ಲ ಎಂದು ಪ್ರತಿಪಾದಿಸಿತು.

ಮೂರನೇ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಕಮ್ಯುನಿಸ್ಟರ ಪಾತ್ರದ ಬಗ್ಗೆ ಅಧ್ಯಯನ ಮಾಡಲಾಗಿದೆ. ಸ್ವಾತಂತ್ರ್ಯ-ಪೂರ್ವ ಕರ್ನಾಟಕವು ವಿಭಿನ್ನ ಆಡಳಿತಕ್ಕೆ ಒಳಪಟ್ಟಿದ್ದರಿಂದ ಇಲ್ಲಿನ ಜನ ವಿಭಿನ್ನವಾದ ಕೃಷಿ, ಕೈಗಾರಿಕೆ ಮತ್ತು ಇತರೆ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಈ ಪ್ರದೇಶಗಳಲ್ಲಿ ಕಮ್ಯುನಿಸ್ಟರು ನಡೆಸಿದ ಹೋರಾಟಗಳ ಬಗ್ಗೆ ಇದರಲ್ಲಿ ಚರ್ಚಿಸಲಾಗಿದೆ. ಒಂದು ಕಡೆ ಬ್ರಿಟಿಷರು ಮತ್ತೊಂದು ಕಡೆ ರಾಜರ ದಾಳಿ ದಬ್ಬಾಳಿಕೆಗಳನ್ನು ಕಮ್ಯುನಿಸ್ಟರು ಎದುರಿಸಬೇಕಾಗಿತ್ತು. ಈ ಅಧ್ಯಾಯದಲ್ಲಿ ಸಿಪಿಐ ಕರ್ನಾಟಕದಲ್ಲಿ ಆರಂಭವಾದ ಮೂಲಗಳನ್ನು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಆರಂಭವಾದ ಜನ ಜಾಗೃತಿ ಸಂಘದೊಳಗಿಂದಲೇ ಕರ್ನಾಟಕದ ಮೊಟ್ಟ ಮೊದಲ ಕಮ್ಯುನಿಸ್ಟ್ ಘಟಕ ಆರಂಭವಾಗಿದೆ. ಕಮ್ಯುನಿಸ್ಟರ ನೇತೃತ್ವದ ಸಂಘಟನೆಗಳು ವಿವಿಧ ಜನವಿಭಾಗಗಳ ಹೋರಾಟಗಳು ನಡೆಸುವುದರಲ್ಲಿ ವಹಿಸಿದ ಪಾತ್ರವನ್ನು ಗುರುತಿಸಲಾಗಿದೆ.

ನಾಲ್ಕನೇ ಅಧ್ಯಾಯವು ಸ್ವಾತಂತ್ರ್ಯೋತ್ತರ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ಕುರಿತದ್ದಾಗಿದೆ. ಸ್ವಾತಂತ್ರ್ಯ ಬಂದ ಕೂಡಲೇ ತೆಲಂಗಾಣ ಹೋರಾಟದ ಹಿನ್ನೆಲೆಯಲ್ಲಿ ಸಿಪಿಐಯನ್ನು ಸ್ವತಂತ್ರ ಭಾರತದ ಸರ್ಕಾರವೇ ನಿಷೇಧ ಮಾಡಿತ್ತು. 1951 ರವರೆಗೆ ಹಲವಾರು ಕಮ್ಯುನಿಸ್ಟರು ಜೈಲು ಪಾಲಾದ್ದರಿಂದ ಬಹಿರಂಗ ಚಟುವಟಿಕೆ ನಡೆಸಲಾಗಲಿಲ್ಲ. ಭಾಷಾವಾರು ರಾಜ್ಯ ರಚನೆಗಳ ಹೋರಾಟದಲ್ಲಿ ದೇಶಾದ್ಯಂತ ಪ್ರಮುಖ ಪಾತ್ರ ವಹಿಸಿದ ಸಿಪಿಐ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಮೂಲಕ ಸಕ್ರಿಯವಾಗಿ ಭಾಗವಹಿಸಿತ್ತು. ಗೋವಾ ವಿಮೋಚನಾ ಚಳುವಳಿಯಲ್ಲಿ ಕರ್ನಾಟಕದ ಕಮ್ಯುನಿಸ್ಟರು ವಹಿಸಿದ ಪಾತ್ರದ ಬಗ್ಗೆ ಈ ಅಧ್ಯಾಯದಲ್ಲಿ ಗಮನ ಹರಿಸಲಾಗಿದೆ. 1956 ರಿಂದ 1964 ರವರೆಗೆ ಕಮ್ಯುನಿಸ್ಟರ ನೇತೃತ್ವದ ಹೋರಾಟಗಳಲ್ಲಿ ಹೆಚ್ಚಳ ಕಂಡಿತು. ಆದರೆ ಇದೇ ಅವಧಿಯಲ್ಲಿ ಸಿಪಿಐನೊಳಗೆ ತೀವ್ರವಾದ ಸೈದಾಂತಿಕ ಭಿನ್ನಾಭಿಪ್ರಾಯಗಳು ಬೆಳೆದವು. ಇದು ಅಂತಿಮವಾಗಿ ಸಿಪಿಐನ ವಿಭಜನೆಗೆ ಕಾರಣವಾಯಿತು. ವಿಭಜನೆಯ ಪರಿಣಾಮವಾಗಿ ಹುಟ್ಟಿದ ಸಿಪಿಐ(ಎಂ)ನೊಳಗೆ ಮತ್ತೊಂದು ಎಡ-ಪಂಥೀಯ ವಿಭಜನೆ 1968 ರಲ್ಲಿ ಸಂಭವಿಸಿತು. ಆದರೆ ಕರ್ನಾಟಕದ ಸಿಪಿಐ(ಎಂ)ನೊಳಗೆ ಅಂತಹುದೊಂದು ವಿಭಜನೆ 1978 ರಲ್ಲಿ ಸಂಭವಿಸಿತು. ನಕ್ಸಲ್ ಎನ್ನಲಾಗುವು ಮಾವೋವಾದಿ ಚಳುವಳಿಯು ತುರ್ತುಪರಿಸ್ಥಿತಿಯ ನಂತರದಲ್ಲಿ ಕರ್ನಾಟಕದಲ್ಲಿ ಜನ್ಮತಾಳಿದೆ. ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ನಂತರದಲ್ಲಿ

ವ್ಯಾಪಕವಾದ ಚಳುವಳಿಗಳು ನಡೆದಿವೆ. ಬೆಂಗಳೂರಿನಲ್ಲಿ ಮೈಕೋ ಕಾರ್ಮಿಕರ ಹೋರಾಟ ಮತ್ತು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಹೋರಾಟ ಇಡೀ ರಾಜ್ಯದ ಗಮನವನ್ನು ಸೆಳೆಯುವಂತೆ ಮಾಡಿತು. ಮಲಪ್ರಭಾ ರೈತ ಹೋರಾಟ ಮತ್ತು ನರಗುಂದದಿಂದ ರೈತ ಜಾಥಾ ರಾಜ್ಯವ್ಯಾಪಿ ಸಂಚಲನವನ್ನು ಮೂಡಿಸಿತು. ಅದೇ ಸಂದರ್ಭಕ್ಕೆ ನಡೆದ ವಿದ್ಯಾರ್ಥಿ ಚಳುವಳಿಗಳು ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರವನ್ನು ತರುವುದರಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಈ ಅವಧಿಯಲ್ಲಿ ನಿರ್ವಹಿಸಿದ ಮುಂಚೂಣಿ ಪಾತ್ರದಿಂದಾಗಿ ಚುನಾವಣೆಗಳಲ್ಲೂ ಅದರ ಲಾಭವನ್ನು ಪಡೆದವು. ಸ್ವಾತಂತ್ರ್ಯಾ ನಂತರ ಕಮ್ಯುನಿಸ್ಟರ ನೇತೃತ್ವದ ಸಮೂಹ ಸಂಘಟನೆಗಳ ಪಾತ್ರದ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಚುನಾವಣಾ ರಾಜಕೀಯದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಸಾಧನೆಯನ್ನು ವಿಮರ್ಶಿಸುತ್ತಾ, ಚುನಾವಣಾ ರಾಜಕಾರಣದಲ್ಲಿ ಬೆಳವಣಿಗೆ ಆಗದಿರಲು ಕಾರಣಗಳೇನು ಎಂಬುದರ ಬಗ್ಗೆ ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಬೆಳವಣಿಗೆಯಾಗದಿರಲು ಕಾರಣಗಳು, ಜಾತಿ ಮತ್ತು ವರ್ಗದ ಪ್ರಶ್ನೆಗಳನ್ನು ಕಮ್ಯುನಿಸ್ಟ್ ಪಕ್ಷಗಳು ನಿರ್ವಹಿಸುತ್ತಿರುವ ರೀತಿ, ಗ್ರಾಮೀಣ ಕಾರ್ಷಿಕ ಕಾರ್ಮಿಕರು ಮತ್ತು ನಗರ ಕಾರ್ಮಿಕರ ನಡುವಿನ ಆದ್ಯತೆಗಳು, ಈ ಪಕ್ಷಗಳ ಸಂಘಟನಾ ದೌರ್ಬಲ್ಯಗಳು, ರಾಜ್ಯ ಮಟ್ಟದಲ್ಲಿ ಒಂದು ಸಂಘಟಿತ ನಾಯಕತ್ವವನ್ನು ನೀಡುವಲ್ಲಿ ವಿಫಲವಾಗಲು ಕಾರಣಗಳು, ನಾಯಕತ್ವದಲ್ಲಿ ಜಾತಿ ಮತ್ತು ವರ್ಗಗಳ ಸಂಯೋಜನೆ ಬಗ್ಗೆ ಚರ್ಚಿಸಲಾಗಿದೆ. ಜೊತೆಗೆ 1990 ರ ನಂತರದ ಸಮಕಾಲೀನ ಜಾಗತಿಕ ಮತ್ತು ರಾಷ್ಟ್ರೀಯ ಬೆಳವಣಿಗೆಗಳನ್ನು ಸಮಾಜವಾದದ ಹಿನ್ನಡೆ, ಸೋವಿಯತ್ ಒಕ್ಕೂಟದ ಪತನ ಮತ್ತು ಏಕಧೃವೀ ಸಾಮ್ರಾಜ್ಯಶಾಹಿ ಶಕ್ತಿಗಳ ಬೆಳವಣಿಗೆ, ಇವುಗಳ ಪರಿಣಾಮವಾಗಿ ಬೆಳದು ಬಂದಿರುವ ಜಾಗತೀಕರಣ ಮತ್ತು ಅದರ ಪರಿಣಾಮಗಳನ್ನು ವಿಮರ್ಶಿಸಲಾಗಿದೆ. ಈ ಅವಧಿಯಲ್ಲಿ ಹೆಚ್ಚಾಗಿರುವ ಕಮ್ಯುನಿಸ್ಟ್ ವಿರೋಧಿ ಸೈದ್ಧಾಂತಿಕ ಪ್ರಚಾರದ ಪ್ರಮುಖ ಧಾರೆಗಳ ಬಗ್ಗೆ ಮತ್ತು ಅವುಗಳನ್ನು ಕಮ್ಯುನಿಸ್ಟ್ ಪಕ್ಷಗಳು ಅರ್ಥೈಸಿಕೊಂಡಿರುವ ಕುರಿತು ಮತ್ತು ಅಂತಿಮವಾಗಿ ಈ ಎಲ್ಲ ಬೆಳವಣಿಗೆಗಳಿಗೆ ಇವು ಹೇಗೆ ಪ್ರತಿಕ್ರಿಯಿಸಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕಮ್ಯುನಿಸ್ಟ್ ಚಳುವಳಿಯು ಕರ್ನಾಟಕದ ಸಮಾಜದ ಮೇಲೆ ಮಾಡಿರುವ ಪರಿಣಾಮ, ಯಶಸ್ಸು ಮತ್ತು ವೈಫಲ್ಯಗಳಿಗೆ ಕಾರಣಗಳು, ಎಷ್ಟರ ಮಟ್ಟಿಗೆ ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ಪ್ರಭಾವವನ್ನು ಕಮ್ಯುನಿಸ್ಟರು ಸಮಾಜದ ಮೇಲೆ ಉಂಟು ಮಾಡಿದ್ದಾರೆ ಎಂಬುದನ್ನು ಈ ಅಧ್ಯಾಯವು ಒಳಗೊಂಡಿದೆ.

❖ ❖ ❖

ಪ್ರಸಕ್ತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಅನುಶಂಗಿಕ ಎರಡೂ ಆಧಾರಗಳನ್ನು ಬಳಸಲಾಗಿದೆ. ಪ್ರಾಥಮಿಕ ಆಧಾರಗಳಾದ ಪತ್ರಾಗಾರ ಸಂಗ್ರಹಗಳು, ಸರ್ಕಾರಿ ದಾಖಲೆಗಳು, ಸುದ್ದಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು, ಕಮ್ಯುನಿಸ್ಟ್ ಪಕ್ಷಗಳ ದಸ್ತಾವೇಜುಗಳು, ಸಮಕಾಲೀನ ಕಮ್ಯುನಿಸ್ಟರ ಸಂದರ್ಶನಗಳು, ಮತ್ತು ಸೆಕೆಂಡರಿ ಆಧಾರಗಳಾದ ಪುಸ್ತಕಗಳು ಮತ್ತು ಲೇಖನಗಳು, ಪ್ರೌಢ ಪ್ರಬಂಧಗಳು ಮತ್ತು ಪ್ರಬಂಧಗಳನ್ನು ಬಳಸಲಾಗಿದೆ.

ಪತ್ರಾಗಾರ ದಾಖಲೆಗಳು ಪ್ರಸ್ತಾವಿತ ಕಾಲಘಟ್ಟದ ಕಮ್ಯುನಿಸ್ಟ್ ಚಟುವಟಿಕೆಗಳ ಬಗ್ಗೆ ಆಧಾರ ಒದಗಿಸುವ ಪ್ರಾಥಮಿಕ ಆಕರಗಳಾಗಿದ್ದು, ಅವು ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದರ ಜೊತೆಗೆ ಸರ್ಕಾರದ ದೃಷ್ಟಿಕೋನವನ್ನು ನೀಡುತ್ತವೆ. ಸರ್ಕಾರಗಳ ಹೋಮ್, ಪೊಲಿಟಿಕಲ್, ಕಾನ್ಫಿಡೆನ್ಶಿಯಲ್, ಪೊಲೀಸ್ ಆನ್ಯುಯಲ್ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ಸ್, ಫೋರ್ಟ್‌ನೈಟ್ಲೀ ರಿಪೋರ್ಟ್ಸ್ ಟು ದಿ ಚೀಫ್ ಸೆಕ್ರಟರಿ ಆಫ್ ಗವರ್ನಮೆಂಟ್ ಆಫ್ ಇಂಡಿಯಾ, ಇವುಗಳಲ್ಲಿ ಮುಖ್ಯವಾದ ಕೆಲವು ಸರ್ಕಾರಿ ದಾಖಲೆಗಳಾಗಿವೆ.

ಬೆಂಗಳೂರು ಪತ್ರಾಗಾರದಲ್ಲಿನ ಹೋಮ್, ಪೊಲಿಟಿಕಲ್, ಕಾನ್ಫಿಡೆನ್ಶಿಯಲ್ ಬ್ರಾಂಚ್‌ನ ದಾಖಲೆಗಳು ಮೈಸೂರು ಸರ್ಕಾರದ ಧೋರಣೆಗಳು ಮತ್ತು ಕಮ್ಯುನಿಸ್ಟರ ಬಗೆಗಿನ ಮಾಹಿತಿಗಳನ್ನು ನೀಡುತ್ತವೆ. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ಸ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (1931–1956), ನವದೆಹಲಿಯ ರಾಷ್ಟ್ರೀಯ ಪತ್ರಾಗಾರದ ಫೋರ್ಟ್‌ನೈಟ್ಲೀ ರಿಪೋರ್ಟ್ಸ್ ಫ್ರಂ ದಿ ರೆಸಿಡೆಂಟ್ ಆಫ್ ಮೈಸೂರು (1930–1942) ದಾಖಲೆಗಳು ಕಮ್ಯುನಿಸ್ಟರ ಕುರಿತು ಮೈಸೂರು ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದ ನಡುವಿನ ಮಾಹಿತಿಗಳನ್ನು ನೀಡುತ್ತವೆ. ಮದ್ರಾಸ್ ಪ್ರಾಂತ್ಯದ ಕರ್ನಾಟಕದ ಪ್ರದೇಶಗಳ ಕಮ್ಯುನಿಸ್ಟ್ ಚಟುವಟಿಕೆಗಳ ಬಗ್ಗೆ ಮದ್ರಾಸ್ ಪತ್ರಾಗಾರದ ಪೊಲೀಸ್ ವಾರ್ಷಿಕ ವರದಿಗಳು ಮಾಹಿತಿಯನ್ನು ಒದಗಿಸುತ್ತವೆ. ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿರುವ ಪಿ.ಸಿ.ಜೋಷಿ ಪತ್ರಾಗಾರದ ಹಲವು ದಾಖಲೆಗಳಲ್ಲಿ ಕರ್ನಾಟಕ ಕಮ್ಯುನಿಸ್ಟ್ ಪಕ್ಷದ ಕುರಿತು ಮಾಹಿತಿ ಲಭ್ಯವಾಗಿದೆ. ಇದಲ್ಲದೆ ಕರ್ನಾಟಕ ಸರ್ಕಾರ ಪ್ರಕಟಿಸಿರುವ ಉತ್ತರ ಕನ್ನಡ ಜಿಲ್ಲೆ ಗೆಜೆಟಿಯರ್‌ನಿಂದ ಮಾಹಿತಿ ಪಡೆಯಲಾಗಿದೆ.

ಸುದ್ದಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು: ಸ್ವಾತಂತ್ರ್ಯ–ಪೂರ್ವ ಮತ್ತು ಸ್ವಾತಂತ್ರ್ಯಾ–ನಂತರದ ಸುದ್ದಿ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ. ಕಮ್ಯುನಿಸ್ಟ್, ಕಾಂಗ್ರೆಸ್ ಸೋಷಿಯಲಿಸ್ಟ್, ನ್ಯಾಷನಲ್ ಫ್ರಂಟ್, ಪೀಪಲ್ಸ್ ಏಜ್, ನ್ಯೂ ಏಜ್, ಪೀಪಲ್ಸ್ ಡೆಮಾಕ್ರಸಿ, ಮೈನ್‌ಸ್ಟ್ರೀಮ್, ಅರುಣ, ಜನಶಕ್ತಿ, ಸಮದರ್ಶಿ, ಐಕ್ಯರಂಗ, ಕೆಂಬಾವುಟ, ಮುಂತಾದ ಸುದ್ದಿ ಪತ್ರಿಕೆಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ. ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕೊಡಗು ಸಮಾಚಾರ ದಿನಪತ್ರಿಕೆಗಳನ್ನು, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಫ್ರಂಟ್‌ಲೈನ್ ನಿಯತಕಾಲಿಕಗಳನ್ನು ಬಳಸಲಾಗಿದೆ. ಇದಲ್ಲದೆ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳ ಅಖಿಲ ಭಾರತ ಕೇಂದ್ರಗಳು ಮತ್ತು ಅದೇ ಪಕ್ಷಗಳ ಕರ್ನಾಟಕ ರಾಜ್ಯದ ಕೇಂದ್ರ ಕಛೇರಿಗಳಲ್ಲಿ, ಆ ಪಕ್ಷಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು, ಪತ್ರಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ.

ಸಂದರ್ಶನಗಳ ಮೂಲಕ ಕಮ್ಯುನಿಸ್ಟ್ ಚಳುವಳಿಯಲ್ಲಿ ತೊಡಗಿದ್ದ ವ್ಯಕ್ತಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಿವಿಧ ಜಿಲ್ಲೆಗಳ 35 ಜನರನ್ನು ಅಧ್ಯಯನದ ಸಲುವಾಗಿ ಸಂದರ್ಶನ ನಡೆಸಿ, ಕಮ್ಯುನಿಸ್ಟ್ ಪಕ್ಷಗಳು ವಿವಿಧ ಜಿಲ್ಲೆಗಳಲ್ಲಿ ಮತ್ತು ರಾಜ್ಯದಲ್ಲಿ ನಡೆಸಿದ ಹೋರಾಟಗಳು ಮತ್ತು ಚಟುವಟಿಕೆಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇವರು ಸಂದರ್ಶನಗಳಲ್ಲಿ ನೀಡಿರುವ ಮಾಹಿತಿ ಮತ್ತು ಅಧಿಕೃತ ದಾಖಲೆಗಳ ಮಾಹಿತಿ ನಡುವಿನ ಹೊಂದಿಕೆ ವಿಚಾರವನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪುಸ್ತಕಗಳು ಮತ್ತು ಪ್ರಬಂಧಗಳು ಪ್ರಸಕ್ತ ಸಂಶೋಧನೆಯ ಪ್ರಮುಖವಾದ ಸೆಕೆಂಡರಿ ಆಕರಗಳಾಗಿವೆ. ಇಂಗ್ಲಿಷ್ ುತ್ತು ಕನ್ನಡದಲ್ಲಿ ಪ್ರಕಟವಾಗಿರುವ ಹಲವಾರು ಪುಸ್ತಕಗಳು, ಲೇಖನಗಳು, ಪ್ರಬಂಧಗಳನ್ನು ಪರಿಶೀಲಿಸಲಾಗಿದೆ. ಿದಲ್ಲದೆ, ಸ್ಮರಣ ಸಂಚಿಕೆಗಳು, ವಿಶೇಷ ಸಂಚಿಕೆಗಳು, ಜೀವನ ಚರಿತ್ರೆಗಳು ಮತ್ತು ಆತ್ಮಕಥೆಗಳು, ಅಪ್ರಕಟಿತ ುರಹಗಳನ್ನು ಅಧ್ಯಯನದ ಸಲುವಾಗಿ ಬಳಸಲಾಗಿದೆ. ಇದರ ಭಾಗವಾಗಿ ಅಂತರ್ಜಾಲದ ಬಳಕೆಯನ್ನು ಮಾಡಲಾಗಿದ್ದು, ಅದರಲ್ಲಿ ಪ್ರಕಟವಾದ ಹಲವು ಲೇಖನಗಳನ್ನು ಬಳಸಲಾಗಿದೆ.

❖ ❖ ❖

ಟಿಪ್ಪಣಿಗಳು

1. ಕಮ್ಯುನಿಸಂ ಎಂಬುದು ಲ್ಯಾಟಿನ್ ಭಾಷೆಯ ಕಮ್ಯೂನಿಸ್ ಎಂಬ ಶಬ್ದದಿಂದ ಬಂದಿದೆ. ಕಮ್ಯೂನಿಸ್ ಎಂದರೆ ಎಲ್ಲರಿಗೂ ಒಂದೇ ಆಗಿರುವ, ಸಾಮಾನ್ಯ, ಸರ್ವಸಾಮಾನ್ಯ, ಸಾರ್ವಜನಿಕ ಎಂಬ ಅರ್ಥ. ಮಾರ್ಕ್ಸ್ ಮತ್ತು ಏಂಗೆಲ್ಸ್‌ರವರು, ಸಮಾಜವಾದಿ ವ್ಯವಸ್ಥೆ ಸ್ಥಾಪನೆಯಾಗಿ, ಮೊದಲು ರೂಪುಗೊಳ್ಳುವ ವ್ಯವಸ್ಥೆಯನ್ನು 'ಸಮಾಜವಾದಿ ಸಮಾಜ'ವೆಂದೂ, ನಂತರ ರೂಪುಗೊಳ್ಳುವ ವ್ಯವಸ್ಥೆಯನ್ನು 'ಸಮತಾವಾದಿ ಸಮಾಜ'ವೆಂದೂ ವಿಶ್ಲೇಷಿಸಿದ್ದಾರೆ. ಪ್ರಯೋಗದಲ್ಲಿ ಈ ತತ್ವವನ್ನು ಆಯಾ ಸಮಾಜದ ಪರಿಸ್ಥಿತಿಗೆ ಅನ್ವಯಿಸುವ ಕಾರ್ಮಿಕ ವರ್ಗದ ಚಳುವಳಿಯನ್ನು ಮತ್ತು ಅದನ್ನು ಅನುಷ್ಠಾನಕ್ಕೆ ತರಲು ರಚನೆಯಾದ ಕಾರ್ಮಿಕ ವರ್ಗದ ರಾಜಕೀಯ ಪಕ್ಷಗಳನ್ನು ಕಮ್ಯುನಿಸ್ಟ್ ಎಂದು ಕರೆಯುವುದು ವಾಡಿಕೆಗೆ ಬಂದಿದೆ (ಶ್ರೀಕಂಠಯ್ಯ 1957: 29).

2. ಜಗತ್ತಿನ ವಿವಿಧ ದೇಶಗಳ ಕಾರ್ಮಿಕ ವರ್ಗದ ಚಳುವಳಿಗಳು ಮತ್ತು ಕಮ್ಯುನಿಸ್ಟ್ ಪಕ್ಷಗಳ ನಡುವೆ ಸಮನ್ವಯ ಸಾಧಿಸುವ ದೃಷ್ಟಿಯಿಂದ ಆರಂಭಿಸಲಾದ ಅಂತರರಾಷ್ಟ್ರೀಯ ಸಂಘಟನೆ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್. ಇದನ್ನು ಕಮಿನ್‌ಟರ್ನ್ ಎಂದೂ ಕರೆಯಲಾಗುತ್ತದೆ. ಮಾರ್ಕ್ಸ್ ಮುಖಂಡತ್ವದಲ್ಲಿ 1864 ರಲ್ಲಿ ಪ್ರಾರಂಭವಾಗಿ 1876 ರವರೆಗೆ 'ಮೊದಲ ಅಂತರರಾಷ್ಟ್ರೀಯ' (First International) ಅಸ್ತಿತ್ವದಲ್ಲಿತ್ತು. 1883 ರಲ್ಲಿ ಮಾರ್ಕ್ಸ್‌ನ ಮರಣಾನಂತರ ಏಂಗೆಲ್ಸ್ ಪ್ರಮುಖ ಪಾತ್ರ ವಹಿಸಿದ 'ಎರಡನೇ ಅಂತರರಾಷ್ಟ್ರೀಯ' (Second International) 1889 ರಲ್ಲಿ ಆರಂಭವಾಗಿ 1916 ರವರೆಗೆ ಅಸ್ತಿತ್ವದಲ್ಲಿತ್ತು. ಮೊದಲನೇ ಪ್ರಪಂಚ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ಕಮ್ಯುನಿಸ್ಟ್ ಪಕ್ಷಗಳ ತೆಗೆದುಕೊಂಡ ವಿಭಿನ್ನ ನಿಲುವುಗಳಿಂದಾಗಿ ಇದು ನಿಂತುಹೋಯಿತು. ವಿ.ಐ.ಲೆನಿನ್ ನಾಯಕತ್ವದಲ್ಲಿ 'ಮೂರನೇ ಅಂತರರಾಷ್ಟ್ರೀಯ' (Third International) 1919 ರಲ್ಲಿ ಪ್ರಾರಂಭವಾಗಿ, ಅವರ ಸಾವಿನ ನಂತರ ಜೋಸೆಫ್ ಸ್ಟಾಲಿನ್ ನಾಯಕತ್ವದಲ್ಲಿ 1943 ರವರೆಗೆ ಜಾರಿಯಲ್ಲಿತ್ತು.

3. ಇದರ ಅಧ್ಯಕ್ಷರಾಗಿ ಬಾಬಾ ಸೋಹನ್ ಸಿಂಗ್ ಬಾಕ್ನಾ ಮತ್ತು ಕಾರ್ಯದರ್ಶಿಯಾಗಿ ಲಾಲಾ ಹರ್‌ದಯಾಳ್ ಇದ್ದರು.

4. ವಿವರಗಳಿಗಾಗಿ ನೋಡಿ, ಸೋಹನ್ ಸಿಂಗ್ ಜೋಷ್, ಹಿಂದೂಸ್ತಾನ್ ಗದರ್ ಪಾರ್ಟಿ: ಎ ಶಾರ್ಟ್ ಹಿಸ್ಟರಿ, 1978, ಸಂಪುಟ 2, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.

5. ನೋಡಿ, ರವೀಂದರ್ ಕುಮಾರ್, 'ದಿ ಬಾಂಬೆ ಟೆಕ್ಸ್‌ಟೈಲ್ ಸ್ಟ್ರೈಕ್, 1919', ಮಾರ್ಚ್ 1971, ಇಂಡಿಯನ್ ಎಕನಾಮಿಕ್ ಅಂಡ್ ಸೋಷಿಯಲ್ ಹಿಸ್ಟರಿ ರಿವ್ಯೂ, ಮತ್ತು ಆರ್.ಪಿ.ದತ್, ಇಂಡಿಯಾ ಟುಡೇ, ಪು. 332–340.

6. ಅಬನಿನಾಥ್ ಮುಖರ್ಜಿ ಭಾರತೀಯ ಕ್ರಾಂತಿಕಾರಿ ಮತ್ತು 1920 ರಲ್ಲಿ ತಾಷ್ಕೆಂಟ್‌ನಲ್ಲಿ ಆರಂಭವಾದ ಸಿಪಿಐನ ಸಹ–ಸ್ಥಾಪಕರು. ಮೂಲತಃ ನೇಕಾರ ಕಾರ್ಮಿಕರಾಗಿದ್ದ ಇವರು ರಾಶ್‌ಬೆಹಾರಿ ಬೋಸ್ ಅವರ ಸಂಪರ್ಕಕ್ಕೆ ಬಂದು ಕ್ರಾಂತಿಕಾರಿಯಾಗುತ್ತಾರೆ. ಕ್ರಾಂತಿಕಾರಿಗಳಿಗೆ ಶಸ್ತ್ರಾಸ್ತ್ರಗಳನ್ನು ತರಲು ಜಪಾನ್‌ಗೆ

ಹೋಗಿ ಬರುವಾಗ ಸಿಂಗಪುರದಲ್ಲಿ ಬಂಧಿಸಲ್ಪಡುತ್ತಾರೆ. ಜೈಲಿನಿಂದ ತಪ್ಪಿಸಿಕೊಂಡು ಇಂಡೋನೇಷಿಯಾ ಕ್ರಾಂತಿಕಾರಿಗಳ ಸಂಪರ್ಕಕ್ಕೆ ಬಂದು ಕಮ್ಯುನಿಸ್ಟ್ ಆಗುತ್ತಾರೆ. ನಂತರ ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಎರಡನೇ ಅಧಿವೇಶನಕ್ಕೆ ಪ್ರತಿನಿಧಿಯಾಗಿ 1920 ರಲ್ಲಿ ರಷ್ಯಾಕ್ಕೆ ಪ್ರಯಾಣಿಸುತ್ತಾರೆ. ಅಲ್ಲಿ ಎಂ.ಎನ್.ರಾಯ್ ಅವರ ಸಂಪರ್ಕಕ್ಕೆ ಬರುತ್ತಾರೆ. ರಾಯ್ ಮತ್ತು ಅವರ ಪತ್ನಿ ಎವೆಲಿನ್ ಜೊತೆ ಸೇರಿ ದಿ ಇಂಡಿಯನ್ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ರಚಿಸುತ್ತಾರೆ. 1922 ರಲ್ಲಿ ಗುಪ್ತವಾಗಿ ಭಾರತಕ್ಕೆ ಬಂದು ಎಸ್.ಎ.ಡಾಂಗೆ, ಸಿಂಗಾರವೇಲು ಚೆಟ್ಟಿಯಾರ್ ಮತ್ತು ಬಂಗಾಳದ ಕಮ್ಯುನಿಸ್ಟ್ ಗುಂಪುಗಳನ್ನು ಭೇಟಿ ಮಾಡಿ ನಂತರ ಮಾಸ್ಕೋಗೆ ಹಿಂದಿರುಗುತ್ತಾರೆ. ಲೆನಿನ್‌ರವರ ಖಾಸಗಿ ಕಾರ್ಯದರ್ಶಿಯೊಬ್ಬರ ಸಹಾಯಕಿಯಾಗಿದ್ದ ರೋಸಾ ಫಿಟಿಂಗೊವ್ ಅವರನ್ನು 1920 ರಲ್ಲಿ ಮದುವೆಯಾಗುತ್ತಾರೆ. ರೋಸಾ ಸಹ ಸಿಪಿಐನ ಪ್ರಾರಂಭದ ಸದಸ್ಯರಾಗುತ್ತಾರೆ.


7. ಬಿಪನ್ ಚಂದ್ರ ಅವರ ವಿದ್ಯಾರ್ಥಿಯಾಗಿದ್ದ ಮತ್ತು ದೆಹಲಿಯ ಅಂಬೇಡ್ಕರ್ ಯೂನಿವರ್ಸಿಟಿಯ ಪ್ರಾಧ್ಯಾಪಕರಾದ ಸಲೀಲ್ ಮಿಶ್ರ ಅವರು ಬಿಪನ್ ಚಂದ್ರ ಸಾವಿನ ನಂತರ 8–9–2014 ರ 'ವಿಕಲ್ಪ್' ನಿಯತಕಾಲಿಕೆಯಲ್ಲಿ 'ಬಿಪನ್ ಚಂದ್ರ ಅಂಡ್ ಹಿಸ್ ಟೈಮ್ಸ್' ಎನ್ನುವ ಶ್ರದ್ಧಾಂಜಲಿ ಲೇಖನದಲ್ಲಿನ ಟಿಪ್ಪಣಿಯಲ್ಲಿ ಈ ಅಭಿಪ್ರಾಯವನ್ನು ಮಂಡಿಸಿದ್ದಾರೆ.

❖ ❖ ❖

ಅಧ್ಯಾಯ 2

ಕಮ್ಯುನಿಸ್ಟ್ ಚಳುವಳಿಯ ಚಾರಿತ್ರಿಕ ಹಿನ್ನೆಲೆ – 1947 ರವರೆಗೆ

ಸ್ವಾತಂತ್ರ್ಯ ಹೋರಾಟವೆಂಬುದು ಹಲವು ಚಲನಶೀಲ ಹೋರಾಟದ ತೊರೆಗಳ ಸಂಗಮ. ಬ್ರಿಟಿಷ್ ವಿರೋಧಿ ಹೋರಾಟದ ನೆಲೆಯನ್ನು ಕ್ರಾಂತಿಕಾರಿಯಾಗಿಸುವಲ್ಲಿ ಮತ್ತು ಅದಕ್ಕೆ ಭಿನ್ನವಾದ ಸೈದ್ಧಾಂತಿಕ ಆಯಾಮವನ್ನು ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವ ಭಾರತ ಕಮ್ಯುನಿಸ್ಟ್ ಪಕ್ಷದ ಕುರಿತು ಚರಿತ್ರೆ ಬರವಣಿಗೆಯಲ್ಲಿ ಹೆಚ್ಚು ಚರ್ಚಿತವಾಗಿಲ್ಲ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ–ಪೂರ್ವ ಕಮ್ಯುನಿಸ್ಟರ ಪಾತ್ರ, ಧೋರಣೆ, ಬೆಳವಣಿಗೆಯ ಸಮಸ್ಯೆಗಳು, ಕಮ್ಯುನಿಸ್ಟರ ಕುರಿತು ಬ್ರಿಟಿಷರ ಧೋರಣೆಗಳು, ಮುಂತಾದ ಅಂಶಗಳನ್ನು ಅಭ್ಯಸಿಸಲು ಈ ಅಧ್ಯಾಯವು ಪ್ರಯತ್ನಿಸಿದೆ. ಭಾರತ ಕಮ್ಯುನಿಸ್ಟ್ ಪಕ್ಷ ಆರಂಭವಾಗುವುದಕ್ಕೆ ಮುಂಚಿತವಾಗಿ, ದೇಶದ ಒಳಗೆ ಮತ್ತು ಹೊರಗೆ ಬಿಡಿಬಿಡಿಯಾಗಿ ಕೆಲಸ ಮಾಡುತ್ತಿದ್ದ ಕಮ್ಯುನಿಸ್ಟರು ಮತ್ತು ಕ್ರಾಂತಿಕಾರಿಗಳ ಗುಂಪುಗಳಿಗೆ ಒಂದು ಸ್ಪಷ್ಟ ಸಂಘಟನಾ ರೂಪವನ್ನು ನೀಡುವ ಪ್ರಯತ್ನಗಳು ನಡೆದವು. ಈ ನಿಟ್ಟಿನಲ್ಲಿ 1920 ರಲ್ಲಿ ಎಂ.ಎನ್. ರಾಯ್[1] ಮುಂತಾದ ಅನಿವಾಸಿ ಭಾರತೀಯರು ಸೇರಿ ರಷ್ಯಾ ದೇಶದ ತಾಷ್ಕೆಂಟ್ ನಗರದಲ್ಲಿ ಸಿಪಿಐಯನ್ನು ಆರಂಭಿಸಿದರಾದರೂ, 1925 ರಲ್ಲಿ ಭಾರತದ ಕಾನ್ಪುರದಲ್ಲಿ ಸಿಪಿಐ ಆರಂಭವಾಯಿತು.


ಎಂ.ಎನ್.ರಾಯ್

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಐಎನ್‌ಸಿ) 1885 ರಲ್ಲೇ ಆರಂಭವಾದರೂ 'ಸಂಪೂರ್ಣ ಸ್ವಾತಂತ್ರ್ಯ'ದ ಬೇಡಿಕೆಯನ್ನು ತೀರ್ಮಾನಿಸಲು ನಾಲ್ಕೂವರೆ ದಶಕಗಳನ್ನು ತೆಗೆದುಕೊಂಡಿತ್ತು. ಆದರೆ 1920 ರಲ್ಲಿ ಆರಂಭವಾದ ಸಿಪಿಐ 1921 ರಲ್ಲೇ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಮಂಡಿಸಿತು. ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಲೈನಿನ ಆಧಾರದಲ್ಲಿ ವಸಾಹತು ವಿರೋಧಿ ರಾಷ್ಟ್ರೀಯ ಚಳುವಳಿಯ ಜೊತೆ ಸೇರಿ ಕೆಲಸ ಮಾಡುವ ನಿಟ್ಟಿನಲ್ಲಿ ಸಿಪಿಐ, ಅಸಹಕಾರ ಚಳುವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ ಮುಂತಾದವುಗಳಲ್ಲಿ ಸಕ್ರಿಯವಾದ ಪಾತ್ರ ವಹಿಸಿದ್ದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಕ್ವಿಟ್ ಇಂಡಿಯಾ ಚಳುವಳಿ ಕುರಿತು ಸಿಪಿಐ ತೆಗೆದುಕೊಂಡ ನಿಲುವು, ಜನರಿಂದ ಅದು ಬೇರ್ಪಡುವಂತೆ ಮಾಡಿತಾದರೂ, ವಾಸ್ತವದಲ್ಲಿ ಸಿಪಿಐ ಕೆಳಹಂತದಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿರುವುದನ್ನು ವಿಮರ್ಶಿಸಲಾಗಿದೆ. ಸಿಪಿಐ ಆರಂಭವಾದಾಗಿನಿಂದಲೂ ಕಮ್ಯುನಿಸ್ಟರ ಕುರಿತು ಬ್ರಿಟಿಷರು ತೀವ್ರವಾದ ದ್ವೇಷದಿಂದ ಹಲವಾರು ಪಿತೂರಿ ಮೊಕದ್ದಮೆಗಳನ್ನು – ಪೇಶಾವರ್, ಕಾನ್ಪುರ್ ಮತ್ತು ಪಿತೂರಿ ಮೊಕದ್ದಮೆಗಳನ್ನು – ಹೂಡಿದ್ದನ್ನು ಮತ್ತು ಇವುಗಳ ಮೂಲಕ ಕಮ್ಯುನಿಸ್ಟರನ್ನು ಸದೆ ಬಡಿಯಲು ಮಾಡಿದ ಪ್ರಯತ್ನಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರತೆಯನ್ನು ನೀಡಲು

920 ರಲ್ಲಿ ಅರಂಭವಾದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) 1936 ರಲ್ಲಿ ಆರಂಭವಾದ ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್), ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ (ಎಐಎಸ್ಎಫ್), ಆಲ್ ಇಂಡಿಯಾ ಪ್ರೋಗ್ರೆಸ್ಸಿವ್ ರೈಟರ್ಸ್ ಅಸೋಸಿಯೇಷನ್ (ಎಐಪಿಡಬ್ಲ್ಯುಎ) ಮತ್ತು ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ (ಇಪ್ಟಾ) ಸಂಘಟನೆಗಳನ್ನು ಸ್ಥಾಪಿಸುವುದರಲ್ಲಿ ಕಮ್ಯುನಿಸ್ಟರು ಮುಂಚೂಣಿ ಪಾತ್ರ ವಹಿಸಿದರು ಮತ್ತು ಅವುಗಳ ಮೂಲಕ ಚಳುವಳಿಗಳನ್ನು ವಿಸ್ತರಣೆ ಮಾಡಿದರು. ಇವುಗಳ ಪರಿಣಾಮವಾಗಿ ತೆಲಂಗಾಣ ರೈತ ಬಂಡಾಯ, ಕಯ್ಯೂರು ರೈತ ಬಂಡಾಯ, ತೇಭಾಗ ಹೋರಾಟ, ವಾರ್ಲಿ ಆದಿವಾಸಿಗಳ ಹೋರಾಟ, ರಾಯಲ್ ಇಂಡಿಯನ್ ನೇವಿ ನಾವಿಕರ ಬಂಡಾಯ ಮುಂತಾದ ಹೋರಾಟಗಳ ಮೂಲಕ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಬೇಕಾದ ಒತ್ತಡವನ್ನು ನಿರ್ಮಾಣ ಮಾಡಿದರು. ಕಮ್ಯುನಿಸ್ಟ್ ಚಳುವಳಿಯು ವಿಶಾಲವಾಗಿ ಬೆಳವಣಿಗೆಯಾಗುವ ಅವಕಾಶಗಳು ನಿರ್ಮಾಣವಾದವು. ಒಟ್ಟಾರೆ ಪರಿಸ್ಥಿತಿಯಿಂದಾಗಿ ಬ್ರಿಟಿಷರು 1947 ರಲ್ಲಿ ಭಾರತವನ್ನು ಬಿಟ್ಟು ಹೋಗಬೇಕಾಯಿತು. ಆದರೆ ಬ್ರಿಟಿಷರಿಂದ ಗಳಿಸಿದ ಸ್ವಾತಂತ್ರ್ಯದ ಸ್ವರೂಪವನ್ನು ವಿಶ್ಲೇಷಣೆ ಮಾಡಿದ ಸಿಪಿಐ ಅದು ನಿಜವಾದ ಸ್ವಾತಂತ್ರ್ಯವಲ್ಲ ಎಂದು ಪ್ರತಿಪಾದಿಸಿತು. ಈ ಎಲ್ಲಾ ಘಟನೆಗಳು ಮತ್ತು ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಮತ್ತು ಅದರ ವಿವರಗಳನ್ನು ಮಹಾ ಪ್ರಬಂಧದ ಈ ಅಧ್ಯಾಯವು ವಿಶ್ಲೇಷಿಸಲು ಮತ್ತು ಅಭ್ಯಸಿಸಲು ಯತ್ನಿಸಿದೆ.

❖ ❖ ❖

ಬ್ರಿಟಿಷ್ ಬಂಡವಾಳದ ಆಗಮನದ ನಂತರ ಭಾರತದಲ್ಲಿ ಆಧುನಿಕ ಕಾರ್ಮಿಕ ವರ್ಗದ ಬೆಳವಣಿಗೆಯಾಗಿದೆ. ಬ್ರಿಟಿಷ್ ಬಂಡವಾಳವು ಸೀಮಿತ ಸ್ವರೂಪದಲ್ಲಷ್ಟೇ ಭಾರತದಲ್ಲಿ ಕೈಗಾರಿಕಾ ಬೆಳವಣಿಗೆಗೆ ಮುಂದಾಯಿತು. ಆಮದು ಆಧಾರಿತ ಆರ್ಥಿಕತೆಯನ್ನು ಬೆಳೆಸಿದ್ದರ ಪರಿಣಾಮವಾಗಿ, ದಿವಾಳಿಯಾದ ಒಂದು ವಿಭಾಗದ ರೈತರು ಮತ್ತು ಕರಕುಶಲಿಗಳು ಕಾರ್ಮಿಕ ವರ್ಗವಾದರು. ಬ್ರಿಟಿಷರು ತಮ್ಮ ಅನುಕೂಲಕ್ಕಾಗಿ ಜಾರಿ ಮಾಡಿದ ಇಂಗ್ಲಿಷ್ ಶಿಕ್ಷಣವು ಭಾರತದೊಳಗೆ ಆಧುನಿಕ ಬುದ್ಧಿಜೀವಿ ವರ್ಗ, ಮಧ್ಯಮ ವರ್ಗ ಮತ್ತು ಶಿಕ್ಷಿತ ಸಮುದಾಯಗಳನ್ನು ಸೀಮಿತವಾಗಿಯಾದರೂ ಬೆಳೆಸಿತು. ಇದರೊಳಗಿಂದ ಸಾಮಾಜಿಕ ಸುಧಾರಕರು ಮತ್ತು ಸುಧಾರಣಾ ಚಳುವಳಿಗಳೂ ಬೆಳೆದವು. ಸಾಮ್ರಾಜ್ಯಶಾಹಿ–ವಿರೋಧಿ ನೆಲೆಯಿಂದ ಭಾರತ ರಾಷ್ಟ್ರೀಯತೆಯ ಕಲ್ಪನೆಗಳು ಬೆಳೆದವು. ಇದರ ಭಾಗವಾಗಿ ಕ್ರಾಂತಿಕಾರಿ ಪ್ರವೃತ್ತಿಗಳು ಬೆಳೆದು ಕೈಗಾರಿಕಾ ಕಾರ್ಮಿಕರು ಸಂಘಟಿತರಾಗತೊಡಗಿದರು. ಮುಂಬೈ, ಕಲ್ಕತ್ತಾ, ಲಾಹೋರ್, ಮದ್ರಾಸ್ ಮುಂತಾದ ನಗರಗಳು ಕೈಗಾರಿಕಾ ಕೇಂದ್ರಗಳಾಗುವುದರ ಜೊತೆಯಲ್ಲೇ ಕಾರ್ಮಿಕ ಹೋರಾಟಗಳ ಪ್ರಮುಖ ಕೇಂದ್ರಗಳಾದವು. ಹೋರಾಟಗಳು ಕೇವಲ ಆರ್ಥಿಕ ಸ್ವರೂಪದ್ದಾಗಿರದೇ, ಸ್ವಾತಂತ್ರ್ಯ ಹೋರಾಟದ ರಾಜಕೀಯ ಸ್ವರೂಪವನ್ನೂ ಪಡೆದಿದ್ದವು. ಕಾರ್ಮಿಕರು ಮತ್ತು ರೈತರು ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚೆಚ್ಚು ಭಾಗವಹಿಸತೊಡಗಿದರು.

1857ರ ದಂಗೆಯಿಂದ ಪಾಠ ಕಲಿತಿದ್ದ ಬ್ರಿಟಿಷರು ವ್ಯವಸ್ಥಿತವಾಗಿ ಭಾರತದೊಳಗೆ ಹಿಂದು–ಮುಸ್ಲಿಂ ಕೋಮು ವಿಭಜನೆಯನ್ನು ತರಲು ಆರಂಭಿಸಿದ್ದರು. ಇದರ ಪರಿಣಾಮಗಳು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್(ಐಎನ್‌ಸಿ)[2]ನಲ್ಲಿ ನಿಚ್ಚಳವಾಗಿ ಕಾಣುತ್ತಿದ್ದವು. ಇಂತಹ ವಿಭಜನೆಗಳನ್ನು ಮಾಡುತ್ತಲೇ, ರಾಷ್ಟ್ರೀಯ ಹೋರಾಟಗಳನ್ನು ಹತ್ತಿಕ್ಕಲು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಲೇ, ಬ್ರಿಟಿಷರು ಭಾರತದ ಜನರ ದುಡಿಮೆಯನ್ನು ಅವ್ಯಾಹತವಾಗಿ ಲೂಟಿ ಮಾಡುತ್ತಿದ್ದರು. ಇದರ ಭಾಗವಾಗಿ 1905 ರಲ್ಲಿ ಬಂಗಾಳ ವಿಭಜನೆಯನ್ನು ಮಾಡಿದ್ದರಿಂದ ಜನರಲ್ಲಿ ತೀವ್ರ ಆಕ್ರೋಶವನ್ನು ಉಂಟು ಮಾಡಿತು. ಇವೆಲ್ಲವುಗಳ ಪರಿಣಾಮವಾಗಿ ರಾಷ್ಟ್ರೀಯ ಕಾಂಗ್ರೆಸ್‌ನೊಳಗೆ 'ತೀವ್ರಗಾಮಿ' ಬಣ ನಿರ್ಮಾಣವಾಯಿತು. ಲಾಲ ಲಜಪತ್ ರಾಯ್, ಬಾಲ ಗಂಗಾಧರ್ ತಿಲಕ್ ಮತ್ತು ಬಿಪನ್ ಚಂದ್ರ ಪಾಲ್ ಇವರುಗಳು ರಾಷ್ಟ್ರೀಯ ಉತ್ಸಾಹದ ಸಂಕೇತಗಳಾದರು. ತಿಲಕರನ್ನು ಬ್ರಿಟಿಷರು ಜೈಲಿಗೆ ಹಾಕಿದ್ದರ ವಿರುದ್ಧ ಬಾಂಬೆಯ ಜವಳಿ ಕಾರ್ಮಿಕರು ಆರು ದಿನಗಳ ಮುಷ್ಕರ ಮಾಡಿದ್ದರ ಬಗ್ಗೆ ಸ್ವತಃ ಲೆನಿನ್, ಭಾರತದ ಕಾರ್ಮಿಕ ವರ್ಗದಲ್ಲಿ ಹೆಚ್ಚುತ್ತಿರುವ ರಾಜಕೀಯ ಪ್ರಜ್ಞೆಯೆಂದು ಅದನ್ನು ಗುರುತಿಸಿದರು (ಸಿನ್ಹಾ 1965: 15).

1917 ರ ರಷ್ಯನ್ ಕ್ರಾಂತಿ ಜಾಗತಿಕ ಪರಿಣಾಮವನ್ನು ಉಂಟು ಮಾಡಿತು. ಮಾನವ ಕುಲದ ಚರಿತ್ರೆಯಲ್ಲಿ ಮೊದಲ ಬಾರಿಗೆ ಮನುಷ್ಯ ಮನುಷ್ಯರ ನಡುವಿನ ಶೋಷಣೆಯನ್ನು ಕೊನೆಗಾಣಿಸುವ ಉದ್ದೇಶವನ್ನು ಹೊತ್ತು ಸಂಭವಿಸಿದ ಈ ಕ್ರಾಂತಿಯು, ಜಗತ್ತಿನಾದ್ಯಂತ ವಿವಿಧ ದೇಶಗಳ ಜನತೆ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿದ್ದ ಹೋರಾಟಗಳಿಗೆ ಒಂದು ಹೊಸ ಆಶಯವನ್ನು ಸೃಷ್ಟಿಸಿತು. ಸಾಮ್ರಾಜ್ಯವಾದದ ನೊಗವನ್ನು ಕಿತ್ತು ಹಾಕಲು ಜಗತ್ತಿನ ಜನತೆಯನ್ನು ಪ್ರೇರೇಪಿಸಿತು. ಭಾರತದಲ್ಲಿ ಹಲವಾರು ಕ್ರಾಂತಿಕಾರಿಗಳು, ಕ್ರಾಂತಿಕಾರಿ ಗುಂಪುಗಳು ಮತ್ತು ಸಂಘಟನೆಗಳು ಒಳಗೊಂಡು ಕಮ್ಯುನಿಸ್ಟ್ ಪಕ್ಷ ಆರಂಭವಾಯಿತು. ಕಮ್ಯುನಿಸಂನ ವಿಮೋಚನಾಕಾರಿ ಗುಣದ ಕಾರಣಕ್ಕಾಗಿ ಅತ್ಯಂತ ಶ್ರೇಷ್ಠ ವ್ಯಕ್ತಿಗಳು ಇದರ ಜೊತೆ ಗುರುತಿಸಿಕೊಂಡರು. ಕಮ್ಯುನಿಸಂ ಎಂಬುದು ಸಾಮ್ರಾಜ್ಯವಾದದ ವಿರೋಧಕ್ಕೆ ಸಂಕೇತವಾಯಿತು. ಸಂಪೂರ್ಣ ಸ್ವಾತಂತ್ರ್ಯಕ್ಕೆ ಒಂದು ಸ್ಪಷ್ಟತೆಯನ್ನು ಒದಗಿಸಿತು. ರಷ್ಯನ್ ಕ್ರಾಂತಿಯ ಪ್ರಭಾವದ ಪರಿಣಾಮವಾಗಿ ಕ್ರಾಂತಿಯ ನಾಯಕ ಲೆನಿನ್ ಜೀವನ ಚರಿತ್ರೆಯನ್ನು 1923 ರಲ್ಲಿ ಕರ್ನಾಟಕದ ಹುಬ್ಬಳ್ಳಿಯ ಗೋರಖ ಎಂಬುವರು ಪ್ರಕಟಿಸಿದರು. ಬಹುಶಃ ಇದು ಕನ್ನಡದಲ್ಲಿ ದಾಖಲಾದ ಮಾರ್ಕ್ಸ್‌ವಾದಿ ಚಿಂತನೆಯ ಪ್ರಥಮ ದಾಖಲೆಯೆಂದು ಕಾಣುತ್ತದೆ[3]. ಇದು ಬೀರಿದ ಪರಿಣಾಮಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಆದರೆ ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳು 1930 ರ ನಂತರ ವಿಭಿನ್ನ ಸ್ತರಗಳಲಿ ಹರಡಲು ಆರಂಭಿಸಿದ್ದನ್ನು ಕಾಣಬಹುದು. ಕುವೆಂಪುರವರು 'ಲೆನಿನ್' ಕುರಿತು ಕವಿತೆಯನ್ನು ರಚಿಸಿದರು. ಕುವೆಂಪು, ಬೇಂದ್ರೆ, ಕಾರಂತರು ತಮ್ಮ ಬರಹಗಳಲ್ಲಿ, ಕವಿತೆಗಳಲ್ಲಿ ಸಮಾಜವಾದಿ ಆಶಯಗಳಿಂದ ಪ್ರಭಾವಿತರಾಗಿ ಬರೆದರು.

ರೌಲತ್ ಕಾಯ್ದೆಯ ವಿರುದ್ಧ ಏಪ್ರಿಲ್ 13 ರಂದು ಜಲಿಯನ್‌ವಾಲಾ ಬಾಗ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ನಿರಾಯುಧ ಜನರ ಮೇಲೆ ಬ್ರಿಟಿಷ್ ಅಧಿಕಾರಿ ಜನರಲ್ ಡಯರ್ ನಡೆಸಿದ ನರಮೇಧ ರಾಷ್ಟ್ರೀಯ ಚಳುವಳಿಯ ದಿಕ್ಕನ್ನೇ ಬದಲಾಯಿಸಿತು. ಇದರ ವಿರುದ್ಧ ಕಾರ್ಮಿಕರ ಅಸಂಖ್ಯಾತ ಹೋರಾಟಗಳು ನಡೆದು

ಕಾರ್ಮಿಕ ಸಂಘಟನೆಗಳು ಬೆಳೆಯಲು ಪ್ರಾರಂಭವಾದವು. ಮೊದ ಮೊದಲಿಗೆ ಬುರ್ಜ್ವಾ ರಾಷ್ಟ್ರೀಯವಾದಿಗಳು ಮತ್ತು ಉದಾರವಾದಿಗಳು ಕಾರ್ಮಿಕರನ್ನು ಸಂಘಟಿಸಲು ತೊಡಗಿಸಿಕೊಂಡರು. 1918 ರ ಏಪ್ರಿಲ್ 17 ರಂದು ಬಿ.ಪಿ.ವಾಡಿಯಾರವರು ಮದ್ರಾಸ್ ಲೇಬರ್ ಯೂನಿಯನ್ ಪ್ರಾರಂಭಿಸಿದರು (ಗುಪ್ತ 1980: 12)[4]. ನಂತರ ಹಲವಾರು ನಗರಗಳಲ್ಲಿ ಇಂತಹ ಪ್ರಯತ್ನಗಳು ನಡೆದವು. ಪರಿಣಾಮವಾಗಿ ರಾಷ್ಟ್ರ ಮಟ್ಟದ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸುವ ಅಗತ್ಯವನ್ನು ಇವು ಸೃಷ್ಟಿಸಿದವು. ಇಂತಹ ಪ್ರಯತ್ನಗಳು ನಡೆಯುವಾಗಲೇ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲು ಅನಿವಾಸಿ ಭಾರತೀಯ ಕ್ರಾಂತಿಕಾರಿಗಳು ವಿದೇಶಗಳಲ್ಲಿ ಪ್ರಯತ್ನಿಸುತ್ತಿದ್ದರು.

ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ : ತಾಷ್ಕೆಂಟ್ ಮತ್ತು ಕಾನ್ಪುರ

ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದ ವರ್ಷದ ಬಗ್ಗೆ ಭಾರತದ ಕಮ್ಯುನಿಸ್ಟ್ ಗುಂಪುಗಳಲ್ಲಿ ಭಿನ್ನವಾದ ವಾದಗಳಿವೆ. ಭಾರತದ ಒಳಗೆ ಕಮ್ಯುನಿಸ್ಟ್ ಪಕ್ಷ ಪ್ರಾರಂಭವಾಗಿದ್ದು 1925 ರಲ್ಲೇ ಆದರೂ ಆರಂಭಿಕ ಅನಿವಾಸಿ ಕಮ್ಯುನಿಸ್ಟ್ ಗುಂಪುಗಳ ಕಾರ್ಯಾಚರಣೆಯ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ 1920 ರಲ್ಲೇ ಭಾರತ ಕಮ್ಯುನಿಸ್ಟ್ ಪಕ್ಷವೆಂಬುದು ಪ್ರಾರಂಭವಾಗಿದೆ. ಇದರಲ್ಲಿ ಯಾವುದು ಸರಿ ಎಂಬ ವಾದಕ್ಕೆ ಹೋಗದೆ, ಎರಡೂ ವಾದಗಳ ಹಿಂದಿನ ಚಾರಿತ್ರಿಕ ಬೆಳವಣಿಗೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅನಿವಾಸಿ ಭಾರತ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯಲ್ಲಿ ಸಾಧಾರಣವಾಗಿ ಮೂರು ರೀತಿಯ ಕ್ರಾಂತಿಕಾರಿ ಗುಂಪುಗಳನ್ನು ಗಮನಿಸಬಹುದು:

(ಅ) ದೇಶದ ಹೊರಗಿನ ಕ್ರಾಂತಿಕಾರಿ ದೇಶಪ್ರೇಮಿಗಳು. ಉದಾಹರಣೆಗೆ – ವೀರೇಂದ್ರನಾಥ ಚಟ್ಟೋಪಾಧ್ಯಾಯ ನೇತೃತ್ವದ ಬರ್ಲಿನ್ ಗುಂಪು ಮತ್ತು ಮಹೇಂದ್ರ ಪ್ರತಾಪ್ ನೇತೃತ್ವದ ಎಂ.ಬರ್ಕತುಲ್ಲಾ, ಮಹಮ್ಮದ್ ಸಾಫಿಕ್ ಮುಂತಾದವರಿದ್ದ ಸ್ವತಂತ್ರ ಭಾರತ ಪ್ರಾವಿಷನಲ್ ಸರ್ಕಾರ.

(ಆ) ಮೊದಲ ಮಹಾಯುದ್ಧದ ನಂತರ ವಿದೇಶಗಳಿಗೆ ಹೋದ ಖಿಲಾಫತ್ ಚಳುವಳಿ ಮತ್ತು ಹಿಜ್ರತ್ ಚಳುವಳಿಯ ಕ್ರಾಂತಿಕಾರಿಗಳು; ಮತ್ತು

(ಇ) ಸ್ಯಾನ್‌ಫ್ರಾನ್ಸಿಸ್ಕೋ ಕೇಸಿನಲ್ಲಿ5 ಜೈಲಿನಿಂದ ಬಿಡುಗಡೆ ಹೊಂದಿ ಹೊರ ಬಂದು 1920 ರಷ್ಟರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಗದರ್ ಪಾರ್ಟಿ ಕಾರ್ಯಕರ್ತರು (ಹಿಸ್ಟರಿ 2005: 33–34).

1914 ರಲ್ಲಿ ಬರ್ಲಿನ್ ಸಮಿತಿ[6]ಯನ್ನು ರಚಿಸಿದ್ದ ಅನಿವಾಸಿ ಭಾರತೀಯ ಕ್ರಾಂತಿಕಾರಿಗಳು ಬ್ರಿಟಿಷರ ವಿರುದ್ಧ ಹೋರಾಡಲು ಜರ್ಮನಿಯ ಸಹಾಯ ಪಡೆಯಬೇಕೆಂಬ ನಿಲುವನ್ನು ಹೊಂದಿದ್ದರು. ಭಾರತದ ಹೊರಗೆ ಕೆಲಸ ಮಾಡುತ್ತಿದ್ದ ಎಲ್ಲಾ ಭಾರತೀಯ ಕ್ರಾಂತಿಕಾರಿ ಗುಂಪುಗಳನ್ನು ಈ ಬರ್ಲಿನ್ ಸಮಿತಿಯು ಒಳಗೊಂಡಿತ್ತು. ಇದು ಡಿಸೆಂಬರ್ 1918 ರವರೆಗೂ ಅಸ್ತಿತ್ವದಲ್ಲಿತ್ತು. ಸಮಾಜವಾದಿ ಕ್ರಾಂತಿಯ ಪ್ರಾಮುಖ್ಯತೆ ಕುರಿತಾಗಿ ಸಂಪೂರ್ಣ ಮಾಹಿತಿ ಆರಂಭದಲ್ಲಿ ಅಷ್ಟಾಗಿ ಇರಲಿಲ್ಲವಾದರೂ, ಕ್ರಾಂತಿಯು ಇವರಲ್ಲಿ ಅಪಾರವಾದ ಪ್ರಭಾವ ಉಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ಬರ್ಲಿನ್ ಗುಂಪಿನ ಸದಸ್ಯರು ಲೆನಿನ್ ಅವರನ್ನು ಭೇಟಿ ಮಾಡಲು ಪ್ರಯತ್ನಿಸಿದರು.

ಬ್ರಿಟಿಷ್ ಆಳರಸರ ವಿರುದ್ಧ ಜರ್ಮನಿಯ ಜೊತೆ ಆಫ್ಘನಿಸ್ತಾನ ಸೇರಿದಂತೆ ಒಂದು ಕೂಟವನ್ನು ರಚಿಸಬೇಕೆಂದು ತೀರ್ಮಾನಿಸಿದ ಬರ್ಲಿನ್ ಗುಂಪು ಆಫ್ಘನಿಸ್ತಾನದ ಅಮೀರರನ್ನು ಮನವೊಲಿಸಲು ಮಹೇಂದ್ರ ಪ್ರತಾಪ್ ಮತ್ತು ಬರ್ಕತುಲ್ಲಾ ನೇತೃತ್ವದಲ್ಲಿ ಇಂಡೋ–ಜರ್ಮನ್ ಮಿಷನ್ ರೂಪಿಸಿದರು. ಆದರೆ ಈ ಕೆಲಸದಲ್ಲಿ ಇವರು ಯಶಸ್ವಿಯಾಗಲಿಲ್ಲ. ಜಲಿಯನ್‌ವಾಲಾ ಬಾಗ್ ಘಟನೆಯ ಮೂರು ವಾರಗಳ ನಂತರ ಬರ್ಕತುಲ್ಲಾ 1919 ರ ಮೇ 7 ರಂದು ಲೆನಿನ್‌'ರನ್ನು ಪೆಟ್ರೋಗ್ರಾಡ್‌ನಲ್ಲಿ ಭೇಟಿ ಮಾಡಿದರು. ತಾತ್ಕಾಲಿಕ ಸರ್ಕಾರದ ಪರವಾಗಿ ಮಹಮ್ಮದ್ ಅಲಿ ಮತ್ತು ಮಹಮ್ಮದ್ ಶಫಿಕ್ ಇವರು 1920 ರ ಏಪ್ರಿಲ್ 20 ರಂದು ಒಂದು ದಾಖಲೆಯನ್ನು ಬಿಡುಗಡೆ ಮಾಡಿ ಭಾರತೀಯ ವಿಭಾಗದವರು 'ಕಮ್ಯುನಿಸಂ ತತ್ವಗಳನ್ನು ಅಳವಡಿಸಿಕೊಂಡಿರುವುದಾಗಿ' ಘೋಷಿಸಿದರು. ಇವರು ತಮ್ಮ ಕ್ರಾಂತಿಯ ಮೂರು ಮುಖ್ಯ ಗುರಿಗಳನ್ನು ಕೆಳಗಿನಂತೆ ನಿರೂಪಿಸಿದರೆಂದು ರಷ್ಯಾದ ಚರಿತ್ರೆಕಾರ ಎಂ.ಎ.ಪರ್ಸಿಟ್ಸ್ ಅವರು ಹೇಳುತ್ತಾರೆ: 1). ವಿದೇಶೀ ಆಡಳಿತದ ರದ್ಧತಿ; 2). ಜನತೆಯನ್ನು ದಮನಿಸುತ್ತಿರುವ 'ನಿರ್ದಿಷ್ಟ' ಭಾರತೀಯ ನಿರಂಕುಶರನ್ನು, ದೊಡ್ಡ ಜಮೀನ್ದಾರರನ್ನು ಮತ್ತು ಕಾರ್ಖಾನೆ ಮಾಲೀಕರನ್ನು ಕಿತ್ತು ಹಾಕುವುದು; ಮತ್ತು 3). ಸೋವಿಯಟ್ ಗಣರಾಜ್ಯವನ್ನು ಸ್ಥಾಪಿಸುವುದು.

ವಿಶೇಷವೆಂದರೆ ಮಹಮ್ಮದ್ ಶಫಿಕ್ ಅವರು ಜಮೀನ್ದಾರ್ ಎಂಬ ದ್ವಿಭಾಷಾ ಪತ್ರಿಕೆಯನ್ನು ತಾಷ್ಕೆಂಟ್‌ನಿಂದ ಪ್ರಕಟಿಸಿದರು. ರಷ್ಯನ್ ಕ್ರಾಂತಿಯ ವಿಧಾನಗಳಲ್ಲಿ ಭಾರತೀಯ ಕಾರ್ಮಿಕರನ್ನು ತರಬೇತಿಗೊಳಿಸುವುದು ಇದರ ಮುಖ್ಯ ಉದ್ದೇಶವೆಂದು ಹೇಳಿದರು. ಈ ನಡುವೆ ಅಬ್ದುಲ್ ರಬ್ ಮತ್ತು ಎಂ.ಬಿ.ಪಿ.ಟಿ.ಆಚಾರ್ಯ[7] ಇವರು ಕಾಬೂಲಿನಲ್ಲಿ 1919 ರ ಡಿಸೆಂಬರ್ ವೇಳೆಗೆ ಇಂಡಿಯನ್ ರೆವಲ್ಯೂಷನರಿ ಅಸೋಸಿಯೇಷನ್ (ಐಆರ್‌ಎ) ಸ್ಥಾಪಿಸಿದರು. ಈ ಇಬ್ಬರು ಮತ್ತು ಮಹೇಂದ್ರ ಪ್ರತಾಪ್ ಸೇರಿದಂತೆ ಮೂವರು ಲೆನಿನ್‌ಗ್ರಾಡ್‌ನಲ್ಲಿ ನಡೆದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಎರಡನೆ ಅಧಿವೇಶನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದರು. ಇವರು ತಾಷ್ಕೆಂಟ್‌ನಲ್ಲಿರುವಾಗ ರಬ್ ಅವರು ಐಆರ್‌ಎಯ ರಾಜಕೀಯ ಕಾರ್ಯಕ್ರಮವನ್ನು ಪ್ರಕಟಿಸಿದರು.

ಕಮಿನ್‌ಟರ್ನ್‌ನ ಎರಡನೆ ಅಧಿವೇಶನಕ್ಕೆ ಮೊದಲು ಎಂ.ಎನ್.ರಾಯ್, ಅಬನಿ ಮುಖರ್ಜಿ, ಆಚಾರ್ಯ, ಮಹಮ್ಮದ್ ಶಫೀಕ್, ಎವ್‌ಲಿನ್ ಟ್ರೆಂಟ್–ರಾಯ್ ಭಾಗವಹಿಸಿದ್ದರು. ಅಂತಿಮವಾಗಿ ಅಂಗೀಕರಿಸಲಾದ ದಸ್ತಾವೇಜು ವಸಾಹತು ರಾಷ್ಟ್ರಗಳಲ್ಲಿ ಸಂಘಟಿತ ಕಮ್ಯುನಿಸ್ಟ್ ಚಟುವಟಿಕೆಗಳನ್ನು ನಡೆಸುವ ಕುರಿತು ಹೇಳಿತು. ಇದಕ್ಕಾಗಿ ನಿರ್ದಿಷ್ಟ ಸೂಚನೆಗಳನ್ನು ಮತ್ತು ಮಾರ್ಗದರ್ಶನಗಳನ್ನು ರೂಪಿಸಲಾಯಿತು. ಆದರೆ ಭಾರತದಲ್ಲಿ ಇದನ್ನು ಜಾರಿಗೊಳಿಸುವ ಅಂತಹ ಯಾವುದೇ ಕಮ್ಯುನಿಸ್ಟ್ ಗುಂಪಾಗಲೀ ಅಥವಾ ವ್ಯಕ್ತಿಗಳಾಗಲೀ ಇರಲಿಲ್ಲ. ಆಗ 1920 ರ ಕೊನೆಯ ಸುಮಾರಿಗೆ ಕಮಿನ್‌ಟರ್ನ್ ನಾಯಕತ್ವ ಮುತುವರ್ಜಿ ವಹಿಸಿ ಅನಿವಾಸಿ ಭಾರತೀಯ ಕ್ರಾಂತಿಕಾರಿಗಳನ್ನು ಒಟ್ಟುಗೂಡಿಸಿ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲು ಪ್ರಯತ್ನಿಸಿತು.

ಈ ಪ್ರಕಾರವಾಗಿ ಏಳು ಜನ ಸದಸ್ಯರೊಂದಿಗೆ 1920 ರ ಅಕ್ಟೋಬರ್ 7 ರಂದು ತಾಷ್ಕೆಂಟ್‌ನಲ್ಲಿ **ಭಾರತ ಕಮ್ಯುನಿಸ್ಟ್**

ಪಕ್ಷ ಸ್ಥಾಪನೆಯಾಯಿತು. ಏಳು ಸದಸ್ಯರ ಹೆಸರುಗಳು: ಎಂ.ಎನ್.ರಾಯ್, ಎವ್‌ಲಿನ್ ಟ್ರೆಂಟ್ ರಾಯ್, ಅಬನಿ ಮುಖರ್ಜಿ, ರೋಸಾ ಫಿಟಿಂಗೊವ್, ಮೊಹಮ್ಮದ್ ಅಲಿ, ಮೊಹಮ್ಮದ್ ಶಫಿಕ್ ಮತ್ತು ಎಂ.ಪಿ.ಬಿ.ಟಿ.ಆಚಾರ್ಯ. ಇದರಲ್ಲಿ ರಾಯ್ ಮತ್ತು ಎವ್‌ಲಿನ್ ಹಾಗೆಯೇ ಅಬನಿ ಮತ್ತು ಫಿಟಿಂಗೊವ್ ಇವರುಗಳು ಗಂಡ–ಹೆಂಡತಿಯರು. ಶಫಿಕ್ ಅವರನ್ನು ಪಕ್ಷದ ಕಾರ್ಯದರ್ಶಿಯನ್ನಾಗಿ ಆರಿಸಲಾಯಿತು. ಈ ಸಭೆಯಲ್ಲಿ 'ಭಾರತದ ಪರಿಸ್ಥಿತಿಗಳಿಗೆ ಸೂಕ್ತವಾದ' ಸಿಪಿಐ'ನ ಕಾರ್ಯಕ್ರಮವನ್ನು ರೂಪಿಸಲು ತೀರ್ಮಾನಿಸಿದರು.

ತಾಷ್ಕೆಂಟ್‌ನಲ್ಲಿ ಆರಂಭವಾದ ಸಿಪಿಐನ ಪರಿಣಾಮಗಳು ಭಾರತದಲ್ಲಿ ಕ್ರಮೇಣ ಕಮ್ಯುನಿಸ್ಟ್ ಗುಂಪುಗಳ ಬೆಳವಣಿಗೆಗೆ ಸಹಕಾರಿಯಾಗಿದೆ. ಮುಖ್ಯವಾಗಿ ಬಾಂಬೆ, ಕಲ್ಕತ್ತಾ, ಮದ್ರಾಸ್, ಲಾಹೋರ್ ಮತ್ತು ಕಾನ್ಪುರಗಳಲ್ಲಿ ಸಣ್ಣದಾಗಿ ಶುರುವಾಗಿ ರಾಷ್ಟ್ರೀಯ ಹೋರಾಟದ ಪರಿಧಿಯಲ್ಲಿ ಕಮ್ಯುನಿಸ್ಟ್ ವಿಚಾರಗಳು ವಿಸ್ತರಣೆಯಾಗಲು ಪ್ರಾರಂಭವಾಯಿತು. ಗಾಂಧಿಯ ಧೋರಣೆಗಳ ಬಗ್ಗೆ ಕ್ರಾಂತಿಕಾರಿಗಳಿಗೆ ಆಗಲೇ ಅತೃಪ್ತಿ ಶುರುವಾಗಿತ್ತು. ಅಸಹಕಾರ ಚಳುವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಎಸ್.ಎ.ಡಾಂಗೆಯವರು *ಗಾಂಧಿ ವರ್ಸಸ್ ಲೆನಿನ್*[8] ಎಂಬ ಕೃತಿಯನ್ನು ಹೊರತಂದರು. ಮೇ 24, 1921 ರಂದು ಮದ್ರಾಸಿನ ಹಿಂದೂ ಪತ್ರಿಕೆಯಲ್ಲಿ ಎಂ.ಸಿಂಗಾರವೇಲು ಚೆಟ್ಟಿಯಾರ್ ಅವರು ಬರೆದ 'ಎನ್ ಓಪನ್ ಲೆಟರ್ ಟು ಮಹಾತ್ಮ ಗಾಂಧಿ' ಪತ್ರದಲ್ಲಿ,

> ಪ್ರಸಕ್ತ ಸನ್ನಿವೇಶದ ಕುರಿತು ನನ್ನ ಅಭಿಪ್ರಾಯಗಳಿಂದ ನಿಮಗೆ ಹೆಚ್ಚು ತೊಂದರೆ ಕೊಡಲು ಬಯಸುವುದಿಲ್ಲ. ಸ್ವರಾಜ್'ಗಾಗಿನ ಹೋರಾಟದಲ್ಲಿ ನಾನು ನಿಮ್ಮ ವಿನಮ್ರ ಅನುಯಾಯಿ... ಪ್ರಸಕ್ತ ವಿದೇಶೀ ಅಧಿಕಾರಶಾಹಿಯ ವಿರುದ್ಧ ಮಾತ್ರವಲ್ಲ, ಭವಿಷ್ಯದ ನಮ್ಮ ಜನರದೇ ಅಧಿಕಾರಶಾಹಿಯ ವಿರುದ್ಧವೂ ಕೂಡಾ ನಾವು ಯಶಸ್ವಿಯಾಗುವವರೆಗೂ ನಮ್ಮ ನತದೃಷ್ಟ ಜನತೆ ಎಂದಿಗೂ ಸ್ವತಂತ್ರರಾಗಿರಲು ಮತ್ತು ಸಂತೋಷವಾಗಿರಲು ಸಾಧ್ಯವಿಲ್ಲವೆಂಬುದು ನನ್ನ ನಂಬಿಕೆಯಾಗಿದೆ. ಆದ್ದರಿಂದ ಕೇವಲ ಕಮ್ಯುನಿಸಂ ಮಾತ್ರ, ಅಂದರೆ, ಇಡೀ ದೇಶದ ಎಲ್ಲಾ ಕಾರ್ಮಿಕರ ಅನುಕೂಲಕ್ಕಾಗಿ ಭೂಮಿ ಮತ್ತು ಮುಖ್ಯವಾದ ಕೈಗಾರಿಕೆಗಳನ್ನು ಸಾಮಾಜಿಕ ಬಳಕೆಗೆ ತೊಡಗಿಸುವುದರಿಂದ ಮಾತ್ರ, ನಮ್ಮ ಜನತೆಗೆ ನಿಜವಾದ ಸಂತೃಪ್ತಿ ಮತ್ತು ಸ್ವಾತಂತ್ರ ಸಿಗಬಲ್ಲದು. ಭೂಮಿ ಮತ್ತು ಕೈಗಾರಿಕೆಗಳನ್ನು ಸಾಮಾಜಿಕ ಬಳಕೆಗೆ ತೊಡಗಿಸಬೇಕು[9]

ಅದಕ್ಕಾಗಿ ಕಮ್ಯುನಿಸಂನಲ್ಲಿ ತಮಗೆ ನಂಬಿಕೆಯಿದೆ ಎಂದು ಪ್ರಸ್ತಾಪಿಸಿದರು.

ಕಮಿನ್‌ಟರ್ನ್ ಮೂರನೇ ಅಧಿವೇಶನದ ನಂತರ ಎಂ.ಎನ್.ರಾಯ್ ಭಾರತದ ಕಡೆ ತಮ್ಮ ಗಮನ ಹರಿಸಿದರು[10]. 1922 ರ ಮೇ ತಿಂಗಳಲ್ಲಿ ಸಿಪಿಐನ ಮೊದಲ ಅಂಗಪತ್ರಿಕೆ ದಿ ವ್ಯಾನ್‌ಗಾರ್ಡ್ ಆಫ್ ದಿ ಇಂಡಿಯನ್ ಇಂಡಿಪೆಂಡೆನ್ಸ್ ಎಂಬ ಇಂಗ್ಲಿಷ್ ಪಾಕ್ಷಿಕವನ್ನು ಬರ್ಲಿನ್‌ನಿಂದ ರಾಯ್ ಪ್ರಾರಂಭಿಸಿದರು. ಇದು ಭಾರತದ ವಿವಿಧ ಭಾಗಗಳಲ್ಲಿ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಮ್ಯುನಿಸ್ಟ್ ಗುಂಪುಗಳನ್ನು ಹತ್ತಿರ ತರುವಲ್ಲಿ ಮತ್ತು ಕಮ್ಯುನಿಸಂ ತತ್ವವನ್ನು ಹರಡುವಲ್ಲಿ ವಿಶೇಷ ಶ್ರಮವನ್ನು ವಹಿಸಿತು. ಕಮಿನ್‌ಟರ್ನ್‌ನ ವಿಶೇಷ ಸಭೆಯಲ್ಲಿ, 'ಭಾರತ

ಮತ್ತು ಈಜಿಪ್ಟ್‌ನ ಕ್ರಾಂತಿಕಾರಿ ಚಳುವಳಿಗಳಿಗೆ ಸೂಕ್ತ ಕಾರ್ಯಾಚರಣೆಯ ಸಹಾಯವನ್ನು ಮಾಡಬೇಕು' ಎಂದು ತೀರ್ಮಾನಿಸಿ ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷಕ್ಕೆ ಮನವಿ ಮಾಡಲಾಯಿತು. ವ್ಯಾನ್‌ಗಾರ್ಡ್ ಪತ್ರಿಕೆಯ ಪ್ರಕಟಣೆಯು ಭಾರತದಲ್ಲಿ ಕಮ್ಯುನಿಸ್ಟ್ ತತ್ವ ಪ್ರಚಾರಕ್ಕೆ ದೊಡ್ಡ ಪ್ರಮಾಣದ ಇಂಬನ್ನು ನೀಡಿತು. ಬ್ರಿಟನ್ನಿನ ಇಂಟೆಲಿಜೆನ್ಸ್ ಇಲಾಖೆಯ ಮುಖ್ಯಸ್ಥರಾಗಿದ್ದ ಸೆಸಿಲ್ ಕೇಯ್‌ರವರ ಪ್ರಕಾರ, ಇದರ ಪರಿಣಾಮವಾಗಿ ಮದ್ರಾಸಿನಲ್ಲಿ ಸಿಂಗಾರವೇಲು ಚೆಟ್ಟಿಯಾರ್ ಮತ್ತು ಬಾಂಬೆಯಲ್ಲಿ ಎಸ್.ಎ.ಡಾಂಗೆ ಕಮ್ಯುನಿಸಂನಲ್ಲಿ ಆಸಕ್ತಿಯನ್ನು ಹೊಂದಿದರು, ರಾಯ್ ಜೊತೆ ಸಂಪರ್ಕಕಗಳನ್ನು ಏರ್ಪಡಿಸಿಕೊಂಡರು, ಮತ್ತು ನಂತರದಲ್ಲಿ ತಂತಮ್ಮ ನಗರಗಳಲ್ಲಿ ಕಮ್ಯುನಿಸ್ಟ್ ಗುಂಪುಗಳನ್ನು ರಚಿಸುವಲ್ಲಿ ಮುಂಚೂಣಿ ಪಾತ್ರವನ್ನು ವಹಿಸಿದರು (ಹಿಸ್ಟರಿ 2005: 61).

ಈ ಅವಧಿಯಲ್ಲಿ ಕಲ್ಕತ್ತಾದಿಂದ ಅಮೃತ್ ಬಜಾರ್ ಪತ್ರಿಕಾ, ಆತ್ಮಸಾಕ್ಷಿ ಮತ್ತು ನಜ್ರುಲ್ ಇಸ್ಲಾಂ ಅವರು ಸಂಪಾದಿಸುತ್ತಿದ್ದ ಧೂಮಕೇತು, ಅಲಹಾಬಾದಿನಿಂದ ಇಂಡಿಪೆಂಡೆಂಟ್, ಮದ್ರಾಸ್ ಸಂಸ್ಥಾನದ ಗುಂಟೂರಿನಿಂದ ಕೃಷ್ಣರಾವ್ ಸಂಪಾದಕತ್ವದಲ್ಲಿ ನವಯುಗ, ಈಗಿನ ಬಾಂಗ್ಲಾದೇಶದಲ್ಲಿರುವ ನೌಕಾಲಿಯಿಂದ ದೇಶಬನಿ, ಕಾನ್ಪುರದಿಂದ ವರ್ತಮಾನ್, ಬಾಂಬೆಯಿಂದ ಡಾಂಗೆಯವರ ಸೋಷಿಯಲಿಸ್ಟ್[11], 1922 ರ ಜುಲೈನಲ್ಲಿ ಲಾಹೋರಿನಲ್ಲಿ ಶಂಶುದ್ದೀನ್ ಹಸನ್ ಮತ್ತು ಗುಲಾಮ್ ಹುಸೇನ್ ಇಂಕಿಲಾಬ್ ಉರ್ದು ದೈನಿಕವನ್ನು ಆರಂಭಿಸಿದರು. ಇದರ ಸುತ್ತ ಕಮ್ಯುನಿಸ್ಟ್ ಗುಂಪು ರೂಪುಗೊಳ್ಳಲು ಆರಂಭವಾಯಿತು. ಪತ್ರಿಕೆಗಳು ಕಮ್ಯುನಿಸಂ ಪ್ರಸಾರದಲ್ಲಿ ಸಾಕಷ್ಟು ಕಾಣಿಕೆಯನ್ನು ನೀಡಿದವು. ಬ್ರಿಟಿಷರು ಕಮಿನ್‌ಟರ್ನ್‌ನಿಂದ ಬರುತ್ತಿದ್ದ ಜರ್ನಲ್‌ಗಳ ಮೇಲೆ ನಿಷೇಧ ಹೇರಿತ್ತು. ಒಟ್ಟಾರೆ ಪ್ರಕಟವಾದ ಒಂಭತ್ತು ವ್ಯಾನ್‌ಗಾರ್ಡ್ ಆವೃತ್ತಿಗಳಲ್ಲಿ ಏಳನ್ನು ಬ್ರಿಟಿಷರು ನಿಷೇಧಿಸಿದ್ದರು. ಮುಂದೆ 1922 ರ ಅಕ್ಟೋಬರ್ 1 ರಿಂದ ರಾಯ್ ಅವರು ಲಂಡನ್‌ನಿಂದ ಪ್ರಕಟಿಸಿದ ಅಡ್ವಾನ್ಸ್ ವ್ಯಾನ್‌ಗಾರ್ಡ್ ಎಲ್ಲಾ ಸಂಚಿಕೆಗಳನ್ನೂ ಬ್ರಿಟಿಷರು ಭಾರತದಲ್ಲಿ ನಿಷೇಧಿಸಿದರು.

ಇದೇನೇ ಆಗಿದ್ದರೂ, ಅತ್ಯಂತ ವಿಶಾಲ ಪ್ರದೇಶದಲ್ಲಿ ಚದುರಿ ಹೋಗಿದ್ದ ಭಾರತೀಯ ಕಮ್ಯುನಿಸ್ಟರನ್ನು ಒಟ್ಟಿಗೆ ಕಲೆ ಹಾಕುವುದು ರಾಯ್ ಮತ್ತು ಇತರ ಕಮ್ಯುನಿಸ್ಟರಿಗೆ ಸುಲಭದ ಕೆಲಸವಾಗಿರಲಿಲ್ಲ. ಮಾರ್ಕ್ಸ್‌ವಾದದ ಅರಿವು ಮತ್ತು ಕಮ್ಯುನಿಸ್ಟ್ ವ್ಯೂಹದ ಪರಿಕಲ್ಪನೆ ಇರುವವರನ್ನು ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಜೊತೆ ಜೋಡಿಸುವ ಕೆಲಸ ತುಂಬಾ ಕಷ್ಟದ ಕೆಲಸವಾಗಿತ್ತು. ಎಲ್ಲರ ಜೊತೆ ಸಂಪರ್ಕ ಸಾಧನಗಳನ್ನು ರೂಪಿಸುವುದು ಅಸಾಧ್ಯ ಎಂಬಂತಾಗಿತ್ತು. ಜೊತೆಗೆ ರಾಯ್ ಅವರು ಭಾರತೀಯ ಕಮ್ಯುನಿಸ್ಟರೊಂದಿಗೆ ನಡೆಸುತ್ತಿದ್ದ ಎಲ್ಲಾ ಮಾಹಿತಿಗಳನ್ನು ಬ್ರಿಟಿಷರು ಮೊದಲೇ ಪಡೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ, ಭಾರತದ ನೆಲದೊಳಗೆ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸುವ ಪ್ರಶ್ನೆ ಮುಂಚೂಣಿಗೆ ಬಂತು. ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಮಾರ್ಗದರ್ಶನದ ಪ್ರಕಾರ ಅನಿವಾಸಿ ಸಿಪಿಐ ಪಕ್ಷಕ್ಕೆ ಸಂವಿಧಾನ ಮತ್ತು ಕಾರ್ಯಕ್ರಮ ಇರಲಿಲ್ಲ. ಸರಿಯಾದ ಪಕ್ಷದ ಸಂವಿಧಾನವನ್ನು ಹೊಂದಿರುವ ಸಿಪಿಐಯನ್ನು ಸ್ಥಾಪಿಸುವ ವಿಚಾರ, ಹಾಗಾದಲ್ಲಿ ಅನಿವಾಸಿ ಸಿಪಿಐನ ಭವಿಷ್ಯದ ಪಾತ್ರ, ಸಿಪಿಐನ ಬಹಿರಂಗ ಅಥವಾ ಭೂಗತ ಕೆಲಸದ ವಿಚಾರ ಮತ್ತು ಕಮ್ಯುನಿಸ್ಟರು ಸಿಪಿಐ ಅಲ್ಲದೆ ಪ್ರತ್ಯೇಕ ಪಕ್ಷವೊಂದನ್ನು ಸ್ಥಾಪಿಸುವ ಮತ್ತು ಇಂತಹ ಹಲವು ವಿಚಾರಗಳು ಮುಂಚೂಣಿಗೆ ಬಂದವು.

ಮಾಸ್ಕೋದಲ್ಲಿ ಕಮಿನ್‌ಟರ್ನ್‌ನ ನಾಲ್ಕನೇ ಅಧಿವೇಶನ ನಡೆಯುತ್ತದೆಂದು ಘೋಷಣೆಯಾದ ನಡುವೆ, ಡಾಂಗೆಯವರು 1922 ರ ಸೆಪ್ಟೆಂಬರ್ 16 ರಂದು ಸೋಷಿಯಲಿಸ್ಟ್ ನಲ್ಲಿ 'ಇಂಡಿಯನ್ ಸೋಷಿಯಲಿಸ್ಟ್ ಲೇಬರ್ ಪಾರ್ಟಿ ಆಫ್ ದಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್' ಎಂಬುದನ್ನು ಕಾಂಗ್ರೆಸ್‌ನೊಳಗೆ ರಚಿಸುವ ತಮ್ಮ ಪ್ರಸ್ತಾವವನ್ನು ಪ್ರಕಟಿಸಿದರು (ಡಾಂಗೆ 1974: 161–66). ರಾಯ್ ಅವರು, ವರ್ಗ ಹಿತಾಸಕ್ತಿಯ ತತ್ವವನ್ನು ಆಧರಿಸಿದ ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಮುನ್ನಡೆಸಲು ಸಾಮೂಹಿಕ ಕಾರ್ಯಾಚರಣೆಯನ್ನು ಪ್ರತಿಪಾದಿಸುವ ಕಾರ್ಯಕ್ರಮವುಳ್ಳ ಒಂದು ಸಮೂಹ ರಾಜಕೀಯ ಪಕ್ಷವನ್ನು ಆರಂಭಿಸಬೇಕೆನ್ನುವ ಪ್ರಸ್ತಾಪವನ್ನು ಸಿಂಗಾರವೇಲು ಚೆಟ್ಟಿಯಾರ್ ಮತ್ತು ಡಾಂಗೆ ಅವರಲ್ಲಿ ಮಾಡಿದರು. ಇದಕ್ಕಾಗಿ ಯೂರೋಪ್‌ನಲ್ಲಿ ಒಂದು ಸಭೆ ಸೇರುವ ಕುರಿತು ಪ್ರಸ್ತಾಪಿದರು. ಇದಕ್ಕೆ ಚೆಟ್ಟಿಯಾರ್ ಅವರು ತಾವು ಯೂರೋಪಿಗೆ ಬರಲು ಆಗುವುದಿಲ್ಲವೆಂದು ಮತ್ತು 'ಕಾಂಗ್ರೆಸ್‌ನೊಳಗೆ ಒಂದು ಸಣ್ಣ ಪಕ್ಷವನ್ನು' ಸಂಘಟಿಸುವ ಯೋಜನೆಯಿರುವುದಾಗಿ ತಿಳಿಸಿದರು. ರಾಯ್ ಅವರ ಇಂತಹ ಪ್ರಯತ್ನದ ಬಗ್ಗೆ ಡಾಂಗೆಯವರು,


> ಭಾರತೀಯರು ಕಮ್ಯುನಿಸಂನ್ನು ಭೇಟಿಯಾಡಲು ಯೂರೋಪಿಯನ್ ಸಮ್ಮೇಳನಕ್ಕೆ ಹೋಗಬೇಕೆನ್ನುವುದು ಮೂರ್ಖರ ಸಾಹಸ'ವಾಗಿದೆ... ಕ್ರಾಂತಿಯ ಬಗ್ಗೆ ರಾಯ್ ಅವರು ಹೇಳುತ್ತಿರುವುದಕ್ಕಿಂತ ಕಡಿಮೆ ಮಾತಾಡುವುದು ಉತ್ತಮ, ಏಕೆಂದರೆ ಕಾರ್ಮಿಕರ ಪ್ರಾಥಮಿಕ ಹಕ್ಕುಗಳನ್ನೇ ಇನ್ನೂ ಪಡೆದುಕೊಳ್ಳಲು ಆಗದಿರುವಾಗ; ಕಾರ್ಮಿಕ ವರ್ಗದ ಕ್ರಾಂತಿಯ ಮಾತು ಕನಸೇ ಸರಿ (ರಾಯ್ 1985: 160–61)

ಎಂದು ಚೆಟ್ಟಿಯಾರ್ ಅವರಿಗೆ ಬರೆದ ಪತ್ರದಲ್ಲಿ ಪ್ರಸ್ತಾಪಿಸಿದರು.

1922 ರಲ್ಲಿ ನಡೆದ ಗಯಾ ಕಾಂಗ್ರೆಸ್‌ನಲ್ಲಿ ಕಮ್ಯುನಿಸ್ಟರು ಹಂಚಿದ ಕರಪತ್ರಗಳಲ್ಲಿ, ರಾಯ್ ಅವರು ಪ್ರತಿಪಾದಿಸುತ್ತಿದ್ದ ಒಂದು ಸಮೂಹ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದ ಸ್ವರೂಪ ಪ್ರತಿಬಿಂಬಿತವಾಗಿತ್ತು. ಇದಕ್ಕೆ ಭಿನ್ನವಾದ ವಿಚಾರಗಳನ್ನು ಒಳಗೊಂಡು ಚೆಟ್ಟಿಯಾರ್ ಮತ್ತು ಪಿ.ಎಸ್.ವೇಲಾಯುಧನ್ ಜಂಟಿಯಾಗಿ 1923 ರ ಮೇ ಕೊನೆಯಲ್ಲಿ ಮದ್ರಾಸಿನಲ್ಲಿ ಒಂದು ಸಮ್ಮೇಳನವನ್ನು ನಡೆಸಿ 'ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್'ನನ್ನು ರಚಿಸಿದರು. ಮೆ 1 ರಂದು ಅದರ ಪ್ರಣಾಳಿಕೆ ಬಿಡುಗಡೆ ಮಾಡಿದರು. ಹಿಂದೂಸ್ತಾನದ ರೈತರು ಮತ್ತು ಕಾರ್ಮಿಕರು 'ಅಹಿಂಸಾ ವಿಧಾನಗಳ ಮೂಲಕ ಲೇಬರ್ ಸ್ವರಾಜ್‌ನ್ನು ಸಾಧಿಸುವ' ಧ್ಯೇಯದಿಂದ ತಮ್ಮದೇ ರಾಜಕೀಯ ಪಕ್ಷವನ್ನು ಸ್ಥಾಪಿಸಲು ಒಂದು ಪ್ರಣಾಳಿಕೆಯಾಗಿ ಇದನ್ನು ಪ್ರಕಟಿಸಿದರು. ಪ್ರಣಾಳಿಕೆಯ ಕೊನೆಯಲ್ಲಿ ಇವರಿಬ್ಬರೂ 'ಭಾರತೀಯ ಕಮ್ಯುನಿಸ್ಟರು' ಎಂದು ಪ್ರಕಟಿಸಿದರು. ಬಹುಶಃ ಭಾರತೀಯ ಸನ್ನಿವೇಶಗಳಿಗೆ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಬೇಕೆನ್ನುವ ಉದ್ದೇಶ ಇದರಲ್ಲಿದ್ದಿರಬಹುದು. ಪ್ರಣಾಳಿಕೆಯನ್ನು ರಚಿಸಲು ಮಾಸ್ಕೋದಿಂದ ಬಂದ ಅಬನಿ ಮುಖರ್ಜಿ ಸಹಾಯ ಮಾಡಿದರೆಂದು ಹೇಳಲಾಗಿದೆ. ಇದೇ ಸಂದರ್ಭದಲ್ಲಿ ಲಾಹೋರಿನಲ್ಲಿ ಗುಲಾಂ ಹುಸೇನ್ ಮತ್ತು ಸಂಶುದ್ದೀನ್ ಹಸನ್ ಅವರು ಒಂದು ಹೊಸ ಪಕ್ಷವನ್ನು ಸ್ಥಾಪಿಸಲು ಪ್ರಯತ್ನ ನಡೆಸಿದ್ದರು. ಮದ್ರಾಸಿನಲ್ಲಿ ಚೆಟ್ಟಿಯಾರ್ ನಡೆಸಿದ್ದ ಪ್ರಯತ್ನಗಳು ಅವರ ಗಮನಕ್ಕೆ ಬಂದಿರಲಿಲ್ಲ. 1923 ರ ಜೂನ್ 23 ರಂದು ಲಕ್ನೋದಲ್ಲಿ

ಸಮ್ಮೇಳನವನ್ನು ನಡೆಸುವ ಬಗ್ಗೆ ಇವರು ಚೆಟ್ಟಿಯಾರ್ ಅವರನ್ನೂ ಒಳಗೊಂಡಂತೆ ಬಾಂಬೆಯ ಡಾಂಗೆ, ಕಲ್ಕತ್ತಾದ ಮುಝಾಫರ್ ಅಹಮದ್, ಪುಣೆಯ ಆರ್.ಎಸ್.ನಿಂಬ್‌ಕರ್ ಮುಂತಾದವರಿಗೆ ಪತ್ರಗಳನ್ನು ಬರೆದಿದ್ದರು. ಆದರೆ ಈ ಸಮ್ಮೇಳನ ನಡೆಯುವ ಮೊದಲೇ ಕಾನ್ಪುರ್ ಪಿತೂರಿ ಮೊಕದ್ದಮೆಯನ್ನು ಸರ್ಕಾರ ಹಾಕಿದ್ದರಿಂದಾಗಿ ಸಮ್ಮೇಳನ ನಡೆಯಲಿಲ್ಲ.

ಆದರೆ ಪ್ರಯತ್ನಗಳು ಮುಂದುವರಿದು **1925 ರ ಡಿಸೆಂಬರ್ 26 ರಿಂದ 28 ರವರೆಗೆ ಕಾನ್ಪುರದಲ್ಲಿ ಕಮ್ಯುನಿಸ್ಟ್ ಗುಂಪುಗಳು ಸಭೆ ಸೇರಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದ್ದು,** ಅದರ ಚರಿತ್ರೆಯಲ್ಲಿ ಒಂದು ಮೈಲಿಗಲ್ಲಾಯಿತು. ತಾಷ್ಕೆಂಟ್‌ನಲ್ಲಿ 1920 ರಲ್ಲಿ ಅನಿವಾಸಿ ಭಾರತೀಯರು ಸೇರಿ ರಚಿಸಿದ ಸಿಪಿಐನ ಪರಿಣಾಮವಾಗಿ ಭಾರತದೊಳಗೆ ವಿವಿಧ ಭಾಗಗಳಲ್ಲಿ ಕಮ್ಯುನಿಸ್ಟ್ ಗುಂಪುಗಳು ಬೆಳೆದು ಬಂದವು. ಈ ಗುಂಪುಗಳ ವೈಜ್ಞಾನಿಕ ಸಮಾಜವಾದದ ಬಗೆಗಿನ ತಿಳುವಳಿಕೆ ತುಂಬಾ ಭಿನ್ನ ಭಿನ್ನವಾಗಿತ್ತು ಮತ್ತು ವಿಭಿನ್ನ ಪ್ರಮಾಣಗಳಲ್ಲಿತ್ತು. ಈ ಹಿನ್ನೆಲೆಯಲ್ಲಿ ಕಾನ್ಪುರದಲ್ಲಿ ನಡೆದ ಸಮ್ಮೇಳನವು ಬ್ರಿಟಿಷ್ ಭಾರತದೊಳಗಿದ್ದ ಬಹುತೇಕ ಎಲ್ಲಾ ಕಮ್ಯುನಿಸ್ಟ್ ಗುಂಪುಗಳನ್ನು ಒಟ್ಟಿಗೆ ತರುವಲ್ಲಿ ಮಹತ್ವದ್ದಾಗಿದೆ. ವಿಶೇಷವೆಂದರೆ ಈ ಸಮ್ಮೇಳನದ ಸಂಚಾಲಕರಾಗಿದ್ದ ಸತ್ಯಭಕ್ತ ಎಂಬುವರು ಯಾವುದೇ ಕಮ್ಯುನಿಸ್ಟ್ ಗುಂಪಿಗೆ ಸೇರಿದವರಾಗಿರಲಿಲ್ಲ12. ಕಮ್ಯುನಿಸ್ಟ್ ಸಮ್ಮೇಳನವನ್ನು ಕಾನ್ಪುರ್ ಕಾಂಗ್ರೆಸ್ ಅಧಿವೇಶನದ ಜೊತೆಯಲ್ಲೇ ನಡೆಸುವ ಬಗ್ಗೆ ಸತ್ಯಭಕ್ತ ಯೋಜಿಸಿದ್ದರು. ಮೌಲಾನಾ ಹಸ್ರತ್ ಮೊಹಾನಿ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಸಮ್ಮೇಳನದ ಅಧ್ಯಕ್ಷರಾಗಿದ್ದ ಬ್ರಿಟನ್ ಕಮ್ಯುನಿಸ್ಟ್ ಪಕ್ಷದ ಮುಖಂಡರು ಮತ್ತು ಬ್ರಿಟನ್ ಸಂಸತ್ತಿನ ಸದಸ್ಯರು ಆಗಿದ್ದ ಸಕ್ಲತ್‌ವಾಲಾ ಅವರು ಬರಲಾಗದಿದ್ದರಿಂದ, ಸಿಂಗಾರವೇಲು ಚೆಟ್ಟಿಯಾರ್ ಅವರು ಅಧ್ಯಕ್ಷತೆ ವಹಿಸಿದರು. ಸತ್ಯಭಕ್ತ ಅವರು ಪಕ್ಷದ ಹೆಸರು 'ಭಾರತೀಯತೆ'ಯಿಂದ ಕೂಡಿರಬೇಕು ಎಂಬ ಹಿನ್ನೆಲೆಯಲ್ಲಿ ಅದನ್ನು 'ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ' ಎಂದು ಕರೆಯಲು ಬಯಸಿದ್ದರು13. ಸಮ್ಮೇಳನಕ್ಕೆ ಬಾಂಬೆಯಿಂದ ಆರ್.ಎಸ್.ನಿಂಬ್‌ಕರ್, ಜೆ.ಪಿ.ಬಗೇರ್‌ಹಟ್ಟಾ, ಕೆ.ಎನ್.ಜೋಗಳೇಕರ್, ಎಸ್.ವಿ.ಘಾಟೆ, ಝಾನ್ಸಿಯಿಂದ ಅಯೋಧ್ಯಾ ಪ್ರಸಾದ್, ಪಂಜಾಬಿನಿಂದ ಸಂತೋಕ್ ಸಿಂಗ್, ಲಾಹೋರಿನಿಂದ ಎಸ್.ಡಿ.ಹಸನ್ ಮತ್ತು ರಾಮಚಂದ್ರ, ಮದ್ರಾಸಿನಿಂದ ಕಾಮೇಶ್ವರ್ ರಾವ್, ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಸಿಂಗಾರವೇಲು ಚೆಟ್ಟಿಯಾರ್, ಕಲ್ಕತ್ತಾದಿಂದ ರಾಧಾ ಮೋಹನ್ ಗೋಕುಲ್‌ಜಿ, ಅಜ್ಮೀರ್‌ನಿಂದ ಅರ್ಜುನ್‌ಲಾಲ್ ಸೇಥಿ ಮುಂತಾದವರು ಭಾಗವಹಿಸಿದ್ದರು. ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಕಲ್ಕತ್ತಾದ ಕ್ರಾಂತಿಕಾರಿ ಕಾರ್ಮಿಕ ಮುಖಂಡರು ಕಮ್ಯುನಿಸ್ಟ್ ಸಮ್ಮೇಳನದ ಸ್ಥಳಕ್ಕೆ ಭೇಟಿ ನೀಡಿದ್ದರು. ಒಟ್ಟಾರೆ ಸಮ್ಮೇಳನದಲ್ಲಿ 500 ಜನ ಭಾಗವಹಿಸಿದ್ದರು. ಸಮ್ಮೇಳನವು ಪಕ್ಷದ ಹೆಸರನ್ನು 'ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ' ಬದಲಿಗೆ 'ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ' ಎಂದು ಬದಲಾಯಿಸಿತು. ಸಮ್ಮೇಳನವು ಅಂಗೀಕರಿಸಿದ ಪಕ್ಷದ ಸಂವಿಧಾನದಲ್ಲಿ ತನ್ನ ಗುರಿಯನ್ನು ಈ ರೀತಿ ಘೋಷಿಸಿತು:


ಎಸ್.ವಿ.ಘಾಟೆ

ಬ್ರಿಟಿಷ್ ಸಾಮ್ರಾಜ್ಯವಾದಿ ಅಧಿಪತ್ಯದಿಂದ ವಿಮೋಚನೆಗೊಂಡ, ಉತ್ಪಾದನೆ ಮತ್ತು ವಿತರಣೆಯ ಸಾಧನಗಳ ಸಾಮಾಜೀಕರಣದ ಆಧಾರದಲ್ಲಿ ಕಾರ್ಮಿಕರ ಮತ್ತು ರೈತರ ಗಣರಾಜ್ಯವನ್ನು ಸ್ಥಾಪಿಸುವುದು.

ಪಕ್ಷದ ಸ್ಥಾಪನೆಯ ಕುರಿತು ಅಂಗೀಕರಿಸಿದ ನಿರ್ಣಯವು ಈ ರೀತಿ ಹೇಳಿತು:

> ಭಾರತದ ಕಾರ್ಮಿಕರು ಮತ್ತು ರೈತರು, ಭಾರತದೊಳಗೆ ವಿದೇಶೀ ಮತ್ತು ದೇಶೀ ಬಂಡವಾಳದಾರರು ಮತ್ತು ಜಮೀನ್ದಾರಿಗಳಿಂದ ಶೋಷಣೆಗೊಳಗಾಗುತ್ತಿರುವ ಹಿನ್ನೆಲೆಯಲ್ಲಿ ಒಂದು ಮಾನವೀಯ ಬದುಕನ್ನು ಬದುಕಲು ಅಸಾಧ್ಯವಾಗಿದೆ. ಭಾರತದಲ್ಲಿ ಅಸ್ಥಿತ್ವದಲ್ಲಿರುವ ರಾಜಕೀಯ ಪಕ್ಷಗಳು, ಭಾರತದ ಕಾರ್ಮಿಕರು ಮತ್ತು ರೈತರ ಉತ್ತಮ ಜೀವನಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುವ ಬಂಡವಾಳಶಾಹಿ ಹಿತಾಸಕ್ತಿಗಳಿಂದ ನಿರ್ದೇಶಿತವಾಗಿವೆ. ಭಾರತೀಯ ಕಮ್ಯುನಿಸ್ಟರ ಈ ಸಮ್ಮೇಳನವು, ಭಾರತದ ಕಾರ್ಮಿಕರ ಮತ್ತು ರೈತರ ವಿಮೋಚನೆಯ ಉದ್ದೇಶಕ್ಕಾಗಿ ಒಂದು ಪಕ್ಷವನ್ನು ಸ್ಥಾಪಿಸಲು ತೀರ್ಮಾನಿಸುತ್ತದೆ. ಈ ಪಕ್ಷವು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಎಂದು ಕರೆಯತಕ್ಕದ್ದು ಮತ್ತು ಈ ಪಕ್ಷದ ಅಂತಿಮ ಧ್ಯೇಯವು ಕಾರ್ಮಿಕರ ಮತ್ತು ರೈತರ ಸ್ವರಾಜ್ ಗಣರಾಜ್ಯವನ್ನು ಸ್ಥಾಪಿಸುವುದಾಗಿದೆ, ಮತ್ತು ಇದರ ತಕ್ಷಣದ ಉದ್ದೇಶವು ಕಾರ್ಮಿಕರು ಮತ್ತು ರೈತರಿಗೆ ಜೀವನ ವೇತನವನ್ನು ಗಳಿಸುವುದಾಗಿದೆ, ಅದಕ್ಕಾಗಿ ಸಾರ್ವಜನಿಕ ಸೇವೆಗಳಾದ ಭೂಮಿ, ಗಣಿಗಳು, ಕೈಗಾರಿಕೆಗಳು, ಮನೆಗಳು, ಟೆಲಿಗ್ರಾಫ್ ಮತ್ತು ಟೆಲಿಫೋನ್‌ಗಳು, ರೈಲ್ವೆ ಮುಂತಾದವುಗಳನ್ನು ರಾಷ್ಟ್ರೀಕರಣ ಮತ್ತು ಮುನಿಸಿಪಾಲೀಕರಣ ಮಾಡುವುದು. ಭಾರತದಲ್ಲಿರುವ ಯಾವುದೇ ಕೋಮುವಾದೀ ಸಂಘಟನೆಯ ಯಾವ ಸದಸ್ಯರನ್ನೂ ಕಮ್ಯುನಿಸ್ಟ್ ಪಕ್ಷದ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದಿಲ್ಲ (ಅಧಿಕಾರಿ 1982: 665–66).

ಇದರಲ್ಲಿ ಕೊನೆ ಸಾಲಿನ ವಿಶೇಷತೆ ಬಗ್ಗೆ ಬರೆಯುತ್ತಾ ಇತಿಹಾಸಕಾರರಾದ ಇರ್ಫಾನ್ ಹಬೀಬ್ ಅವರು, ಬಹುಶಃ ಯಾವುದೇ ಮಹತ್ವದ ರಾಜಕೀಯ ಪಕ್ಷವೊಂದು ಮೊದಲಿಗೆ ಕೋಮುವಾದಿ ಸಂಘಟನೆಗಳ ಸದಸ್ಯರನ್ನು ಹೊರಗಿಟ್ಟದ್ದು ಎಂದರೆ ಕಮ್ಯುನಿಸ್ಟ್ ಪಕ್ಷ ಎನ್ನುತ್ತಾರೆ (ಇರ್ಫಾನ್ ಹಬೀಬ್ 1998: 10).

ಕಾನ್ಪುರ ಸಮ್ಮೇಳನವು ಮದ್ರಾಸಿನ ಚೆಟ್ಟಿಯಾರ್ ಅವರು ಸ್ಥಾಪಿಸಿದ್ದ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್‌ನ್ನು ವಿಸರ್ಜನೆ ಮಾಡಲು ಮತ್ತು ಅದರ ಪತ್ರಿಕೆಯಾಗಿದ್ದ ಲೇಬರ್ ಕಿಸಾನ್ ಗೆಜೆಟ್‌ನ್ನು ನೂತನ ಸಿಪಿಐನ ಪತ್ರಿಕೆಯನ್ನಾಗಿಸಲು ತೀರ್ಮಾನಿಸಿತು. ಸಿಪಿಐನ ಕೇಂದ್ರ ಕಛೇರಿಯನ್ನು ಬಾಂಬೆಗೆ ಸ್ಥಳಾಂತರಿಸಲು ಮತ್ತು ಪಕ್ಷದ ಐದು ಪ್ರಾಂತೀಯ ಕೇಂದ್ರಗಳಾದ ಕಲ್ಕತ್ತಾ, ಬಾಂಬೆ, ಕಾನ್ಪುರ, ಮದ್ರಾಸ್ ಮತ್ತು ಲಾಹೋರ್ ಇವುಗಳನ್ನು ಕಾರ್ಯಕಾರಿ ಸಮಿತಿಯು ಉಸ್ತುವಾರಿ ನೋಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಸಿಂಗಾರವೇಲು ಚೆಟ್ಟಿಯಾರ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ, ಅಜಾದ್ ಸೋಭಾನಿ ಅವರನ್ನು ಉಪಾಧ್ಯಕ್ಷರನ್ನಾಗಿ,


ಸಿಂಗಾರವೇಲು ಚೆಟ್ಟಿಯಾರ್

ಎಸ್.ವಿ.ಘಾಟೆ ಮತ್ತು ಜೆ.ಪಿ.ಬಗೇರ್‌ಹಟ್ಟಾ ಅವರನ್ನು ಪ್ರಧಾನ ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಜೊತೆಗೆ ಬಾಂಬೆಯಲ್ಲದೆ, ಮದ್ರಾಸಿಗೆ ಕೃಷ್ಣಸ್ವಾಮಿ ಅಯ್ಯಂಗಾರ್, ಕಾನ್ಪುರಕ್ಕೆ ಸತ್ಯಭಕ್ತ, ಲಾಹೋರಿಗೆ ಎಸ್.ಡಿ.ಹಸನ್ ಮತ್ತು ಕಲ್ಕತ್ತಾಕ್ಕೆ ಮುಝಾಫರ್ ಅಹಮದ್ ಅವರನ್ನು ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಯಿತು (ಹಿಸ್ಟರಿ 2005: 92–93).

ಈ ವೇಳೆಗೆ ಎಸ್.ಎ.ಡಾಂಗೆ ಮತ್ತು ಮುಝಾಫರ್ ಅಹಮದ್ ಅವರು ಕಾನ್ಪುರ ಪಿತೂರಿ ಮೊಕದ್ದಮೆಯಲ್ಲಿ ಜೈಲಿನಲ್ಲಿದ್ದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಬಿಡುಗಡೆಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ ಮುಝಾಫರ್ ಅಹಮದ್ ಅವರ ಪ್ರಕಾರ, ಸತ್ಯಭಕ್ತ ಅವರು ತಾವು ಯೋಜಿಸಿದಂತೆ ನಡೆಯಲಿಲ್ಲ ಎಂಬ ಕಾರಣಕ್ಕೆ ಸಮ್ಮೇಳನ ಮುಗಿಯುವ ಮುಂಚೆಯೇ ಹೊರಟು ಹೋದರು. 'ಪಕ್ಷದ ಸದಸ್ಯರ ಪೈಕಿ ಹಲವಾರು ಜನ ಹಿಂದೂ ಸಭಾ ಮತ್ತು ಹಿಂದೂ ಸಂಘಟನೆಗಳ ಮತ್ತು ಕೆಲವರು ಖಿಲಾಫತ್ ಮತ್ತು ಜಮಾತ್–ಇ–ಉಲೇಮಾದ ಏಜೆಂಟರಾಗಿದ್ದರು. ಕಮ್ಯುನಿಸ್ಟ್ ಪಕ್ಷಕ್ಕೆ ಇಂತಹ ಅಪಮಾನವನ್ನು ನಾವು ಸಹಿಸುವಂತಿರಲಿಲ್ಲ. ನಾವು ಕಾನ್ಪುರಕ್ಕೆ ಹೋದೆವು ಮತ್ತು ಪಕ್ಷವನ್ನು ಹಿಡಿತಕ್ಕೆ ತೆಗೆದುಕೊಂಡೆವು. ನಾವಿದನ್ನು ಮಾಡದೇ ಇದ್ದಿದ್ದರೆ ಭಾರತದಲ್ಲೇ ನಾವು ಬಂಧನಕ್ಕೊಳಗಾಗುತ್ತಿದ್ದೆವು' ಎಂಬುದಾಗಿ ಮುಝಾಫರ್ ಅಹಮದ್ ಹೇಳುತ್ತಾರೆ (ಹಿಸ್ಟರಿ 2005: 93). ಮುಂದೆ ಸತ್ಯಭಕ್ತ ಅವರು ಪಕ್ಷವನ್ನು ತೊರೆದರು ಮತ್ತು 'ನ್ಯಾಷನಲ್ ಕಮ್ಯುನಿಸ್ಟ್ ಪಾರ್ಟಿ' ಹೆಸರಿನ ನೂತನ ಪಕ್ಷವನ್ನು ರಚಿಸಿದರು ಮತ್ತು ನಂತರ ರಾಜಕೀಯವಾಗಿ ನೇಪಥ್ಯಕ್ಕೆ ಸರಿದರು.

ಸಂಪೂರ್ಣ ಸ್ವಾತಂತ್ರ್ಯ ಬೇಡಿಕೆ ಮತ್ತು ಕಮ್ಯುನಿಸ್ಟರು

ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕು, ಬ್ರಿಟಿಷರ ಅಧೀನದ ಸ್ಥಾನಮಾನಗಳಲ್ಲ ಎಂಬ ಕಾವು ಭಾರತೀಯ ಕ್ರಾಂತಿಕಾರಿಗಳಲ್ಲಿ ತೀವ್ರವಾಗಿತ್ತು. ರಾಷ್ಟ್ರೀಯ ಕಾಂಗ್ರೆಸ್ ಆರಂಭವಾಗಿ ಮೂರೂವರೆ ದಶಕಗಳಾದರೂ ಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಎತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಂತಹದೊಂದು ಬೇಡಿಕೆಯನ್ನು ರೂಪಿಸಬೇಕೆಂಬ ಉದ್ದೇಶದಿಂದ, 1921 ರ ಡಿಸೆಂಬರ್ 27–28 ರಂದು ಅಹಮದಾಬಾದಿನಲ್ಲಿ ನಡೆದ '36ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಪ್ರಣಾಳಿಕೆ'ಯನ್ನು ರಾಯ್ ಮತ್ತು ಅಬನಿ ಮುಖರ್ಜಿ ಸೇರಿ ರಚಿಸಿದರು. ಇದನ್ನು ಅಹಮದಾಬಾದ್ ಕಾಂಗ್ರೆಸ್‌ಅಧಿವೇಶನದಲ್ಲಿ ಭಾಗವಹಿಸಿದ್ದ ಎಲ್ಲಾ ಪ್ರತಿನಿಧಿಗಳಿಗೆ ವಿತರಿಸಿದರು. ಜೊತೆಗೆ ಭಾರತದ ಎಲ್ಲಾ ಭಾಗಗಳಿಗೂ ತಲುಪುವಂತೆ ನೋಡಿಕೊಂಡರು (ದತ್ 1983: 346–47). ಈ ಪ್ರಣಾಳಿಕೆಯನ್ನು ಲೆನಿನ್ ಮತ್ತು ಸ್ಟಾಲಿನ್ ಅನುಮೋದಿಸಿದ್ದರು. ಇದನ್ನು ಮಾಸ್ಕೋದಲ್ಲಿ ಮುದ್ರಿಸಿ ಭಾರತಕ್ಕೆ ತರಲಾಯಿತು ಮತ್ತು ಗುಪ್ತವಾಗಿ ನಳಿನಿ ಗುಪ್ತ ಇದನ್ನು ವಿತರಣೆ ಮಾಡಿದರು.

ಕಾಂಗ್ರೆಸ್ ಅದುವರೆಗೂ ಪರೀಕ್ಷೆ ಮಾಡದಿದ್ದ ಮತ್ತು ಮಾತನಾಡದಿದ್ದ ದಾರಿಯನ್ನು ಮತ್ತು ಕಾರ್ಯಾಚರಣೆಯನ್ನು ಭಾರತದ ಕಮ್ಯುನಿಸ್ಟರು ಈ ಪ್ರಣಾಳಿಕೆಯ ರೂಪದಲ್ಲಿ ಮುಂದಿಟ್ಟರು. ಬ್ರಿಟಿಷ್ ಸಾಮ್ರಾಜ್ಯದಿಂದ ಸಂಪೂರ್ಣವಾಗಿ

ತನ್ನ ಸಂಬಂಧಗಳನ್ನು ಕಡಿದುಕೊಳ್ಳಬೇಕು ಮತ್ತು ಕಾರ್ಮಿಕರ ಮತ್ತು ರೈತರ ಹೋರಾಟಗಳಿಗೆ ಸಂಪೂರ್ಣವಾದ ಬೆಂಬಲವನ್ನು ನೀಡಬೇಕೆಂದು ಕಾಂಗ್ರೆಸ್‌ನ್ನು ಒತ್ತಾಯಿಸುವ ಅಂಶಗಳನ್ನು ಇದು ಒಳಗೊಂಡಿತ್ತು. ಕಾಂಗ್ರೆಸ್ ಈ ದಿಕ್ಕಿನಲ್ಲಿ ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕೆಂದು ಪ್ರಣಾಳಿಕೆಯು ಈ ರೀತಿ ಒತ್ತಾಯ ಮಾಡಿತು:

> ಭಾರತವನ್ನು ತನ್ನ ಅಡಿಪಾಯದಲ್ಲೇ ಅಲುಗಾಡಿಸುವ ಕ್ರಾಂತಿಯನ್ನು ಕಾಂಗ್ರೆಸ್ ಮುನ್ನಡೆಸುವುದಾದರೆ, ಅದು ಕೇವಲ ಪ್ರದರ್ಶನಗಳಲ್ಲಿ ಮತ್ತು ತಾತ್ಕಾಲಿಕವಾದ ರೌದ್ರ ಉತ್ಸಾಹಗಳಲ್ಲಿ ತನ್ನ ನಂಬಿಕೆಯನ್ನು ಇಡದಿರಲಿ. ಅದು ಕಾರ್ಮಿಕ ಸಂಘಟನೆಗಳ ತಕ್ಷಣದ ಬೇಡಿಕೆಗಳನ್ನು ತನ್ನದೇ ಬೇಡಿಕೆಗಳನ್ನಾಗಿ ಮಾಡಿಕೊಳ್ಳಲಿ; ಅದು ಕಿಸಾನ್ ಸಭಾಗಳ (ರೈತ ಸಂಘಟನೆಗಳ) ಕಾರ್ಯಕ್ರಮವನ್ನು ತನ್ನದೇ ಕಾರ್ಯಕ್ರಮವನ್ನಾಗಿ ಮಾಡಿಕೊಳ್ಳಲಿ; ಮತ್ತು ಕಾಂಗ್ರೆಸ್‌ನ್ನು ಯಾವುದೇ ಅಡೆತಡೆಗಳಿಂದ ನಿಲ್ಲಿಸಲಾಗದು ಎಂಬಂತಹ ಸಮಯ ಬೇಗನೇ ಬರಲಿದೆ; ತಮ್ಮ ಭೌತಿಕ ಆಸಕ್ತಿಗಳಿಗಾಗಿ ಪ್ರಜ್ಞಾಪೂರ್ವಕವಾಗಿ ಹೋರಾಡುತ್ತಿರುವ, ಇಡೀ ಜನಸಮೂಹದ ಅಪ್ರತಿಮ ಸಾಮರ್ಥ್ಯದ ಬೆಂಬಲ ಇದಕ್ಕೆ ಸಿಗಲಿದೆ . . .
>
> ಇಡೀ ದೇಶ ತನ್ನ ಬೆಂಬಲಕ್ಕೆ ಇರಬೇಕೆಂದು ಕಾಂಗ್ರೆಸ್ ಬಯಸುವುದಾದಲ್ಲಿ, ಅದು ಒಂದು ಸಣ್ಣ ವರ್ಗದ ಹಿತಾಸಕ್ತಿಯ ಕುರುಡುತನದಲ್ಲಿ ಇರದಿರಲಿ, ಕಾಂಗ್ರೆಸ್‌ನೊಳಗೆ 'ಪ್ರತಿಭಾವಂತ ವಕೀಲರ'ನ್ನು ಸ್ಥಳಾಂತರ ಮಾಡಿರುವ 'ವ್ಯಾಪಾರಿಗಳು ಮತ್ತು ಮಾಲೀಕರ' ಅದೃಶ್ಯ ಕೈಗಳಿಂದ ಅದು ನಿರ್ದೇಶಿತವಾಗದಿರಲಿ, ಪ್ರಸ್ತುತ ತಂತ್ರಗಾರಿಕೆಯು 'ಪೈಶಾಚಿಕ' ಬ್ರಿಟಿಷರ ಜಾಗದಲ್ಲಿ ಇವರನ್ನು ಪ್ರತಿಷ್ಠಾಪಿಸುವಂತಿದೆ(ಹಿಸ್ಟರಿ 2005: 57) (ಅನುವಾದ ಲೇಖಕರದು).

ಪ್ರಣಾಳಿಕೆಯು ಕಾಂಗ್ರೆಸ್ಸಿನವರ ಮೇಲೆ ಯಾವ ರೀತಿ ಪರಿಣಾಮ ಬೀರಿತೆಂದರೆ, ತೀವ್ರವಾದಿ ಕಾಂಗ್ರೆಸ್ಸಿಗರಾದ ಮೌಲಾನಾ ಹಸ್ರತ್ ಮೊಹಾನಿಯವರು ಸ್ವತಃ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಮಂಡಿಸಿದರು. ಆದರೆ ಇದು ಬಹುಮತಗಳಿಂದ ಸೋತು ಹೋಯಿತು. ಆದರೆ ಇದರಿಂದ ಸ್ಪಷ್ಟಗೊಂಡ ಒಂದು ವಿಚಾರವೆಂದರೆ ಕಮ್ಯುನಿಸ್ಟ್ ವಿಚಾರಗಳು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟವನ್ನು ಪ್ರಭಾವಿಸಲು ಆರಂಭಿಸಿತ್ತು ಎಂಬುದು. ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಯಾವುದೇ ರಾಜಕೀಯ ಗುಂಪು ಅಥವಾ ಪಕ್ಷ ಎತ್ತುವ ಮೊದಲು ಕಮ್ಯುನಿಸ್ಟ್ ಪಕ್ಷ ಈ ಬೇಡಿಕೆಯನ್ನು ಎತ್ತಿತ್ತು. ಮೊಹಾನಿ ಮಾತ್ರವಲ್ಲದೆ, ಸ್ವಾಮಿ ಕುಮಾರಾನಂದ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ, ಸ್ವರಾಜ್ಯವೆಂದರೆ ವಿದೇಶೀ ಆಳ್ವಿಕೆಯಿಂದ ಸಂಪೂರ್ಣವಾದ ಮುಕ್ತಿ ಎಂಬುದಾಗಿ ನಿರ್ಣಯ ಮಂಡಿಸಿದರು. ಆದರೆ ಗಾಂಧಿ ಇಂತಹ ಬೇಡಿಕೆಯನ್ನು ವಿರೋಧಿಸಿದರು14.

ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಕಮ್ಯುನಿಸ್ಟರು 1922 ರ ಡಿಸೆಂಬರ್‌ನಲ್ಲಿ ನಡೆದ **ಗಯಾ ಕಾಂಗ್ರೆಸ್ ಅಧಿವೇಶನದಲ್ಲೂ** ಎತ್ತಿದರು. ಈ ಅಧಿವೇಶನದಲ್ಲಿ ಡಾಂಗೆ ಮತ್ತು ಚೆಟ್ಟಿಯಾರ್ ಇಬ್ಬರೂ ಭಾಗವಹಿಸಿದ್ದರು. ಜಗತ್ತಿನ ಎಲ್ಲಾ ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯದ ಪರವಾಗಿರುವುದರಿಂದ ಅವರನ್ನು ಸ್ವಾಗತಿಸಬೇಕೆಂದು ಚೆಟ್ಟಿಯಾರ್ ಭಾಷಣ ಮಾಡಿದರು. ಗಾಂಧಿ ನೇತೃತ್ವದ ಕಾಂಗ್ರೆಸ್‌ನ ಅಹಿಂಸಾ ಮಾರ್ಗದ ಬಗ್ಗೆ ಅನುಮಾನಗಳನ್ನು ಹೊಂದಿದ್ದರೂ

ಗಯಾ ಅಧಿವೇಶನಕ್ಕೆ ಕಮ್ಯುನಿಸ್ಟ್ ಅಂತರರಾಷ್ಟ್ರೀಯವು ಸೌಹಾರ್ದತೆಯ ಸಂದೇಶವನ್ನು ಕಳುಹಿಸಿತು. ಗಯಾ ಅಧಿವೇಶನದಲ್ಲಿ, ಭಾರತದ ವಿಮೋಚನೆಯ ಸ್ವರೂಪದ ಕುರಿತು ಭಾರತ ಕಮ್ಯುನಿಸ್ಟ್ ಪಕ್ಷದ ಹೆಸರಲ್ಲಿ ಕರಪತ್ರಗಳನ್ನು ಹಂಚಲಾಯಿತು. ಎಂ.ಎನ್.ರಾಯ್ ಮತ್ತು ಅಬನಿ ಮುಖರ್ಜಿ ಸಹಿ ಮಾಡಿದ್ದ, 'ಪ್ರೋಗ್ರಾಂ ಆಫ್ ನ್ಯಾಷನಲ್ ಲಿಬರೇಷನ್ ಅಂಡ್ ರಿಕನ್ಸ್‌ಟ್ರಕ್ಷನ್' ಹೆಸರಿನ ಕರಪತ್ರದ ಪೂರ್ಣ ಪಾಠವನ್ನು ರಾಯ್ ಅವರ ದಿ ಅಡ್ವಾನ್ಸ್ ಗಾರ್ಡ್ ಪತ್ರಿಕೆಯ 1922 ಡಿಸೆಂಬರ್ 1 ರ ಸಂಚಿಕೆಯಲ್ಲಿ ಪ್ರಕಟಿಸಲಾಯಿತು.

ಈ ಕರಪತ್ರದಲ್ಲಿ ಚರ್ಚಿಸಲಾಗಿದ್ದ ರಾಷ್ಟ್ರೀಯ ವಿಮೋಚನಾ ಹೋರಾಟದ ಮುಖ್ಯ ಗುರಿಗಳನ್ನು ಈ ರೀತಿ ವಿವರಿಸಲಾಯಿತು:

1. ಸಾಮ್ರಾಜ್ಯದ ಎಲ್ಲಾ ಸಂಪರ್ಕಗಳಿಂದ ಪ್ರತ್ಯೇಕಗೊಂಡ ಮತ್ತು ಎಲ್ಲಾ ವಿದೇಶೀ ಉಸ್ತುವಾರಿಗಳಿಂದ ಮುಕ್ತವಾದ, ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯ.
2. ಸಾರ್ವತ್ರಿಕ ಮತದಾನದ ಮೂಲಕ ರಾಷ್ಟ್ರೀಯ ಅಸೆಂಬ್ಲಿಯ ಚುನಾವಣೆ. ಜನತೆಯ ಸಾರ್ವಭೌಮತೆಯನ್ನು ಪರಮೋಚ್ಚ ಅಧಿಕಾರವಾಗಿ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಸ್ಥಾಪಿಸುವುದು.
3. ಭಾರತ ಗಣತಂತ್ರ ಒಕ್ಕೂಟವನ್ನು ಸ್ಥಾಪಿಸುವುದು.

ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮ

1. ಜಮೀನ್ದಾರಿ ಪದ್ಧತಿಯ ರದ್ಧತಿ. ಎಲ್ಲಾ ಬೃಹತ್ ಎಸ್ಟೇಟ್‌ಗಳನ್ನು ಯಾವುದೇ ಪರಿಹಾರವಿಲ್ಲದೆ ವಶಪಡಿಸಿಕೊಳ್ಳಲಾಗುವುದು. ಭೂಮಿಯ ಅಂತಿಮ ಒಡೆತನವನ್ನು ರಾಷ್ಟ್ರೀಯ ಪ್ರಭುತ್ವದಲ್ಲಿ ಇರಿಸಲಾಗುವುದು. ಯಾರು ವಾಸ್ತವವಾಗಿ ಕೃಷಿ ಉದ್ದಿಮೆಯಲ್ಲಿ ತೊಡಗಿದ್ದಾರೋ ಅವರಿಗೆ ಮಾತ್ರ ಭೂಮಿಯನ್ನು ಹೊಂದಲು ಅವಕಾಶ ನೀಡಲಾಗುವುದು. ತೆರಿಗೆ ರಹಿತ ಕೃಷಿಗೆ ಅವಕಾಶ ನೀಡಲಾಗುವುದು.
2. ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಭೂಮಿ ಬಾಡಿಗೆಯನ್ನು ನಿಗದಿತ ಕನಿಷ್ಟಕ್ಕೆ ಇಳಿಸಲಾಗುವುದು. ರೈತರಿಗೆ ಸಾಲವನ್ನು ಒದಗಿಸಲು ಮತ್ತು ಬಡ್ಡಿ ವ್ಯಾಪಾರಿಗಳು ಹಾಗೂ ಜೂಜುಕೋರ ವರ್ತಕರ ಕಪಿಮುಷ್ಟಿಯಿಂದ ಇವರನ್ನು ರಕ್ಷಿಸಲು, ಪ್ರಭುತ್ವ ಕೃಷಿ ಸಹಕಾರ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗುವುದು.
3. ಕೃಷಿಯಲ್ಲಿ ಆಧುನಿಕ ವಿಧಾನಗಳನ್ನು ಜಾರಿಗೆ ತರಲು ಪ್ರಭುತ್ವ ಸಹಾಯವನ್ನು ನೀಡಲಾಗುವುದು. ಪ್ರಭುತ್ವ ಕೃಷಿ ಸಹಕಾರ ಬ್ಯಾಂಕ್‌ಗಳ ಮೂಲಕ ಕೃಷಿ ಸಲಕರಣೆಗಳನ್ನು ಮಾರಲಾಗುವುದು ಅಥವಾ ಸುಲಭ ವಿಧಾನಗಳಲ್ಲಿ ವ್ಯವಸಾಯದಾರರಿಗೆ ನೀಡಲಾಗುವುದು.
4. ಎಲ್ಲಾ ಪರೋಕ್ಷ ತೆರಿಗೆಗಳನ್ನು ರದ್ದು ಮಾಡಲಾಗುವುದು, ಮತ್ತು ತಿಂಗಳಿಗೆ ರೂ.500 ಕ್ಕೂ ಹೆಚ್ಚಿನ ಆದಾಯಕ್ಕೆ ಮುಮ್ಮುಖ ಆದಾಯ ತೆರಿಗೆಯನ್ನು ವಿಧಿಸಲಾಗುವುದು.

5. ಸಾರ್ವಜನಿಕ ಸೇವೆಗಳು, ಗಣಿಗಳು, ರೈಲ್ವೆ, ಟೆಲಿಗ್ರಾಂ, ಒಳ ಜಲಸಾರಿಗೆಗಳ ರಾಷ್ಟ್ರೀಕರಣ ಮತ್ತು ಇವುಗಳನ್ನು ಕಾರ್ಮಿಕರ ಸಮಿತಿಗಳ ನಿಯಂತ್ರಣದಲ್ಲಿ ಪ್ರಭುತ್ವವೇ ಮಾಲೀಕತ್ವ ಹೊಂದಿ ನಿರ್ವಹಣೆ ಮಾಡುವುದು, ಇದನ್ನು ಲಾಭರಹಿತವಾಗಿ ರಾಷ್ಟ್ರದ ಅನುಕೂಲಕ್ಕಾಗಿ ಬಳಸುವುದು.

6. ಪ್ರಭುತ್ವ ಸಹಾಯ ಮತ್ತು ಉಸ್ತುವಾರಿಯಲ್ಲಿ ಆಧುನಿಕ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಗುವುದು.

7. ಎಲ್ಲಾ ಕೈಗಾರಿಕೆಗಳಲ್ಲೂ ಕನಿಷ್ಟ ವೇತನವನ್ನು ಶಾಸನದ ಮೂಲಕ ನಿಗದಿಪಡಿಸಲಾಗುವುದು.

8. ಎಂಟು ಗಂಟೆ ಕೆಲಸ. ಪ್ರತಿ ದಿನ ಎಂಟು ಗಂಟೆಗಳ ರೀತಿಯಲ್ಲಿ ಪುರುಷ ವಯಸ್ಕರಿಗೆ ವಾರದಲ್ಲಿ ಐದೂವರೆ ದಿನಗಳ ಕೆಲಸವನ್ನು ಗರಿಷ್ಟ ಕೆಲಸದ ಸಮಯವೆಂದು ಕಾನೂನಿನ ಮೂಲಕ ನಿಗದಿ ಪಡಿಸಲಾಗುವುದು. ಮಹಿಳಾ ಮತ್ತು ಬಾಲ ಕಾರ್ಮಿಕರಿಗೆ ವಿಶೇಷ ಷರತ್ತುಗಳನ್ನು ವಿಧಿಸಲಾಗುವುದು.

9. ಕಾರ್ಮಿಕರಿಗೆ ನಿರ್ದಿಷ್ಟ ಗುಣಮಟ್ಟದ ವಸತಿ, ಕೆಲಸದ ಸ್ಥಿತಿಗತಿಗಳು, ವೈದ್ಯಕೀಯ ನೆರವು, ಇತ್ಯಾದಿಗಳನ್ನು ಒದಗಿಸುವಂತೆ ಉದ್ದಿಮೆದಾರರಿಗೆ ಕಾನೂನಿನ ಮೂಲಕ ನಿಗದಿಪಡಿಸಲಾಗುವುದು.

10. ಎಲ್ಲಾ ಕೈಗಾರಿಕೆಗಳಲ್ಲೂ ವೃದ್ಧಾಪ್ಯ, ಅನಾರೋಗ್ಯ ಮತ್ತು ನಿರುದ್ಯೋಗ ವಿಮೆಗೆ ಸಂಬಂಧಿಸಿ ರಕ್ಷಣಾತ್ಮಕ ಶಾಸನವನ್ನು ಅಂಗೀಕರಿಸಲಾಗುವುದು.

11. ಕಾರ್ಮಿಕ ಸಂಘಟನೆಗೆ ಕಾನೂನಾತ್ಮಕ ಮಾನ್ಯತೆ ನೀಡಲಾಗುವುದು ಮತ್ತು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕಾರ್ಮಿಕರ ಮುಷ್ಕರದ ಹಕ್ಕನ್ನು ಮಾನ್ಯ ಮಾಡಲಾಗುವುದು.

12. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಎಲ್ಲಾ ದೊಡ್ಡ ಕೈಗಾರಿಕೆಗಳಲ್ಲಿ ವರ್ಕರ್ಸ್ ಕೌನ್ಸಿಲ್‌ಗಳನ್ನು ರಚಿಸಲಾಗುವುದು. ತಮ್ಮ ಕೆಲಸವನ್ನು ನಿರ್ವಹಿಸುವುದಕ್ಕೆ ಈ ಕೌನ್ಸಿಲ್‌ಗಳಿಗೆ ಪ್ರಭುತ್ವದ ರಕ್ಷಣೆಯಿರುತ್ತದೆ.

13. ಎಲ್ಲಾ ಬೃಹತ್ ಕೈಗಾರಿಕೆಗಳಲ್ಲಿ ಲಾಭ ಹಂಚಿಕೆಯನ್ನು ಜಾರಿಗೆ ತರಲಾಗುವುದು.

14. ಉಚಿತ ಮತ್ತು ಕಡ್ಡಾಯ ಶಿಕ್ಷಣ. ಎಲ್ಲಾ ಬಾಲಕ ಮತ್ತು ಬಾಲಕಿಯರಿಗೆ ಪ್ರಾಥಮಿಕ ಹಂತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ, ಪ್ರೌಢ ಹಂತದಲ್ಲಿ ಎಷ್ಟು ಸಾಧ್ಯವೋ ಅಷ್ಟು ಉಚಿತ. ತಾಂತ್ರಿಕ ಮತ್ತು ವೃತ್ತಿಪರ ಶಾಲೆಗಳನ್ನು ಪ್ರಭುತ್ವದ ಸಹಾಯದೊಂದಿಗೆ ಸ್ಥಾಪಿಸಲಾಗುವುದು.

15. ಎಲ್ಲಾ ಧಾರ್ಮಿಕ ನಂಬಿಕೆಗಳಿಂದ ಪ್ರಭುತ್ವವನ್ನು ಪ್ರತ್ಯೇಕಗೊಳಿಸಲಾಗುವುದು ಮತ್ತು ನಂಬಿಕೆ ಹಾಗೂ ಪೂಜಾ ಸ್ವಾತಂತ್ರ್ಯವನ್ನು ಖಾತ್ರಿಪಡಿಸಲಾಗುವುದು.

16. **ಮಹಿಳೆಯರು ಪೂರ್ಣ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭವಿಸುವರು.**

17. ಯಾವುದೇ ಸ್ಥಾಯೀ ಸೈನ್ಯವನ್ನು ನಿರ್ವಹಿಸುವುದಿಲ್ಲ, ಆದರೆ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಕಾಪಾಡಲು ಇಡೀ ಜನತೆಯನ್ನು ಶಸ್ತ್ರಸಜ್ಜಿತಗೊಳಿಸಲಾಗುವುದು. ಒಂದು ರಾಷ್ಟ್ರೀಯ ಮಿಲಿಷಿಯಾವನ್ನು ಸಂಘಟಿಸಲಾಗುವುದು ಮತ್ತು ಪ್ರತಿಯೊಬ್ಬ ಪ್ರಜೆಯೂ ನಿರ್ದಿಷ್ಟ ಅವಧಿಯ ಮಿಲಿಟರಿ ತರಬೇತಿಯನ್ನು ಹೊಂದಲು ಪ್ರೇರೇಪಿಸಲಾಗುವುದು (ಹಿಸ್ಟರಿ 2005: 70–71) (ಅನುವಾದ ಲೇಖಕರದು).

ಕಾಂಗ್ರೆಸಿನ ಗಯಾ ಅಧಿವೇಶನವು ಈ ಕಾರ್ಯಕ್ರಮದ ಅಂಶಗಳನ್ನೇನೂ ಒಪ್ಪಿಕೊಳ್ಳಲಿಲ್ಲ. ಆದರೆ ಎರಡು ರೀತಿಯಲ್ಲಿ ಇದು ಪರಿಣಾಮ ಬೀರಿತು. ಒಂದು ಕಮ್ಯುನಿಸ್ಟ್ ಪಕ್ಷವಾಗಿ ರಾಷ್ಟ್ರೀಯ ಚಳುವಳಿಯ ಕುರಿತು ತನ್ನ ಧೋರಣೆಯನ್ನು ಸಾಕಷ್ಟು ಸ್ಪಷ್ಟವಾಗಿ ರಾಷ್ಟ್ರೀಯ ಕಾಂಗ್ರೆಸಿನ ಮುಂದಿಟ್ಟಿತು. ಎರಡನೆಯದಾಗಿ, ಸಾಕಷ್ಟು ಕಾಲದವರೆಗೆ ಭಾರತದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ಕಮ್ಯುನಿಸ್ಟರಿಗೆ ಇದೊಂದು ಮಾರ್ಗದರ್ಶಕ ಕೈಪಿಡಿಯ ರೀತಿಯಲ್ಲಿ ಸಹಾಯ ಮಾಡಿತು. ಗಯಾ ಅಧಿವೇಶನದಲ್ಲಿ ಕಮ್ಯುನಿಸಂನ ಪರ ವಿರೋಧದ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ರೂಪುಗೊಂಡವೆಂದರೆ, ಸಿಂಗಾರವೇಲು ಚೆಟ್ಟಿಯಾರ್ ಅವರು ಪ್ರತಿನಿಧಿಗಳನ್ನು 'ಕಾಮ್ರೇಡ್ಸ್' ಎಂದು ಸಂಭೋಧಿಸಿ ಮಾತನಾಡಿದರು. ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಕಾಂಗ್ರೆಸ್ ಒಪ್ಪಲಿಲ್ಲ ಮಾತ್ರವಲ್ಲ, ಕಮ್ಯುನಿಸ್ಟ್ ಪಕ್ಷ ಮುಂದಿಟ್ಟ ಸಾಮಾಜಿಕ ಮತ್ತು ಆರ್ಥಿಕ ಬೇಡಿಕೆಗಳನ್ನೂ ಸಹ ಒಪ್ಪಲಿಲ್ಲ. ಇದು ಕಾಂಗ್ರೆಸ್ ಒಳಗಿನ ಎಡಪಂಥೀಯ ಒಲವಿನ ಜನರಿಗೆ ಸ್ವಲ್ಪ ಬೇಸರವನ್ನು ಮೂಡಿಸಿತು.

ಅಸಹಕಾರ, ಕಾನೂನು ಭಂಗ, ಕ್ವಿಟ್ ಇಂಡಿಯಾ ಚಳುವಳಿಗಳು ಮತ್ತು ಕಮ್ಯುನಿಸ್ಟರು

ಅಸಹಕಾರ ಚಳುವಳಿಯನ್ನು ಮುಂದುವರೆಸುವ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದ ತೀರ್ಮಾನ ದೇಶದಲ್ಲಿ ಹೊಸ ಉತ್ಸಾಹ ತಂದಿತ್ತು. 1922 ರ ಫೆಬ್ರವರಿ 1 ರಂದು ವೈಸ್‌ರಾಯ್ ಲಾರ್ಡ್ ರೀಡಿಂಗ್‌ಗೆ ಗಾಂಧಿ ಪತ್ರ ಬರೆದು, ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡದಿದ್ದರೆ ಅಸಹಕಾರ ಚಳುವಳಿಯ ಅಂತಿಮ ಅಸ್ತ್ರವಾದ ತೆರಿಗೆ ನಿರಾಕರಣೆಯನ್ನು ಪ್ರಾರಂಭಿಸುವುದಾಗಿ ಎಚ್ಚರಿಕೆ ನೀಡಿದರು. ಇದರಿಂದ ಪ್ರಭಾವಿತರಾದ ರೈತಾಪಿ ಜನತೆಯಲ್ಲಿ ಅತ್ಯುತ್ಸಾಹ ಮೇಳೈಸಿತು. ಇಂತಹ ಸನ್ನಿವೇಶದಲ್ಲಿ ಚೌರಿ ಚೌರಾ ಘಟನೆ ನಡೆಯಿತು. ಬಾರ್ದೋಲಿಯಲ್ಲಿ ವಿಶೇಷ ಅಧಿವೇಶನ ಕರೆದು ಅಸಹಕಾರ ಚಳುವಳಿಯನ್ನು ಕಾಂಗ್ರೆಸ್ ವಾಪಸ್ ಪಡೆಯಿತು. ನಂತರ ಮಾರ್ಚ್‌ನಲ್ಲಿ ಗಾಂಧಿ ಬಂಧನವಾಯಿತು. ಈ ಘಟನೆಗಳು ದೇಶಾದ್ಯಂತ ವ್ಯಾಪಕವಾದ ಅತೃಪ್ತಿಯನ್ನು ಸೃಷ್ಟಿಸಿತು. ಸಾಮಾನ್ಯ ಜನರ ಹೋರಾಟಗಳನ್ನು ಮುಂದುವರೆಸುವುದರಲ್ಲಿ ಬಂಡವಾಳದಾರರ ನೇತೃತ್ವದಲ್ಲಿ ಕಾಂಗ್ರೆಸ್ ಅಸಮರ್ಥವಾಗಿದೆ ಎಂಬ ಕೂಗು ಎದ್ದಿತು. ಸುಭಾಷ್‌ಚಂದ್ರ ಬೋಸ್ ಅವರು ಲಂಡನ್‌ನಿಂದ 1935 ರಲ್ಲಿ ಪ್ರಕಟಿಸಿದ ಇಂಡಿಯನ್ ಸ್ಟ್ರಗಲ್ 1920–34 ಎಂಬ ತಮ್ಮ ಕೃತಿಯಲ್ಲಿ ಗಾಂಧಿ 'ದೇಶವ್ಯಾಪಿ ಚಳುವಳಿಯ ಕತ್ತು ಹಿಸುಕಿದರು' ಎಂದು ಆರೋಪಿಸಿದರು.

1924 ರ ಡಿಸೆಂಬರ್‌ನಲ್ಲಿ **ಬೆಳಗಾಂ ಕಾಂಗ್ರೆಸ್ ಅಧಿವೇಶನ**ದಲ್ಲಿ ಎಂ.ಎನ್.ರಾಯ್ ಅವರು ಬರೆದ 'ಅಪೀಲ್ ಟು ದಿ ನ್ಯಾಷನಲಿಸ್ಟ್ಸ್' ಎಂಬ ಹೆಸರಿನ ಕರಪತ್ರವನ್ನು ಹಂಚಲಾಯಿತು. ಬಾಂಬೆಯ ಕೆ.ಎನ್.ಜೋಗಳೇಕರ್ ಅವರ ಹೆಸರಿನಲ್ಲಿ, ಜೆ.ಪಿ.ಬಗೇರ್‌ಹಟ್ಟಾ ಮತ್ತು ಅರ್ಜುನ್‌ಲಾಲ್ ಸೇಥಿ (ಇವರಿಬ್ಬರೂ ಎಐಸಿಸಿ ಸದಸ್ಯರು) ಇದನ್ನು ಪ್ರಕಟಿಸಿದರು. ಇದರಲ್ಲಿ ರಾಯ್ ಅವರು ಕಾಂಗ್ರೆಸ್‌ನೊಳಗಿದ್ದ ಕ್ರಾಂತಿಕಾರಿ ರಾಷ್ಟ್ರೀಯವಾದಿಗಳಿಗೆ ಒಂದು ಕ್ರಾಂತಿಕಾರಿ ಕಾರ್ಯಕ್ರಮವನ್ನು ರೂಪಿಸುವಂತೆ ಕರೆ ನೀಡಿದರು. ಒಂದು ಕ್ರಾಂತಿಕಾರಿ ರಾಷ್ಟ್ರೀಯವಾದಿ ಪಕ್ಷಕ್ಕೆ ಬೇಕಾದ ಹತ್ತು ಅಂಶಗಳನ್ನು ಅಧಿವೇಶನದಲ್ಲಿ ಕಾಂಗ್ರೆಸ್ ಒಪ್ಪಿಕೊಳ್ಳುವಂತೆ ಸೂಚಿಸಿದರು. ಅವರಲ್ಲಿ ಮತ್ತೊಮ್ಮೆ

ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಪ್ರಧಾನವಾಗಿ ಪ್ರಸ್ತಾಪಿಸಿದರು ((ಹಿಸ್ಟರಿ 2005: 83). ಅವುಗಳು ಈ ರೀತಿ ಇವೆ:

1. ರಾಷ್ಟ್ರೀಯ ಸ್ವಾತಂತ್ರ್ಯ: ಸಾಮ್ರಾಜ್ಯದಿಂದ ಸಂಪೂರ್ಣವಾಗಿ ಕಡಿತಗೊಳ್ಳುವುದು; ಸಾರ್ವತ್ರಿಕ ಮತದಾನವನ್ನು ಆಧರಿಸಿದ ಪ್ರಜಾಪ್ರಭುತ್ವ ಗಣರಾಜ್ಯದ ಸ್ಥಾಪನೆ.
2. ಊಳಿಗಮಾನ್ಯ ಮತ್ತು ಜಮೀನ್ದಾರಿ ಪದ್ಧತಿಯ ರದ್ಧತಿ.
3. ಭೂಮಿಯ ರಾಷ್ಟ್ರೀಕರಣ: ಊಳುವವರನ್ನು ಹೊರತುಪಡಿಸಿ ಬೇರಾರಿಗೂ ಭೂಮಿ ಒಡೆತನದ ಹಕ್ಕಿಲ್ಲ.
4. ಪ್ರಭುತ್ವದ ಸಹಕಾರದಿಂದ ಕೃಷಿಯ ಆಧುನೀಕರಣ.
5. ಗಣಿಗಳು ಮತ್ತು ಸಾರ್ವಜನಿಕ ಸೇವೆಗಳ ರಾಷ್ಟ್ರೀಕರಣ.
6. ಆಧುನಿಕ ಕೈಗಾರಿಕೆಗಳ ಬೆಳವಣಿಗೆ.
7. ಕಾರ್ಮಿಕರಿಗೆ ರಕ್ಷಣ: ಕನಿಷ್ಟ ವೇತನ; ಎಂಟು ಗಂಟೆ ಕೆಲಸ; ಬಾಲ ಕಾರ್ಮಿಕ ಪದ್ಧತಿ ರದ್ಧತಿ; ವಿಮೆ; ಮತ್ತು ಇತರೆ ಮುಂದುವರೆದ ಸಾಮಾಜಿಕ ಶಾಸನಗಳು.
8. ಉಚಿತ ಮತ್ತು ಕಡ್ಡಾಯ ಶಿಕ್ಷಣ.
9. ಧಾರ್ಮಿಕ ಮತ್ತು ಪೂಜೆಯ ಸ್ವಾತಂತ್ರ್ಯ.
10. ಅಲ್ಪಸಂಖ್ಯಾತರ ಹಕ್ಕುಗಳು.

ಬೆಳಗಾಂ ಅಧಿವೇಶನವು ಅಧಿಕೃತವಾಗಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡಿತು. 'ಸಂಪೂರ್ಣ ಸ್ವಾತಂತ್ರ್ಯ'ಕ್ಕೆ ಬದಲಾಗಿ 'ಬ್ರಿಟಿಷ್ ಸಾಮ್ರಾಜ್ಯದೊಳಗೆ ಸಮಾನ ಪಾಲುದಾರ'ರನ್ನಾಗಿ ಮಾಡಲು ಗಾಂಧಿ ಪ್ರಸ್ತಾಪವನ್ನಿಟ್ಟರು. ಬೆಳಗಾವಿ ಅಧಿವೇಶನದ ಸಂದರ್ಭಕ್ಕೆ ರಷ್ಯಾದಲ್ಲಿ ಲೆನಿನ್ ನಿಧನರಾಗಿದ್ದರು. ಅಧಿವೇಶನದಲ್ಲಿ **ಲೆನಿನ್ ಶ್ರದ್ಧಾಂಜಲಿ ನಿರ್ಣಯವನ್ನು ಸೋಲಿಸಿದ ಪ್ರಸಂಗ** ನಡೆಯಿತು. ನಿರ್ಣಯವನ್ನು ಜಹಾಂಗೀರ್ ಪಟೇಲ್ ಮಂಡಿಸಿದರು ಮತ್ತು ಅದನ್ನು ಅತುಲ್ ಸೇನ್ ಅನುಮೋದಿಸಿದರು. ಆದರೆ ಅದನ್ನು ಹಲವಾರು ಮುಖಂಡರು ವಿರೋಧಿಸಿದರು. ಶ್ರದ್ಧಾಂಜಲಿ ನಿರ್ಣಯವನ್ನು ವಿಠಲ್‌ಭಾಯ್ ಪಟೇಲ್, ಸರ್ದಾರ್ ಮಂಗಲ್ ಸಿಂಗ್, ಶಿವಪ್ರಸಾದ್ ಗುಪ್ತ, ಮೌಲ್ವಿ ಜಫರ್ ಅಲಿ ಖಾನ್ ಮುಂತಾದವರು ಬೆಂಬಲಿಸಿದರೆ, ಮೋತಿಲಾಲ್ ನೆಹರೂ, ಸಿ.ರಾಜಗೋಪಾಲಾಚಾರಿ, ಡಾ.ಖಾರೆ ಮುಂತಾದವರು ವಿರೋಧಿಸಿದರು. ಗಾಂಧಿ ಸಹ ಪ್ರಸ್ತಾಪದ ಬಗ್ಗೆ ಸಹಮತವನ್ನು ಹೊಂದಿರಲಿಲ್ಲ. ಕೊನೆಗೆ 63 ಮತ್ತು 54 ಮತಗಳ ವಿಭಜನೆಯಲ್ಲಿ ನಿರ್ಣಯಕ್ಕೆ ಸೋಲಾಯಿತು (ಅಧಿಕಾರಿ 1974: 431). ಬೃಹತ್ ಸಾಮ್ರಾಜ್ಯದ ವಿರುದ್ಧ ಜನತೆಯ ಕ್ರಾಂತಿಯನ್ನು ಸಂಘಟಿಸಿದ ನಾಯಕನೊಬ್ಬನಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯವನ್ನು ಸೋಲಿಸುವ ಒತ್ತಡದಲ್ಲಿ ಕಾಂಗ್ರೆಸ್ ಇದ್ದದ್ದು ಏಕೆಂದರೆ, ಕಮ್ಯುನಿಸ್ಟ್ ಚಟುವಟಿಕೆಗಳನ್ನು ಅದು ಆತಂಕದಿಂದಲೇ ನೋಡುತ್ತಿತ್ತು ಮತ್ತು ಲೆನಿನ್ ಶ್ರದ್ಧಾಂಜಲಿ ನಿರ್ಣಯಕ್ಕೆ ಸಿಗುವ ಗೆಲುವು ಕಮ್ಯುನಿಸ್ಟರಿಗೆ ಸ್ಫೂರ್ತಿಯನ್ನು ಕೊಡುತ್ತದೆ ಎಂದು ಕಾಂಗ್ರೆಸ್ ನಾಯಕತ್ವ ಭಾವಿಸಿತ್ತು. ಈ ರೀತಿ ಇದ್ದಾಗಲೂ ಮತಗಳ ಅಂತರ ಕಮ್ಯುನಿಸ್ಟರ ದೃಷ್ಟಿಯಿಂದ ಆಶಾದಾಯಕ ಪರಿಸ್ಥಿತಿಯನ್ನು ಸೂಚಿಸುತ್ತಿತ್ತು.

ನಾಗರಿಕ ಕಾಯಿದೆ ಭಂಗ ಚಳುವಳಿಗೆ ಕಾಂಗ್ರೆಸ್ ಕರೆ ಕೊಡುವಷ್ಟರಲ್ಲಿ ದೇಶದಲ್ಲಿ ಸಿಪಿಐ ಸ್ಥಾಪನೆಯಾಗಿ ಚಟುವಟಿಕೆಗಳು ಹೆಚ್ಚಾಗಿದ್ದವು. ಸೈಮನ್ ಕಮಿಷನ್ ವರದಿಯ ವಿರುದ್ಧ ದೇಶವ್ಯಾಪಿ ಅತೃಪ್ತಿ ಬೆಳೆಯುತ್ತಿತ್ತು. ಇದರ ತೀವ್ರತೆಯನ್ನು ಅರಿತ ವೈಸ್‌ರಾಯ್ ಇರ್ವಿನ್ ಅವರು ದುಂಡು ಮೇಜಿನ ಸಭೆಯನ್ನು ಕರೆಯಲು ತೀರ್ಮಾನಿಸಿದರು. ಕಾಂಗ್ರೆಸ್‌ನಲ್ಲಿದ್ದ ಮಂದಗಾಮಿಗಳು ಡೊಮಿನಿಯನ್ ಸ್ಥಾನಮಾನ ಗಳಿಸುವ ಭರವಸೆಯ ಮೇಲೆ ಇದಕ್ಕೆ ಸಮ್ಮತಿಸಿದರು. ಸುಭಾಷ್‌ಚಂದ್ರ ಬೋಸರು ಇದಕ್ಕೆ ಸಹಿ ಹಾಕಲಿಲ್ಲ. ಕಾಂಗ್ರೆಸ್‌ನ ಬೇಡಿಕೆಯನ್ನು ಬ್ರಿಟಿಷರು ತಿರಸ್ಕರಿಸಿದರು. ಇಂತಹ ಸಂದರ್ಭದಲ್ಲಿ ಡಿಸೆಂಬರ್ 1929 ರಲ್ಲಿ ಲಾಹೋರ್ ಕಾಂಗ್ರೆಸ್ ಅಧಿವೇಶನ ನಡೆಯಿತು. ಅಧ್ಯಕ್ಷತೆಯನ್ನು ಜವಹರಲಾಲ್ ನೆಹರೂ ವಹಿಸಿದ್ದರು15. ಲಾಹೋರ್ ಅಧಿವೇಶನವು 1929 ರ ಡಿಸೆಂಬರ್ 31 ರಂದು ಸಂಪೂರ್ಣ ಸ್ವರಾಜ್ಯದ ನಿರ್ಣಯವನ್ನು ಅಂಗೀಕರಿಸಿತು. ಈ ನಡುವೆ ಜಾಗತಿಕ ಆರ್ಥಿಕ ಕುಸಿತ ಉಂಟಾಗಿ ಭಾರತದ ಮೇಲೂ ಅದರ ಪರಿಣಾಮ ತೀವ್ರವಾಗಿ ಆಯಿತು. ಈ ಹಿನ್ನೆಲೆಯಲ್ಲಿ ಗಾಂಧಿಯವರು ಹನ್ನೊಂದು ಅಂಶಗಳ 'ಅಂತಿಮ ಗಡುವಿನ' ಬೇಡಿಕೆಯನ್ನು ಇರ್ವಿನ್ ಮುಂದಿಟ್ಟರು. ಇವೆಲ್ಲವೂ ಆರ್ಥಿಕ ಸ್ವರೂಪದ ಬೇಡಿಕೆಗಳಾಗಿದ್ದವು. ಉದಾಹರಣೆಗೆ, ಉಪ್ಪಿನ ತೆರಿಗೆ ರದ್ಧತಿ, ಭೂ ಕಂದಾಯ ಅರ್ಧದಷ್ಟು ಇಳಿಕೆ, ದೇಶೀ ಜವಳಿ ಉದ್ದಿಮೆಯ ರಕ್ಷಣೆ, ಇತ್ಯಾದಿ ಅಂಶಗಳಿದ್ದವು. ಸಂಪೂರ್ಣ ಸ್ವರಾಜ್ಯದ ನಿರ್ಣಯಕ್ಕೆ ಹೋಲಿಸಿದರೆ ಇದು ಹೊಂದಾಣಿಕೆ ಕ್ರಮವಾಗಿತ್ತು ಎನ್ನಲಾಗಿದೆ. ಇ.ಎಂ.ಎಸ್.ನಂಬೂದಿರಿಪಾದ್ ಅವರು, 'ಈ ಹನ್ನೊಂದು ಅಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವುಗಳ ಹಿಂದಿರುವ ವರ್ಗ ಹಿತಾಸಕ್ತಿಗಳನ್ನು ಅದು ಬಹಿರಂಗ ಪಡಿಸುತ್ತದೆ. ಬಹುತೇಕ ಇವು ಕೈಗಾರಿಕಾ ಮತ್ತು ವಾಣಿಜ್ಯ ಬಂಡವಾಳದಾರರು ಎತ್ತಿರುವ ಬೇಡಿಕೆಗಳಾಗಿವೆ' ಎಂದು ವಿಶ್ಲೇಷಿಸಿದರು (ಇಎಂಎಸ್ 1986: 259).

ಲಾಹೋರ್ ಅಧಿವೇಶನದ ನಿರ್ಣಯವನ್ನು ಅನುಸರಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ದೇಶವ್ಯಾಪಿ ನಾಗರೀಕ ಕಾಯ್ದೆ ಭಂಗ ಚಳುವಳಿಯನ್ನು ಆರಂಭಿಸಲು ಗಾಂಧಿಯವರಿಗೆ ಅಧಿಕಾರ ನೀಡಿತು. ದಂಡಿ ಸತ್ಯಾಗ್ರಹದ ಮೂಲಕ ಇದನ್ನು ಗಾಂಧಿ ಆರಂಭಿಸಿದರು. ದೇಶಾದ್ಯಂತ ಎದ್ದ ಚಳುವಳಿಗಳ ಅಲೆಯನ್ನು ಬ್ರಿಟಿಷರು ಅಮಾನುಷವಾಗಿ ಹತ್ತಿಕ್ಕಲು ಶುರು ಮಾಡಿದರು. ಮೇ 4 ರಂದು ಗಾಂಧಿಯನ್ನು ಬಂಧಿಸಿ ಯರವಾಡ ಜೈಲಿಗೆ ಕಳುಹಿಸಿದರು. ನೆಹರೂ ಮುಂತಾದವರನ್ನು ಬಂಧಿಸಿದರು. ಈ ಚಳುವಳಿಯು ಕೇವಲ ಅಹಿಂಸಾತ್ಮಕ ಮಾತ್ರ ಆಗಿರಲಿಲ್ಲ. 1930 ರಲ್ಲಿ 50 ಕ್ಕೂ ಹೆಚ್ಚು 'ಭಯೋತ್ಪಾದಕ' (ಎಂದು ಕರೆಯಲಾಗಿರುವ ಕ್ರಾಂತಿಕಾರಿ) ಚಟುವಟಿಕೆಗಳು ನಡೆದಿವೆ (ಹಿಸ್ಟರಿ 2005: 158). 1930 ರ ಏಪ್ರಿಲ್ 18 ರಂದು ಕ್ರಾಂತಿಕಾರಿ ಸೂರ್ಯಸೇನ್ ನೇತೃತ್ವದಲ್ಲಿ ಚಿತ್ತಗಾಂಗ್ ಶಸ್ತ್ರಾಸ್ತ್ರ ಕೋಠಿ ದಾಳಿ ಈ ಸಾಲಿನಲ್ಲೇ ನಿಲ್ಲುವ ಚಳುವಳಿ. ಯುವ ಮಹಿಳಾ ಕ್ರಾಂತಿಕಾರಿಗಳಾದ ಕಲ್ಪನಾ ದತ್ ಮತ್ತು ಪ್ರೀತಿಲತಾ ವಡ್ಡಾದರ್ ಎಂಬುವರು ಇದರಲ್ಲಿ ವೀರೋಚಿತ ಪಾತ್ರವನ್ನು ವಹಿಸಿದರು.

ಈ ಕಾಲಘಟ್ಟದ ಹೆಸರಾಂತ ಕ್ರಾಂತಿಕಾರಿ ಭಗತ್‌ಸಿಂಗ್. ಇವರು 1926 ರಲ್ಲೇ ಸಮಾಜವಾದಿ ಚಿಂತನೆಯ ಆಧಾರದಲ್ಲಿ ನೌಜವಾನ್ ಭಾರತ್ ಸಭಾ ಸ್ಥಾಪಿಸಿದರು. 1928 ರಲ್ಲಿ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್

ಆರ್ಮಿಯನ್ನು ಸ್ಥಾಪಿಸುವುದರಲ್ಲಿಯೂ ಇವರು ಪಾತ್ರ ವಹಿಸಿದರು. ಶಿವ ವರ್ಮ, ಜತಿನ್‌ದಾಸ್, ಅಜಯ್ ಘೋಷ್ (ಇವರು ಮುಂದೆ ಸಿಪಿಐನ ಪ್ರಧಾನ ಕಾರ್ಯದರ್ಶಿಯಾದರು), ಫಣೀಂದ್ರನಾಥ್ ಘೋಷ್, ಸುಖದೇವ್ ಮತ್ತು ರಾಜಗುರು ಮುಂತಾದವರು ಭಗತ್‌ಸಿಂಗ್‌ನ ಸಂಗಾತಿಗಳಾಗಿದ್ದರು. ಇವರೆಲ್ಲರೂ ಹೊಸ ವಿಚಾರಧಾರೆಗಳಿಗೆ ತಮ್ಮನ್ನು ತೆರೆದುಕೊಂಡಿದ್ದರು. ಅದರಲ್ಲೂ ನಿರ್ದಿಷ್ಟವಾಗಿ, ಭಗತ್‌ಸಿಂಗ್ ತೀವ್ರವಾದ ಮಾರ್ಕ್ಸ್‌ವಾದಿಯಾಗಿದ್ದರು. ಹಾಗೆ ನೋಡಿದರೆ ಈ ಪೀಳಿಗೆಗಿಂತ ಹಿಂದಿನ ಹಲವಾರು ಕ್ರಾಂತಿಕಾರಿಗಳು ಸಾಕಷ್ಟು ಹಿಂದೂ ಧಾರ್ಮಿಕತೆಯ ಚಿಂತನೆಯನ್ನು ಹೊಂದಿದ್ದರು. ಅದಕ್ಕೆ ಹೋಲಿಸಿದರೆ ಭಗತ್‌ಸಿಂಗ್ ಒಂದು ರೀತಿಯಲ್ಲಿ ಮಿಲಿಟೆಂಟ್ ನಾಸ್ತಿಕತೆಯನ್ನು ಹೊಂದಿದ್ದರು. ಕೋರ್ಟಿನಲ್ಲಿ ವಿಚಾರಣೆ ಸಂದರ್ಭದಲ್ಲಿ 'ಕ್ರಾಂತಿ' ಎಂದರೇನು ಎಂದು ಕೇಳಿದ ಪ್ರಶ್ನೆಗೆ, ಭಗತ್ ಸಿಂಗ್ ಕೊಟ್ಟ ಉತ್ತರ ಹೀಗಿತ್ತು:

> ಕ್ರಾಂತಿಯೆಂದರೆ, ಅನಿವಾರ್ಯವಾದ ರಕ್ತಪಾತದ ಹೋರಾಟವನ್ನು ಒಳಗೊಂಡಿಲ್ಲ ಅಥವಾ ವೈಯುಕ್ತಿಕ ಹಗೆತನಕ್ಕೂ ಅದರಲ್ಲಿ ಜಾಗವಿಲ್ಲ. ಇದು ಬಾಂಬು ಮತ್ತು ಬಂದೂಕುಗಳ ಪಂಥವಲ್ಲ. ನಮ್ಮ ದೃಷ್ಟಿಯಲ್ಲಿ ಕ್ರಾಂತಿಯೆಂದರೆ, ಸ್ಪಷ್ಟವಾಗಿ ಅನ್ಯಾಯದ ಬುನಾದಿಯ ಮೇಲೆ ನಿಂತಿರುವ ಪ್ರಸ್ತುತ ವ್ಯವಸ್ಥೆ ಬದಲಾಗಬೇಕು, ಎಂಬುದು. ಉತ್ಪಾದಕರು ಅಥವಾ ಶ್ರಮಿಕರು ನಮ್ಮ ಸಮಾಜದ ಅತ್ಯಂತ ಅನಿವಾರ್ಯ ಪ್ರಾಥಮಿಕ ಅಂಶವಾಗಿದ್ದರೂ, ಅವರ ಶ್ರಮದ ಫಲಗಳನ್ನು ಮತ್ತು ಅವರ ಪ್ರಾಥಮಿಕ ಹಕ್ಕುಗಳನ್ನು ಶೋಷಕರು ಲೂಟಿ ಮಾಡಿದ್ದಾರೆ. ಎಲ್ಲರಿಗೂ ಧವಸ ಬೆಳೆಯುವ ರೈತ ತನ್ನ ಕುಟುಂಬದೊಂದಿಗೆ ಹಸಿವಿನಲ್ಲಿದ್ದಾನೆ, ಜಗತ್ತಿನ ಮಾರುಕಟ್ಟೆಗೆ ಜವಳಿ ಬಟ್ಟೆಗಳನ್ನು ಪೂರೈಸುವ ನೇಕಾರ ತನಗೂ ಮತ್ತು ತನ್ನ ಮಕ್ಕಳಿಗೂ ಬಟ್ಟೆಯಿಲ್ಲದೇ ಇದ್ದಾನೆ, ಅದ್ಭುತವಾದ ಮಹಲುಗಳನ್ನು ಕಟ್ಟುವ ಗಾರೆಯವರು, ಮರಗೆಲಸಗಾರರು, ಅಕ್ಕಸಾಲಿಗರು ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕೆಳ ಜಾತಿಗಳ ಹಾಗೆ ಬದುಕುತ್ತಿದ್ದಾರೆ. ಬಂಡವಾಳದಾರರು ಮತ್ತು ಶೋಷಕರು, ಸಮಾಜದ ಪರಾವಲಂಬಿಗಳು, ತಮಗಿಷ್ಟ ಬಂದ ಹಾಗೆ ಮಿಲಿಯಾಂತರ ಲೂಟಿ ಮಾಡುತ್ತಿದ್ದಾರೆ. ಈ ಭಯಂಕರ ಅಸಮಾನತೆಗಳು ಮತ್ತು ಬಲವಂತದ ಅವಕಾಶಗಳ ಅಸಮಾನತೆಗಳು ಅವ್ಯವಸ್ಥೆಗೆ ಹೋಗುವುದು ಖಂಡಿತ. ಈ ಪರಿಸ್ಥಿತಿಗಳು ಹೆಚ್ಚು ಕಾಲ ಮುಂದುವರಿಯುವ ಹಾಗಿಲ್ಲ . . . ವಿದೇಶೀ ಮತ್ತು ಭಾರತೀಯ ಎರಡೂ ಬಂಡವಾಳಶಾಹಿಯನ್ನು ಕಿತ್ತೊಗೆಯುವುದು ಮತ್ತು ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸುವುದರಲ್ಲಿ ಕೊನೆಗೊಳ್ಳುವ ಸಮಾಜದ ಸಂಪೂರ್ಣ ಬದಲಾವಣೆ . . . ಶ್ರಮಜೀವಿಗಳೇ ಸಮಾಜದ ನಿರ್ಮಾತೃಗಳು . . . ಈ ಕ್ರಾಂತಿಯ ಬಲಿಪೀಠಕ್ಕೆ ನಮ್ಮ ಯೌವನವನ್ನು ಧೂಪವನ್ನಾಗಿ ಸಮರ್ಪಿಸುತ್ತಿದ್ದೇವೆ, ಏಕೆಂದರೆ ಇಂತಹ ಮಹೋನ್ನತವಾದ ಧ್ಯೇಯಕ್ಕೆ ಯಾವುದೇ ಬಲಿದಾನಗಳೂ ತುಂಬಾ ದೊಡ್ಡವಲ್ಲ. . . ಕ್ರಾಂತಿಯ ಬರುವಿಕೆಯನ್ನು ನಾವು ನಿರೀಕ್ಷಿಸುತ್ತೇವೆ. 'ಕ್ರಾಂತಿ ಚಿರಾಯುವಾಗಲಿ'[16].

ತನ್ನ ಅಂತಿಮ ದಿನಗಳಲ್ಲಿ ಮಾರ್ಕ್ಸ್‌ವಾದವನ್ನು ತೀವ್ರವಾಗಿ ಅಭ್ಯಾಸ ಮಾಡಿದ ಭಗತ್‌ಸಿಂಗ್ 'ನಾನೇಕೆ ನಾಸ್ತಿಕ' ಎಂಬ ಪುಸ್ತಕವನ್ನು ಬರೆದರು. ಭಗತ್ ಸಿಂಗ್ ಮತ್ತು ಗೆಳೆಯರ ನೇಣು ಪ್ರಕರಣವು ದೇಶದಲ್ಲಿ ಕ್ರಾಂತಿಕಾರಿ ಚಳುವಳಿಗೆ ಪ್ರೇರಣೆ ನೀಡಿತು. ಇವರ ಹಲವು ಅನುಯಾಯಿಗಳು ಮುಂದೆ ಸಿಪಿಐಗೆ ಸೇರ್ಪಡೆಯಾದರು.

ಗಾಂಧಿಯ ಬಂಧನವನ್ನು ವಿರೋಧಿಸಿ ಮಹಾರಾಷ್ಟ್ರದ ಸೋಲಾಪುರದಲ್ಲಿ ಜವಳಿ ಕಾರ್ಮಿಕರು ಮುಷ್ಕರಕ್ಕಿಳಿದರು. ಇದು ಎಷ್ಟು ತೀವ್ರವಾಯಿತೆಂದರೆ, ಕಾರ್ಮಿಕರು ಮತ್ತು ಪೊಲೀಸರ ನಡುವೆ ಕಾಳಗವೇ ನಡೆಯಿತು. ಸೋಲಾಪುರ ದಂಗೆಯ ನಾಯಕತ್ವದಲ್ಲಿದ್ದ ಮಹಪ್ಪ ಧನಸೆಟ್ಟಿ, ಖುರ್ಬಾನ್ ಹುಸೇನ್, ಶ್ರೀಕೃಷ್ಣ ಶಾರದ ಮತ್ತು ಜಗನ್ನಾಥ್ ಶಿಂಧೆ ಇವರುಗಳನ್ನು 1931 ರ ಜುಲೈ 12 ರಂದು ಗಲ್ಲಿಗೇರಿಸಲಾಯಿತು. ಈ ರೀತಿ ದೇಶದ ಉದ್ದಗಲಕ್ಕೂ ಕಾರ್ಮಿಕರು ಮತ್ತು ಮುಖ್ಯವಾಗಿ ಗ್ರಾಮೀಣ ಜನರು ಬ್ರಿಟಿಷರ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿದರು. ಅಸಹಕಾರ ಚಳುವಳಿಗಿಂತ ಹೆಚ್ಚಿನ ಜನರು ಈ ಹೋರಾಟದಲ್ಲಿದ್ದರು. ಈ ನಡುವೆ ಬಂಡವಾಳದಾರರು ಮತ್ತು ವ್ಯಾಪಾರಿ ವರ್ಗಗಳ ಒತ್ತಡಕ್ಕೆ ಬಿದ್ದ ಕಾಂಗ್ರೆಸ್‌ನ ಮಿತವಾದಿಗಳು ಬ್ರಿಟಿಷರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮುಂದಾದರು[17]. ಕೊನೆಗೆ 1931 ರ ಮಾರ್ಚ್ 5 ರಂದು ಗಾಂಧಿ–ಇರ್ವಿನ್ ಒಪ್ಪಂದ ಏರ್ಪಟ್ಟು ಕಾಯಿದೆ ಭಂಗ ಚಳುವಳಿಯನ್ನು ಕಾಂಗ್ರೆಸ್ ಹಿಂಪಡೆದು ದುಂಡು ಮೇಜಿನ ಸಭೆಯಲ್ಲಿ ಗಾಂಧಿ ಭಾಗವಹಿಸಿದರು[18]. ಈ ವೇಳೆಗೆ ಕಾಂಗ್ರೆಸ್‌ನ ಸಿದ್ಧಾಂತ ಮತ್ತು ಕಾರ್ಯಾಚರಣೆಯನ್ನು ಅನುಸರಿಸಲು ಕಮ್ಯುನಿಸ್ಟರಿಗೆ ಅಸಾಧ್ಯವಾದ ಭಿನ್ನಾಭಿಪ್ರಾಯಗಳು ಉಂಟಾಗಿದ್ದವು. ಉಪ್ಪಿನ ಸತ್ಯಾಗ್ರಹವು 'ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟವನ್ನು ನಿಯಂತ್ರಿಸುವ ಜಾಣ ಸಾಧನವಾಗಿದೆ... ಗಾಂಧಿವಾದಿ ಬಹಿಷ್ಕಾರವು ಮೂಲದಲ್ಲಿ ಭಾರತದ ಕ್ರಾಂತಿಯ ಬಹಿಷ್ಕಾರವಾಗಿದೆ ಮತ್ತು ಆ ಮೂಲಕ ಭಾರತದಲ್ಲಿ ಬ್ರಿಟಿಷ್ ವಸಾಹತು ಅಧಿಕಾರದ ವಿಜಯಕ್ಕೆ ಸಹಾಯ ಮಾಡುವ ಲೆಕ್ಕಾಚಾರವನ್ನು ಹೊಂದಿದೆ' ಎಂಬ ಅಭಿಪ್ರಾಯಗಳು ಬಂದವು. ವೀರೇಂದ್ರನಾಥ ಚಟ್ಟೋಪಾಧ್ಯಾಯ ಅವರಂತೂ 'ಈಗ ನಡೆಯುತ್ತಿರುವ ನಿಜವಾದ ಹೋರಾಟವು ಕಾಂಗ್ರೆಸ್ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ನಡುವಿನದಲ್ಲ, ಬದಲಿಗೆ ಕಾಂಗ್ರೆಸ್ ಮತ್ತು ಭಾರತದ ಕ್ರಾಂತಿಕಾರಿ ಚಳುವಳಿ ನಡುವಿನದು' ಎಂದು ವಾದಿಸಿದರು[19]. ಗಾಂಧಿ, ನೆಹರೂ ಮತ್ತು ಬೋಸ್ ಅವರ ನಿಲುವುಗಳನ್ನು ಸಿಪಿಐ ತೀವ್ರವಾಗಿ ಖಂಡಿಸಿತು. ಮೀರತ್ ಮೊಕದ್ದಮೆಯ ಖೈದಿಗಳು ಕಾಯಿದೆ ಭಂಗ ಚಳುವಳಿ ಮತ್ತು ಗಾಂಧಿಯ ನಿಲುವನ್ನು ತೀವ್ರವಾಗಿ ಟೀಕಿಸಿದರು. ಕರಾಚಿ ಅಧಿವೇಶನದ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ನಿಷ್ಪ್ರಯೋಜಕಗೊಳಿಸಲಾಯಿತೆಂದು ಕಮ್ಯುನಿಸ್ಟರು ಭಾವಿಸಿದರು. ಎಂ.ಎನ್.ರಾಯ್ ಅವರು ಕಾಯಿದೆ ಭಂಗ ಚಳುವಳಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು. ಆದರೆ ಭಾರತದ ಕಮ್ಯುನಿಸ್ಟರು ಇದನ್ನು ತಿರಸ್ಕರಿಸಿದರು. ಆದರೂ ಹಲವಾರು ಕಡೆಗಳಲ್ಲಿ ಕಮ್ಯುನಿಸ್ಟರ ಗುಂಪುಗಳು ಈ ಚಳುವಳಿಯಲ್ಲಿ ತೊಡಗಿಸಿಕೊಂಡರು. ಜೊತೆಗೆ ಕಾಯಿದೆ ಭಂಗದಲ್ಲಿ ಭಾಗವಹಿಸಿ ನಂತರ ಕಮ್ಯುನಿಸ್ಟರಾದರು. ಅಂತಹವರಲ್ಲಿ ಪಂಜಾಬಿನಲ್ಲಿ ಹರ್ಕಿಷನ್‌ಸಿಂಗ್ ಸುರ್ಜಿತ್, ಬಂಗಾಳದಲ್ಲಿ ಬಿನೊಯ್ ಕೋನಾರ್, ಸರೋಜ್ ಮುಖರ್ಜಿ ಮತ್ತು ಬಂಕಿಮ್ ಮುಖರ್ಜಿ, ಅಬ್ದುರ್ ರೆಜಾಕ್ ಖಾನ್ ಮತ್ತು ಮೋನಿ ಸಿಂಗ್ ಕೆಲವರು.

ಬಾಂಬೆಯಲ್ಲಿ ಕಾಯಿದೆ ಭಂಗದಲ್ಲಿ ಸೇರಬೇಕೋ ಬೇಡವೋ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಎಸ್.ವಿ.ದೇಶಪಾಂಡೆ ಅಂತಹವರು ಕಾಂಗ್ರೆಸ್‌ನೊಂದಿಗೆ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೇ ಚಳುವಳಿಯಲ್ಲಿ ತೊಡಗಬೇಕು, ಇಲ್ಲದಿದ್ದರೆ ಕಮ್ಯುನಿಸ್ಟರು ಜನರಿಂದ ದೂರವಾಗುವಂತಾಗುತ್ತದೆ ಎಂದು ಹೇಳಿದರು. ಇದಕ್ಕೆ

ಬಿ.ಟಿ.ರಣದಿವೆ ಒಪ್ಪಲಿಲ್ಲ. ಎಸ್.ಜಿ.ಸರ್ದೇಸಾಯ್ ಮುಂತಾದವರು ಕಾಯಿದೆ ಭಂಗದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಕೇರಳದಲ್ಲಿ ಕೇಳಪ್ಪನ್ ಅವರು 32 ಜನರ ತಂಡದೊಂದಿಗೆ ಕಲ್ಲಿಕೋಟೆಯಿಂದ ಉಪ್ಪಿನ ಸತ್ಯಾಗ್ರಹ ಜಾಥಾವನ್ನು 1930 ರ ಏಪ್ರಿಲ್ 13 ರಂದು ಸಂಘಟಿಸಿದರು. ಇದರಲ್ಲಿ ಐದು ಜನ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಾದರು. ಕೇರಳದ ಕಮ್ಯುನಿಸ್ಟ್ ಪಕ್ಷದ ಮೊದಲ ಕಾರ್ಯದರ್ಶಿಯಾದ ಪಿ.ಕೃಷ್ಣಪಿಳ್ಳೈ ಅವರು 1930 ರ ನವೆಂಬರ್ 11 ರಂದು ಕಲ್ಲಿಕೋಟೆ ತೀರದಲ್ಲಿ 'ರಾಷ್ಟ್ರ ಧ್ವಜ' ರಕ್ಷಣೆಯ ವಿಚಾರದಲ್ಲಿ ಪೊಲೀಸರೊಂದಿಗೆ ಹೋರಾಟ ಮಾಡಿದರು20. ಶಾಲಾ ಶಿಕ್ಷಕರಾಗಿದ್ದ ಎ.ಕೆ.ಗೋಪಾಲನ್ ಅವರು ಗುರುವಾಯೂರ್ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಇದೇ ಸಂದರ್ಭದಲ್ಲಿ ಗುರುವಾಯೂರ್ ದೇವಸ್ಥಾನ ಪ್ರವೇಶ ಸತ್ಯಾಗ್ರಹದಲ್ಲಿ ಇ.ಎಂ.ಎಸ್.ನಂಬೂದಿರಿಪಾದ್ ಅವರು ಪಾಲ್ಗೊಂಡರು. ಕೃಷ್ಣ ಪಿಳ್ಳೈ ಅವರೊಂದಿಗೆ ಇ.ಎಂ.ಎಸ್. ಸಹ ಜೈಲು ಸೇರಿದರು. ಇವರೆಲ್ಲ ಜೈಲಿನಿಂದ ಬಂದ ನಂತರ 1934 ರಲ್ಲಿ ಕೇರಳದಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಯ ಶಾಖೆಯನ್ನು ಆರಂಭಿಸಿದರು ಮತ್ತು ಕೇರಳ ಘಟಕದ ನಾಯಕತ್ವನ್ನು ಹಿಡಿದರು. ಆಂಧ್ರದಲ್ಲಿ ಪಿ.ಸುಂದರಯ್ಯ ಬಂಧನಕ್ಕೊಳಗಾದರು. ಭಗತ್‌ಸಿಂಗ್ ಮತ್ತು ಗೆಳೆಯರ ನೇಣು, ಕಾಯಿದೆ ಭಂಗದ ಸೋಲು ಮುಂತಾದ ಅಂಶಗಳು ದೇಶದ ಹಲವಾರು ಭಾಗಗಳಲ್ಲಿ ಯುವಜನರು ಕಮ್ಯುನಿಸಂ ಕಡೆಗೆ ವಾಲುವಂತೆ ಮಾಡಿದವು(ಹಿಸ್ಟರಿ 2005: 163).

ಕ್ವಿಟ್ ಇಂಡಿಯಾ ಚಳುವಳಿ: ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಮುಂದುವರಿದ ಭಾಗವಾಗಿ ಜಗತ್ತಿನ ಶ್ರೀಮಂತ ದೇಶಗಳ ನಡುವೆ ಎರಡನೇ ಪ್ರಪಂಚ ಯುದ್ಧ ಆರಂಭವಾಯಿತು. ಈ ಪ್ರಕ್ರಿಯೆಯಲ್ಲಿ ಉಂಟಾದ ಜಾಗತಿಕ ಬಲಾಬಲಗಳು ಮತ್ತು ರಾಷ್ಟ್ರೀಯ ಹಿತಾಸಕ್ತಿಗಳು ಭಾರತದ ಸ್ವಾತಂತ್ರ ಹೋರಾಟದ ದಿಕ್ಕುದೆಸೆಗಳನ್ನು ರೂಪಿಸುತ್ತಿತ್ತು. ಭಾರತದ ಜನತೆಯನ್ನು ತಮ್ಮ ಪರವಾಗಿ ಯದ್ಧ ಚಟುವಟಿಕೆಗಳಲ್ಲಿ ತೊಡಗಿಸಬೇಕೆಂಬ ಬ್ರಿಟಿಷ್ ಸರ್ಕಾರದ ಲೆಕ್ಕಾಚಾರದ ಯೋಜನೆಯಾಗಿ ಸರ್ ಸ್ಟಾಫೋರ್ಡ್ ಕ್ರಿಪ್ಸ್ ನಿಯೋಗ ಬಂತು. ಪೂರ್ಣ ಡೊಮಿನಿಯನ್ ಸ್ಥಾನಮಾನದ ಭಾರತ ಯೂನಿಯನ್ ರಚಿಸುವ, ಶೀಘ್ರವಾಗಿ ಸ್ವಯಂ-ಸರ್ಕಾರ ಸಾಧಿಸುವ ಸಾಧ್ಯತೆಯ ಗುರಿಯೊಂದಿಗೆ ಯುದ್ಧ ಮುಗಿದ ಕೂಡಲೇ ಈ ಗುರಿ ಸಾಧನೆಗೆ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸುವ ಭರವಸೆಗಳ ಕರಡು ಘೋಷಣೆಯನ್ನು ಮಾಡಿತು. ಇದಿಷ್ಟೇ ಆಗಿದ್ದರೆ, ಅದುವರೆಗಿನ ಅನುಭವದ ಆಧಾರದಲ್ಲಿ, ಕಾಂಗ್ರೆಸ್ ಮತ್ತು ಗಾಂಧಿ ನಾಯಕತ್ವ ಇದನ್ನು ಒಪ್ಪುತ್ತಿತ್ತು. ಆದರೆ ಕ್ರಿಪ್ಸ್ ನಿಯೋಗದ ಕರಡಿನಲ್ಲಿ ಇನ್ನೆರಡು ಷರತ್ತುಗಳಿದ್ದವು. ಒಂದು, ಭಾರತ ಯೂನಿಯನ್‌ಗೆ ಸೇರಲು ಇಚ್ಛಿಸದ ಪ್ರಾಂತ ಅಥವಾ ಪ್ರಾಂತಗಳಿಗೆ ಪ್ರತ್ಯೇಕವಾದ ಸಂವಿಧಾನ ರಚನೆ ಅವಕಾಶ ಮತ್ತು ಎರಡು, ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ್ದು. ಮುಸ್ಲಿಂ ಲೀಗಿನ ಬಹುತೇಕ ಬೇಡಿಕೆಗಳನ್ನು ಇದರಲ್ಲಿ ಒಪ್ಪಲಾಗಿತ್ತು. ರಾಷ್ಟ್ರೀಯ ಸರ್ಕಾರ ರಚಿಸುವ ವಿಚಾರದಲ್ಲಿ ಹೊಂದಾಣಿಕೆ ಕಷ್ಟವಾದ್ದರಿಂದ ಕ್ರಿಪ್ಸ್ ಸಂಧಾನ ವಿಫಲವಾಯಿತು.

ಈ ಹಿನ್ನೆಲೆಯಲ್ಲಿ 1942 ರ ಜುಲೈ 14 ರಂದು ವಾರ್ಧಾ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಕೈಗೊಂಡ ನಿರ್ಣಯ, ಆಗಸ್ಟ್ 7 ಮತ್ತು 8 ರಂದು ನಡೆದ ಎಐಸಿಸಿ ಸಭೆಯಲ್ಲಿ ಚರ್ಚೆಗೆ ಬಂದಿತು. ಕ್ವಿಟ್ ಇಂಡಿಯಾ ಚಳುವಳಿಯ ಕುರಿತು ಕಾಂಗ್ರೆಸ್‌ನೊಳಗೆ ವಿಭಿನ್ನ ನಿಲುವುಗಳಿದ್ದವು. ಗಾಂಧಿ ಮಾತ್ರವೇ ಧೃಡವಾಗಿ

ಇದ್ದದ್ದು. ಜವಾಹರಲಾಲ್ ನೆಹರೂ, ವಲ್ಲಬಾಯ್ ಪಟೇಲ್, ಮೌಲಾನಾ ಅಜಾದ್, ರಾಜಗೋಪಾಲಾಚಾರಿ ಮುಂತಾದವರು ಕಠಿಣ ನಿಲುವನ್ನು ಹೊಂದಿರಲಿಲ್ಲ. ಬ್ರಿಟಿಷರ ಹಠಮಾರಿ ಧೋರಣೆಯ ಕಾರಣದಿಂದ ಇವರಿಗೆ ನೇರೆ ದಾರಿ ಇಲ್ಲದೆ, ಕೊನೆಗೆ ಗಾಂಧಿಯವರ ಲೈನಿಗೆ ಒಪ್ಪಿಗೆ ನೀಡಿದರು. ಕಮ್ಯುನಿಸ್ಟರನ್ನು ಹೊರತುಪಡಿಸಿ ಬಹುತೇಕ ಸರ್ವಾನುಮತದಿಂದ ನಿರ್ಣಯ ಅಂಗೀಕಾರವಾಯಿತು. ಹೀಗಾಗಿ 1942 ರ ಆಗಸ್ಟ್ 8 ರಂದು 'ಕ್ವಿಟ್ ಇಂಡಿಯಾ' ಚಳುವಳಿಯ ನಿರ್ಣಯ ಅಂಗೀಕಾರವಾಯಿತು.

ಮಾರನೇ ದಿನವೇ ಬಾಂಬೆಯಲ್ಲಿದ್ದ ಕಾಂಗ್ರೆಸ್ ಮುಖಂಡರನ್ನು ಸರ್ಕಾರ ಬಂಧಿಸಿತು. ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಯಿಂದ ಉಂಟಾಗಬಹುದಾದ ಪರಿಣಾಮಗಳನ್ನು ಎದುರಿಸಲು ಸ್ಪಷ್ಟ ಸಿದ್ಧತೆ ಅಥವಾ ಯೋಜನೆಗಳನ್ನು ರೂಪಿಸಿಕೊಂಡಿರಲಿಲ್ಲ. ಈ ಬಗ್ಗೆ ಇಎಂಎಸ್ ನಂಬೂದಿರಿಪಾದ್ ಅವರ ಅಭಿಪ್ರಾಯ ಹೀಗಿದೆ:

> ...ಅವರು (ಗಾಂಧಿ) ಆರಂಭಿಸಲು ಹೊರಟಿರುವ ಚಳುವಳಿಯನ್ನು ಎಲ್ಲಿ ನಿಲ್ಲಸಬೇಕೆಂದು ಅವರಿಗೆ ಗೊತ್ತಿರಲಿಲ್ಲ. ಒಂದು ಸಮೂಹ ಚಳುವಳಿಯ ಬಗ್ಗೆ ಅವರು ಉತ್ಸಾಹದಿಂದ ಮಾತನಾಡುತ್ತಿದ್ದರೂ, ಅದನ್ನು ಸಂಘಟಿತವಾದ ರೀತಿಯಲ್ಲಿ ಮುನ್ನಡೆಸಲು ಯಾವುದೇ ವ್ಯವಸ್ಥೆಗಳನ್ನು ಮಾಡಿಕೊಂಡಿರಲಿಲ್ಲ. ಸಾಕಷ್ಟು ಸಮಯ ಮತ್ತು ಅನುಕೂಲಗಳು ಸಿಗುತ್ತವೆ ಮತ್ತು ಆಳುವವರು ಚಳುವಳಿಯನ್ನು ಕಠಿಣವಾಗಿ ತುಳಿಯಲು ಪ್ರಯತ್ನಿಸುವುದಿಲ್ಲವೆಂಬ ಮಕ್ಕಳ ರೀತಿಯ (child like) ವಿಶ್ವಾಸವನ್ನು ಹೊಂದಿದ್ದರು. ಒಂದು ಸಮೂಹ ಕ್ರಾಂತಿಯನ್ನು ಇಷ್ಟೊಂದು ಯೋಜನಾ ರಹಿತವಾಗಿ ಮುನ್ನಡೆಸಿರುವ ಬಗ್ಗೆ ಜಗತ್ತು ಎಲ್ಲಿಯಾದರೂ ಕಂಡಿರುವ ಬಗ್ಗೆ ಅನುಮಾನಗಳಿವೆ. ನಂತರದ ಕಾಲದಲ್ಲಿ ಅತಿಯಾಗಿ ಗುಣಗಾನ ಮಾಡಲಾದ 'ಕ್ವಿಟ್ ಇಂಡಿಯ' ಚಳುವಳಿಯ ಮೂಲ ತಿರುಳು ಇದಾಗಿದೆ. ..... ಇದು ವಿಚಿತ್ರವೆನಿಸಬಹುದು. ಆದರೆ ಇದರಲ್ಲಿ ವಿಚಿತ್ರವೇನಿಲ್ಲ, ಏಕೆಂದರೆ ಹಿಂದಿನ ಎಲ್ಲಾ ಹೋರಾಟಗಳಂತೆ ಗಾಂಧಿ ನಾಯಕತ್ವದ ಪ್ರಸಕ್ತ ಹೋರಾಟವು, ಜನತೆಯ ಕ್ರಾಂತಿಕಾರಿ ಸಾಮರ್ಥ್ಯವನ್ನು ಆಧರಿಸಿ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯುವ ಹಾಗೆ ರೂಪಿಸಿರಲಿಲ್ಲ. ಬದಲಿಗೆ ಆಳುವವರ ಜೊತೆ ಒಂದು ಹೊಂದಾಣಿಕೆಯನ್ನು ಸಾಧಿಸಲು ಅಗತ್ಯವಾದ ರಾಜಕೀಯ ಪರಿಸರವನ್ನು ನಿರ್ಮಾಣ ಮಾಡುವುದಾಗಿತ್ತು (ಇಎಂಎಸ್ 1986: 437).

ಈ ಸಂದರ್ಭಕ್ಕೆ ಕಮ್ಯುನಿಸ್ಟ್ ಪಕ್ಷ ದೇಶದಲ್ಲಿ ಒಂದು ಹೊಸ ರಾಜಕೀಯ ಶಕ್ತಿಯಾಗಿ ಬೆಳವಣಿಗೆಯಾಗುತ್ತಿತ್ತು. ಕಾಂಗ್ರೆಸ್ ಒಳಗೂ ಮತ್ತು ಹೊರಗೂ ಸೇರಿದಂತೆ ದೇಶದ ಎಡಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿತ್ತು. ಯುದ್ಧ ಆರಂಭವಾಗುತ್ತಿದ್ದಂತೆ ಕಮ್ಯುನಿಸ್ಟ್ ಪಾರ್ಟಿ, ಕಾಂಗ್ರೆಸ್ ಸಮಾಜವಾದಿ ಪಾರ್ಟಿ ಮತ್ತು ಫಾರ್ವರ್ಡ್ ಬ್ಲಾಕ್‌ಗಳು ಪ್ರತ್ಯೇಕ ನಿಲುವುಗಳನ್ನು ಹೊಂದಿದವು. ಜರ್ಮನಿಯು ಸೋವಿಯತ್ ಒಕ್ಕೂಟದ ಮೇಲೆ ದಾಳಿ ಮಾಡಿದ ನಂತರ ಮತ್ತು ಜಪಾನ್ ಏಷ್ಯನ್ ದೇಶಗಳನ್ನು ಆಕ್ರಮಿಸಿಕೊಂಡು ಭಾರತದ ಪೂರ್ವ ಗಡಿಯನ್ನು ತಲುಪಿದ ನಂತರ ಪರಿಸ್ಥಿತಿ ಬದಲಾವಣೆಯಾಯಿತು. ಸ್ವಾತಂತ್ರ್ಯ ಕೊಡದೆ ಭಾರತದ ಸಂಪನ್ಮೂಲಗಳನ್ನು ಮತ್ತು ಜನರನ್ನು ಬಳಸುತ್ತಿರುವ ಬ್ರಿಟಿಷರ ವಿರುದ್ಧ ಜನತೆಯ ಆಕ್ರೋಶ ಹೆಚ್ಚುತ್ತಿತ್ತು. ಅಲ್ಲಿಯವರೆಗೂ ಫ್ಯಾಸಿಸ್ಟ್–ವಿರೋಧಿಯಾಗಿದ್ದ

ಕಾಂಗ್ರೆಸ್ ನಿಲುವು ದುರ್ಬಲಗೊಂಡಿತು. ಸುಭಾಷ್ ಚಂದ್ರ ಬೋಸ್ ಬರ್ಲಿನ್, ಬ್ಯಾಂಕಾಕ್ ಮುಂತಾದ ಕಡೆಗಳಿಂದ ಫ್ಯಾಸಿಸ್ಟ್ ಶಕ್ತಿಗಳಿಗೆ ಸಹಾಯಕವಾದ ನಿಲುವುಗಳನ್ನು ತೆಗೆದುಕೊಳ್ಳುತ್ತಿದ್ದರು. ಕಾಂಗ್ರೆಸ್‌ನ ಮುಖಂಡರೂ ಕೂಡಾ 'ಜಪಾನ್ ಭಾರತದ ಮೇಲೆ ದಾಳಿ ಮಾಡುವುದಿಲ್ಲ' ಎಂಬ ನಂಬಿಕೆಯ ಮೇಲೆ ಪರೋಕ್ಷವಾಗಿ ಅದಕ್ಕೆ ಅನುಕೂಲಕರವಾದ ಮಾತುಗಳನ್ನೇ ಆಡುತ್ತಿದ್ದರು. ಹಿಟ್ಲರ್ ಸೈನ್ಯದ ದಾಳಿಯಿಂದ ಸೋವಿಯತ್ ಯೂನಿಯನ್‌ನ ಭವಿಷ್ಯ ಅಪಾಯದಲ್ಲಿದೆ ಮತ್ತು ಮತ್ತೊಂದು ಕಡೆ ಭಾರತದ ಪೂರ್ವಕ್ಕಿರುವ ದೇಶಗಳನ್ನು ಒಂದೊಂದಾಗಿ ಜಪಾನ್ ಆಕ್ರಮಿಸುತ್ತಾ ಬರುತ್ತಿದೆ, ಇದರಿಂದ ಭಾರತಕ್ಕೆ ಅಪಾಯವಿದೆ ಎಂದು ಕಮ್ಯುನಿಸ್ಟ್ ಪಾರ್ಟಿ ಹೇಳಿತು. ಹೀಗಾಗಿ ಅದು ಕಾಂಗ್ರೆಸ್ ಮತ್ತು ಬೋಸ್‌ರ ಫಾರ್ವರ್ಡ್ ಬ್ಲಾಕ್ ನಿಲುವುಗಳನ್ನು ವಿರೋಧಿಸಿತು. ಕಮ್ಯುನಿಸ್ಟ್ ಪಕ್ಷಕ್ಕೆ ಇದೊಂದು ಅಗ್ನಿ ಪರೀಕ್ಷೆಯ ಕಾಲವಾಯಿತು. ಈ ನಿಲುವುಗಳನ್ನು ವಿರೋಧಿಸುವಾಗಲೇ, ಇಡೀ ಜನತೆಯಲ್ಲಿ ತೀವ್ರಗೊಳ್ಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿ–ವಿರೋಧಿ ಅಲೆಯ ವಿರುದ್ಧ ಈಜುವಂತಾಯಿತು. ಇದನ್ನೇ ಬಳಸಿಕೊಂಡ ಬ್ರಿಟಿಷರು ಹಲವಾರು ಕಮ್ಯುನಿಸ್ಟ್ ನಾಯಕರನ್ನು ಜೈಲುಗಳಿಂದ ಬಿಡುಗಡೆ ಮಾಡಿದರು. ಇದರಿಂದಾಗಿ 'ಬ್ರಿಟಿಷರೊಂದಿಗೆ ಕಮ್ಯುನಿಸ್ಟರು ಒಡಂಬಡಿಕೆ ಮಾಡಿಕೊಂಡಿದ್ದಾರೆ' ಎಂಬ ಅಭಿಪ್ರಾಯಗಳು ಬಂದವು. ಅದುವರೆಗೂ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟಗಳ ಕ್ರಾಂತಿಕಾರಿ ವಿಧಾನಗಳಿಗೆ ಹೆಸರಾಗಿದ್ದ ಕಮ್ಯುನಿಸ್ಟರು ಈ ನಿಲುವಿನಿಂದಾಗಿ ಅನೇಕ ಗೊಂದಲಗಳಿಗೆ ಕಾರಣರಾದರು.

ಕಮ್ಯುನಿಸ್ಟರ ಈ ನಿಲುವು ಮೂಲತಃ ಫ್ಯಾಸಿಸ್ಟ್–ವಿರೋಧಿ ಮೂಲದಿಂದ ಬಂದಿದೆ. ಕಾಂಗ್ರೆಸ್ಸೂ ಒಳಗೊಂಡಂತೆ ಸಾಮ್ರಾಜ್ಯಶಾಹಿ ವಿರೋಧಿಯಾದ ಎಲ್ಲಾ ಶಕ್ತಿಗಳು ನಿರಂತರವಾಗಿ ಇದೇ ನಿಲುವನ್ನು ಪ್ರಕಟಿಸುತ್ತಾ ಬಂದಿದ್ದವು. ಕಾಂಗ್ರೆಸ್‌ನ ಕ್ವಿಟ್ ಇಂಡಿಯಾ ನಿರ್ಣಯ ಮತ್ತು ಅದರ ಎಲ್ಲಾ ಅಧಿಕೃತ ದಸ್ತಾವೇಜುಗಳು ಮತ್ತು ಇತರೆ ಘೋಷಣೆಗಳು, ಬ್ರಿಟನ್ ಒಳಗೊಂಡ ಮಿತ್ರ ಪಡೆಗಳ ಫ್ಯಾಸಿಸ್ಟ್–ವಿರೋಧಿ ಯುದ್ಧ ಪ್ರಯತ್ನಗಳಿಗೆ ಅಡ್ಡಿಯಾಗಬಾರದೆಂಬ ಕಾಂಗ್ರೆಸ್‌ನ ಬದ್ಧತೆಯನ್ನು ವ್ಯಕ್ತಪಡಿಸಿವೆ. ಜವಾಹರಲಾಲ್ ನೆಹರೂ ಮತ್ತು ಮೌಲಾನಾ ಅಜಾದ್ ಅವರು ಈ ನಿಲುವಿಗೆ ಗಟ್ಟಿಯಾಗಿ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದರು. ಗಾಂಧಿ ನಿಲುವಿಗೆ ಇವರ ಒಪ್ಪಿಗೆಯಿರಲಿಲ್ಲ ಮತ್ತು ಕಮ್ಯುನಿಸ್ಟ್ ಪಕ್ಷದ ನಿಲುವಿನ ತಿರುಳೇ ಇವರ ವಿರೋಧದ ನೆಲೆಯೂ ಆಗಿತ್ತು. ಗಾಂಧಿಯವರ 'ಪ್ರೀತಿಯ ಒತ್ತಡ'ದ ಪರಿಣಾಮ ಮತ್ತು ಜನತೆಯಲ್ಲಿ ಹೆಚ್ಚುತ್ತಿದ್ದ ಸಾಮ್ರಾಜ್ಯಶಾಹಿ–ವಿರೋಧಿ ಭಾವನೆಗಳ ಪರಿಣಾಮದಿಂದಾಗಿ ಇವರ ನಿಲುವುಗಳು ಬದಲಾದವು. ಕಮ್ಯುನಿಸ್ಟ್ ಪಕ್ಷ ಕೊನೆಯವರೆಗೂ ತನ್ನ ನಿಲುವಿಗೆ ಅಂಟಿಕೊಂಡಿತ್ತು – ಇದೊಂದೇ ವ್ಯತ್ಯಾಸ ಎನ್ನುತ್ತಾರೆ ನಂಬೂದಿರಿಪಾದ್‌ರವರು (ಇಎಂಎಸ್ 1986: 450).

ಫ್ಯಾಸಿಸ್ಟ್–ವಿರೋಧಿ ಯುದ್ಧವು ಮಾನವ ಕುಲದ ಭವಿಷ್ಯವನ್ನು ತೀರ್ಮಾನಿಸುತ್ತದೆ, ಜನತೆಯನ್ನು ಇದರ ವಿರುದ್ಧ ಅಣಿನೆರೆಸುವುದು ಕೇವಲ ಬ್ರಿಟಿಷರ ಪ್ರಶ್ನೆಯಲ್ಲ, ಅದು ಇಡೀ ಭಾರತದ ಜನತೆಯ ಕಾಳಜಿಯಾಗಿದೆ ಎಂದು ಕಮ್ಯುನಿಸ್ಟ್ ಪಕ್ಷ ಹೇಳಿತು. ಕಾಂಗ್ರೆಸ್ ಎತ್ತಿದ ಬೇಡಿಕೆಗಳು ಸರಿಯಾಗೇ ಇದ್ದವು. ಈ ಬಗ್ಗೆ ಕಮ್ಯುನಿಸ್ಟ್

ಪಕ್ಷಕ್ಕೆ ವಿರೋಧವಿರಲಿಲ್ಲ. ಭಾರತದ ಜನತೆಯ ಬೇಡಿಕೆಗಳನ್ನು ಈಡೇರಿಸದೆ ಬ್ರಿಟಿಷರು ಯುದ್ಧ ಮಾಡುವುದು, ಜನತೆಯಲ್ಲಿ ಅತೃಪ್ತಿಯನ್ನು ಹೆಚ್ಚಿಸುತ್ತದೆ ಮತ್ತು ಇದು ಅವರ ಪ್ರಯತ್ನಗಳಿಗೆ ಸೋಲುಂಟು ಮಾಡುತ್ತದೆ ಎಂದು ಕಮ್ಯುನಿಸ್ಟ್ ಪಕ್ಷ ಹೇಳಿತು. ಬ್ರಿಟಿಷರ ವಿರುದ್ಧ ಹೋರಾಟ ಮಾಡುವಾಗಲೇ, ಪೂರ್ವದಲ್ಲಿ ಜಪಾನೀಯರ ಫ್ಯಾಸಿಸ್ಟ್ ಆಕ್ರಮಣವನ್ನು ಎದುರಿಸಲು ಗೆರಿಲ್ಲಾ ಪಡೆಗಳ ದಾಳಿಯನ್ನು ಒಳಗೊಂಡು ಎಲ್ಲಾ ಕ್ರಮಗಳನ್ನು ರೂಪಿಸಬೇಕೆಂದು ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್‌ಗೆ ಸಲಹೆಯನ್ನು ನೀಡಿತು. ಇದರ ಜೊತೆಯಲ್ಲೇ ಯುದ್ಧ ಕಾಲದ ಸಮಸ್ಯೆಗಳಾದ ವೈದ್ಯಕೀಯ ನೆರವು ನೀಡುವುದು, ಕಳ್ಳದಾಸ್ತಾನುಗಾರರ ವಿರುದ್ಧ ಹೋರಾಡುವ ಸಲಹೆಗಳನ್ನೂ ನೀಡಿದರು. ಒಂದು ಘಟ್ಟದವರೆಗೆ ನೆಹರೂ ಕೂಡಾ ಈ ಪ್ರಸ್ತಾವನೆಯನ್ನು ಒಪ್ಪಿದ್ದರು. ಗೆರಿಲ್ಲಾ ಪಡೆಗಳನ್ನು ಸಂಘಟಿಸುವ ಬಗ್ಗೆ ಒಲವನ್ನು ಹೊಂದಿದ್ದರು. ಆದರೆ ಅವರು ಗಾಂಧಿಯ ಜೊತೆ ಮಾತನಾಡಿದ ನಂತರ ಅದರಿಂದ ಹಿಂದೆ ಸರಿದರು. ಇಷ್ಟೆಲ್ಲಾ ಮಾಡುವಾಗಲೇ ಕಮ್ಯುನಿಸ್ಟ್ ಪಾರ್ಟಿ ಕಾಂಗ್ರೆಸ್ ಬೇಡಿಕೆಗಳನ್ನು ಈಡೇರಿಸಬೇಕೆಂದು ಮತ್ತು ಕಾಂಗ್ರೆಸ್ ಮುಖಂಡರನ್ನು ಬಂಧನದಲ್ಲಿರಿಸಿ ಫ್ಯಾಸಿಸ್ಟ್–ವಿರೋಧಿ ಯುದ್ಧ ಗೆಲ್ಲಲು ಆಗುವುದಿಲ್ಲವೆಂದು ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟಗಳನ್ನು ನಡೆಸಿತು (ಇಎಂಎಸ್ 1986: 450–51). ಈ ಎಲ್ಲಾ ತಪ್ಪು–ಒಪ್ಪುಗಳ ನಡುವಿನಲ್ಲಿ, ಕಮ್ಯುನಿಸ್ಟ್ ಪಕ್ಷ ಸಹಜವಾಗಿಯೇ ಫ್ಯಾಸಿಸ್ಟ್–ವಿರೋಧಿ ಅಂಶವನ್ನು ಒಳಗೊಂಡು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟಗಳನ್ನು ಸಂಘಟಿಸಿತು. ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ತನ್ನ ಸ್ವತಂತ್ರ ನಿಲುವುಗಳ ಕಾರಣದಿಂದಾಗಿ ಕಾರ್ಮಿಕ ವರ್ಗ, ರೈತಾಪಿ ಮತ್ತು ಇತರೆ ಜನತೆಯ ನಡುವೆ ಹೋರಾಟಗಳನ್ನು ಸಂಘಟಿಸುತ್ತಾ ತನ್ನ ಕಾಲ ಮೇಲೆ ತಾನು ನಿಲ್ಲುವ ಕೆಲಸವನ್ನು ಮಾಡಿತು. ಹಾಗೆ ನೋಡಿದರೆ, ಹಿಂದಿನ ಅವಧಿಗಳಿಗಿಂತಾ ಕಮ್ಯುನಿಸ್ಟ್ ಪಕ್ಷ ಹೆಚ್ಚು ವ್ಯಾಪಕವಾದ ಹೋರಾಟಗಳನ್ನು ಈ ಅವಧಿಯಲ್ಲಿ ಸಂಘಟಿಸಿತು. ಬ್ರಿಟಿಷರೇನೂ ಕಮ್ಯುನಿಸ್ಟರಿಗೆ ರಿಯಾಯಿತಿಗಳನ್ನು ಕೊಟ್ಟಿರಲಿಲ್ಲ, ಬದಲಿಗೆ ದೇಶದ ಹಲವಾರು ಕಡೆಗಳಲ್ಲಿ ಕಮ್ಯುನಿಸ್ಟರನ್ನು ಬಂಧಿಸಲಾಗಿತ್ತು ಮತ್ತು ಅವರ ಮೇಲೆ ಹಾಕಲಾಗಿದ್ದ ಕೇಸುಗಳ ಸಾರಾಂಶ ಬಹಳ ಸ್ಪಷ್ಟವಾಗಿ ಕಮ್ಯುನಿಸ್ಟರ ವಿರುದ್ಧವಾಗಿತ್ತು ಎಂಬುದನ್ನು ಗಮನಿಸಬಹುದು.

ಕಮ್ಯುನಿಸ್ಟರ ವಿರುದ್ಧ ಪಿತೂರಿ ಮೊಕದ್ದಮೆಗಳು

1922 ರ ಮಧ್ಯಭಾಗದಿಂದ ಅನಿವಾಸಿ ಕ್ರಾಂತಿಕಾರಿಗಳ ಚಟುವಟಿಕೆಗಳು ಮತ್ತು ಅವರು ಕಮಿನ್‌ಟರ್ನ್‌ನೊಂದಿಗೆ ಹೊಂದಿದ ಸಂಬಂಧದಿಂದಾಗಿ ಬ್ರಿಟಿಷರು ಆತಂಕಗೊಂಡಿದ್ದರು. ಕಮ್ಯುನಿಸ್ಟರು ಬ್ರಿಟಿಷ್ ಭಾರತ ಸರ್ಕಾರವನ್ನು ಕಿತ್ತೊಗೆಯಲು ಯೋಜಿಸುತ್ತಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಹಲವಾರು ಪಿತೂರಿ ಮೊಕದ್ದಮೆಗಳನ್ನು **ಹೂಡಿದರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಪೇಶಾವರ್, ಕಾನ್ಪುರ್ ಮತ್ತು ಮೀರತ್ ಪಿತೂರಿ ಮೊಕದ್ದಮೆಗಳು.**

ಬ್ರಿಟಿಷರು ಕಮ್ಯುನಿಸ್ಟರ ವಿರುದ್ಧ ಹೂಡಿದ ಪಿತೂರಿ ಮೊಕದ್ದಮೆಗಳ ಸಾಲಿನಲ್ಲಿ ಮೊದಲನೆಯದು **ಪೇಶಾವರ್ ಪಿತೂರಿ ಮೊಕದ್ದಮೆ**. ಇದರಲ್ಲಿ ಒಟ್ಟು ಐದು ಮೊಕದ್ದಮೆಗಳನ್ನು ಪ್ರತ್ಯೇಕವಾಗಿ ಹೂಡಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಮಿಲಿಟರಿ ತರಬೇತಿ ಪಡೆಯಲು ಕಾಬೂಲ್ ಗಡಿ ದಾಟಿ ತಾಷ್ಕೆಂಟಿಗೆ ಹೋದ ಮುಹಜೀರರು

(Muhajirs) ನಂತರ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಆಕರ್ಷಿತರಾಗಿ ಮಾಸ್ಕೋದ ಕಮ್ಯುನಿಸ್ಟ್ ಯೂನಿವರ್ಸಿಟಿ ಆಫ್ ದಿ ಟಾಯ್ಲರ್ಸ್ ಆಫ್ ದಿ ಈಸ್ಟ್‌ಗೆ ಸೇರಿದ್ದರು. ಇವರು ಟರ್ಕಿ ಪ್ರದೇಶದ ಮೂಲಕ ವಾಪಸ್ ಬರುವುದಕ್ಕೆ ಟರ್ಕಿ ಸರ್ಕಾರ ಅನುಮತಿ ನಿರಾಕರಿಸಿತು. ಅಂತಹ ಸಂದರ್ಭದಲ್ಲಿ ಮೊದಲ ತಂಡ 1921 ರ ಜೂನ್ 3 ರಂದು ಪೇಶಾವರ್ ಪ್ರವೇಶಿಸಿತು. ಹೊಂಚು ಹಾಕಿ ಕೂತಿದ್ದ ಬ್ರಿಟಿಷ್ ಭಾರತೀಯ ಪೊಲೀಸರು ಇವರನ್ನು ಬಂಧಿಸಿದರು. ಈ ರೀತಿ ಬಂಧನವಾದವರಲ್ಲಿ 12–13 ಜನ ಕ್ರಾಂತಿಕಾರಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಎರಡನೇ ಪೇಶಾವರ್ ಮೊಕದ್ದಮೆಯಲ್ಲಿ ಮೊಹಮದ್ ಅಕ್ಬರ್‌ಗೆ ಏಳು ವರ್ಷ, ಬಲೂಚಿಸ್ಥಾನದ ಮೊಹಮದ್ ಹಸನ್ ಮತ್ತು ಪೇಶಾವರದ ಗುಲಾಮ್ ಮೆಹಬೂಬ್ ಇವರಿಗೆ ಐದು ವರ್ಷಗಳ ಕಠಿಣ ಶಿಕ್ಷೆಯನ್ನು 1923 ರ ಏಪ್ರಿಲ್ 27 ರಂದು ವಿಧಿಸಲಾಯಿತು. ಮೂರನೇ ಪೇಶಾವರ್ ಮೊಕದ್ದಮೆ ಅಥವಾ ಮಾಸ್ಕೋ–ತಾಷ್ಕೆಂಟ್ ಪಿತೂರಿ ಮೊಕದ್ದಮೆಯಲ್ಲಿ ಅಕ್ಬರ್ ಷಾ, ರಫೀಕ್ ಅಹಮದ್, ಫಿರೋಜ್–ಉದ್–ದಿನ್–ಮನ್ಸೂರ್, ಅಬ್ದುಲ್ ಮಜೀದ್, ಅಬೀಬ್ ಅಹಮದ್, ಸುಲ್ತಾನ್ ಮೊಹಮದ್, ಅಬ್ದುಲ್ ಖಾದರ್ ಇದ್ದರು. ನಾಲ್ಕನೇಮೊಕದ್ದಮೆಯಲ್ಲಿ, ತಾಷ್ಕೆಂಟ್‌ನಲ್ಲಿ ಆರಂಭವಾಗಿದ್ದ ಸಿಪಿಐನ ಕಾರ್ಯದರ್ಶಿಯಾಗಿದ್ದ ಮೊಹಮದ್ ಶಫೀಕ್ ಅವರನ್ನು 1924 ಏಪ್ರಿಲ್ 4 ರಂದು ಐಪಿಸಿ ಸೆಕ್ಷನ್ 121–A ಅಡಿಯಲ್ಲಿ ಮೂರು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ತಾಷ್ಕೆಂಟ್‌ನಲ್ಲಿ ಹೆಣೆದ ಪಿತೂರಿಯಲ್ಲಿ ಇವರು ಸಕ್ರಿಯ ಸದಸ್ಯರು ಎಂಬುದು ಇವರ ಮೇಲಿನ ಆರೋಪವಾಗಿತ್ತು. ಐದನೇ ಮೊಕದ್ದಮೆಯಲ್ಲಿ ಫಜಲ್ ಇಲಾಹಿ ಖುರ್ಬಾನ್ ಅವರಿಗೂ ಮೇಲಿನ ಸೆಕ್ಷನ್ ಅಡಿಯಲ್ಲಿ 1927 ರಲ್ಲಿ ಮೂರು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು.

ಈ ಐದೂ ಪಿತೂರಿ ಮೊಕದ್ದಮೆಗಳಲ್ಲಿ, ಇವರೆಲ್ಲಾ ತಾಷ್ಕೆಂಟ್ ಮತ್ತು ಮಾಸ್ಕೋದ ಶಾಲೆಗಳಿಗೆ ಹೋಗಿ ಕ್ರಾಂತಿಕಾರಿ ತರಬೇತಿ ಪಡೆದು ಬಂದರೆಂಬುದನ್ನು ಬಿಟ್ಟರೆ, ಪಿತೂರಿ ಎಂದು ಸಾಬೀತುಪಡಿಸುವಂತಹ ಯಾವುದೇ ಪ್ರತ್ಯಕ್ಷ ಅಥವಾ ನೇರ ಕಾರ್ಯಾಚರಣೆಗಳನ್ನು ಇವರ ಮೇಲೆ ಸಾಬೀತುಪಡಿಸಲು ಬ್ರಿಟಿಷ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ವಿಶೇಷವೆಂದರೆ ಇಷ್ಟೂ ಪಿತೂರಿ ಪ್ರಕರಣಗಳ ಸಂದರ್ಭದಲ್ಲಿ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ತಟಸ್ಥವಾಗಿದ್ದವು.


ಪೇಶಾವರದ ಪಿತೂರಿ ಮೊಕದ್ದಮೆಗಳ ಮುಂದುವರಿಕೆಯಾಗಿ ಬ್ರಿಟಷರು **ಕಾನ್ಪುರ್ ಪಿತೂರಿ ಮೊಕದ್ದಮೆ** (1923–24)ಯನ್ನು ಹೂಡಿದರು. ಕಮ್ಯುನಿಸ್ಟರ ಕುರಿತು ಬ್ರಿಟಿಷರಿಗಿದ್ದ ಆತಂಕ ಗಮನಾರ್ಹವಾದದ್ದು. ರಷ್ಯಾದ ಬೋಲ್ಶೆವಿಕರ ಮತ್ತು ಭಾರತೀಯ ಕಮ್ಯುನಿಸ್ಟರ ನಡುವೆ ಹೆಚ್ಚುತ್ತಿದ್ದ ಸಂಪರ್ಕಗಳು ಮತ್ತು ಪತ್ರ ವ್ಯವಹಾರಗಳ ಬಗ್ಗೆ, ಅದರಲ್ಲೂ ಮುಖ್ಯವಾಗಿ ಬಂಗಾಳಿ ಕ್ರಾಂತಿಕಾರಿಗಳು ತಮ್ಮ ಚಟುವಟಿಕೆಗಳನ್ನು ವಿಸ್ತರಿಸುತ್ತಿದ್ದ ಹಿನ್ನೆಲೆಯಲ್ಲಿ, **ಬ್ರಿಟಿಷರು ಕಮ್ಯುನಿಸ್ಟರ ಮೇಲೆ ದಾಳಿಗಳನ್ನು ತೀವ್ರಗೊಳಿಸಿದರು.**

ಪ್ರಾಂತೀಯ ಸರ್ಕಾರಗಳು ಉಸ್ಮಾನಿ, ಮುಝಫರ್ ಅಹಮದ್, ಗುಲಾಂ ಹುಸೇನ್, ಡಾಂಗೆ ಮತ್ತು ಸಿಂಗಾರವೇಲು ಇವರ ಮೇಲೆ ತಕ್ಷಣದಲ್ಲೇ ಕ್ರಮಗಳನ್ನು ಕೈಗೊಳ್ಳಬೇಕೆಂಬ ಸೂಚನೆಗಳನ್ನು ಗವರ್ನರ್ ಜನರಲ್ ಅವರ ಕಾರ್ಯದರ್ಶಿ ಜೆ.ಕ್ರೇರಾರ್ ಅಧಿಕೃತ ಚರ್ಚೆಗಳಿಗೆ ತಾವು ಸಿದ್ಧಪಡಿಸಿದ್ದ ಟಿಪ್ಪಣಿಯಲ್ಲಿ ಸೂಚಿಸಿದ್ದರು. (ಹಿಸ್ಟರಿ

2005: 75–76). ಕೇಂದ್ರ ಗುಪ್ತಚರ ನಿರ್ದೇಶಕರಾಗಿದ್ದ ಸೆಸಿಲ್ ಕಾಯೆ ಅವರು ಗುಪ್ತ ವರದಿಯಲ್ಲಿ ಪಿತೂರಿ ಮೊಕದ್ದಮೆಯನ್ನು ಹೂಡಬೇಕಾದ 13 ಕಮ್ಯುನಿಸ್ಟರ ಹೆಸರುಗಳನ್ನು ಹೆಸರಿಸಿದ್ದರು. ಅವರ ಪೈಕಿ ಎಂ.ಎನ್. ರಾಯ್, ಮುಝಾಫರ್ ಅಹಮದ್, ಶೌಕತ್ ಉಸ್ಮಾನಿ, ಗುಲಾಂ ಹುಸೇನ್, ಎಸ್.ಎ.ಡಾಂಗೆ, ಸಿಂಗಾರವೇಲು ಚೆಟ್ಟಿಯಾರ್, ಆರ್.ಸಿ.ಶರ್ಮ ಮತ್ತು ನಳಿನಿ ಗುಪ್ತ ಇವರ ವಿರುದ್ಧ ಐಪಿಸಿ 121–ಎ ಅಡಿಯಲ್ಲಿ 1924 ಫೆಬ್ರವರಿ 17 ರಂದು ಕೇಸು ದಾಖಲಿಸಿದರು21. ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಒಂದು ಶಾಖೆಯನ್ನು ಭಾರತದಲ್ಲಿ ಎಂ.ಎನ್.ರಾಯ್ ನಿಯಂತ್ರಣದಲ್ಲಿ ಸ್ಥಾಪಿಸಲು ಒಂದು ಗುಂಪು ತೀರ್ಮಾನಿಸಿದ್ದು, ಭಾರತದಲ್ಲಿ ಚಕ್ರವರ್ತಿಗಳ ಸಾರ್ವಭೌಮತೆಯನ್ನು ಇಲ್ಲವಾಗಿಸುವುದೇ ಇದರ ಗುರಿಯಾಗಿದೆ ಎಂಬುದಾಗಿ ಬ್ರಿಟಿಷರು ತೀರ್ಮಾನಿಸಿದ್ದು ಈ ಮೊಕದ್ದಮೆಯ ಮುಖ್ಯಾಂಶವಾಗಿದೆ (ಅಧಿಕಾರಿ 1985: 281). ಕಾನ್ಪುರ್ ಪಿತೂರಿ ಮೊಕದ್ದಮೆಯ ಮೂಲಕ ಆರಂಭಿಕ ಹಂತದಲ್ಲಿದ್ದ ಕಮ್ಯುನಿಸ್ಟ್ ಚಳಿವಳಿಯ ಮೇಲೆ ಬೃಹತ್ ದಾಳಿಯನ್ನು ನಡೆಸಲಾಯಿತು[22].

ಮೀರತ್ ಪಿತೂರಿ ಮೊಕದ್ದಮೆಯು (1929–33) ರಾಷ್ಟ್ರೀಯ ಚಳುವಳಿಯಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಜಾಗತಿಕ ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ ಕಾರ್ಮಿಕ ಮತ್ತು ರೈತ ಹೋರಾಟಗಳು ತೀವ್ರಗೊಂಡು ಕಮ್ಯುನಿಸ್ಟರು ಅಥವಾ ಕ್ರಾಂತಿಕಾರಿಗಳು ಹೆಚ್ಚಿನ ಪಾತ್ರ ವಹಿಸುತ್ತಿದ್ದ ಹಿನ್ನೆಲೆಯಲ್ಲಿ ಮೀರತ್ ಪಿತೂರಿ ಮೊಕದ್ದಮೆಯನ್ನು ಹೂಡಲಾಯಿತು. ಈ ಮೊಕದ್ದಮೆಯು ಒಂದು ಸಂಘಟಿತ ಕಮ್ಯುನಿಸ್ಟ್ ಚಳುವಳಿ ರೂಪುಗೊಳ್ಳಲು ಸಹಾಯ ಮಾಡಿತು. ಬ್ರಿಟಿಷ್ ಭಾರತದ ಮೇಲಿನ ದೊರೆ ಚಕ್ರವರ್ತಿಯ ಸಾರ್ವಭೌಮತ್ವವನ್ನು ಕಸಿಯಲು ಪಿತೂರಿ ನಡೆಸಿದರೆಂಬ ಆರೋಪದ ಮೇಲೆ 1929 ರ ಮಾರ್ಚ್ 20 ರಂದು ದೇಶಾದ್ಯಂತ 31 ಕಮ್ಯುನಿಸ್ಟರು/ಕಾರ್ಮಿಕ ನಾಯಕರನ್ನು ಬ್ರಿಟಿಷ್ ಸರ್ಕಾರ ಬಂಧಿಸಿತು23. ಮೀರತ್ ಪಿತೂರಿ ಮೊಕದ್ದಮೆಯ ವಿಚಾರಣೆಯು ಸುಮಾರು ನಾಲ್ಕೂವರೆ ವರ್ಷಗಳ ಕಾಲ ನಡೆದಿದೆ. ಈ ಕೇಸಿಗೆ ಸಂಬಂಧಿಸಿ ನಡೆದ ಕೆಲಸಗಳ ಗಾತ್ರ ಮತ್ತು ವ್ಯಾಪ್ತಿಯ ಬಗ್ಗೆ ಚರಿತ್ರೆಯಲ್ಲಿ ವಿಶೇಷವಾಗಿ ದಾಖಲಾಗಿವೆ[24].

ಮೀರತ್ ವಿಚಾರಣೆ ಮಧ್ಯ ಕಾಲದಲ್ಲಿ 1932 ರ ಮೇ 7 ರಂದು ಅಮೀರ್ ಹೈದರ್‌ಖಾನ್‌ರನ್ನು[25] ಪೊಲೀಸರು ಬಂಧಿಸಿದರು. ಮುಝಾಫರ್ ಅಹಮದ್ ಅವರ ಪ್ರಕಾರ, ಜವಹರಲಾಲ್ ನೆಹರೂ ಅವರನ್ನೂ ಈ ಮೊಕದ್ದಮೆಯಲ್ಲಿ ಸೇರಿಸುವ ಸಾಧ್ಯತೆಯಿತ್ತು. ಪ್ರಾಸಿಕ್ಯೂಷನ್ ಸಂದರ್ಭದಲ್ಲಿ ಭಾರತ ಸರ್ಕಾರ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳನ್ನು, ಈ ಮೊಕದ್ದಮೆಯಲ್ಲಿ 'ಸಹ–ಪಿತೂರಿಗಾರರು' ಎಂದು ಪಟ್ಟಿಯನ್ನು ಸಲ್ಲಿಸಿತ್ತು. ಜವಹರಲಾಲ್ ನೆಹರೂ ಅವರು ಲೀಗ್ ಆಫ್ ನ್ಯಾಷನಲ್ ಇಂಡಿಪೆಂಡೆನ್ಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಇದೇ ಕಾಲಕ್ಕೆ ಭಾರತಕ್ಕೆ ವಾಪಸ್ ಮರಳಿದ್ದ ಎಂ.ಎನ್.ರಾಯ್ ಅವರನ್ನು 1931 ರ ಜುಲೈ 21 ರಂದು ಬಾಂಬೆ ಪೊಲೀಸರು ಕಾನ್ಪುರ ಪಿತೂರಿ ಮೊಕದ್ದಮೆಗೆ ಸಂಬಂಧಿಸಿ ಬಂಧಿಸಿದರು. ಇವರು 1936 ನವೆಂಬರ್ 20 ರಂದು



ಅಮಿರ್ ಹೈದರ್‌ಖಾನ್

ಬಿಡುಗಡೆಯಾದರು (ಹಿಸ್ಟರಿ 2005: 176). ಮೀರತ್ ಮೊಕದ್ದಮೆಯಲ್ಲಿ ಬಂಧಿತರಾದವರೆಲ್ಲರೂ ಕಮ್ಯುನಿಸ್ಟ್ ಪಕ್ಷದ ಸದಸ್ಯರಲ್ಲದಿದ್ದರೂ, ಮೂವರನ್ನು ಹೊರತುಪಡಿಸಿ ಉಳಿದವರೆಲ್ಲರೂ, ವಿಚಾರಣೆಯ ವೇಳೆ ತಾವು ಕಮ್ಯುನಿಸಂಗೆ ಬದ್ಧರಾದವರೆಂದು ಘೋಷಿಸಿದರು.

ಕಮ್ಯುನಿಸ್ಟರು ಮತ್ತು ಕ್ರಾಂತಿಕಾರಿಗಳ ಮೇಲೆ ಬ್ರಿಟಿಷರು ಸಹಜ ಎಂಬಂತೆ ಬಳಸುತ್ತಿದ್ದ, ಮತ್ತು ಮೀರತ್ ಪಿತೂರಿ ಮೊಕದ್ದಮೆಯಲ್ಲಿಯೂ ಬಳಸಿದ ಐಪಿಸಿ ಸೆಕ್ಷನ್ 121–ಎ ಅಡಿಯಲ್ಲಿ ಮಾಡಲಾದ ಆರೋಪಗಳು ಆಸಕ್ತಿದಾಯಕವಾಗಿವೆ. ಅದರ ಸಾರಾಂಶ ಈ ರೀತಿಯಿದೆ – ರಷ್ಯಾದಲ್ಲಿರುವ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಜಗತಿನಾದ್ಯಂತ ಇರುವ ಸರ್ಕಾರಗಳನ್ನು ಸಶಸ್ತ್ರ ಕ್ರಾಂತಿಯ ಮೂಲಕ ಕಿತ್ತು ಹಾಕಿ ಆ ಜಾಗದಲ್ಲಿ ಸೋವಿಯತ್ ಗಣರಾಜ್ಯಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಅದು ವಿವಿಧ ಸಮಿತಿಗಳ – ಇಸಿಸಿಐ (ಎಕ್ಸಿಕ್ಯೂಟಿವ್ ಕಮಿಟಿ ಆಫ್ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್), ಕಲೋನಿಯಲ್ ಬ್ಯೂರೊ, ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಾರ್ಟಿ, ಲೀಗ್ ಎಗೆನೆಸ್ಟ್ ಇಂಪೀರಿಯಲಿಸಂ, ಯಂಗ್ ಕಮ್ಯುನಿಸ್ಟ್ ಲೀಗ್ ಮುಂತಾದವುಗಳ – ಮೂಲಕ ಇದನ್ನು ಸಾಧಿಸಲು ಉದ್ದೇಶಿಸಿದೆ. ಸಾರ್ವತ್ರಿಕ ಮುಷ್ಕರಗಳು ಮತ್ತು ಸಶಸ್ತ್ರ ದಂಗೆಗಳ ಮೂಲಕ ಭಾರತವೂ ಸೇರಿದಂತೆ ಜಗತ್ತಿನ ಎಲ್ಲಾ ಸರ್ಕಾರಗಳನ್ನು ಉರುಳಿಸುವ ಉದ್ದೇಶವನ್ನು ಇದು ಹೊಂದಿದೆ. ಇದಕ್ಕಾಗಿ ಇದು ಬಂಡವಾಳ ಮತ್ತು ಶ್ರಮದ ನಡುವೆ ವೈಷಮ್ಯವನ್ನು ಬಿತ್ತುತ್ತದೆ. ಕಾರ್ಮಿಕರ ಮತ್ತು ರೈತರ ಪಕ್ಷಗಳನ್ನು ಸ್ಥಾಪಿಸುತ್ತದೆ. ಇವುಗಳಲ್ಲಿ ಕಮ್ಯುನಿಸ್ಟರನ್ನು ಕೆಲಸಕ್ಕೆ ತೊಡಗಿಸುತ್ತದೆ. ಮುಷ್ಕರಗಳು, ಹರತಾಳಗಳು, ಹೋರಾಟಗಳು, ಭಾಷಣಗಳು, ಪತ್ರಿಕೆಗಳು, ಸಾಹಿತ್ಯ ಪ್ರಸಾರವನ್ನು ನಡೆಸುತ್ತವೆ. 1921 ರಲ್ಲಿ ಎಸ್.ಎ.ಡಾಂಗೆ, ಶೌಕತ್ ಉಸ್ಮಾನಿ ಮತ್ತು ಮುಝಾಫರ್ ಅಹಮದ್ ಇವರುಗಳು ಈ ಪ್ರಕಾರವಾಗಿ ಭಾರತದಲ್ಲಿ ಕೇಂದ್ರಗಳನ್ನು ಸ್ಥಾಪಿಸಿ, ಬ್ರಿಟಿಷ್ ಭಾರತದ ಮೇಲಿನ ದೊರೆ ಚಕ್ರವರ್ತಿಯ ಸಾರ್ವಭೌಮತ್ವವನ್ನು ಇಲ್ಲವಾಗಿಸಲು ಪ್ರಯತ್ನಿಸಿದ್ದಾರೆ. ಆರೋಪ ಪಟ್ಟಿಯಲ್ಲಿ ಹೆಸರಿಸಿರುವ ವ್ಯಕ್ತಿಗಳು ಇವರೊಂದಿಗೆ ಸೇರಿ ಭಾರತದಾದ್ಯಂತ ಇಂತಹ ಪಿತೂರಿಯನ್ನು ನಡೆಸಿದ್ದಾರೆ ಎಂದು ಆರೋಪಿಸಲಾಯಿತು.

ಬ್ರಿಟಿಷರ ಯೋಜನೆಯನ್ನೇ ತಮ್ಮ ಅನುಕೂಲಕ್ಕೆ ಬಳಸಲು ಮೀರತ್ ಖೈದಿಗಳು ತೀರ್ಮಾನಿಸಿದರು. ಹಿಂದಿನ ಪಿತೂರಿ ಮೊಕದ್ದಮೆಗಳಿಗೆ ಹೋಲಿಸಿದರೆ, ಮೀರತ್ ಖೈದಿಗಳು ಕೋರ್ಟ್ ಕಲಾಪಗಳನ್ನೇ ತಮ್ಮ ಅಜೆಂಡಾದ ಪ್ರಚಾರಕ್ಕೆ ಬಳಸಲು ಯೋಜಿಸಿದರು. ಟ್ರಯಲ್ ಸಂದರ್ಭದಲ್ಲಿ ನೀಡಿದ 'ಮೀರತ್ ಖೈದಿಗಳ ಜಂಟಿ ಹೇಳಿಕೆ'ಈ ನಿಟ್ಟಿನಲ್ಲಿ ಮಹತ್ವವಾದುದು. ಮುಝಾಫರ್ ಅಹಮದ್ ಅವರು ಹೇಳುವಂತೆ:

> **ನಾವು, ಆರೋಪಿತ ಕಮ್ಯುನಿಸ್ಟರು, ನಮ್ಮ ಸಿದ್ಧಾಂತವನ್ನು ಪಸರಿಸುವುದಕ್ಕಾಗಿ** ದಿನ ಬಿಟ್ಟು ದಿನ ಹೇಳಿಕೆಗಳನ್ನು ನೀಡುವುದರ ಮೂಲಕ ಕೋರ್ಟ್ ರೂಮನ್ನು ರಾಜಕೀಯ ವೇದಿಕೆಯಾಗಿ ಪರಿವರ್ತಿಸಬೇಕು ಮತ್ತು ಈ ಧ್ಯೇಯಕ್ಕಾಗಿ ನಮ್ಮನ್ನು ನಾವು ಮೊದಲೇ ಸಜ್ಜುಗೊಳಿಸಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದೆವು. ಮತ್ತು ಪ್ರತಿಯೊಬ್ಬ ಆರೋಪಿಯೂ ವೈಯುಕ್ತಿವಾಗಿ ಹೇಳಿಕೆ ನೀಡುವುದರ ಜೊತೆಯಲ್ಲೇ ಆರೋಪಿ ಕಮ್ಯುನಿಸ್ಟರು ಒಂದು ಸರ್ವಸಮ್ಮತಿಯ ಹೇಳಿಕೆಯನ್ನು ನೀಡಬೇಕೆಂದು ತೀರ್ಮಾನಿಸಲಾಯಿತು[26].

ಈ ಸರ್ವಸಮ್ಮತಿ ಅಥವಾ ಸಾರ್ವತ್ರಿಕ ಹೇಳಿಕೆಯು[27] ಸುಮಾರು 400 ಪುಟಗಳಷ್ಟಿತ್ತು ಎಂಬ ವಿಚಾರವೇ ಅದರ ಮಹತ್ವವನ್ನು ಸಾರುತ್ತದೆ. ಈ ಜಂಟಿ ಹೇಳಿಕೆಯು ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಅಪಾರವಾದ ಸಂಚಲನವನ್ನು ಮೂಡಿಸಿತು. ಇಷ್ಟೊತ್ತಿಗಾಗಲೇ ಸಿಪಿಐ ಪಕ್ಷವು ಭಾರತದಲ್ಲಿ ಕಮ್ಯುನಿಸ್ಟ್ ಕ್ರಾಂತಿ, ಕ್ರಾಂತಿಯ ವ್ಯೂಹ ಮತ್ತು ತಂತ್ರಗಾರಿಕೆ ಕುರಿತು 1930 ರ ಡಿಸೆಂಬರ್‌ನಲ್ಲಿ 'ಕಾರ್ಯಾಚರಣೆ ವೇದಿಕೆಯ ಕರಡ'ನ್ನು (Draft Platform of Action) ಬಿಡುಗಡೆ ಮಾಡಿತ್ತು. ಈ ಹಿನ್ನೆಲೆಯಲ್ಲೇ ಜಂಟಿ ಹೇಳಿಕೆಯ ಮಹತ್ವವನ್ನು ಗಮನಿಸಬೇಕು.

ವಿಚಾರಣೆ ಮುಗಿದು ಅಂತಿಮವಾಗಿ, 31 ಖೈದಿಗಳಿಗೆ 1933 ರ ಜನವರಿ 16 ರಂದು ಅಪರ ಸೆಷನ್ಸ್ ನ್ಯಾಯಾಧೀಶರಾದ ಯಾರ್ಕೆ'ಯವರು ಶಿಕ್ಷೆಯನ್ನು ಘೋಷಿಸಿದರು28. ಮುಝಾಫರ್ ಅಹಮದ್ ಅವರಿಗೆ ಜೀವಾವಧಿ ಗಡೀಪಾರು ಶಿಕ್ಷೆ ಮತ್ತು ಕೆಲವರಿಗೆ ಗರಿಷ್ಠ ಹನ್ನೆರೆಡು ವರ್ಷ ಮತ್ತು ಕನಿಷ್ಟ ಐದು ವರ್ಷಗಳ ಗಡೀಪಾರನ್ನು ವಿಧಿಸಲಾಯಿತು. ಇನ್ನು ಕೆಲವರಿಗೆ ನಾಲ್ಕರಿಂದ ಮೂರು ವರ್ಷಗಳ ತನಕ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಈ ತೀರ್ಪನ್ನು ಪ್ರಶ್ನಿಸಿ ಹೆಸರಾಂತ ವಕೀಲ ಡಾ.ಕೈಲಾಸನಾಥ್ ಕಟ್ಜು ಅವರ ಮೂಲಕ ಅಲಹಾಬಾದ್ ಹೈಕೋರ್ಟಿಗೆ ಮನವಿ ಸಲ್ಲಿಸಿದರು. ರಂಜಿತ್ ಸೀತಾರಾಮ್ ಪಂಡಿತ್ ಮತ್ತು ಖುರ್ಷಿದ್ ನೌರೋಜಿ ಇವರುಗಳ ನೇತೃತ್ವದಲ್ಲಿ ಮೀರತ್ ಖೈದಿಗಳಿಗೆ ಹಣ ಸಂಗ್ರಹಿಸಲು ಡಿಫೆನ್ಸ್ ಕಮಿಟಿಯನ್ನು ರಚಿಸಿದ್ದರು. 1933 ರ ಆಗಸ್ಟ್ 3 ರಂದು ಮುಖ್ಯ ನ್ಯಾಯಾಧೀಶ ಡಾ.ಸರ್ ಷಾ ಮಹಮದ್ ಸುಲೇಮಾನ್ ಮತ್ತು ನ್ಯಾಯಾಧೀಶ ಡೌಗ್ಲಾಸ್ ಯಂಗ್ ಇವರು ತೀರ್ಪನ್ನು ನೀಡಿದರು. 'ಪಿತೂರಿಗಾರರು ಇದುವರೆಗೂ ಅನುಸರಿಸಿರುವ ವಿಧಾನಗಳನ್ನು ನೋಡಿದರೆ, ಪಿತೂರಿ ಎಂಬುದು ಅಪ್ರಾಯೋಗಿಕವಾದುದು ಮತ್ತು ಇದನ್ನು ಸಾಧಿಸುವುದು ಅಸಾಧ್ಯವೇ ಸರಿ ಎಂದು ಯಾರಾದರೂ ಹೇಳಬಹುದು'ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತು. ಸೆಷನ್ಸ್ ತೀರ್ಪನ್ನು ಬದಲಾಯಿಸಿ ಹೊಸ ತೀರ್ಪನ್ನು ನೀಡಿತು. ಈ ಪ್ರಕಾರವಾಗಿ, ಇವರೆಲ್ಲರೂ ವಿವಿಧ ಪ್ರಮಾಣದ ಶಿಕ್ಷೆಗಳನ್ನು[29] ಪೂರೈಸಿ 1933 ರ ನವೆಂಬರ್‌ನಲ್ಲಿ ಬಿಡುಗಡೆಯಾದರು.

ಒಟ್ಟಾರೆ, ಮೀರತ್ ಪಿತೂರಿ ಮೊಕದ್ದಮೆಯು, ಸಂಘಟನಾ ನ್ಯೂನತೆಗಳು ಏನೇ ಇದ್ದರೂ, ಕಮ್ಯುನಿಸ್ಟ್ ಸಿದ್ಧಾಂತವನ್ನು ಮತ್ತು ಭಾರತೀಯ ಸಮಾಜದ ಬದಲಾವಣೆಗೆ ಬೇಕಾದ ವ್ಯೂಹ ಮತ್ತು ತಂತ್ರಗಾರಿಕೆಯನ್ನು ಒಂದು ವಿಶಾಲ ತಳಹದಿಯಲ್ಲಿ ಪ್ರಚಾರ ಮಾಡಲು ಅವಕಾಶವನ್ನು ಒದಗಿಸಿತು. ಮಾತ್ರವಲ್ಲ, ಜೈಲಿನಿಂದ ಬಿಡುಗಡೆಯಾದ ಮೇಲೆ ಮತ್ತಷ್ಟು ಬಲಿಷ್ಟವಾದ ರಾಜಕೀಯ ಮತ್ತು ಸಂಘಟನಾ ನೆಲೆಯನ್ನು ರೂಪಿಸಲು ಸಹಾಯ ಮಾಡಿತು. ಮೊಕದ್ದಮೆಯ ಪರಿಣಾಮವಾಗಿ ಸಿಪಿಐ ಪಕ್ಷದ ಅಖಿಲ ಭಾರತ ಕೇಂದ್ರವೆಂಬುದು ರಚನೆಯಾಗಲು ಸಹಾಯವಾಯಿತು.

ಸಮೂಹ ಸಂಘಟನೆಗಳ ಸ್ಥಾಪನೆ: ಕಮ್ಯುನಿಸ್ಟ್ ಚಳುವಳಿ ವಿಸ್ತರಣೆ

ಭಾರತದಲ್ಲಿ ವಸಾಹತು ವಿರೋಧಿ ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸಲು ಮತ್ತು ಸಮಾಜವಾದಿ ಸಮಾಜವನ್ನು ನಿರ್ಮಿಸಲು ವಿವಿಧ ಜನವಿಭಾಗಗಳನ್ನು ಅಣಿನೆರೆಸುವ ಕೆಲಸವನ್ನು ಕ್ರಾಂತಿಕಾರಿಗಳು ಆರಂಭದಿಂದಲೇ

ಮಾಡಿರುವುದನ್ನು ಗಮನಿಸಬಹುದು. ಮೊದಲಿಗೆ ಕಾರ್ಮಿಕ ಸಂಘಟನೆಯನ್ನು ಕಟ್ಟುವಲ್ಲಿ ಕ್ರಾಂತಿಕಾರಿಗಳು, ಕಾಂಗ್ರೆಸ್ ಸಮಾಜವಾದಿಗಳು ಮುಂಚೂಣಿ ಪಾತ್ರವನ್ನು ವಹಿಸಿದರೆ, ನಂತರ ರೈತ, ವಿದ್ಯಾರ್ಥಿ, ಸಾಹಿತ್ಯ, ಕಲೆ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ಆಯಾ ವಿಭಾಗದ ಸಮೂಹಗಳನ್ನು ಮೇಲಿನ ಉದ್ದೇಶಗಳಿಗೆ ಅಣಿನೆರೆಸಲು ಕಮ್ಯುನಿಸ್ಟರು ಸಮೂಹ ಸಂಘಟನೆಗಳನ್ನು ಸ್ಥಾಪಿಸಿ ಮುಂಚೂಣಿಯಲ್ಲಿ ಕೆಲಸ ಮಾಡಿರುವುದನ್ನು ಕಾಣಬಹುದು.

ಸ್ವಾತಂತ್ರ್ಯ ಹೋರಾಟ ಮತ್ತು ತಮ್ಮ ಹಕ್ಕುಗಳನ್ನು ಪಡೆಯಲು ಭಾರತದ ಕಾರ್ಮಿಕರನ್ನು ಸಂಘಟಿಸುವ ಮುಂಚೂಣಿ ಪಾತ್ರವನ್ನು ವಹಿಸಿದ್ದು **ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್** (ಎಐಟಿಯುಸಿ). ಭಾರತದಲ್ಲಿ ಕಾರ್ಮಿಕ ವರ್ಗದ ಬೆಳವಣಿಗೆ ಕೈಗಾರಿಕಾ ಬೆಳವಣಿಗೆಯ ಜೊತೆ ಹೆಣೆದುಕೊಂಡಿದೆ. ಆಧುನಿಕ ಕಾರ್ಮಿಕ ವರ್ಗದ ಚಳುವಳಿಯು ಕೈಗಾರಿಕಾ ಕ್ರಾಂತಿಯ ಫಲವಾಗಿದೆ. ಭಾರತವು ಇಂಗ್ಲೆಂಡಿನ ವಸಾಹತು ಆಗುವುದರಲ್ಲಿ ಅಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯೂ ಕಾರಣವಾಗಿದೆ. ಬ್ರಿಟಿಷರ ಆಳ್ವಿಕೆಯು ಭಾರತದಲ್ಲಿ ಸ್ವಯಂ-ಪರಿಪೂರ್ಣ ಗ್ರಾಮಗಳ ಆರ್ಥಿಕ ವ್ಯವಸ್ಥೆಯನ್ನು ನಾಶ ಮಾಡಿತು. ಆದರೆ ಇಲ್ಲಿನ ಊಳಿಗಮಾನ್ಯ ವ್ಯವಸ್ಥೆಯ ಸಂಬಂಧಗಳನ್ನು ಪೂರ್ಣವಾಗಿ ನಾಶ ಮಾಡುವುದಕ್ಕೆ ಮುಂದಾಗಲಿಲ್ಲ. ಇದೊಂದು ಹೊಸ ರೀತಿಯ ಊಳಿಗಮಾನ್ಯ ಮತ್ತು ಬಂಡವಾಳಶಾಹಿಯ ಪಥವನ್ನು ನಿರ್ಮಾಣ ಮಾಡಿತು. ಈ ನಿಟ್ಟಿನಲ್ಲಿ ಎರಡು ಕಾರಣಗಳಿಗಾಗಿ ರೈಲ್ವೆಯ ಆರಂಭ ಮಹತ್ವವಾದುದು. ಮೊದಲನೆಯದಾಗಿ, ಇಂಗ್ಲೆಂಡಿನಿಂದ ಬರುತ್ತಿದ್ದ ಸಿದ್ಧ ವಸ್ತುಗಳನ್ನು ಬಂದರುಗಳಿಂದ ಭಾರತದ ವಿವಿಧ ಪ್ರದೇಶಗಳಿಗೆ ಸಾಗಿಸಲು, ಹಾಗೆಯೇ, ಭಾರತದ ವಿವಿಧ ಪ್ರದೇಶಗಳಿಂದ ಕಚ್ಚಾ ವಸ್ತುಗಳನ್ನು ಬಂದರುಗಳಿಗೆ ಸಾಗಿಸಲು, ಎರಡನೆಯದಾಗಿ, ಭಾರತದ ಜನತೆಯ ಹೋರಾಟಗಳನ್ನು ಬಗ್ಗುಬಡಿಯಲು ಸೈನ್ಯವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು, ರೈಲ್ವೆಯನ್ನು ಆರಂಭಿಸುವುದು ಬ್ರಿಟಿಷರಿಗೆ ಅನಿವಾರ್ಯವಾದ ಸಂಗತಿಯಾಗಿತ್ತು. ರೈಲ್ವೆ ನಿರ್ಮಾಣದ ಪ್ರಕ್ರಿಯೆಯಲ್ಲಿ ಭಾರತದ ಮೊದಲ ಕಾರ್ಮಿಕ ವರ್ಗ ಜನನವಾಯಿತು. ಬ್ರಿಟಿಷ್ ಬಂಡವಾಳದಾರರಿಗೆ ದಲ್ಲಾಳಿಗಳಾಗಿ ಬನಿಯಾಗಳು ಮತ್ತು ಶ್ರೀಮಂತ ಜಮೀನ್ದಾರಿಗಳ ಒಂದು ವಿಭಾಗ ಭಾರತದ ಆರಂಭಿಕ ಬಂಡವಾಳದಾರರಾದರು. ಬ್ರಿಟಿಷ್ ಬಂಡವಾಳದ ಕೇಂದ್ರವಾಗಿ ಕಲ್ಕತ್ತಾ ಮತ್ತು ಭಾರತೀಯ ಬಂಡವಾಳದ ಮುಖ್ಯ ಕೇಂದ್ರವಾಗಿ ಬಾಂಬೆ ನಗರಗಳು ಬೆಳವಣಿಗೆಯಾದವು (ಸೇನ್ 1977: 25).

ಭಾರತದಲ್ಲಿ ಮೊದಲ ಆಧುನಿಕ ಕಾರ್ಮಿಕರ ಕೈಗಾರಿಕಾ ಮುಷ್ಕರ ರೈಲ್ವೆಯಲ್ಲಿ ನಡೆಯಿತು. 1862 ಏಪ್ರಿಲ್-ಮೇ ತಿಂಗಳಲ್ಲಿ ಹೌರಾ ರೈಲ್ವೆ ಸ್ಟೇಷನ್‌ನ 1200 ಕಾರ್ಮಿಕರು 8 ಗಂಟೆ ಕೆಲಸದ ಬೇಡಿಕೆಗಾಗಿ ಮುಷ್ಕರ ಮಾಡಿದರು. ಇದೇ ಬೇಡಿಕೆಗಾಗಿ ಚಿಕಾಗೋ ಕಾರ್ಮಿಕರು ಚಾರಿತ್ರಿಕ ಹೋರಾಟ ನಡೆಸುವುದಕ್ಕೆ 24 ವರ್ಷಗಳ ಮೊದಲೇ ಭಾರತದಲ್ಲಿ ಮುಷ್ಕರ ನಡೆದದ್ದು ಐತಿಹಾಸಿಕವಾಗಿ ಮಹತ್ವವಾದದ್ದು ಎಂದು ಸುಕೋಮಲ್ ಸೇನ್ ಗುರುತಿಸುತ್ತಾರೆ (ಸೇನ್ 1977: 79). ನಂತರ ಅಹಮದಾಬಾದ್, ಮದ್ರಾಸ್, ನಾಗ್ಪುರ್, ಬಾಂಬೆ, ಸೂರತ್ ಹೀಗೆ ಹಲವಾರು ನಗರಗಳಲ್ಲಿ ವಿವಿಧ ಪ್ರಮಾಣದ ಮುಷ್ಕರಗಳು ನಡೆಯಲು ಆರಂಭವಾಯಿತು.

1908 ರಲ್ಲಿ ಸ್ವದೇಶೀ ಚಳುವಳಿಯಲ್ಲಿ ತಿಲಕರ ಬಂಧನವನ್ನು ವಿರೋಧಿಸಿ ಬಾಂಬೆಯ ಒಂದು ಲಕ್ಷ ಕಾರ್ಮಿಕರು ಮುಷ್ಕರ ಮಾಡಿದರು30. ರಾಜಕೀಯ ಕಾರಣಕ್ಕಾಗಿ ಬೃಹತ್ ಪ್ರಮಾಣದಲ್ಲಿ ಕಾರ್ಮಿಕರು ನಡೆಸಿದ ಭಾರತದ ಮೊದಲ ಮುಷ್ಕರ ಇದಾಗಿದೆ. ರಾಜಕೀಯ ಹೋರಾಟದಲ್ಲಿ ಕಾರ್ಮಿಕರಲ್ಲಿ ರೂಪುಗೊಂಡ ಹೊಸದೊಂದು ಪ್ರಜ್ಞೆ, ಇತರೆ ಬೇಡಿಕೆಗಳಾಗಿ ಮುಂದುವರೆಯಿತು. 1910 ರಲ್ಲಿ 'ಬಾಂಬೆ ಕಾಮ್‌ಗಾರ್ ಹಿತವರ್ಧಕ್ ಸಭಾ' ಸ್ಥಾಪನೆಯಾಗಿ ಚಟುವಟಿಕೆಗಳು ಹೆಚ್ಚಾದವು (ಸೇನ್ 1977: 115). ಕಾರ್ಮಿಕ ಹೋರಾಟಗಳಿಗೆ ಒಂದು ಹೊಸ ತಿರುವನ್ನು ನೀಡಿದ್ದು 1914 ರಿಂದ 1918 ರವರೆಗೂ ನಡೆದ ಮೊದಲ ಮಹಾಯುದ್ಧ ಮತ್ತು 1917 ರಲ್ಲಿ ನಡೆದ ರಷ್ಯನ್ ಕ್ರಾಂತಿ. ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ಆರಂಭಕ್ಕೆ ಇದು ಸ್ಫೂರ್ತಿಯನ್ನು ನೀಡಿತು[31]. ಭಾರತದಲ್ಲಿ ಮೊದಲ ಆಧುನಿಕ ಕಾರ್ಮಿಕ ಸಂಘಟನೆ 1918 ರ ಏಪ್ರಿಲ್ 27 ರಂದು ಬಿ.ಪಿ.ವಾಡಿಯಾ ತಾವೇ ಅಧ್ಯಕ್ಷರಾಗಿ ಪ್ರಾರಂಭಿಸಿದ ಮದ್ರಾಸ್ ಲೇಬರ್ ಯೂನಿಯನ್ ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇವರು ಶ್ರೀಮತಿ ಅನಿಬೆಸೆಂಟ್ ಅವರ ಅನುಯಾಯಿ. ಹಾಗೆ ನೋಡಿದರೆ ಬಾಂಬೆ ಮತ್ತು ಕಲ್ಕತ್ತಾಗಳಿಗಿಂತ ಕಾರ್ಮಿಕ ಹೋರಾಟಗಳು ತುಂಬಾ ಕಡಿಮೆಯಿದ್ದ ಮದ್ರಾಸ್‌ನಲ್ಲಿ ಇದು ಆರಂಭವಾದದ್ದು ಆಕಸ್ಮಿಕವೆಂದು ಭಾವಿಸಲಾಗಿದೆ. ಬಾಂಬೆಯಲ್ಲಿ ಲೋಖಂಡೆ ಅವರು ಸಂಘಟಿಸಿದ ಕಾರ್ಮಿಕ ಸಂಘಟನೆಯ ನಾಲ್ಕು ದಶಕಗಳ ನಂತರ ವಾಡಿಯಾ ಮದ್ರಾಸಿನಲ್ಲಿ ಕಾರ್ಮಿಕ ಸಂಘಟನೆ ಆರಂಭಿಸುವಾಗ ಪರಿಸ್ಥಿತಿಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು.

ತಿಲಕರು ಇಂಗ್ಲೆಂಡಿನಲ್ಲಿದ್ದಾಗ ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಲೇಬರ್ ಪಾರ್ಟಿಯ ಚಟುವಟಿಕೆಗಳಿಂದ ಪ್ರಭಾವಿತರಾಗಿದ್ದರು. ಅಷ್ಟೊತ್ತಿಗಾಗಲೇ ಬಾಂಬೆ ಕಾರ್ಮಿಕರ ನಡುವೆ ತಿಲಕರು ಜನಪ್ರಿಯರಾಗಿದ್ದರು. ಇದೇ ವೇಳೆಗೆ ಮೊದಲ ವಿಶ್ವಯುದ್ಧ ಮುಗಿದು ಲೀಗ್ ಆಫ್ ನೇಷನ್ಸ್‌ನ ಭಾಗವಾಗಿ ಐಎಲ್‌ಓ 1919 ರಲ್ಲಿ ಸ್ಥಾಪನೆಯಾಗಿತ್ತು. ಭಾರತದಲ್ಲಿ ಕೈಗಾರಿಕೀಕರಣ ಮತ್ತು ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ತನ್ನನ್ನು ವಿಜೃಂಭಿಸಿಕೊಳ್ಳಲು ಸರ್ಕಾರ ಐಎಲ್‌ಓ ಬಳಸಿಕೊಳ್ಳಲು ಪ್ರಯತ್ನಿಸಿತು. ಇದರ ಮೊದಲ ಸಮ್ಮೇಳನದಲ್ಲಿ ಭಾರತದ ಕಾರ್ಮಿಕರನ್ನು ಪ್ರತಿನಿಧಿಸಲು ಬಿ.ಪಿ.ವಾಡಿಯಾ ಇವರನ್ನು ನೇಮಿಸಿತು. 1920 ರಲ್ಲಿ ವಾಷಿಂಗ್ಟನ್‌ನಲ್ಲಿ ನಡೆದ 2 ನೇ ಸಮ್ಮೇಳನಕ್ಕೆ ಸರ್ಕಾರ ಎನ್.ಎಂ.ಜೋಷಿ ಎಂಬುವರನ್ನು ನೇಮಿಸಿತು ಮತ್ತು ಇವರಿಗೆ ಸಹಾಯಕರಾಗಿ ತಿಲಕರನ್ನು ನೇಮಿಸಿತು. ಸರ್ಕಾರದ ಪ್ರತಿನಿಧಿಯೊಬ್ಬರಿಗೆ ಸಹಾಯಕರಾಗಿ ಹೋಗಲು ತಿಲಕರು ನಿರಾಕರಿಸಿದರು (ಸೇನ್ 1977: 163). ಸರ್ಕಾರದ ಕ್ರಮವನ್ನು ವಿರೋಧಿಸಿ ಬಾಂಬೆಯ ಕಾರ್ಮಿಕರು 1920 ಜುಲೈ 7 ರಂದು ಪರೇಲ್‌ನಲ್ಲಿ ಸಭೆ ಸೇರಿ ಎನ್.ಎಂ.ಜೋಷಿಯ ನಾಮಕರಣವನ್ನು ವಿರೋಧಿಸಿದರು ಮತ್ತು 'ಈ ಸಭೆಯು ಬಾಂಬೆಯಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಭೆಯನ್ನು ನಡೆಸಲು ತೀರ್ಮಾನಿಸುತ್ತದೆ ಮತ್ತು ಲಾಲಾ ಲಜಪತ್ ರಾಯ್ ಅವರನ್ನು ಅದರ ಮೊದಲ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತದೆ' ಎಂದು ಘೋಷಿಸಿತು (ಎಐಟಿಯುಸಿ 1973: 4). ಐಎಲ್‌ಓ ಪ್ರಾತಿನಿಧ್ಯದ ಪ್ರಶ್ನೆಯು ತಕ್ಷಣದ ಪ್ರಶ್ನೆಯಾಗಿ ಅದುವರೆಗೂ ಅದುಮಿಟ್ಟಿದ್ದ ಒಂದು ಹೊಸ ಪ್ರಯೋಗಕ್ಕೆ ನಾಂದಿ ಹಾಡಿತು. ಸಮ್ಮೇಳನವು ಆಗಸ್ಟ್ 22, 1920 ಎಂದು ನಿಗದಿಯಾಗಿತ್ತು. ಆದರೆ ಆಗಸ್ಟ್ 1

ರಂದು ತಿಲಕರ ಅಕಾಲಿಕ ನಿಧನದಿಂದಾಗಿ ಅಧಿವೇಶನವು, 1920 ಅಕ್ಟೋಬರ್ 31 ರಿಂದ ನವೆಂಬರ್ 2 ರವರೆಗೆ ನಡೆಯಿತು. ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ಲಾಲ ಲಜಪತ್ ರಾಯ್ ವಹಿಸಿದ್ದರು. ಈ ಅಧಿವೇಶನದ ವಿಶಿಷ್ಟತೆ ಏನೆಂದರೆ, ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳೂ ಸಹ ಇದರಲ್ಲಿ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದುದು[32].

ಬಾಂಬೆಯ ಎಂಪೈರ್ ಥಿಯೇಟರ್‌ನಲ್ಲಿ ನಡೆದ ಉದ್ಘಾಟನಾ ಅಧಿವೇಶನದಲ್ಲಿ ಭಾರತದ ಎಲ್ಲಾ ಭಾಗಗಳಿಂದ ಸರಿಸುಮಾರು 5,00,000 ಕಾರ್ಮಿಕರನ್ನು ಪ್ರತಿನಿಧಿಸಿ 801 ಜನರು ಭಾಗವಹಿಸಿದ್ದರು (ಎಐಟಿಯುಸಿ 1973: 4). ಲಾಲ ಲಜಪತ್ ರಾಯ್ ಅವರು ಕಾರ್ಮಿಕರ ಹಿತಾಸಕ್ತಿಗಳನ್ನು ಸಮಗ್ರವಾಗಿ ಕಟ್ಟಿಕೊಟ್ಟರು, ಮಾತ್ರವಲ್ಲ, ಭಾರತದ ಕಾರ್ಮಿಕವರ್ಗ ಸಮಾಜವಾದಿ ಚಿಂತನೆಗಳನ್ನು ಮತ್ತು ವರ್ಗ ಪ್ರಜ್ಞೆಯನ್ನು ಹೊಂದಬೇಕೆಂಬ ಬಯಕೆಯನ್ನೂ ವ್ಯಕ್ತಪಡಿಸಿದರು. ಹಾಗೆಯೇ ಯೂರೋಪಿಯನ್ ಅಥವಾ ರಷ್ಯನ್ ಕಾರ್ಮಿಕರ ಸವಲತ್ತುಗಳ ಮಟ್ಟವನ್ನು ಭಾರತದ ಕಾರ್ಮಿಕರಿಗೆ ಅಕಾಲಿಕವಾಗಿ ಅನ್ವಯಿಸುವ ಬಗ್ಗೆಯೂ ಎಚ್ಚರಿಸಿದರು. ಎಐಟಿಯುಸಿ ಅಧಿವೇಶನದಲ್ಲಿ ಕಾರ್ಮಿಕರ ಹಲವಾರು ಪ್ರಶ್ನೆಗಳ ಕುರಿತು ಚರ್ಚೆ ನಡೆದು, ಐಎಲ್‌ಸಿ ಸಮ್ಮೇಳನವು, ಭಾರತವನ್ನು ಹೊರತುಪಡಿಸಿ ಬೇರೆಲ್ಲಾ ರಾಷ್ಟ್ರಗಳಿಗೂ 8 ಗಂಟೆ ಕೆಲಸದ ಶಿಫಾರಸ್ಸು, ಮತ್ತು ಬೇರೆ ರಾಷ್ಟ್ರಗಳಿಗೆ ಬಾಲ ಕಾರ್ಮಿಕ ವಯಸ್ಸಿನ ಮಿತಿಯನ್ನು 14 ವರ್ಷಗಳು ಭಾರತಕ್ಕೆ 12 ವರ್ಷಗಳೆಂದು ನಿಗದಿ ಮಾಡಿದ್ದ ತಾರತಮ್ಯದ ವಿರುದ್ಧ ಸ್ಥಾಯಿ ಸಮಿತಿಗೆ ಕೊಂಡೊಯ್ಯಲು ಉದ್ದೇಶಿಸಿತು. ದೇಶದ ವಿವಿಧ ವಿಧಾನ ಪರಿಷತ್‌ಗಳಲ್ಲಿ ಛೇಂಬರ್ಸ್ ಆಫ್ ಕಾಮರ್ಸ್‌ಗಳಿಗೆ ಮತ್ತು ಮಿಲ್ ಮಾಲೀಕರು ಮತ್ತು ಪ್ಲಾಂಟರ್ಸ್ ಅಸೋಸಿಯೇಷನ್‌ಗಳಿಗೆ ವಿಶೇಷ ಪ್ರಾತಿನಿಧ್ಯವಿತ್ತು. ಕಾರ್ಮಿಕರಿಗೂ ಮತದಾನದ ಹಕ್ಕನ್ನು ವಿಸ್ತರಿಸಬೇಕೆಂದು ತೀರ್ಮಾನಿಸಿತು. ಅಧಿವೇಶನವು ಮಹಿಳಾ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳ ಬಗ್ಗೆ, ಕಾರ್ಮಿಕರಿಗೆ ನೀಡಲಾಗುತ್ತಿರುವ ಕಿರುಕುಳಗಳ ಬಗ್ಗೆ ತೀರ್ಮಾನಗಳನ್ನು ಮಾಡಿತು. ಅಂತಿಮವಾಗಿ, ಎಐಟಿಯುಸಿಗೆ ಲಾಲ ಲಜಪತ್ ರಾಯ್ ಅಧ್ಯಕ್ಷರಾಗಿ, ಜೋಸೆಫ್ ಬ್ಯಾಪ್ಟಿಸ್ಟ್ ಉಪಾಧ್ಯಕ್ಷರಾಗಿ, ದಿವಾನ್ ಚಮನ್‌ಲಾಲ್ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. 82 ಜನರ ಸ್ಥಾಯಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕೊನೆಯದಾಗಿ, ಎಐಟಿಯುಸಿ ಭಾರತದ ಕಾರ್ಮಿಕರಿಗೆ 'ಮ್ಯಾನಿಫೆಸ್ಟೋ ಟು ದಿ ವರ್ಕರ್ಸ್ ಆಫ್ ಇಂಡಿಯಾ' ಎಂಬ ಕರೆಯನ್ನು ನೀಡಿತು (ಸೇನ್ 1977: 177).

ಎಐಟಿಯುಸಿಯೊಳಗೆ ಕಮ್ಯುನಿಸ್ಟ್ ಭೂತದ ಪ್ರಶ್ನೆಯನ್ನು ಮುಂದು ಮಾಡಿ ಬ್ರಿಟಿಷ್ ಸರ್ಕಾರ ಕಾರ್ಮಿಕ ಚಳುವಳಿಯಲ್ಲಿ ಹೆಚ್ಚುತ್ತಿದ್ದ ಕಮ್ಯುನಿಸ್ಟರನ್ನು ಸದೆ ಬಡಿಯಲು ತೀರ್ಮಾನಿಸಿತು. ಇದಕ್ಕಾಗಿ ದ್ವಿಮುಖ ಧೋರಣೆಯನ್ನು ಅನುಸರಿಸಿತು. ಒಂದು ಕಡೆ, ಕಾರ್ಮಿಕ ಚಳುವಳಿಯನ್ನು ಸುರಕ್ಷಾ ಗಡಿಯೊಳಗೆ ಇರಿಸಲು 'ದಿ ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ 1926' ನ್ನು ಜಾರಿಗೊಳಿಸಿತು. ಮತ್ತೊಂದು ಕಡೆ, 'ದಿ ಟ್ರೇಡ್ ಡಿಸ್ಪ್ಯೂಟ್ ಆಕ್ಟ್' ಮತ್ತು 'ಪಬ್ಲಿಕ್ ಸೇಫ್ಟಿ ಆಕ್ಟ್'ನ್ನು ದಮನಕಾರಿ ಉದ್ದೇಶಕ್ಕಾಗಿ ಜಾರಿಗೊಳಿಸಿತು. ಮೀರತ್ ಪಿತೂರಿ ಮೊಕದ್ದಮೆ ಈ ಹಿನ್ನೆಲೆಯಲ್ಲೇ ಹೆಣೆದದ್ದು ಎಂಬುದನ್ನು ಗಮನಿಸಬೇಕು. ಕಮ್ಯುನಿಸ್ಟರ ಮುಂಚೂಣಿ ಕೆಲಗಳಿಂದಾಗಿ ರಾಷ್ಟ್ರೀಯ

ಹೋರಾಟವು ತನ್ನ ತೀವ್ರತೆಯನ್ನು ಹೆಚ್ಚಿಸಿಕೊಂಡಿದ್ದು ಮಾತ್ರವಲ್ಲ, ಕ್ರಾಂತಿಕಾರಿ ಹೋರಾಟದ ತೀವ್ರತೆಯಲ್ಲೂ ಹೆಚ್ಚಳವಾಯಿತು. 1927 ರ ನವೆಂಬರ್‌ನಲ್ಲಿ ಕಾನ್ಪುರದಲ್ಲಿ ನಡೆದ ಎಐಟಿಯುಸಿ ಎಂಟನೇ ಅಧಿವೇಶನದಲ್ಲಿ ದೇಶಾದ್ಯಂತ ಸಂಘಟಿತವಾಗಿ ಮೇ ದಿನಾಚರಣೆ ಆಚರಿಸಬೇಕೆಂದು ತೀರ್ಮಾನವಾಯಿತು. ಅಂದಿನಿಂದ ಬಾಂಬೆ, ಕಲ್ಕತ್ತಾ, ಮದ್ರಾಸ್ ಮುಂತಾದ ಕಾರ್ಮಿಕ ಕೇಂದ್ರಗಳಲ್ಲಿ ಮೇ ದಿನಾಚರಣೆ ಆರಂಭವಾಯಿತು. ಎಐಟಿಯುಸಿ ತೀರ್ಮಾನ ಮಾಡುವುದಕ್ಕೆ ಮೊದಲೇ ಸ್ವತಂತ್ರವಾಗಿ ಮೇ ದಿನ ಆಚರಿಸಿರುವ ಉದಾಹರಣೆಗಳಿವೆ[33]. 1928 ಝರಿಯಾದಲ್ಲಿ ನಡೆದ ಒಂಭತ್ತನೇ ಅಧಿವೇಶನದಲ್ಲಿ ಎಐಟಿಯುಸಿ ಗುರಿ ಭಾರತವನ್ನು ಕಾರ್ಮಿಕರ ಸಮಾಜವಾದಿ ಗಣರಾಜ್ಯವನ್ನಾಗಿ ಪರಿವರ್ತಿಸುವುದು ಎಂದು ಘೋಷಿಸಿತು (ಸೇನ್ 1977: 282).

1920 ರ ದಶಕದುದ್ದಕ್ಕೂ ನಡೆದ ರೈಲ್ವೆ ಮುಷ್ಕರಗಳು, ಬಾಂಬೆ ಜವಳಿ ಕಾರ್ಮಿಕರ ದೀರ್ಘಾವಧಿ ಮುಷ್ಕರಗಳು, ಬಂಗಾಳದ ಸೆಣಬು ಕಾರ್ಮಿಕರ ಮುಷ್ಕರಗಳು, ಜೆಮ್‌ಷೆಡ್‌ಪುರದ ಕಬ್ಬಿಣ ಮತ್ತು ಉಕ್ಕಿನ ಕಾರ್ಮಿಕರ ಬಲಿಷ್ಟ ಮುಷ್ಕರಗಳು, ಹೀಗೆ ದೇಶದ ವಿವಿಧ ಭಾಗಗಳಲ್ಲಿ ನಡೆದ ಮಿಲಿಟೆಂಟ್ ಹೋರಾಟಗಳಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರ, ಅವರಲ್ಲಿ ಹೊಸದೊಂದು ಅನುಭವವನ್ನು ತಂದುಕೊಟ್ಟಿತು. ಕಾರ್ಮಿಕರ ನಡುವೆ ಕಮ್ಯುನಿಸ್ಟರ ಪ್ರಭಾವ ಹೆಚ್ಚಾಯಿತು ಮತ್ತು ಅವರು ಹೆಚ್ಚೆಚ್ಚು ಜನಪ್ರಿಯರಾದರು. ಹಳೆಯ ಸುಧಾರಣಾವಾದಿ ಮುಖಂಡರು ದುರ್ಬಲರಾದರು. ಈ ಬದಲಾವಣೆಗಳು ಎಐಟಿಯುಸಿ ಅಧಿವೇಶನಗಳ ಚರ್ಚೆಯಲ್ಲಿ ಪ್ರತಿಫಲಿಸಿತು. ಅದರ ದೀರ್ಘ ಕಾಲದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಎನ್.ಎಂ.ಜೋಷಿಯಂತಹವರು, ಕಾರ್ಮಿಕರು ರಾಜಕೀಯ ಹೋರಾಟದಲ್ಲಿ ಭಾಗವಹಿಸುವುದರ ಪರವಾಗಿರಲಿಲ್ಲ. ಇನ್ನು ಚಮನ್‌ಲಾಲ್ ಮತ್ತು ಲಾಲ ಲಜಪತ್‌ರಾಯ್ ಇವರುಗಳು ರಾಜಕೀಯ ಹೋರಾಟಗಳಲ್ಲಿ ಭಾಗವಹಿಸುವುದರ ಪರವಾಗಿದ್ದರು. ಅದರೆ ಇವರ ಕಣ್ಣೋಟ ಬ್ರಿಟಿಷ್ ಲೇಬರ್ ಪಾರ್ಟಿಯ ತಿಳುವಳಿಕೆಯನ್ನು ಪ್ರತಿಫಲಿಸುತ್ತಿತ್ತು. ಕಾಂಗ್ರೆಸ್ ಕಣ್ಣೋಟವಂತೂ ಕಾರ್ಮಿಕ ಚಳುವಳಿ, ಕಮ್ಯುನಿಸ್ಟರು ಮತ್ತು ಎಡಪಂಥೀಯರ ಬಗ್ಗೆ ಗೊಂದಲಕಾರಿಯಾಗಿತ್ತು. ಹೀಗಾಗಿ ಕಾರ್ಮಿಕರ ರಾಜಕೀಯ ಪಾತ್ರದ ಬಗ್ಗೆ ಭಿನ್ನ ನಿಲುವನ್ನು ಹೊಂದಿದ್ದ ಕಮ್ಯುನಿಸ್ಟರು ಕಾರ್ಮಿಕರು ಮತ್ತು ರೈತರ ಪಕ್ಷವನ್ನು ಕಟ್ಟುವ ಮೂಲಕ ತಮ್ಮ ಉದ್ದೇಶವನ್ನು ಸಾಧಿಸಲು ಮುಂದಾದರು.

ಇದೇ ಸಂದರ್ಭಕ್ಕೆ ಜೆ.ಹೆಚ್.ವಿಟ್ಲೇ ನೇತೃತ್ವದ ರಾಯಲ್ ಕಮಿಷನ್ ಆನ್ ಲೇಬರ್ ಇನ್ ಇಂಡಿಯ, ಮೂಲಕ ಬ್ರಿಟಿಷರು ಹೆಚ್ಚುತ್ತಿದ್ದ ಕಾರ್ಮಿಕ ಚಳುವಳಿಗೆ ಲಗಾಮು ಹಾಕಲು ಪ್ರಯತ್ನಿಸಿದರು. ಬ್ರಿಟಿಷರು ಉಪಾಯ ಹೂಡಿ ಎನ್.ಎಂ.ಜೋಷಿ ಮತ್ತು ಚಮನ್‌ಲಾಲ್ ಇವರನ್ನು ಈ ಕಮಿಷನ್ ಸದಸ್ಯರನ್ನಾಗಿ ಮಾಡಿದರು. ಇದು ಮುಂದೆ ಎಐಟಿಯುಸಿಯಲ್ಲಿ ಎಡ ಮತ್ತು ಬಲ ಗುಂಪುಗಳೆಂದು ವಿಭಜನೆಗೆ ದಾರಿ ಮಾಡಿಕೊಟ್ಟಿತು. ಎಐಟಿಯುಸಿ ಹತ್ತನೇ ಅಧಿವೇಶನವನ್ನು ಬಹಿಷ್ಕರಿಸಿ ಹೊರನಡೆದ ಗುಂಪು 1929 ಡಿಸೆಂಬರ್ 1 ರಂದು ಪ್ರತ್ಯೇಕ ಸಭೆ ನಡೆಸಿ 'ಇಂಡಿಯನ್ ಟ್ರೇಡ್ ಯೂನಿಯನ್ ಫೆಡರೇಷನ್' (ಐಟಿಯುಎಫ್) ಎಂಬ ಸಂಘಟನೆಯನ್ನು ರಚಿಸಿ, ವಿ.ವಿ.ಗಿರಿಯವರ ಅಧ್ಯಕ್ಷತೆಯಲ್ಲಿ ತಾತ್ಕಾಲಿಕ ಸಮಿತಿಯನ್ನು ನೇಮಿಸಿದರು. ಎಐಟಿಯುಸಿ ಮೊದಲ

ವಿಭಜನೆಯಾಯಿತು. ಐಟಿಯುಎಫ್ ಸಂವಿಧಾನವನ್ನು ರೂಪಿಸುವ ಕುರಿತು ಅದರ ತೀರ್ಮಾನ ಎಷ್ಟು ಸ್ಪಷ್ಟವಾಗಿ ಕಮ್ಯುನಿಸಂ ವಿರೋಧವಾಗಿತ್ತೆಂದರೆ, 'ಫೆಡರೇಷನ್‌ನ ಪ್ರತಿನಿಧಿಯಾಗುವಾಗ ಅಥವಾ ಅದಕ್ಕೆ ಸಂಯೋಜನೆ ಹೊಂದುವಾಗ, ಕಮ್ಯುನಿಸ್ಟ್ ಪ್ರವೃತ್ತಿಗಳಿರುವ ಜನ ಅಥವಾ ಯೂನಿಯನ್‌ಗಳನ್ನು ಹೊರಗಿಡುವ ಪರಿಚ್ಛೇಧವನ್ನು ಹೊಂದಿರಬೇಕೆಂದು' ನಿಷ್ಟುರವಾದ ಮಾತುಗಳಲ್ಲಿ ಹೇಳಿತು (ಸೇನ್ 1977: 307).

ಎಐಟಿಯುಸಿಯಲ್ಲಿ ಎರಡನೇ ವಿಭಜನೆ 1931 ಜುಲೈ 3 ರಿಂದ 7 ರವರೆಗೆ ಕಲ್ಕತ್ತಾದಲ್ಲಿ ನಡೆದ ಹನ್ನೊಂದನೇ ಅಧಿವೇಶನದಲ್ಲಿ ಸಂಭವಿಸಿತು. ಮೊದಲ ವಿಭಜನೆಯ ನಂತರ ಎಐಟಿಯುಸಿಯಲ್ಲಿ ಎರಡು ಧೋರಣೆಗಳು ಉಳಿದವು. ಒಂದು ಕಮ್ಯುನಿಸ್ಟರು ಮತ್ತೊಂದು ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು. ಕಾರ್ಮಿಕ ವರ್ಗದ ಸ್ವತಂತ್ರ ರಾಜಕೀಯ ಕಾರ್ಯಾಚರಣೆ ಕುರಿತು ಇವರ ನಡುವೆ ಭಿನ್ನಾಭಿಪ್ರಾಯಗಳು ಇದ್ದವು. ಇವು ತೀವ್ರಗೊಂಡು 'ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್' ರಚನೆಯಾಗುವುದರಲ್ಲಿ ಪರ್ಯವಸಾನವಾಯಿತು (ಸೇನ್ 1977: 309). ಆದರೆ ದಿನಕಳೆದಂತೆ ಮೂರೂ ಸಂಘಟನೆಗಳ ಐಕ್ಯತೆಗೆ ಹೆಚ್ಚಿನ ಧ್ವನಿ ಬಂದು, ಹದಿನಾಲ್ಕನೇ ಅಧಿವೇಶನದಲ್ಲಿ ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ವಾಪಸ್ ಎಐಟಿಯುಸಿಯಲ್ಲಿ ಸೇರ್ಪಡೆಯಾಯಿತು.

ಮೊದಲ ಪ್ರಪಂಚ ಯುದ್ಧದ ಆರಂಭದೊಡನೆ ಕಾರ್ಮಿಕ ಮುಷ್ಕರಗಳು ತೀವ್ರಗೊಂಡವು.ಉತ್ಪಾದನೆಯನ್ನು ಹೆಚ್ಚಿಸಲು ಕೈಗಾರಿಕೆಗಳು ಎರಡು ಪಾಳಿಗಳ ಜಾಗದಲ್ಲಿ ಮೂರು ಪಾಳಿಗಳ ಕೆಲಸವನ್ನು ಜಾರಿಗೊಳಿಸಿದರು. ಬಂಡವಾಳದಾರರು ಯುದ್ಧ ಸಂದರ್ಭವನ್ನು ಬಳಸಿಕೊಂಡು ಫ್ಯಾಕ್ಟರಿ ಕಾಯ್ದೆಯಿಂದ ವಿನಾಯಿತಿ ಪಡೆಯುವುದು ಸಾಮಾನ್ಯ ಸಂಗತಿಯಾಯಿತು. ಹಲವಾರು ಉದ್ದಿಮೆಗಳಲ್ಲಿ ಕೆಲಸದ ಅವಧಿಯನ್ನು 10–12 ಗಂಟೆಗಳಿಗೆ ಹೆಚ್ಚಿಸಿದರು (ಸೇನ್ 1977: 377). ಅಲ್ಲಿಯವರೆಗೂ ಗಳಿಸಿದ್ದ ಎಲ್ಲಾ ಕಾನೂನುಗಳ ರಕ್ಷಣೆ ಬಹುತೇಕ ರದ್ದಾಯಿತು. ಮಹಿಳೆ ಮತ್ತು ಮಕ್ಕಳ ಕುರಿತಾದ ಕಾನೂನುಗಳನ್ನು ಗಾಳಿಗೆ ತೂರಲಾಯಿತು. 'ರಾಷ್ಟ್ರ ಸೇವೆ'ಯ ಹೆಸರಿನಲ್ಲಿ ಬಲವಂತವಾಗಿ ದುಡಿಸಿಕೊಳ್ಳಲು ಅವಕಾಶ ಕೊಡುವ ಸುಗ್ರೀವಾಜ್ಞೆಯನ್ನು 1940 ರಲ್ಲಿ ಗವರ್ನರ್ ಜನರಲ್ ಜಾರಿಗೊಳಿಸಿದರು. ದಿ ಎಸೆನ್ಶಿಯಲ್ ಸರ್ವೀಸಸ್ ಮೇಂಟೆನೆನ್ಸ್ ಆರ್ಡಿನೆನ್ಸ್ 1941 (ಎಸ್ಮಾ) ಜಾರಿಗೊಳಿಸಿ ಕಾರ್ಮಿಕರು ಕಡ್ಡಾಯವಾಗಿ ಕೆಲಸಕ್ಕೆ ಬರಬೇಕೆಂದು ಹೇರಲಾಯಿತು. ಸಹಜವಾಗಿಯೇ ಕಾರ್ಮಿಕರ ಪ್ರತಿರೋಧವೂ ಸಹ ತೀವ್ರಗೊಂಡಿತು[34].

1938 ರಲ್ಲಿ ನಡೆದ ಸೇರ್ಪಡೆ ಸಮ್ಮೇಳನದ ಪರಿಣಾಮವಾಗಿ 1940 ರಲ್ಲಿ ನಡೆದ 18ನೇ ಅಧಿವೇಶನದಲ್ಲಿ ಎಐಟಿಯುಸಿಯಲ್ಲಿ ಎನ್‌ಟಿಯುಎಫ್ ಅಧಿಕೃತವಾಗಿ ಸೇರ್ಪಡೆಯಾಯಿತು. ಈ ಅವಧಿಯಲ್ಲಿ ಎಐಟಿಯುಸಿ ಒಳಗೆ ಯುದ್ಧ ಮತ್ತು ಅದನ್ನನುಸರಿಸಿ ಬಂದ ವಿಚಾರಗಳಲ್ಲಿ ಸಾಕಷ್ಟು ಸಮಸ್ಯೆಗಳು ತಲೆದೋರಿದವು. ಇಲ್ಲಿ, ಯುದ್ಧಕ್ಕೆ ಸಂಬಂಧಿಸಿ, ಭಾರತಕ್ಕೆ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಘೋಷಿಸಿದರೆ ಮಾತ್ರ ಯುದ್ಧ ಚಟುವಟಿಕೆಗಳಿಗೆ ಬೆಂಬಲ ನೀಡಲಾಗುವುದು, ಎಂಬ ಕಾಂಗ್ರೆಸ್ ನಿಲುವನ್ನು ಬೆಂಬಲಿಸಿ ನಿರ್ಣಯ ಅಂಗೀಕರಿಸಲಾಯಿತು. ಎಐಟಿಯುಸಿಯ ನಿಲುವನ್ನು ವಿರೋಧಿಸಿ ಎಂ.ಎನ್.ರಾಯ್ ಅವರು ತಮ್ಮ ಅನುಯಾಯಿಗಳೊಡನೆ ಸೇರಿ 'ಇಂಡಿಯನ್ ಲೇಬರ್

ಫೆಡರೇಷನ್' ಸ್ಥಾಪಿಸಿದರು ಮತ್ತು ಫ್ಯಾಸಿಸ್ಟ್-ವಿರೋಧಿ ಯುದ್ಧದ ಪರವಾಗಿ ಸಕ್ರಿಯವಾಗಿ ಕೆಲಸ ಮಾಡಿದರು (ಸೇನ್ 1977: 391–92). ಈ ನಡುವೆ ಜರ್ಮನಿ ಸಮಾಜವಾದಿ ರಷ್ಯಾ ಮೇಲೆ ದಾಳಿ ಮಾಡಿದ ನಂತರ ಯುದ್ಧದ ಕುರಿತು ಕಮ್ಯುನಿಸ್ಟ್ ಪಕ್ಷದ ನಿಲುವಿನಲ್ಲಿ ಬದಲಾವಣೆ ಉಂಟಾಯಿತು. ಈ ಯುದ್ಧವನ್ನು 'ಜನತೆಯ ಯುದ್ಧ'ವನ್ನಾಗಿ ಎದುರಿಸಲು ಕರೆ ಕೊಟ್ಟಿತು. ಇದೇ ಸಂದರ್ಭಕ್ಕೆ ಕಾಂಗ್ರೆಸ್‌ನ ಬೇಡಿಕೆಗೆ ಪೂರಕವಾಗಿ ಬ್ರಿಟಿಷ್ ಸರ್ಕಾರ ಸ್ಪಂದಿಸದೇ ಇದ್ದ ಕಾರಣಕ್ಕೆ 'ಕ್ವಿಟ್ ಇಂಡಿಯ' ಚಳುವಳಿಗೆ ಕರೆ ನೀಡಿತು. ಯುದ್ಧದ ಕುರಿತ ಅಂದಾಜಿನಲ್ಲಿ ಬಂದ ಭಿನ್ನಾಭಿಪ್ರಾಯಗಳು ಎಐಟಿಯುಸಿಯಲ್ಲೂ ಪ್ರತಿಧ್ವನಿಸಿದವು. ಇದೇನೇ ಆದರೂ, ಕಾರ್ಮಿಕ ಚಳುವಳಿಯಲ್ಲಿ ವಿಸ್ತರಣೆ ವ್ಯಾಪಕವಾಗಿ ಸಂಭವಿಸಿತು35.

ಕಾರ್ಮಿಕರ ಮಿಲಿಟೆಂಟ್ ಹೋರಾಟಗಳು ಒಂದು ಕಡೆ, ಯುದ್ಧದ ಅನಿವಾರ್ಯತೆಗಳು ಮತ್ತೊಂದು ಕಡೆ ಬ್ರಿಟಿಷ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಮೊಟ್ಟಮೊದಲ ಬಾರಿಗೆ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನಗಳನ್ನು ಕರೆಯಲು ತೀರ್ಮಾನಿಸಿತು. ಮೊದಲ ಸಮ್ಮೇಳನವನ್ನು 1942 ರ ಆಗಸ್ಟ್ 7 ರಂದು ಕರೆಯಿತು. ಈ ಸಮ್ಮೇಳನಗಳ ತೀರ್ಮಾನಗಳು ಕೇವಲ ಸಲಹಾ ಸ್ವರೂಪದ್ದಾಗಿರದೆ, ಐಎಲ್‌ಓ ತೀರ್ಮಾನಗಳ ವಿಚಾರದಲ್ಲಿ ಮಾಡುವಂತೆ, ಅದನ್ನು ಶಾಸನಸಭೆಯಲ್ಲಿ ಮಂಡಿಸಬೇಕೆಂದು ಎಐಟಿಯುಸಿ ಒತ್ತಾಯಿಸಿತು. 1943 ರಲ್ಲಿ ನಡೆದ ಎರಡನೇ ಸಮ್ಮೇಳನದಲ್ಲಿ ಕನಿಷ್ಟ ವೇತನ ಮತ್ತು ಸಾಮಾಜಿಕ ಸುರಕ್ಷೆ ಬಗ್ಗೆ ನಿರ್ಣಯ ಮಂಡಿಸಿತು (ಬರ್ದನ್ 1997: 38).

ಎಐಟಿಯುಸಿ ಕಮ್ಯುನಿಸ್ಟರ ಹಿಡಿತದಲ್ಲಿದೆಯೆಂದು ಹೇಳಿ ಕಮ್ಯುನಿಸ್ಟರನ್ನು ದೂಷಿಸಿ, ಗಾಂಧೀಜಿಯವರ ಭೋಧನೆಗಳಿಗೆ ಅನುಗುಣವಾಗಿ ಕಾರ್ಮಿಕ ಚಳುವಳಿಯನ್ನು ಸರಿಯಾದ ದಾರಿಯಲ್ಲಿ ಕಟ್ಟಲು ಮತ್ತು ನಡೆಸಲು ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐಎನ್‌ಟಿಯುಸಿ) ಸ್ಥಾಪನೆ ಮಾಡುತ್ತಿರುವುದಾಗಿ ಕಾಂಗ್ರೆಸ್ ಮುಖಂಡ ಗುಲ್ಜಾರಿಲಾಲ್ ನಂದಾ ಘೋಷಿಸಿದರು. ಈ ರೀತಿಯಲ್ಲಿ ಜವಹರಲಾಲ್ ನೆಹರೂ, ರಾಮ ಮನೋಹರ ಲೋಹಿಯಾ, ಕಮಲಾದೇವಿ ಚಟ್ಟೋಪಾಧ್ಯಾಯ, ರಾಜೇಂದ್ರ ಪ್ರಸಾದ್ ಮುಂತಾದವರೆಲ್ಲಾ ಭಾಗವಹಿಸಿದ್ದ, ಪಟೇಲರು ಅಧ್ಯಕ್ಷತೆ ವಹಿಸಿದ್ದ 1947 ರ ಮೇ 3–4 ರಂದು ನಡೆದ ಸಭೆಯಲ್ಲಿ ಐಎನ್‌ಟಿಯುಸಿ ಸಂಘಟನೆಯನ್ನು ಸ್ಥಾಪಿಸಿದರು (ಮಹೇಂದ್ರ 2005: 30). ಸ್ವತಂತ್ರ ಭಾರತದಲ್ಲಿ ಕಾರ್ಮಿಕ ಸಂಘಟನೆಗಳು ಶ್ರಮ ಮತ್ತು ಬಂಡವಾಳದ ನಡುವೆ ಸಂಘರ್ಷದ ಬದಲು ಸಹಬಾಳ್ವೆ ಸಾಧಿಸಬೇಕು ಎಂಬ ವರ್ಗ ಸಹಕಾರದ ದಾರಿಗೆ ಕಾಂಗ್ರೆಸ್ ಪೀಠಿಕೆ ಹಾಕಿತು.

❖ ❖ ❖

1930 ರ ದಶಕದ ಮಧ್ಯಭಾಗಕ್ಕೆ ಕಮ್ಯುನಿಸ್ಟರ ಹೆಚ್ಚಳಗೊಂಡ ಹೋರಾಟಗಳು, ಸೋಷಿಯಲಿಸ್ಟರು ಮತ್ತು ಎಡ ಸಮಾಜವಾದಿಗಳು ಬಲಗೊಂಡ ಹಿನ್ನೆಲೆಯಲ್ಲಿ ರೈತರ ಮತ್ತು ಭೂಸಂಬಂಧಗಳ ಬಗ್ಗೆ ಚರ್ಚೆಗಳು ತೀವ್ರಗೊಂಡ ಪರಿಣಾಮವಾಗಿ 1936 ರ ಏಪ್ರಿಲ್ 11 ರಿಂದ 13 ರವರೆಗೆ ಲಕ್ನೊದಲ್ಲಿ ಅಖಿಲ ಭಾರತ ಕಿಸಾನ್ ಕಾಂಗ್ರೆಸ್

(ಎಐಕೆಸಿ) ಸ್ಥಾಪನೆಯಾಯಿತು. ಅಧ್ಯಕ್ಷರಾಗಿ ಸ್ವಾಮಿ ಸಹಜಾನಂದ ಸರಸ್ವತಿ ಮತ್ತು ಎನ್.ಜಿ.ರಂಗಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಇದರ ಎರಡನೇ ಸಮ್ಮೇಳನದಲ್ಲಿ ಹೆಸರನ್ನು **ಆಲ್ ಇಂಡಿಯಾ ಕಿಸಾನ್ ಸಭಾ** (ಎಐಕೆಎಸ್) ಎಂದು ಬದಲಾಯಿಸಲಾಯಿತು. ಎಐಕೆಎಸ್‌ನ ಆರಂಭಕ್ಕೂ ಮುಂಚಿತವಾಗಿ ದೇಶದಲ್ಲಿ ಕೆಲವು ಬೆಳವಣಿಗೆಗಳು ಆಗಿದ್ದವು. 1935 ರ ಏಪ್ರಿಲ್ 25 ರಂದು 'ಸೌತ್ ಇಂಡಿಯನ್ ಫೆಡರೇಷನ್ ಆಫ್ ಪೆಸೆಂಟ್ಸ್ ಅಂಡ್ ಅಗ್ರಿಕಲ್ಚರಲ್ ಲೇಬರರ್ಸ್'ನ್ನು ಮದ್ರಾಸಿನಲ್ಲಿ ಪ್ರಾರಂಭಿಸಲಾಗಿತ್ತು. ಇಎಂಎಸ್ ನಂಬೂದಿರಿಪಾದ್ ಅದರ ಜಂಟಿ ಕಾರ್ಯದರ್ಶಿಯಾಗಿದ್ದರು. 1936 ರ ಜನವರಿಯಲ್ಲಿ 16 ರಂದು ದೇಶದ ವಿವಿಧ ಪ್ರಾಂತ್ಯಗಳ ಕಿಸಾನ್ ಸಂಘಟನೆಗಳ ಪ್ರತಿನಿಧಿಗಳ ಸಮ್ಮೇಳನ ಮೀರತ್‌ನಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಕರ್ನಾಟಕದವರಾದ ಕಮಲಾದೇವಿ ಚಟ್ಟೋಪಾಧ್ಯಾಯ ವಹಿಸಿದ್ದರು. ಇದರಲ್ಲಿ ಕೈಗೊಳ್ಳಲಾದ ಒಂದು ನಿರ್ಣಯದಲ್ಲಿ ದೇಶ ಮಟ್ಟದಲ್ಲಿ ಆಲ್ ಇಂಡಿಯಾ ಕಿಸಾನ್ ಕಾಂಗ್ರೆಸ್ ಸ್ಥಾಪಿಸುವ ತುರ್ತು ಅಗತ್ಯವಿದೆ ಎಂದು ಹೇಳಿ ಅದನ್ನು ಸಂಘಟಿಸಲು ಒಂದು ಸಮಿತಿಯನ್ನು ನೇಮಿಸಿತು. ಇದರ ಆಧಾರದಲ್ಲಿ ಮೊದಲ ಎಐಕೆಸಿ ಸಮ್ಮೇಳನ ಲಕ್ನೋದಲ್ಲಿ ನಡೆಯಿತು.

ಲಕ್ನೋ ಸಮ್ಮೇಳನದಲ್ಲಿ ದೇಶದ ವಿವಿಧ ಪ್ರಾಂತ್ಯಗಳ ರೈತ ಸಂಘಟನೆಗಳನ್ನು ಪ್ರತಿನಿಧಿಸಿ ಸುಮಾರು 1000 ಪ್ರತಿನಿಧಿಗಳು ಭಾಗವಹಿಸಿದ್ದರು. ಅದರಲ್ಲಿ ಮುಖ್ಯವಾಗಿ ಆಲ್ ಬೆಂಗಾಲ್ ಪೆಸೆಂಟ್ಸ್ ಫೆಡೆರೇಷನ್, ದಿ ಅಸ್ಸಾಂ ರಾಯ್ಟ್ಸ್ ಅಸೋಸಿಯೇಷನ್, ದಿ ಪಂಜಾಬ್ ಪೆಸೆಂಟ್ಸ್ ಡೆಟ್ ರಿಲೀಫ್ ಕಮಿಟಿ, ಯು.ಪಿ.ಕಿಸಾನ್ ಸಂಘ್, ದಿ ಸೌತ್ ಇಂಡಿಯನ್ ಫೆಡರೇಷನ್ ಆಫ್ ಪೆಸೆಂಟ್ಸ್ ಅಂಡ್ ಅಗ್ರಿಕಲ್ಚರಲ್ ಲೇಬರರ್ಸ್, ಮಲಬಾರ್ ಮತ್ತು ಒರಿಸ್ಸಾ ರೈತ ಸಂಘಗಳು, ಮಹಾರಾಷ್ಟ್ರ ಪೆಸೆಂಟ್ಸ್ ಕಮಿಟಿ, ಗುಜರಾತ್, ಸೆಂಟ್ರಲ್ ಪ್ರಾವಿನ್ಸ್, ಬೇರಾರ್ ಮುಂತಾದ ಸಂಘಟನೆಗಳು ಭಾಗವಹಿಸಿದ್ದವು (ರಸೂಲ್ 1989: 470). ಆಲ್ ಇಂಡಿಯಾ ಕಿಸಾನ್ ಕಮಿಟಿಯಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ನಾ.ಸು.ಹರ್ಡೀಕರ್‌ರವರನ್ನು ಸಮ್ಮೇಳನವು ಆಯ್ಕೆ ಮಾಡಿತು (ರಸೂಲ್ 1989: 478).

ಕಾಂಗ್ರೆಸಿಗರು, ಸೋಷಿಯಲಿಸ್ಟರು, ಕಮ್ಯುನಿಸ್ಟರು ಮತ್ತು ಇತರ ದೇಶಪ್ರೇಮಿಗಳನ್ನು ಒಳಗೊಂಡ ಕಿಸಾನ್ ಸಭಾ ಒಂದು ವಿಶಾಲ ವೇದಿಕೆಯಾಯಿತು. ದೇಶದ ರೈತಾಪಿಯನ್ನು ಸಮರಶೀಲವಾಗಿ ಮುನ್ನಡೆಸಿದ ಎಐಕೆಎಸ್ ಸ್ವಾತಂತ್ರ್ಯ ಪಡೆಯುವವರೆಗೂ ಸುಮಾರು 10 ರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸಿತು. ಈ ಸಮ್ಮೇಳನಗಳು ಅದು ಪ್ರಾರಂಭದಲ್ಲಿ ರೂಪಿಸಿದ ತನ್ನ ಗುರಿ ಉದ್ದೇಶಗಳನ್ನು ಸಾಧಿಸಲು ತುಂಬಾ ಸಹಕಾರಿಯಾದವು.

ಕಿಸಾನ್ ಸಭಾದ ಗುರಿ ಮತ್ತು ಉದ್ದೇಶಗಳನ್ನು 1936 ರ ಆಗಸ್ಟ್‌ನಲ್ಲಿ ಬಾಂಬೆಯಲ್ಲಿ ನಡೆದ ಅಖಿಲ ಭಾರತ ಕಿಸಾನ್ ಕಮಿಟಿಯ ಅಧಿವೇಶನದಲ್ಲಿ ಅಂತಿಮಗೊಳಿಸಿ ಆಲ್ ಇಂಡಿಯಾ ಕಿಸಾನ್ ಮ್ಯಾನಿಫೆಸ್ಟೋ (ಆಗಸ್ಟ್ 1936) ಎಂದು ಪ್ರಕಟಿಸಲಾಯಿತು. ದೇಶದ ಕಾರ್ಷಿಕ ಪರಿಸ್ಥಿತಿಯ ಚಿತ್ರಣವನ್ನು ಬಿಡಿಸಿಟ್ಟ ಮ್ಯಾನಿಫೆಸ್ಟೋದ ಮುಖ್ಯಾಂಶಗಳು ಹೀಗಿವೆ:

ಆರ್ಥಿಕ ಶೋಷಣೆಯಿಂದ ಸಂಪೂರ್ಣ ವಿಮೋಚನೆಯನ್ನು ಸಾಧಿಸುವುದು ಮತ್ತು ರೈತರು, ಕಾರ್ಮಿಕರು ಮತ್ತು ಎಲ್ಲಾ ಶೋಷಿತರಿಗೆ ಪೂರ್ಣ ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನು ಗಳಿಸುವುದು ಕಿಸಾನ್ ಚಳುವಳಿಯ ಗುರಿಯಾಗಿದೆ.

ಇವರನ್ನು ಎಲ್ಲಾ ರೀತಿಯ ಶೊಷಣೆಯಿಂದ ವಿಮೋಚನೆಗೊಳಿಸಲು, ಅದಕ್ಕಾಗಿ ಅವರನ್ನು ಸಿದ್ಧಗೊಳಿಸಲು ಅವರ ತಕ್ಷಣದ ರಾಜಕೀಯ ಮತ್ತು ಆರ್ಥಿಕ ಬೇಡಿಕೆಗಳಿಗಾಗಿ ಸಂಘಟಿಸುವುದು ಮತ್ತು ಹೋರಾಡುವುದು ಕಿಸಾನ್ ಸಭಾದ ಪ್ರಮುಖ ಕರ್ತವ್ಯವಾಗಿದೆ.

ಸಂಪೂರ್ಣ ಸ್ವಾತಂತ್ರ್ಯವನ್ನು ಗೆಲ್ಲಲಿಕ್ಕಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಅಂತಿಮವಾಗಿ ಉತ್ಪಾದಕ ಸಮೂಹಗಳ ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನು ಸಾಧಿಸುವುದಕ್ಕೆ ಕಿಸಾನ್ ಚಳುವಳಿಯು ಬದ್ಧವಾಗಿದೆ (ರಸೂಲ್ 1989: VI) (ಅನುವಾದ ಲೇಖಕರದು).

ಇದರ ಆಧಾರದಲ್ಲಿ ಮೂಲಭೂತ ಬೇಡಿಕೆಗಳು ಮತ್ತು ಕನಿಷ್ಟ ಬೇಡಿಕೆಗಳನ್ನು ರೂಪಿಸಲಾಯಿತು. ದೇಶದ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಲ್ಲಿ ಆಚರಣೆಯಲ್ಲಿರುವ ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸಬೇಕು, ರೈತವಾರಿ ಪ್ರದೇಶಗಳಲ್ಲಿರುವ ರೈತರನ್ನು ದಿವಾಳಿ ಮಾಡುತ್ತಿರುವ ಭೂ ತೆರಿಗೆಯನ್ನು ರದ್ದು ಮಾಡಿ ರೂ.500 ಕ್ಕೂ ಹೆಚ್ಚಿನ ಆದಾಯವಿರುವ ಕುಟುಂಬಗಳಿಗೆ ಗ್ರೇಡೆಡ್ ತೆರಿಗೆಯನ್ನು ಜಾರಿಗೊಳಿಸಬೇಕು, ಬೇರೆ ಬೇರೆ ಹೆಸರಿನ ರೈತರ ಸಾಲಗಳನ್ನು ಮತ್ತು ಅದರ ಬಡ್ಡಿಗಳನ್ನು ವಜಾ ಮಾಡಿ ಅಗತ್ಯವಾದ ಕೃಷಿ ಸಾಲಗಳನ್ನು ನೀಡಬೇಕು, ಭೂ ರಹಿತ ಮತ್ತು ಐದು ಎಕರೆಗಿಂತ ಕಡಿಮೆ ಇರುವ ಎಲ್ಲರಿಗೂ ಸಹಕಾರಿ ಕೃಷಿ ಮಾಡಲು ಭೂಮಿಯನ್ನು ನೀಡಬೇಕು ಮುಂತಾದ ಮೂಲಭೂತ ಬೇಡಿಕೆಗಳನ್ನು ರೂಪಿಸಲಾಯಿತು. ಜೊತೆಗೆ 37 ಕನಿಷ್ಟ ಬೇಡಿಕೆಗಳನ್ನು ರೂಪಿಸಲಾಯಿತು (ರಸೂಲ್ 1989: 452–459). ಕಿಸಾನ್ ಸಭಾದ ಪ್ರಣಾಳಿಕೆ ಮತ್ತು ಬೇಡಿಕೆಗಳ ಪಟ್ಟಿ ಇಡೀ ದೇಶದ ರೈತಾಪಿ ವರ್ಗದ ಸಮಗ್ರ ಬೇಡಿಕೆಗಳನ್ನು ಪ್ರತಿಬಿಂಬಿಸಿತು.

❖ ❖ ❖

ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ (ಎಐಎಸ್ಎಫ್): ಭಾರತದಲ್ಲಿ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗಿಂತಲೂ ಮೊದಲು ಆರಂಭವಾಗಿದ್ದು ವಿದ್ಯಾರ್ಥಿಗಳ ಸಂಘಟನೆ. ಭಾರತದ ಸಂಪತ್ತು ಹೇಗೆ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂದು ತಮ್ಮ 'ಡ್ರೈನ್ ಥಿಯರಿ'ಯನ್ನು ಪ್ರತಿಪಾದಿಸಿದ ದಾದಾಭಾಯ್ ನವರೋಜಿಯವರು ವಿದ್ಯಾರ್ಥಿಗಳ ನಡುವೆ ಜಾಗೃತಿ ಮೂಡಿಸಲು 1848 ರಲ್ಲಿ 'ದಿ ಸ್ಟೂಡೆಂಟ್ಸ್ ಸೈಂಟಿಫಿಕ್ ಅಂಡ್ ಲಿಟರರಿ ಸೊಸೈಟಿ'ಯನ್ನು ಬಾಂಬೆಯಲ್ಲಿ ಸ್ಥಾಪಿಸಿದರು. ವಿದ್ಯಾರ್ಥಿಗಳ ನಡುವೆ ಕೆಲವು ಸೀಮಿತ ರಾಜಕೀಯ ಮತ್ತು ಸಾಮಾಜಿಕ ಉದ್ದೇಶಗಳನ್ನು ಇಟ್ಟುಕೊಂಡು 1851 ರಲ್ಲಿ ಆರಂಭವಾದ 'ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್', ಸುರೇಂದ್ರನಾಥ ಬ್ಯಾನರ್ಜಿ ಮತ್ತು ಆನಂದ ಮೋಹನ್ ಬಸು 1875 ರಲ್ಲಿ 'ಸ್ಟೂಡೆಂಟ್ಸ್ ಅಸೋಸಿಯೇಷನ್' ಆರಂಭಿಸಿದರು. ಒಂದು ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ ಅಗತ್ಯವೆಂಬ ವಿಚಾರವನ್ನು ಅನಿ ಬೆಸೆಂಟ್ ಅವರು

1906 ರಲ್ಲಿ ಚರ್ಚಿಸಿದರು36. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವ ಈ ಪ್ರಕ್ರಿಯೆ ಹೀಗೆ ಪ್ರಾರಂಭವಾಗಿ ಬೆಳೆಯುತ್ತಲೇ ಬಂತು. ಅಸಹಕಾರ ಚಳುವಳಿಯೊಂದಿಗೆ ರಾಷ್ಟ್ರೀಯ ಚಳುವಳಿ ತನ್ನ ವಿಸ್ತಾರ ಪಡೆದುಕೊಂಡಂತೆ ಅದರಲ್ಲಿ ವಿದ್ಯಾರ್ಥಿಗಳ ಪಾತ್ರ ಹೆಚ್ಚಾಯಿತು. 1917 ರಲ್ಲಿ ರಷ್ಯನ್ ಕ್ರಾಂತಿ ಭಾರತದ ಶಿಕ್ಷಿತ ಸಮುದಾಯದ, ಅದರಲ್ಲೂ ವಿದ್ಯಾರ್ಥಿಗಳ ಮೇಲೆ ಬೀರಿದ ಪರಿಣಾಮವು ಸಮಾಜವಾದದ ಬಗ್ಗೆ, ಕಮ್ಯುನಿಸಂನ ಬಗ್ಗೆ ಅಪಾರವಾದ ಆಸಕ್ತಿಯನ್ನು ಹುಟ್ಟಿಹಾಕಿತು. ದೇಶದ ಹಲವಾರು ಕಡೆಗಳಲ್ಲಿ ವಿದ್ಯಾರ್ಥಿಗಳು ಕ್ರಾಂತಿಕಾರಿಗಳಾಗಿ ತಮ್ಮ ಹೋರಾಟವನ್ನು ನಡೆಸಿದರು. ಬಿಡಿಬಿಡಿಯಾಗಿ ನಡೆಯುತ್ತಿದ್ದ ಚಟುವಟಿಕೆಗಳಿಗೆ ಸಂಘಟನಾ ರೂಪವನ್ನು ನೀಡುವ ಪ್ರಯತ್ನವನ್ನು ಮಾಡಲಾಯಿತು. ಇದರ ಭಾಗವಾಗಿ ವಿವಿಧ ಪ್ರಾಂತ್ಯಗಳು ಮತ್ತು ಸಂಸ್ಥಾನಗಳಲ್ಲಿ ವಿದ್ಯಾರ್ಥಿ ಸಂಘಟನೆಗಳು ಪ್ರಾರಂಭಗೊಂಡವು. ಬೆಂಗಾಲ್ ಸ್ಟೂಡೆಂಟ್ಸ್ ಫೆಡರೇಷನ್, ಮದ್ರಾಸ್ ಸ್ಟೂಡೆಂಟ್ಸ್ ಅಸೋಸಿಯೇಷನ್, ಬಿಹಾರ್ ಸ್ಟೂಡೆಂಟ್ಸ್ ಕಾನ್ಫರೆನ್ಸ್, ಕೇರಳ ಸ್ಟೂಡೆಂಟ್ಸ್ ಫೆಡರೇಷನ್, ಹೀಗೆ ಬಾಂಬೆ, ಕರಾಚಿ, ಲಾಹೋರ್ ಮುಂತಾದ ಕಡೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚೆಚ್ಚು ಸಂಘಟಿತರಾಗಿ ರಾಷ್ಟ್ರೀಯ ಹೋರಾಟದಲ್ಲಿ ತೊಡಗಿಕೊಂಡರು. ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿದ್ದ ರಾಜಕೀಯ ಜಾಗೃತಿಯನ್ನು ದೇಶ ಮಟ್ಟದಲ್ಲಿ ಸಂಘಟಿತಗೊಳಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧದ ಚಳುವಳಿಯನ್ನು ತೀವ್ರಗೊಳಿಸಲು ಆಕಾಂಕ್ಷೆಗಳು ಹೆಚ್ಚುತ್ತಿದ್ದವು.

ಈ ಸಂದರ್ಭಕ್ಕೆ ನಡೆದ ಕೆಲವು ಪ್ರಕರಣಗಳು ಈ ಪ್ರಕ್ರಿಯೆಯ ತೀವ್ರತೆಯನ್ನು ಪ್ರತಿಬಿಂಬಿಸುತ್ತವೆ. ಗಾಂಧೀಜಿ ಅಸಹಕಾರ ಚಳುವಳಿಯನ್ನು ಇದ್ದಕ್ಕಿದ್ದ ಹಾಗೆ ನಿಲ್ಲಿಸಿದ್ದು ಅತೃಪ್ತಿಯನ್ನು ಮೂಡಿಸಿದರೆ, 1921 ರಲ್ಲೇ ಕಮ್ಯುನಿಸ್ಟರು ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಎತ್ತಿದ್ದು ವಿದ್ಯಾರ್ಥಿಗಳಲ್ಲಿ ಒಂದು ಗುಣಾತ್ಮಕವಾಗಿ ಬದಲಾದ ಚಿಂತನೆಯನ್ನು ಬೆಳೆಸುತ್ತಿತ್ತು. 1929 ರ ಡಿಸೆಂಬರ್‌ನಲ್ಲಿ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ ನಡೆಯುವ ಸಂದರ್ಭದಲ್ಲಿ ಅಖಿಲ ಭಾರತ ಯುವ ಕಾಂಗ್ರೆಸ್ ಅಧಿವೇಶನ ನಡೆಯಿತು. ಅದರಲ್ಲಿ ನಾರಿಮನ್, ಸುಭಾಷ್‌ಚಂದ್ರ ಬೋಸ್ ಮುಂತಾದವರ ಭಾಷಣಗಳು ಈ ಬದಲಾವಣೆಯನ್ನು ಸೂಚಿಸುತ್ತಿತ್ತು. ಇದರಲ್ಲಿ 'ಸಂಪೂರ್ಣ ಸ್ವರಾಜ್ಯ'ದ ನಿರ್ಣಯವನ್ನು ಭಾರೀ ಬಹುಮತಗಳಿಂದ ಅಂಗೀಕರಿಸಲಾಯಿತು. ಗಾಂಧೀಜಿ ಇದನ್ನು 'ಬೇಜವಾಬ್ದಾರಿ ಕೃತ್ಯ' ಎಂದು ಖಂಡಿಸಿದರು. ಹೀಗಾಗಿ ಇದೇ ನಿರ್ಣಯವನ್ನು ಅಲ್ಲೇ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕರಿಸಲಾಗಲಿಲ್ಲ. ಬದಲಿಗೆ ಡೊಮಿನಿಯನ್ ಸ್ಟೇಟಸ್ ನಿರ್ಣಯಕ್ಕೆ ಜೋತುಬೀಳಲಾಯಿತು.

1931 ರ ಮಾರ್ಚ್ 5 ರಂದು ಆದ ಗಾಂಧಿ–ಇರ್ವಿನ್ ಒಪ್ಪಂದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ತುಂಬಾ ಮಹತ್ವವಾದದ್ದು. ಅಷ್ಟೊತ್ತಿಗೆ ಭಗತ್‌ಸಿಂಗ್ ಮತ್ತು ಗೆಳೆಯರಿಗೆ ಮರಣ ದಂಡನೆ ವಿಧಿಸಲಾಗಿತ್ತು. ಇವರ ಬಿಡುಗಡೆ ವಿಚಾರದಲ್ಲಿ ಗಾಂಧೀಜಿಯಾಗಲೀ ಕಾಂಗ್ರೆಸ್ ಆಗಲೀ ಧ್ವನಿ ಎತ್ತದೇ ಹೋದದ್ದು ಕ್ರಾಂತಿಕಾರಿ ಚಳುವಳಿಗೆ ಎಸಗಿದ ದ್ರೋಹವೆಂಬ ಭಾವನೆ ಸೃಷ್ಟಿಯಾಯಿತು. ಒಪ್ಪಂದವಾದ 18 ದಿನಗಳಲ್ಲಿ, ಅಂದರೆ ಮಾರ್ಚ್ 23 ರಂದು ಭಗತ್‌ಸಿಂಗ್, ಸುಖದೇವ್ ಮತ್ತು ರಾಜ್‌ಗುರು ನೇಣುಗಂಭಕ್ಕೆ ಏರಿದ್ದು ದೇಶಾದ್ಯಂತ ವಿದ್ಯಾರ್ಥಿಗಳನ್ನು ರೊಚ್ಚಿಗೆಬ್ಬಿಸಿತು. ಈ ಒಟ್ಟಾರೆ ಹಿನ್ನೆಲೆಯಲ್ಲಿ ದೇಶವನ್ನು ವಿಮೋಚನೆ ಮಾಡಲು ತೀವ್ರ ರೀತಿಯ ಹೋರಾಟಗಳನ್ನು ನಡೆಸಬೇಕೆಂಬ ತುಡಿತ ಹೆಚ್ಚಾಯಿತು (ವಿಶ್ವ ಕುಂದಾಪುರ 2014: 35–37).

ಈ ಎಲ್ಲಾ ಬೆಳವಣಿಗೆಗಳು ಏಕೀರ್ಭವಿಸಿ 1936 ರ ಆಗಸ್ಟ್ 12 ಮತ್ತು 13 ರಂದು ಲಖನೌನಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್ಎಫ್)ಸ್ಥಾಪನೆಯಾಯಿತು. ಇದು ದೇಶದ ಮೊಟ್ಟಮೊದಲ ಅಖಿಲ ಭಾರತ ಮಟ್ಟದ ವಿದ್ಯಾರ್ಥಿ ಸಂಘಟನೆಯಾಯಿತು. ದೇಶದ 200 ಸ್ಥಳೀಯ ಮತ್ತು 11 ಪ್ರಾಂತೀಯ ವಿದ್ಯಾರ್ಥಿ ಸಂಘಟನೆಗಳನ್ನು ಪ್ರತಿನಿಧಿಸಿ 936 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಗಾಂಧೀಜಿ, ರವೀಂದ್ರನಾಥ ಠಾಗೋರ್ ಮುಂತಾದವರು ಸಂದೇಶಗಳನ್ನು ಕಳುಹಿಸಿದ್ದರು. ಸಮ್ಮೇಳನದ ಉದ್ಘಾಟನೆಯನ್ನು ಜವಹರಲಾಲ್ ನೆಹರೂ ಮಾಡಿದರು. ಮಹಮ್ಮದ್ ಅಲಿ ಜಿನ್ನಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಎಐಎಸ್ಎಫ್‌ನ ಪತ್ರಿಕೆಯಾಗಿ ಸ್ಟೂಡೆಂಟ್ಸ್ ಟ್ರಿಬ್ಯೂನ್ ಪ್ರಕಟಣೆಯಾಯಿತು.

ಇದಾದ ಮೂರು ತಿಂಗಳಲ್ಲೇ ಎರಡನೇ ಸಮ್ಮೇಳನ ಲಾಹೋರ್‌ನಲ್ಲಿ ನವೆಂಬರ್ 22 ರಂದು ನಡೆಯಿತು. ಇದರ ಅಧ್ಯಕ್ಷತೆಯನ್ನು ವಹಿಸಿದ್ದ ಶರತ್‌ಚಂದ್ರ ಬೋಸ್ ಅವರು ರಷ್ಯನ್ ಕ್ರಾಂತಿಯಿಂದ ವಿದ್ಯಾರ್ಥಿಗಳು ಪ್ರೇರೇಪಣೆ ಪಡೆಯಲು ಕರೆ ನೀಡಿದರು[37]. ಎಐಎಸ್ಎಫ್ ಪ್ರಾರಂಭವಾದ ನಂತರ ದೇಶದಲ್ಲಿ ವಿದ್ಯಾರ್ಥಿ ಚಳುವಳಿಯಲ್ಲಿ ಉಬ್ಬರ ಕಂಡು ಬಂತು. ಕಮ್ಯುನಿಸ್ಟರು, ಕಾಂಗ್ರೆಸಿಗರು, ಸಮಾಜವಾದಿಗಳು, ಮುಸ್ಲಿಮರು ಎಲ್ಲರಿಗೂ ಒಂದೇ ವೇದಿಕೆಯಾಗಿದ್ದ ಎಐಎಸ್ಎಫ್ ವಿವಿಧ ಸೈದ್ಧಾಂತಿಕ ರಾಜಕೀಯ ನಿಲುವುಗಳ ಸಂಗಮವಾಗಿತ್ತು. ಗಾಂಧಿವಾದಿಗಳು, ಮಾರ್ಕ್ಸ್‌ವಾದಿಗಳು, ಸಮಾಜವಾದಿಗಳು, ಉದಾರವಾದಿಗಳು, ಕಾಂಗ್ರೆಸ್ ಸಮಾಜವಾದಿಗಳು, ಇದರ ಜೊತೆಗೆ ಕೆಲವರು ರಾಷ್ಟ್ರೀಯ ಹೋರಾಟದ ವಿಚಾರಕ್ಕೆ ಮಾತ್ರ ಬಂದವರು, ಹೀಗೆ ಎಲ್ಲರೂ ಇದರಲ್ಲಿದ್ದರು. ಈ ಕಾರಣಕ್ಕೇ ಎಐಎಸ್ಎಫ್ ಚರ್ಚೆಗಳಲ್ಲಿ ಭಿನ್ನತೆಗಳು ಮೂಡುತ್ತಿದ್ದವು. 1940 ರ ವೇಳೆಗೆ ಇದರಲ್ಲಿ ಒಡಕು ಮೂಡಿ ನಾಗಪುರ ಸಮ್ಮೇಳನದಲ್ಲಿ ಎರಡು ಎಐಎಸ್ಎಫ್‌ಗಳಾಗಿ ವಿಭಜನೆಯಾಯಿತು. ಒಂದು ಕಮ್ಯುನಿಸ್ಟರ ನಾಯಕತ್ವ ಮತ್ತೊಂದು ಕಾಂಗ್ರೆಸಿಗರ ನಾಯಕತ್ವ. ಇದಕ್ಕೆ ಮುಖ್ಯವಾಗಿ ಕಾರಣವಾಗಿದ್ದು ಅಂದಿಗೆ ದೇಶದೊಳಗೆ ಚರ್ಚೆಯಾಗುತ್ತಿದ್ದ ಯುದ್ಧಕ್ಕೆ ಸಂಬಂಧಿಸಿದ ನಿಲುವುಗಳು ಮತ್ತು ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿದ ವಿಚಾರಗಳು. ಜಾಗತಿಕ ಮಾನವ ಕುಲದ ಶತ್ರುವಾದ ಜರ್ಮನಿಯ ಹಿಟ್ಲರ್‌ನನ್ನು ಸೋಲಿಸುವುದು ತುರ್ತಾಗಿ ಆಗಬೇಕಾದ ಕರ್ತವ್ಯವೆಂದು ಭಾವಿಸಿದವರನ್ನು ಬ್ರಿಟಿಷರ ಏಜೆಂಟರೆಂದು ಜರೆದರು. ಇದೇನೇ ಆದರೂ, ಯುದ್ಧಾನಂತರ ಎಐಎಸ್ಎಫ್ ದೇಶಾದ್ಯಂತ ವ್ಯಾಪಕವಾದ ವಿದ್ಯಾರ್ಥಿ ಚಳುವಳಿಗಳನ್ನು ನಡೆಸಿತು. 1943 ರ ಬಂಗಾಳ ಕ್ಷಾಮದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳಲ್ಲಿ ಲಕ್ಷಗಟ್ಟಲೆ ವಿದ್ಯಾರ್ಥಿಗಳನ್ನು ಎಐಎಸ್ಎಫ್ ಬೀದಿಗಿಳಿಸಿತು. ಇಂಡಿಯನ್ ನ್ಯಾಷನಲ್ ಆರ್ಮಿ ಅಧಿಕಾರಿಗಳಾದ ಸೆಹಗಲ್, ಧಿಲ್ಲೋನ್ ಮತ್ತು ಷಾನವಾಜ್ ಖಾನ್ ರ ವಿಚಾರಣೆಯನ್ನು ವಿರೋಧಿಸಿ ವಿದ್ಯಾರ್ಥಿಗಳ ಚಳುವಳಿ ನಡೆಯಿತು. ಕಲ್ಕತ್ತಾದಲ್ಲಿ ರಮೇಶ್ ಎಂಬ ವಿದ್ಯಾರ್ಥಿ ಗುಂಡಿಗೆ ಬಲಿಯಾದನು. ನಾವಿಕರ ಬಂಡಾಯ, ಅಂಚೆ ಮುಷ್ಕರ, ರೈಲ್ವೆ ಮುಷ್ಕರ ಈ ಎಲ್ಲಾ ಸಂದರ್ಭಗಳಲ್ಲೂ ವಿದ್ಯಾರ್ಥಿಗಳು ಲಕ್ಷಗಟ್ಟಲೆ ಬೀದಿಗಿಳಿದು ಹೋರಾಟ ಮಾಡಿದರು38.

❖ ❖ ❖

ಅಖಿಲ ಭಾರತ ಪ್ರಗತಿಪರ ಬರಹಗಾರರ ಸಂಘ (ಎಐಪಿಡಬ್ಲ್ಯುಎ): 'ನಾವು ಬದುಕುತ್ತಿರುವ ಕಾಲಮಾನದ ಕುರಿತು ನೀನು ಗೊತ್ತಿಲ್ಲದವನಾದರೆ, ನನ್ನ ಕಥೆಗಳನ್ನು ಓದು. ನನ್ನ ಕಥೆಗಳನ್ನು ನೀನು ಅನುಭವಿಸಲು (ಸಹಿಸಿಕೊಳ್ಳಲು)

ಆಗುತ್ತಿಲ್ಲವೆಂದಾದರೆ, ಅದರರ್ಥ ಈ ಕಾಲಮಾನ ಸಹಿಸಲು ಅಸಾಧ್ಯವಾದದ್ದು' ಎಂಬ ಮ್ಯಾಂಟೋನ ಹೇಳಿಕೆ ಕೇವಲ ಒಂದು ಹೇಳಿಕೆಯಲ್ಲ, ಸ್ವಾತಂತ್ರ್ಯಪೂರ್ವದ ಬಹುತೇಕ ಬರಹಗಾರರ ಮನೋಭಾವದ ಪ್ರತೀಕವಾಗಿದೆ. ಈ ರೀತಿಯ ಬರಹಗಾರರ ದಂಡನ್ನೇ[39] ಹುಟ್ಟು ಹಾಕಿದ ಸಾಹಿತ್ಯ ಚಳುವಳಿಯೆಂದರೆ ಪ್ರಗತಿಪರ ಬರಹಗಾರರ ಸಂಘ. ಅಹ್ಮದ್ ಅಲಿ, ಸಜ್ಜಾದ್ ಜಾಹೀರ್, ರಷೀದ್ ಜಹಾನ್ ಮತ್ತು ಮಹ್ಮದುಸ್ ಝುಫರ್ ಇವರುಗಳ 9 ಸಣ್ಣ ಕಥೆಗಳ ಮತ್ತು 1 ನಾಟಕ ಸಂಗ್ರಹದ ಪ್ರಕಟಣೆ 1932 ರಲ್ಲಿ ಆಗುವುದರೊಂದಿಗೆ ಭಾರತದಲ್ಲಿ ಪ್ರಗತಿಪರ ಬರಹಗಾರ ಚಳುವಳಿ ಎಂಬುದು ಶುರುವಾಗಿದೆ. ಇದನ್ನು ಬ್ರಿಟಿಷ್ ಸರ್ಕಾರ 1933 ರಲ್ಲಿ ಮುಟ್ಟುಗೋಲು ಹಾಕಿತು. 1933 ಏಪ್ರಿಲ್ 5 ರಂದು 'ಎ ಲೀಗ್ ಆಫ್ ಪ್ರೊಗ್ರೆಸ್ಸಿವ್ ಆದರ್ಸ್' ಅಲಹಾಬಾದಿನಲ್ಲಿ ಆರಂಭವಾಗಿ ಅದೇ ಮುಂದೆ 'ಇಂಡಿಯನ್ ಪ್ರೊಗ್ರೆಸ್ಸಿವ್ ರೈಟರ್ಸ್ ಅಸೊಸಿಯೇಷನ್' ಆಗಿದೆ. ಇದು ಮುಂದುವರಿದು, 'ಪ್ರೋಗ್ರೆಸ್ಸಿವ್ ರೈಟರ್ಸ್ ಅಸೊಸಿಯೇಷನ್' (ಪಿಡಬ್ಲ್ಯುಎ) ಎಂಬುದಾಗಿ 1936 ರ ಜುಲೈನಲ್ಲಿ ಕೊಲ್ಕತ್ತಾದಲ್ಲಿ ಆರಂಭವಾಗಿದೆ. ಅಂತಿಮವಾಗಿ 1936 ಏಪ್ರಿಲ್ 10 ರಂದು ಲಕ್ನೋದಲ್ಲಿ 'ಆಲ್ ಇಂಡಿಯಾ ಪ್ರೋಗ್ರೆಸ್ಸಿವ್ ರೈಟರ್ಸ್ ಅಸೋಸಿಯೇಷನ್' (ಎಐಪಿಡಬ್ಲ್ಯುಎ) ಎಂಬುದಾಗಿ ಆರಂಭವಾಗಿದೆ[40].

ಪಿಡಬ್ಲ್ಯುಎನ ಆರಂಭದ ಬೀಜಗಳು 1935 ರ ಸುಮಾರಿಗೆ ಲಂಡನ್‌ನಲ್ಲಿ ಹಾಕಲಾಗಿತ್ತು. 1929ರ ಜಾಗತಿಕ ಬಿಕ್ಕಟ್ಟು, ಬಂಡವಾಳಶಾಹಿ ಶೋಷಣೆ, ವಸಾಹತುಗಳ ಲೂಟಿ, ಸಾಮಾನ್ಯ ಜನರ ಪರಿಪಾಡಲು, ಇವೆಲ್ಲವೂ ಅಂದಿನ ಸಾಹಿತ್ಯದ ಸ್ವರೂಪವನ್ನು ನಿರ್ಧರಿಸಿದ್ದವು. ಪಿಡಬ್ಲ್ಯುಎನ ಸ್ಥಾಪಕರಲ್ಲೊಬ್ಬರು ಮತ್ತು ಅದರ ಪ್ರಧಾನ ಕಾರ್ಯದರ್ಶಿಯಾಗಿ ದೀರ್ಘಕಾಲವಿದ್ದ ಸಜ್ಜಾದ್ ಜಾಹಿರ್ ಅವರು ಹೇಳುವಂತೆ, 1935 ಕ್ಕೆ ಮೊದಲಿನ ಬಿಕ್ಕಟ್ಟಿನ ವರ್ಷಗಳು ಜಗತ್ತನ್ನು ತೀವ್ರವಾದ ಬಿಕ್ಕಟ್ಟಿಗೆ ನೂಕಿದವು ಮತ್ತು ಅವು ಜರ್ಮನಿಯಲ್ಲಿ ನಾಜಿ ಪಾರ್ಟಿಯ ಹೆಸರಿನಲ್ಲಿ ಹಿಟ್ಲರ್‌ನ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಟ್ಟವು. ಫ್ಯಾಸಿಸ್ಟರ ದಮನ ಮತ್ತು ರಾಕ್ಷಸೀ ಕ್ರೌರ್ಯಗಳು ದಿನನಿತ್ಯದ ಪ್ರಶ್ನೆಗಳಾಗಿದ್ದವು. 'ಈ ಆಧುನಿಕ ಬರ್ಬರತೆಯನ್ನು ಒಂದು ಶಕ್ತಿ ಮಾತ್ರ ತಡೆಯಬಲ್ಲದು, ಅದು ಸಂಘಟಿತ ಕಾರ್ಮಿಕ ವರ್ಗದ ಶಕ್ತಿ ...... ಈ ವರ್ಗ ಪ್ರಜ್ಞೆಯ ಮೂಲಕ ಹೊಸದೊಂದು ನಾಗರೀಕತೆಗೆ ಇದು ದಾರಿ ತೋರುತ್ತದೆ' (ಸುಧಿ ಪ್ರಧಾನ್ 1960: 33–34).

ಅಂತರರಾಷ್ಟ್ರೀಯ ಬರಹಗಾರರ ಸಂಘದ ಎರಡನೇ ಸಮ್ಮೇಳನವು 1936 ಜೂನ್ 19 ರಿಂದ 23 ರವರೆಗೆ ಲಂಡನ್‌ನಲ್ಲಿ ಜರುಗಿತು. ಈ ಸಮ್ಮೇಳನಕ್ಕೆ ರವೀಂದ್ರನಾಥ ಠಾಗೋರ್, ಶರತ್ ಚಟರ್ಜಿ, ಮುನ್ಶಿ ಪ್ರೇಮ್‌ಚಂದ್, **ಪಿ.ಸಿ.ರಾಯ್, ಜವಹರಲಾಲ್ ನೆಹರೂ, ಪ್ರಮಥ ಚೌಧರಿ, ರಮಾನಂದ ಚಟರ್ಜಿ, ನಂದಲಾಲ ಬೋಸ್, ಮತ್ತಿತರರು** ಸಹಿ ಮಾಡಿದ ಒಂದು ಪ್ರಣಾಳಿಕೆಯನ್ನು ಭಾರತೀಯ ಪಿಡಬ್ಲ್ಯುಎ ಕಳುಹಿಸಿತು. ಅಂತರರಾಷ್ಟ್ರೀಯ ಬರಹಗಾರರ ಸಂಘದ ಮೂರನೇ ಸಮ್ಮೇಳನವು ಮ್ಯಾಡ್ರಿಡ್ ನಗರದಲ್ಲಿ ನಡೆಯಿತು. ಫ್ಯಾಸಿಸಂನ್ನು ಎದುರಿಸಲು ಅಲ್ಲಿ ರಚಿಸಲಾದ ಅಂತರರಾಷ್ಟ್ರೀಯ ಬ್ರಿಗೇಡ್‌ನಲ್ಲಿ ವಿಶ್ವಖ್ಯಾತಿಯ ಬರಹಗಾರರು, ಕವಿಗಳು, ಕಲಾವಿದರು, ಸಂಗೀತಗಾರರು ಇದ್ದರು. ಮಾನವನ ಭೌದ್ಧಿಕ ಚರಿತ್ರೆಯಲ್ಲಿ ಇದೊಂದು ನೂತನ ವಿದ್ಯಮಾನವಾಯಿತು.

ಪಿಡಬ್ಲ್ಯುಎ ಪ್ರಣಾಳಿಕೆಯಲ್ಲಿ ಅದರ ಸಾಂಸ್ಕೃತಿಕ ಅಂಶವನ್ನು ಈ ರೀತಿ ಹೇಳಲಾಗಿದೆ:

> ಭಾರತೀಯ ಜೀವನದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಧ್ವನಿಯಾಗಲು ಮತ್ತು ದೇಶದೊಳಗಿನ ಪ್ರಗತಿಯ ಸ್ಫೂರ್ತಿಯನ್ನು ವೈಜ್ಞಾನಿಕ ವಿಚಾರವಾದದಿಂದ ಸಹಕರಿಸುವುದು ಭಾರತೀಯ ಬರಹಗಾರರ ಕರ್ತವ್ಯವಾಗಿದೆ . . . ಭಾರತದ ನೂತನ ಸಾಹಿತ್ಯವು ಮೂಲ ಸಮಸ್ಯೆಗಳಾದ ಹಸಿವು ಮತ್ತು ಬಡತನ, ಸಾಮಾಜಿಕ ಹಿಂದುಳಿದಿರುವಿಕೆ ಮತ್ತು ರಾಜಕೀಯ ಅಧೀನತೆಯ ಸಮಸ್ಯೆಗಳನ್ನು ವ್ಯವಹರಿಸಬೇಕು. ನಿರುತ್ಸಾಹ, ನಿಷ್ಕ್ರಿಯತೆ ಮತ್ತು ವಿಚಾರಹೀನತೆಗೆ ನಮ್ಮನ್ನು ಹಿಡಿದೆಳೆಯುವ ಎಲ್ಲವನ್ನೂ ನಾವು ಪ್ರತಿಗಾಮಿ ಎಂದು ತಿರಸ್ಕರಿಸುತ್ತೇವೆ. ಕ್ರಿಯಾಶೀಲಗೊಳಿಸಲು, ನಮ್ಮನ್ನು ನಾವು ಸಂಘಟಿಸಿಕೊಳ್ಳಲು, ನಮ್ಮನ್ನು ರೂಪಾಂತರಿಸಿಕೊಳ್ಳಲು ವೈಚಾರಿಕತೆಯ ಬೆಳಕಿನಲ್ಲಿ ಸಂಪ್ರದಾಯಗಳನ್ನು ಮತ್ತು ಸಂಸ್ಥೆಗಳನ್ನು ಪರಿಶೀಲಿಸುವ ವಿಚಾರ ಚೈತನ್ಯವನ್ನು ನಮ್ಮಲ್ಲಿ ಬಡಿದೆಬ್ಬಿಸುವ ಎಲ್ಲವನ್ನೂ ನಾವು ಪ್ರಗತಿಶೀಲವೆಂದು ಒಪ್ಪುತ್ತೇವೆ (ಸುಧಿ ಪ್ರಧಾನ್ 1960: 30).

ಇದು ಮಾರ್ಕ್ಸ್‌ವಾದಿ ವೈಚಾರಿಕತೆಯನ್ನು ಪ್ರಸರಿಸಲು ಸಹಾಯ ಮಾಡಿತು ಮತ್ತು ಯುವ ಲೇಖಕ ಮತ್ತು ಬರಹಗಾರರಲ್ಲಿ ಹೊಸದೊಂದು ಆಲೋಚನಾ ಕ್ರಮಕ್ಕೆ ಪ್ರೇರೇಪಣೆ ನೀಡಿತು. ಪಿಡಬ್ಲ್ಯುಎ ಫ್ಯಾಸಿಸ್ಟ್ ವಿರೋಧಿ ಮತ್ತು ಯುದ್ಧ ವಿರೋಧಿ ನೆಲೆಯಲ್ಲಿ ಕೆಲಸ ಮಾಡುತ್ತಿತ್ತು. ಈ ತಿಳುವಳಿಕೆಯ ಆಧಾರದಲ್ಲಿ ಸೋಷಿಯಲಿಸ್ಟರು, ಕಮ್ಯುನಿಸ್ಟರು ಒಟ್ಟಿಗೆ ಇದರಲ್ಲಿ ಕೆಲಸ ಮಾಡುತ್ತಿದ್ದರು. ಪಿಡಬ್ಲ್ಯುಎನ ಮೊದಲ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಜ್ಜಾದ್ ಜಾಹೀರ್, ಸ್ವತಃ ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಯ ಜಂಟಿ ಕಾರ್ಯದರ್ಶಿಯಾಗಿದ್ದರು. ಸುಭಾಷ್ ಚಂದ್ರ ಬೋಸ್‌ರನ್ನು ತಿರುಪತಿ ಕಾಂಗ್ರೆಸ್ ಅಧಿವೇಶನದಲ್ಲಿ ಬಲಪಂಥೀಯರು ದಾಳಿ ಮಾಡಲು ತೊಡಗಿದಾಗ ಕಾಂಗ್ರೆಸ್ ಸಮಾಜವಾದಿ ಪಾರ್ಟಿ ತಟಸ್ಥವಾಗಿ ಉಳಿದಿತ್ತು. 1940 ರಲ್ಲಿ ಸಜ್ಜಾದ್ ಜಾಹೀರ್, ಬಾಂಬೆ ಘಟಕದ ಕೆ.ಟಿ.ಚಾಂಡಿ ಸೇರಿದಂತೆ, ಇ.ಎಂ.ಎಸ್.ನಂಬೂದಿರಿಪಾದ್, ಪಿ.ರಾಮಮೂರ್ತಿ ಮತ್ತು ಪಿ.ಸುಂದರಯ್ಯ ಇವರನ್ನು ಕಾಂಗ್ರೆಸ್ ಸಮಾಜವಾದಿ ಪಾರ್ಟಿ ಉಚ್ಚಾಟನೆ ಮಾಡಿತು. ಈ ಬೆಳವಣಿಗೆಗಳಿಂದಾಗಿ ಪಿಡಬ್ಲ್ಯುಎ ಈ ಅವಧಿಯಲ್ಲಿ ಹೆಚ್ಚು ಕ್ರಿಯಾಶೀಲವಾಗಿರಲು ಸಾಧ್ಯವಾಗಲಿಲ್ಲ (ಸುಧಿ ಪ್ರಧಾನ್ 1960: X). ಇವುಗಳೊಂದಿಗೆ **ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್** (ಐಪಿಟಿಎ) ಸಂಘಟನೆಯೂ ಈ ದಿಸೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಹೆಸರನ್ನು ರೊಮೈನ್ ರೋಲ್ಯಾಂಡ್‌ರವರ 'ಪೀಪಲ್ಸ್ ಥಿಯೇಟರ್' ಎಂಬ ಹೆಸರಾಂತ ಪುಸ್ತಕದ ಆಧಾರದಲ್ಲಿ ಪ್ರಸಿದ್ಧ ವಿಜ್ಞಾನಿ ಡಾ.ಹೋಮಿ ಬಾಬಾ ಅಥವಾ ಸಿಲೋನ್ ಮೂಲದ ಮಹಿಳೆ ಮತ್ತು 1941 ರಲ್ಲಿ ಆರಂಭವಾದ ಇಪ್ಟಾದ ಬೆಂಗಳೂರು ಘಟಕದ ಮೊದಲ ಕಾರ್ಯದರ್ಶಿ ಅನಿಲ್ ಡಿ'ಸಿಲ್ವಾ ಅವರು ಸೂಚಿಸಿರಬಹುದೆಂದು ಅಂದಾಜಿದೆ (ಸುಧಿ ಪ್ರಧಾನ್ 1960: xiii).

ರಾಯಲ್ ಇಂಡಿಯನ್ ನೇವಿ (ಆರ್‌ಐಎನ್) ನಾವಿಕರ ಬಂಡಾಯ

'ರಾಯಲ್ ಇಂಡಿಯನ್ ನೇವಿ (ಆರ್‌ಐಎನ್)ದಂಗೆ' ಅಥವಾ 'ಬಾಂಬೆ ದಂಗೆ' ಎಂದು ಕರೆಯಲ್ಪಡುವ ಬ್ರಿಟಿಷ್ ಭಾರತೀಯ ನೌಕಾದಳದ ನಾವಿಕರು 1946 ರ ಫೆಬ್ರವರಿ 18 ರಿಂದ 23 ರವರೆಗೆ ನಡೆಸಿದ ದಂಗೆಯು ಸಾಮಾನ್ಯ ಚರಿತ್ರೆಯಲ್ಲಿ ಅಷ್ಟಾಗಿ ಗುರುತಿಸಲ್ಪಡದ ಆದರೆ ಮಹತ್ವವಾದ ಹೋರಾಟವಾಗಿದೆ.

ಎರಡನೇ ಪ್ರಪಂಚ ಯುದ್ಧದಲ್ಲಿ ಕಾದಾಡಲು ಬ್ರಿಟಿಷರು ದೊಡ್ಡ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಿಸಿಕೊಂಡಿದ್ದ ನಾವಿಕ ಯೋಧರು ಮತ್ತು ನಾವಿಕ ಕಾರ್ಮಿಕರನ್ನು ಯುದ್ಧ ಮುಗಿದ ಮೇಲೆ ಕೆಲಸದಿಂದ ತೆಗೆದುಹಾಕುವ ಭೀತಿ ಎದುರಾಗಿತ್ತು. ಜೊತೆಗೆ ಬ್ರಿಟಿಷ್ ಅಧಿಕಾರಿಗಳಿಂದ ವಿಪರೀತವಾದ ಕಿರುಕುಳ, ಅವಮಾನ, ತಾರತಮ್ಯಗಳನ್ನು ಅನುಭವಿಸುತ್ತಿದ್ದರು. ಕಳಪೆ ದರ್ಜೆಯ ಆಹಾರವನ್ನು ನೀಡಲಾಗುತ್ತಿತ್ತು (ಇಎಂಎಸ್ 1986: 488).ಇದೇ ಕಾಲಕ್ಕೆ ಇಂಡಿಯನ್ ನ್ಯಾಷನಲ್ ಆರ್ಮಿಯ (ಐಎನ್‌ಎ) ಸೈನಿಕರ ವಿಚಾರಣೆ ದೇಶಾದ್ಯಂತ ಕುತೂಹಲ ಮೂಡಿಸಿತ್ತು. ಮೂವರು ಐಎನ್‌ಎ ಅಧಿಕಾರಿಗಳನ್ನು –ಜನರಲ್ ಷಾ ನವಾಜ್ ಖಾನ್, ಕರ್ನಲ್ ಪ್ರೇಂ ಸಹಗಲ್ ಮತ್ತು ಕರ್ನಲ್ ಗುರುಭಕ್ಷ್ ಸಿಂಗ್ ಧಿಲ್ಲೋನ್ – 'ದೊರೆ ಚಕ್ರವರ್ತಿಯ ವಿರುದ್ಧ ಯುದ್ಧ ನಡೆಸಿದರು' ಎಂಬ ಆರೋಪದ ಮೇಲೆ ದೆಹಲಿಯ ಕೆಂಪುಕೋಟೆಯಲ್ಲಿ ನಡೆದ ವಿಚಾರಣೆ ಎಲ್ಲರ ಗಮನ ಸೆಳೆದಿತ್ತು. ಇದಕ್ಕೂ ಮುಂಚೆ ರಾಯಲ್ ಇಂಡಿಯನ್ ಏರ್‌ಫೋರ್ಸ್‌ನಲ್ಲಿ ಜನಾಂಗೀಯ ಭೇದಭಾವಗಳ ವಿರುದ್ಧ ಪ್ರತಿಭಟನೆಗಳಾಗಿದ್ದವು. ಇವೆಲ್ಲವೂ ನೌಕಾದಳದೊಳಗಿನ ಅಸಮಾಧಾನ, ಅತೃಪ್ತಿಗಳನ್ನು ಪ್ರಭಾವಿಸುತ್ತಿತ್ತು. 1945 ರ ಡಿಸೆಂಬರ್ 17 ರ ನೌಕಾ ದಿನದಿಂದಲೇ ದಂಗೆಯ ತಯಾರಿಗಳು ನಡೆಯುತ್ತಿತ್ತು. 'ಕ್ವಿಟ್ ಇಂಡಿಯ', 'ಸಾಮ್ರಾಜ್ಯಶಾಹಿ ನಾಶವಾಗಲಿ' ಮುಂತಾದ ಘೋಷಣೆಗಳನ್ನು ಊಜಖಖ ಖಿಚಿಟತಿಚಿಡಿಮೇಲೆ ಬರೆಯಲಾಗಿತ್ತು. ಇದು ಮುಂದುವರಿದು ಅಂತಿಮವಾಗಿ ಅದು 1946 ರ ಫೆಬ್ರವರಿ 18 ರಂದು ಮುಷ್ಕರ ಸ್ಫೋಟವಾಗಿ ಬಾಂಬೆ, ಕಲ್ಕತ್ತಾ, ಕರಾಚಿ, ವಿಶಾಖಪಟ್ನ ಮುಂತಾದ ಬಂದರು ನಗರಗಳಿಗೆ ವಿಸ್ತರಣೆಯಾಯಿತು.

ಈ ದಂಗೆಯು ಭಾರತದ ವಿಭಿನ್ನ ರಾಜಕೀಯ ಚಿಂತನೆಗಳ ಐಕ್ಯತೆಯ ಪ್ರತೀಕವಾಗಿತ್ತು. ಹಡಗುಗಳ ಮೇಲೆ ಕಾಂಗ್ರೆಸ್ ಬಾವುಟ, ಮುಸ್ಲಿಂ ಲೀಗ್ ಬಾವುಟ ಮತ್ತು ಕಮ್ಯುನಿಸ್ಟ್ ಪಾರ್ಟಿ ಕೆಂಬಾವುಟ ಮೂರು ಬಾವುಟಗಳು ಹಾರಾಡುತ್ತಿದ್ದವು. ಬಾಂಬೆಯ ಕಾರ್ಮಿಕ ವರ್ಗ ಬೆಂಬಲಾರ್ಥವಾಗಿ ಮುಷ್ಕರ ಮಾಡಿ ಹರತಾಳವನ್ನು ಆಚರಿಸಿತು. ಕಾರ್ಮಿಕರ ಈ ಹೋರಾಟಕ್ಕೆ ಎಡ ಕಾಂಗ್ರೆಸ್ಸಿಗರು, ಸೋಷಿಯಲಿಸ್ಟರು ಮತ್ತು ಕಮ್ಯುನಿಸ್ಟರು ಬೆಂಬಲ ನೀಡಿದ್ದರು. ಫೆಬ್ರವರಿ 22 ರಂದು ಕಾರ್ಮಿಕರು ಮತ್ತು ಪೊಲೀಸರ ನಡುವೆ ಬಾಂಬೆಯ ಬೀದಿಗಳಲ್ಲಿ ಕಾಳಗವೇ ನಡೆದು ಹಲವರು ತಮ್ಮ ಪ್ರಾಣಗಳನ್ನು ಕಳೆದುಕೊಂಡರು.

ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಸೇರಿದಂತೆ ದೇಶದ ಹಲವಾರು ನಗರಗಳಲ್ಲಿ ಕಮ್ಯುನಿಸ್ಟ್ ಪಕ್ಷ ನಾವಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಪ್ರತಿಭಟನೆಗಳನ್ನು ನಡೆಸಿತು. ಆದರೆ ಈ ಹೋರಾಟ ರಾಷ್ಟ್ರವ್ಯಾಪಿ ಬೆಂಬಲವನ್ನು ಗಳಿಸುವುದರಲ್ಲಿ ಯಶಸ್ಸು ಕಾಣಲಿಲ್ಲ. ಮುಖ್ಯವಾಗಿ ಕಾಂಗ್ರೆಸ್ ಹಿಂಸೆಯ ಕಾರಣವನ್ನು ಮುಂದಿಟ್ಟು ಮತ್ತು ಬ್ರಿಟಿಷರೊಂದಿಗೆ ನಡೆಯುತ್ತಿದ್ದ ಮಾತುಕತೆಗಳಿಗೆ ಧಕ್ಕೆಯಾಗಬಹುದೆಂದು ತಿಳಿದು ರಿನ್ ಬಂಡಾಯವನ್ನು ವಿರೋಧಿಸಿತು. ಇನ್ನು ಮುಸ್ಲಿಂ ಲೀಗ್ ಪ್ರತ್ಯೇಕ ಪಾಕಿಸ್ತಾನಕ್ಕೆ ಹೋರಾಡುತ್ತಿದ್ದರಿಂದ, ನಾವಿಕರ ಬಂಡಾಯದಲ್ಲಿ ಮೂಡಿಬಂದ ಐಕ್ಯತೆ ಅದಕ್ಕೆ ಅಗತ್ಯವಾಗಿರಲಿಲ್ಲವಾದ್ದರಿಂದ ಬೆಂಬಲ ನೀಡಲಿಲ್ಲ.ಚರಿತ್ರೆಕಾರರಾದ ಸುಮಿತ್ ಸರ್ಕಾರ್ ಅವರು ಈ ಕುರಿತು:

> 1946 ರ ಆಗಸ್ಟ್ ನಂತರದಲ್ಲಿ ಯಾವುದು (ಇಂತು–ಕೋಮುಗಲಭೆಗಳು) ಸಂಭವಿಸಲಿತ್ತೋ ಅದಕ್ಕೆ ತೀವ್ರ ವಿರುದ್ಧವಾಗಿ, 1946 ರ ಫೆಬ್ರವರಿಯ ದಿನಗಳಲ್ಲಿ ಬಾಂಬೆ ಮತ್ತು ಕಲ್ಕತ್ತಾದ ಬೀದಿಗಳಲ್ಲಿ ಗಮನಾರ್ಹ ಬ್ರಿಟಿಷ್–ವಿರೋಧಿ ಹಿಂದೂ ಮತ್ತು ಮುಸ್ಲಿಮರ ಐಕ್ಯತೆ ಪ್ರದರ್ಶನವಾಗುತ್ತಿತ್ತು. ಆರ್‌ಐಎನ್ ಬಂಡಾಯದ ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಪ್ರಾಂತೀಯ ಮುಖಂಡರು (ಎಸ್. ಕೆ.ಪಾಟೀಲ್ ಮತ್ತು ಚುಂದ್ರಿಗರ್) 'ಪೊಲೀಸರಿಗೆ ಸಹಕರಿಸಲು ಸ್ವಯಂಸೇವಕರ ಸಹಾಯ'ವನ್ನು ನೀಡುವುದಾಗಿ ಹೇಳಿದರು. ಒಂದು ಹಿಂಸಾತ್ಮಕ ಕ್ರಿಯೆಗೆ ಹಿಂದೂ ಮತ್ತು ಮುಸ್ಲಿಮರ ಮತ್ತು ಇತರರ ನಡುವಿನ ಸಂಯೋಗವನ್ನು ಗಾಂಧಿ 'ಅಪವಿತ್ರ' ಎಂದು ಕರೆದರು[41]

ಎಂಬುದಾಗಿ ಗುರುತಿಸುತ್ತಾರೆ. ಬೀದಿ ಹೋರಾಟದಲ್ಲಿ ಮೂಡಿಬಂದ ಐಕ್ಯತೆಯನ್ನು ಸಾರಾಸಗಟಾಗಿ ಹಿಂಸೆ ಹೆಸರಿನಲ್ಲಿ ಮತ್ತು ಕ್ರಾಂತಿಕಾರಿಗಳು ಮುಂಚೂಣಿಯಲ್ಲಿದ್ದರೆಂಬ ಕಾರಣಕ್ಕೆ, ನಾವಿಕರ ಬಂಡಾಯದ ವಿರುದ್ಧ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಿಲುವು ತೆಗೆದುಕೊಂಡವು. ಕಮ್ಯುನಿಸ್ಟ್ ಪಕ್ಷ ಮಾತ್ರ ಸಂಪೂರ್ಣ ಬೆಂಬಲವನ್ನು ನೀಡಿತು. ಆದರೆ ಕಮ್ಯುನಿಸ್ಟ್ ಪಕ್ಷಕ್ಕೆ ರಾಷ್ಟ್ರೀಯ ವ್ಯಾಪ್ತಿಯ ಕೊರತೆಯಿಂದಾಗಿ ನಾವಿಕ ಬಂಡಾಯವನ್ನು ಸಾಮ್ರಾಜ್ಯಶಾಹಿಯ ವಿರುದ್ಧ ರಾಷ್ಟ್ರೀಯ ಹೋರಾಟವನ್ನಾಗಿ ರೂಪಿಸಲಾಗಲಿಲ್ಲ. ಕಾಂಗ್ರೆಸ್ ಮತ್ತು ಲೀಗ್‌ನ ಧೋರಣೆಗಳಿಂದಾಗಿ ಬಂಡಾಯದ ಕ್ರಾಂತಿಕಾರಿ ಗುಣಕ್ಕೆ ಸ್ಪಷ್ಟ ಮುನ್ನೋಟವನ್ನು ಒದಗಿಸಲು ಆಗಲಿಲ್ಲ.

ಅಂತಿಮವಾಗಿ, ಈ ಹೋರಾಟದಲ್ಲಿ ಏಳು ಜನ ರಿನ್ ಬಂಡಾಯಗಾರರು ಮತ್ತು ಒಬ್ಬ ಬ್ರಿಟಿಷ್ ಅಧಿಕಾರಿ ಸಾವನ್ನಪ್ಪಿದರು. 33 ಜನ ಗಾಯಗೊಂಡರು. 476 ನಾವಿಕರನ್ನು ಕೆಲಸದಿಂದ ವಜಾ ಮಾಡಿದರು. ಊ಑ಖ ಖಿಚಿಟತಿಚಿಡಿನಲ್ಲಿದ್ದ ಹಲವಾರು ನಾವಿಕರು ಕಮ್ಯುನಿಸಂನಿಂದ ಪ್ರಭಾವಿತರಾಗಿದ್ದರು. ಊ಑ಖ ಓಜತಿ ಆಜಟ್ಝುಯಲ್ಲಿ ಬಂಧನಕ್ಕೊಳಗಾದ 38 ಜನರಲ್ಲಿ 15 ಜನ ಕಮ್ಯುನಿಸ್ಟ್ ಸಾಹಿತ್ಯದ ಚಂದಾದಾರರಾಗಿದ್ದರು. ದಂಗೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ ಆರಂಭಿಸಿದ್ದಲ್ಲವೆಂದರೂ, ಅದರ ಸಾಹಿತ್ಯದಿಂದ ಅದು ಪ್ರೇರಣೆ ಪಡೆದಿತ್ತು ಎಂದು ಬ್ರಿಟಿಷರಿಗೆ ನಂತರ ತಿಳಿಯಿತು42. ವಿಶೇಷವೆಂದರೆ, ನಾವಿಕರ ಬಂಡಾಯವು ಕಾಂಗ್ರೆಸಿಗರಲ್ಲಿ ಆತಂಕವನ್ನು ಸೃಷ್ಟಿಸಿತು ಮತ್ತು ಇದಕ್ಕೆ ಕಾರಣ ಕಮ್ಯುನಿಸ್ಟರೆಂದು ದೂಷಿಸಲು ಆರಂಭಿಸಿದರು. 1946 ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸ್‌ನಲ್ಲಿದ್ದ ಎಲ್ಲ ಕಮ್ಯುನಿಸ್ಟರನ್ನು ಉಚ್ಚಾಟಿಸಲು ತೀರ್ಮಾನಿಸಿತು (ಮಹೇಂದ್ರ 2005: 19).

ಕಮ್ಯುನಿಸ್ಟರ ನೇತೃತ್ವದ ರೈತ ಹೋರಾಟಗಳು

ಜಗತ್ತಿನಾದ್ಯಂತ ಎರಡನೇ ಪ್ರಪಂಚ ಯುದ್ಧದ ನಂತರ ರಾಷ್ಟ್ರೀಯ ವಿಮೋಚನಾ ಹೋರಾಟಗಳು ತೀವ್ರವಾಗಿ ಎದ್ದು ಬಂದವು. ಪರಿಣಾಮವಾಗಿ ಭಾರತದಲ್ಲೂ ಕಾರ್ಮಿಕ ಹೋರಾಟಗಳೂ ಸೇರಿದಂತೆ ಎಲ್ಲಾ ಜನ ವಿಭಾಗಗಳ ಹೋರಾಟಗಳೂ ತೀವ್ರತೆ ಪಡೆದುಕೊಂಡವು ಮತ್ತು ವಿಸ್ತಾರಗೊಂಡವು. ರೈತ ಹೋರಾಟಗಳಿಗೆ ಸಂಬಂಧಿಸಿ ಹೇಳುವುದಾದರೆ, ಅವು ಬ್ರಿಟಿಷ್ ವಸಾಹತುಶಾಹಿ ವಿರೋಧಿ ಸ್ವರೂಪವನ್ನು ಇಟ್ಟುಕೊಂಡೇ ಇಲ್ಲಿನ ಊಳಿಗಮಾನ್ಯ

ಮತ್ತು ಜಮೀನ್ದಾರಿ ವ್ಯವಸ್ಥೆ ವಿರೋಧಿ ಹೋರಾಟಗಳೂ ಆಗಿದ್ದವು. ಭಾರತದ ರೈತ ಹೋರಾಟಗಳ ಪೈಕಿ ಅದರ ವ್ಯಾಪ್ತಿ, ಅಗಾಧತೆ ಮತ್ತು ಅದು ಎತ್ತಿದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ತೆಲಂಗಾಣ ರೈತ ಹೋರಾಟ ಮೊದಲ ಸಾಲಿನಲ್ಲಿ ನಿಲ್ಲುವ ಕಮ್ಯುನಿಸ್ಟರು ನಡೆಸಿದ ಹೋರಾಟವಾಗಿದೆ. 1946 ರಲ್ಲಿ ಆರಂಭವಾಗಿ 1951 ರವರೆಗೆ ಐದು ವರ್ಷಗಳ ಕಾಲ ನಡೆದ **ತೆಲಂಗಾಣ ಸಶಸ್ತ್ರ ರೈತ ಬಂಡಾಯ** ಅಲ್ಲಿನ ಸಾಮಾಜಿಕ, ರಾಜಕೀಯ ಮತ್ತು ಭೂಸಂಬಂಧಗಳಲ್ಲಿ ಅಪಾರವಾದ ಬದಲಾವಣೆಗಳನ್ನು ಉಂಟುಮಾಡಿತು. ಈ ಹೋರಾಟದ ಪರಿಣಾಮವಾಗಿ ಹೈದರಾಬಾದ್ ರಾಜ್ಯದಲ್ಲಿ ನೂತನವಾದ ಭೂ ಶಾಸನವೊಂದು ರೂಪುಗೊಳ್ಳಲು ಸಾಧ್ಯವಾಯಿತು (ಧನಗೆರೆ 2012: 203).

ಸ್ವಾತಂತ್ರ್ಯಪೂರ್ವ ಭಾರತದ ದೊಡ್ಡ ರಾಜ್ಯಗಳಲ್ಲಿ ಒಂದಾಗಿದ್ದ ಹೈದರಾಬಾದ್ ರಾಜ್ಯದ ನಿಜಾಮ ಜಗತ್ತಿನ ಅತಿ ಶ್ರೀಮಂತರಲ್ಲಿ ಒಬ್ಬನಾಗಿದ್ದ. ಹೈದರಾಬಾದ್ ರಾಜ್ಯದ ಕಾರ್ಷಿಕ ಸಂರಚನೆಯು ಮಧ್ಯಕಾಲದ ಊಳಿಗಮಾನ್ಯ ಪದ್ಧತಿಯನ್ನು ಹೋಲುತ್ತಿತ್ತು. ಎರಡು ರೀತಿಯ ಭೂ ಒಡೆತನ ಪದ್ಧತಿ ಇತ್ತು. ಒಂದು ಖಾಲ್ಸಾ ಅಥವಾ ದಿವಾನಿ ಪದ್ಧತಿ, ಮತ್ತೊಂದು ಜಾಗೀರ್‌ದಾರ್ ಪದ್ಧತಿ. ದಿವಾನಿ ಪದ್ಧತಿಯಲ್ಲಿ ನಿಜವಾದ ವ್ಯವಸಾಯಗಾರರ ಸಾಗುವಳಿ ಹಕ್ಕುಗಳಿಗೆ ಯಾವುದೇ ರಕ್ಷಣೆಯಿರಲಿಲ್ಲ. ದೇಶಪಾಂಡೆ ಮತ್ತು ದೇಶಮುಖರು ಭೂ ತೆರಿಗೆ ವಸೂಲಿ ಮಾಡುವ ಹಕ್ಕನ್ನು ಪಡೆದಿದ್ದರು. ಇನ್ನು ಜಾಗೀರ್‌ದಾರ್ ಪದ್ಧತಿಯು ರಾಜ್ಯದ ಪ್ರಮುಖ ರಾಜಕೀಯ ಆಡಳಿತ ಲಕ್ಷಣವಾಗಿತ್ತು. ನಿಜಾಮ ನೇಮಿಸಿದ್ದ ಸಾಮಂತರು, ಅವಶ್ಯಕವಾದಾಗಲೆಲ್ಲಾ ಸೈನಿಕ ಸೇವೆಯನ್ನು ಒದಗಿಸುವುದರ ಜೊತೆಗೆ, ವ್ಯವಸಾಯಗಾರರಿಂದ ಮನಸೋ ಇಚ್ಛೆ ಅನೇಕ ಬಗೆಯ ತೆರಿಗೆಗಳನ್ನು ಸುಲಿಯಲು ಸ್ವತಂತ್ರರಾಗಿದ್ದರು. ಇಂತಹ ವ್ಯವಸ್ಥೆಯಿಂದಾಗಿ ಬಹುತೇಕ ಜಾಗೀರ್‌ದಾರ್ ಮತ್ತು ದೇಶಮುಖರುಗಳು ಒಬ್ಬೊಬ್ಬರೂ ಸಹಸ್ರಾರು ಎಕರೆ ಭೂಮಿಯನ್ನು, ಕೆಲವೊಮ್ಮೆ ಇಡೀ ಹಳ್ಳಿ ಹಳ್ಳಿಗಳನ್ನೇ ತಮ್ಮ ವಶದಲ್ಲಿ ಹೊಂದಿರುತ್ತಿದ್ದರು. ಇವರನ್ನು ಸ್ಥಳೀಯವಾಗಿ ದೊರಾ ಎನ್ನುತ್ತಿದ್ದರು. ಇವರು ಭೂಮಾಲೀಕ, ಲೇವಾದೇವಿಗಾರ ಮತ್ತು ಅಧಿಕಾರಿ ಎಲ್ಲವೂ ಆಗಿದ್ದರು. ಸಹಜವಾಗಿಯೇ ಇವರಿಗೆ ಎಲ್ಲ ಸೇವೆಗಳೂ ಪರಂಪರಾಗತವಾಗಿ ದೊರೆಯುತ್ತಿದ್ದವು. ಈ ಸೇವೆಗಳಲ್ಲಾ ಕ್ರಮೇಣವಾಗಿ ಇವರ ಹಕ್ಕುಗಳಾದವು. ಮತ್ತು ಇವೆಲ್ಲವೂ ಪುಕ್ಕಟೆಯಾಗಿ (ವೆಟ್ಟಿ ಚಾಕರಿ) ಮಾಡಬೇಕಿತ್ತು. ಈ ಬಿಟ್ಟಿ ಚಾಕರಿಯನ್ನು ಭೂಮಿ, ಮನೆ, ಕಛೇರಿ ಮೂರೂ ಕಡೆಗಳಲ್ಲಿ ಮಾಡಬೇಕಿತ್ತು. ಇವನ್ನು ಹೆಚ್ಚಾಗಿ ಸಮಾಜದ ಕೆಳ ಹಾಗೂ ಅಸ್ಪೃಶ್ಯ ಜಾತಿಯ ಜನರೇ ಮಾಡಬೇಕಾಗಿತ್ತು (ಧನಗೆರೆ 2012: 206–208).

ವಿಶಾಲಾಂಧ್ರ ಭಾಗದಲ್ಲಿ 1934 ರಲ್ಲಿ ಆರಂಭವಾದ ಕಮ್ಯುನಿಸ್ಟ್ ಪಕ್ಷ ವ್ಯಾಪಕವಾದ ಹೋರಾಟಗಳನ್ನು ನಡೆಸುತ್ತಿತ್ತು. ತೆಲಂಗಾಣ ಭಾಗದಲ್ಲಿ ಆಂಧ್ರ ಕಾನ್ಫರೆನ್ಸ್ ಮತ್ತು ಆಂಧ್ರ ಮಹಾಸಭಾಗಳಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ಸೇರಿಕೊಂಡು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರು. 1942 ರ ನಂತರದಲ್ಲಿ ಆಂಧ್ರ ಮಹಸಭಾ ನಾಯಕತ್ವ ಪೂರ್ತಿಯಾಗಿ ಕಮ್ಯುನಿಸ್ಟರ ಪಾಲಾಯಿತು. ಆ ಸುಮಾರಿಗೆ ಬಿಟ್ಟಿ ಕೆಲಸದ ನಿರ್ಮೂಲನೆ, ಒಕ್ಕಲೆಬ್ಬಿಸುವಿಕೆಗೆ ತಡೆ, ಗೇಣಿ, ತೆರಿಗೆ ಹಾಗೂ ಕಂದಾಯದಲ್ಲಿ ಕಡಿತ, ಉಳುವವನಿಗೇ ಪಟ್ಟಾ ಬೇಡಿಕೆಗಳನ್ನು ಇಟ್ಟು ರೈತರನ್ನು

ಸಂಘಟಿಸಲು ಕಮ್ಯುನಿಸ್ಟರು ಯೋಜಿಸಿದರು. ಇದೇ ಸಂದರ್ಭದಲ್ಲಿ ಎರಡನೇ ಪ್ರಪಂಚ ಯುದ್ಧದ ನಂತರ ಆಹಾರ ಪದಾರ್ಥಗಳಲ್ಲಿ ಅಭಾವ ಉಂಟಾಗಿ ಬೆಲೆಗಳು ವಿಪರೀತವಾಗಿ ಏರಿಕೆಯಾದವು. ಇವು ಗ್ರಾಮೀಣ ಬಡವರು, ಕೃಷಿ ಕಾರ್ಮಿಕರು ಮತ್ತು ಬಡ ರೈತರಲ್ಲಿ ಅತೃಪ್ತಿಯನ್ನು ಹೆಚ್ಚಿಸಿದವು. ಇದರಿಂದ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಯಿತು.

1946 ಜುಲೈನಲ್ಲಿ ವಿಷ್ಣು ದೇಶಮುಖ ಎಂಬ ಜಮೀನ್ದಾರನ ವಿರುದ್ಧ ಸಾವಿರ ರೈತರು ದೊಣ್ಣೆ ಪ್ರದರ್ಶನವನ್ನು ನಡೆಸಿದರು. ಜಮೀನ್ದಾರನ ಬಾಡಿಗೆ ಗೂಂಡಾಗಳು ಗುಂಡು ಹಾರಿಸಿ ರೈತ ಸಂಘದ ಗ್ರಾಮ ಸಮಿತಿ ಮುಖಂಡ ದೊಡ್ಡ ಕೋಮರಯ್ಯ ಎಂಬುವರನ್ನು ಕೊಂದರು. ಈ ಸಾವು ತೆಲಂಗಾಣ ಹೋರಾಟದ ಕಿಡಿಯಾಗಿ ಹೊತ್ತಿಕೊಂಡಿತು. ನೂರಾರು ಹಳ್ಳಿಗಳಿಗೆ ಈ ಕಿಡಿ ಪ್ರಸರಿಸಿತು. ಎಲ್ಲ ಹಳ್ಳಿಗಳಲ್ಲೂ ಕಮ್ಯುನಿಸ್ಟರು ರೈತರನ್ನು ಹೋರಾಟಕ್ಕೆ ಇಳಿಸಿದ್ದರು. 1946 ಅಕ್ಟೋಬರ್‌ನಲ್ಲಿ ನಿಜಾಂ ಸರ್ಕಾರ ಆಂಧ್ರ ಕಾನ್ಫರೆನ್ಸ್‌ನ್ನು ನಿಷೇಧಿಸಿತು. ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರನ್ನು ಬಂಧಿಸಿತು. ರೈತರು ಬಿಟ್ಟಿ ಚಾಕರಿಯನ್ನು ನಿರಾಕರಿಸಿದರು. ಸಣ್ಣ ರೈತರು ಲೆವಿ ಭತ್ತ ಕೊಡುವುದಿಲ್ಲ ಎಂದರು. ಸಣ್ಣ ರೈತರು ಮತ್ತು ಭೂಹೀನರು ತಾವು ಉಳುಮೆ ಮಾಡುತ್ತಿದ್ದ ಭೂಮಿಯನ್ನು ಬಿಡುವುದಿಲ್ಲ ಎಂದರು.

ಹೀಗೆ ಪ್ರಾರಂಭವಾದ ಈ ಚಳುವಳಿಯ ಸಂದರ್ಭದಲ್ಲೇ ಭಾರತದ ಸ್ವಾತಂತ್ರ್ಯದ ಪ್ರಶ್ನೆಯೂ ಇಲ್ಲಿ ಸೇರ್ಪಡೆಗೊಂಡಿತು. ಸ್ವತಂತ್ರ ರಾಜರಾಗಿ ಇರಬಹುದು ಅಥವಾ ಭಾರತಕ್ಕೋ, ಪಾಕಿಸ್ತಾನಕ್ಕೋ ಸೇರಬಹುದು ಎಂಬ ಬ್ರಿಟಿಷರ ಯೋಜನೆಯಿಂದ ಪ್ರೇರಿತನಾದ ಹೈದರಾಬಾದಿನ ನಿಜಾಂ ಸ್ವತಂತ್ರ ದೇಶದ ರಾಜನಾಗಿರಲು ಬಯಸಿದ. ರಾಜಕೀಯ ಅಧಿಕಾರವನ್ನು ಕಾಪಾಡಿಕೊಳ್ಳಬೇಕೆಂಬ ಹಿನ್ನೆಲೆಯಲ್ಲಿ ಶ್ರೀಮಂತ ಮುಸ್ಲಿಮರ ಸಂಘಟನೆಯಾದ ಮಜ್ಲಿಸ್–ಇತ್ತೆಹಾದ್‌ನ ನಾಯಕ ಕಾಸಿಂ ರಜ್ವಿ ಸಂಘಟಿಸಿದ ರಜಾಕಾರ್ಸ್ ಎಂಬ ಅರೆ ಸೈನಿಕ ಗೂಂಡಾಪಡೆಯನ್ನು ನಿಜಾಮ್ ಹೋರಾಟ ನಿರತ ರೈತರು ಮತ್ತು ಕಮ್ಯುನಿಸ್ಟರ ಮೇಲೆ ಬಳಸಿದ. ಕಮ್ಯುನಿಸ್ಟರ ಪ್ರಭಾವ ಹೆಚ್ಚಾಗಿದ್ದ ತೆಲಂಗಾಣ ಭಾಗದಲ್ಲಿ ಇವರು ನಡೆಸಿದ ದೌರ್ಜನ್ಯಗಳು, ಹಿಂಸೆಗಳು, ಅತ್ಯಾಚಾರಗಳು, ಸುಲಿಗೆಗಳಿಗೆ ಪಾರವೇ ಇಲ್ಲದಂತಾಯಿತು, ಅರಾಜಕ ಸ್ಥಿತಿ ನಿರ್ಮಾಣವಾಯಿತು.

ತೆಲಂಗಾಣ ಪ್ರದೇಶಗಳಲ್ಲಿ ಗ್ರಾಮ ರಾಜ್ಯ(ಸೋವಿಯೆತ್)ಗಳೆಂಬ ಸಮಾನಾಂತರ ಸರಕಾರವನ್ನು ನಡೆಸಲು ಈ ಉತ್ಕಟ ಪರಿಸ್ಥಿತಿಯೇ ಕಮ್ಯುನಿಸ್ಟರಿಗೆ ನೆರವಾಯಿತು. ಅವರು ರಜಾಕಾರರು ಮತ್ತು ಪೊಲೀಸರೊಡನೆ ಹೋರಾಡಬಲ್ಲ ದಳಗಳೆಂಬ ಗ್ರಾಮೀಣ ಸ್ವಯಂ ಸೇವಕರ ತಂಡಗಳನ್ನು ಕಟ್ಟತೊಡಗಿದರು. ಕಮ್ಯುನಿಸ್ಟರು ಪ್ರಭಾವ ಹೆಚ್ಚಾಗಿದ್ದ ನಲ್ಗೊಂಡ, ವಾರಂಗಲ್, ಖಮ್ಮಂ ಜಿಲ್ಲೆಗಳಲ್ಲಿ ಈಗಾಗಲೇ ರಜಾಕಾರರ ದರೋಡೆಗಳಿಂದ ಕಂಗಟ್ಟಿದ್ದ ಜನ ಇಂತಹ ದಳಂಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರತೊಡಗಿದರು (ಸುಂದರಯ್ಯ 1972: 90). ಭಾರತ ಸರಕಾರವು ಹೈದರಾಬಾದಿನಲ್ಲಿ 'ಪೊಲೀಸ್ ಕಾರ್ಯಾಚರಣೆ' ನಡೆಸುವಷ್ಟರಲ್ಲಿ... ಸುಮಾರು 4000 ಹಳ್ಳಿಗಳಲ್ಲಿ ಕಮ್ಯುನಿಸ್ಟರ ಸಮಾನಾಂತರ ಆಡಳಿತವೇ ನಡೆಯುತ್ತಿತ್ತು ಎಂದರೂ ತಪ್ಪಾಗಲಾರದು (ರಾಜೇಶ್ವರರಾವ್ 1972: 14–15).

ಈ ಮೂಲ ಅಂಶಗಳ ಜೊತೆಗೆ ಇಂತಹ ವಿಸ್ತರಣೆಗೆ ಸಿಪಿಐನೊಳಗೆ ಬದಲಾದ ಒಂದು ಧೋರಣೆಯೂ ಕಾರಣವಾಗಿತ್ತು. 1948 ಮಾರ್ಚ್‌ನಲ್ಲಿ ನಡೆದ ಸಿಪಿಐನ ಎರಡನೇ ಸಮ್ಮೇಳನದಲ್ಲಿ, ಎಲ್ಲರನ್ನೂ ಒಳಗೊಂಡ 'ಸಂಯುಕ್ತ ರಂಗ' ತಂತ್ರಗಾರಿಕೆಗಿಂತ ಭಿನ್ನವಾದ ತೀರ್ಮಾನವನ್ನು ಮಾಡಲಾಗಿತ್ತು. ಸಿಪಿಐ ಪ್ರಧಾನ ಕಾರ್ಯದರ್ಶಿಯಾಗಿದ್ದ ಬಿ.ಟಿ.ರಣದಿವೆಯವರು ಕ್ರಾಂತಿಕಾರಿ ಮಾದರಿಯ ಹೋರಾಟಗಳಿಗೆ ಹೆಚ್ಚಿನ ಮುತುವರ್ಜಿ ನೀಡಿದರು. ಸಾಮ್ರಾಜ್ಯಶಾಹಿ ಹೋರಾಟದ ಜೊತೆ ಜೊತೆಯಲ್ಲೇ ಜಮೀನ್ದಾರಿ ವರ್ಗ ಮತ್ತು ಬಂಡವಾಳಶಾಹಿ ವಿರುದ್ಧ ಹೋರಾಟವನ್ನು ನಡೆಸಬೇಕೆಂಬ ತೀರ್ಮಾನ ತೆಲಂಗಾಣ ಹೋರಾಟಕ್ಕೆ ಮತ್ತಷ್ಟು ಪುಷ್ಟಿಯನ್ನು ಕೊಟ್ಟಿತು.

1948 ಸೆಪ್ಟೆಂಬರ್ 13 ರಂದು ಭಾರತದ ಸೈನ್ಯ ಹೈದರಾಬಾದ್ ಪ್ರವೇಶ ಮಾಡಿತು. ನಿಜಾಮನ ಸೇನೆ, ಪೊಲೀಸ್, ರಜಾಕಾರರು ತೀವ್ರ ವಿರೋಧವಿಲ್ಲದೆ ಶರಣಾದರು. ನಿಜಾಮನ ವಿರುದ್ಧ ಭಾರತ ಸರಕಾರ ತೆಗೆದುಕೊಂಡ ನಿಲುವು ಕೇವಲ ತೋರಿಕೆಯದಾಗಿತ್ತು. ಭಾರತ ಒಕ್ಕೂಟದ ಪ್ರಮುಖ ಸ್ಥಾನದಲ್ಲಿದ್ದ ಹೈದರಾಬಾದಿನಲ್ಲಿ ದಂಗೆಯ ಮೂಲಕ ಕಮ್ಯೂನಿಸ್ಟರು ಅಧಿಕಾರವನ್ನು ಕೈವಶ ಮಾಡಿಕೊಳ್ಳಬಹುದೆಂಬುದೇ ಅವರಿಗಿದ್ದ ನಿಜವಾದ ಹೆದರಿಕೆಯಾಗಿತ್ತು. ಆದರೆ ಇದನ್ನು ಸರಕಾರ 1949 ಫೆಬ್ರವರಿವರೆಗೆ ಎಲ್ಲೂ ಸ್ಪಷ್ಟವಾಗಿ ಹೊರಹಾಕಿರಲಿಲ್ಲ. ರಜಾಕಾರರ ಸದ್ದಡಗಿಸಿದ ಮೇಲೆ ಜನರಲ್ ಜೆ.ಎನ್.ಚೌಧರಿಯವರು ತಮ್ಮ ಸೈನ್ಯದ ಬಂದೂಕನ್ನು ರೈತರು ದಂಗೆಯೆದ್ದಿದ್ದ ತೆಲಂಗಾಣದ ಕಡೆ ತಿರುಗಿಸಿದರು. ಕಮ್ಯುನಿಸ್ಟರ ರೈತ ದಂಗೆಯನ್ನು ಸದೆಬಡಿಯಲು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಭಾರತದ ಸೈನ್ಯ ಮಾಡಿತು (ಧನಗೆರೆ 2012: 224). ಇದರ ಅಗಾಧತೆಯನ್ನು ಅರ್ಥ ಮಾಡಿಕೊಳ್ಳಲು, ತೆಲಂಗಾಣ ಹೋರಾಟದ ಪ್ರಮುಖ ನಾಯಕರಾಗಿದ್ದ ಪಿ.ಸುಂದರಯ್ಯ ಅವರ ಹೇಳಿರುವುದನ್ನು ಗಮನಿಸಬಹುದು:

> ನಲ್ಗೊಂಡ, ವರಂಗಲ್, ಖಮ್ಮಂ ಜಿಲ್ಲೆಗಳಿಗೆ ಸೇರಿದ 16,000 ಚದರ ಮೈಲಿ ವಿಸ್ತೀರ್ಣವುಳ್ಳ ಪ್ರದೇಶದಲ್ಲಿ ಸುಮಾರು 30 ಲಕ್ಷ ಜನಸಂಖ್ಯೆಯುಳ್ಳ ಸುಮಾರು 3,000 ಗ್ರಾಮಗಳಲ್ಲಿ ರೈತರು ಹೋರಾಟ ನಡೆಸಿದರು. ಈ ಹೋರಾಟದ ಫಲವಾಗಿ ಆ ಪ್ರದೇಶದಲ್ಲಿ ಪಂಚಾಯತಿಗಳಿಗೆ ಪರ್ಯಾಯವಾಗಿ ಗ್ರಾಮರಾಜ್ಯಗಳನ್ನು ಸ್ಥಾಪಿಸಿಕೊಂಡರು. ತಾವು ದ್ವೇಷಿಸುವ ಜಮೀನ್ದಾರರನ್ನು ಈ ಗ್ರಾಮಗಳಿಂದ, ಕೋಟೆಗಳಂತಿದ್ದ ಬಂಗಲೆಗಳಿಂದ ಓಡಿಸಿದರು. ಅವರ ಹೊಲಗಳನ್ನು ರೈತರು ವಶಪಡಿಸಿಕೊಂಡರು. ಗ್ರಾಮೀಣ ಪ್ರದೇಶದಲ್ಲಿ ನಿಜಾಮನ ನಿರಂಕುಶ ಆಡಳಿತಕ್ಕೆ ಮೂಲಾಧಾರವಾಗಿದ್ದುದು ಈ ಜಮೀನ್ದಾರರೇ. ಜನ ಸಮಿತಿಗಳ ಮಾರ್ಗದರ್ಶನದಲ್ಲಿ 10 ಲಕ್ಷ ಎಕರೆ ಭೂಮಿಯನ್ನು ರೈತರಿಗೆ ಹಂಚಲಾಯಿತು. ಎಲ್ಲಾ ರೀತಿಯ ಒಕ್ಕಲೆಬ್ಬಿಸುವಿಕೆಯನ್ನು ನಿಲ್ಲಿಸಲಾಯಿತು ಮತ್ತು ಬಲವಂತದ ಚಾಕರಿಯನ್ನು ರದ್ದುಪಡಿಸಲಾಯಿತು. ಲೂಟಿಕೋರ ಮತ್ತು ಅಧಿಕ ದರಗಳ ಬಡ್ಡಿ ವ್ಯವಹಾರವನ್ನು ತೀವ್ರವಾಗಿ ಕಡಿತಗೊಳಿಸಲಾಯಿತು ಅಥವಾ ಪೂರ್ತಿಯಾಗಿ ರದ್ದುಪಡಿಸಲಾಯಿತು. ಕೃಷಿ ಕಾರ್ಮಿಕರ ದಿನಗೂಲಿಯನ್ನು ಹೆಚ್ಚಿಸಲಾಯಿತು ಮತ್ತು ಕನಿಷ್ಟ ಕೂಲಿಯನ್ನು ಜಾರಿಗೊಳಿಸಲಾಯಿತು. ದಮನಕಾರಿ ಅರಣ್ಯ ಅಧಿಕಾರಿಗಳನ್ನು ಆ ಇಡೀ ಅರಣ್ಯದ ವ್ಯಾಪ್ತಿಯಿಂದ ಹೊರಗೆ ಹೋಗುವಂತೆ ಮಾಡಲಾಯಿತು. ಆದಿವಾಸಿಗಳು ಮತ್ತು ಅರಣ್ಯದ ಸುತ್ತ ವಾಸಿಸುವ ಜನ ತಮ್ಮ ಶ್ರಮದ ಫಲವನ್ನು ತಾವೇ ಉಣ್ಣುವುದಕ್ಕೆ ಸಾಧ್ಯವಾಯಿತು. 12 ರಿಂದ 18 ತಿಂಗಳ ಕಾಲ ಈ ಪ್ರದೇಶದ ಪೂರ್ಣ ಆಡಳಿತವನ್ನು

ಗ್ರಾಮ ರೈತ ಸಮಿತಿಗಳೇ ನಡೆಸಿದವು. ಈ ಹೋರಾಟದ ಹಾದಿಯಲ್ಲಿ, ನಿಜಾಮನ ನಿರಂಕುಶಾಧಿಕಾರದ ವಿರುದ್ಧ, ರಜಾಕಾರರ ಮತ್ತು ನಿಜಾಂ ಪೋಲೀಸರ ಶಸ್ತ್ರಸಜ್ಜಿತ ದಾಳಿಗಳಿಗೆ ಎದುರಾಗಿ ರೈತರಿಗೆ ರಕ್ಷಣೆ ಒದಗಿಸಲು, 10,000 ಗ್ರಾಮದಳ ಸದಸ್ಯರು ಮತ್ತು 2,000 ನಿಯಮಿತ ಗೆರಿಲ್ಲಾ ಪಡೆಗಳನ್ನು ಸಂಘಟಿಸಲು ಮತ್ತು ಶಕ್ತಿಶಾಲಿಯಾದ ಸಶಸ್ತ್ರ ಪಡೆಗಳನ್ನು ಕಟ್ಟಲು ಜನರಿಗೆ ಸಾಧ್ಯವಾಗಿತ್ತು. ಲಕ್ಷಾಂತರ ರೈತರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಎರಡು ಹೊತ್ತು ಊಟ ಮಾಡುವ ಸ್ಥಿತಿಗೆ ಬಂದರು. ಒಟ್ಟಾರೆಯಾಗಿ ಹೇಳುವುದಾದರೆ, ಈ ಚಾರಿತ್ರಿಕವಾದ ರೈತ ದಂಗೆಯು ಮಧ್ಯಯುಗೀನ ನಿರಂಕುಶ ಪ್ರಭುತ್ವವಾದ ಅಸಫ್‌ಜಾಹಿ ವಂಶಾಡಳಿತದ ಬುಡಕ್ಕೆ ಪೆಟ್ಟು ಕೊಟ್ಟಿತು ಮತ್ತು ಅದರ ವಿರುದ್ಧ ಅಂತಿಮ ಹೊಡೆತಗಳನ್ನು ನೀಡಿತು (ಸುಂದರಯ್ಯ 1972: Viii).

ತೆಲಂಗಾಣದ ಚಾರಿತ್ರಿಕ ರೈತ ಹೋರಾಟವು ಅಪಾರ ಪ್ರಮಾಣದ ತ್ಯಾಗ ಬಲಿದಾನಗಳನ್ನು ಪಡೆಯಿತು. ಸರಿಸುಮಾರು 4000 ಕಮ್ಯುನಿಸ್ಟರು ಮತ್ತು ರೈತ ಕ್ರಾಂತಿಕಾರಿಗಳು ಸಾವನ್ನಪ್ಪಿದರು, 10,000 ಕ್ಕೂ ಹೆಚ್ಚು ಕಮ್ಯುನಿಸ್ಟ್ ಕಾರ್ಯಕರ್ತರು ಮತ್ತು ಜನತೆಯ ಹೋರಾಟಗಾರರನ್ನು 3–4 ವರ್ಷಗಳ ಕಾಲ ಬಂಧನ ಶಿಬಿರಗಳಲ್ಲಿ ಮತ್ತು ಜೈಲುಗಳಲ್ಲಿ ಕೂಡಿ ಹಾಕಿದ್ದರು. 50,000 ಹೆಚ್ಚು ಜನರನ್ನು ಪೋಲೀಸ್ ಮತ್ತು ಮಿಲಿಟರಿ ಶಿಬಿರಗಳಲ್ಲಿ ವಾರಗಟ್ಟಲೆ ತಿಂಗಳುಗಟ್ಟಲೆ ಕೂಡಿ ಹಾಕಿ ಕಿರುಕುಳ ಚಿತ್ರಹಿಂಸೆಗಳನ್ನು ನೀಡಿದರು; ಸಾವಿರಾರು ಗ್ರಾಮಗಳಿಗೆ ಸೇರಿದ ಹಲವು ಲಕ್ಷ ಜನರು ಪೋಲೀಸ್ ಮತ್ತು ಮಿಲಿಟರಿ ದಾಳಿಗಳಿಗೆ ಒಳಗಾದರು ಮತ್ತು ಕ್ರೂರ ಲಾಟಿ ಏಟುಗಳನ್ನು ಅನುಭವಿಸಿದರು; ಈ ಪೋಲೀಸ್ ಮತ್ತು ಮಿಲಿಟರಿ ದಾಳಿಗಳ ಪ್ರಕ್ರಿಯೆಯಲ್ಲಿ ಜನರು ಮಿಲಿಯಾಂತರ ರೂಪಾಯಿಗಳ ತಮ್ಮ ಆಸ್ತಿಗಳನ್ನು, ಲೂಟಿ ಅಥವಾ ನಾಶದಲ್ಲಿ ಕಳೆದುಕೊಂಡರು; ಸಾವಿರಾರು ಮಹಿಳೆಯರು ದೌರ್ಜನ್ಯಗಳಿಗೆ ಒಳಗಾದರು ಮತ್ತು ಎಲ್ಲಾ ರೀತಿಯ ಅವಮಾನ ಮತ್ತು ತಿರಸ್ಕಾರಗಳನ್ನು ಅನುಭವಿಸಿದರು; ಒಟ್ಟಾರೆಯಾಗಿ ಹೇಳಬೇಕೆಂದರೆ, ಇಡೀ ಪ್ರದೇಶ ಐದು ವರ್ಷಗಳ ಕಾಲ, ಮೊದಲಿಗೆ ನಿಜಾಮ ಮತ್ತು ಅವನ ಸಶಸ್ತ್ರ ರಜಾಕಾರ ಹಿಂಡುಗಳು ಮತ್ತು ನಂತರ ಭಾರತ ಸರ್ಕಾರ ಮತ್ತು ಹೈದರಾಬಾದ್ ಸರ್ಕಾರದ ಜಂಟಿ ಸಶಸ್ತ್ರ ಪಡೆಗಳ ಕ್ರೂರ ಪೋಲೀಸ್ ಮತ್ತು ಮಿಲಿಟರಿ ಭಯೋತ್ಪಾದನೆಯ ಆಡಳಿತಕ್ಕೆ ಒಳಪಟ್ಟಿತ್ತು. ಹೋರಾಟವನ್ನು ಹಿಂಸಾತ್ಮಕವಾಗಿ ಮುಗಿಸಲು ಮತ್ತು ಚೂರು ಚೂರಾಗಿದ್ದ ಜಮೀನ್ದಾರಿ ಆಡಳಿತವನ್ನು ಪುನರ್‌ಸ್ಥಾಪಿಸಲು, ಪೋಲೀಸ್ ಕಾರ್ಯಾಚರಣೆಯ ನಂತರ, 50,000 ಬಲದ ವಿವಿಧ ಸಶಸ್ತ್ರ ಪಡೆಗಳನ್ನು ನಿಯೋಜಿಸಲಾಯಿತು (ಸುಂದರಯ್ಯ 1972: Vii).

ಸೈನ್ಯವು ಹೈದರಾಬಾದನ್ನು ವಶಪಡಿಸಿಕೊಂಡ ಮೇಲೆ ಜಾಗೀರು ಪದ್ಧತಿಯನ್ನು ರದ್ದುಗೊಳಿಸುವ ಕಾಯಿದೆಯನ್ನು ತರಲು ಭಾರತ ಸರ್ಕಾರವು ಉದ್ದೇಶಿಸಿತು. ಇದಕ್ಕಾಗಿ ಸಮಗ್ರ ಭೂಸುಧಾರಣಾ ಮಸೂದೆಗೆ ಸಲಹೆ ಸೂಚನೆ ನೀಡುವಂತೆ ಒಂದು ಸಮಿತಿಯನ್ನು ನೇಮಿಸಿತು. ಆದರೆ ಇಂತಹ ಸುಧಾರಣೆಗಳನ್ನು ತರುವ ಹಿಂದಿದ್ದ ಅದರ ಉದ್ದೇಶ ಗ್ರಾಮೀಣ ಪ್ರದೇಶಗಳಲ್ಲಿದ್ದ ಕಮ್ಯುನಿಸ್ಟರ ಪ್ರಭಾವ ತಗ್ಗಿಸುವುದೇ ಆಗಿತ್ತು (ಧನಗೆರೆ 2012: 225). ಪೋಲೀಸ್ ಕಾರ್ಯಾಚರಣೆಯನ್ನು ಪೂರ್ಣವಾಗಿ ಎದುರಿಸಲಾರದ ಪರಿಸ್ಥಿತಿ ಸೇರಿದಂತೆ ತೆಲಂಗಾಣ ಹೋರಾಟವು ಎತ್ತಿದ ಬೇಡಿಕೆಗಳ ಸ್ವರೂಪ ಮತ್ತು ಅದರ ಹಿಂದೆ ನೆರೆದ ಜನವರ್ಗಗಳ ಹಿತಾಸಕ್ತಿಗಳ ನಡುವೆ ಉಂಟಾದ

ಭಿನ್ನಾಭಿಪ್ರಾಯಗಳು ಸಹಜವಾಗಿಯೇ ಚಳುವಳಿಯನ್ನು ದುರ್ಬಲಗೊಳಿಸುವಲ್ಲಿ ಪಾತ್ರ ವಹಿಸಿತ್ತು. ಭೂರಹಿತರು, ಸಣ್ಣ ರೈತರು, ಮಧ್ಯಮ ರೈತರು ಮತ್ತು ಶ್ರೀಮಂತ ರೈತರ ಒಕ್ಕೂಟವಾಗಿ ಆರಂಭವಾಗಿದ್ದ ಚಳುವಳಿಯಲ್ಲಿ ಕ್ರಮೇಣ ಬಹುಪಾಲು ಶ್ರೀಮಂತ ರೈತರು ದೂರ ಸರಿದರು. ಗ್ರಾಮ ದಳಗಳ ಸದಸ್ಯರಾಗಿದ್ದ ಅಸ್ಪೃಶ್ಯರು (ಮಾಲ ಮತ್ತು ಮಾದಿಗ) ಮತ್ತು ಗಿರಿಜನರು ಹೋರಾಟವನ್ನು ಕೊನೆ ಘಟ್ಟದವರೆಗೂ ಜೀವಂತವಾಗಿಟ್ಟಿದ್ದರು. ಇದೇ ಸಂದರ್ಭಕ್ಕೆ ಸಿಪಿಐನೊಳಗೆ ಎದ್ದು ಬಂದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಸಹ ಈ ಹೋರಾಟವನ್ನು ಮುಂದುವರಿಸುವ ವಿಚಾರದಲ್ಲಿ ಸ್ಪಷ್ಟವಾದ ವಿಭಜನೆಯನ್ನು ಉಂಟು ಮಾಡಿತು. ರವಿ ನಾರಾಯಣ ರೆಡ್ಡಿ, ಬಿ.ಎಲ್ಲಾರೆಡ್ಡಿ, ಸಿ.ರಾಜೇಶ್ವರ್ ರಾವ್ ಇವರುಗಳು ಹೋರಾಟದ ನಿಲುಗಡೆಯನ್ನು ವಾದಿಸಿದರೆ, ಪಿ.ಸುಂದರಯ್ಯ, ಎಂ.ಬಸವಪುನ್ನಯ್ಯ ಇಂತಹವರುಗಳು ಕುಶಲಕರ್ಮಿಗಳ ಜೊತೆ ಸೇರಿ ಹೋರಾಟವನ್ನು ಮುಂದುವರಿಸಬೇಕೆಂದು ವಾದಿಸಿದರು. ನಗರಗಳ ಕಾರ್ಮಿಕ ವರ್ಗ ಮತ್ತು ಮಧ್ಯಮ ವರ್ಗದ ಬೆಂಬಲವನ್ನು ಗಳಿಸಲು ಈ ಹೋರಾಟಕ್ಕೆ ಸಾಧ್ಯವಾಗದೇ ಹೋದದ್ದು ಒಂದು ವಿಫಲತೆ ಎನ್ನಲಾಗಿದೆ. ಅಂತಿಮವಾಗಿ 1951 ಅಕ್ಟೋಬರ್‌ನಲ್ಲಿ ತೆಲಂಗಾಣ ಹೋರಾಟವನ್ನು ವಾಪಸ್ ಪಡೆಯಲಾಯಿತು.

ಕಮ್ಯುನಿಸ್ಟ್ ಪಕ್ಷದೊಳಗೇ ಈ ತೀರ್ಮಾನದ ಕುರಿತು ಭಿನ್ನಾಭಿಪ್ರಾಯಗಳು ಮೂಡಿಬಂದವು. 1949–51 ರ ವರ್ಷಗಳಲ್ಲಿ ನಡೆದ ಸಶಸ್ತ್ರ ಪ್ರತಿರೋಧದ (partisan resistance) ಹಂತವನ್ನು ಪಂಥೀಯವಾದದ್ದು (sectarian), ಕರ್ಮಠವಾದದ್ದು (dogmatic) ಮತ್ತು ಮುಖ್ಯವಾಗಿ ವೈಯುಕ್ತಿಕ ಭಯೋತ್ಪಾದನೆಯಿಂದ ಕೂಡಿದ್ದೆಂದು ಬಲ ಕಮ್ಯುನಿಸ್ಟರು ಜೋರಾಗಿ ಬಿಂಬಿಸಿದರು. ತೆಲಂಗಾಣ ಹೋರಾಟದ ನಾಯಕರು 1951 ಅಕ್ಟೋಬರ್‌ನಲ್ಲಿ ಅದನ್ನು ಹಿಂತೆಗೆದುಕೊಳ್ಳುವ ಮೂಲಕ ಅದಕ್ಕೆ ದ್ರೋಹ ಬಗೆದರೆಂದು ನಕ್ಸಲೈಟ್‌ರು ಪ್ರಚಾರ ಮಾಡಿದರು. ಇದೇನೇ ಆದರೂ, ಒಟ್ಟಾರೆ ತೆಲಂಗಾಣ ಹೋರಾಟದ ಸಾರಾಂಶವನ್ನು ಸುಂದರಯ್ಯನವರ ಮಾತುಗಳಲ್ಲೇ ಈ ರೀತಿ ಹಿಡಿದಿಡಬಹುದು:

> ತೆಲಂಗಾಣ ಚಳುವಳಿಯು ಭಾರತದ ಕಮ್ಯುನಿಸ್ಟ್ ಚಳುವಳಿಗೆ ನೀಡಿದ ಏಕೈಕ ಅತ್ಯಂತ ಮಹತ್ವವಾದ ಬೃಹತ್ ಕೊಡುಗೆ ಏನೆಂದರೆ, ಈ ಹೋರಾಟವು ಭಾರತದ ಕಮ್ಯುನಿಸ್ಟ್ ಚಳುವಳಿಯ ಎಲ್ಲಾ ಮೂಲಭೂತ ತಾತ್ವಿಕ ಮತ್ತು ಸೈದ್ಧಾಂತಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ಭಾರತದ ಜನತೆಯ ಪ್ರಜಾಪ್ರಭುತ್ವ ಚಳುವಳಿಯ ವ್ಯೂಹ ಮತ್ತು ತಂತ್ರಗಾರಿಕೆ ಮತ್ತು ಅದರ ವಾಸ್ತವದ ಮತ್ತು ಪ್ರಾಯೋಗಿಕವಾದ ಪರಿಹಾರಗಳ ಸರಿಯಾದ ಮತ್ತು ವೈಜ್ಞಾನಿಕ ಉತ್ತರಗಳಿಗೆ ಸಂಬಂಧಿಸಿದಂತೆ ಮಹತ್ವದ ಕಾಣಿಕೆಯನ್ನು ನೀಡಿದೆ. **ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ರೈತಾಪಿಯ ಪಾತ್ರ, ಸಶಸ್ತ್ರ ದಂಗೆ ಮತ್ತು** ಗ್ರಾಮೀಣ ಕ್ರಾಂತಿಕಾರಿ ನೆಲೆಗಳ ಸ್ಥಾನ ಮತ್ತು ಮಹತ್ವ, ರೈತಾಪಿಯಲ್ಲಿನ ಸ್ತರಗಳ ನಿರ್ದಿಷ್ಟ ವಿಶ್ಲೇಷಣೆ, ರೈತಾಪಿಯ ಈ ನಿರ್ದಿಷ್ಟ ಸ್ತರಗಳು ಕ್ರಾಂತಿಯಲ್ಲಿ ನಿರ್ವಹಿಸುವ ಪಾತ್ರ, ಭಾರತದ ಕ್ರಾಂತಿಗೆ ಮುನ್ನೋಟ, ನಮ್ಮ ಕ್ರಾಂತಿಯಲ್ಲಿ ಕಾರ್ಮಿಕ ವರ್ಗ ಮತ್ತು ನಗರ ಕೇಂದ್ರಗಳ ನಿರ್ದಿಷ್ಟ ಪಾತ್ರ, ಕಾರ್ಮಿಕ ವರ್ಗದ ಅಧಿಪತ್ಯದ ನಿಖರವಾದ ಅರ್ಥ ಮತ್ತು ಆಧುನಿಕ ಕಾರ್ಮಿಕ ವರ್ಗ ಜನಸಂಖ್ಯೆಯ ಶೇ.1 ಷ್ಟನ್ನೂ ಹೊಂದಿಲ್ಲದ ನಮ್ಮಂತಹ

ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿಲ್ಲದ ದೇಶಗಳಲ್ಲಿ ಅದನ್ನು ಸಾಧಿಸಲು ಕಮ್ಯುನಿಸ್ಟ್ ಪಕ್ಷದ ಪಾತ್ರ, ಹೀಗೆ, ಸಾಲು ಸಾಲು ಪ್ರಶ್ನೆಗಳು ಪಕ್ಷದ ಆಂತರಿಕ ಚರ್ಚೆಗಳು ಮತ್ತು ತೀರ್ಮಾನಗಳಿಗೆ ತೆರೆದುಕೊಂಡವು. ಪಕ್ಷದ ಆಂತರಿಕ ಹೋರಾಟದ ದೀರ್ಘಾವಧಿಯಲ್ಲಿ, ಎತ್ತಲಾದ ಬಹುತೇಕ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳೊಂದಿಗೆ ಪಕ್ಷವು ಒಂದು ಸುಮಾರು ಸರಿಯಾದ ರಾಜಕೀಯ ಲೈನಿಗೆ ಬರಲು ಜೀವನ ಮತ್ತು ಅನುಭವಗಳು ಶಕ್ತಗೊಳಿಸಿವೆ (ಸುಂದರಯ್ಯ 1972: vii).

❖ ❖ ❖

ಕಯ್ಯೂರು ರೈತ ಹೋರಾಟ ನಡೆದದ್ದು ಅಂದಿನ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಕಾಸರಗೋಡು ತಾಲೂಕಿನ ತೇಜಸ್ವಿನಿ ನದಿ ತೀರದ ಒಂದು ಸಣ್ಣ ಹಳ್ಳಿ ಕಯ್ಯೂರಿನಲ್ಲಿ. ಬ್ರಿಟಿಷರ ಪ್ರಾಮಾಣಿಕ ಸೇವಕರಾಗಿದ್ದ ಜನ್ಮಿ ಎಂದು ಕರೆಯಲ್ಪಡುವ ಇಬ್ಬರು ಸ್ಥಳೀಯ ಜಮೀನ್ದಾರರಾದ ಕಲ್ಲಿಯಾಟ್ ನಂಬಿಯಾರ್ ಮತ್ತು ಕರಕಟ್ಟ್ ಎಡಂ ನಾಯನಾರ್ ಇವರ ವಿರುದ್ಧ 1940 ರಲ್ಲಿ ಅಲ್ಲಿನ ರೈತರು ಮತ್ತು ಕಾರ್ಮಿಕರು ದಂಗೆಯೆದ್ದರು. ಇದು ಜಮೀನ್ದಾರಿಕೆ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ದ ಒಟ್ಟೊಟ್ಟಿಗೆ ನಡೆದ ಹೋರಾಟವಾಗಿತ್ತು.

ಜಮೀನ್ದಾರರ ಶೋಷಣೆ, ದಾಳಿ, ದಬ್ಬಾಳಿಕೆಗಳ ವಿರುದ್ಧವಾಗಿ ಅಲ್ಲಿನ ರೈತರು ಕಿಸಾನ್ ಸಭಾವನ್ನು ಪ್ರಾರಂಭಿಸಿದ್ದರು. 1938–41 ರ ಅವಧಿಯಲ್ಲಿ ಜಮೀನ್ದಾರರು ಮತ್ತು ಬ್ರಿಟಿಷರು ವಿರುದ್ಧವಾಗಿ ಕಿಸಾನ್ ಸಭಾ ಹೋರಾಟಗಳನ್ನು ನಡೆಸುತ್ತಿದ್ದರಿಂದ ಮಲಬಾರ್ ಸ್ಪೆಷಲ್ ಪೊಲೀಸ್ ತುಕಡಿಯೊಂದು ಕಯ್ಯೂರು ಗ್ರಾಮದಲ್ಲಿ ನೆಲೆಸಿತ್ತು. ಅವರು ರೈತರ ಮನೆಗಳನ್ನು ಲೂಟಿ ಮಾಡುವುದು, ಮಹಿಳೆಯರಿಗೆ ಕಿರುಕುಳ ನೀಡುವುದು, ಹೊಡೆಯುವುದು ಮಾಡುತ್ತಿದ್ದರು. ಇದರ ವಿರುದ್ಧ 1941 ರ ಮಾರ್ಚ್ 28 ರಂದು ರೈತ ಸಂಘ ಪ್ರತಿಭಟನೆಯನ್ನು ಏರ್ಪಡಿಸಿತ್ತು. ರೈತರ ಮೇಲೆ ಪೊಲೀಸ್ ಲಾಠಿ ಚಾರ್ಜ್‌ನಲ್ಲಿ ಭಾಗವಹಿಸಿದ್ದ ಸುಬ್ಬರಾಯನ್ ಎಂಬ ಪೊಲೀಸನೊಬ್ಬ ಮಾರನೇ ದಿನ ಜನರ ಕೈಗೆ ಸಿಕ್ಕಿ ಬಿದ್ದಿದ್ದ. ಪ್ರತಿಭಟನಾ ಮೆರವಣಿಗೆಯ ಮುಂಚೂಣಿಯಲ್ಲಿ ಆತ ಕೆಂಬಾವುಟ ಹಿಡಿದು ನಡೆಯುವಂತೆ ರೈತರು ಆತನಿಗೆ ಶಿಕ್ಷೆ ನೀಡಿದರು. ಬೇರೆ ವಿಧಿಯಿಲ್ಲದೆ ಹಾಗೆ ನಡೆಯುತ್ತಿರುವಾಗ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ನದಿಗೆ ಧುಮುಕಿ ಈಜಲಾಗದೆ ಸಾವನ್ನಪ್ಪಿದ. ಜನರು ಅವನನ್ನು ಕಲ್ಲುಗಳಿಂದ ಹೊಡೆದು ಕೊಂದರೆಂಬ ಆರೋಪವನ್ನು ಹೊರಿಸಲಾಯಿತು. ಈ ಘಟನೆಯನ್ನು ಉಪಯೋಗಿಸಿ ಕಯ್ಯೂರು ಮತ್ತು ಸುತ್ತಲ ಪ್ರದೇಶಗಳಲ್ಲಿದ್ದ ಕ್ರಾಂತಿಕಾರಿ ಚಳುವಳಿಯನ್ನು ನಾಶ ಮಾಡಲು ಬ್ರಿಟಿಷರು ಮುಂದಾದರು[43].

ಕಯ್ಯೂರು ಕೇಸಿನಲ್ಲಿ ಕೊಲೆ ಪ್ರಕರಣದಲ್ಲಿ 61 ಜನರ ವಿರುದ್ಧ ಕೊಲೆ ಮೊಕದ್ದಮೆಯನ್ನು ಹಾಕಲಾಗಿತ್ತು. ಇದರಲ್ಲಿ ಮೊದಲ ಆರೋಪಿ ಮಡತ್ತಿಲ್ ಅಪ್ಪು, ಎರಡನೆ ಆರೋಪಿ ವಿ.ವಿ.ಕುನ್ಹಂಬು, ಮೂರನೇ ಆರೋಪಿ ಮುಂದೆ ಕೇರಳದ ಮುಖ್ಯಮಂತ್ರಿಯಾಗಿದ್ದ ಇ.ಕೆ.ನಾಯನಾರ್. ಮೊದಲಿಗೆ ಕೇಸ್ ಮಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನಡೆದು ನಂತರ ಸೆಷನ್ಸ್‌ಗೆ ಹೋಯಿತು. ದಕ್ಷಿಣ ಕನ್ನಡ ಸೆಷನ್ಸ್ ನ್ಯಾಯಾಧೀಶ ಎಲ್.ಎಸ್.ಪಾರ್ಥಸಾರಥಿ ಐಯ್ಯರ್ 31 ಸಾಕ್ಷಿಗಳನ್ನು ಪರೀಕ್ಷಿಸಿದರು. ಆರೋಪಿಗಳ ಪರವಾಗಿ ಬ್ಯಾರಿಸ್ಟರ್ ಎ.ಕೆ.ಪಿಳ್ಳೈ ವಾದಿಸಿದರು. 1942 ಫೆಬ್ರವರಿ

9 ರಂದು ತೀರ್ಪು ಪ್ರಕಟವಾಗಿ ಮಡತ್ತಿಲ್ ಅಪ್ಪು, ಕೋಯಿಲ್‌ತಲ್ಲಿಟ್ ಚಿರುಕಂಠನ್, ಪೊಡೋರ ಕುನ್ಹಂಬು ನಾಯರ್ ಮತ್ತು ಅಬೂಬಕ್ಕರ್ ಇವರಿಗೆ ನೇಣು ದಂಡನೆ ವಿಧಿಸಲಾಯ್ತು. ಮತ್ತೊಬ್ಬ ಆರೋಪಿ ಚಿರುಕಂಠನ್ ಕೃಷ್ಣನ್ ನಾಯರ್‌ಗೂ ನೇಣು ಶಿಕ್ಷೆ ವಿಧಿಸಲಾಗಿತ್ತು. ಆದರೆ ಸಣ್ಣ ವಯಸ್ಸು ಎಂಬ ಕಾರಣಕ್ಕೆ ಕಠಿಣ ಶಿಕ್ಷೆಗೆ ಇಳಿಸಲಾಯಿತು. ಶಿಕ್ಷೆಯಾದವರನ್ನು ಕಣ್ಣಾನೂರು ಜೈಲಿಗೆ ವರ್ಗಾಯಿಸಲಾಯಿತು.

ನಾಲ್ಕು ಜನರನ್ನು ನೇಣಿನ ಕುಣಿಕೆಯಿಂದ ತಪ್ಪಿಸಲು ಮದ್ರಾಸ್ ಹೈಕೋರ್ಟ್‌ನಲ್ಲಿ ಮಾಡಲಾಗಿದ್ದ ಅಪೀಲ್ ವಜಾ ಆಯಿತು. ನಂತರ ಗವರ್ನರ್ ಮತ್ತು ವೈಸ್‌ರಾಯ್ ಅವರಿಗೆ ಸಾವಿರಾರು ಪತ್ರಗಳು, ಟೆಲಿಗ್ರಾಂಗಳು, ಮನವಿಗಳು ನೀಡಲಾಯಿತು. ಆದರೆ ಬ್ರಿಟಿಷ್ ಸರ್ಕಾರ ಅವೆಲ್ಲವನ್ನೂ ನಿರಾಕರಿಸಿತು. ಕೊನೆಗೆ ಅಂತಿಮ ಪ್ರಯತ್ನವಾಗಿ ಇಂಗ್ಲೆಂಡಿನ ಪ್ರಿವಿ ಕೌನ್ಸಿಲ್‌ಗೆ ಇಂಗ್ಲೆಂಡ್ ಕಮ್ಯುನಿಸ್ಟ್ ಪಕ್ಷದ ಡಿ.ಎನ್.ಪ್ರಿಟ್ ಮೂಲಕ ಮನವಿ ಸಲ್ಲಿಸಲಾಯಿತು. ಆದರೆ ಅದು ಮನವಿಯನ್ನು ಒಪ್ಪಲಿಲ್ಲ. ಸಿಪಿಐ ಕಾರ್ಯದರ್ಶಿ ಪಿ.ಸಿ.ಜೋಷಿ ಕೊನೆಯ ಬಾರಿಗೆ ಬಡ ರೈತ ಕುಟುಂಬದ ಹುಡುಗರನ್ನು ಭೇಟಿ ಮಾಡಲು ಪಿ.ಕೃಷ್ಣಪಿಳ್ಳೈ ಜೊತೆಗೂಡಿ ಜೈಲಿಗೆ ಹೋದರು. ಅವರಿಗೆ ದುಃಖವನ್ನು ತಡೆಯಲಾರದೆ ಅಳುತ್ತಿದ್ದಾಗ ಆ ಬಾಲಕರೇ ಅವರನ್ನು ಸಂತೈಸಿದರು.

1943 ಮಾರ್ಚ್ 29 ಕೇರಳದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಮರೆಯಲಾರದ ದಿನವಾಯ್ತು. ಕಣ್ಣಾನೂರಿನ ಸೆಂಟ್ರಲ್ ಜೈಲಿನಲ್ಲಿ ನಾಲ್ಕು ಜನ ಕಯ್ಯೂರಿನ ಯುವಕರಿಗೆ ನೇಣು ಹಾಕಲಾಯಿತು. ಅವರು ಕೊನೆಯದಾಗಿ 'ಕಮ್ಯುನಿಸ್ಟ್ ಪಾರ್ಟಿ ಜಿಂದಾಬಾದ್' 'ರೈತ ಸಂಘ ಜಿಂದಾಬಾದ್' ಘೋಷಣೆಗಳ ಮೂಲಕ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಕೇರಳದಲ್ಲಿ ಹೊಸ ಆಂದೋಲನಕ್ಕೆ ಕಾರಣರಾದರು. ಇವರ ಗೌರವಾರ್ಥ ಮಾರ್ಚ್ 29 ನ್ನು ಅಖಿಲ ಭಾರತ ಕಿಸಾನ್ ದಿನವನ್ನಾಗಿ ಆಚರಿಸಲು ಎಐಕೆಎಸ್ ತೀರ್ಮಾನಿಸಿತು. ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ತ್ಯಾಗ ಮಾಡುವುದು ಎಷ್ಟು ಶ್ರೇಷ್ಠವಾದದ್ದು ಎಂಬ ಬಗ್ಗೆ ಈ ಯುವಕರು ಕೊನೆಯದಾಗಿ ಬರೆದ ಕೆಳಕಂಡ ಪತ್ರ ಇಡೀ ಮಲಬಾರಿನಲ್ಲಿ ಬ್ರಿಟಿಷರ ವಿರುದ್ಧ ಜನರನ್ನು ಬಡಿದೆಬ್ಬಿಸಿತು:

> . . . ನಾವು ನಮಗೆ ಸೇರಿದವರು ಮಾತ್ರವಲ್ಲ, ಏಕೆಂದರೆ ನಾವು ಜಗತ್ತಿನ ಜನತೆಗೆ ಸೇರಿದವರು. ದೇಶಕ್ಕಾಗಿ ಸಾಯಲು ನಾವು ಹೆಮ್ಮೆ ಪಡುತ್ತೇವೆ. ನಾವು ಹೇಡಿಗಳೆಂದು ತಿಳಿಯಬೇಡಿ; ನಾವು ನಿಜವಾದ ದೇಶಪ್ರೇಮಿಗಳು ಮತ್ತು ಹುತಾತ್ಮರ ರೀತಿಯಲ್ಲಿ ಸಾವನ್ನು ಎದುರಿಸಲು ಪೂರ್ಣವಾಗಿ ಸಿದ್ದರಿದ್ದೇವೆ. ನಾವಿಂದು ಗಲ್ಲುಶಿಕ್ಷೆಯನ್ನು ಸ್ವೀಕರಿಸಿದರೆ ಮುಂದಿನ ಪೀಳಿಗೆ ಎಂದೆಂದಿಗೂ ಅದನ್ನು ಮರೆಯುವುದಿಲ್ಲ. ರಾಷ್ಟ್ರೀಯ ವಿಮೋಚನೆಗಾಗಿ ಸಾವನ್ನು ಎದುರಿಸುವ ಈ ಅವಕಾಶಕ್ಕಾಗಿ ಹೆಮ್ಮೆ ಪಡುತ್ತೇವೆ ಮತ್ತು ಇದನ್ನು ನಾವು ವಿಶೇಷ ಸವಲತ್ತೆಂದು ಭಾವಿಸುತ್ತೇವೆ . . . ಭಗತ್‌ಸಿಂಗ್‌ರಂತಹ ದೇಶಪ್ರೇಮಿ ವೀರರ ತ್ಯಾಗ ನಮಗೆ ಸ್ಫೂರ್ತಿ ನೀಡುತ್ತದೆ. ಕಾಮ್ರೇಡ್ ಲೆನಿನ್‌ರವರು ಝಾರ್ ಆಡಳಿತವನ್ನು ಕಿತ್ತೊಗೆಯಲು ಪಟ್ಟ ಕಷ್ಟಗಳ ನೆನಪಾಗುತ್ತದೆ . . . ನಾವು ಚಿಂತಿತರಾಗಿಲ್ಲ ಅಥವಾ ನಿರುತ್ಸಾಹಗೊಂಡಿಲ್ಲ. ನಮ್ಮ ನಾಡಿನ ಹಲವಾರು ವೀರ ಹುತಾತ್ಮರ ಚರಿತ್ರೆಯು ನಮಗೆ, ದೇಶದ ಉದಾತ್ತ ಉದ್ದೇಶಗಳಿಗಾಗಿ ಸಾವನ್ನು ಧೈರ್ಯವಾಗಿ ಎದುರಿಸಲು

ಸ್ಫೂರ್ತಿಯನ್ನು ಮತ್ತು ಸಮಾಧಾನವನ್ನು ಕೊಡುತ್ತದೆ. ಅಂತಿಮವಾಗಿ ಜಗತ್ತಿನ ಜನತೆ ಜಯಶಾಲಿಗಳಾಗುತ್ತಾರೆ ಮತ್ತು ಜಗತ್ತಿನ ಭವಿಷ್ಯವು ಉಜ್ವಲ ಮತ್ತು ಖ್ಯಾತಿಯನ್ನು ಹೊಂದುತ್ತದೆ ಎಂಬುದನ್ನು ನಾವು ಪೂರ್ಣವಾಗಿ ನಂಬುತ್ತೇವೆ. ಎಲ್ಲಾ ರೀತಿಯಲ್ಲೂ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ; ನಮ್ಮ ರಾಷ್ಟ್ರೀಯ ವಿಮೋಚನೆಗೆ ಅದೊಂದೇ ದಾರಿ. 'ಕಮ್ಯುನಿಸ್ಟ್ ಪಾರ್ಟಿ ಜಿಂದಾಬಾದ್', 'ಇಂಕ್ವಿಲಾಬ್ ಜಿಂದಾಬಾದ್' (ಡಾಕ್ಯುಮೆಂಟ್ಸ್ 1998: 713–14) (ಅನುವಾದ ಲೇಖಕರದು).

ಇಂತಹ ಧೀರೋದಾತ್ತ ವೀರರಾಗಿದ್ದ ಈ ಯುವಕರ ತ್ಯಾಗ ಮಲಬಾರ್ ಪ್ರದೇಶದಲ್ಲಿ ರೈತ ಚಳುವಳಿಯನ್ನು ತೀವ್ರಗೊಳಿಸಿತು ಮತ್ತು ಮುಂದೆ ಜಮೀನ್ದಾರಿ (ಜನ್ಮಿ) ಪದ್ಧತಿಯನ್ನು ನಾಶ ಮಾಡಲು ಪೂರಕವಾಯಿತು. ಕಮ್ಯುನಿಸ್ಟ್ ಪಕ್ಷವು ಇಂದಿಗೂ ಈ ಪ್ರದೇಶಗಳಲಿ ಬಲಿಷ್ಠವಾಗುಳಿದಿದ್ದರೆ ಇಂತಹ ಬಲಿದಾನಗಳು ಅದಕ್ಕೆ ಕಾರಣವಾಗಿವೆ. ಹಾಗೆ ನೋಡಿದರೆ ಹುತಾತ್ಮರಾದ ನಾಲ್ವರು ತುಂಬಾ ವಿದ್ಯಾವಂತರೇನಾಗಿರಲಿಲ್ಲ. ಅವರ ಕುಟುಂಬಗಳು ಕಡು ಕಷ್ಟದಲ್ಲಿದ್ದವು. ಇವರು ಗೇಣಿ ರೈತರು ಮತ್ತು ಕೂಲಿಕಾರರಾಗಿದ್ದರು. ಅವರ ಕುಟುಂಬಗಳನ್ನು, ಮನೆಗಳನ್ನು ಮತ್ತು ಅವರಿಗಿದ್ದ ಸಣ್ಣ ವಸ್ತುಗಳನ್ನೂ ಸಹ ಬ್ರಿಟಿಷ್ ಪೊಲೀಸರು ಮತ್ತು ಜಮೀನ್ದಾರರ ಗೂಂಡಾಗಳು ನಾಶ ಮಾಡಿದ್ದರು. ಅಂತಹ ಸಂದರ್ಭದಲ್ಲಿ ಅವರ ನೆರವಿಗೆ ನಿಂತ ಕಮ್ಯುನಿಸ್ಟ್ ಪಕ್ಷ ಸಹಾಯವನ್ನು ಸಂಘಟಿಸಿತು. ಸಿಪಿಐನ ಕಾರ್ಯದರ್ಶಿ ಪಿ.ಸಿ.ಜೋಷಿ ಬರೆದ ಪತ್ರವನ್ನು (ಜೋಷಿ 1943: 251–53) ಲೇಬರ್ ಮಂಥ್ಲಿ ಪತ್ರಿಕೆಯು ಪ್ರಕಟಿಸಿ ಕಯ್ಯೂರು ಹುತಾತ್ಮರ ಕುಟುಂಬಗಳಿಗೆ ಇಂಗ್ಲೆಂಡಿನ ಕಮ್ಯುನಿಸ್ಟರು ಮತ್ತು ಕಾರ್ಮಿಕರಿಂದ 'ಕಯ್ಯೂರ್ ಫಂಡ್' ಹೆಸರಿನಲ್ಲಿ (ಅಂದಾಜು 1000 ಪೌಂಡ್) ನಿಧಿ ಸಂಗ್ರಹ ಮಾಡಿ ಕಳಹಿಸಿತು. ಹಣವನ್ನು ನಾಲ್ಕು ಕುಟುಂಬಗಳಿಗೂ ಹಂಚಿಕೆ ಮಾಡಿದರು ಮತ್ತು ಕಮ್ಯುನಿಸ್ಟ್ ಪಕ್ಷ ಆ ಕುಟುಂಬಗಳಿಗೆ ಆಧಾರವನ್ನು ಒದಗಿಸಿತು (ಪೀಪಲ್ಸ್ ವಾರ್ 1943: ಏಪ್ರಿಲ್ 11). ಕೇರಳದ ಕ್ರಾಂತಿಕಾರಿ ಚಳುವಳಿಯಲ್ಲಿ ಇಂದಿಗೂ ಉತ್ಸಾಹ ಮತ್ತು ಹೋರಾಟಕ್ಕೆ ಪ್ರೇರಣ ನೀಡುವ ಕಯ್ಯೂರು ವೀರರ ಕಥೆಯು, ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ 1940 ರ ದಶಕದ ಆರಂಭದಲ್ಲಿ ಪ್ರಭಾವವನ್ನು ಬೀರಿತು. ಕಯ್ಯೂರು ಹುತಾತ್ಮರ ಕುರಿತು ಮುಂದಿನ ಕಾಲಘಟ್ಟದಲ್ಲಿ ಅಪಾರವಾದ ಸಾಹಿತ್ಯ ರಚನೆಯಾಯಿತು. ಈ ಕುರಿತು ಕನ್ನಡದಲ್ಲಿ ನಿರಂಜನರು ಬರೆದ 'ಚಿರಸ್ಮರಣೆ' ಕಾದಂಬರಿಯು ಅಪಾರ ಜನಮನ್ನಣೆಯನ್ನು ಗಳಿಸಿತು. ಕಾಸರಗೋಡು ಚಿನ್ನಾ ಅವರು ಇದನ್ನು ಕಿರುತೆರೆಯಲ್ಲಿ ಧಾರವಾಹಿಯಾಗಿ ಪ್ರಸಾರ ಮಾಡಿದರು. ಇದಲ್ಲದೆ ಕಥೆ, ನಾಟಕ, ಸಿನಿಮಾ ರೂಪದಲ್ಲಿಯೂ ಈ ಘಟನೆಯನ್ನು ಜೀವಂತವಾಗಿಡಲಾಗಿದೆ.

❖ ❖ ❖

ತೇಭಾಗ ಹೋರಾಟವು ಸ್ವಾತಂತ್ರ್ಯ ಚಳುವಳಿಯ ಪರ್ವಕಾಲದಲ್ಲಿ ಬಂಗಾಳದಲ್ಲಿ ನಡೆದ ಮೂಲತಃ ಗೇಣಿಯನ್ನು ಕಡಿತಗೊಳಿಸಬೇಕೆಂಬ ಹೋರಾಟವಾಗಿತ್ತು. ತೇಭಾಗ ಎಂದರೆ 1/3 ಭಾಗ ಎಂದರ್ಥ. ಶೇ.50 ರಷ್ಟು ಗೇಣಿಯ ಬದಲಿಗೆ ಶೇ.33 ರಷ್ಟು ಮಾತ್ರ ಗೇಣಿ ಕೊಡುತ್ತೇವೆಂದು ಗೇಣಿದಾರರು ನಡೆಸಿದ ಹೋರಾಟವಿದು. ಜಮೀನ್ದಾರರು ವಿಸ್ತಾರವಾದ ಭೂಮಿಯನ್ನು ಹೊಂದಿದ್ದು ಅದನ್ನು ತುಂಡುಗಳನ್ನಾಗಿ ಮಾಡಿ ನೇರವಾಗಿ

ಅಥವಾ ತಾಲೂಕುದಾರರ ಮೂಲಕ ಜೋತೆದಾರರಿಗೆ ಗೇಣಿಗೆ ಕೊಡುತ್ತಿದ್ದರು. ಇವರು ಬರ್ಗಾದಾರರಿಗೆ ಮತ್ತೆ ಒಳಗೇಣಿಗೆ ಕೊಡುತ್ತಿದ್ದರು. ಒಂದು ಅಂದಾಜಿನ ಪ್ರಕಾರ ಜಮೀನ್ದಾರರು ಸರ್ಕಾರಕ್ಕೆ ಕೊಡುವ ಕಂದಾಯಕ್ಕಿಂತ ಬರ್ಗಾದಾರರು ಮೂವತ್ತು ಪಟ್ಟು ಹೆಚ್ಚಿನ ಗೇಣಿಯನ್ನು ನೀಡಬೇಕಾಗಿತ್ತು. ಬಂಗಾಳದಲ್ಲಿ 19ನೇ ಶತಮಾನದಲ್ಲಾದ ವಾಣಿಜ್ಯ ಬೆಳವಣಿಗೆಯ ಕಾರಣದಿಂದ ಕೃಷಿಯಲ್ಲೂ ಸಹ ವಾಣಿಜ್ಯೀಕರಣ ಹೆಚ್ಚಾಯಿತು. ಇಂತಹ ಸಂದರ್ಭದಲ್ಲಿ ಜಮೀನ್ದಾರರು, ತಾಲೂಕುದಾರರು ಮತ್ತು ಜೋತೆದಾರರು ತಮ್ಮ ಭೂಮಿಯಲ್ಲಿ ದುಡಿಯಲು ಸಂತಾಲರು ಮತ್ತು ಇತರ ಆದಿವಾಸಿ ಜನರ ಸೇವೆಯನ್ನೂ ಪಡೆಯುತ್ತಿದ್ದರು. ಬರ್ಗಾದಾರರು ಜೋತೆದಾರರಿಗೆ ಬೆಳೆದ ಬೆಳೆಯಲ್ಲಿ ಅರ್ಧ ಪಾಲನ್ನು ಗೇಣಿಯಾಗಿ ಕೊಡಬೇಕಾಗಿತ್ತು. ಕೃಷಿಯ ಎಲ್ಲಾ ಲಾಗೋಡುಗಳನ್ನು ಗೇಣಿದಾರರೇ ನಿರ್ವಹಿಸಬೇಕಾಗಿತ್ತು. ಕೊಯ್ದು ಬೆಳೆಯನ್ನೂ ಸಹ ಪೂರ್ತಿಯಾಗಿ ಜೋತೆದಾರರು ಹೇಳಿದ ಸ್ಥಳದಲ್ಲೇ ಹಾಕಬೇಕಾದ್ದರಿಂದ ಅಳತೆಯಲ್ಲೂ ಬರ್ಗಾದಾರರಿಗೆ ಸಂಪೂರ್ಣವಾಗಿ ಮೋಸವಾಗುತ್ತಿತ್ತು. ಜೊತೆಗೆ ಬರ್ಗಾದಾರರಿಗೆ ಬೇಕಾದ ಬಹುತೇಕ ಹಣಕಾಸನ್ನು ಇವರೇ ಒದಗಿಸುತ್ತಿದ್ದರು. ಬಡ್ಡಿ ವಾರ್ಷಿಕ ಶೇ.25 ರಿಂದ ಶೇ.280 ರವರೆಗೆ ಇರುತ್ತಿತ್ತು[44]. 1943 ರಲ್ಲಿ ಅಪ್ಪರಿಸಿದ ಬಂಗಾಳ ಕ್ಷಾಮವು ಪರಿಸ್ಥಿತಿಯನ್ನು ತೀವ್ರವಾಗಿ ಬಿಗಡಾಯಿಸಿತು. ಕೃಷಿ ಭೂಮಿಯ ಲಭ್ಯತೆ ತೀರಾ ಕಡಿಮೆಯಿದ್ದುದರಿಂದ ಮತ್ತು ಕ್ಷಾಮ, ಬೆಲೆ ಏರಿಕೆ ಇತ್ಯಾದಿ ಅಂಶಗಳೆಲ್ಲಾ ಸೇರಿದವು. ಜೊತೆಗೆ 1947 ರ ದೇಶ ವಿಭಜನೆಯ ಪರಿಣಾಮವಾಗಿ ವಲಸೆ ನಿರಾಶ್ರಿತರ ಸಮಸ್ಯೆಗಳೂ ಸೇರಿದವು. ಇವೆಲ್ಲವೂ ಸೇರಿ ಬರ್ಗಾದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದ ದಿನಾಜ್‌ಪುರ್, ಜಲ್ಪೈಗುರಿ, ಮಾಲ್ಡಾ, ಮತ್ತು ಮಿಡ್ನಾಪುರ ಈ ಜಿಲ್ಲೆಗಳಲ್ಲಿ ತೇಭಾಗ ಹೋರಾಟವು ತೀವ್ರವಾಗಿ ನಡೆಯಿತು.

ಭಾರತದಲ್ಲಿ ಕಮ್ಯುನಿಸ್ಟರು ಚಳುವಳಿಗಳನ್ನು ಬೆಳೆಸಲು ಯೋಜಿಸಿದ ಪ್ರಾರಂಭದಿಂದಲೇ ಬಂಗಾಳ ಭಾಗದಲ್ಲಿ ರೈತರನ್ನು ಸಂಘಟಿಸಲು ನಳಿನಿ ಗುಪ್ತ ಮತ್ತು ಮುಝಾಫರ್ ಅಹಮದ್ ಮುಂತಾದವರು ಇದಕ್ಕಾಗಿ ಶ್ರಮಿಸಿದರು. ಕಾರ್ಮಿಕರ ಜೊತೆಯಲ್ಲೇ ರೈತರನ್ನು ಸಂಘಟಿಸುವ ಕಾರ್ಯಯೋಜನೆಯ ಭಾಗವಾಗಿ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿಯನ್ನು ಪ್ರಾರಂಭಿಸಿದ್ದರು. ಆದರೆ ಅದಕ್ಕೆ ಅಂತಹ ಪ್ರಭಾವವನ್ನೇನೂ ಉಂಟು ಮಾಡಲಾಗಿರಲಿಲ್ಲ. ಈ ನಡುವೆ ಬಹುತೇಕ ಶ್ರೀಮಂತ ರೈತರಿದ್ದ ಫಜಲುಲ್ ಹಕ್ ನಾಯಕರಾಗಿದ್ದ ಕೃಷಿಕ್ ಪ್ರಜಾ ಪಾರ್ಟಿ 1937 ರಲ್ಲಿ ಚುನಾವಣೆಯಲ್ಲಿ ಅಧಿಕಾರವನ್ನು ಪಡೆದು ಭೂ ಸುಧಾರಣಾ ಸಮಿತಿಯನ್ನು ರಚಿಸಿತು. ಇದೇ ಸಂದರ್ಭಕ್ಕೆ 1936 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ ಆರಂಭವಾಗಿತ್ತು. ಇದರಲ್ಲಿ ಕಮ್ಯುನಿಸ್ಟರು ಸಕ್ರಿಯವಾಗಿ ಕೆಲಸ ಮಾಡಲಾರಂಭಿಸಿದರು45. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡುವ ಉದ್ದೇಶದಿಂದ ಸಮಿತಿಯನ್ನು ರಚಿಸಿದ್ದ ಫಜಲುಲ್ ಹಕ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಉಲ್ಟಾ ಮಾತನಾಡತೊಡಗಿತು. ಕಮ್ಯುನಿಸ್ಟರ ಕಿಸಾನ್ ಸಭಾ ಚಟುವಟಿಕೆಗಳನ್ನು ನಿರ್ಭಂಧಿಸಲು ಆರಂಭಿಸಿತು. ಇದೇ ವೇಳೆಗೆ ಕ್ಷಾಮ ತೀವ್ರವಾಗಿ ಕಿಸಾನ್ ಸಭಾ ವ್ಯಾಪಕ ಹೋರಾಟಗಳನ್ನು ಸಂಘಟಿಸಿತು. ಕಮ್ಯುನಿಸ್ಟ್ ಘಟಕಗಳು ಮತ್ತು ಕಿಸಾನ್ ಸಭಾ ಘಟಕಗಳು ಸ್ಥಾಪಿಸಿದ ಅಡುಗೆ ಕೇಂದ್ರಗಳು ಪ್ರತಿದಿನ ಸುಮಾರು 1,17,000 ನಿರಾಶ್ರಿತರಿಗೆ ಊಟ ಒದಗಿಸುತ್ತಿದ್ದವು46. ಕಿಸಾನ್ ಸಭಾ ಮತ್ತು

ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಬರ್ಗಾದಾರರಿಗೆ ಗೇಣಿಯನ್ನು ಪೂರ್ತಿ ಕೊಡದಿರಲು ಪ್ರಚಾರ ಆರಂಭಿಸಿದರು. ಒಂದು ಚಳುವಳಿಯಾಗಿ ಇದು ಸೆಪ್ಟೆಂಬರ್ 1946 ರಲ್ಲಿ ಆರಂಭವಾಯಿತು. ಸುಮಾರು ಐವತ್ತು ಸಾವಿರಕ್ಕೂ ಹೆಚ್ಚಿನ 'ತೇಭಾಗಕ್ಕಾಗಿ ಸಂಘರ್ಷ' (Tebhagar Larai) ಕರಪತ್ರಗಳ ಮೂಲಕ ಬರ್ಗಾದಾರರ ಬೇಡಿಕೆಗಳನ್ನು ಪ್ರಚಾರ ಮಾಡಿದರು[47].

ದಿನಾಜ್‌ಪುರ ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಅತ್ವಾರಿ ಎಂಬ ಸಣ್ಣ ಹಳ್ಳಿಯಲ್ಲಿ ದಂಗೆ ಪ್ರಥಮವಾಗಿ ಸ್ಫೋಟಗೊಂಡಿತು. ಅಲ್ಲಿ ಸ್ವಯಂ ಸೇವಕರು ಜೋತೆದಾರರ ಹೊಲದ ಭತ್ತದ ಬೆಳೆಯನ್ನು ಕಟಾವು ಮಾಡಿ ತಮ್ಮ ಅಂಗಳಗಳಿಗೆ ತೆಗೆದುಕೊಂಡು ಹೋದರು. ಮೊದಲೆಲ್ಲಾ ಈ ಕೆಲಸ ಜೋತೆದಾರರ ಅಂಗಳದಲ್ಲೇ ನಡೆಯುತ್ತಿತ್ತು. ಅಲ್ಲಿ ಘರ್ಷಣೆ ಪ್ರಾರಂಭವಾಗಿ ಪೊಲೀಸರು ಮಧ್ಯಪ್ರವೇಶ ಮಾಡಿದರು (ಧನಗೆರೆ 2012: 193). ಅದು ಕಟಾವಿನ ಸಂದರ್ಭವಾದ್ದರಿಂದ ಹೋರಾಟ ವೇಗವಾಗಿ ಹಲವಾರು ಜಿಲ್ಲೆಗಳಿಗೆ ಹಬ್ಬಿತು. ಎಷ್ಟು ಜಿಲ್ಲೆಗಳಿಗೆ ಹಬ್ಬಿತು ಎಂಬ ವಿಷಯದಲ್ಲಿ ವಿಭಿನ್ನ ಅಭಿಪ್ರಾಯಗಳಿದ್ದರೂ, ಬಂಗಾಳದ 26 ಜಿಲ್ಲೆಗಳ ಪೈಕಿ ಸರಿಸುಮಾರು 19 ಜಿಲ್ಲೆಗಳಿಗೆ ಇದು ಪಸರಿಸಿತು. ಹಲವಾರು ಕಡೆಗಳಲ್ಲಿ ಸಣ್ಣ ಪ್ರಮಾಣದ ಹಿಂಸೆಗಳು ನಡೆದವು. ಅಂಚೆ ಕಛೇರಿ, ಪೊಲೀಸ್ ಠಾಣೆಗಳ ಮೇಲೆ ದಾಳಿಗಳು ನಡೆದವು. ಹಲವಾರು ಪ್ರದೇಶಗಳಲ್ಲಿ ಜೋತೆದಾರರು ಗ್ರಾಮಗಳನ್ನು ಬಿಟ್ಟು ಹೋದರು. ಬರ್ಗಾದಾರರು ತಮ್ಮ ಫಸಲನ್ನು ತಮ್ಮ ಅಂಗಳಗಳಿಗೆ ಕೊಂಡೊಯ್ಯುವುದು ಮಾಮೂಲಿಯಾಯಿತು.

ಪರಿಣಾಮವಾಗಿ, ಬಂಗಾಳ ಸರಕಾರ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಬರ್ಗಾದಾರ್ ಮಸೂದೆಯನ್ನು ರಚಿಸಿತು ಮತ್ತು ಗೆಜೆಟ್‌ನಲ್ಲಿ ಪ್ರಕಟಿಸಿತು. ಆದರೆ ಇದು ತಾತ್ಕಾಲಿಕ ಸ್ವರೂಪದ್ದಾಗಿತ್ತು. ಬರ್ಗಾದಾರರಿಗೆ ತಮ್ಮ ಹಿಡುವಳಿಗಳ ಮೇಲೆ ಸ್ವಲ್ಪ ಮಟ್ಟಿನ ಹಿಡಿತವನ್ನು ಇದು ಕೊಟ್ಟಿತಾದರೂ, ಜೋತೆದಾರರು ಹಿಡುವಳಿಗಳನ್ನು ವಾಪಸು ಪಡೆಯಬಹುದಾದ ಅವಕಾಶಗಳನ್ನೂ ಇದು ಕಲ್ಪಿಸಿತು. ಮುಂದೆ ಹೋರಾಟಗಳನ್ನು ತೀವ್ರಗೊಳಿಸುವ ಅವಕಾಶಗಳನ್ನೂ ಬರ್ಗಾದಾರರಿಗೆ ಇದು ನೀಡಿತು. 1947 ಫೆಬ್ರವರಿ 20 ರಂದು ಖಾನ್‌ಪುರ ಎಂಬ ಹಳ್ಳಿಯಲ್ಲಿ ಪೊಲೀಸರು ಮತ್ತು ರೈತರ ನಡುವೆ ಸಂಘರ್ಷ ಶುರುವಾಯಿತು. ಕಿಸಾನ್ ಸಭಾದ 6 ಮುಖಂಡರನ್ನು ದಸ್ತಗಿರಿ ಮಾಡಲು ಪೊಲೀಸರು ಬರುವರೆಂಬ ಸುದ್ದಿ ಹರಡಿ, ಕಿಸಾನ್ ಸಭಾ ಮತ್ತು ಕಮ್ಯುನಿಸ್ಟ್ ಪಕ್ಷದ ಸುಮಾರು 1000 ಕಾರ್ಯಕರ್ತರು ಅದಕ್ಕೆ ತಡೆಗಳನ್ನು ನಿರ್ಮಿಸಿದ್ದರು. ಪೊಲೀಸರೊಂದಿಗೆ ಅಂದು ನಡೆದ ಘರ್ಷಣೆಯಲ್ಲಿ 15 ರೈತರು ಕೊಲ್ಲಲ್ಪಟ್ಟರು ಮತ್ತು ಅನೇಕರು ಗಾಯಗೊಂಡರು48. ನಂತರ ದಿನಾಜ್‌ಪುರದ ಧುಮ್ನಿಯಾ ಎಂಬ **ಹಳ್ಳಿಯಲ್ಲೂ ಘರ್ಷಣೆಗಳು ಸಂಭವಿಸಿ 4 ರೈತರು ಪೊಲೀಸರ ಗುಂಡೇಟಿಗೆ ಬಲಿಯಾದರು. ಥಾಕುರ್‌ಗಾಂವ್** ಎಂಬ ಹಳ್ಳಿಯಲ್ಲಿ ಪ್ರದರ್ಶನ ನಡೆಸಿದ ರೈತರ ಮೇಲೆ ಗೋಲೀಬಾರು ನಡೆಸಿದ್ದರಿಂದ 6 ಜನರು ಮೃತರಾದರು49. ಈ ರೀತಿಯಾಗಿ ಪೊಲೀಸರ ದೌರ್ಜನ್ಯಗಳು ಹಲವಾರು ಪ್ರದೇಶಗಳಿಗೆ ವಿಸ್ತರಣೆಯಾಯಿತು.

ತೇಭಾಗ ಚಳುವಳಿ ತನ್ನ ಮೂಲ ಬೇಡಿಕೆಗಳ ಆಚೆಗೆ ಹೋರಾಟವನ್ನು ಕೊಂಡೊಯ್ಯುವಲ್ಲಿ ಯಶಸ್ಸು ಣಾಣಲಿಲ್ಲ. ಮೂರನೇ ಒಂದು ಪಾಲು ಬೇಡಿಕೆ ಹೆಚ್ಚು ಕಡಿಮೆ ಜಾರಿಗೊಂಡಿತು. ವಿಭಿನ್ನ ಜಿಲ್ಲೆಗಳಲ್ಲಿ ವಿಭಿನ್ನ ೂಪದ ವರ್ಗಗಳ ರಚನೆ ಮತ್ತು ಮತದ ಹಿನ್ನೆಲೆಗಳು ಇದ್ದಾಗಲೂ ಹೆಚ್ಚಿನ ಕಡೆಗಳಲ್ಲಿ ಹಿಂದೂ ಮತ್ತು ಮುಸ್ಲಿಮರ ಐಕ್ಯತೆಯನ್ನು ಸಾಧಿಸಲು ಸಾಧ್ಯವಾಗಿತ್ತು. ಆದರೆ ದೇಶ ವಿಭಜನೆಯ ಕಾಲಕ್ಕೆ ಉಂಟಾದ ಕೋಮು ವಿಭಜನೆ ಹೋರಾಟದ ಸ್ವರೂಪದಲ್ಲಿ ತೀವ್ರತೆಯನ್ನು ಕಡಿಮೆ ಮಾಡಿತು. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್‌ಸಭಾಗಳ ಸಂಘಟಿತ ಪ್ರಯತ್ನ ಇಲ್ಲದಿರುತ್ತಿದ್ದರೆ, ತೇಭಾಗ ಚಳುವಳಿ ಆ ಪ್ರಮಾಣದಲ್ಲಾದರೂ ಯಶಸ್ಸು ಕಾಣುವುದು ಕಷ್ಟವಾಗುತ್ತಿತ್ತು. ತೇಭಾಗ ಚಳುವಳಿಯ ಕಾಲಕ್ಕೆ ಇದ್ದ ಭೂ ಸಂಬಂಧಗಳಲ್ಲಿ ಯಾವುದೇ ಬದಲಾವಣೆಗಳು ಆಗಲಿಲ್ಲ ಎಂಬ ಸಂಗತಿಯನ್ನು ಗಮನಿಸಿದಾಗ, ಮುಂದೆ ಬಂಗಾಳದ ಸಾಮಾಜಿಕ ಮತ್ತು ಆರ್ಥಿಕ ಚಳುವಳಿಗಳಿಗೆ ಅಂತರ್ಗತವಾದ ಭೂಮಿಕೆಯನ್ನು ಸಿದ್ಧಪಡಿಸಿತ್ತು.

❖ ❖ ❖

ಈ ಅಧ್ಯಾಯದಲ್ಲಿ ಭಾರತದಲ್ಲಿ ಕಮ್ಯುನಿಸಂ ತನ್ನ ಬೇರುಗಳನ್ನು ಬಿಟ್ಟ ಬಗೆಯನ್ನು, ಅದರ ಪ್ರಭಾವವನ್ನು ಮತ್ತು ಸಿಪಿಐನ ಹುಟ್ಟು ಮತ್ತು ಅದರ ಆರಂಭಿಕ ಬೆಳವಣಿಗೆಯನ್ನು, ಹೋರಾಟಗಳನ್ನು, ಸೈದ್ಧಾಂತಿಕ ಸಮಸ್ಯೆಗಳನ್ನು ಚರ್ಚಿಸಲಾಗಿದೆ. ವಸಾಹತು ದೇಶಗಳ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯೊಂದು ದುರ್ಗಮವಾದ ಪಯಣ. ಬ್ರಿಟಿಷ್ ಭಾರತದ ಕಮ್ಯುನಿಸ್ಟ್ ಚಳುವಳಿಯು ಇದೇ ಅನುಭವವನ್ನು ಕಟ್ಟಿಕೊಡುತ್ತದೆ. ಸೈದ್ಧಾಂತಿಕವಾಗಿ ಕಮ್ಯುನಿಸಂನ್ನು ಠಿಣವಾಗಿ ವಿರೋಧಿಸುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯವಾದಿಗಳ ದಾಳಿಗಳನ್ನು ಎದುರಿಸುತ್ತಾ ಮತ್ತು ಬಹುತೇಕ ೂಗತವಾಗಿದ್ದುಕೊಂಡು ಭಾರತದ ವಿಮೋಚನಾ ಹೋರಾಟಕ್ಕೆ ತೀವ್ರವಾದ ಮೊನಚನ್ನು ತಂದುಕೊಟ್ಟಿದ್ದು ಭಾರತ ಕಮ್ಯುನಿಸ್ಟ್ ಪಕ್ಷ. ಮಾರ್ಕ್ಸ್‌ವಾದಿ ಚಿಂತನೆಗಳು ಮತ್ತು ರಷ್ಯನ್ ಕ್ರಾಂತಿಯ ಪ್ರಭಾವದಿಂದ ಕ್ರಾಂತಿಕಾರಿಗಳು ಮ್ಯುನಿಸಂ ಕಡೆಗೆ ವಾಲಿದರು ಮತ್ತು ಪರಿಣಾಮವಾಗಿ ಅನಿವಾಸಿ ಭಾರತೀಯ ಕ್ರಾಂತಿಕಾರಿಗಳು ಸೋವಿಯತ್ ಷ್ಯಾದ ತಾಷ್ಕೆಂಟ್‌ನಲ್ಲಿ ಸೇರಿ 1920 ರಲ್ಲಿ ಸಿಪಿಐ ಸ್ಥಾಪಿಸಿದರು. ಎಂ.ಎನ್.ರಾಯ್‌ರವರು ಭಾರತದೊಳಗೆ ಸಿಪಿಐನ ಟುವಟಿಕೆಗಳಿಗೆ ರೂಪ ಕೊಡಲು ಪ್ರಯತ್ನಿಸಿದರು. ಭಾರತದೊಳಗಿನ ಕ್ರಾಂತಿಕಾರಿಗಳ ಪ್ರಯತ್ನಗಳೂ ಸೇರಿದಂತೆ ದೇಶದೊಳಗೆ ಸಿಪಿಐ 1925 ರಲ್ಲಿ ಸ್ಥಾಪನೆಯಾಯಿತು. ಬ್ರಿಟಿಷರು ಕಮ್ಯುನಿಸ್ಟರ ವಿರುದ್ಧ ಒಂದರ ಹಿಂದೆ ಒಂದರಂತೆ ತೂರಿ ಮೊಕದ್ದಮೆಗಳನ್ನು ಹೂಡಿ, ಮೊಳಕೆಯಲ್ಲೇ ಚಿವುಟಿ ಹಾಕಲು ಪ್ರಯತ್ನಿಸಿದರು. ಇವುಗಳ ನಡುವೆಯೇ **ಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಎಐಸಿಸಿ ಅಧಿವೇಶನಗಳಲ್ಲಿ ಮಂಡಿಸಿದರು. ಅಸಹಕಾರ ಚಳುವಳಿ ಮತ್ತು** ನೂನುಭಂಗ ಚಳುವಳಿಗಳಲ್ಲಿ ಐಎನ್‌ಸಿ ತೆಗೆದುಕೊಂಡ ತೀರ್ಮಾನಗಳಿಂದ ಬೇಸತ್ತ ತೀವ್ರಗಾಮಿಗಳನ್ನು ಸಿಪಿಐ ಕರ್ಷಿಸಿತು. ಮೀರತ್ ಪಿತೂರಿ ಮೊಕದ್ದಮೆಯ ನಂತರ ಸಿಪಿಐ ಅಖಿಲ ಭಾರತ ಮಟ್ಟದಲ್ಲಿ ಸಂಘಟನಾತ್ಮಕವಾಗಿ ಲಸ ಮಾಡಲು ಆರಂಭಿಸಿತು.

ವಸಾಹತು ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಮುಂಚೂಣಿ ಪ್ರಜಾಪ್ರಭುತ್ವ ಧಾರೆಯೊಂದಿಗೆ ಬೆರೆತು ಕೆಲಸ ಮಾಡಬೇಕೆಂಬ ಕಮಿನ್ ಟರ್ನ್‌ನ ತೀರ್ಮಾನಗಳನ್ನು ಅನುಸರಿಸಿ ಐಎನ್‌ಸಿ ಮತ್ತು ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷಗಳ ಭಾಗವಾಗಿ ಕೆಲಸ ಮಾಡಿದರು. ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಇದು ತೀವ್ರವಾದ ಮೊನಚನ್ನು ನೀಡಿತು. ಎಲ್ಲರನ್ನೂ ಒಳಗೊಂಡ ವಿವಿಧ ಸಾಮೂಹಿಕ ಸಂಘಟನೆಗಳನ್ನು ಸ್ಥಾಪಿಸುವಲ್ಲಿ ಭಾರತೀಯ ಕಮ್ಯುನಿಸ್ಟರು ಯಶಸ್ವಿಯಾದರು. ಎಐಟಿಯುಸಿ, ಎಐಕೆಎಸ್, ಎಐಎಸ್‌ಎಫ್, ಎಐಪಿಡಬ್ಲ್ಯುಎ ಮತ್ತು ಇಪ್ಟಾದಂತಹ ಸಂಘಟನೆಗಳ ಮೂಲಕ ರಾಷ್ಟ್ರೀಯ ಹೋರಾಟದ ಸಾಮೂಹಿಕ ಸ್ವರೂಪಕ್ಕೆ ತೀವ್ರತೆಯನ್ನು ಒದಗಿಸಿದರು. ಕೇವಲ ರಾಜಕೀಯ ಹೋರಾಟವಾಗಿದ್ದ ಬ್ರಿಟಿಷ್ ವಿರೋಧಿ ಹೋರಾಟವನ್ನು ಆರ್ಥಿಕ ಮತ್ತು ಸಾಮಾಜಿಕ ಹೋರಾಟವನ್ನಾಗಿಸುವಲ್ಲಿ ಕಮ್ಯುನಿಸ್ಟರು ಗಮನಾರ್ಹ ಕೊಡುಗೆ ನೀಡಿದರು.

ಸಮೂಹಗಳನ್ನು ಬೃಹತ್ ಪ್ರಮಾಣದ ಹೋರಾಟಗಳಲ್ಲಿ ತೊಡಗಿಸಿದ ಕಮ್ಯುನಿಸ್ಟ್ ಪಾರ್ಟಿಗೆ 'ಕಾರ್ಯಕ್ರಮ'ವೆಂಬುದು ಇರಲಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನಗಳನ್ನು ಸಿಪಿಐ ನಡೆಸಿತಾದರೂ, ಬ್ರಿಟಿಷರ ದಾಳಿ ಮತ್ತು ದಮನಗಳಿಂದಾಗಿ ಸಾಧ್ಯವಾಗಲಿಲ್ಲ. ಸಿಪಿಐ ಸದಸ್ಯರ ಏರುಮುಖದ ಹೋರಾಟಗಳ ನಡುವೆಯೇ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಅದು ತೆಗೆದುಕೊಂಡ ತೀರ್ಮಾನವು ಅದರ ಬೆಳವಣಿಗೆಗಳಿಗೆ ಧಕ್ಕೆಯನ್ನುಂಟು ಮಾಡಿತು. ಫ್ಯಾಸಿಸಂನ ವಿರುದ್ಧದ ಹೋರಾಟವನ್ನು ಜನತೆಯ ಹೋರಾಟವನ್ನಾಗಿಸುವಲ್ಲಿ ತಾಂತ್ರಿಕವಾಗಿ ಅದು ಎಡವಿತು. ಆದರೆ ಜಾಗತಿಕವಾಗಿ ಸಮಾಜವಾದಿ ಶಕ್ತಿಗಳ ಪ್ರಾಬಲ್ಯ ಬೆಳೆಯಿತು. ಪರಿಣಾಮವಾಗಿ ಭಾರತದಲ್ಲಿ ಕಮ್ಯುನಿಸ್ಟರು ಮಿಲಿಟೆಂಟ್ ಆದಂತಹ ಕಾರ್ಮಿಕ, ರೈತ ಮತ್ತು ವಿದ್ಯಾರ್ಥಿಗಳ ಹೋರಾಟಗಳನ್ನು ಹರಿಬಿಟ್ಟರು. ಸ್ವಾತಂತ್ರ್ಯ ಮುನ್ನಾ ವರ್ಷಗಳಲ್ಲಿ ಚಾರಿತ್ರಿಕಾವಾದ ತೆಲಂಗಾಣ ಹೋರಾಟ, ತೇಭಾಗ ಹೋರಾಟ ಮುಂತಾದವುಗಳನ್ನು ಅದು ಸಂಘಟಿಸಿತು. ರಾಯಲ್ ಇಂಡಿಯನ್ ನಾವಿಕರ ಬಂಡಾಯದಲ್ಲಿ ಸಕ್ರಿಯಾವಾಗಿ ತೊಡಗಿಸಿಕೊಂಡಿತು. ಕಯ್ಯೂರು ಹೋರಾಟದಲ್ಲಿ ಹುತಾತ್ಮರಾದ ಯುವಕರು ದೇಶಾದ್ಯಂತ ರೈತ ಚಳುವಳಿಗೆ ಪ್ರೇರಣೆ ನೀಡಿತು. ಇವೆಲ್ಲವುಗಳ ಪರಿಣಾಮವಾಗಿ ಸ್ವಾತಂತ್ರ್ಯದ ಹೊಸ್ತಿಲಲ್ಲಿ ಸಿಪಿಐ ಅತ್ಯಂತ ಪ್ರಭಾವಿ ರಾಜಕೀಯ ಸಿದ್ಧಾಂತವಾಗಿ ಬೆಳೆದಿತ್ತು.

ಆದರೆ ಆಗಲೂ ಸಿಪಿಐಗೆ ಭಾರತದಲ್ಲಿ ಸಾಮಾಜಿಕ ಕ್ರಾಂತಿಯ ಪಥ ಯಾವುದೆಂಬ 'ಕಾರ್ಯಕ್ರಮ' ರೂಪುಗೊಂಡಿರಲಿಲ್ಲ. ಹೀಗಾಗಿ ಗಳಿಸಿದ ಸ್ವಾತಂತ್ರ್ಯದ ಸ್ವರೂಪಕ್ಕೆ ಸಂಬಂಧಿಸಿ ಎಡ–ತೀವ್ರವಾದಿ ನಿಲುವನ್ನು ಸಿಪಿಐ ತೆಗೆದುಕೊಂಡಿತು. ಇದರಿಂದಾಗಿ ಸಿಪಿಐನೊಳಗೆ ಭಿನ್ನಾಭಿಪ್ರಾಯಗಳು ತೀವ್ರವಾಗಿ ಉಳಿದುಕೊಂಡೇ ಸ್ವಾತಂತ್ರ್ಯದ ಘಟ್ಟವನ್ನು ಅದು ಪ್ರವೇಶಿಸಿತು.

❖ ❖ ❖

ಟಿಪ್ಪಣಿಗಳು

1. ಮಾನಬೇಂದ್ರನಾಥ್ ರಾಯ್ ಮೂಲ ಹೆಸರು ನರೇಂದ್ರನಾಥ ಭಟ್ಟಾಚಾರ್ಯ. ಭಾರತ ಮತ್ತು ಮೆಕ್ಸಿಕೋ ದೇಶಗಳ ಕಮ್ಯುನಿಸ್ಟ್ ಚಳುವಳಿಯ ಪ್ರವರ್ತಕರು. ಬಂಗಾಳದಲ್ಲಿ ಹುಟ್ಟಿದ ರಾಯ್ ಅವರು ತಾವು ಸದಸ್ಯರಾಗಿದ್ದ ಕ್ರಾಂತಿಕಾರಿ ಭಯೋತ್ಪಾದಕ ಗುಂಪಿಗೆ ಜರ್ಮನಿ ಮೂಲದಿಂದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ತಮ್ಮ 26ನೇ ವಯಸ್ಸಿನಲ್ಲಿ ಭಾರತದಿಂದ ಹೋಗಿದ್ದರು. ಪೊಲೀಸರ ಕಿರುಕುಳ ತಪ್ಪಿಸಿಕೊಳ್ಳಲು ಅಮೇರಿಕ ನಂತರ ಮೆಕ್ಸಿಕೋಗೆ ಹೋದರು. ರಷ್ಯನ್ ಕಮ್ಯುನಿಸ್ಟ್ ಮಿಖೈ ಲ್ ಬೋರೋದಿನ್ ಅವರನ್ನು ಭೇಟಿ ಮಾಡಿದ ನಂತರ 1918 ರಲ್ಲಿ ಮೆಕ್ಸಿಕನ್ ಸೋಷಿಯಲಿಸ್ಟ್ ಪಕ್ಷವನ್ನು ಸಂಘಟಿಸಿ ಅದರ ಪ್ರಧಾನ ಕಾರ್ಯದರ್ಶಿಯಾದರು. ಇದನ್ನು ಐದು ತಿಂಗಳಲ್ಲಿ ಕಮ್ಯುನಿಸ್ಟ್ ಪಕ್ಷವಾಗಿ ಬದಲಾಯಿಸಿದರು. ಈ ಪಕ್ಷದ ಪರವಾಗಿ ರಾಯ್ ಅವರು ಕಮಿನ್‌ಟರ್ನ್‌ನ ಎರಡನೇ ಅಧಿವೇಶನದಲ್ಲಿ ಭಾಗವಹಿಸಿದರು. 1920 ರ ಅಕ್ಟೋಬರ್ 17 ರಂದು ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಹಲವು ನಿಯತಕಾಲಿಕೆಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿದರು. 1929 ರಲ್ಲಿ ಕಮಿನ್‌ಟರ್ನ್‌ನಿಂದ ಉಚ್ಚಾಟಿಸಲ್ಪಟ್ಟರು. ಭಾರತಕ್ಕೆ ವಾಪಸ್ ಬಂದ ಕೂಡಲೇ ಬಂಧನವಾಗಿ 1936 ರಲ್ಲಿ ಬಿಡುಗಡೆಯಾದರು. ಫೈಜ್‌ಪುರ ಐಎನ್‌ಸಿ ಅಧಿವೇಶನದಲ್ಲಿ ಭಾಗವಹಿಸಿದರು. ಎರಡನೇ ಪ್ರಪಂಚ ಯುದ್ಧ ಸಂದರ್ಭದಲ್ಲಿ ರ್‍ಯಾಡಿಕಲ್ ಡೆಮಾಕ್ರಟಿಕ್ ಪಾರ್ಟಿಯನ್ನು ಸ್ಥಾಪಿಸಿದ್ದರು. ಆದರೆ ಇದು ಹೆಚ್ಚು ಕಾಲ ಉಳಿಯಲಿಲ್ಲ. 1954 ರಲ್ಲಿ ಅವರ ನಿಧನಕ್ಕೂ ಮುಂಚೆ ಅವರ ನೆನಪುಗಳನ್ನು ರ್‍ಯಾಡಿಕಲ್ ಹ್ಯೂಮನಿಸ್ಟ್‌ನಲ್ಲಿ ಸರಣಿಯಾಗಿ ಪ್ರಕಟಿಸಲಾಯಿತು. (ರಾಷ್ಟ್ರೀಯ ಮತ್ತು ವಸಾಹತು ಪ್ರಶ್ನೆಯ ಕುರಿತು ನಡೆದ ಚರ್ಚೆಗಳಲ್ಲಿಪೂರಕ ನಿಲುವಿನ ಮೂಲ ಕರಡನ್ನು ರಾಯ್ ತಯಾರಿಸಿದ್ದರು. ವಸಾಹತು ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯ ಬಂಡವಾಳದಾರರ ಪಾತ್ರ ಮತ್ತು ಇದರಲ್ಲಿ ಇವರೊಂದಿಗೆ ಕಮ್ಯುನಿಸ್ಟರು ಮೈತ್ರಿಯನ್ನು ಹೊಂದಲು ಯಾವ ವ್ಯೂಹವನ್ನು ಅಂಗೀಕರಿಸಬೇಕೆಂಬ ವಿಚಾರದಲ್ಲಿ ಸರಿಯಾದ ನಿಲುವಿನ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದವು. ಇದನ್ನು ರಾಯ್–ಲೆನಿನ್ ಚರ್ಚೆಗಳು ಎಂದು ಕರೆಯಲಾಗಿದೆ)

2. ಭಾರತದ ಮೊದಲ ಅಖಿಲ ಭಾರತ ರಾಜಕೀಯ ವೇದಿಕೆ ಭಾರತ ರಾಷ್ಟ್ರೀಯ ಕಾಂಗ್ರೆಸ್ 1885 ರಲ್ಲಿ ಬಾಂಬೆಯಲ್ಲಿ ಆರಂಭವಾಯಿತು. ಮುಖ್ಯವಾಗಿ ರಾಷ್ಟ್ರೀಯ ಬಂಡವಾಳದಾರರು, ವೃತ್ತಿಪರರು ಮತ್ತು ಜಮೀನ್ದಾರರನ್ನು ಇದು ಪ್ರತಿನಿಧಿಸುತ್ತಿತ್ತು. ಆರಂಭಿಕ ಘಟ್ಟದಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳನ್ನು ನಿಗ್ರಹಿಸಲು, ವಸಾಹತು ದೊರೆಗಳ ಅನುಮತಿಯೊಂದಿಗೆ, ಕಾಂಗ್ರೆಸನ್ನು ಆರಂಭಿಸಲಾಯಿತಾದರೂ, ಕ್ರಮೇಣ ಇದು ಭಾರತದಲ್ಲಿ ಅತಿದೊಡ್ಡ ವಸಾಹತು–ವಿರೋಧಿ ವೇದಿಕೆಯಾಗಿ ಮಾರ್ಪಟ್ಟಿತು (ಹಿಸ್ಟರಿ: 2005: 11).

3. ಶಿವಾನಂದ ಎಸ್, ವಸಂತರಾಜ ಎನ್.ಕೆ., ಡಾ.ವಿಠಲ ಭಂಡಾರಿ, ದಿ ಪ್ರೋಗ್ರೆಸ್ಸೀವ್ ಲಿಟರರಿ ಅಂಡ್ ಕಲ್ಚರಲ್ ಮೂವ್‌ಮೆಂಟ್ಸ್ ಇನ್ ಕರ್ನಾಟಕ ಸಿನ್ಸ್ 1936, ನವೆಂಬರ್ 25, 2012, ಪು. 2. ತಿರುವನಂತಪುರದಲ್ಲಿ ನಡೆದ ಕಾರ್ಯಾಗಾರದಲ್ಲಿ ಮಂಡಿಸಿದ ಪ್ರಬಂಧ.

4. ಶ್ರೀಮತಿ ಅನಿಬೆಸೆಂಟ್‌ರ ಅನುಯಾಯಿಯಾಗಿದ್ದ ವಾಡಿಯಾರ ಈ ಪ್ರಯತ್ನ ಭಾರತದಲ್ಲಿ ಆಧುನಿಕ ಕಾರ್ಮಿಕ ಸಂಘಟನೆಯನ್ನು ರಚಿಸುವ ಮೊದಲ ವ್ಯವಸ್ಥಿತ ಪ್ರಯತ್ನವಾಗಿದೆ.

5. ಪಂಜಾಬಿನಿಂದ ಹೋಗಿದ್ದ ಭಾರತೀಯ ವಲಸಿಗ ಕ್ರಾಂತಿಕಾರಿಗಳಿಗೆ ಅಮೇರಿಕದ ಸ್ಯಾನ್‌ಫ್ರಾನ್ಸಿಸ್ಕೋ ನಗರ ಕೇಂದ್ರವಾಗಿತ್ತು. ಅವರು ಭಾರತವನ್ನು ಬ್ರಿಟಿಷರಿಂದ ವಿಮೋಚನೆಗೊಳಿಸಲು ಗದರ್ ಪಕ್ಷವನ್ನು ಸ್ಥಾಪಿಸಿದ್ದರು. ತಮ್ಮ ನಿಲುವುಗಳನ್ನು ಪ್ರಚಾರ ಮಾಡಲು 1913 ರಲ್ಲಿ ದಿ ಗದರ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಗದರ್ ಕ್ರಾಂತಿಕಾರಿಗಳನ್ನು ಮಟ್ಟ ಹಾಕಲು ಬ್ರಿಟನ್, ಅಮೇರಿಕ ಮತ್ತು ಕೆನಡಾ ದೇಶಗಳು ಒಟ್ಟಾಗಿ ಕಾರ್ಯಾಚರಣೆಗಿಳಿದವು. ಬರ್ಲಿನ್ ಸಮಿತಿ, ಭಾರತದ ಕ್ರಾಂತಿಕಾರಿಗಳು ಮತ್ತು ಗದರ್ ಕ್ರಾಂತಿಕಾರಿಗಳು ಸೇರಿ, ಭಾರತದ ಸೈನ್ಯದಲ್ಲಿ ಬಂಡಾಯ ಸೃಷ್ಟಿಸುವ ಯೋಜನೆ ರೂಪಿಸಿದ್ದರು. ಆದರೆ ಅದು ವಿಫಲವಾಗಿ ಬಂಧಿಸಲ್ಪಟ್ಟರು. ಲಾಲ ಹರದಯಾಳ್, ಸೋಹನ್ ಸಿಂಗ್ ಬಕ್ನ ಮತ್ತಿತರರು 1917 ರಲ್ಲಿ ಇಂತಹ ಪ್ರಯತ್ನವನ್ನು ಮತ್ತೊಮ್ಮೆ ಮಾಡಲು ಹೋಗಿ ಅಮೇರಿಕನ್ ಗುಪ್ತಚಾರರಿಂದ ಬಂಧಿಸಲ್ಪಟ್ಟು ಸ್ಯಾನ್‌ಫ್ರಾನ್ಸಿಸ್ಕೋ ಜಿಲ್ಲಾ ಕೋರ್ಟ್‌ನಲ್ಲಿ 'ಹಿಂದೂ–ಜರ್ಮನ್ ಪಿತೂರಿ ವಿಚಾರಣೆ' ಎಂಬ ಹೆಸರಿನಲ್ಲಿ ದೀರ್ಘಕಾಲ ನಡೆದು ಜೈಲು ಶಿಕ್ಷೆ ಅನುಭವಿಸಿದರು. ಇದು ಸ್ಯಾನ್‌ಫ್ರಾನ್ಸಿಸ್ಕೋ ಎಂದು ಹೆಸರಾಗಿದೆ.

6. ಬರ್ಲಿನ್ ಸಮಿತಿ ಅಥವಾ ಗುಂಪಿನಲ್ಲಿದ್ದ ಪ್ರಮುಖ ಭಾರತೀಯ ಕ್ರಾಂತಿಕಾರಿಗಳೆಂದರೆ – ವೀರೇಂದ್ರನಾಥ ಚಟ್ಟೋಪಾಧ್ಯಾಯ, ಭೂಪೇಂದ್ರನಾಥ ದತ್ತ, ಮಹಮ್ಮದ್ ಬರ್ಕತುಲ್ಲಾ, ಮಹೇಂದ್ರ ಪ್ರತಾಪ್, ಎಂ.ಪಿ.ಬಿ.ಟಿ.ಆಚಾರ್ಯ, ಅಬ್ದುಲ್ ರಬ್ ಬರ್ಖ್, ಪಿ.ಕಾಂಖೋಜೆ, ಚಂಪಕರಾಮನ್ ಪಿಳ್ಳೈ, ತಾರಕ್‌ನಾಥ್ ದಾಸ್, ಭಗವಾನ್ ಸಿಂಗ್ ಮತ್ತು ಲಾಲ ಹರ್‌ದಯಾಳ್ ಮುಂತಾದವರು.

7. ಇವರ ನಿಜವಾದ ಹೆಸರು ಮಂಡಯಮ್ ಪಾರ್ಥಸಾರಥಿ ತಿರುಮಲಾಂಬ ಆಚಾರ್ಯ. (ಇವರು ಮೂಲತಃ ಮೈಸೂರು ಪ್ರಾಂತ್ಯದವರಾಗಿದ್ದು, ನಂತರ ಮದ್ರಾಸಿಗೆ ವಲಸೆ ಹೋದರೆಂದು ಕೃಷ್ಣಪ್ಪ ಕೊಂಚಾಡಿಯವರು ಹೇಳಿದ್ದಾರೆ (ತಾಷ್ಕೆಂಟಿನಿಂದ ಕಾನ್ಪುರದವರೆಗೆ, ಕ್ರಿಯಾ ಪುಸ್ತಕ, 2015, ಪುಟ 14–15, ಬೆಂಗಳೂರು). ಮದ್ರಾಸಿನಲ್ಲಿ 1887 ರಲ್ಲಿ ಜನಿಸಿದ ಇವರು ಸುಮಾರು 1907–8 ರಲ್ಲಿ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋದರು. ತಮ್ಮ ಹೆಸರನ್ನು ಬರೆಯುವಾಗ ಇವರು ಎಂ.ಪ್ರತಿವಾದಿ ಭಯಂಕರ ಆಚಾರ್ಯ ಎಂದು ಬರೆಯುತ್ತಿದ್ದರು.

8. ಈ ಕುರಿತು ನೋಡಿ, ಎಸ್.ಎ.ಡಾಂಗೆ, ಗಾಂಧಿ ವರ್ಸಸ್ ಲೆನಿನ್, 1921, ಲಿಬರ್ಟಿ ಲಿಟರೇಚರ್ ಕಂಪನಿ, ಬಾಂಬೆ. ಕಮ್ಯುನಿಸಂನ ಕುರಿತಾದ ಸ್ಪಷ್ಟ ಧೋರಣೆಯನ್ನೇನೂ ಇದು ಪ್ರತಿಪಾದಿಸದಿದ್ದರೂ, ಒಂದು ಕಡೆ ಗಾಂಧಿಯ ವಾದಗಳನ್ನು ಮತ್ತೊಂದು ಕಡೆ ಲೆನಿನ್‌ರು ಪ್ರಸ್ತಾಪಿಸಿದ ರಾಷ್ಟ್ರೀಯತೆ ಮತ್ತು ವಸಾಹತು ಪ್ರಶ್ನೆ ಮತ್ತು ಇತರ ವೈಚಾರಿಕ ಅಂಶಗಳನ್ನು ಹೋಲಿಕೆಯೊಂದಿಗೆ ಪ್ರತಿಪಾದಿಸಿದರು. ಇದು ಗಾಂಧಿಯವರ ವಿಚಾರಗಳಿಗೆ ಆರಂಭದಲ್ಲೇ ತೀವ್ರವಾದ ವಿಮರ್ಶೆಯನ್ನು ಒಡ್ಡಿದ ಸಣ್ಣ ಕೃತಿಯಾಗಿತ್ತು.

9. ಹಿಸ್ಟರಿ 2005,ಪು. 49 ರಲ್ಲಿ ಉದ್ಧೃತವಾಗಿರುವ, ಕೆ.ಮುರುಗೇಸನ್ ಅಂಡ್ ಸಿ.ಎಸ್.ಸುಬ್ರಮಣ್ಯಂ, 1975, ಸಿಂಗಾರವೇಲು – ಫಸ್ಟ್ ಕಮ್ಯುನಿಸ್ಟ್ ಇನ್ ಸೌತ್ ಇಂಡಿಯಾ, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ಪು. 158 ನ್ನು ನೋಡಿ.

10. ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಮೂರನೇ ಅಧಿವೇಶನ ಇದೇ ಸಂದರ್ಭದಲ್ಲಿ ಮಾಸ್ಕೋದಲ್ಲಿ ನಡೆಯಿತು. ಕಮ್ಯುನಿಸ್ಟ್ ಪಕ್ಷದ ಸಂಘಟನೆಯ ಕುರಿತು ತೀರ್ಮಾನವನ್ನು ಮಾಡಿದ ಕಾರಣಕ್ಕಾಗಿ ಈ ಅಧಿವೇಶನ ಮಹತ್ವದ್ದಾಗಿದೆ. ಜಗತ್ತಿನ ಎಲ್ಲಾ ಕಮ್ಯುನಿಸ್ಟ್ ಗುಂಪುಗಳ ಮುಂದೆ ಒಂದು ಸರಿಯಾದ ಸಂಘಟನಾ ವ್ಯವಸ್ಥೆಗಾಗಿ ಮಾರ್ಗದರ್ಶನವನ್ನು ಮಂಡಿಸಲು ಇದರಲ್ಲಿ ಪ್ರಯತ್ನಿಸಲಾಯಿತು. ಇದರ ಆಧಾರದಲ್ಲಿ ಗಮನಿಸಿದಾಗ ತಾಷ್ಕೆಂಟ್‌ನಲ್ಲಿ ಪ್ರಾರಂಭವಾದ ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ಸ್ಪಷ್ಟವಾದ ಸಂವಿಧಾನ ಮತ್ತು ಕಾರ್ಯಕ್ರಮವೇ ಇರಲಿಲ್ಲ. ಇಂತಹ ಸನ್ನಿವೇಶದಲ್ಲಿ ಎಂ.ಎನ್.ರಾಯ್ ಅವರು ಭಾರತದ ಕಡೆ ತಮ್ಮ ಗಮನವನ್ನು ತಿರುಗಿಸಿದರು ಮತ್ತು 'ರೆವಲ್ಯೂಷನರಿ ಇಂಡಿಯಾ' ಎಂಬ ತಲೆಬರಹದಡಿ 'ಭಾರತದಲ್ಲಿನ ಪ್ರಸಕ್ತ ಘಟನೆಗಳು' ಎಂಬ ಲೇಖನವನ್ನು ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಮುಖವಾಣಿ ಇನ್‌ಪ್ರೆಕರ್ (Inprecor) ನ ಡಿಸೆಂಬರ್ 20 ರ ಸಂಚಿಕೆಯಲ್ಲಿ ಪ್ರಕಟಿಸಿದರು.

11. ಬಾಂಬೆಯಿಂದ ಡಾಂಗೆಯವರು 1922 ರ ಆಗಸ್ಟ್ 5 ರಂದು ಆರಂಭಿಸಿದ ಸೋಷಿಯಲಿಸ್ಟ್ ಪತ್ರಿಕೆಯು ಮೊದಲ ಮಾರ್ಕ್ಸಿಸ್ಟ್ ಪತ್ರಿಕೆ ಎಂದು ಗುರುತಿಸಲಾಗಿದೆ. ಸೋಷಿಯಲಿಸ್ಟ್ ಪತ್ರಿಕೆಯ ಆರಂಭವನ್ನು ರಾಯ್ ಅವರು, 'ನಮ್ಮ ಚಳುವಳಿಯ ಹೊಸ ಶಕೆಯ ಆರಂಭ' ಎಂದು ಗುರುತಿಸಿದ್ದಾರೆ.

12. ಕಾನ್ಪುರ್ ಪಿತೂರಿ ಮೊಕದ್ದಮೆ ಸಂದರ್ಭದಲ್ಲಿ ಡಿಫೆನ್ಸ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾಗಿ ಅವರು ಹೇಳಿದ್ದಾರೆ. ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತರಾಗಿದ್ದ ಇವರಿಗೆ ಕಮ್ಯುನಿಸಂ ಬಗ್ಗೆ ಅಷ್ಟೇನೂ ಸ್ಪಷ್ಟತೆ ಇರಲಿಲ್ಲ. ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ (ಭಾರತೀಯ ಸಾಮ್ಯವಾದಿ ದಳ್) ಯನ್ನು ಸ್ಥಾಪಿಸುವ ತಮ್ಮ ಉದ್ದೇಶವನ್ನು ಇವರು ಮೊದಲ ಬಾರಿಗೆ ಹಿಂದಿ ದೈನಿಕ ಆಜ್ 1924 ರ ಜುಲೈ 12 ರ ಸಂಚಿಕೆಯಲ್ಲಿ, 'ಜಗತ್ತಿನ ಅತೃಪ್ತ ಮತ್ತು ಶೋಷಿತ ಜನರನ್ನು ಮೇಲೆತ್ತುವ ಒಂದೇ ದಾರಿ ಕಮ್ಯುನಿಸಂ' ಎಂದು ಪ್ರಕಟಿಸಿದರು. ಈ ಸಂದರ್ಭದಲ್ಲಿ ಇವರು ಕಾನ್ಪುರದಲ್ಲಿ ಸೋಷಿಯಲಿಸ್ಟ್ ಬುಕ್ ಶಾಪ್ ಒಂದನ್ನು ನಡೆಸುತ್ತಿದ್ದರು. 1924 ರ ಸೆಪ್ಟೆಂಬರ್‌ನಲ್ಲಿ ಪಕ್ಷದ 'ಕಾರ್ಯದರ್ಶಿ' ಎಂಬುದಾಗಿ ಸತ್ಯಭಕ್ತ ಅವರು ಸಹಿ ಮಾಡಿದ ಹಿಂದಿ ಮತ್ತು ಇಂಗ್ಲಿಷಿನ ಎರಡು ಕರಪತ್ರಗಳನ್ನು ಹೊರಡಿಸಿದರು. ಇದರಲ್ಲೇ ಪಕ್ಷದ ಸದಸ್ಯತ್ವ ಅರ್ಜಿಯನ್ನೂ ಸಹ ಮುದ್ರಿಸಲಾಗಿತ್ತು. ಆದರೆ ಇದನ್ನು ಸಂಯುಕ್ತ ಪ್ರಾಂತದ ಸರ್ಕಾರ ನಿಷೇಧ ಮಾಡಿತು. ಸತ್ಯಭಕ್ತ ಅವರು ಪ್ರಣವೀರ್‌ನಲ್ಲಿ ಪ್ರಕಟಿಸಿದ ಪತ್ರದಲ್ಲಿ ಗೊತ್ತಾಗುವ ಪ್ರಕಾರ 1924 ರ ಡಿಸೆಂಬರ್‌ನಲ್ಲಿ ಇಂಡಿಯನ್ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ 78. ಇವರು ಬಹುತೇಕ ಸಂಯುಕ್ತ ಪ್ರಾಂತ, ರಾಜಾಸ್ಥಾನ್ ಮತ್ತು ಮಧ್ಯಪ್ರದೇಶದವರಾಗಿದ್ದರು. ಇವರಲ್ಲಿ ಪ್ರಮುಖರೆಂದರೆ, ಮೌಲಾನಾ ಹಸ್ರತ್ ಮೊಹಾನಿ, ರಾಮಶಂಕರ್ ಅವಸ್ಥಿ (ವರ್ತಮಾನ್ ಸಂಪಾದಕರು), ರಾಧಾ ಮೋಹನ್ ಗೋಕುಲ್‌ಜಿ ಮತ್ತು ಸುರೇಶ್‌ಚಂದ್ರ ಭಟ್ಟಾಚಾರ್ಯ (ವರ್ತಮಾನ್ ಉಪ ಸಂಪಾದಕರು). 1925 ರ ಮಾರ್ಚ್ ವೇಳೆಗೆ ಸದಸ್ಯರ ಸಂಖ್ಯೆ 215 ಆಗಿತ್ತು. ಈ ಅವಧಿಯಲ್ಲೇ ಸತ್ಯಭಕ್ತ ಅವರು ಸಕ್ಲತ್‌ವಾಲಾ ಜೊತೆ ಸಂಪರ್ಕವನ್ನು ಏರ್ಪಡಿಸಿಕೊಂಡಿದ್ದರು. ನೋಡಿ, ಹಿಸ್ಟರಿ., ಪುಟ 83 ರಲ್ಲಿ ಉದ್ಧೃತವಾಗಿರುವ, ಡೇವಿಡ್ ಪೆಟ್ರೀ, 1972, ಕಮ್ಯುನಿಸಂ ಇನ್ ಇಂಡಿಯಾ, 1924–27, ಮಹದೇವ್ ಪ್ರಸಾದ್ ಸಹಾ (ಸಂ.), ಎಡಿಷನ್ಸ್ ಇಂಡಿಯಾ, ಕಲ್ಕತ್ತಾ, ಪುಟ 159.

13. ಬ್ರಿಟಿಷ್ ಸರ್ಕಾರದ ದಾಳಿ ಮತ್ತು ದಬ್ಬಾಳಿಕೆಗಳಿಂದ ತಪ್ಪಿಸಿಕೊಳ್ಳಲು ಮತ್ತು ಹಿಂಸೆಯ ವಿಧಾನಗಳು ಅಗತ್ಯವಿಲ್ಲವೆಂಬ ಕಾರಣಕ್ಕೆ ಕಮಿನ್‌ಟರ್ನ್‌ನೊಂದಿಗೆ ಸಂಪರ್ಕ ಬೇಡವೆಂಬ ನಿಲುವನ್ನು ಹೊಂದಿದ್ದ ಇವರು ಕಾಂಗ್ರೆಸ್‌ನೊಳಗಿದ್ದು ಅದನ್ನು ಬದಲಾಯಿಸಬೇಕೆಂಬ ಅಭಿಪ್ರಾಯ ಹೊಂದಿದ್ದರು.

14. ಹಿಸ್ಟರಿ 2005, ಪು. 57 ರಲ್ಲಿ ಉದ್ಧೃತವಾಗಿರುವಂತೆ, 1927, ಜನವರಿ 13 ರ ಯಂಗ್ ಇಂಡಿಯಾ ಸಂಚಿಕೆ 'ಇಂಡಿಪೆಂಡೆನ್ಸ್' ಲೇಖನದಲ್ಲಿ ಗಾಂಧಿ ಈ ರೀತಿ ಬರೆಯುತ್ತಾರೆ: 'ಸ್ವರಾಜ್‌ನ್ನು ಸಂಪೂರ್ಣ ಸ್ವಾತಂತ್ರ್ಯವೆಂದು ವಿವರಿಸಲು ಕಾಂಗ್ರೆಸ್ ನೀತಿಯನ್ನು ತಿದ್ದುಪಡಿ ಮಾಡಬೇಕೆಂದು ಕಾಂಗ್ರೆಸ್‌ನಲ್ಲಿ ವರ್ಷ ವರ್ಷವೂ ನಿರ್ಣಯಗಳನ್ನು ಮಂಡಿಸಲಾಗುತ್ತಿದೆ ಮತ್ತು ವರ್ಷ ವರ್ಷವೂ ನಿರ್ಣಯವನ್ನು ಸಂತೋಷದಿಂದ ಕಾಂಗ್ರೆಸ್ ಅತ್ಯಂತ ಬಹುಮತಗಳಿಂದ ಸೋಲಿಸುತ್ತಿದೆ'. (ಭಾಷಾಂತರ ಲೇಖಕರದು). ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ(ಅಫಾಒಉ), ಸಂಪುಟ 22, ಪಬ್ಲಿಕೇಷನ್ ಡಿವಿಷನ್, 1969: ಪುಟ 52.

15. ಅಷ್ಟೊತ್ತಿಗೆ ಜವಹರಲಾಲ್ ನೆಹರೂ ತಮ್ಮನ್ನು ಸಮಾಜವಾದಿ ಎಂದು ಕರೆದುಕೊಂಡಿದ್ದರು. ಬಡತನ ಮತ್ತು ಅಸಮಾನತೆಯನ್ನು ಅಳಿಸಿ ಹಾಕಲು ಇಂದಲ್ಲ ನಾಳೆ ಕಾಂಗ್ರೆಸ್ ಸಮಾಜವಾದವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಪ್ರತಿಪಾದಿಸಿದ್ದರು. ನೆಹರೂ ದೃಷ್ಟಿಯಲ್ಲಿ ಸಮಾಜವಾದವೆಂದರೆ, ಕನಿಷ್ಠ ವೇತನಗಳು, ಕೆಲಸದ ದಿನಗಳ ಕಡಿತ, ಸಹಕಾರಿಗಳ ಮೂಲಕ ಕೈಗಾರಿಕೆಗಳ ಮೇಲೆ ಕಾರ್ಮಿಕರ ಹಿಡಿತ, ಭೂಮಿಯ ಮೇಲೆ ರೈತರ ಹಕ್ಕು, ಇತ್ಯಾದಿ ಅಂಶಗಳನ್ನು ಒಳಗೊಂಡಿದ್ದವು.

16. ಪಾರ್ಲಿಮೆಂಟ್ ಬಾಂಬ್ ಕೇಸಿನಲ್ಲಿ ಕೆಳಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗ ನ್ಯಾಯಾಧೀಶರು 'ಕ್ರಾಂತಿ' ಎಂದರೇನು? ಎಂದು ಕೇಳಿದಾಗ (ಇದೇ ಕಾಲಕ್ಕೆ 'ಲಾಂಗ್ ಲಿವ್ ರೆವಲ್ಯೂಷನ್' ಘೋಷಣೆ ಕುರಿತು ಮಾಡರ್ನ್ ರಿವ್ಯೂ ಸಂಪಾದಕರು ವ್ಯಂಗ್ಯದಿಂದ ಟೀಕೆ ಮಾಡಿ ಬರೆದಿದ್ದರು. ಇದಕ್ಕೆ ಉತ್ತರವಾಗಿ ಭಗತ್‌ಸಿಂಗ್ ಮತ್ತು ಭತುಕೇಶ್ವರ ದತ್ತ ಇಬ್ಬರೂ ಜಂಟಿಯಾಗಿ ಬರೆದ 'ಆನ್ ದಿ ಸ್ಲೋಗನ್ ಆಫ್ ಲಾಂಗ್ ಲಿವ್ ರೆವಲ್ಯೂಷನ್' ಎಂಬ ಪತ್ರದಲ್ಲೂ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪು. 90) ಭಗತ್‌ಸಿಂಗ್ ನೀಡಿದ ವಿವರಣೆಯ ಉದ್ದರಣೆಯಿದು. (ಶಿವ ವರ್ಮ (ಸಂ), 2007, ಭಗತ್ ಸಿಂಗ್, ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ, ನ್ಯೂ ಡೆಲ್ಲಿ, ಪು. 84–85).

17. ನೋಡಿ ಎಸ್.ಭಟ್ಟಾಚಾರ್ಯ ಅಂಡ್ ರೋಮಿಲಾ ಥಾಪರ್ (ಸಂ.), ಸಿಚ್ಯುಯೇಟಿಂಗ್ ಇಂಡಿಯನ್ ಹಿಸ್ಟರಿ, ನ್ಯೂ ಡೆಲ್ಲಿ, 1986 ರಲ್ಲಿ ಉದೃತ, ಆದಿತ್ಯ ಮುಖರ್ಜಿ, 'ಇಂಡಿಯನ್ ಕ್ಯಾಪಿಟಲಿಸ್ಟ್ ಕ್ಲಾಸ್: **ಆಸ್ಪೆಕ್ಟ್ಸ್ ಆಫ್ ಇಟ್ಸ್ ಎಕನಾಮಿಕ್, ಪೊಲಿಟಿಕಲ್ ಅಂಡ್ ಐಡಿಯಲಾಜಿಕಲ್ ಡೆವಲಪ್‌ಮೆಂಟ್ ಇನ್ ದಿ ಕಲೋನಿಯಲ್ ಪೀರಿಯಡ್'.**

18. ಜವಹರಲಾಲ್ ನೆಹರೂ ಮತ್ತು ಸುಭಾಷ್‌ಚಂದ್ರ ಬೋಸರು ಬಹಿರಂಗವಾಗಿ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಕೊನೆಗೆ ಇವರೂ ಕರಾಚಿ ಅಧಿವೇಶನದಲ್ಲಿ ಗಾಂಧಿಯ ದಾರಿಗೆ ಬಂದರು. ಆದರೂ ಜವಹರಲಾಲ್ ನೆಹರೂ ಮತ್ತು ಸುಭಾಷ್‌ಚಂದ್ರ ಬೋಸರು ಮಂಡಿಸಿದ ನಿರ್ಣಯದಲ್ಲಿ 'ಜನತೆಯ

ಶೋಷಣೆಯನ್ನು ಕೊನೆಗಾಣಿಸುವ ಹಿನ್ನೆಲೆಯಲ್ಲಿ ರಾಜಕೀಯ ಸ್ವಾತಂತ್ರ್ಯವು ನಿಜವಾದ ಆರ್ಥಿಕ ಸ್ವಾತಂತ್ರ್ಯವನ್ನು ಒಳಗೊಳ್ಳಬೇಕು' ಎಂದು ಹೇಳಿದರು. ಗಾಂಧಿ ಈ ನಿರ್ಣಯವನ್ನೇನೂ ಒಪ್ಪಲಿಲ್ಲ. 'ಅಲ್ಪಸಂಖ್ಯಾತರ ಪ್ರಶ್ನೆ'ಯು ಎರಡನೇ ದುಂಡು ಮೇಜಿನ ಸಭೆಯನ್ನು ವಿಫಲಗೊಳಿಸಿತು. ಬರಿಗೈಲಿ ಹಿಂದಿರುಗಿದ ಗಾಂಧಿ ಮತ್ತೆ ಕಾಯಿದೆ ಭಂಗ ಚಳುವಳಿಯನ್ನು 1932 ರ ಜನವರಿ 4 ರಂದು ಆರಂಭಿಸಿದರು. ಬ್ರಿಟಿಷರು ಆಕ್ರಮಣಕಾರಿಯಾಗಿ ದಾಳಿಗಳನ್ನು ಶುರುಮಾಡಿದರು. 1932 ರ ಜನವರಿ ಮತ್ತು 1933 ರ ಮಾರ್ಚ್ ನಡುವೆ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಬಂಧಿಸಿದರು. 1932 ರ ನವೆಂಬರ್‌ನಲ್ಲಿ ಮೂರನೇ ದುಂಡು ಮೇಜಿನ ಸಭೆಯನ್ನು ಕಾಂಗ್ರೆಸ್ ಬಹಿಷ್ಕರಿಸಿತು.

19. ಹಿಸ್ಟರಿ. op. cit ಪು. 161 ರಲ್ಲಿ ಉದ್ಧೃತವಾಗಿರುವ, 'ದಿ ರೀನ್ ಆಫ್ ವಾಯ್ಲೆನ್ಸ್ ಆಫ್ ದಿ ಮಾಕ್‌ಡೊನಾಲ್ಡ್ ಗವರ್ನಮೆಂಟ್ ಇನ್ ಇಂಡಿಯಾ', ಇನ್‌ಪ್ರೆಕರ್, ಸಂ. 10, ನಂ. 19 ನೋಡಿ.

20. ಹಿಸ್ಟರಿ. op. cit ಪು. 163 ರಲ್ಲಿ ಉದ್ಧೃತ, ನೋಡಿ, ಸುಮಿತ್ ಸರ್ಕಾರ್, ಮಾಡರ್ನ್ ಇಂಡಿಯಾ, ಪುಟ 300, ಟಿ.ಜೆ.ನೊಸ್ಸಿಟರ್, ಕಮ್ಯುನಿಸಂ ಇನ್ ಕೇರಳ: ಎ ಸ್ಟಡಿ ಇನ್ ಪೊಲಿಟಿಕಲ್ ಅಡಾಪ್ಟೇಷನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಡೆಲ್ಲಿ 1982, ಪುಟ 71, ಮತ್ತು ಬೈರತಿ, ಕಮ್ಯುನಿಸಂ ಅಂಡ್ ನ್ಯಾಷನಲಿಸಂ, ಪುಟ 122.

21. ವಿವರಗಳಿಗಾಗಿ ನೋಡಿ, ಮುಝಾಫರ್ ಅಹಮದ್, ಮೈಸೆಲ್ಫ್ ಅಂಡ್ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ, 1970, ಅನು: ಪಿ.ಕೆ.ಸಿನ್ಹಾ, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ, ಪು. 327–406.

22. ಕಾನ್ಪುರ್ ಪಿತೂರಿ ಮೊಕದ್ದಮೆ ವಿಚಾರಣೆಯ ಹಂತದಲ್ಲಿದ್ದಾಗ ಎಸ್.ಎ.ಡಾಂಗೆ ಮತ್ತು ನಳಿನಿ ಗುಪ್ತ ಬ್ರಿಟಿಷರಿಂದ ಕ್ಷಮಾಧಾನವನ್ನು ಬಯಸಿದ್ದರು ಎಂಬ ವಿಚಾರ ದೇಶದ ಕಮ್ಯುನಿಸ್ಟ್ ಚಳುವಳಿಯೊಳಗೆ ಸಾಕಷ್ಟು ತಲ್ಲಣಗಳನ್ನು ಸೃಷ್ಟಿಸಿತು. ಕಾನ್ಪುರ್ ಪಿತೂರಿ ಮೊಕದ್ದಮೆಯ ಸಂದರ್ಭದಲ್ಲಿ ಬ್ರಿಟಿಷರಿಂದ ಕ್ಷಮಾಧಾನವನ್ನು ಕೇಳಿದ್ದರು ಎಂಬ ದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲಿದ್ದ ದಾಖಲೆಗಳು 1964 ರಲ್ಲಿ ಬಹಿರಂಗಗೊಂಡವು (ಹಿಸ್ಟರಿ2005, 78). ಆದರೆ ಸರ್ಕಾರವೇನೂ ಕ್ಷಮಾಧಾನ ನೀಡಿರಲಿಲ್ಲ. ಈ ಬಗ್ಗೆ ಕಮ್ಯುನಿಸ್ಟ್ ಪಕ್ಷದ ವಿಭಜನೆಯ ನಂತರ ಸಿಪಿಐ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತ್ತು. ಅದರಲ್ಲಿ ಬಹುಸಂಖ್ಯಾತ ಅಭಿಪ್ರಾಯದ ಆಧಾರದಲ್ಲಿ ಕ್ಷಮಾಧಾನ ಪತ್ರ ನೀಡಿರಲಿಲ್ಲವೆಂದು ಸಿಪಿಐ ತೀರ್ಮಾನಿಸಿತು.

23. ಬ್ರಿಟಿಷ್ ಭಾರತದ ಮೇಲಿನ ದೊರೆ ಚಕ್ರವರ್ತಿಯ ಸಾರ್ವಭೌಮತ್ವವನ್ನು ಕಸಿಯಲು ಪಿತೂರಿ ನಡೆಸಿದರೆಂಬ ಆರೋಪದ ಮೇಲೆ ಐಪಿಸಿ ಸೆಕ್ಷನ್ 121–ಎ ಅಡಿಯಲ್ಲಿ ಬಂಧಿಸಲಾದ ಮೂವತ್ತೊಂದು ಮುಖಂಡರು ಯಾರೆಂದರೆ: 1). ಮುಝಾಫರ್ ಅಹಮದ್ (ಎಐಟಿಯುಸಿ ಉಪಾಧ್ಯಕ್ಷರು ಮತ್ತು ಬೆಂಗಾಲ್ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ, ಕಲ್ಕತ್ತಾ), 2). ಎಸ್.ಎ.ಡಾಂಗೆ (ಗಿರಣಿ ಕಾಮ್‌ಗಾರ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಮತ್ತು ಎಐಟಿಯುಸಿ ಸಹಾಯಕ ಕಾರ್ಯದರ್ಶಿ, ಮತ್ತು ಕಾನ್ಪುರ ಪಿತೂರಿ ಮೊಕದ್ದಮೆ ಆರೋಪಿ, ಬಾಂಬೆ), 3). ಎಸ್.ವಿ.ಘಾಟೆ (ಎಐಟಿಯುಸಿ ಹಿಂದಿನ ಸಹಾಯಕ ಕಾರ್ಯದರ್ಶಿ, ಬಾಂಬೆ), 4). ಕೆ.ಎನ್.ಜೋಗ್ಲೇಕರ್ (ಜಿ.ಐ.ಪಿ. ರೈಲ್ವೇಮೆನ್ಸ್ ಯೂನಿಯನ್ ಸಂಘಟಕರು ಮತ್ತು ಎಐಸಿಸಿ ಸದಸ್ಯರು,

ಬಾಂಬೆ), 5). ಡಾ.ಜಿ.ಅಧಿಕಾರಿ (ಆಗಷ್ಟೇ ಜರ್ಮನಿಯಿಂದ ಹಿಂದಿರುಗಿದ್ದ ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ಪತ್ರಿಕೆ ಸ್ಪಾರ್ಕ್ ಲೇಖಕ, ಬಾಂಬೆ), 6). ಪಿ.ಸಿ.ಜೋಷಿ (ಯುನೈಟೆಡ್ ಪ್ರಾವಿನ್ಸ್‌ನ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಕಾರ್ಯದರ್ಶಿ, ಅಲಹಾಬಾದ್), 7). ಆರ್.ಎಸ್.ನಿಂಬ್‌ಕರ್ (ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಅಖಿಲ ಭಾರತ ಕಾರ್ಯದರ್ಶಿ, ಬಿಪಿಸಿಸಿ ಕಾರ್ಯದರ್ಶಿ ಮತ್ತು ಎಐಸಿಸಿ ಸದಸ್ಯರು, ಬಾಂಬೆ), 8). ಎಸ್.ಎಸ್.ಮಿರಾಜ್‌ಕರ್ (ಗಿರಣಿ ಕಾಮ್‌ಗಾರ್ ಯೂನಿಯನ್ ಸಹಾಯಕ ಕಾರ್ಯದರ್ಶಿ, ಬಾಂಬೆ), 9). ಶೌಕತ್ ಉಸ್ಮಾನಿ (ಮಾಸ್ಕೋದಲ್ಲಿ ಎಂ.ಎನ್.ರಾಯ್ ಜೊತೆ ಸಂಪರ್ಕ, ಕಾನ್ಪುರ ಪಿತೂರಿ ಮೊಕದ್ದಮೆಯಲ್ಲಿ ಬಂಧನ, ಬಾಂಬೆ), 10). ಎಂ.ಎ.ಮಜಿದ್ (ಪಂಜಾಬ್ ಕೀರ್ತಿ ಕಿಸಾನ್ ಪಾರ್ಟಿ ಕಾರ್ಯದರ್ಶಿ, ಲಾಹೋರ್), 11). ಸೋಹನ್ ಸಿಂಗ್ ಜೋಷ್ (ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಅಖಿಲ ಭಾರತ ಸಮ್ಮೇಳನದ ಮೊದಲ ಅಧ್ಯಕ್ಷರು, ಅಮೃತ್‌ಸರ್), 12). ಧರಣಿಕಾಂತ ಗೋಸ್ವಾಮಿ (ಬೆಂಗಾಲ್ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಸಹಾಯಕ ಕಾರ್ಯದರ್ಶಿ, ಕಲ್ಕತ್ತಾ), 13). ಗೋಪಾಲ್ ಚಂದ್ರ ಬಸಕ್ (1928ರಲ್ಲಿ ಸೋಷಿಯಲಿಸ್ಟ್ ಯೂತ್ ಲೀಗ್‌ನ ಅಧ್ಯಕ್ಷರು, ಢಾಕಾ), 14). ಶಿಬನಾಥ್ ಬ್ಯಾನರ್ಜಿ (ಬೆಂಗಾಲ್ ಜೂಟ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರು, ಹೌವ್ರಾ), 15). ಎಂ.ಜಿ.ದೇಸಾಯಿ (ಸ್ಪಾರ್ಕ್ ಸಮಾಜವಾದಿ ಪತ್ರಿಕೆ ಸಂಪಾದಕ, ಬಾಂಬೆ), 16). ಅಯೋಧ್ಯಾ ಪ್ರಸಾದ್ (ಬೆಂಗಾಲ್ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಮುಖಂಡ, ಜಾನ್ಸಿ), 17). ಕೆ.ಎನ್.ಸೆಹಗಲ್ (ಪಂಜಾಬ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಆಲ್ ಇಂಡಿಯಾ ಯೂತ್ ಲೀಗ್ ಸದಸ್ಯರು, ಲಾಹೋರ್), 18). ರಾಧಾರಮಣ ಮಿತ್ರ (ಬೆಂಗಾಲ್ ಜೂಟ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ, ಕಲ್ಕತ್ತಾ), 19). ಎಸ್.ಹೆಚ್.ಜಬ್ವಾಲಾ (ಆಲ್ ಇಂಡಿಯಾ ರೈಲ್ವೆಮೆನ್ಸ್ ಫೆಡರೇಷನ್ ಸಂಘಟನಾ ಕಾರ್ಯದರ್ಶಿ ಮತ್ತು ಗಿರಣಿ ಕಾಮ್‌ಗಾರ್ ಯೂನಿಯನ್ ಮುಖಂಡರು, ಬಾಂಬೆ), 20). ಡಿ.ಆರ್.ತೇಂಗಡಿ (ಎಐಟಿಯುಸಿ ಮಾಜಿ ಅಧ್ಯಕ್ಷರು ಮತ್ತು ಎಐಸಿಸಿ ಸದಸ್ಯರು, ಪೂನಾ), 21). ಗೋಪೇನ್ ಚಕ್ರಬರ್ತಿ (ಈಸ್ಟ್ ಇಂಡಿಯಾ ರೈಲ್ವೆ ವರ್ಕರ್ಸ್ ಯೂನಿಯನ್ ಮುಖಂಡರು, ಢಾಕಾ), 22). ಜಿ.ಆರ್.ಖಾಸ್ಲೆ (ಗಿರಣಿ ಕಾಮ್‌ಗಾರ್ ಯೂನಿಯನ್ ಮುಖಂಡರು, ಬಾಂಬೆ), 23). ಕಿಶೋರಿಲಾಲ್ ಘೋಷ್ (ಬೆಂಗಾಲ್ ಟ್ರೇಡ್ ಯೂನಿಯನ್ ಫೆಡರೇಷನ್ ಕಾರ್ಯದರ್ಶಿ, ಕಲ್ಕತ್ತಾ), 24). ಅರ್ಜುನ್ ಆತ್ಮಾರಾಂ ಆಳ್ವೆ (ಗಿರಣಿ ಕಾಮ್‌ಗಾರ್ ಯೂನಿಯನ್ ಅಧ್ಯಕ್ಷರು, ಬಾಂಬೆ), 25). ವಿಶ್ವನಾಥ್ ಮುಖರ್ಜಿ (ಯುನೈಟೆಡ್ ಪ್ರಾವಿನ್ಸ್‌ನ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಅಧ್ಯಕ್ಷರು, ಗೋರಖ್‌ಪುರ್), 26). ಎಲ್.ಆರ್.ಕದಂ (ಜ್ಹಾರಿಯಾ ಮುನಿಸಿಪಲ್ ವರ್ಕರ್ಸ್ ಯೂನಿಯನ್ ಸಂಘಟಕ, ಜಾನ್ಸಿ), 27). ಗೌರಿಶಂಕರ್ (ಯುನೈಟೆಡ್ ಪ್ರಾವಿನ್ಸ್‌ನ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಾರ್ಟಿ ಮುಖಂಡರು, ಮೀರತ್), 28). ಶಂಸುಲ್ ಹುಡಾ (ಬೆಂಗಾಲ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ, ಕಲ್ಕತ್ತಾ), 29). ಧರಂವೀರ್ ಸಿಂಗ್ (ಮೀರತ್), 30). ಫಿಲಿಪ್ ಸ್ಪ್ರಾಟ್ (ಬ್ರಿಟಿಷ್ ಕಮ್ಯುನಿಸ್ಟ್ ಪಾರ್ಟಿ ಸದಸ್ಯರು ಮತ್ತು ಎಐಟಿಯುಸಿ ಕಾರ್ಯಕಾರಿ ಸಮಿತಿ ಸದಸ್ಯರು) ಮತ್ತು 31). ಬಿ.ಎಫ್.ಬ್ರಾಡ್ಲಿ (ಬ್ರಿಟಿಷ್ ಕಮ್ಯುನಿಸ್ಟ್ ಪಾರ್ಟಿ ಸದಸ್ಯರು, ಜಿ.ಐ.ಪಿ. ರೈಲ್ವೆಮೆನ್ಸ್ ಯೂನಿಯನ್ ಮತ್ತು ಗಿರಣಿ ಕಾಮ್‌ಗಾರ್ ಯೂನಿಯನ್ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಬಾಂಬೆ ಜವಳಿ ಕಾರ್ಮಿಕರ ಜಂಟಿ ಮುಷ್ಕರ ಸಮಿತಿ ಖಜಾಂಚಿ). (ಸುಕೋಮಲ್ ಸೇನ್, 1977, ವರ್ಕಿಂಗ್ ಕ್ಲಾಸ್ ಆಫ್ ಇಂಡಿಯಾ, ಪು. 293–294). ಅಮೀರ್ ಹೈದರ್ ಖಾನ್ (ರಾವಲ್ಪಿಂಡಿ) ಮತ್ತು ಬ್ರಿಟನ್ನಿನಿಂದ

ಭಾರತಕ್ಕೆ ಬಂದಿದ್ದ ಪತ್ರಕರ್ತ ಹೆಚ್.ಎಲ್.ಹಚಿನ್ಸನ್ ಇವರನ್ನು ನಂತರ ಈ ಪಟ್ಟಿಯಲ್ಲಿ ಸೇರಿಸಲಾಯಿತು. ಕೊನೆಯಲ್ಲಿ ಹಚಿನ್ಸನ್ ಮೊಕದ್ದಮೆಯಿಂದ ಬಿಡುಗಡೆಯಾಗಿ ಬ್ರಿಟನ್‌ಗೆ ತೆರಳಿದ ನಂತರ ಅಲ್ಲಿ ಮೀರತ್ ಖೈದಿಗಳ ಪರವಾಗಿ ಸೌಹಾರ್ದತಾ ಚಳುವಳಿಗಳಲ್ಲಿ ಭಾಗವಹಿಸಿದರು ಮತ್ತು ತಮ್ಮ ವಿಚಾರಣೆಯ ಕುರಿತು ಬರೆದರು.

24. ಮ್ಯಾಜಿಸ್ಟ್ರೇಟ್ ಮುಂದೆ ಪ್ರಾಥಮಿಕ ಪ್ರೊಸೀಡಿಂಗ್ಸ್‌ಗೆ ಏಳು ತಿಂಗಳು ಹಿಡಿಯಿತು. ಸೆಷನ್ಸ್‌ನಲ್ಲಿ ಫಿರ್ಯಾದಿಗಳ ಸಾಕ್ಷ್ಯ ಮಂಡನೆಗೆ ಹದಿಮೂರು ತಿಂಗಳು ಹಿಡಿಯಿತು. ಆರೋಪಿಗಳ ಹೇಳಿಕೆಗಳನ್ನು ದಾಖಲಿಸಲು ಹತ್ತು ತಿಂಗಳು ಹಿಡಿಯಿತು. ಡಿಫೆನ್ಸ್ ಸಾಕ್ಷ್ಯವು ಎರಡು ತಿಂಗಳು ಹಿಡಿಯಿತು. ವಾದಗಳು ನಾಲ್ಕೂವರೆ ತಿಂಗಳು ಹಿಡಿಯಿತು. ಆ ನಂತರ ಸೆಷನ್ಸ್ ನ್ಯಾಯಾಧೀಶರು ತಮ್ಮ ತೀರ್ಪನ್ನು ಜನವರಿ 14, 1933 ರಂದು ಘೋಷಿಸಲು ಐದು ತಿಂಗಳು ತೆಗೆದುಕೊಂಡರು. ಕೊನೆಯ ಅಪೀಲ್ಸನ್ನು ಅಲಹಾಬಾದ್ ಹೈಕೋರ್ಟ್‌ನಲ್ಲಿ ಮಾರ್ಚ್ 17, 1933 ರಂದು ಸಲ್ಲಿಸಲಾಯಿತು. . . ಜುಲೈ 24, 1933 ರಂದು ವಾದಗಳು ಶುರುವಾಗಿ ಆಗಸ್ಟ್ 2, 1933 ರಂದು ಮುಗಿಯಿತು. ಆ.3 ರಂದು ಮುಖ್ಯ ನ್ಯಾಯಾಧೀಶರು ಅಂತಿಮ ತೀರ್ಪನ್ನು ಪ್ರಕಟಿಸಿದರು. . . ಈ ಕೇಸಿನ ಸಾಕ್ಷ್ಯಗಳು ಫೋಲಿಓ ಗಾತ್ರದ ಇಪ್ಪತ್ತೈದು ಮುದ್ರಿತ ಸಂಪುಟಗಳಿದ್ದವು. 3500 ಪ್ರಾಸಿಕ್ಯೂಷನ್ ಎಕ್ಸಿಬಿಟ್ಸ್, 1500 ಡಿಫೆನ್ಸ್ ಎಕ್ಸಿಬಿಟ್ಸ್ ಇದ್ದವು ಮತ್ತು 320 ರಷ್ಟು ಸಾಕ್ಷಿಗಳನ್ನು ವಿಚಾರಿಸಲಾಯಿತು. ಅಂತಿಮ ತೀರ್ಪೇ 676 ಪುಟಗಳ ಎರಡು ಮುದ್ರಿತ ಸಂಪುಟಗಳಾಗಿತ್ತು. ಹೈಕೋರ್ಟಿಗೆ ಒಪ್ಪಿಸುವ ಮೊದಲೇ ಈ ಕೇಸಿಗೆ ಸರ್ಕಾರ 16 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿತ್ತು.

25. ದಾದಾ ಅಮೀರ್ ಹೈದರ್ ಖಾನ್ ಭಾರತದ ಅಗ್ರಗಣ್ಯ ಕಮ್ಯುನಿಸ್ಟರಲ್ಲಿ ಒಬ್ಬರು. ಈಗಿನ ಪಾಕಿಸ್ತಾನದ ಹಳ್ಳಿಯೊಂದರ ಬಡ ಕುಟುಂಬದ ಇವರು ಬಾಂಬೆಯ ಹಡಗುಗಳಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಕ್ರಾಂತಿಕಾರಿಗಳ ಸಂಪರ್ಕ ಬಂದು ಕಾರ್ಮಿಕರನ್ನು ಸಂಘಟಿಸುವಾಗ ಇವರನ್ನು ಮದ್ರಾಸಿಗೆ ಕಮ್ಯುನಿಸ್ಟ ಪಕ್ಷ ಕಟ್ಟಲೆಂದು ಕಳುಹಿಸಲಾಯಿತು. ಮೀರತ್ ಪಿತೂರಿ ಮೊಕದ್ದಮೆಯಲ್ಲಿ ಇವರೊಬ್ಬ ಆಪಾದಿತರು. ಪೊಲೀಸರ ಕಣ್ತಪ್ಪಿಸಿ ಮಾಸ್ಕೋದ ಟಾಯ್ಲರ್ಸ್ ಯೂನಿವರ್ಸಿಟಿಗೆ ಸೇರಿದರು. ನಂತರ ವಾಪಸ್ ಬಾಂಬೆಗೆ ಬಂದು ಬಾಂಬೆಯಲ್ಲಿ ಜನರಲ್ ಮೋಟಾರ್ಸ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಕಮ್ಯುನಿಸ್ಟ್ ಪಕ್ಷಕ್ಕೆ ದುಡಿದರು. ಅಲ್ಲಿ ಬಂಧನದಿಂದ ತಪ್ಪಿಸಿಕೊಳ್ಳಲು ಯೂರೋಪಿಗೆ ಹೋದರು. ಅಲ್ಲಿಂದ ಮದ್ರಾಸಿಗೆ ಬಂದು ಸಂಘಟನಾ ಕೆಲಸಗಳಲ್ಲಿ ತೊಡಗಿಸಿಕೊಂಡರು. ಹಲವಾರು ಯುವ ರಾಜಕೀಯ ಕಾರ್ಯಕರ್ತರನ್ನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಸಿದರು. ಆ ರೀತಿಯಲ್ಲಿ ಪಿ.ಸುಂದರಯ್ಯ ಅವರನ್ನೂ ಕಮ್ಯುನಿಸ್ಟ್ ಪಕ್ಷಕ್ಕೆ ತಂದವರು ಹೈದರ್. 1934 ರಲ್ಲಿ ಬಂಧನವಾಗಿ ಮೂರು ವರ್ಷ ಶಿಕ್ಷೆ ಅನುಭವಿಸಿದರು. ಸ್ವಾತಂತ್ರ್ಯ ನಂತರ ರಾವಲ್ಪಿಂಡಿಗೆ ತೆರಳಿದರು. ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿದ ವಿರುದ್ಧದ ಹೋರಾಟದಲ್ಲಿ ಹಲವು ವರ್ಷಗಳ ಕಾಲ ಜೈಲುವಾಸ ಅನುಭವಿಸಿದರು.

26. ಕಮ್ಯುನಿಸ್ಟ್ಸ್ ಚಾಲೆಂಜ್ ಇಂಪೀರಿಯಲಿಸಂ ಪುಸ್ತಕಕ್ಕೆ ಮುಝಾಫರ್ ಅಹಮದ್ ಬರೆದ ಮುನ್ನುಡಿಯಲ್ಲಿ, ಪು. ii, 1967, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

27. ಈ ಹೇಳಿಕೆಯು ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಭಾರತೀಯ ಕಮ್ಯುನಿಸ್ಟರ ತಿಳುವಳಿಕೆಯನ್ನು ಬಹಿರಂಗವಾಗಿ ಸಾರಿತು. ಜಾಗತಿಕ ಪರಿಸ್ಥಿತಿ, ರಾಷ್ಟ್ರೀಯ ಪರಿಸ್ಥಿತಿ, ರಾಷ್ಟ್ರೀಯ ಕ್ರಾಂತಿ, ಕಾರ್ಷಿಕ ಪ್ರಶ್ನೆ, ಕಾರ್ಮಿಕ ಚಳುವಳಿ, ರಾಷ್ಟ್ರೀಯ ವಿಮೋಚನೆಯನ್ನು ಸಾಧಿಸುವ ತಂತ್ರಗಾರಿಕೆಗಳು ಮತ್ತು ಕಮ್ಯುನಿಸಂನ ಮೂಲ ಚಿಂತನೆಗಳನ್ನು ಜಂಟಿ ಹೇಳಿಕೆಯು ಪ್ರಸ್ತಾಪಿಸಿತು.

28. ತೀರ್ಪು ಬರೆಯುವ ಸಂದರ್ಭಕ್ಕೆ ಬಾಂಬೆ ವರ್ಕರ್ಸ್ ಅಂಡ್ ಪೆಸೆಂಟ್ಸ್ ಪಕ್ಷದ ಅಧ್ಯಕ್ಷರಾಗಿದ್ದ ಡಿ.ಆರ್. ತೇಂಗಡಿ ಪೂನಾದಲ್ಲಿ ನಿಧನರಾಗಿದ್ದರು. ವಿಶ್ವನಾಥ್ ಮುಖರ್ಜಿ, ಶಿಬನಾಥ್ ಬ್ಯಾನರ್ಜಿ ಮತ್ತು ಕಿಶೋರಿಲಾಲ್ ಘೋಷ್ ಅವರನ್ನು ಬಿಡುಗಡೆ ಮಾಡಲಾಯಿತು. ಹೀಗಾಗಿ ಒಟ್ಟಾರೆ 27 ಜನರಿಗೆ ಶಿಕ್ಷೆಯಾಯಿತು. ಮುಝಾಫರ್ ಅಹಮದ್ ಅವರಿಗೆ ಜೀವಾವಧಿ ಗಡೀಪಾರು, ಎಸ್.ಎ.ಡಾಂಗೆ, ಫಿಲಿಪ್ ಸ್ಪ್ರಾಟ್, ಎಸ್.ವಿ.ಘಾಟೆ, ಕೆ.ಎನ್.ಜೋಗಳೇಕರ್, ಆರ್.ಎಸ್.ನಿಂಬ್‌ಕರ್ ಇವರುಗಳಿಗೆ ಹನ್ನೆರೆಡು ವರ್ಷಗಳ ಗಡೀಪಾರು, ಬಿ.ಎಫ್.ಬ್ರಾಡ್ಲಿ, ಎಸ್.ಎಸ್.ಮಿರಾಜ್‌ಕರ್, ಶೌಕತ್ ಉಸ್ಮಾನಿ ಇವರುಗಳಿಗೆ ಹತ್ತು ವರ್ಷಗಳ ಗಡೀಪಾರು, ಮೀರ್ ಅಬ್ದುಲ್ ಮಜೀದ್, ಸೋಹನ್ ಸಿಂಗ್ ಜೋಷ್, ಧರಣೀಕಾಂತ ಗೋಸ್ವಾಮಿ ಇವರುಗಳಿಗೆ ಏಳು ವರ್ಷ ಗಡೀಪಾರು, ಅಯೋಧ್ಯಾ ಪ್ರಸಾದ್, ಗಂಗಾಧರ್ ಅಧಿಕಾರಿ, ಪಿ.ಸಿ.ಜೋಷಿ, ಎಂ.ಜಿ.ದೇಸಾಯಿ, ಇವರುಗಳಿಗೆ ಐದು ವರ್ಷ ಗಡೀಪಾರು, ಗೋಪೇನ್ ಚಕ್ರಬರ್ತಿ, ಗೋಪಾಲ್ ಚಂದ್ರ ಬಸಕ್, ಹೆಚ್.ಎಲ್.ಹಚಿನ್ಸನ್, ರಾಧಾರಮಣ ಮಿತ್ರ, ಎಸ್.ಹೆಚ್.ಜಬ್‌ವಾಲಾ, ಕೆ.ಎನ್.ಸೆಹಗಲ್ ಇವರುಗಳಿಗೆ ನಾಲ್ಕು ವರ್ಷಗಳ ಕಠಿಣ ಕಾರಾಗೃಹ, ಶಂಸುಲ್ ಹುಡಾ, ಅರ್ಜುನ್ ಆತ್ಮಾರಾಮ್ ಆಳ್ವೆ, ಜಿ.ಆರ್.ಕಾಸ್ಲೆ, ಗೌರಿ ಶಂಕರ್, ಎಲ್.ಆರ್.ಕದಂ ಇವರುಗಳಿಗೆ ಮೂರು ವರ್ಷ ಕಠಿಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು (ಹಿಸ್ಟರಿ 2005,ಪು. 182–83).

29. ಹಚಿನ್ಸನ್, ಜಬ್‌ವಾಲಾ, ರಾಧಾರಮಣ ಮಿತ್ರ, ಕೇದಾರನಾಥ್ ಸೆಹಗಲ್, ಗೋವಿಂದ ರಾಮಚಂದ್ರ ಕಾಸ್ಲೆ, ಗೌರಿ ಶಂಕರ್, ಎಲ್.ಆರ್.ಕದಂ, ಮತ್ತು ಅರ್ಜುನ್ ಆತ್ಮಾರಾಂ ಆಳ್ವೆ ಇವರ ಮೇಲಿನ ಎಲ್ಲಾ ಆರೋಪಗಳನ್ನು ವಜಾ ಮಾಡಿತು. ಅಷ್ಟೊತ್ತಿಗಾಗಲೇ ಸಾಕಷ್ಟು ಕಾರಾಗೃಹ ವಾಸವನ್ನು ಸವೆಸಿದ್ದ ಅಯೋಧ್ಯಾ ಪ್ರಸಾದ್, ಪಿ.ಸಿ.ಜೋಷಿ, ಗೋಪಾಲ್ ಬಸಕ್, ಡಾ.ಅಧಿಕಾರಿ ಮತ್ತು ಶಂಷುಲ್ ಹುಡಾ ಇವರನ್ನು ಬಿಡುಗಡೆ ಮಾಡಿತು. ಗೋಪೇನ್ ಚಕ್ರವರ್ತಿ ಶಿಕ್ಷೆಯನ್ನು ಏಳು ತಿಂಗಳಿಗೆ ಇಳಿಸಿತು. ಮುಝಾಫರ್ ಅಹಮದ್, ಡಾಂಗೆ, ಶೌಕತ್ ಉಸ್ಮಾನಿ ಇವರ ಶಿಕ್ಷೆಯನ್ನು ಮೂರು ವರ್ಷಗಳ ಕಠಿಣ ಕಾರಗೃಹ ಶಿಕ್ಷೆಗೆ ಇಳಿಸಿತು. ಫಿಲಿಪ್ ಸ್ಪ್ರಾಟ್ ಅವರಿಗೆ ಎರಡು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಗೆ ಇಳಿಸಿತು. ಘಾಟೆ, ಜೋಗಳೇಕರ್, ನಿಂಬ್‌ಕರ್, ಬ್ರಾಡ್ಲಿ, ಮಿರಾಜ್‌ಕರ್, ಸೋಹನ್ ಸಿಂಗ್ ಜೋಷ್ ಮತ್ತು ಮೀರ್ ಅಬ್ದುಲ್ ಮಜಿದ್ ಇವರೆಲ್ಲರಿಗೂ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆಗೆ ಇಳಿಸಿತು. –ಹಿಸ್ಟರಿ 2005,ಪು. 184 ರಲ್ಲಿ ಉದ್ಧೃತವಾಗಿರುವ ಮೀರತ್ ಕಾಸ್ಪಿರಸಿ ಕೇಸ್: ಕಿಂಗ್ ಎಂಪರರ್ ವರ್ಸಸ್ ಪಿ.ಸ್ಪ್ರಾಟ್ ಅಂಡ್ ಅದರ್ಸ್, 2 ಸಂಪುಟಗಳು., ಮತ್ತು ಪ್ರಮಿತಾ ಘೋಷ್, ಮೀರತ್ ಕಾಸ್ಪಿರಸಿ ಕೇಸ್ ಅಂಡ್ ದಿ ಲೆಫ್ಟ್ ವಿಂಗ್ ಇನ್ ಇಂಡಿಯಾ, ಪ್ಯಾಪಿರಸ್, ಕಲ್ಕತ್ತಾ, 1978, ಪು. 147 ನೋಡಿ.

30. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಬ್ರಿಟಿಷರು ಮಾಡಿದ ಬಂಗಾಳ ವಿಭಜನೆ ವಿರುದ್ಧ ಮತ್ತು ಅದರೊಳಗಿಂದ ಮೂಡಿಬಂದ ಸ್ವದೇಶೀ ಚಳುವಳಿಯಲ್ಲಿ ಸೆಣಬು, ಚಹಾ ತೋಟಗಳ ಕಾರ್ಮಿಕರು ಮತ್ತು ಈಸ್ಟ್ ಇಂಡಿಯಾ ರೈಲ್ವೆ ಕಾರ್ಮಿಕರು ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಂಡರು. 1908 ಜುಲೈನಲ್ಲಿ ಬಾಂಬೆಯಲ್ಲಿ ನಡೆದ ಭಾರತದ ಕಾರ್ಮಿಕರ ಮೊದಲ ರಾಜಕೀಯ ಮುಷ್ಕರ ಮಹತ್ವವಾದದ್ದು. ಸ್ವದೇಶೀ ಚಳುವಳಿಯು ತೀವ್ರತೆ, ವಿದೇಶೀ ವಸ್ತುಗಳ ಬಹಿಷ್ಕಾರ ಮತ್ತು ಸ್ಥಳೀಯ ಹೋರಾಟಗಳ ಉಬ್ಬರಗಳಿಂದ ಗಾಬರಿಗೊಂಡ ಬ್ರಿಟಿಷರು ಬಾಲಗಂಗಾಧರ ತಿಲಕರನ್ನು 1908 ರ ಜೂನ್ 24 ರಂದು ಬಂಧಿಸಿ ದೇಶದ್ರೋಹದ ಆರೋಪದಡಿಯಲ್ಲಿ ಆರು ವರ್ಷಗಳ ಬಂಧನದ ಶಿಕ್ಷೆ ವಿಧಿಸಿದರು. ಇದು ದೇಶಾದ್ಯಂತ ವ್ಯಾಪಕ ಪ್ರತಿರೋಧಕ್ಕೆ ಕಾರಣವಾಯಿತು. ತಿಲಕರಿಗೆ ಶಿಕ್ಷೆ ವಿರೋಧಿಸಿ ಜುಲೈ 23 ರಂದು 1 ಲಕ್ಷ ಕಾರ್ಮಿಕರು ಸಂಪೂರ್ಣ ಮುಷ್ಕರವನ್ನು ಆಚರಿಸಿದರು.

31. ಎಸ್.ಕೆ.ಬೋಲೆ, ಎನ್.ಎ.ತಾಲೇಕೇರ್ಕರ್ ಮತ್ತು ಬಿ.ಆರ್.ನಾರೆ ಇವರುಗಳು 1910 ರಲ್ಲಿ 'ಬಾಂಬೆ ಕಾಮ್‌ಗಾರ್ ಹಿತವರ್ಧಕ್ ಸಭಾ' ಸ್ಥಾಪಿಸಿದರು (ಸೇನ್ 1977: 115). ಇದು 12 ಗಂಟೆ ಕೆಲಸ, ಕೈಗಾರಿಕಾ ಅಪಘಾತಗಳಾದಾಗ ಪರಿಹಾರ, ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳು ಇಂತಹ ಪ್ರಶ್ನೆಗಳನ್ನು ಎತ್ತಿತು. ಇದೇ ಸಂದರ್ಭದಲ್ಲಿ ಬಾಂಬೆ 'ಸೋಷಿಯಲ್ ಸರ್ವಿಸ್ ಲೀಗ್' ಪ್ರಾರಂಭವಾಯಿತು. 1911 ರಲ್ಲಿ ಫ್ಯಾಕ್ಟರಿ ಕಾಯ್ದೆಯು ಕೆಲಸದ ಅವಧಿಯನ್ನು ಕಡಿತಗೊಳಿಸಿತು, ಆದರೆ ಅದಕ್ಕೆ ಅನುಗುಣವಾಗಿ ವೇತನದ ಕಡಿತಕ್ಕೂ ಅವಕಾಶ ಕೊಟ್ಟಿತು. ಹೀಗೆ ನಡೆದು ಬಂದ ಹೋರಾಟಗಳಿಗೆ ಒಂದು ಹೊಸ ತಿರುವನ್ನು ನೀಡಿದ್ದು 1914 ರಿಂದ 1918 ರವರೆಗೂ ನಡೆದ ಮೊದಲ ಮಹಾಯುದ್ಧ ಮತ್ತು 1917 ರಲ್ಲಿ ನಡೆದ ರಷ್ಯನ್ ಕ್ರಾಂತಿ. ಕಾರ್ಮಿಕ ವರ್ಗದ ನಿಜವಾದ ಅರ್ಥದಲ್ಲಿ ಒಂದು ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ಆರಂಭಕ್ಕೆ ಇದು ಸ್ಫೂರ್ತಿಯನ್ನು ನೀಡಿತು.

32. ಉದ್ಘಾಟನಾ ಅಧಿವೇಶನದಲ್ಲಿ ಹಲವಾರು ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು. ಮೋತಿಲಾಲ್ ನೆಹರೂ, ವಿಠಲ್‌ಭಾಯ್ ಪಟೇಲ್ ಶುಭ ಕೋರಿ ಮಾತನಾಡಿದರು. ಮದ್ರಾಸ್ ಲೇಬರ್ ಯೂನಿಯನ್‌ನಿಂದ ಬಿ.ಪಿ.ವಾಡಿಯಾ, ಮಹಮ್ಮದ್ ಅಲಿ ಜಿನ್ನಾ, ಥಿಯಾಸಾಫಿಕಲ್ ಸೊಸೈಟಿಯ ಅನಿಬೆಸೆಂಟ್, ಕ್ರಿಶ್ಚಿಯನ್ ಮಿಶನರಿಗೆ ಸೇರಿದ ರೆ.ಸಿ.ಎಫ್.ಆಂಡ್ರ್ಯೂಸ್, ಬಾಂಬೆ ಕ್ರಾನಿಕಲ್'ನ ಬಿ.ಜಿ.ಹಾರ್ನಿಮನ್ ಮತ್ತು ಸೈಯದ್ ಅಬ್ದುಲ್ಲಾ ಬ್ರೆಲ್ವಿ ಮತ್ತು ಕೆ.ಎಫ್.ನಾರಿಮನ್ ಇವರುಗಳು ಭಾಗವಹಿಸಿದ್ದರು. ಮಹಿಳೆಯರ ಪೈಕಿ ವೈದ್ಯರಾಗಿದ್ದ ಶ್ರೀಮತಿ ನಾಗೂತಾಯಿ ಜೋಷಿ, ಸಾಮಾಜಿಕ ಕಾರ್ಯಕರ್ತರಾಗಿದ್ದ ಅಬಂತಿಕಾ ಬಾಯಿ ಗೋಖಲೆ ಹಾಗೂ ಶ್ರೀಮತಿ ಜಿನ್ನಾ ಮುಂತಾದವರು ಭಾಗವಹಿಸಿದ್ದರು. ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳ ಪೈಕಿ ಲಲ್ಲೂಭಾಯಿ ಸಮಲ್‌ದಾಸ್, ಲಾಲ್‌ಜಿ ನಾರಾಯಣ್‌ಜಿ, ಹನ್ಸ್‌ರಾಜ್ ಪಿ. ಥ್ಯಾಕರ್ಸೆ, ಲಲ್ಲೂಬಾಯಿ ಡಿ.ಜವೇರಿ, ಲಕ್ಷ್ಮೀದಾಸ್ ರಾಂಜಿ, ಮಾಲ್ವಿ ಗೋವಿಂದ್‌ಜಿ, ಸುಭಾನಿ ಮುಂತಾದವರಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಜೋಸೆಫ್ ಬ್ಯಾಪ್ಟಿಸ್ಟಾ ಒಬ್ಬ ಶ್ರೀಮಂತ ಬ್ಯಾರಿಸ್ಟರ್ ಮತ್ತು ಫೇಬಿಯನ್ ಸಮಾಜವಾದಿ ಆಗಿದ್ದರು. ಇನ್ನು ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ದಿವಾನ್ ಚಮನ್‌ಲಾಲ್ ಸಕ್ರಿಯವಾಗಿದ್ದರು. (ಸೇನ್ 1977: 165–66).

33. ಭಾರತದಲ್ಲಿ ಮೊದಲ ಮೇ ದಿನವನ್ನು ಮದ್ರಾಸಿನ ಕಾರ್ಮಿಕ ಮುಖಂಡರಾಗಿದ್ದ ಸಿಂಗಾರವೇಲು ಚೆಟ್ಟಿಯಾರ್ ಅಧ್ಯಕ್ಷತೆಯಲ್ಲಿ ಮದ್ರಾಸಿನ ಸಮುದ್ರ ತೀರದಲ್ಲಿ ಮೇ 1, 1923 ರಂದು ಆಚರಿಸಲ್ಪಟ್ಟಿತು. ವಿಶ್ವ ಕಾರ್ಮಿಕ ವರ್ಗದ ಈ ಪವಿತ್ರ ದಿನವನ್ನು ರಜಾ ದಿನವಾಗಿ ಘೋಷಿಸಬೇಕೆಂದು ಸಭೆಯು ಸರ್ಕಾರಕ್ಕೆ ಮನವಿ ಮಾಡಿತು.' ಮೇ ದಿನದ ಬಾವುಟ ಸಿಗುತ್ತಿರಲಿಲ್ಲವಾದ್ದರಿಂದ, ಚೆಟ್ಟಿಯಾರ್ ಅವರು ಕೆಂಪು ಸೀರೆಯನ್ನು ಹರಿದು ಅದರಿಂದ ಬಾವುಟ ಮಾಡಿ ತಮ್ಮ ಮನೆಯ ಮೇಲೆ ಹಾರಿಸಿದ್ದರೆಂದು, ಅದನ್ನು ಚೆಟ್ಟಿಯಾರ್ ಅವರು ಮುಝಾಫರ್ ಅಹಮದ್ ಅವರಿಗೆ ಹೇಳಿದ್ದರು. 1926 ರಲ್ಲಿ ಬಾಂಬೆ ಮುನಿಸಿಪಲ್ ಕಾರ್ಮಿಕರು ಮೇ ದಿನದ ರ್‍ಯಾಲಿಯನ್ನು ನಡೆಸಿದರು. ಇದರಲ್ಲಿ ಎನ್.ಎಂ.ಜೋಷಿ, ಎಸ್.ಎಸ್.ಮಿರಾಜ್‌ಕರ್ ಮತ್ತು ಎಸ್.ವಿ.ಘಾಟೆ ಮತ್ತು ಇತರ ಮುಖಂಡರು ಭಾಗವಹಿಸಿದ್ದರು (ಸೇನ್: 1977: 284). ಇಂತಹ ಪ್ರತ್ಯೇಕ ಆಚರಣೆಗಳನ್ನು ಹೊರತುಪಡಿಸಿದರೆ, ವ್ಯವಸ್ಥಿತವಾದ ಮೇ ದಿನಾಚರಣೆ 1927 ರಿಂದ ಆರಂಭವಾಯಿತು.

34. 1939–45 ರ ನಡುವೆ ನಡೆದ ಕಾರ್ಮಿಕರ ಹೋರಾಟಗಳ ಅಂಕಿ–ಸಂಖ್ಯೆಗಳನ್ನು ಗಮನಿಸಿದರೆ ಇದರ ತೀವ್ರತೆ ತಿಳಿಯುತ್ತದೆ. 1939 ರಲ್ಲಿ 406 ಮುಷ್ಕರಗಳು ಅಥವಾ ಲಾಕ್‌ಔಟ್‌ಗಳು ನಡೆದು 4,09,189 ಕಾರ್ಮಿಕರು ಭಾಗವಹಿಸಿದ್ದರು ಮತ್ತು 49,92,795 ಕೆಲಸದ ದಿನಗಳು ನಷ್ಟವಾಗಿದ್ದವು. 1945 ರಲ್ಲಿ 848 ಮುಷ್ಕರಗಳು ಅಥವಾ ಲಾಕ್‌ಔಟ್‌ಗಳು ನಡೆದು 7,82,196 ಕಾರ್ಮಿಕರು ಭಾಗವಹಿಸಿದ್ದರು ಮತ್ತು 33,40,892 ಕೆಲಸದ ದಿನಗಳು ನಷ್ಟವಾಗಿದ್ದವು (ಸೇನ್ 1977: 385).

35. 1926 ರ ಟ್ರೇಡ್ ಯೂನಿಯನ್ ಕಾಯ್ದೆ ಅಡಿಯಲ್ಲಿ, 1937–38 ರಲ್ಲಿ ನೋಂದಣಿಯಾದ ಸಂಘಗಳು 420 ಮತ್ತು ಅದರ ಸದಸ್ಯತ್ವ 3,90,112 ಇದ್ದದ್ದು, 1946–47 ರಲ್ಲಿ 1225 ಸಂಘಗಳು ಮತ್ತು 13,31,962 ಸದಸ್ಯಕ್ಕೆ ಹೆಚ್ಚಳವಾಯಿತು (ಸೇನ್: 1977: ಪು. 395). ಸರ್ಕಾರದ ಏನೆಲ್ಲಾ ಪಿತೂರಿಗಳ ನಡುವೆಯೂ ಎಐಟಿಯುಸಿ ಭಾರತದ ಕಾರ್ಮಿಕ ವರ್ಗದ ಮುಂಚೂಣಿ ಸಂಘಟನೆಯಾಗಿ ಬೆಳವಣಿಗೆಯಾಯಿತು.

36. ಅನಿಲ್ ರಾಜಿಮ್‌ವಾಲೆ, ಎ ಷಾರ್ಟ್ ಹಿಸ್ಟರಿ ಆಫ್ ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ (1936–2004), https://aisfharyana.wordpress.com/about/.

37. https://en.wikipedia.org/wiki/All_India_Students_Federation.

38. ಅನಿಲ್, op. cit.,

39. ಪ್ರಮುಖ ಸಾಹಿತಿಗಳು ಮತ್ತು ಕವಿಗಳು – ಸೈಯದ್ ಸಜ್ಜಾದ್ ಜಾಹಿರ್, ಮುಲ್ಕ್ ರಾಜ್ ಆನಂದ್, ಮುನ್ಶಿ ಪ್ರೇಮ್‌ಚಂದ್, ಫೈಜ್ ಅಹಮದ್ ಫೈಜ್, ಸಾದತ್ ಹಸನ್ ಮಾಂಟೋ, ಹಬೀಬ್ ತನ್ವೀರ್, ಸಾಹಿರ್ ಲೂಧಿಯಾನ್ವಿ, ಭೀಷ್ಮ ಸಾಹ್ನಿ, ರಾಜಿಂದರ್ ಸಿಂಗ್ ಬೇಡಿ, ಅಮೃತ ಪ್ರೀತಂ, ಮಜ್ರೂಹ್ ಸುಲ್ತನ್‌ಪುರಿ, ಖಗೇಂದ್ರ ಠಾಕೂರ್, ಕ್ರಿಷನ್ ಚಂದರ್, ಕೈಫಿ ಅಜ್ಮಿ, ಇಸ್ಮತ್ ಚುಗ್ತೈ, ವಿಜಯ್‌ದನ್ ದೇಹ್ತಾ, ಫಿರಾಖ್ ಘೊರಾಖ್‌ಪುರಿ, ಮಜ್ನೂನ್ ಘೋರಾಖ್‌ಪುರಿ, ಮಿರ್ಜಾ ಆದೀಬ್, ಹಮೀದ್ ಅಖ್ತರ್, ಜಾನ್ ನಿಸಾರ್ ಅಖ್ತರ್, ಜೋ ಅನ್ಸಾರಿ, ಸುಲೈಮಾನ್ ಆರೀಬ್, ಸಜ್ಜಾದ್ ಬಾಬರ್, ಫರಿಗ್ ಬುಖಾರಿ, ಖಾತಿರ್ ಘಜ್ನವಿ, ಮಝುರ್ ಹೈದರ್, ಹಬೀಬ್ ಜಲೀಬ್, ಅಲಿ ಸರ್ದಾರ್ ಜಫ್ರಿ, ನುಸ್ರತ್ ಜಹಾನ್, ರಷೀದ್ ಜಹಾನ್,

ಮಜಾಸ್ ಲಖ್ನವಿ, ಝುಫರ್ ಮೈರಾಜ್, ಮಖ್ದೂಂ ಮೊಹಿಯುದ್ದೀನ್, ಜಮಾಲ್ ನಖ್ವಿ, ಗುಲ್ ಖಾನ್ ನಸೀರ್, ಪ್ರೇಂ ನಾಥ್, ಅಹಮದ್ ನದೀಂ ಕಾಸ್ಮಿ, ಸಾದತ್ ಸಯೀದ್, ಮನ್ಜರ್ ಸಲೀಂ, ಮುಷ್ತಾಖ್ ಶಬಾಬ್, ಮುಹಮದ್ ಅಲಿ ಸಿದ್ದಿಖಿ, ಸಲ್ಮಾ ಸಿದ್ದಿಖಿ, ಅಲಿ ಜಾವದ್ ಝೈದಿ, ಅಹಮದ್ ಅಲಿ, ಸೈಯದ್ ಫಕ್ರುದ್ದೀನ್ ಬ್ಯಾಲಿ, ಅಹಮದ್ ನದೀಂ ಖಾಸಿಂ, ಹಮೀದ್ ಅಖ್ತರ್.

40. en.wikipedia.org/wiki/Progressive_Writers%27_Movement.

41. ಅರುಣ್ ಶೌರಿಯವರು 1984 ರ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ಪತ್ರಿಕೆಯಲ್ಲಿ ಭಾರತೀಯ ಕಮ್ಯುನಿಸ್ಟರ 1942 ರ ಪಾತ್ರದ ಕುರಿತು 'ಗ್ರೇಟ್ ಬಿಟ್ರೇಯಲ್' ಎಂಬ ನಾಲ್ಕು ಕಂತುಗಳ ಲೇಖನವನ್ನು ಬರೆದಿದ್ದರು. ಅದರಲ್ಲಿ ಅರುಣ್ ಶೌರಿ ಮಂಡಿಸಿದ್ದ ವಾದಗಳು ಅಚಾರಿತ್ರಿಕ ಮತ್ತು ಸಾಮಾನ್ಯೀಕರಣಗಳಿಂದ ಕೂಡಿದೆ ಎಂಬುದನ್ನು ನಿರೂಪಿಸುತ್ತಾ ಸುಮಿತ್ ಸರ್ಕಾರ್ ಅವರು ಬರೆದ ಲೇಖನದಲ್ಲಿ ಆರ್‌ಐಎನ್ ಬಂಡಾಯದ ಪ್ರಸ್ತಾಪವನ್ನು ಮಾಡಿದ್ದಾರೆ: ಸುಮಿತ್ ಸರ್ಕಾರ್, ದಿ ಕಮ್ಯುನಿಸ್ಟ್ಸ್ ಅಂಡ್ 1942, ಸೋಷಿಯಲ್ ಸೈಂಟಿಸ್ಟ್, ನಂ. 136, 1984, ಪು. 47–48.

42. https://en.wikipedia.org/wiki/Royal_Indian_Navy_mutiny

43. https://www.cpimkerala.org/eng/struggles-72.php?n=1

44. ಡಿ.ಎನ್.ಧನಗೆರೆ, 2012, ಭಾರತದಲ್ಲಿ ರೈತ ಚಳುವಳಿಗಳು, ಪುಟ 185 ರಲ್ಲಿ ಉದೃತ, ಬಂಗಾಳ ಸರಕಾರ, ರಿಪೋರ್ಟ್ ಆಫ್ ದಿ ಬೆಂಗಾಲ್ ಪ್ರಾವಿನ್ಶಿಯಲ್ ಬ್ಯಾಂಕಿಂಗ್ ಎನ್‌ಕ್ವಯರಿ ಕಮಿಟಿ 1929–30, ಬಿಪಿಬಿಇಸಿ, 1 (ವರದಿ), ಕಲ್ಕತ್ತಾ, 1930, ಪುಟಗಳು 74–5, 89–94, 194.

45. ಪರಿಣಾಮವಾಗಿ, ಬಂಗಾಳದ ಕಿಸಾನ್ ಸಭಾದ ಸದಸ್ಯತ್ವ 1937 ರಲ್ಲಿ 11,080 ಇದ್ದದ್ದು, 1944 ರಲ್ಲಿ 1,77,629 ರಷ್ಟಾಯಿತು. ಡಿ.ಎನ್.ಧನಗೆರೆ, 2012, ಭಾರತದಲ್ಲಿ ರೈತ ಚಳುವಳಿಗಳು, ಪು. 191 ರಲ್ಲಿ ಉದೃತ, ಎಐಕೆಎಸ್, ಅರ್ಗನೈಸೇಷನಲ್ ರಿಪೋರ್ಟ್ಸ್, 1942–43, ಪು. 27, ಮತ್ತು 1943–44, ಪು. 8.

46. ಧನಗೆರೆ, op. cit., ಪು. 192 ರಲ್ಲಿ ಉದೃತ, ಎ.ಬೋಸ್ ಅಂಡ್ ಕೆ.ರಾಯ್, ಇನ್‌ಸೈಡ್ ಬೆಂಗಾಲ್ (1941–1944) ಫಾರ್ವರ್ಡ್ ಬ್ಲಾಕ್ ಅಂಡ್ ಇಟ್ಸ್ ಅಲೈಸ್ ವರ್ಸಸ್ ದಿ ಕಮ್ಯುನಿಸ್ಟ್ ಪಾರ್ಟಿ, ಬಾಂಬೆ, 1945, ಪು. 9–24.

47. 'ನಿಮ್ಮ ಫಸಲನ್ನು ನಿಮ್ಮದೇ ಬಣವೆಗಳಿಗೆ ಒಯ್ಯಿರಿ' (Nij Kholane Dhan Tolo), 'ಅರ್ಧವಲ್ಲ 2/3 ಭಾಗ ಬೇಕು' (Adhi Nai Tebhaga Chai), 'ಸಾಲದ ಭತ್ತಕ್ಕೆ ಬಡ್ಡಿ ಕೊಡಲ್ಲ' (Karja Dhaner Bari Nai), 'ಅಕ್ರಮವಾದ ಸಂಗ್ರಹ ಇಲ್ಲ' (Beani Adai Nai), 'ನಿಮ್ಮ ಫಸಲನ್ನು ಸಂಘಟಿತ ವಿಧಾನದಲ್ಲಿ ಕಟಾವು ಮಾಡಿ' (Dhal Bendhe Dhan Kato), 'ಸ್ವಯಂ ಸೇವಕ ಪಡೆಗಳನ್ನು ಕಟ್ಟಿರಿ' (Volunteer Bahini Gore Tolo), ಮುಂತಾದ ಬೇಡಿಕೆಗಳನ್ನು ಪ್ರಚಾರ ಮಾಡಲಾಯಿತು. (ಮಜುಂದಾರ್, ಅಶೋಕ್, 2011,

ದಿ ತೇಭಾಗ ಮೂವ್‌ಮೆಂಟ್, ಪೊಲಿಟಿಕ್ಸ್ ಆಫ್ ಪೆಸೆಂಟ್ ಪ್ರೊಟೆಸ್ಟ್ ಇನ್ ಬೆಂಗಾಲ್ 1946–1950, ಆಕಾರ್ ಬುಕ್ಸ್, ನ್ಯೂಡೆಲ್ಲಿ., ಪು. 67)

48. ಧನಗೆರೆ, op. cit., ಪು. 196 ರಲ್ಲಿ ಉದ್ಧೃತ, ಸೇನ್, ಅಗ್ರೇರಿಯನ್ ಸ್ಟ್ರಗಲ್ ಇನ್ ಬೆಂಗಾಲ್, ಪು. 63. ಒಟ್ಟು ಸಾವಿನ ಸಂಖ್ಯೆ ಹದಿನೈದಲ್ಲ, ಇಪ್ಪತ್ತು. ದಿ ಸ್ಟೇಟ್ಸ್‌ಮನ್, ಮಾರ್ಚ್, 1, 1947, ಪು. 5.)

49. ಧನಗೆರೆ, op. cit., ಪು. 194 ರಲ್ಲಿ ಉದ್ಧೃತ, ಎರಡು ಘಟನೆಗಳ ಪೂರ್ಣ ವಿವರಗಳಿಗಾಗಿ ನೋಡಿ, ಸೇನ್, ಅಗ್ರೇರಿಯನ್ ಸ್ಟ್ರಗಲ್ ಇನ್ ಬೆಂಗಾಲ್, ಪು. 64–6. ದಿ ಸ್ಟೇಟ್ಸ್‌ಮನ್, ಏಪ್ರಿಲ್ 6, 1947, ಪು. 7 ಮತ್ತು ಮೇ 22, 1947, ಪು. 7.


❖ ❖ ❖

ಅಧ್ಯಾಯ 3

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಕಮ್ಯುನಿಸ್ಟರು

ಕನ್ನಡ ಭಾಷಿಕ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿಯು ಬಾಂಬೆ, ಕಲ್ಕತ್ತಾ, ಮದ್ರಾಸ್ ಅಥವಾ ಲಾಹೋರ್‌ಗೆ ಹೋಲಿಸಿದರೆ ತಡವಾಗಿ ಆರಂಭವಾಗಿದೆ. ಭಾಷೆ ಆಧಾರದಲ್ಲಿ ಕರ್ನಾಟಕ ರಾಜ್ಯವು ರೂಪುಗೊಳ್ಳುವ ಮೊದಲು ಮೈಸೂರು ಸಂಸ್ಥಾನ, ಹೈದರಾಬಾದ್ ನಿಜಾಂ ಸಂಸ್ಥಾನ, ಮದ್ರಾಸ್ ಮತ್ತು ಮುಂಬೈ ಬ್ರಿಟಿಷ್ ಪ್ರಾಂತ್ಯಗಳು, ಕೊಡಗು ರಾಜ್ಯ ಮತ್ತು ಕೆಲವು ಸ್ವತಂತ್ರ ರಾಜ್ಯಗಳ ಆಡಳಿತಕ್ಕೆ ಒಳಪಟ್ಟಿತ್ತು. ಈ ಎಲ್ಲಾ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಚಳುವಳಿಯೂ ಸೇರಿದಂತೆ ಕಮ್ಯುನಿಸ್ಟ್ ಚಳುವಳಿಯು ವಿಭಿನ್ನ ಸ್ತರಗಳಲ್ಲಿ ಹಾಗೂ ವಿಭಿನ್ನ ನೆಲೆಗಳಲ್ಲಿ ಸಂಭವಿಸಿರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಸ್ವಾತಂತ್ರ್ಯ ಪೂರ್ವ ಅವಧಿಯಲ್ಲಿ ಕರ್ನಾಟಕದ ವಿವಿಧ ಸಂಸ್ಥಾನಗಳು ಮತ್ತು ಪ್ರಾಂತ್ಯಗಳಲ್ಲಿ ಕಮ್ಯುನಿಸ್ಟ್ ಚಳುವಳಿ ನಡೆದ ರೀತಿಯನ್ನು ಅಭ್ಯಸಿಸಲು ಪ್ರಯತ್ನಿಸಲಾಗಿದೆ. ವಿಭಿನ್ನ ಪ್ರಾಂತಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಘಟಕಗಳು ಹೇಗೆ ಪ್ರಾರಂಭಗೊಂಡವು ಎಂಬುದನ್ನು ದಾಖಲಿಸುತ್ತಲೇ, ಬೆಂಗಳೂರಿನ ಜನಜಾಗೃತಿ ಸಂಘದ ಮುಖಂಡರೇ ಕರ್ನಾಟಕದ ಮೊದಲ ಕಮ್ಯುನಿಸ್ಟ್ ಘಟಕವನ್ನು ಸ್ಥಾಪಿಸಿದ್ದರ ಕುರಿತು ಚರ್ಚಿಸಲಾಗಿದೆ. ವಿಭಿನ್ನ ಪ್ರಾಂತಗಳಲ್ಲಿ ಕಮ್ಯುನಿಸ್ಟರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ವಿಧಾನಗಳನ್ನು, ಅವರು ಸಂಘಟಿಸಿದ ಹೋರಾಟಗಳನ್ನು ಅಭ್ಯಸಿಸಲಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಆರಂಭಗೊಂಡ ಸಮೂಹ ಸಂಘಟನೆಗಳನ್ನು ಕರ್ನಾಟಕದ ವಿಭಿನ್ನ ಪ್ರಾಂತಗಳಲ್ಲಿ ಸಂಘಟಿಸಲಾದ ರೀತಿ ಮತ್ತು ಅದರ ಬೆಳವಣಿಗೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕಾರ್ಮಿಕ, ರೈತ ಮತ್ತು ವಿದ್ಯಾರ್ಥಿ ಸಂಘಟನೆಗಳೇ ಅಲ್ಲದೆ ಆಲ್ ಇಂಡಿಯಾ ಪ್ರೋಗ್ರೆಸ್ಸಿವ್ ರೈಟರ್ಸ್ ಅಸೋಸಿಯೇಷನ್ (ಎಐಪಿಡಬ್ಲ್ಯೂಎ) ಮತ್ತು ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ (ಇಪ್ಟಾ)ಗಳ ಮೂಲಕ ತೊಡಗಿಸಿಕೊಂಡ ಆರಂಭಿಕ ಕಮ್ಯುನಿಸ್ಟರು ಸ್ವಾತಂತ್ರ್ಯ ಹೋರಾಟಕ್ಕೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಆಯಾಮವನ್ನು ನೀಡುವಲ್ಲಿನ ಪಾತ್ರವನ್ನು ಗುರುತಿಸಲು ಪ್ರಸ್ತುತ ಅಧ್ಯಯದಲ್ಲಿ ಪ್ರಯತ್ನಿಸಲಾಗಿದೆ.

ವಿಭಿನ್ನ ಪ್ರಾಂತಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಪ್ರಭಾವ



ಸಿ.ಬಿ.ಮೊಣ್ಣಯ್ಯ

ಮೈಸೂರು ಸಂಸ್ಥಾನದಲ್ಲಿ ಮೊದಲಿಗೆ ಕಮ್ಯುನಿಸಂನ ಬೀಜಗಳನ್ನು ಬಿತ್ತಿದವರೆಂದರೆ ಚಕ್ಕೇರ ಬಿದ್ದಪ್ಪ ಮೊಣ್ಣಯ್ಯ[1]. ವಿದ್ಯಾಭ್ಯಾಸವನ್ನು ತ್ಯಜಿಸಿ ಅಸಹಕಾರ ಚಳುವಳಿಯಲ್ಲಿ ಕಾರವಾರ ಮತ್ತು ಬಿಜಾಪರಗಳಲ್ಲಿ ಜೈಲುವಾಸ ಅನುಭವಿಸಿದರು. ಅವರು 1933 ರಲ್ಲಿ ಮತ್ತೆ ಬಂಧನಕ್ಕೊಳಗಾದರು. ನಂತರ ಅವರಿಗೆ ಕಣ್ಣಾನೂರು ಜೈಲಿನಲ್ಲಿ ಇಎಂಎಸ್ ನಂಬೂದಿರಿಪಾದ್ ಅವರ ಸಂಪರ್ಕವಾಯಿತು. 1936 ರಲ್ಲಿ ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ

ಸ್ವಯಂಸೇವಕರಾಗಿ ಹೋದಾಗ ಅಲ್ಲಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ದೊರೆಯಿತು. 1936 ರ ಅಕ್ಟೋಬರ್‌ನಲ್ಲಿ ಅವರು ಬೆಂಗಳೂರಿಗೆ ಬಂದಾಗ ಉಳಿಯಲು ಕಣ್ಣಾನೂರು ಜೈಲಿನ ಸಹಪಾಠಿ ಕೋಲಾರ ಜಿಲ್ಲೆ ಶ್ರೀನಿವಾಸಪುರದ ಸಂಪ್ರತಿ ಶ್ರೀಕಂಠರೊಂದಿಗೆ ವ್ಯವಸ್ಥೆ ಮಾಡಿಕೊಂಡಿದ್ದರು. ನಂತರ ಮೊಣ್ಣಯ್ಯನವರು ಮೈಸೂರಿನ ರಾಜಕೀಯ ಬೆಳವಣಿಗೆಗಳಲ್ಲಿ ಆಸಕ್ತಿ ವಹಿಸಿದರು. ಗಡೀಪಾರು ಆಜ್ಞೆ ಉಲ್ಲಂಘನೆ ಮಾಡಿದರೆಂಬ ಕಾರಣಕ್ಕೆ ಮೈಸೂರು ಮತ್ತು ಬೆಂಗಳೂರು ಜೈಲುಗಳಲ್ಲಿದ್ದು, ನಂತರ ಕೆ.ಜಿ.ಎಫ್. ಜೈಲಿನಲ್ಲಿ ಲಕ್ಷ್ಮಣ ಮೊದಲಿಯಾರ್ ಪರಿಚಯವಾಗಿ ಅವರ ಮೂಲಕ ಗುಪ್ತವಾಗಿ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿದರು. ದ್ವಿತೀಯ ಪ್ರಪಂಚ ಯುದ್ಧದ ಸಂದರ್ಭದಲ್ಲಿ ಯುದ್ಧ ವಿರೋಧಿ ಚಳುವಳಿಯ ಕಾರಣಕ್ಕಾಗಿ ಇವರ ವಿರುದ್ಧ **ಮೈಸೂರು ಪಿತೂರಿ ಮೊಕದ್ದಮೆ** ಹೂಡಲಾಗಿತ್ತು. ಈ ಮೊಕದ್ದಮೆಯಲ್ಲಿ ಮೊದಲ ಆರೋಪಿಯಾಗಿದ್ದ ಮೊಣ್ಣಯ್ಯನವರಿಗೆ ಶಿಕ್ಷೆಯಾಗಿ ಎರಡೂವರೆ ವರ್ಷ ಜೈಲುವಾಸ ಅನುಭವಿಸಿದರು. ಕೊಡಗಿನ ಪ್ರಮುಖ ಕಾರ್ಮಿಕ ನಾಯಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಕಾ.ಐ.ಆರ್.ಅಸ್ರಣ್ಣ ಅವರು ಹೇಳುವಂತೆ, ಮೊಣ್ಣಯ್ಯನವರು ಸ್ವಾತಂತ್ರ್ಯ ಹೋರಾಟಗಾರರೂ, ಕಮ್ಯುನಿಸ್ಟರೂ ಮತ್ತು ಕರ್ನಾಟಕ ಏಕೀಕರಣ ಚಳುವಳಿಯ ಮುಂಚೂಣಿ ನಾಯಕರೂ ಆಗಿದ್ದರು[2].

ಕಾರವಾರ ಜೈಲಿನಲ್ಲಿ ಮೊಣ್ಣಯ್ಯನವರಿಗೆ ಮೈಸೂರಿನ ಕೆ.ಶ್ರೀನಿವಾಸಮೂರ್ತಿಯವರು ಜೊತೆಗಾರರಾಗಿದ್ದರು. ಆ ವೇಳೆಗಾಗಲೇ ಅವರು ನಿಷೇಧಿತ ಕಮ್ಯುನಿಸ್ಟ್ ಪಕ್ಷದ ಸಂಪರ್ಕವನ್ನು ಪಡೆದಿದ್ದರು ಎನ್ನಲಾಗಿದೆ. ಅವರು ಮೊಣ್ಣಯ್ಯನವರೊಂದಿಗೆ ಚರ್ಚಿಸಿ ಮೈಸೂರು ಸಂಸ್ಥಾನದಲ್ಲಿ ಕಮ್ಯುನಿಸ್ಟ್ ಪಕ್ಷದ ಘಟಕವನ್ನು ಸ್ಥಾಪಿಸುವ ಅಭಿಪ್ರಾಯಕ್ಕೆ ಬಂದರು. ಈ ಯೋಜನೆಯಲ್ಲಿ ಇನ್ನೂ ಇಬ್ಬರು ಗೆಳೆಯರು ಕೂಡಿಕೊಂಡರು. ಈ ಪ್ರಕಾರವಾಗಿ, ..ಬಿ.ಮೊಣ್ಣಯ್ಯ, ಕೆ.ಶ್ರೀನಿವಾಸಮೂರ್ತಿ[3], ಅನಂತಸುಬ್ಬರಾವ್[4] ಮತ್ತು ಎಸ್.ವಿ.ನಾರಾಯಣಮೂರ್ತಿ ಇವರುಗಳು (ಶಂಕರನಾರಾಯಣ ರಾವ್ 1989: 52) 1936 ರ ನವೆಂಬರ್ ಅಂತ್ಯಕ್ಕೆ ಭೂಗತವಾಗಿ ಬೆಂಗಳೂರಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಕರ್ನಾಟಕದ ಪ್ರಥಮ ಘಟಕವನ್ನು ಪ್ರಾರಂಭಿಸಿದರು.

ಕಮ್ಯುನಿಸ್ಟ್ ಪಕ್ಷವನ್ನು ಬ್ರಿಟಿಷರು ನಿಷೇಧಿಸಿದ್ದ ಕಾರಣದಿಂದಾಗಿ ಇವರು ಬಹಿರಂಗವಾಗಿ ಯಾವುದೇ ಚಟುವಟಿಕೆ ಮಾಡುವಂತಿರಲಿಲ್ಲ. ಕಮ್ಯುನಿಸ್ಟ್ ಸಿದ್ಧಾಂತವನ್ನು ಜನರ ಬಳಿಗೆ ಕೊಂಡೊಯ್ಯಬೇಕಾದ ಮತ್ತು ಪಕ್ಷವನ್ನು ಕಟ್ಟಬೇಕಾದ ಉತ್ಸಾಹವಿತ್ತು. ನಿಷೇಧಕ್ಕೊಳಪಟ್ಟು ಇಂತಹ ಕೆಲಸವನ್ನು ಮಾಡುವ ವಿಧಾನದ ಬಗ್ಗೆ ಯೋಜಿಸುತ್ತಿರುವಾಗಲೇ ಬೆಂಗಳೂರಿನ ಚಾಮರಾಜಪೇಟೆಯ ಮುದುಕನ ಮದುವೆ ಪ್ರಸಂಗ (ಮುಂದೆ ವಿವರಿಸಿದೆ) ನಡೆಯಿತು. ಈ ಮದುವೆಯನ್ನು ವಿರೋಧಿಸುವುದರ ಮೂಲಕ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂದು ತೀರ್ಮಾನಿಸಿದರು. ಈ ಘಟನೆಯಿಂದ ಸಾಕಷ್ಟು ಜನ ಆಕರ್ಷಿತರಾಗಿದ್ದರೂ ಸಹ ಕಮ್ಯುನಿಸ್ಟ್ ಪಕ್ಷದ ಮೇಲೆ ಬಹಿಷ್ಕಾರವಿದ್ದುದರಿಂದ ಭಾಗವಹಿಸಿದವರ ಪೈಕಿ ಮುಖ್ಯವಾದವರು ಸೇರಿ ಜನಜಾಗೃತಿ ಸಂಘವನ್ನು ಆರಂಭಿಸಿದರು.

ಜನ ಜಾಗೃತಿ ಸಂಘದ ಚಟುವಟಿಕೆಗಳು ಮೂರು ವಿಭಿನ್ನ ಸ್ವರೂಪದ ತಿಳುವಳಿಕೆಯಿಂದ ಮೂಡಿವೆ. ಪ್ರಾಥಮಿಕವಾಗಿ ವಿದ್ಯಾರ್ಥಿಗಳನ್ನು ಮತ್ತು ಕಾರ್ಮಿಕರನ್ನು ಕೇಂದ್ರೀಕರಿಸಿ ಹೋರಾಟ ಮತ್ತು ಪ್ರಚಾರದಲ್ಲಿ


ಎನ್.ಡಿ.ಶಂಕರ್

ೂಡಗುವುದು, ಕಾಂಗ್ರೆಸ್ಸಿನೊಳಗೆ ಒತ್ತಡ ಗುಂಪಾಗಿ ಕೆಲಸ ಮಾಡುವುದು ಮತ್ತು ಾಂಗ್ರೆಸಿನ ಸಾಂಪ್ರದಾಯಿಕ ಶಕ್ತಿ ಮತ್ತು ಅಧಿಕಾರ ವಿಧಾನಗಳಿಗೆ ಬದಲಾಗಿ ಕಾರ್ಮಿಕ ರ್ಗದ ಸಂಘಟನೆಗಳೊಳಗೆ ಪ್ರಜಾಪ್ರಭುತ್ವ ಪರ್ಯಾಯವನ್ನು ಬೆಳೆಸುವುದು[5]. ಇಂತಹ ಂದು ತಿಳುವಳಿಕೆಗೆ ಮುಖ್ಯವಾಗಿ ಕಾರಣವಾದದ್ದು ಮೈಸೂರಿನ ರಾಷ್ಟ್ರೀಯವಾದಿ ಾಜಕೀಯದ ಕಣ್ಣೋಟ. ಮೈಸೂರು ಸಂಸ್ಥಾನದ ಆರ್ಥಿಕ ಮತ್ತು ಸಾಮಾಜಿಕ ಆಧುನೀಕರಣಕ್ಕೆ ಮೈಸೂರಿನ ಪ್ರಭುತ್ವವೇ ಮುಖ್ಯ ಚಾಲಕ ಶಕ್ತಿಯಾಗಿ ಇದ್ದು, ಇಂತಹ ಳೆವಣಿಗೆಯ ಕಣ್ಣೋಟಕ್ಕೆ ಕಾಂಗ್ರೆಸಿನ ಸೈದ್ಧಾಂತಿಕ ವಿರೋಧ ಬಹುತೇಕ ಇರಲಿಲ್ಲ. ್ರಿಟಿಷ್ ವಸಾಹತುಶಾಹಿ ಪ್ರಭುತ್ವದ ವಿರುದ್ಧ ನಡೆಸುವ ರಾಜಕೀಯ ಚಟುವಟಿಕೆಯನ್ನು, ್ಥಳೀಯ ಮಹಾರಾಜರ ಆಡಳಿತದ ವಿರುದ್ಧದ ದಾಳಿ ಎಂದು ಭಾವಿಸುವ ಸಂಭವವಿತ್ತು. ಹೀಗಾಗಿಯೇ ನಾಗರಿಕ ಅಸಹಕಾರ ಚಳುವಳಿಯ ಪ್ರಭಾವ ಮೈಸೂರು ಸಂಸ್ಥಾನದ ಕೆಲವರ ಮೇಲೆ ಬೀರಿದಾಗ, ಅಂತಹವರನ್ನು ಾಂಬೆ ಸಂಸ್ಥಾನದ ಪ್ರದೇಶಗಳಿಗೆ ತರಬೇತಿಗೆಂದು ಮತ್ತು ಚಟುವಟಿಕೆಗಳನ್ನು ನಡೆಸಲು ಕಳುಹಿಸಲಾಗುತ್ತಿತ್ತು. ಈ ರೀತಿ ಹೋದವರಲ್ಲಿ ಹಲವಾರು ಜನ ಜೈಲುಗಳಲ್ಲಿ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳ ಸಂಪರ್ಕಕ್ಕೆ ಂದರು. ಎನ್.ಡಿ.ಶಂಕರ್6,ಸಿ.ಬಿ.ಮೊಣ್ಣಯ್ಯ, ಎಸ್.ರಾಮಸ್ವಾಮಿ, ಕೆ.ಎಸ್.ಕುಮಾರನ್, ಎನ್.ಎನ್.ಚೆಂಡೂರ್, .ಆರ್.ಶ್ರೀನಿವಾಸ ಮೂರ್ತಿ, ಎಂ.ಎಸ್.ರಾಮರಾವ್ ಮತ್ತಿತರ ವಿದ್ಯಾವಂತ ಯುವಕರು ತಮ್ಮ ರಾಜಕೀಯ ಪ್ರಶಿಕ್ಷಣವನ್ನು ನಾಗರಿಕ ಅಸಹಕಾರ ಚಳುವಳಿಯಲ್ಲಿ ಪಡೆದವರು[7]. ಇವರಿಗೆ ಕಾಂಗ್ರೆಸ್‌ನ ರಚನಾತ್ಮಕ ಕೆಲಸಗಳಲ್ಲಿ ಚ್ಚಿನ ಆಸಕ್ತಿ ಉಳಿಯಲಿಲ್ಲ. ಕಾಂಗ್ರೆಸ್‌ನ ಬಂಡವಾಳಶಾಹಿ ರಾಷ್ಟ್ರೀಯವಾದಿಗಳ ಗುರಿ ಬಗ್ಗೆ ಅನುಮಾನಗಳು ಳೆದವು. ಹೀಗಾಗಿ ಇವರು ಪ್ರಧಾನವಾಗಿ ಬೆಂಗಳೂರು ಮತ್ತು ಮೈಸೂರನ್ನು ಕೇಂದ್ರೀಕರಿಸಿ ವಿದ್ಯಾರ್ಥಿಗಳು ಮತ್ತು ಾರ್ಮಿಕರ ನಡುವೆ ಕೆಲಸ ಮಾಡಲು ಆರಂಭಿಸಿದರು.

ಸಮಾಜವಾದಿ ಚಿಂತನೆಗಳು ಮತ್ತು ಕಾಂಗ್ರೆಸ್‌ನ ರಚನಾತ್ಮಕ ಕೆಲಸಗಳಿಂದ ಬೇಸತ್ತ, ಬಿಡಿಬಿಡಿಯಾಗಿ ಕೆಲಸ ಮಾಡುತ್ತಿದ್ದ ಯುವಕರು ಒಟ್ಟಿಗೆ ಸೇರಿ ಒಂದು ಸಂಘಟನಾ ಚೌಕಟ್ಟನ್ನು ನೀಡಲು ಯೋಜಿಸುತ್ತಿರುವ ಸಂದರ್ಭಕ್ಕೆ, 5 ವರ್ಷದ ಕಾಳಪ್ಪ ಎಂಬ ವಿಧುರನೊಂದಿಗೆ 16 ವರ್ಷದ ಯುವತಿಯ ಮದುವೆಯ ಪ್ರಕರಣ ಮುಂಚೂಣಿಗೆ ಂತು. ಇದನ್ನು ವಿರೋಧಿಸಿ, 1937 ರ ಮೇ 9 ರಂದು ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ಕಾಂಗ್ರೆಸಿನ ಬೆಂಬಲಿಗರೂ ೇರಿದಂತೆ ಸುಮಾರು 500 ಜನರ ಸಭೆ ನಡೆದು ಖಂಡಿಸಿದರು. ಅಲ್ಲದೆ, ಈ ಸಭೆಯಲ್ಲಿ, '50 ವರ್ಷಕ್ಕೆ ೕಲ್ಪಟ್ಟ ಯಾವುದೇ ಪುರುಷ 25 ಅಥವಾ 35 ವರ್ಷಕ್ಕಿಂತ ಕಡಿಮೆ ಇರುವ ಮಹಿಳೆಯನ್ನು ಮದುವೆಯಾಗಲು ವಕಾಶ ಇರಬಾರದು, ವಿಧವೆಯರು ಮರುಮದುವೆ ಆಗಲು ಅವಕಾಶ ನೀಡಬೇಕು, ಸಾರ್ವಜನಿಕರಿಗೆ ಮುಕ್ತವಾಗಿ ಮಾತನಾಡಲು ಅವಕಾಶ ಇರಬೇಕು,' ಮುಂತಾದ ನಿರ್ಣಯಗಳನ್ನು ಕೈಗೊಂಡರು[8].

ಇದಾದ ಕೂಡಲೇ ಇಂತಹ ಉದ್ದೇಶಗಳಿಗಾಗಿ ಕೆಲಸ ಮಾಡಲು ಒಂದು ಸಂಘಟನಾ ಚೌಕಟ್ಟು ಇರಬೇಕೆಂದು ೕರ್ಮಾನಿಸಿ ಜನ ಜಾಗೃತಿ ಸಂಘವನ್ನು ರಚಿಸಿದರು9. ಇದರ ನಿರ್ವಹಣಾ ಸಮಿತಿಯಲ್ಲಿ ಎಂ.ಎಸ್.ರಾಮರಾವ್,

ಸಿ.ಬಿ.ಮೊಣ್ಣಯ್ಯ, ಎಸ್.ವಿ.ನಾರಾಯಣಮೂರ್ತಿ, ಹೆಚ್.ಸಿ.ಶಿವಾನಂದ ಶರ್ಮ[10], ಎನ್.ಎಸ್.ಕೃಷ್ಣಮೂರ್ತಿ ಮತ್ತು ಎನ್.ಡಿ.ಶಂಕರ್ ಇವರುಗಳು ಸದಸ್ಯರಾಗಿ ಮತ್ತು ಕೆ.ಶ್ರೀನಿವಾಸಮೂರ್ತಿ ಸಂಘದ ಕಾರ್ಯದರ್ಶಿಯಾಗಿ ಇದ್ದರು. ಇವರ ಪೈಕಿ ಎನ್.ಎಸ್.ಕೃಷ್ಣಮೂರ್ತಿ, ಕೆ.ಶ್ರೀನಿವಾಸಮೂರ್ತಿ ಮತ್ತು ಎನ್.ಡಿ.ಶಂಕರ್ ಇವರುಗಳು ಬಾಂಬೆ ಪ್ರೆಸಿಡೆನ್ಸಿಯಿಂದ ಗಡೀಪಾರಾಗಿ ಬಂದವರಾಗಿದ್ದರು, ಸಿ.ಬಿ.ಮೊಣ್ಣಯ್ಯ 'ರಾಜಕೀಯ ಅಪರಾಧಿ'ಯಾಗಿದ್ದರು ಮತ್ತು ಕೊಡಗು ಮೂಲದವರಾಗಿದ್ದರು[11]. 'ಕೆಲವು ಸಾಮಾಜಿಕ ಸುಧಾರಣೆಗಳನ್ನು ಸಾಧಿಸುವುದು ಸಂಘದ ಉದ್ದೇಶ'ವೆಂದು ಅದರ ಉದ್ಘಾಟನಾ ಹೇಳಿಕೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀನಿವಾಸ ಮೂರ್ತಿ ಪ್ರಕಟಿಸಿದ್ದರು. ನಂತರ ನಡೆದ ಸಭೆಗಳಲ್ಲಿ ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿ ವಿವಿಧ ಸಂಘಟನೆಗಳನ್ನು ಆರಂಭಿಸುವ ಕುರಿತು ಚರ್ಚಿಸಿ, ನ್ಯಾಷನಲ್ ಯೂತ್ ಲೀಗ್, ಸಿವಿಲ್ ಲಿಬರ್ಟೀಸ್ ಯೂನಿಯನ್[12] ಮಲ್ಲೇಶ್ವರಂ ಲೇಬರರ್ಸ್ ಕ್ಲಬ್ ಮುಂತಾದ ಸಂಘಟನೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿದರು[13]. ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ತೆರಿಗೆ ಹೆಚ್ಚಳದ ವಿರುದ್ಧ, ಮತ್ತು ಮೈಸೂರು ಹೊರಗಿನ ಭಾಷಣಕಾರರ ವಿರುದ್ಧ ಸರ್ಕಾರ ಹೇರಿದ್ದ ನಿಷೇದಾಜ್ಞೆಯನ್ನು ಖಂಡಿಸಿ ಜನಜಾಗೃತಿ ಸಂಘ ಪ್ರತಿಭಟನೆಗಳನ್ನು ನಡೆಸಿತು. ಅತ್ಯಂತ ಹೀನಸ್ಥಿತಿಯಲ್ಲಿದ್ದ ಕಾರ್ಮಿಕರ ಮನೆಗಳಿಗೆ ಬಾಡಿಗೆಯನ್ನು ರೂ.1/8 ರಿಂದ ರೂ.2/8 ಕ್ಕೆ ಏರಿಕೆ ಮಾಡಿದ್ದರ ವಿರುದ್ಧ ಮಲ್ಲೇಶ್ವರಂ ಲೇಬರರ್ಸ್ ಕ್ಲಬ್ ಜೊತೆ ಸೇರಿ ಪ್ರತಿಭಟನೆಯನ್ನು ನಡೆಸಲು ತೀರ್ಮಾನಿಸಿದಾಗ ಸರ್ಕಾರ ಮೈಸೂರು ಪೊಲೀಸ್ ರೆಗ್ಯುಲೇಷನ್ ಸೆಕ್ಷನ್ 45 ನ್ನು ಬಳಸಿ ಮೂರು ತಿಂಗಳ ಕಾಲ ಯಾವುದೇ ಪ್ರತಿಭಟನೆಗಳನ್ನು ನಿಷೇಧಿಸಿತು. ಆದರೂ ಪ್ರತಿಭಟನೆ ನಡೆಸಿದವರನ್ನು ಬಂಧಿಸಿಲಾಯಿತು. ಮೊಣ್ಣಯ್ಯನವರು ಸಿದ್ಧಪಡಿಸಿದ್ದ ಕರಪತ್ರಗಳನ್ನು ಬೆಂಬಲಿಸಿ ಮೈಸೂರಿನಲ್ಲಿ ವಿದ್ಯಾರ್ಥಿಗಳು ಹರತಾಳವನ್ನು ನಡೆಸಿದರು[14]. ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಅಬ್ರಾಹ್ಮಣ ವೈರುಧ್ಯಗಳು ತೀವ್ರವಾಗಿದ್ದ ಸಂದರ್ಭದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಪ್ರಚಾರವನ್ನು ಆರಂಭಿಸಿದರು. ಕೆ.ಶ್ರೀನಿವಾಸಮೂರ್ತಿ ಬರೆದಿದ್ದ 'ಜವಾಬ್ದಾರಿ ಸರ್ಕಾರ' ಎಂಬ ಇಪ್ಪತ್ತೆಂಟು ಅಂಶಗಳ ಕಿರುಹೊತ್ತಗೆಯ ಸಾವಿರಾರು ಪ್ರತಿಗಳನ್ನು ಹಂಚಿದರು[15]. ಅದನ್ನೇ ನವಜೀವನ ಪತ್ರಿಕೆಯು ಮರುಪ್ರಕಟಿಸಿ ಜನಜಾಗೃತಿ ಸಂಘವನ್ನು ಅಭಿನಂದಿಸಿತು. ಹೀಗೆ ಆರಂಭವಾದ ಕೆಲವೇ ದಿನಗಳಲ್ಲಿ ಸಂಘದ ಅಸ್ತಿತ್ವದ ಛಾಪು ನಗರದಲ್ಲಿ ಮೂಡಿತು (ಭೀಮಯ್ಯ 2009: 18). ಈ ಚಟುವಟಿಕೆಗಳ ಜೊತೆಗೆ ವಿದ್ಯಾರ್ಥಿಗಳಿಗೆ ಸಂಜೆ ಅಭ್ಯಾಸ ಗುಂಪುಗಳನ್ನು ರಚಿಸಿದರು. ಜೊತೆಯಲ್ಲೇ ಎಡ ಸಾಹಿತ್ಯದ ಓದು ಮತ್ತು ಭಾಷಾಂತರವನ್ನೂ ನಡೆಸಿದರು. ಎಸ್.ವಿ.ನಾರಾಯಣ ಮೂರ್ತಿ, ಸಿ.ಬಿ.ಮೊಣ್ಣಯ್ಯ, ಕೆ.ಶ್ರೀನಿವಾಸ ಮೂರ್ತಿ ಮತ್ತು ಎಸ್.ವಿ.ರಾಮಣ್ಣ ಇವರುಗಳು ಬೆಂಗಳೂರು, ಮೈಸೂರು ಮತ್ತು ಭದ್ರಾವತಿಯ ಫ್ಯಾಕ್ಟರಿಗಳು, ವರ್ಕ್‌ಶಾಪ್‌ಗಳು ಮತ್ತು ಹೋಟೆಲುಗಳಲ್ಲಿದ್ದ ಕಾರ್ಮಿಕರ ನಡುವೆ ಕಮ್ಯುನಿಸ್ಟ್ ಸಾಹಿತ್ಯವನ್ನು ಪ್ರಸಾರ ಮಾಡಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು[16]. ಕೆಜಿಎಫ್‌ನಲ್ಲಿ 1940 ರ ನಂತರ ಮೊದಮೊದಲ ಕಾರ್ಮಿಕ ಸಂಘವನ್ನು ಕಟ್ಟುವಲ್ಲಿ ಆಸಕ್ತಿ ವಹಿಸಿದವರಲ್ಲಿ ಮೊಣ್ಣಯ್ಯನವರೂ ಒಬ್ಬರು[17]. ಇದಕ್ಕೂ ಮೊದಲೇ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಪ್ರದೇಶದಲ್ಲಿದ್ದ ಟೊಬ್ಯಾಕೊ ಫ್ಯಾಕ್ಟರಿ ಕಾರ್ಮಿಕರ ಮುಷ್ಕರದಲ್ಲಿ ಎನ್.ಎನ್.ಚೆಂಡೂರ್[18] ಮತ್ತು ಡಾ.ರಂಗಸ್ವಾಮಿ[19] ಅವರು ಸಕ್ರಿಯವಾಗಿ ಭಾಗವಹಿಸಿದರು. ಕಾರ್ಮಿಕರನ್ನು ಸಂಘಟಿಸುವುದು, ಮುಷ್ಕರನಿರತ

ಕುಟುಂಬಗಳಿಗೆ ಆಹಾರವನ್ನು ಪೂರೈಸುವುದು ಮತ್ತು ಪತ್ರಿಕೆಗಳಲ್ಲಿ ಇದರ ಸುದ್ದಿಗಳು ಪ್ರಕಟವಾಗುವಂತೆ ಮಾಡುವ ಕೆಲಸಕ್ಕೆ ಇವರು ತೊಡಗಿಸಿಕೊಂಡರು. ರಾಜಕೀಯವಾಗಿ ತಮಗೆ ಅನಾನುಕೂಲಕರ ಎಂಬ ಕಾರಣಕ್ಕೆ ಕಾಂಗ್ರೆಸ್ ಈ ಹೋರಾಟದಿಂದ ಹಿಂದೆ ಸರಿಯಿತು. ಇಂತಹ ಸ್ವತಂತ್ರ ಮಧ್ಯಪ್ರವೇಶಗಳಿಂದ ಎಡ ಶಕ್ತಿಗಳು ಕಾರ್ಮಿಕ ವರ್ಗದ ನಡುವೆ ಗಟ್ಟಿಗೊಳ್ಳಬಹುದಾದ ಸಾಧ್ಯತೆಯಿತ್ತು. ಆದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳ ಪರಿಣಾಮವಾಗಿ, ಎಡಪಂಥೀಯರು ಪ್ರಜಾಸತ್ತಾತ್ಮಕ ಸಂಯುಕ್ತ ರಂಗವನ್ನು ಕಟ್ಟಬೇಕೆನ್ನುವ ಒತ್ತಡಕ್ಕೆ ಒಳಗಾದರು[20]. ದೇಶದ ಇತರೆಡೆಗಳಲ್ಲಿ ಈ ಕಾರ್ಯವ್ಯೂಹವು ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಮತ್ತು ಬುದ್ಧಿಜೀವಿಗಳ ನಡುವೆ ಸಾಕಷ್ಟು ಫಲವನ್ನು ನೀಡಿತ್ತು.

> ರಾಜ್ಯದೊಳಗೆ ಕಾಂಗ್ರೆಸ್‌ನ್ನು ಸಕ್ರಿಯಗೊಳಿಸಲು ಮತ್ತು ಗಟ್ಟಿಗೊಳಿಸಲು, ಕಾಂಗ್ರೆಸ್‌ನೊಳಗಿರುವ ಯುವ ಮತ್ತು ಕ್ರಾಂತಿಕಾರಕ ಶಕ್ತಿಗಳನ್ನು ಒಳಗೊಂಡು ಜನ ಜಾಗೃತಿ ಸಂಘವನ್ನು ರಚಿಸಲಾಗಿದೆ. ಮುಖ್ಯ ಕಾಂಗ್ರೆಸ್ ಬಲಿಷ್ಟವಾಗಿಲ್ಲದ ಕಾರಣದಿಂದ, ಕಾಂಗ್ರೆಸ್ ಸಮಾಜವಾದಿ ಪಕ್ಷ ರಚನೆಯನ್ನು ತಡ ಮಾಡಲಾಗಿದೆ. ಈ ನಡುವೆ ಜನ ಜಾಗೃತಿ ಸಂಘವು ಸಮಾಜವಾದಿ ಚಿಂತನೆಗಳನ್ನು ಹರಡಲಿದೆ[21]

ಎಂದು ಜನ ಜಾಗೃತಿ ಸಂಘದ ಕಾರ್ಯದರ್ಶಿ ಕೆ.ಆರ್.ಶ್ರೀನಿವಾಸಮೂರ್ತಿ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೆ ಬರೆದ ಪತ್ರದ ಸಾರಾಂಶ ಈ ನಿಲುವನ್ನು ಪ್ರತಿಫಲಿಸುತ್ತಿತ್ತು.

ಹೀಗಾಗಿ ಜನ ಜಾಗೃತಿ ಸಂಘವು ಸ್ವತಂತ್ರವಾದ ಚಟುವಟಿಕೆಗಳಿಗೆ ಪ್ರಾಶಸ್ತ್ಯ ನೀಡಿತು. 1937 ರಲ್ಲಿ ವೈಸ್‌ರಾಯ್ ಲಿನ್‌ಲಿತ್‌ಗ್ಲೋ ಭೇಟಿಯನ್ನು ವಿರೋಧಿಸಿ ಪ್ರತಿಭಟನೆಯನ್ನು ಏರ್ಪಡಿಸುವುದರಲ್ಲಿ ಮೊಣ್ಣಯ್ಯನವರು ಪ್ರಮುಖ ಪಾತ್ರ ವಹಿಸಿದರು. ಇದೇ ವರ್ಷ ಬೆಂಗಳೂರಿಗೆ ನಾರಿಮನ್ ಭೇಟಿ[22] ನೀಡಿದ್ದ ಸಂದರ್ಭದಲ್ಲಿ ಉಂಟಾಗಿದ್ದ ಗಲಭೆಗಳಲ್ಲಿ ಸತ್ತ ನೇಕಾರ ಗುಂಡಪ್ಪ ಎಂಬುವರ ಕುಟುಂಬಕ್ಕೆ ನಿಧಿ ಸಂಗ್ರಹದ ಪ್ರಚಾರವನ್ನು ನಡೆಸಿದ್ದರಿಂದ ಮೊಣ್ಣಯ್ಯನವರನ್ನು ಗಡೀಪಾರು ಮಾಡಲಾಯಿತು[23]. ಅದೇ ವರ್ಷದ ಆಗಸ್ಟ್‌ನಲ್ಲಿ ಅಂಡಮಾನ್ ಜೈಲಿನ ಯೋಧರನ್ನು ಬಿಡುಗಡೆ ಮಾಡಲು ಒತ್ತಾಯಿಸಿ 'ಅಂಡಮಾನ್ ಡೇ' ಮತ್ತು ಅದೇ ದಿನ ದೇಶೀ ರಾಜರ ಸಂಸ್ಥಾನಗಳಲ್ಲಿ 'ಸ್ಟೇಟ್ಸ್ ಪೀಪಲ್ಸ್ ಡೇ' ಆಚರಣೆ ಭಾಗವಾಗಿ ನ್ಯಾಷನಲ್ ಯೂತ್‌ಲೀಗ್‌ನೊಡನೆ ಸೇರಿ ವಿದ್ಯಾರ್ಥಿಗಳ ಮುಷ್ಕರ ನಡೆಸಿದ್ದರಿಂದ ಮೊಣ್ಣಯ್ಯ, ಎಸ್.ವಿ.ನಾರಾಯಣಮೂರ್ತಿ ಮತ್ತು ಸವಾಯ್ ಅಶ್ವಥ್‌ರನ್ನು ಹತ್ತು ದಿನ ಜೈಲಿನಲ್ಲಿಟ್ಟಿದ್ದರು (ಭೀಮಯ್ಯ 2009: 19). 1938 ರಷ್ಟೊತ್ತಿಗೆ ಜನ ಜಾಗೃತಿ ಸಂಘವನ್ನು ಕಮ್ಯುನಿಸ್ಟ್ ಘಟಕವೆಂದು ಸರ್ಕಾರ ತೀರ್ಮಾನಿಸಿತು. ಮೈಸೂರಿನ ದಿವಾನರು ಸಂಘವನ್ನು ಮೈಸೂರು ರಾಜ್ಯದಲ್ಲಿ ನಿಷೇಧಿಸಿದರು. ಮೈಸೂರು ನಗರ ಜನ ಜಾಗೃತಿ ಸಂಘದ ಸದಸ್ಯರಾದ ಎನ್.ಡಿ.ಶಂಕರ್ ಮತ್ತು ಅವರ ಇಬ್ಬರು ಗೆಳೆಯರಾದ ಟಿ.ಎಸ್.ಸುಬ್ಬಣ್ಣ, ಎಂ.ಎನ್.ರಾಜಶೇಖರ್ ಮತ್ತು ಎಸ್.ರಾಮಸ್ವಾಮಿ ಇವರುಗಳು ಮೈಸೂರಿನಲ್ಲಿ ಭಾಷಣ ಮಾಡುವುದನ್ನು ಸರ್ಕಾರ ನಿಷೇಧಿಸಿತು.

ಕಾಂಗ್ರೆಸ್‌ನ್ನು ಕ್ರಾಂತಿಕಾರಕಗೊಳಿಸುವ ಉದ್ದೇಶವನ್ನು ಪ್ರಕಟಿಸಿದ್ದ ಜನ ಜಾಗೃತಿ ಸಂಘದ ಮುಖಂಡರನ್ನು ಕಾಂಗ್ರೆಸ್‌ನ ನಾಯಕರು ಅನುಮಾನದಿಂದಲೇ ನೋಡುತ್ತಿದ್ದರು. ಅವರಿಗೆ ಕ್ರಾಂತಿಕಾರಿ ಕಾಂಗ್ರೆಸ್‌ನವರೊಂದಿಗೆ ಕೆಲಸ ಮಾಡುವುದು ಭಯವನ್ನುಂಟು ಮಾಡಿತ್ತು. ಖಾದಿ ಧರಿಸುವುದಿಲ್ಲವೆಂಬ ಕಾರಣಕ್ಕೆ ಕಾಂಗ್ರೆಸ್‌ನ ತ್ರಿಪುರಿ ಅಧಿವೇಶನಕ್ಕೆ ಪ್ರತಿನಿಧಿಯಾಗಲು ಅರ್ಹರಲ್ಲ ಎಂಬುದಾಗಿ ಕೆಂಗಲ್ ಹನುಮಂತಯ್ಯನವರು ಎನ್.ಡಿ.ಶಂಕರ್‌ಗೆ ಪತ್ರ ಬರೆದಿದ್ದರು. ಎನ್.ಡಿ.ಶಂಕರ್ ಇದನ್ನು ಪ್ರತಿಭಟಿಸಿದರು ಮತ್ತು ಒಂದು ಬೃಹತ್ ಉದ್ದೇಶಕ್ಕಾಗಿ ತಮ್ಮ ವ್ಯಕ್ತಿತ್ವವನ್ನು ಪಕ್ಕಕ್ಕಿಡುವುದಾಗಿ ಹೇಳಿ ಹತ್ತು ವರ್ಷಗಳ ಕಾಲ ಖಾದಿ ಧರಿಸಿದರು[24]. ಇದೇನೇ ಆದರೂ, ಜನ ಜಾಗೃತಿ ಸಂಘವು ಹಲವಾರು ಸಂದರ್ಭಗಳಲ್ಲಿ ಕಮ್ಯುನಿಸಂ ಪರವಾಗಿದ್ದ ತನ್ನ ನಿಲುವುಗಳನ್ನು ಪ್ರದರ್ಶಿಸಿತು. ಬೆಂಗಳೂರಿನಲ್ಲಿ ಕಮ್ಯುನಿಸ್ಟ್ ದಿನಾಚರಣೆಯನ್ನು ಮತ್ತು ವಿಶ್ವ ಕಾರ್ಮಿಕರ ದಿನವಾದ 'ಮೇ ದಿನ'ವನ್ನು ಆಚರಿಸಿತು ಮತ್ತು ಕುಡುಗೋಲು ಸುತ್ತಿಗೆಯ ಬಾವುಟಗಳನ್ನು ಹಾರಿಸಲು ಪ್ರಯತ್ನಿಸಿತು[25].ಕಾಂಗ್ರೆಸ್‌ನವರಿಂದ ಹೆಚ್ಚುತ್ತಿದ್ದ ದಾಳಿಗಳನ್ನು ಎದುರಿಸಲು ಎಸ್.ರಾಮಸ್ವಾಮಿಯವರು 1939 ರ ಮಧ್ಯಭಾಗದಲ್ಲಿ ಅಖಿಲ ಕರ್ನಾಟಕ ಸಮಾಜವಾದಿ ಸಮ್ಮೇಳನವನ್ನು ಕರೆದರು. ಮೈಸೂರು ಪ್ರಭುತ್ವದ ದಮನಕಾರಿ ಕ್ರಮಗಳ ಸಂದರ್ಭದಲ್ಲೂ ಒಂದು ಸಣ್ಣ ಸಭೆ ನಡೆಯಿತು ಮತ್ತು ಎನ್.ಡಿ.ಶಂಕರ್, ಕೆ.ಎಸ್.ಕುಮಾರನ್, ಎಸ್.ರಾಮಸ್ವಾಮಿ ಮುಂತಾದವರನ್ನು ದೇಶದ್ರೋಹಿ ಭಾಷಣಗಳ ಹೆಸರಿನಲ್ಲಿ ಬಂಧಿಸಿ ಎರಡು ವರ್ಷಗಳ ಕಠಿಣ ಶಿಕ್ಷೆಗೆ ಒಳಪಡಿಸಲಾಯಿತು[26].

ಕಾಂಗ್ರೆಸ್‌ನೊಳಗೆ ಹಿಂದೂ ಕೋಮುವಾದಕ್ಕೆ ಸಿಗುತ್ತಿರುವ ಬೆಂಬಲದ ಬಗ್ಗೆ ಜನಜಾಗೃತಿ ಸಂಘದ ಮುಖಂಡರು ವಿರೋಧ ವ್ಯಕ್ತಪಡಿಸಿದರು. ಶಂಕರ್ ಅವರು ಈ ಬಗ್ಗೆ 1938 ರಲ್ಲಿ ತಾಯ್ನಾಡು ಪತ್ರಿಕೆಯಲ್ಲಿ ಬಹಿರಂಗ ಪತ್ರವನ್ನು ಬರೆದರು. ಕಾಂಗ್ರೆಸ್‌ನ ಮುಖಂಡರಾಗಿದ್ದ ರಾಮ್‌ಲಾಲ್ ತಿವಾರಿ, ಹಿಂದೂ ಮಹಾಸಭಾ ಮತ್ತು ಆರ್ಯನ್ ಡಿಫೆನ್ಸ್ ಲೀಗ್ ಜೊತೆ ಹೊಂದಿದ್ದ ಕಾರಣಕ್ಕೆ ಅವರನ್ನು ಕಾಂಗ್ರೆಸ್‌ನಿಂದ ಹೊರಹಾಕಬೇಕೆಂದು ಹೇಳಿದರು. ಆದರೆ ಅದು ಸಂಭವಿಸಲಿಲ್ಲ, ಬದಲಿಗೆ ಎಡ–ಪಂಥೀಯ ಕ್ರಾಂತಿಕಾರಿ ಎಂಬ ಕಾರಣಕ್ಕೆ ಕೆ.ಬಿ.ಶ್ರೀನಿವಾಸ್ ಅವರನ್ನು ಮೈಸೂರು ಕಾಂಗ್ರೆಸ್‌ನ ಪ್ರತಿನಿಧಿಯಾಗದಂತೆ ತಿರಸ್ಕರಿಸಲಾಯಿತು[27]. ಈ ರೀತಿಯಾಗಿ ಕಾಂಗ್ರೆಸ್‌ನೊಳಗೆ ಹಿಂದೂ ಕೋಮುವಾದ ಆಳಕ್ಕೆ ಇಳಿದಿತ್ತು. ಇದೇ ರೀತಿ ಕಾಂಗ್ರೆಸ್‌ನ ಮುಖಂಡರು ಫ್ಯಾಕ್ಟರಿಗಳ ಮಾಲೀಕರಾಗಿದ್ದು ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಡೆಗಣಿಸುತ್ತಿರುವ ಬಗ್ಗೆಯೂ ಇವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು. ಕಾರ್ಮಿಕ ಸಂಘಗಳ ಕಾಯ್ದೆಯನ್ನು ಜಾರಿಗೊಳಿಸಬೇಕೆನ್ನುವ ಬಗ್ಗೆ ಕಠಿಣ ಒತ್ತಾಯ ಇರಲಿಲ್ಲ. ಬಹಿರಂಗವಾಗಿ ಕಾರ್ಮಿಕರ ಪರವಾಗಿ ಮಾತನಾಡಿದಂತೆ ಮಾಡುತ್ತಾ, ಮಾಲೀಕ ವರ್ಗಕ್ಕೆ ಮೂಲಭೂತವಾಗಿ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ಕೆ.ಟಿ.ಭಾಷ್ಯಂ ಒಳಗೊಂಡಂತೆ ಕಾಂಗ್ರೆಸ್ ಕಾರ್ಮಿಕ ಮುಖಂಡರ ಧೋರಣೆಯಿತ್ತು[28]. ಇಂತಹ ಧೋರಣೆಗೆ ಮುಖ್ಯವಾಗಿ ಕೆಲವು ಕಾಂಗ್ರೆಸ್ ನಾಯಕರು ಸ್ವತಃ ಮಿಲ್ ಮಾಲೀಕರಾಗಿದ್ದುದು ಕಾರಣವಾಗಿದ್ದರೆ, ಮತ್ತೊಂದು ಕಡೆ ಮಿಲ್ ಮಾಲೀಕರಿಂದ ಮತ್ತು ಬಂಡವಾಳದಾರರಿಂದ ಕಾಂಗ್ರೆಸ್ ನಿಧಿಯನ್ನು ಪಡೆಯುತ್ತಿತ್ತು. ಹೀಗಾಗಿ ಕಾಂಗ್ರೆಸ್ ಕಾರ್ಮಿಕ ಮುಖಂಡರು ಕಾರ್ಮಿಕ ಸಂಘಗಳನ್ನು ಸಾಮ್ರಾಜ್ಯಶಾಹಿ–ವಿರೋಧಿ ಕಾರಣಕ್ಕಾಗಿ ಬಳಸಿದರೇ ಹೊರತು ಅದನ್ನು ಕಾರ್ಮಿಕರ ಪ್ರಜಾಪ್ರಭುತ್ವ ಆಶಯಗಳ ಕಾರಣಕ್ಕಾಗಿ ಬಳಸಲಿಲ್ಲ ಎಂಬುದನ್ನು ಗಮನಿಸಬೇಕು.

ಇಂತಹ ವಿಧಾನಗಳ ವಿರುದ್ಧ ಜನ ಜಾಗೃತಿ ಸಂಘವು ಒಂದು ಪರ್ಯಾಯ ಎಂಬುದನ್ನು ಕಾರ್ಮಿಕರು ಪರಿಗಣಿಸುತ್ತಿದ್ದರು ಎಂಬುದಕ್ಕೆ ಬಿನ್ನಿ ಮಿಲ್ ಹೋರಾಟವನ್ನು ಗಮನಿಸಬಹುದು. ಬಿನ್ನಿ ಮಿಲ್ ಆಡಳಿತವು 6 ತಿಂಗಳ ಬೋನಸ್‌ನ್ನು ಕಂಪನಿಯ ಲಾಭಾಂಶಕ್ಕೆ ತಳಕು ಹಾಕಿದ್ದರ ವಿರುದ್ಧ ಕಾರ್ಮಿಕರು ಮೂರನೇ ಬಾರಿ ಮುಷ್ಕರವನ್ನು ಹೂಡಿದರು. ದಿವಾನರು ಮತ್ತು ಕಾಂಗ್ರೆಸ್‌ನ ಏನೆಲ್ಲಾ ಭರವಸೆಗಳ ನಡುವೆಯೂ ಮಿಲ್ ಕಾರ್ಮಿಕರು ಎನ್.ಡಿ.ಶಂಕರ್, ಕೆ.ಎಸ್.ಕುಮಾರನ್ ಮತ್ತು ಎಂ.ಎಸ್.ರಾಮರಾವ್ ಅವರನ್ನು 1941 ರ ಜನವರಿ 20 ರಂದು ಸಂಪೂರ್ಣ ಮುಷ್ಕರದ ನಾಯಕತ್ವ ವಹಿಸಿಕೊಳ್ಳಲು ಆಹ್ವಾನಿಸಿದರು. ಶಂಕರ್ ಕಾರ್ಯದರ್ಶಿಯಾಗಿ 40 ಜನರ ಮುಷ್ಕರ ಸಮಿತಿಯನ್ನು ರಚಿಸಿ, 25 ದಿನಗಳ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದರು. ಫೆಬ್ರವರಿ 14 ರಂದು ಮುಗಿದ ಮುಷ್ಕರದಿಂದ ಸಂಘದ ಮಾನ್ಯತೆ ಗಳಿಸಲು ಸಾಧ್ಯವಾಯಿತು[29]. ಯುದ್ಧ ಸಂದರ್ಭದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಆದೇಶದ ಅನುಸಾರವಾಗಿ ಮೈಸೂರು ರಾಜ ಪ್ರಭುತ್ವವು ಮೂವರು ಕಮ್ಯುನಿಸ್ಟ್ ಮುಖಂಡರನ್ನು ಒಂದು ವರ್ಷದ ಕಾಲ ಗಡೀಪಾರು ಮಾಡಿತು. ಆಗ ಮತ್ತೆ ಕೆ.ಟಿ.ಭಾಷ್ಯಂ ಅವರು ಮಾಲಕರು ಮತ್ತು ಕಾರ್ಮಿಕರ ನಡುವೆ ಸೌಹಾರ್ದತೆಯ ಪ್ರಶ್ನೆಯನ್ನು ಪ್ರಧಾನ ಮಾಡಿ ಮುಷ್ಕರವನ್ನು ಮುಗಿಸಿದರು. ಆದರೆ ಭಾಷ್ಯಂ ಅವರ ಭರವಸೆಯನ್ನೂ ಧಿಕ್ಕರಿಸಿ 1941 ರ ಜೂನ್‌ನಲ್ಲಿ ಮತ್ತೆ ಬಿನ್ನಿ ಮಿಲ್ ಕಾರ್ಮಿಕರು ಮುಷ್ಕರ ಹೂಡಿದರು.

ಗಡೀಪಾರಿಗೆ ಒಳಗಾದ ಎನ್.ಡಿ.ಶಂಕರ್ ಭದ್ರಾವತಿಗೆ ಬಂದು ಮೈಸೂರು ಪೇಪರ್ ಮಿಲ್ಸ್ ಮತ್ತು ಮೈಸೂರು ಕಬ್ಬಿಣ ಮತ್ತು ಸ್ಟೀಲ್ ವರ್ಕ್ಸ್ ಕಾರ್ಮಿಕರನ್ನು ಸಂಘಟಿಸಿದರು. ಪೇಪರ್ ಮಿಲ್‌ನಲ್ಲಿ ಕ್ಲೀನರ್ ಚಿನ್ನಪ್ಪ ಎಂಬುವರ ಸಾವಿನ ವಿರುದ್ಧ ಮುಷ್ಕರ ಹೂಡಿದರು. ಶಂಕರ್ ಅವರನ್ನು 1941 ರ ನವೆಂಬರ್‌ನಲ್ಲಿ ಬಂಧಿಸಿದರು. ಮುಷ್ಕರ ನಿಲ್ಲುವ ಬದಲಿಗೆ ಮುಂದುವರಿಯಿತು. ಶಂಕರ್ ಅವರನ್ನು ಬಿಡುಗಡೆ ಮಾಡಬೇಕೆಂದು ಭದ್ರಾವತಿ[30], ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರತಿಭಟನೆಗಳು ಜರುಗಿದವು. ಇವೆಲ್ಲವುಗಳ ಪರಿಣಾಮವಾಗಿ ಕಾರ್ಮಿಕ ಸಂಘಗಳನ್ನು ಕಾನೂನುಬದ್ಧಗೊಳಿಸುವ ಮೈಸೂರು ಲೇಬರ್ ಆಕ್ಟ್ 1941 ರಲ್ಲಿ ಜಾರಿಗೆ ಬಂದಿತು. ಇಂತಹುದೊಂದು ಕಾಯ್ದೆ ಬಂದದ್ದನ್ನು ಕಾಂಗ್ರೆಸ್ ತನ್ನದೇ ಸಾಧನೆ ಎಂಬಂತೆ ಬಿಂಬಿಸುತ್ತದೆ. ಆದರೆ ನಿಜವಾಗಿಯೂ ಆದದ್ದೇನೆಂದರೆ, ಜನ ಜಾಗೃತಿ ಸಂಘದ ಮಿಲಿಟೆನ್ಸಿ, ವಿಭಿನ್ನ ನಾಯಕತ್ವದ ಶೈಲಿ, 1930 ಮತ್ತು 1940 ರಲ್ಲಿ ಕೆಜಿಎಫ್‌ನಲ್ಲಿ ನಡೆದ ಹೋರಾಟಗಳ ಬಗ್ಗೆ ಮೈಸೂರು ಸರ್ಕಾರ ಮಾತ್ರವಲ್ಲ, ಸ್ವತಃ ಕಾಂಗ್ರೆಸ್ ಕೂಡಾ ಭಯಗೊಂಡಿತ್ತು. ಅಸ್ತಿತ್ವದಲ್ಲಿದ್ದ ಅಧಿಕಾರ ಸ್ತರಗಳಿಗೆ ಧಕ್ಕೆಯಾಗದಂತೆ, ಬಂಡವಾಳ ಮತ್ತು ಶ್ರಮವನ್ನು ಸಂಘರ್ಷವಿಲ್ಲದೆ ರೂಢಿಸಲು ಅನುಕೂಲವಾಗುವಂತೆ, ಕಾಂಗ್ರೆಸ್ ಅದರಲ್ಲಿ ಅನುಕೂಲಕರ ಪಾತ್ರವನ್ನು ವಹಿಸಲು ಆಗುವಂತೆ ಇದನ್ನು ಜಾರಿಗೊಳಿಸಲಾಯಿತು[31].

ಹೀಗೆ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದ ಜನ ಜಾಗೃತಿ ಸಂಘವು ಕ್ವಿಟ್ ಇಂಡಿಯಾ ಚಳುವಳಿಯ ಪ್ರಕ್ರಿಯೆಯಲ್ಲಿ ದುರ್ಬಲವಾಗುತ್ತಾ ಸಾಗಿತು.ಜನರ ನಡುವೆ ಜನಪ್ರಿಯವಾಗಿದ್ದ ಜನ ಜಾಗೃತಿ ಸಂಘ ವಾಸ್ತವದಲ್ಲಿ ಸಂಘಟನಾತ್ಮಕವಾಗಿತುಂಬಾ ದುರ್ಬಲವಾಗಿತ್ತು. ಇದರಲ್ಲಿದ್ದವರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಅವರಿಗೆ ಎಡ ಸಿದ್ಧಾಂತವು ಆಕರ್ಷಣೆಯಾಗಿತ್ತು. ಆದರೆ ಇದು ಸಮಾಜವಾದಿ ತಿರುಳಿಗಿಂತ ಉದಾರವಾದುದಾಗಿತ್ತು. ಈ ಕಾರಣದಿಂದಾಗಿ ಇದು ಸಮಾಜವಾದಿ ರಾಜಕೀಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ವಿಫಲವಾಯಿತು.

ಸಾಂಸ್ಥಿಕ ದುರ್ಬಲತೆಯ ಜೊತೆಗೆ ಸರ್ಕಾರದ ನಿರಂತರ ದಬ್ಬಾಳಿಕೆಯೂ ಸೇರಿಕೊಂಡಿತು. ಇದರಿಂದಾಗಿ ಕ್ರಮೇಣ ಎಡಪಂಥೀಯರಾಗಿದ್ದ ಹಲವರು ಬೇರೆ ಕಡೆಗೆ ಸ್ಥಿತ್ಯಂತರವಾದರು. ಎರಡನೇ ಪ್ರಪಂಚ ಯುದ್ಧದಲ್ಲಿ ಸುಭಾಷ್‌ಚಂದ್ರ ಬೋಸ್ ಅವರು ಬ್ರಿಟಿಷ್ ವಿರೋಧಿ ನಿಲುಮೆಯ ಹಿನ್ನೆಲೆಯಲ್ಲಿ ಫ್ಯಾಸಿಸ್ಟ್ ಜರ್ಮನಿ ಮತ್ತು ಜಪಾನ್ ಜೊತೆ ಕೈಜೋಡಿಸಿದ್ದರೆಂಬ ಕಾರಣಕ್ಕೆ, ಭಾರತ ಕಮ್ಯುನಿಸ್ಟ್ ಪಕ್ಷವು ಬೋಸರ ನಿಲುವನ್ನು ವಿರೋಧಿಸಿತ್ತು. ಈ ಕಾರಣದಿಂದಾಗಿ ಕೆ.ಎಸ್.ಕುಮಾರನ್ ಸಿಪಿಐನ್ನು ತ್ಯಜಿಸಿದರು. ಸ್ವಲ್ಪ ಕಾಲ ಫಾರ್ವರ್ಡ್ ಬ್ಲಾಕ್‌ನಲ್ಲಿದ್ದು 1944 ರಲ್ಲಿ ಕಾಂಗ್ರೆಸ್‌ಗೆ ಸೇರಿದರು ಮಾತ್ರವಲ್ಲ, ಎಡಪಂಥೀಯರ ಕಡು ವಿರೋಧಿಯಾದರು[32]. ಎಸ್.ರಾಮಸ್ವಾಮಿ ರಾಜಕೀಯದಿಂದ ತೆರೆಮರೆಗೆ ಸರಿದರು. ಭಾರತ ಕಮ್ಯುನಿಸ್ಟ್ ಪಕ್ಷವು ಕ್ವಿಟ್ ಇಂಡಿಯ ಚಳುವಳಿಯಲ್ಲಿ ತೆಗೆದುಕೊಂಡ ನಿಲುವಿನ ಬಗ್ಗೆ ಎನ್.ಡಿ.ಶಂಕರ್ ಅವರಿಗೆ ಅಸಮಾಧಾನವಿತ್ತು. ಎನ್.ಡಿ.ಶಂಕರ್ ಅವರು ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದಾಗ ಅದರಿಂದ ಹೊರಗೇ ಉಳಿದರು. ಇವರನ್ನು ಪಕ್ಷದ ಪೂರ್ಣಾವಧಿ ಕಾರ್ಯಕರ್ತರನ್ನಾಗಿ ಮಾಡಲು ಮೊಣ್ಣಯ್ಯನವರು ಸಾಕಷ್ಟು ಪ್ರಯತ್ನ ನಡೆಸಿದರೂ ಶಂಕರ್ ಅದನ್ನು ಒಪ್ಪಲಿಲ್ಲ[33]. ಸವಾಯ್ ಅಶ್ವಥ್ ರಾವ್ ಮತ್ತು ಎನ್.ಎನ್.ಚೆಂಡೂರ್ ಅವರುಗಳು ಎಂ.ಎನ್.ರಾಯ್ ಅವರು ಸ್ಥಾಪಿಸಿದ್ದ 'ರ್‍ಯಾಡಿಕಲ್ ಡೆಮಾಕ್ರಟಿಕ್ ಪಾರ್ಟಿ'ಗೆ ಮುಖ್ಯ ಸಂಘಟಕರಾಗಿದ್ದರು. ಜನ ಜಾಗೃತಿ ಸಂಘದ ಮುಖಂಡರ ಪೈಕಿ ಅಂತಿಮವಾಗಿ 1942 ರಲ್ಲಿ ನೂತನವಾಗಿ ಎನ್.ಎಲ್.ಉಪಾಧ್ಯಾಯರ ನೇತೃತ್ವದಲ್ಲಿ ರಚನೆಯಾದ ಕಮ್ಯುನಿಸ್ಟ್ ಪಕ್ಷದಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದವರೆಂದರೆ, ಸಿ.ಬಿ.ಮೊಣ್ಣಯ್ಯ ಮತ್ತು ಎಂ.ಎಸ್.ರಾಮರಾವ್ ಮಾತ್ರ[34]. ಹೀಗಾಗಿ ಪ್ರತಿ–ಅಧಿಪತ್ಯದ ಸಂಸ್ಕೃತಿಯನ್ನು ಬೆಳಸುವುದರಲ್ಲಿ ವಿಫಲವಾದ ಜನ ಜಾಗೃತಿ ಸಂಘದ ರಾಜಕೀಯ ಪ್ರಯತ್ನಗಳು ಬಂಡವಾಳಶಾಹಿ ರಾಷ್ಟ್ರೀಯವಾದಿಗಳ ನೆರಳಿನಲ್ಲೇ ಉಳಿಯುವಂತಾಯಿತು. ಈ ಬೆಳವಣಿಗೆಯನ್ನು ಮೈಸೂರಿನ ಪೊಲೀಸರು ಹೀಗೆ ಅಂದಾಜು ಮಾಡಿದ್ದಾರೆ:


> ಮೈಸೂರು ಕಮ್ಯುನಿಸ್ಟರು ಮತ್ತು ಸಿಪಿಐ ನಡುವೆ ಸಮಾನವಾದುದು ಬಹಳ ಕಡಿಮೆ. ರಾಜ್ಯ ಕಾಂಗ್ರೆಸ್‌ನ್ನು ಸಮಾಜವಾದಿಯಾಗಿಯೋ ಅಥವಾ ಕಮ್ಯುನಿಸ್ಟ್ ಸಂಘಟನೆಯಾಗಿಯೋ ಮಾರ್ಪಡಿಸುವ ಯಾವುದೇ ಪ್ರಯತ್ನಗಳಿಲ್ಲ. ಅಥವಾ ಕಿಸಾನ್ ಸಭಾ, ರೈತ ಸಂಘಟನೆಗಳು, ರೆಡ್ ಫ್ಲಾಗ್ ಯೂನಿಯನ್ಸ್, ಇತ್ಯಾದಿ ಯಾವುದೂ ಇಲ್ಲ[35].

ಎಡಪಂಥೀಯ ನೆಲೆಗಟ್ಟಿನಲ್ಲಿ ಆರಂಭವಾದ ಜನ ಜಾಗೃತಿ ಸಂಘದ ಚಟುವಟಿಕೆಯ ವ್ಯಾಪ್ತಿ ಮತ್ತು ಪ್ರಭಾವವನ್ನು ಗಮನಿಸಿದರೆ, ರಾಷ್ಟ್ರಮಟ್ಟದಿಂದ ಅದಕ್ಕೆ ಬೇಕಾದ ಕಣ್ಣೋಟ ಮತ್ತು ಮಾರ್ಗದರ್ಶನವನ್ನು ನೀಡಿದ್ದರೆ, **ಬಹುಶಃ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಭಿನ್ನವಾದ ಆರಂಭ ಸಿಗಬಹುದಿತ್ತು.**

ಮೈಸೂರು ಸಂಸ್ಥಾನದಲ್ಲಿ ಅಧಿಕೃತ ಕಮ್ಯುನಿಸ್ಟ್ ಎಂಬುದು 1942 ರಲ್ಲಿ ಎನ್.ಎಲ್.ಉಪಾಧ್ಯಾಯರು[36] ಬೆಂಗಳೂರಿಗೆ ಆಗಮಿಸಿದ ನಂತರವೇ ಒಂದು ಸ್ವರೂಪವನ್ನು ಪಡೆದುಕೊಂಡಿದ್ದು. 1940 ರಲ್ಲಿ ಯುದ್ಧ–ವಿರೋಧಿ ಪ್ರತಿಭಟನೆ ಮಾಡಿದ್ದರಿಂದ ಇವರನ್ನು ಬಂಧಿಸಿ ಜೈಲಿಗೆ ಹಾಕಲಾಗಿತ್ತು. ಯುದ್ಧಕ್ಕೆ ಸಂಬಂಧಿಸಿ ಐವಲಾದ


ಎನ್.ಎಲ್.ಉಪಾಧ್ಯಾಯ

ನಿಲುವಿನಿಂದಾಗಿ 1942 ರಲ್ಲಿ ಬಿಡುಗಡೆಯಾದರು. ಆಗ ಇವರನ್ನು ಕರ್ನಾಟಕಕ್ಕೆ ಹೋಗಿ ನೂತನವಾಗಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಬೇಕೆಂದು ಸಿಪಿಐನ ಕೇಂದ್ರ ಸಮಿತಿ ಸೂಚಿಸಿದ್ದರ ಭಾಗವಾಗಿ 1942 ಸೆಪ್ಟೆಂಬರ್‌ನಲ್ಲಿ ಬೆಂಗಳೂರಿಗೆ ಬಂದರು. ಆಗ ಸುಲ್ತಾನ್‌ಪೇಟೆಯ ಕಾಶಿ ವಿಶ್ವನಾಥ ದೇವಸ್ಥಾನ ರಸ್ತೆಯಲ್ಲಿ ಒಂದು ಸಣ್ಣ ಜಾಗ ಹಿಡಿದು ಕಮ್ಯುನಿಸ್ಟ್ ಪಕ್ಷದ ಕಛೇರಿಯನ್ನು ಆರಂಭಿಸಿದರು. ಆಗ ಇಲ್ಲಿ ಪಕ್ಷದ ಸ್ವರೂಪದಲ್ಲಿ ಏನೂ ಇರಲಿಲ್ಲ. ಆದರೆ ಮೊಣ್ಣಯ್ಯ, ಎನ್.ಡಿ.ಶಂಕರ್ ಮತ್ತು ಎಂ.ಎಸ್.ರಾಮರಾವ್ ಅವರುಗಳಿದ್ದ ಒಂದು ಸಣ್ಣ ಗುಂಪಿತ್ತು. ಮತ್ತು ಜನ ಜಾಗೃತಿ ಸಂಘದಲ್ಲಿದ್ದ ಕೆಲವರಿದ್ದರು. ಎನ್.ಡಿ.ಶಂಕರ್ ಪಕ್ಷಕ್ಕೆ ರಾಜೀನಾಮೆ ಕೊಟ್ಟಿದ್ದರು. ಎಂ.ಎಸ್.ರಾಮರಾವ್‌ರನ್ನು ಬಂಧಿಸಿ ಸೆಂಟ್ರಲ್ ಜೈಲಿನಲ್ಲಿಡಲಾಗಿತ್ತು. ಹೀಗಾಗಿ ಎನ್.ಎಲ್.ಉಪಾಧ್ಯಾಯರು ಬಂದ ಸಮಯಕ್ಕೆ ಬಹುತೇಕ ಯಾರೂ ಇರಲಿಲ್ಲ ಎಂಬಂತಾಗಿ, ಎಲ್ಲವನ್ನೂ ಮೊದಲಿನಿಂದಲೇ ಆರಂಭಿಸಬೇಕಾಯ್ತು[37]. ಉಪಾಧ್ಯಾಯರು ಇಲ್ಲಿ ಕಾಂಗ್ರೆಸ್‌ನೊಂದಿಗೆ ಇರಲಾಗಲಿಲ್ಲ, ಏಕೆಂದರೆ ಕಾಂಗ್ರೆಸ್‌ನ್ನು ಆಗ ನಿಷೇಧಿಸಲಾಗಿತ್ತು. ಇವರು ಪಕ್ಷದ ಸಾಹಿತ್ಯವನ್ನು ಮಾರಾಟ ಮಾಡಲು ಹೋಗುತ್ತಿದ್ದಾಗ ವಿದ್ಯಾರ್ಥಿಗಳು ಹೊಸದಾಗಿ ಸಂಪರ್ಕಕ್ಕೆ ಬಂದರು. ನಿಧಾನಕ್ಕೆ ಬೆಂಗಳೂರಿನ ಟೆಕ್ಸ್‌ಟೈಲ್ ಕಾರ್ಮಿಕರು ಮತ್ತು ಕೆಜಿಎಫ್‌ನ ಕಾರ್ಮಿಕರು ಸಂಪರ್ಕಕ್ಕೆ ಬಂದರು. ನಂತರ ಎಂ.ಎಸ್.ಕೃಷ್ಣನ್ ಬಂದರು. ಅಷ್ಟೊತ್ತಿಗೆ ಬೆಂಗಳೂರಿನ ಬಿನ್ನಿ, ಮಿನರ್ವ ಮತ್ತು ರಾಜಾ ಮಿಲ್ಲುಗಳ ಕಾರ್ಮಿಕರು ಸಂಘಗಳನ್ನು ರಚಿಸಿಕೊಂಡಿದ್ದರು. ಇವೆಲ್ಲವೂ ಕಾಂಗ್ರೆಸ್‌ನ ಅಧೀನದಲ್ಲಿದ್ದವು. ರಾಜಾ ಮಿಲ್‌ನಲ್ಲಿ ಪ್ರಭುದೇವ್ ಎಂಬುವರ ನೇತೃತ್ವದಲ್ಲಿದ್ದ ಒಂದು ಸಣ್ಣ ಕ್ರಿಯಾಶೀಲ ಗುಂಪನ್ನು (ಜಿಂಜರ್ ಗ್ರೂಪ್) ಸಂಪರ್ಕಿಸಿದರು. ಇವರು ಬರಲು ಆರಂಭಿಸಿದರು. ಇವರ ಮೂಲಕ ಕೆಲ ಹಳಬರನ್ನು ಒಳಗೊಂಡು ರಾಜಾ ಮಿಲ್ಲಿನಲ್ಲಿ ಒಂದು ಯೂನಿಯನ್ ರಚಿಸಿದರು ಮತ್ತು ಅದಕ್ಕೆ ಎನ್.ಎಲ್.ಉಪಾಧ್ಯಾಯರು ಅಧ್ಯಕ್ಷರಾದರು. ಇದೇ ರೀತಿ ಇತರೆ ಯೂನಿಯನ್‌ಗಳಲ್ಲೂ ಪ್ರಯತ್ನಗಳನ್ನು ನಡೆಸುತ್ತಾ ಪಕ್ಷವನ್ನು ಕಟ್ಟಲು ಪ್ರಯತ್ನಿಸಿದರು[38].


ಎಂ.ಎಸ್.ಕೃಷ್ಣನ್

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂಧಿತರಾಗಿದ್ದ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಬೇಕು ಮತ್ತು ಕೇಂದ್ರದಲ್ಲಿ ರಾಷ್ಟ್ರೀಯ ಸರ್ಕಾರ ಬರಬೇಕೆಂದು ಒತ್ತಾಯಿಸಿ 1943 ರಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಪ್ರತಿಭಟನೆ ನಡೆಸಲು ಉಪಾಧ್ಯಾಯರು ತೀರ್ಮಾನಿಸಿದರು. ಪೊಲೀಸರು ಇವರನ್ನು ಬಂಧಿಸಿ ಸೆಂಟ್ರಲ್ ಜೈಲಿಗೆ ಹಾಕಿದರು. ಮೂರ್‍ನಾಲ್ಕು ತಿಂಗಳ ನಂತರ ಸಾರ್ವತ್ರಿಕ ಬಿಡುಗಡೆಯಲ್ಲಿ ಹೊರಬಂದರು. ಜೈಲಿನಲ್ಲಿ ಹಲವಾರು ಜನ ಇವರಿಗೆ ಸಂಪರ್ಕಕ್ಕೆ ಬಂದರು. ಅಂತಹವರಲ್ಲಿ ಬಿನ್ನಿ ಮಿಲ್‌ನ ವಜ್ರವೇಲು[39], ಕೆ.ಶ್ರೀರಾಮುಲು[40] ಕೆಲವರು. ಇಂತಹ ಎಲ್ಲಾ ಸಂಪರ್ಕಗಳನ್ನು ಬಳಸಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಬಳಸಿದರು. ಇದೇ ರೀತಿ ಶಿವಮೊಗ್ಗ, ದಾವಣಗೆರೆ, ತುಮಕೂರು, ಮೈಸೂರು ಮುಂತಾದೆಡೆಗಳಲ್ಲೂ ಸಂಪರ್ಕಗಳು ಬಂದವು. ಆದರೆ ಬಲಿಷ್ಟವಾದ ಗುಂಪು ಇದ್ದದ್ದು

ಕೆ.ಜಿ.ಎಫ್.ನಲ್ಲಿ. ಇದರ ಪರಿಣಾಮವಾಗಿಯೇ ಸ್ವಾತಂತ್ರ್ಯಾನಂತರದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಥಮ ಶಾಸಕರನ್ನು ಇಲ್ಲಿಂದ ಪಡೆಯಲು ಸಾಧ್ಯವಾಯ್ತು.

ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ ಹೊರಬಂದ ಎಂ.ಎಸ್.ಕೃಷ್ಣನ್ ಅವರನ್ನು ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಲಾಯಿತು[41]. ಕೃಷ್ಣ ಮಿಲ್ ಮಾಲಕರಿಗೆ ಕಮ್ಯುನಿಸ್ಟರಾದ ಎಂ.ಎಸ್.ಕೃಷ್ಣನ್ ಗೆಲ್ಲುವುದು ಬೇಕಾಗಿರಲಿಲ್ಲ. ಬಹಳ ದೀರ್ಘಕಾಲ ಕಾಂಗ್ರೆಸ್‌ನವರ ಹಿಡಿತದಲ್ಲಿದ್ದ ಈ ಸಂಘದ ಚುನಾವಣೆಯಲ್ಲಿ ಇಬ್ಬರೂ ಕಮ್ಯುನಿಸ್ಟರೇ ಗೆದ್ದರು. ಇಲ್ಲಿ ಕಮ್ಯುನಿಸ್ಟ್ ಕೆಲಸದ ಭಿನ್ನವಾದ ವಿಧಾನಗಳನ್ನು ಗಮನಿಸಬಹುದು. ಮುಖಂಡರು ಕಾರ್ಮಿಕರ ಮನೆಗಳಿಗೆ ಭೇಟಿ ಕೊಡುತ್ತಿದ್ದರು, ಅವರೊಂದಿಗೆ ಚರ್ಚಿಸುತ್ತಿದ್ದರು, ಅವರ ಸಂಘದ ಬೇಡಿಕೆಗಳಿಗಾಗಿ ಸಂಘರ್ಷ ನಡೆಸುವುದರ ಜೊತೆಯಲ್ಲೇ ಅವರು ಕೌಟುಂಬಿಕ ಸಮಸ್ಯೆಗಳ ಪರಿಹಾರಕ್ಕೂ ಶ್ರಮಿಸುತ್ತಿದ್ದರಿಂದ ಕಾರ್ಮಿಕರಿಗೆ ಕಮ್ಯುನಿಸ್ಟರ ಬಗ್ಗೆ ವಿಶ್ವಾಸ ಮೂಡಿತು[42].

1945–46 ರ ವೇಳೆಗೆ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ತಯಾರಿ ನಡೆಸುತ್ತಿರುವಾಗಲೇ, ಜವಾಬ್ದಾರಿ ಸರ್ಕಾರ ಮತ್ತು ವೇತನ ತಾರತಮ್ಯದ ಪ್ರಶ್ನೆಗಳನ್ನು ಒಟ್ಟಿಗೆ ತಂದು ರೈಲ್ವೆ ಮುಷ್ಕರವನ್ನು 1947 ರ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಒಂದು ತಿಂಗಳ ಕಾಲ ಯಶಸ್ವಿಯಾಗಿ ನಡೆಸಿದ್ದು ಆ ಕಾಲಘಟ್ಟದ ಕಮ್ಯುನಿಸ್ಟರ ಒಂದು ಬಹುಮುಖ್ಯವಾದ ಹೋರಾಟವಾಗಿದೆ. ತಮ್ಮ ವಿರುದ್ಧ ಕತ್ತಿ ಮಸೆಯುತ್ತಿದ್ದ ದಿವಾನರ ದೌರ್ಜನ್ಯವನ್ನು ಎದುರಿಸಿಯೂ ಹನ್ನೊಂದು ಸಾವಿರ ಮೈಸೂರು ಸ್ಟೇಟ್ ರೈಲ್ವೆ ಕಾರ್ಮಿಕರು ಬೋನಸ್ ಮತ್ತು ಕಿರುಕುಳದ ವಿರುದ್ದ ಈ ಗೆಲುವನ್ನು ಪಡೆದರು. ಮೈಸೂರಿನ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮುಷ್ಕರ ನಿರತರ ಮೇಲೆ ತೀವ್ರ ದಾಳಿಗಳನ್ನು ಹರಿಬಿಟ್ಟರು. ಕೆಲವರು ಭೂಗತರಾದರು, ಹಲವಾರು ಜನರನ್ನು ಜೈಲಿಗೆ ಹಾಕಲಾಯಿತು. ಆದರೂ ಕಾರ್ಮಿಕರು ದೃಢವಾಗಿ ನಿಂತು ಮುಷ್ಕರ ಮಾಡಿದರು. ಊಳಿಗಮಾನ್ಯ ರಾಜಪ್ರಭುತ್ವ ತೊಲಗಿ ಜವಾಬ್ದಾರಿ ಸರ್ಕಾರ ಬರುವುದಕ್ಕೂ ಮತ್ತು ಕಾರ್ಮಿಕರ ಬೇಡಿಕೆಗಳು ಈಡೇರುವುದಕ್ಕೂ ನೇರ ಸಂಬಂಧವಿದೆ ಎಂದು ಕಾರ್ಮಿಕರಿಗೆ ಅರಿವು ಮೂಡಿಸಿದ್ದರಿಂದ ಯಶಸ್ಸು ಸಿಕ್ಕಿತು[43].ಕಮ್ಯುನಿಸ್ಟರು ಕಾರ್ಮಿಕರ ಹೋರಾಟಗಳನ್ನು ರಾಷ್ಟ್ರೀಯ ಹೋರಾಟಗಳ ಜೊತೆ ಸಮೀಕರಿಸುವ ಕಣ್ಣೋಟದೊಂದಿಗೆ ಕೆಲಸ ಮಾಡಿರುವುದನ್ನು ಇದರಲ್ಲಿ ಗಮನಿಸಬಹುದು. ವೇತನ, ಬೋನಸ್, ಕೆಲಸದ ಸಮಯ, ಕಿರುಕುಳ ಮುಂತಾದ ಕಾರ್ಮಿಕರ ಸಮಸ್ಯೆಗಳಿಗೆ ಅವರ ಶೋಷಣೆಗೆ ಸ್ಥಾಪಿತ ಹಿತಾಸಕ್ತಿಗಳ, ವ್ಯಾಪಾರಿ ವರ್ಗಗಳ, ಬಂಡವಾಳಶಾಹಿ ವ್ಯವಸ್ಥೆಯ ಶೋಷಣಾ ಸ್ವರೂಪವೇ ಕಾರಣವಾಗಿರುವುದರಿಂದ ಅದನ್ನು ಕಿತ್ತು ಹಾಕಬೇಕು. ಆದರೆ ಅದಕ್ಕೂ ಮುಂಚೆ ವಸಾಹತು ಆಳ್ವಿಕೆಯನ್ನು ಕಿತ್ತೊಗೆಯಬೇಕು ಎಂಬುದಾಗಿ ಕಾರ್ಮಿಕರನ್ನು ಮುನ್ನಡೆಸುವಲ್ಲಿ ಕಮ್ಯುನಿಸ್ಟರ ಪಾತ್ರ ಮಹತ್ತರವಾದುದು.

ಎನ್.ಎಲ್.ಉಪಾಧ್ಯಾಯರ ಪ್ರಕಾರ, ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದ ಸಂದರ್ಭದಲ್ಲಿ ಸರ್ಕಾರ ಕಾಂಗ್ರೆಸ್ ವಿರುದ್ಧವಾಗಿ ನಡೆದುಕೊಂಡದ್ದನ್ನು ಬಿಟ್ಟರೆ, ಕಾರ್ಮಿಕರ ಹೋರಾಟಗಳು ಮತ್ತು ಉಳಿದೆಲ್ಲಾ


ಸಂದರ್ಭಗಳಲ್ಲೂ ಕಮ್ಯುನಿಸ್ಟರ ವಿರುದ್ಧವಾಗಿಯೇ ಮೈಸೂರು ಸರ್ಕಾರ ನಡೆದುಕೊಂಡಿದೆ. ಏಕೆಂದರೆ ಕಾಂಗ್ರೆಸ್ ಎಂದೂ ವರ್ಗ ನೆಲೆಯಲ್ಲಿ ಕಾರ್ಮಿಕರನ್ನು ಅಣಿನೆರೆಸಲಿಲ್ಲ. ಈ ವಿಚಾರ ಬಂದಾಗ ಸರ್ಕಾರ ಮತ್ತು ಕಾಂಗ್ರೆಸ್ ಒಟ್ಟಿಗೆ ಸೇರಿ ಚಳುವಳಿಯನ್ನು ದಮನ ಮಾಡಲು ಮುಂದಾಗಿವೆ. ಮೈಸೂರು ಮತ್ತು ದಾವಣಗೆರೆಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ಸರ್ಕಾರ, ಮಿಲ್‌ಗಳ ಆಡಳಿತ ವರ್ಗಗಳು, ಕಾಂಗ್ರೆಸ್, ಶಿವಾನಂದಸ್ವಾಮಿಯಂತಹ ಸಮಾಜವಾದಿಗಳು ಎಲ್ಲರೂ ಒಂದಾಗಿದ್ದನ್ನು ಇಲ್ಲಿ ಗಮನಿಸಬಹುದು. ಇಂತಹ ದಾಳಿಗಳಲ್ಲಿ ಕಮ್ಯುನಿಸ್ಟ್ ಚಳುವಳಿಯು ಪ್ರಾಣಹಾನಿಯೂ ಸೇರಿದಂತೆ ಸಾಕಷ್ಟು ನಷ್ಟ ಅನುಭವಿಸಿದೆ[44]. ಸಣ್ಣ ಮತ್ತು ಮಧ್ಯಮ ಬಂಡವಾಳದಾರರು ಸಂಪೂರ್ಣವಾಗಿ ಕಾಂಗ್ರೆಸ್‌ನೊಂದಿಗಿದ್ದರು. ಹಾಗಾಗಿ ಕಾಂಗ್ರೆಸ್‌ನವರಿಗೆ ಕಾರ್ಮಿಕರ ಸಂಘವೆಂದರೆ ಸಣ್ಣ ಪುಟ್ಟ ವೇತನ ಹೆಚ್ಚಳ ಇತ್ಯಾದಿ ಅಂಶಗಳಿಗೆ ಮಾತ್ರ ಸೀಮಿತವಾಗಿತ್ತು. ಕಾರ್ಮಿಕರ ವರ್ಗ ಹೋರಾಟವೆಂಬುದು ಕಾಂಗ್ರೆಸ್‌ಗೆ ಅಪಥ್ಯವಾದ ವಿಚಾರವಾಗಿತ್ತು. ಕಾರ್ಮಿಕ ಚಳುವಳಿ ಅಥವಾ ರೈತ ಚಳುವಳಿಯಲ್ಲಿ ಅವರಿಗೆ ಆಸಕ್ತಿಯೇನೂ ಇರಲಿಲ್ಲ. ಹೀಗಾಗಿ ಕಮ್ಯುನಿಸ್ಟರ ವಿರುದ್ಧ ಕಾರ್ಮಿಕರಲ್ಲಿ ಎಷ್ಟೆಲ್ಲಾ ದ್ವೇಷ ಮತ್ತು ಕ್ರೋಧವನ್ನು ತುಂಬಲು ಸಾಧ್ಯವೋ ಅಷ್ಟನ್ನು ಕಾಂಗ್ರೆಸ್ಸಿಗರು ಮಾಡಿದರು.

ಸ್ವಾತಂತ್ರಕ್ಕೆ ಸಮೀಪ ಕಾಲದಲ್ಲಿ ಈ ರೀತಿಯಾಗಿ ಎಲ್ಲೆಡೆ ವ್ಯಾಪಿಸುತ್ತಿದ್ದ ಕಾರ್ಮಿಕರ, ರೈತರ ಮತ್ತು ಇತರ ಜನವಿಭಾಗಗಳ ಚಳುವಳಿಗಳ ಸಾಲಿಗೆ 1946 ರಲ್ಲಿ ಬ್ರಿಟಿಷ್ ಭಾರತೀಯ ನಾವಿಕ ಸೈನಿಕರ ಬಂಡಾಯವು ಸೇರಿಕೊಂಡಿದ್ದನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ್ದೇವೆ. 1946 ರಲ್ಲಿ ದೇಶಾದ್ಯಂತ ರೋಮಾಂಚನಗೊಳಿಸಿದ ಆರ್‌ಐಎನ್ ಬಂಡಾಯದ ಬಿಸಿ ಬೆಂಗಳೂರಿಗೂತಟ್ಟಿತ್ತು. ಬೆಂಗಳೂರು ದೊಡ್ಡದಾದ ಮಿಲಿಟರಿ ನೆಲೆಯೂ ಆಗಿತ್ತು. ಏರ್‌ಫೋರ್ಸ್ ಸಹ ಇತ್ತು. ಆರ್‌ಐಎನ್ ಬಂಡಾಯಕ್ಕೆ ಸೌಹಾರ್ದವಾಗಿ ಇಲ್ಲಿನ ಸೈನಿಕರು ಬಂದೂಕುಗಳನ್ನು ತೆಗೆದುಕೊಳ್ಳುವುದಿಲ್ಲ ಮತ್ತು ಹೊರಗೆ ಹೋಗುವುದಿಲ್ಲ ಎಂದು ಪ್ರತಿಭಟಿಸಿದ ಮಾಹಿತಿ ಹರಡಿತು. ಬೆಂಗಳೂರು ನಗರದಲ್ಲೂ ಸ್ವಯಂಪ್ರೇರಿತ ಪ್ರತಿಭಟನೆಗಳು ನಡೆದವು. ಅವುಗಳಿಗೆ ಬೆಂಬಲಿಸಿ ಸಹಾಯ ಮಾಡಿದ್ದಾಗಿ ಕೃಷ್ಣನ್ ಹೇಳಿದ್ದಾರೆ[45]. ಈ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷವು ಸೈನಿಕರ ಬಂಡಾಯಕ್ಕೆ ಕರೆ ನೀಡಿದ್ದ ಕರಪತ್ರಗಳು ಪೊಲೀಸರಿಗೆ ಸಿಕ್ಕಿ, ಇಬ್ಬರು ವಾಯುಪಡೆ ಸೈನಿಕರು ಬಂಧಿತರಾಗಿದ್ದರು. ಬೆಂಗಳೂರಿನಲ್ಲಿ ಇದ್ದ ಬಹುತೇಕ ಕಮ್ಯುನಿಸ್ಟರು ಬಂಧನವಾಗಿ ಜೈಲಿನಲ್ಲಿದ್ದರು. ಉಳಿದವರು ಭೂಗತವಾಗಿದ್ದರು. ಅದೇ ಸಂದರ್ಭದಲ್ಲಿ ಸೋವಿಯತ್ ವಿರೋಧಿ ಚಲನಚಿತ್ರದ ವಿರುದ್ಧ ಪ್ರತಿಭಟಿಸಿ ಜೈಲು ಸೇರಿದ್ದ ಕೃಷ್ಣರಾವ್, ಬಿನ್ನಿ ಮಿಲ್ ಕಾರ್ಮಿಕ ಕೆ.ನಾಗರಾಜ, ಡಿ.ಆರ್. ರಾಜಗೋಪಾಲ್ ಮುಂತಾದವರನ್ನು ಬೆಂಗಳೂರಿನ ಜಾಲಹಳ್ಳಿಯ ವಾಯುಸೇನಾ ವಿಭಾಗದಲ್ಲಿ ಕರಪತ್ರ ಹಂಚಿಕೆ ವಿಚಾರದಲ್ಲಿ ಮತ್ತೆ ಬಂಧಿಸಿದರು (ಕೃಷ್ಣರಾವ್ 2012: 20–21).

ಉಪಾಧ್ಯಾಯರು ಬೆಂಗಳೂರಿನಲ್ಲಿ ಸಂಪರ್ಕಗಳನ್ನು ಕ್ರೋಢೀಕರಿಸುತ್ತಿದ್ದ ಸಂದರ್ಭದಲ್ಲಿ, ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿದ್ದ ಭಾರತದ ಖ್ಯಾತ ಅಣು ವಿಜ್ಞಾನಿ ಡಾ.ಹೋಮಿ ಜಹಾಂಗೀರ್ ಬಾಬಾ ಅವರ ಸಂಪರ್ಕವನ್ನು ಪಡೆದರು. ಅವರಿಗೆ ಪಕ್ಷದ ಸಾಹಿತ್ಯವನ್ನು ಕಳುಹಿಸುತ್ತಿದ್ದರು. ಅವರು ಸಿಪಿಐನ

ಪೀಪಲ್ಸ್ ವಾರ್ ವಾರಪತ್ರಿಕೆಯನ್ನು ಓದುವ ಅಭ್ಯಾಸ ಹೊಂದಿದ್ದರು. ಆಗ ಐಐಎಸ್ಸಿಯಲ್ಲಿದ್ದ ಮತ್ತೊಬ್ಬ ಪ್ರಸಿದ್ಧ ವಿಜ್ಞಾನಿ ಡಾ.ಸತೀಶ ಧವನ್ ಅವರನ್ನೂ ಒಳಗೊಂಡು 'ಫ್ರೆಂಡ್ಸ್ ಆಫ್ ಸೋವಿಯತ್ ಯೂನಿಯನ್' ಆರಂಭಿಸಿದ್ದರು. ಅದೊಂದು ಉತ್ತಮ ಗುಂಪಾಗಿ ಕೆಲಸ ಮಾಡುತ್ತಿತ್ತು. ಡಾ.ಹೋಮಿ ಬಾಬಾ ಅವರು ಪಕ್ಷವನ್ನು ಕಟ್ಟಲು ತುಂಬಾ ಸಹಾಯ ಮಾಡಿದರು[46]. ಈ ವಿಚಾರವನ್ನು ಇನ್ನಷ್ಟು ವಿಸ್ತರಿಸಿ, ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸುಲ್ತಾನ್‌ಪೇಟೆ ಕಛೇರಿಗೆ ಸ್ವತಃ ಹೋಮಿ ಬಾಬಾ ಅವರು ಟೇಬಲ್ ಮತ್ತು ಬೆಂಚುಗಳನ್ನು ನೀಡಿದ್ದರೆಂದು, ರಾಜಾ ಮಿಲ್ ಕಾರ್ಮಿಕರಾಗಿ ಕಮ್ಯುನಿಸ್ಟರಾಗಿದ್ದ ಮತ್ತು ಮುಂದೆ ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಪಿ.ಕೆ.ಸುಬ್ರಮಣಿಯವರು ನನಗೆ (ಸಂಶೋಧಕರಿಗೆ) ವೈಯುಕ್ತಿಕವಾಗಿ ತಿಳಿಸಿದ್ದರು. ಬಾಬಾ ಅವರು ಅಣು ಸ್ಥಾವರಗಳನ್ನು ನಿರ್ಮಾಣ ಮಾಡುವ ಕೆಲಸಕ್ಕೆ ಬಾಂಬೆಗೆ ಹೋದ ನಂತರ ಇಲ್ಲಿನ ಸಂಪರ್ಕ ನಿಂತು ಹೋಯಿತು.

ಸ್ವಾತಂತ್ರ್ಯ ಪೂರ್ವ ಕಮ್ಯುನಿಸ್ಟರ ಕೆಲಸದ ವಿಧಾನ ಕೇವಲ ಆರ್ಥಿಕವಾದದ್ದಾಗಿರಲಿಲ್ಲ. ಸಾಮಾಜಿಕ ಮತ್ತು ರಚನಾತ್ಮಕವಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದನ್ನು ಹಲವು ಕಡೆ ಗಮನಿಸಬಹುದು. ವಾಸ ಪ್ರದೇಶಗಳಲ್ಲಿ ಕಮ್ಯುನಿಸ್ಟರ ಕೆಲಸದವಿಧಾನಕ್ಕೆ ಸಂಬಂಧಿಸಿ ಬೆಂಗಳೂರಿನ ಗಿರಣಿ ಕಾರ್ಮಿಕರ ಕಾಲೋನಿಗಳನ್ನು ಗಮನಿಸಬಹುದು.ಮೈಸೂರು ಮಿಲ್ಲಿನ ಬಹುತೇಕ ಕಾರ್ಮಿಕರು ಆಗ ವಾಸವಿದ್ದದ್ದು ಸ್ವತಂತ್ರಪಾಳ್ಯದಲ್ಲಿ. ಮೈಸೂರು ಮಿಲ್ ಮತ್ತು ರೈಲ್ವೆ ಲೈನ್ ನಡುವೆ ಒಂದು ಸ್ಲಂ, ಮತ್ತೊಂದು 5 ನೇ ಕ್ರಾಸ್ ಮಲ್ಲೇಶ್ವರಂನಲ್ಲಿ. ಪಿಟ್ ಕಾಲೋನಿ ಎಂದು ಕರೆಯಲಾಗುತ್ತಿದ್ದ ಪ್ರದೇಶದಲ್ಲಿ ಸುಮಾರು 200 ಗುಡಿಸಲುಗಳಿದ್ದವು. ಇದು ಕಮ್ಯುನಿಸ್ಟರ ಭದ್ರಕೋಟೆಯಾಗಿತ್ತು. ಅಲ್ಲಿ ವಯಸ್ಕರ ಶಿಕ್ಷಣ, ರಾತ್ರಿ ಶಾಲೆ, ಗ್ರಂಥಾಲಯವನ್ನು ನಡೆಸಲಾಗುತ್ತಿತ್ತು. ಆಟ ಆಡಲೆಂದು ಸಣ್ಣ ಕ್ಲಬ್ ಒಂದನ್ನು ಪ್ರಾರಂಭಿಸಿದ್ದರು. ಮೇ ದಿನದಂದು ಎಲ್ಲಾ ಗುಡಿಸಲುಗಳ ಮೇಲೆ ಕೆಂಬಾವುಟವನ್ನು ಹಾರಿಸಲಾಗುತ್ತಿತ್ತು. ಕುಡಿತದಿಂದ ಉಂಟಾಗುತ್ತಿದ್ದ ಮನೆ ಜಗಳಗಳನ್ನು ಪರಿಹರಿಸಬೇಕಾಗುತ್ತಿತ್ತು. ಇದೇ ರೀತಿಯ ಕೆಲಸಗಳನ್ನು ಕೆಜಿಎಫ್‌ನಲ್ಲೂ ಮಾಡಲಾಗುತ್ತಿತ್ತು. ಎಂಎಸ್.ರಾಮರಾವ್ ಅವರ ಹೆಂಡತಿ ಗೌರಮ್ಮ ಕಾರ್ಮಿಕರ ಕಾಲೋನಿಗಳಲ್ಲಿ, ವಿಶೇಷವಾಗಿ ಮಹಿಳಾ ಕಾರ್ಮಿಕರಿಗೆ ಅಕ್ಷರಾಭ್ಯಾಸವನ್ನು ಎರಡು ರೀತಿಯಲ್ಲಿ, ಒಂದು, ಅನಕ್ಷರಸ್ತರಿಗೆ ಅಕ್ಷರ ಕಲಿಸುವುದು, ಎರಡನೆಯದು, ಕನ್ನಡದಲ್ಲಿ ಕಲಿಸುವುದನ್ನು ಮಾಡಿದರು[47].


ವಜ್ರವೇಲು ಚೆಟ್ಟಿಯಾರ್

ಕಮ್ಯುನಿಸ್ಟ್ ಚಳುವಳಿಯು ಅತಿ ಹೆಚ್ಚು ಸಂಘಟಿತವಾಗಿ ಕಾರ್ಮಿಕ ಚಳುವಳಿಯ ರೂಪದಲ್ಲಿ ಬೇರೆಡೆಗಳಿಗಿಂತ ಮೊದಲು ಆರಂಭವಾಗಿದ್ದು **ಕೋಲಾರ ಚಿನ್ನದ ಗಣಿಗಳಲ್ಲಿ (ಕೆಜಿಎಫ್). ಕಮ್ಯುನಿಸ್ಟ್ ಚಳುವಳಿ ಅತ್ಯಂತ ಆಳ ಮತ್ತು ವಿಸ್ತಾರ** ಪಡೆದದ್ದು ಇಲ್ಲೇ. 1880 ರಲ್ಲಿ ಆರಂಭವಾದ ಕೋಲಾರದ ಚಿನ್ನದ ಗಣಿಗಳಲ್ಲಿ ಕಾರ್ಮಿಕರ ಕೆಲಸದ ಅವಧಿ 10–12 ಗಂಟೆ. ಅದೂ ಭೂಗರ್ಭದೊಳಗೆ. ಕಾರ್ಮಿಕರ ವಾಸದ ಜಾಗವನ್ನು ಮನೆಗಳು ಎನ್ನಲು ಸಾಧ್ಯವೇ ಇರಲಿಲ್ಲ. ಕೆಲಸಕ್ಕೆ ಭದ್ರತೆಯಿರಲಿಲ್ಲ. ಕಾರ್ಮಿಕರನ್ನು ಮನುಷ್ಯರ ರೀತಿಯಲ್ಲಿ ನೋಡುವ



ವಿ.ಎಂ.ಗೋವಿಂದನ್

ಪರಿಸ್ಥಿತಿಯಿರಲಿಲ್ಲ. ಇದರ ವಿರುದ್ಧ ಕಾರ್ಮಿಕರಲ್ಲಿ ಅತೃಪ್ತಿ ಮಡುಗಟ್ಟಲು ಆರಂಭಿಸಿತ್ತು. ಆಕ್ರೋಶ ಸ್ಫೋಟಗೊಳ್ಳಲು ಅವಕಾಶಕ್ಕಾಗಿ ಕಾಯುತ್ತಿತ್ತು. ಕಾರ್ಮಿಕರನ್ನು ಪ್ರತಿಭಟನೆಗೆ ಇಳಿಸಿದರೆಂದು ಸ್ವತಃ ಗಣಿ ಕಾರ್ಮಿಕರು ಮತ್ತು ನಾಯಕರಾದ ಲಕ್ಷ್ಮಣ ಮೊದಲಿಯಾರ್[48] ಮತ್ತು ಆರ್.ಆರ್.ಷಣ್ಮುಗಂ[49] ಅವರು ಕೆಜಿಎಫ್‌ನಿಂದ ಗಡೀಪಾರು ಶಿಕ್ಷೆಗೆ ಒಳಗಾಗಿ ಬೆಂಗಳೂರಿನಲ್ಲಿದ್ದರು. ಇವರು ಎನ್.ಎಲ್.ಉಪಾಧ್ಯಾಯರನ್ನು ಸಂಪರ್ಕಿಸಿದರು. ಇದೇ ವೇಳೆಗೆ 1943 ರಲ್ಲಿ ಮೈಸೂರು ಮೈನ್ಸ್ ಯೂನಿಯನ್‌ಗೆ ಚುನಾವಣೆಗಳು ಘೋಷಣೆಯಾಗಿ, ಕಮ್ಯುನಿಸ್ಟರಾಗಿದ್ದ ಎ.ಪಿ.ವಜ್ರವೇಲು ಚೆಟ್ಟಿಯವರನ್ನು[50] ಕಣಕ್ಕಿಳಿಸಲು ತೀರ್ಮಾನಿಸಿದರು. ಅದೇ ವೇಳೆಗೆ ಇವರನ್ನು ಬೇರೊಂದು ಪ್ರಕರಣದಲ್ಲಿ 1942 ರ ನವೆಂಬರ್ 29 ರಂದು ಬಂಧಿಸಿ ಆಂಧ್ರದ ಜೈಲಿಗೆ ಕಳುಹಿಸಿದರು. ಆಗ ಪರ್ಯಾಯ ಅಭ್ಯರ್ಥಿಯಾಗಿ ವಿ.ಎಂ. ಗೋವಿಂದನ್[51] ಅವರನ್ನು ನಿಲ್ಲಿಸಿದರು. ಚುನಾವಣೆಯಲ್ಲಿ ಆಡಳಿತ ವರ್ಗದ ಪರವಾಗಿದ್ದರು ಎನ್ನಲಾದ ಪಿ.ಆರ್. ಕೆ.ಶರ್ಮ ಅವರನ್ನು ಸೋಲಿಸಿ ಕಮ್ಯುನಿಸ್ಟರು ಅಧಿಕೃತವಾಗಿ ಚುನಾಯಿತರಾದರು[52].

ಮೈಸೂರು ಪ್ರಾಂತ್ಯದ ಆಚೆ ಕಮ್ಯುನಿಸ್ಟ್ ಚಳುವಳಿಯ ಕೇಂದ್ರಗಳನ್ನು ಗಮನಿಸಬಹುದಾದದ್ದು ಮುಖ್ಯವಾಗಿ, ಭೌಗೋಳಿಕವಾಗಿ ಒಂದಕ್ಕೊಂದು ಸಂಬಂಧವಿಲ್ಲದ, ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿದ್ದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳು. ಕಮ್ಯುನಿಸ್ಟ್ ಚಳುವಳಿಯ ಹೋರಾಟಗಳು ಮತ್ತು ಬೆಳವಣಿಗೆಯ ಚಾರಿತ್ರಿಕ ದೃಷ್ಟಿಯಿಂದ ನೋಡಿದರೆ ಸಂಪೂರ್ಣವಾಗಿ ವಿಭಿನ್ನವಾಗಿವೆ. ಕೆಲಸಗಳನ್ನು ಹುಡುಕಿಕೊಂಡು ಬಂದು ಮಂಗಳೂರು ಮತ್ತು ಉಡುಪಿ ಭಾಗಗಳಲ್ಲಿ ನೆಲೆಸಿದ ಮಲಯಾಳಿ ಕಾರ್ಮಿಕರ ಮೂಲಕ ಮಲಬಾರಿನ ಕಮ್ಯುನಿಸ್ಟರ ಪ್ರಭಾವ ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಿತ್ತು. ಇವರಿಗೆ ಮಲಬಾರಿನ ಕಮ್ಯುನಿಸ್ಟ್ ಪಕ್ಷದ ಸಂಪರ್ಕಗಳಿತ್ತು. ಇವರೇ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರ ನಡುವೆ ಕಮ್ಯೂನಿಸಂನ ಬೀಜವನ್ನು ಬಿತ್ತಿದವರು ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವಲ್ಲಿ ಆರಂಭಿಕ ಕಾರ್ಯಕರ್ತರೂ ಆಗಿದ್ದವರು. ಆಗ ಮನೆ ಮನೆಗಳಲ್ಲಿ ಬೀಡಿ ಕಟ್ಟುವ ಕ್ರಮವಿರಲಿಲ್ಲ. ಕಾರ್ಖಾನೆಗಳಲ್ಲೇ ಬೀಡಿ ಕಟ್ಟುವ ಕ್ರಮವಿತ್ತು. ಅದು ಸಂಘಟನೆಗೆ ಅನುಕೂಲಕರವಾಗಿತ್ತು. ಕೆಲಸಗಾರರು ವಂತಿಗೆ ಹಾಕಿ ಪತ್ರಿಕೆಗಳನ್ನು ಕೊಂಡುಕೊಳ್ಳುವುದು, ಒಬ್ಬರು ಓದುವುದು ಎಲ್ಲರೂ ಕೇಳುವುದು, ಓದುವಾತನಿಗೆ ಬೀಡಿಯ ರೂಪದಲ್ಲಿ ಸಂಭಾವನೆ ನೀಡುವುದು ಹೀಗೆ ಒಂದೊಂದು ಕಾರ್ಖಾನೆಯಲ್ಲೂ, 'ಮಾನವ ರೇಡಿಯೋ'ಗಳ[53] ವ್ಯವಸ್ಥೆಯಿತ್ತು. ಇದನ್ನು ಕೆಲವು ಮಾಲಕರು ತಡೆಯುತ್ತಿದ್ದರು. ಆಗ ಪತ್ರಿಕೆ ಓದುವ ಸ್ವಾತಂತ್ರ್ಯಕ್ಕಾಗಿ ಕೆಲಸಗಾರರು ಹೋರಾಡುತ್ತಿದ್ದರು. ಇದು ಮಂಗಳೂರಿನ ಕಾರ್ಮಿಕರ ಹೋರಾಟದ ಪ್ರಥಮ ರೂಪವಾಗಿತ್ತು. ಸಂಘದ ಕರಪತ್ರಗಳು, ಭೂಗತ ಕಮ್ಯುನಿಸ್ಟ್ ಘಟಕದ ಕೈಬರಹದ ಪ್ರಕಟಣೆಗಳು ಅದೇ ಮಾಧ್ಯಮದ ಮೂಲಕ ಬೀಡಿ ಕಾರ್ಮಿಕರ ನಡುವೆ ಪ್ರಸಾರವಾಗುತ್ತಿದ್ದವು. ಈ ಪ್ರಕಟಣೆಗಳನ್ನು ಆಗ ಕುಮಾರ ವೆಂಕಣ್ಣ ಬರೆದುಕೊಡುತ್ತಿದ್ದರು. ಕೆ.ಕೇಶವ ಕಾಮತ್ ಭೂಗತ ಕಮ್ಯುನಿಸ್ಟ್ ಸಂಘಟನೆಯಲ್ಲಿ ಸಕ್ರಿಯವಾಗಿದ್ದರು (ಕಕ್ಕಿಲ್ಲಾಯ 2003: 44).

ಬೀಡಿ ಕಾರ್ಮಿಕರು, ನೇಕಾರರು, ಪ್ರಿಂಟಿಂಗ್ ಪ್ರೆಸ್, ಸಾರಿಗೆ ಕಾರ್ಮಿಕರು ಇವರ ನಡುವೆ ಕಾರ್ಮಿಕ ಸಂಘಟನೆ ಬೆಳೆಯುತ್ತಿತ್ತು. ಕಮ್ಯುನಿಸ್ಟ್ ವಿದ್ಯಾರ್ಥಿಗಳ ಪಾತ್ರವೂ ಇದರಲ್ಲಿತ್ತು. ಆರಂಭದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕರು ಇವುಗಳನ್ನು ಬೆಳೆಸುವುದರಲ್ಲಿ ಪಾತ್ರ ವಹಿಸಿದ್ದರು. ಆದರೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಕೆಲವು ನಾಯಕರ ವಿಧಾನಗಳಿಂದಾಗಿ ಮುದ್ರಣ ಮತ್ತು ಸಾರಿಗೆ ಕೆಲಸಗಾರರ ಹೋರಾಟಗಳು ಸಂಪೂರ್ಣ ವಿಫಲಹೊಂದಿ ಸಂಘಗಳು ಮಾಲೀಕರ ಕೈ ಸೇರಿದವು. ಮುಂದಿನ ವರ್ಷಗಳಲ್ಲಿ ಅವು ಕಮ್ಯುನಿಸ್ಟ್ ನಾಯಕತ್ವದಲ್ಲಿ ಮತ್ತೆ ಸಂಘಟಿತವಾದವು (ಕಕ್ಕಿಲ್ಲಾಯ: 2003: 42). ಆದರೆ ಇದಕ್ಕೆ ಭಿನ್ನವೆಂಬಂತೆ, ಕಾಂಗ್ರೆಸ್‌ನಲ್ಲಿದ್ದ ಎ.ಕೃಷ್ಣಶೆಟ್ಟರು ಸರಿಯಾದ ಕಾರ್ಮಿಕ ಚಳುವಳಿಗೆ ಸಹಾಯ ಮಾಡುತ್ತಿದ್ದರು. ಕೃಷ್ಣಶೆಟ್ಟರು ಸ್ಥಳೀಯವಾಗಿ ತುಂಬಾ ಜನಪ್ರಿಯ ವ್ಯಕ್ತಿಯಾಗಿದ್ದರು. ಇವರಲ್ಲದೆ ಹಸನಬ್ಬ ಒಡೆಯರ್, ಎಸ್.ನಾರಾಯಣ ಕಿಲ್ಲೆ, ಅಹಮದ್ ಬಾವಾ ಇವರುಗಳು ಕಾರ್ಮಿಕ ಚಳುವಳಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದರು. ಬೀಡಿ ಮತ್ತು ನೇಯ್ಗೆ ಕೆಲಸಗಾರರ ಸಂಘಗಳು ನಂತರದಲ್ಲಿ ಭೂಗತವಾಗಿದ್ದ ಕಮ್ಯುನಿಸ್ಟ್ ನಾಯಕರ ನೇತೃತ್ವದಲ್ಲಿ ತಮ್ಮ ಬೇಡಿಕೆಗಳಿಗಾಗಿ ನಿರಂತರವಾದ ಹೋರಾಟಗಳನ್ನು ನಡೆಸುತ್ತಿದ್ದವು. ಸಣ್ಣ ಬೇಡಿಕೆಗಳನ್ನು ಪಡೆಯಲೂ ಸಹ ದೊಡ್ಡ ಹೋರಾಟಗಳನ್ನೇ ಮಾಡಬೇಕಾಗುತ್ತಿತ್ತು.

ಇದೇ ಸಂದರ್ಭದಲ್ಲಿ ಪ್ರಸಿದ್ಧ ರೈತ ಹೋರಾಟಗಾರರಾಗಿದ್ದ ಎ.ಕೆ.ಗೋಪಾಲನ್ ಮತ್ತು ಅವರ ಜೊತೆಗಾರರು ವೆಲ್ಲೂರು ಜೈಲಿನಿಂದ ತಪ್ಪಿಸಿಕೊಂಡು ಬಂದು ಮಂಗಳೂರಿನಲ್ಲಿ ಸ್ವಲ್ಪಕಾಲ ತಂಗಿದ್ದರು. ಇದೇ ಸಂದರ್ಭದಲ್ಲಿ ನಾಲ್ವರು ಎಳೆಯ ಕಮ್ಯುನಿಸ್ಟರಿಗೆ ಕಯ್ಯೂರು ರೈತ ಹೋರಾಟದಲ್ಲಿ ಗಲ್ಲು ಶಿಕ್ಷೆ ವಿಧಿಸಲಾಯಿತು. ಜೊತೆಗೆ ಕಾಸರಗೋಡಿನ ಹಲವು ಭಾಗಗಳಲ್ಲಿ ಪೊಲೀಸ್ ದೌರ್ಜನ್ಯಗಳು ಭೀಕರವಾಗಿ ನಡೆದವು. ಸ್ವಾತಂತ್ರ್ಯ ಹೋರಾಟ ಮತ್ತು ರೈತ ಹೋರಾಟಗಳು ಸಮ್ಮಿಳಿತವಾಗಿದ್ದುದನ್ನು, ಸ್ಥಳೀಯ ಜಮೀನ್ದಾರರು ಬ್ರಿಟಿಷರ ಜೊತೆ ಶಾಮೀಲಾಗಿದ್ದ ಅಂಶಗಳನ್ನು ಇದು ಸ್ಪಷ್ಟಪಡಿಸಿತು. ಈ ಘಟನೆಗಳು ಮಂಗಳೂರಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹೋರಾಟಗಾರರ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿತು. ಮಂಗಳೂರಿನ ಒಂದು ಮುದ್ರಣಾಲಯದಲ್ಲಿ ಮೇನೇಜರ್ ಆಗಿದ್ದ ಸಿ.ಎಂ.ಕುಂಞರಾಮನ್ ಒಬ್ಬ ಕಮ್ಯುನಿಸ್ಟರಾಗಿದ್ದರು. ಇವರು ಕಮ್ಯುನಿಸ್ಟ್ ಪಕ್ಷಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಭೂಗತವಾಗಿ ಸರಬರಾಜು ಮಾಡುತ್ತಿದ್ದರು. 'ಪೀಪಲ್ಸ್ ವಾರ್' ಪತ್ರಿಕೆ ಮಾರಾಟ ನಡೆಯುತ್ತಿತ್ತು. ಇವರ ಮೂಲಕವೇ ಕುಳಕುಂದ ಶಿವರಾಯರು (ಮುಂದೆ 'ನಿರಂಜನ') ಬಿ.ವಿ.ಕಕ್ಕಿಲ್ಲಾಯ ಮುಂತಾದವರಿಗೆ ಪರಿಚಿತರಾದರು. ಸಿಪಿಐ ಕೇಂದ್ರ ಸಮಿತಿಯು 1942 ರಲ್ಲಿ ಎನ್.ಎಲ್.ಉಪಾಧ್ಯಾಯರನ್ನು ಬೆಂಗಳೂರಿಗೆ, ಎನ್.ಕೆ.ಉಪಾಧ್ಯಾಯರನ್ನು ಬಿಜಾಪುರಕ್ಕೆ ಮತ್ತು ಶಾಂತಾರಾಂ ಪೈ ಅವರನ್ನು ಮಂಗಳೂರಿನಲ್ಲಿ ಪಕ್ಷ ಕಟ್ಟಲು ಕಳುಹಿಸಿತು. ಆರಂಭದ ದಿನಗಳಲ್ಲಿ ಕೆ.ಎ.ಕೇರಳೀಯನ್, ಎನ್.ಸಿ.ಶೇಖರ್, ಕೆ.ಟಿ.ರಾಜು ಮುಂತಾದವರು ಕಣ್ಣಾನೂರು ಮತ್ತು ಕಲ್ಲಿಕೋಟೆಗಳಿಂದ ಆಗಾಗ ಮಂಗಳೂರಿಗೆ ಬಂದು ಸಹಾಯ ಮಾಡುತ್ತಿದ್ದರು. ಪಿ.ಕೃಷ್ಣಪಿಳ್ಳೆ, ಇ.ಎಂ.ಎಸ್.ನಂಬೂದಿರಿಪಾದ್ ಮುಂತಾದವರು ಮಾರ್ಗದರ್ಶನಗಳು ಸಿಗುತ್ತಿದ್ದವು (ಕಕ್ಕಿಲ್ಲಾಯ 2003: 53).


ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನಿಯಂತ್ರಣವಿಲ್ಲದೆ ಏರುತ್ತಿದ್ದ ಬೆಲೆಗಳು ಮತ್ತು ತೀವ್ರವಾದ ಆಹಾರದ ಅಭಾವವು ಜನರನ್ನು ಕಾಡುತ್ತಿತ್ತು. ಕೈಗಾರಿಕೆಗಳಲ್ಲಿ ವಿಪರೀತ ಉತ್ಪಾದನೆಯಾಗುತ್ತಿತ್ತು, ಆದರೆ ಅದರ ಲಾಭವನ್ನು ಮಾಲೀಕರು ದೋಚುತ್ತಿದ್ದರು. ಪ್ರಭುತ್ವ ನಿರ್ಮಿತ ಈ ಬರಗಾಲದ ಉಗ್ರ ಸ್ವರೂಪ ಬಂಗಾಳದಲ್ಲಿ ಪ್ರಕಟವಾಯಿತು. ಮಿಲಿಯಾಂತರ ಜನರ ಸಾವು ಸಂಭವಿಸಿತು. 'ಪೀಪಲ್ಸ್ ವಾರ್' ಪತ್ರಿಕೆಯಲ್ಲಿ ಅಲ್ಲಿನ ದಾರುಣ ಪರಿಸ್ಥಿತಿ ಬಗ್ಗೆ ವಿವರವಾದ ಸುದ್ದಿಗಳು ಪ್ರಕಟವಾದವು. ಕಮ್ಯುನಿಸ್ಟ್ ಪಕ್ಷ ದೇಶಾದ್ಯಂತ **ಬಂಗಾಳ ಕ್ಷಾಮ ಪರಿಹಾರ** ಕಾರ್ಯಕ್ಕೆ ಕರೆ ನೀಡಿತು. ಮಂಗಳೂರಿನಲ್ಲಿ ಕಮ್ಯುನಿಸ್ಟ್ ಪಕ್ಷ, ಕಾರ್ಮಿಕ ಮತ್ತು ವಿದ್ಯಾರ್ಥಿ ಸಂಘಟನೆಗಳು ಬಂಗಾಳದ ಜನರಿಗೆ ಪರಿಹಾರ ಸಂಗ್ರಹ ಕಾರ್ಯಕ್ಕಿಳಿದವು. ಇದಕ್ಕಾಗಿ ಸಾರ್ವಜನಿಕ ಸಭೆಗಳನ್ನು, ನಾಟಕಗಳನ್ನು ಪ್ರದರ್ಶಿಸಿದರು. ಕುಮಾರ ವೆಂಕಣ್ಣ ಮತ್ತು ಕಾಂದಿಲ್ಕರ್ ವೆಂಕಟರಾವ್ ಇವರುಗಳು ಹಾಡುಗಳನ್ನು ನಾಟಕಗಳನ್ನು ಈ ಸಲುವಾಗಿ ರಚಿಸಿದರು. ನಿಧಿ ಸಂಗ್ರಹ ಮಾಡಿ ಬಂಗಾಳಕ್ಕೆ ಕಳುಹಿಸಿದರು.

1946 ರಲ್ಲಿ ದಕ್ಷಿಣ ಕನ್ನಡದಲ್ಲಿ ಸರ್ಕಾರಿ **ಪಡಿತರ ಅಕ್ಕಿ ಕಡಿತ ವಿರೋಧಿಸಿ** ವಿಶಿಷ್ಟವಾದ ಹೋರಾಟ ನಡೆಯಿತು. ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸರ್ಕಾರ ಪಡಿತರ ಅಕ್ಕಿಯ ಪ್ರಮಾಣವನ್ನು ಎರಡು ಔನ್ಸ್‌ಗಳಷ್ಟು ಕಡಿಮೆ ಮಾಡಿದ್ದರಿಂದ ಜನರಲ್ಲಿ ಅತೃಪ್ತಿ ಹೆಚ್ಚಾಗಿತ್ತು. ಅದೇ ಸಂದರ್ಭಕ್ಕೆ ಮದ್ರಾಸಿನ ಗವರ್ನರ್ ಸರ್ ಆರ್ಚಿಬಾಲ್ಡ್ ನೈ ಮಂಗಳೂರಿಗೆ ಭೇಟಿ ನೀಡುವ, ಮುಂದೆ ಕಣ್ಣಾನೂರು, ಕಲ್ಲಿಕೋಟೆ ಮತ್ತು ಶೋರನೂರು ಮೂಲಕ ಮದ್ರಾಸಿಗೆ ವಾಪಸ್ ಹೋಗುವ ಕಾರ್ಯಕ್ರಮ ಪ್ರಕಟವಾಯಿತು. ಇದೇ ಸಂದರ್ಭಕ್ಕೆ ಮಲಬಾರಿನಿಂದ ಪಿ.ಕೃಷ್ಣಪಿಳ್ಳೆ ಗುಪ್ತವಾಗಿ ಮಂಗಳೂರಿಗೆ ಆಗಮಿಸಿ ಅಕ್ಕಿ ಕಡಿತವನ್ನು ವಿರೋಧಿಸಿ ಪ್ರತಿಭಟನೆ ನಡೆಸುವ ಕಾರ್ಯಸೂಚಿಯನ್ನು ನೀಡಿದರು. ಇದು ಅತ್ಯಂತ ಗುಪ್ತವಾಗಿ ಇಡೀ ಕಮ್ಯುನಿಸ್ಟ್ ಪಕ್ಷ, ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ನಡುವೆ ಪ್ರಸಾರವಾಯಿತು. ಗವರ್ನರ್ ಬಂದ ದಿನ ಯಾವುದೇ ಫ್ಯಾಕ್ಟರಿ ನಡೆಯಲಿಲ್ಲ. ಎಲ್ಲ ದಿಕ್ಕುಗಳಿಂದ ಕಾರ್ಮಿಕರು ಕೈಗಳಲ್ಲಿ ಕೋಲುಗಳನ್ನು ಜೇಬಿನಲ್ಲಿ ಕೆಂಬಾವುಟಗಳನ್ನು ಇಟ್ಟುಕೊಂಡು ಮೈದಾನದ ಕಡೆ ಸೇರಿದರು. ಇದ್ದಕ್ಕಿದ್ದಂತೆ 'ಬಂದ ನಾಯಿ(ನೈ) ಹೋಗಲಿ, ಹೋದ ಅಕ್ಕಿ ಬರಲಿ' ಎಂಬ ಘೋಷಣೆಗಳು ಮೊಳಗತೊಡಗಿದವು. ಗಾಬರಿಯಾದ ಪೊಲೀಸರು ಸಿಕ್ಕಸಿಕ್ಕ ಕಾರ್ಮಿಕರ ಮೇಲೆ ಲಾಠಿ ಬೀಸಿದರು. ಕಾರ್ಮಿಕರು ತಮ್ಮಲ್ಲಿದ್ದ ಬಾವುಟದ ಕೋಲುಗಳನ್ನು ಹಿಡಿದು ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ಪೊಲೀಸರು ನಾಯಕರನ್ನೆಲ್ಲಾ ಬಂಧಿಸಿದರು. ಹತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಎಲ್ಲಾ ದಿಕ್ಕುಗಳಿಂದಲೂ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು. ಆಗ ಘೋಷಣೆಗಳು 'ಬಂದ ನಾಯಿ(ನೈ) ಹೋಗಲಿ, ಹೋದ ಅಕ್ಕಿ ಬರಲಿ, ಬಂಧಿಸಿರುವ ನಾಯಕರ ಬಿಡುಗಡೆ ಆಗಲಿ' ಎಂದು ಮೊಳಗಿದವು. ಪೊಲೀಸರು ಮತ್ತು ಜಿಲ್ಲಾಧಿಕಾರಿ ಬೇರೆ ದಾರಿ ಕಾಣದೆ ನಾಯಕರನ್ನು ಬಿಡುಗಡೆ ಮಾಡಿದರು. ಜಿಲ್ಲಾಧಿಕಾರಿ ಅಕ್ಕಿ ಕಡಿತದ ತೀರ್ಮಾನವನ್ನು ವಾಪಸ್ ಪಡೆದರು. ಈ ಹೋರಾಟ ಜನರ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವ ಬೀರಿತು[55].

ಜನರ ಸಮಸ್ಯೆಗಳ ಆಧಾರದಲ್ಲಿ ಹೋರಾಟಗಳನ್ನು ಮುಂದುವರೆಸಿದ ಕಮ್ಯುನಿಸ್ಟರು, ಬೆಲೆ ಏರಿಕೆ ಮತ್ತು ಆಹಾರದ ಅಭಾವ, ವ್ಯಾಪಾರಿಗಳು ಮತ್ತು ಅಧಿಕಾರಿಗಳು ಸೇರಿ ಮಾಡಿರುವ ಕೃತಕ ಸೃಷ್ಟಿಯೆಂದು ಬೆಲೆ ಏರಿಕೆ


ಮತ್ತು ಕಳ್ಳದಾಸ್ತಾನಿನ ವಿರುದ್ಧಹೋರಾಡಲು ತೀರ್ಮಾನಿಸಿದರು. ಅಕ್ಕಿ ಮತ್ತು ಇತರೆ ಆಹಾರ ವಸ್ತುಗಳಿಗೆ ಬೆಲೆ ನಿಗದಿಪಡಿಸಬೇಕು ಮತ್ತು ಕಳ್ಳದಾಸ್ತಾನುಗಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ನೇರ ಕಾರ್ಯಾಚರಣೆಗೆ ಧುಮುಕಿದರು. ಬಂಟ್ವಾಳ, ಉಡುಪಿ, ಕುಂದಾಪುರಗಳಿಂದ ಅಕ್ಕಿ ಮಂಗಳೂರಿನ ಬಂದರಿಗೆ ದೋಣಿಗಳಲ್ಲಿ, ಗಾಡಿಗಳಲ್ಲಿ ಬಂದು ಅಲ್ಲಿ ಕಳ್ಳ ದಾಸ್ತಾನಾಗುತ್ತಿತ್ತು. ಕಮ್ಯುನಿಸ್ಟ್ ಪಕ್ಷದ ಸ್ವಯಂ ಸೇವಕರು ಮಾರ್ಗ ಮಧ್ಯದಲ್ಲಿ ಗಾಡಿಗಳನ್ನು ಮತ್ತು ದೋಣಿಗಳನ್ನು ತಡೆದು ಕಳ್ಳ ದಾಸ್ತಾನಿನ ಅಕ್ಕಿ ಮೂಟೆಗಳನ್ನು ಸ್ವಾಧೀನಪಡಿಸಿಕೊಂಡು ನಿಗದಿತ ಬೆಲೆಗೆ ಜನರಿಗೆ ಮಾರುತ್ತಿದ್ದರು. ಪೊಲೀಸರ ಕಣ್ತಪ್ಪಿಸಿ ಇವನ್ನೆಲ್ಲ ಮಾಡುವ ಯೋಜನೆ ಸ್ಪಷ್ಟವಾಗಿರುತ್ತಿತ್ತು. ನಂತರ ಅಕ್ಕಿಯ ಮೂಲ ಮಾಲೀಕರಿಗೆ ಹಣವನ್ನು ಸಂದಾಯ ಮಾಡುತ್ತಿದ್ದರು. ಇದರಿಂದ ಜನರ ನಡುವೆ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಸದಾಭಿಪ್ರಾಯ ಬೆಳೆಯಿತು. ಕೊನೆಗೆ ಜಿಲ್ಲಾಧಿಕಾರಿಯ ಮಧ್ಯಪ್ರವೇಶದಿಂದ ಯಾವುದೇ ಅಂಗಡಿಯಲ್ಲೂ ನಿಗದಿತ ದರಕ್ಕೆ ಪ್ರತಿಯೊಬ್ಬರಿಗೂ ಎರಡು ಕೆಜಿ ಅಕ್ಕಿ ಸಿಗುವಂತಾಯಿತು. ಇದನ್ನು 500 ಕ್ಕೂ ಹೆಚ್ಚು ಕಮ್ಯುನಿಸ್ಟ್ ಕಾರ್ಯಕರ್ತರೇ ಮುಂದೆ ನಿಂತು ನಿರ್ವಹಿಸುತ್ತಿದ್ದರು (ಕಕ್ಕಿಲ್ಲಾಯ 2003: 64–65).

ಬಾಂಬೆ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಧಾರವಾಡ, ಉತ್ತರ ಕನ್ನಡ, ಬಿಜಾಪುರ ಮತ್ತು ಬೆಳಗಾವಿ ಇವು ತೀವ್ರವಾದ ರಾಷ್ಟ್ರೀಯ ಚಳುವಳಿಯ ಕೇಂದ್ರವಾಗಿದ್ದ ಬಾಂಬೆಯ ಪ್ರಭಾವಕ್ಕೆ ಒಳಗಾಗಿದ್ದವು. ಸಿಪಿಐ ಕೇಂದ್ರ ಸಮಿತಿ ನಿರ್ದೇಶನದಂತೆ ಎನ್. ಕೆ.ಉಪಾಧ್ಯಾಯರು55ಬಿಜಾಪುರದಲ್ಲಿ ಚಳುವಳಿ ಕಟ್ಟಲು ಬಂದಿದ್ದರು. ಅಷ್ಟರಲ್ಲಿ ಎನ್.ಎಂ.ಬಾಲಸಿಂಗ್ ಮಾಸ್ತರ್[56] ಜೈಲಿನಿಂದ ಬಿಡುಗಡೆಯಾಗಿ ಬಂದರು. ಇವರು 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಭೆಯೊಂದರಲ್ಲಿ ಭಾಷಣ ಮಾಡುವಾಗ ಬಂಧಿಸಲ್ಪಟ್ಟಿದ್ದರು. ಬಿಜಾಪುರಕ್ಕೂ ಹೆಸರಾಂತ ಕಮ್ಯುನಿಸ್ಟ್ ನಾಯಕರಿಗೂ ತಾಂತ್ರಿಕವಾಗಿ ಸಂಬಂಧಗಳ ಚರಿತ್ರೆಯನ್ನು ಕಾಣಬಹುದು. ದೇಶದ ಅತ್ಯುನ್ನತ ಕಮ್ಯುನಿಸ್ಟ್ ನಾಯಕರಲ್ಲಿ ಒಬ್ಬರಾಗಿದ್ದ ಡಾ.ಗಂಗಾಧರ ಅಧಿಕಾರಿಯವರನ್ನು ಬ್ರಿಟಿಷ್ ಸರ್ಕಾರ 1935 ರಲ್ಲಿ ದಿಗ್ಬಂಧನಕ್ಕೆ ಒಳಪಡಿಸಿದ್ದಾಗ ಬಿಜಾಪುರದಲ್ಲಿ ವಾಸವಿದ್ದರು. ಆಗ ಕೆಲವು ಕಾಂಗ್ರೆಸಿಗರ ನಡುವೆ ಕಮ್ಯುನಿಸಂ ವಿಚಾರಗಳ ಬಗ್ಗೆ ಪ್ರಭಾವ ಬೀರಿದ್ದರು. ಆ ನಂತರ ಎಂ.ಎನ್.ರಾಯ್ ಅವರು ಮುಂಬೈನ ಕಾಂಗ್ರೆಸ್ ಸಮಾಜವಾದಿಗಳಾಗಿದ್ದ ಮಣಿಬೆನೆ ಖಾರಾ ಅವರೊಂದಿಗೆ ಕೆಲವು ತಿಂಗಳು ಬಿಜಾಪುರದ ಕಾಂಗ್ರೆಸ್ ಮುಖಂಡರಾದ ಕೃಷ್ಣರಾವ್ ಕೌಜಲಗಿ ಅವರ ಮನೆಯಲ್ಲಿದ್ದರು. ಇವರ ಪ್ರಭಾವದಿಂದ ಕೆಲವರು ರಾಯಿಸ್ಟರಾಗಿದ್ದರು (ಉಪಾಧ್ಯಾಯ 1996: 13). ಧಾರವಾಡ – ಹುಬ್ಬಳ್ಳಿ ಪ್ರದೇಶದಲ್ಲಿ 1946–47 ಡಿ.ಎ., ವೇತನ ಪರಿಷ್ಕರಣೆ ಮತ್ತು ಕೆಲಸದಿಂದ ತೆಗೆಯುವುದರ ವಿರುದ್ಧ ರಾ ಕಮಿಟಿಯ ಶಿಫಾರಸ್ಸುಗಳನ್ನು ಜಾರಿಮಾಡಬೇಕೆಂದು ಆಲ್ ಇಂಡಿಯಾ ರೈಲ್ವೆಮೆನ್ಸ್ ಫೆಡರೇಷನ್ ನೀಡಿದ್ದ ಮುಷ್ಕರದ ಕರೆಗೆ ಹುಬ್ಬಳ್ಳಿಯ ಎಂ.ಎಸ್.ಎಂ. ರೈಲ್ವೆ ಕಾರ್ಮಿಕರು ಬೆಂಬಲಿಸಿ ಮುಷ್ಕರ ಮಾಡಿದರು (ಮಹೇಂದ್ರ 2005: 19).


ಎನ್.ಕೆ.ಉಪಾಧ್ಯಾಯ

ಕರ್ನಾಟಕದ ಮೊದಲ ಕಮ್ಯುನಿಸ್ಟ್ ಘಟಕ

ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಯಾವ ಕಾಲದಲ್ಲಿ ಯಾರೆಲ್ಲಾ ಸೇರಿ ಕಮ್ಯುನಿಸ್ಟ್ ಪಕ್ಷದ ಘಟಕಗಳನ್ನು ಯಾವ ರೀತಿಯಲ್ಲಿ ಆರಂಭಿಸಿದರು ಮತ್ತು ಇವುಗಳ ಪೈಕಿ ಕರ್ನಾಟಕದ ಮೊಟ್ಟ ಮೊದಲ ಕಮ್ಯುನಿಸ್ಟ್ ಘಟಕ ಯಾವುದು ಮತ್ತು ಮೊದಲ ಕಮ್ಯುನಿಸ್ಟ್ ಯಾರು ಎಂಬುದನ್ನು, ವಿವಿಧ ಪ್ರಾಂತ್ಯಗಳಲ್ಲಿ ನಡೆದ ಕಮ್ಯುನಿಸ್ಟ್ ಚಟುವಟಿಕೆಗಳನ್ನು ಆಧರಿಸಿ ಇಲ್ಲಿ ಚರ್ಚಿಸಲಾಗಿದೆ.


ಪಿ.ಸುಂದರಯ್ಯ

ಅಮಿರ್ ಹೈದರ್ ಖಾನ್ ಅವರು 1931 ರಲ್ಲಿ ಪಿ.ಸುಂದರಯ್ಯ[57] ಅವರನ್ನು ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ಭೇಟಿ ಮಾಡಿ ಅವರನ್ನು ಕಮ್ಯುನಿಸ್ಟರನ್ನಾಗಿ ಮಾಡುವಲ್ಲಿನ ಪ್ರಯತ್ನ ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲೊಂದು ಮೈಲಿಗಲ್ಲು. ಬೆಂಗಳೂರಿನಲ್ಲಿ ಅವರಿಬ್ಬರು ನಡೆಸಿದ ಚರ್ಚೆ ಮುಂದೆ ಸುಂದರಯ್ಯ ಕಮ್ಯುನಿಸ್ಟ್ ಆದದ್ದು ಮಾತ್ರವಲ್ಲ, ಇಎಂಎಸ್ ನಂಬೂದಿರಿಪಾದ್ ಅಂತಹವರನ್ನು ಕಮ್ಯುನಿಸ್ಟ್ ಚಳುವಳಿಗೆ ಕರೆದು ತರಲು ಕಾರಣವಾಯಿತು. ಆದರೆ ಇಂತಹ ಪ್ರಯತ್ನಗಳು ನಡೆದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಕಮ್ಯುನಿಸ್ಟರೆಂದು ಹೇಳಿಕೊಳ್ಳವವರು ಯಾರಾದರೂ ಇದ್ದ ಬಗ್ಗೆ ಮಾಹಿತಿಗಳಿಲ್ಲ. ಬಹುಶಃ ಕಮ್ಯುನಿಸ್ಟ್ ಪಕ್ಷದ ಸಂಪರ್ಕ ಇಲ್ಲಿ ಇರಲಿಲ್ಲವೆನಿಸುತ್ತದೆ. ಹೀಗಾಗಿ ಅಮೀರ್ ಹೈದರ್ ಖಾನ್ ಮತ್ತು ಸುಂದರಯ್ಯ ಅವರ ಬೆಂಗಳೂರಿನ ಭೇಟಿ ಇಲ್ಲಿ ಯಾವುದೇ ಮಹತ್ವವನ್ನು ಪಡೆದುಕೊಳ್ಳಲಿಲ್ಲ.


ಕಾರವಾರ ಜೈಲಿನಲ್ಲಿ ಮೊಣ್ಣಯ್ಯನವರಿಗೆ ಮೈಸೂರಿನ ಕೆ.ಶ್ರೀನಿವಾಸಮೂರ್ತಿಯವರು ಜೊತೆಗಾರರಾಗಿದ್ದರು. ಆ ವೇಳೆಗಾಗಲೇ ಅವರು ನಿಷೇಧಿತ ಕಮ್ಯುನಿಸ್ಟ್ ಪಕ್ಷದ ಸಂಪರ್ಕವನ್ನು ಪಡೆದಿದ್ದರು ಎನ್ನಲಾಗಿದೆ. ಅವರು ಮೊಣ್ಣಯ್ಯನವರೊಂದಿಗೆ ಚರ್ಚಿಸಿ ಮೈಸೂರು ಸಂಸ್ಥಾನದಲ್ಲಿ ಕಮ್ಯುನಿಸ್ಟ್ ಪಕ್ಷದ ಘಟಕವನ್ನು ಸ್ಥಾಪಿಸುವ ಅಭಿಪ್ರಾಯಕ್ಕೆ ಬಂದರು. ಈ ಯೋಜನೆಯಲ್ಲಿ ಇನ್ನೂ ಇಬ್ಬರು ಗೆಳೆಯರು ಕೂಡಿಕೊಂಡರು. ಈ ಪ್ರಕಾರವಾಗಿ, ಸಿ.ಬಿ.ಮೊಣ್ಣಯ್ಯ, ಕೆ.ಶ್ರೀನಿವಾಸಮೂರ್ತಿ, ಅನಂತಸುಬ್ಬರಾವ್ ಮತ್ತು ಎಸ್.ವಿ.ನಾರಾಯಣಮೂರ್ತಿ ಇವರುಗಳು 1936 ನವೆಂಬರ್ ಅಂತ್ಯಕ್ಕೆ ಬೆಂಗಳೂರಿನ ಮಲ್ಲೇಶ್ವರಂ ರೈಲ್ವೆ ಪ್ಲಾಟ್‌ಫಾರಂನಲ್ಲಿ ಕಲೆತು, ಮುಂದೆ ಕಮ್ಯುನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ದುಡಿಯುವ ಪ್ರತಿಜ್ಞೆ ಮಾಡಿ, ಪಾರ್ಟಿಯ ಸದಸ್ಯರಾಗಿ, ಪಕ್ಷದ 'ಸೆಲ್'ನ್ನು ಆರಂಭಿಸಿದರು. ಈ ರೀತಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಕರ್ನಾಟಕದ ಪ್ರಥಮ ಘಟಕವನ್ನು ಪ್ರಾರಂಭಿಸಿದರು. ಇದರ ಮೊದಲ ಕಾರ್ಯದರ್ಶಿ ಸಿ.ಬಿ.ಮೊಣ್ಣಯ್ಯನವರು.

ದಕ್ಷಿಣ ಕನ್ನಡ ಜಿಲ್ಲೆಯ ಗಣನೀಯ ಸಂಖ್ಯೆಯ ಜನ ಮುಂಬೈನಲ್ಲಿ ನೆಲೆಸಿದ್ದರು. ಆಗ ಮುಂಬೈ ಕಮ್ಯುನಿಸ್ಟ್ ಪಕ್ಷದ ಕೇಂದ್ರವಾಗಿತ್ತು. ಅಲ್ಲಿನ ಕಮ್ಯುನಿಸ್ಟ್ ಪಕ್ಷದೊಂದಿಗೆ ಹಲವಾರು ಜನ ಸಂಪರ್ಕಕ್ಕೆ ಬಂದರು. ಆ ರೀತಿ ಬಂದವರ ಪೈಕಿ ಎಸ್.ವಿ.ಘಾಟೆ[58] ಬ್ರಿಟಿಷರಿಂದ ಸ್ಥಾನಬದ್ಧತೆಗೆ ಒಳಗಾಗಿ ಮಂಗಳೂರಿನಲ್ಲಿದ್ದರು (ಕಕ್ಕಿಲ್ಲಾಯ

2003: 93). ಎರಡನೇ ಮಹಾಯುದ್ಧ ಆರಂಭಿಕ ಸಮಯದಲ್ಲಿ ಮಂಗಳೂರಿನಲ್ಲಿದ್ದ ಎಸ್.ವಿ.ಘಾಟೆಯವರು ಇಲ್ಲಿರುವಾಗ ಕಾರ್ಮಿಕ, ವಿದ್ಯಾರ್ಥಿ ಮತ್ತು ಪಕ್ಷದ ಘಟಕಗಳನ್ನು ಆರಂಭಿಸಲು ಕ್ರಮ ವಹಿಸಿದರು. 1936–37 ರ ಸುಮಾರಿಗೆ ನೇಯ್ಗೆ ಮತ್ತು ಬೀಡಿ ಕಾರ್ಮಿಕರ ಸಂಘಟನೆಗಳ ಆರಂಭ ಮತ್ತು ಅದರೊಂದಿಗೆ ವಿದ್ಯಾರ್ಥಿಗಳು ಸಹ ಸೇರಿಕೊಂಡಿದ್ದರು. ಎಸ್.ವಿ.ಘಾಟೆಯವರ ಮಾರ್ಗದರ್ಶನದಲ್ಲಿ ಸಿಂಪ್ಸನ್ ಸೋನ್ಸ್, ಎ.ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಕೇಶವ ಕಾಮತ್, ಸಿ.ಕೆ.ಗೋವಿಂದನ್, ಮೋನಪ್ಪ ಶೆಟ್ಟಿ, ಎಸ್.ಎನ್.ಹೊಳ್ಳ ಇವರ ಮುಖಾಂತರ ಮಂಗಳೂರಿನಲ್ಲಿ 1937 ರಲ್ಲಿ ಕಮ್ಯುನಿಸ್ಟ್ ಪಕ್ಷದ ಘಟಕವನ್ನು ಪ್ರಾರಂಭಿಸಿದರು (ಶ್ರೀಯಾನ್ 2017: 56–57). ಬಂಗ್ರೆ ಮಂಜೇಶ್ವರದವರಾಗಿದ್ದ ಎಂ.ಮಂಜು ಮಂಗಳೂರಿನಲ್ಲಿ ಪಕ್ಷದ ಮೊತ್ತ ಮೊದಲ ಸದಸ್ಯರಾಗಿದ್ದರೆಂದು (ಕಕ್ಕಿಲ್ಲಾಯ 2003: 185) ಹೇಳಲಾದರೂ ಆ ಬಗ್ಗೆ ಹೆಚ್ಚು ಮಾಹಿತಿಗಳಿಲ್ಲ.




ಸಿಂಪ್ಸನ್ ಸೋನ್ಸ್



ಎ.ಕೃಷ್ಣಶೆಟ್ಟಿ

ಮೈಸೂರಿನ ಹಿರಿಯ ಕಮ್ಯುನಿಸ್ಟ್ ನೇತಾರರಾಗಿದ್ದ ಉಗ್ರಪ್ಪನವರು ತಮ್ಮ ಜೀವನ ಚರಿತ್ರೆಯಲ್ಲಿ ತಾವು 1943 ರಲ್ಲಿ ಸಿಪಿಐನ ಸದಸ್ಯರಾಗಿದ್ದಾಗಿ ಹೇಳಿದ್ದಾರೆ. ಇವರಿಗೂ ಮುಂಚಿತವಾಗಿ ಗೌರಮ್ಮ[59] ಮತ್ತು ಅವರ ಸಹೋದರ ಎನ್.ಪಿ.ಶಂಕರನಾರಾಯಣರಾವ್[60] ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರು ಎಂದು ಹೇಳಿದ್ದಾರೆ. ಇಷ್ಟೊತ್ತಿಗಾಗಲೇ ಮೈಸೂರಿನಲ್ಲಿ ಜನ ಜಾಗೃತಿ ಸಂಘದ ಕಛೇರಿ ಆರಂಭವಾಗಿತ್ತು. ಮೈಸೂರಿನಲ್ಲಿ ಸಿಪಿಐನ ಆರಂಭ ಜನ ಜಾಗೃತಿ ಸಂಘದ ಬೆಳವಣಿಗೆಯ ಜೊತೆಯೂ ಸಂಬಂಧವನ್ನು ಹೊಂದಿದೆ. ಅಲ್ಲೆಲ್ಲಾ ದೇಶದ ರಾಜಕೀಯ ಪರಿಸ್ಥಿತಿ, ಎರಡನೇ ಮಹಾಯುದ್ಧ, ಮಾರ್ಕ್ಸ್‌ವಾದ ಇತ್ಯಾದಿಗಳ ಚರ್ಚೆಗಳು ನಡೆಯುತ್ತಿದ್ದವು. ಉಗ್ರಪ್ಪನವರ ಸಹಪಾಠಿಯಾಗಿದ್ದ ವೆಸ್ಲಿ, ನಾಮಗೊಂಡು ಕೃಷ್ಣಮೂರ್ತಿ, ಎಸ್.ಅನಂತನಾರಾಯಣ, ಕೇಸರಿ ಕೇಶವನ್, ಕುಣಿಗಲ್ ಶ್ರೀಧರ್ ಮುಂತಾದವರು ಊರ ಹೊರಗಿನ ಪ್ರದೇಶಗಳಲ್ಲಿ ಸೇರಿ ಇಂತಹುದೇ ಚರ್ಚೆಗಳನ್ನು ಮಾಡುತ್ತಿದ್ದರು. ಕುಣಿಗಲ್ ಶ್ರೀಧರ್ ಅವರು ಸಿಪಿಐನ ಕಾರ್ಯದರ್ಶಿಯಾಗಿದ್ದರು. ಇದೇ ಹೊತ್ತಿಗೆ ಬೀಡಿ ಕೆಲಸಗಾರರಾಗಿ ಕೇರಳದ ಕಮ್ಯುನಿಸ್ಟ್ ಹಿನ್ನೆಲೆಯ ಮ್ಯಾಥ್ಯು ಮತ್ತು ಹರಿದಾಸ್ ಮುಂತಾದವರು ಮೈಸೂರಿನಲ್ಲಿದ್ದರು. ಅವರಿಗೆ ಮಲಯಾಳಿ ಬೀಡಿ ಕಾರ್ಮಿಕರ ನಡುವೆ ಅಪಾರ ಗೌರವವಿತ್ತು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ 1943 ಕ್ಕೆ ಮೊದಲೇ ಮೈಸೂರಿನಲ್ಲಿ ಕಮ್ಯುನಿಸ್ಟ್ ಪಕ್ಷದ ಘಟಕವಿತ್ತು. ಆದರೆ ಅದು ಯಾವ ವರ್ಷದಲ್ಲಿ ಆರಂಭವಾಯಿತೆನ್ನುವ ಬಗ್ಗೆ ಖಚಿತ ಮಾಹಿತಿಯ ಕೊರತೆಯಿದೆ. ಜನ ಜಾಗೃತಿ ಸಂಘದ ಮೂಲಕವೇ ಕಮ್ಯುನಿಸ್ಟ್ ಪಕ್ಷ ಸಂಪರ್ಕ ಬಂದಿರಬಹುದಾದ್ದರಿಂದ, ಬೆಂಗಳೂರಿನ ಸಿಪಿಐ ಘಟಕದ ನಂತರವೇ ಆಗಿರಬಹುದು.




ಎಂ.ಎನ್.ಉಗ್ರಪ್ಪ

ಸಿ.ಬಿ.ಮೊಣ್ಣಯ್ಯನವರನ್ನು ಗಡೀಪಾರು ಉಲ್ಲಂಘನೆ ಪ್ರಕರಣದಲ್ಲಿ 1939 ರಲ್ಲಿ ಮೈಸೂರು ಸರ್ಕಾರ ಕೆಜಿಎಫ್ ಜೈಲಿನಲ್ಲಿಟ್ಟಿತ್ತು. ಅಲ್ಲಿ ಲಕ್ಷ್ಮಣ ಮೊದಲಿಯಾರ್ ಪರಿಚಯವಾಗಿ ಅವರ ಮೂಲಕ ಗುಪ್ತವಾಗಿ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿದರು (ಶಂಕರನಾರಾಯಣ ರಾವ್ 1989: 60). ಪರಿಣಾಮವಾಗಿ ಲಕ್ಷ್ಮಣ ಮೊದಲಿಯಾರ್ ಅವರನ್ನು ಸರ್ಕಾರ ಗಡೀಪಾರು ಮಾಡಿತು. ಇವರು ನಂತರ ಬೆಂಗಳೂರಿನಲ್ಲಿ ಎನ್.ಎಲ್.ಉಪಾಧ್ಯಾಯರ ಸಂಪರ್ಕಕ್ಕೆ ಬಂದರು. ನಂತರ ಎನ್.ಎಲ್.ಉಪಾಧ್ಯಾಯರೂ ಸಹ ಕೆಜಿಎಫ್‌ನಲ್ಲಿ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಲು ಮುತುವರ್ಜಿ ಮಾಡಿದರು[61]. ಕೆಜಿಎಫ್‌ನಲ್ಲಿ ತಮಿಳು ಕಾರ್ಮಿಕರೇ ಹೆಚ್ಚಾಗಿದ್ದರಿಂದ ಅದೇ ಸಮಯಕ್ಕೆ ಮದ್ರಾಸಿನ ಕಾರ್ಮಿಕ ಮುಖಂಡರೂ ಸಹ ಅಲ್ಲಿ ಸಂಪರ್ಕಕ್ಕೆ ಬಂದಿದ್ದರು. ಮದ್ರಾಸಿನ ಕಮ್ಯುನಿಸ್ಟ್ ಮುಖಂಡರಾಗಿದ್ದ ಪಿ.ರಾಮಮೂರ್ತಿ ಮಾರ್ಗದರ್ಶನದಲ್ಲಿ ವಜ್ರವೇಲು ಚೆಟ್ಟಿಯಾರ್ ಅವರು 1941 ರ ಸುಮಾರಿಗೆ ಇಡೀ ಚಿನ್ನದ ಗಣಿಗೆ ಒಂದೇ ಸಂಘ ಬೇಕೆಂಬ ಬೇಡಿಕೆಯನ್ನಿಟ್ಟರು. ಆದರೆ ಜಾನ್ ಟೇಲರ್ ಕಂಪನಿಯು ಅದನ್ನು ಒಪ್ಪದಿದ್ದಾಗ 6 ಸಂಘಗಳನ್ನು ಪ್ರತ್ಯೇಕವಾಗಿ ನೋಂದಣಿ ಮಾಡಿಸಿದರು. ಇವೆಲ್ಲವೂ ಕುಡುಗೋಲು ಸುತ್ತಿಗೆ ಇರುವ ಕೆಂಬಾವುಟದ ಸಂಘಗಳೇ ಆಗಿದ್ದವು. ಆದರೆ ನಾಯಕತ್ವದ ವಿಚಾರಕ್ಕೆ ಬಂದರೆ ಬೇರೆಯಾಗಿದ್ದವು[62]. 1942 ರಲ್ಲಿ ಮದ್ರಾಸಿನ ಎಐಟಿಯುಸಿ ಸಂಘಟನೆಯಲ್ಲಿದ್ದ ವಿ.ಎಂ.ಗೋವಿಂದನ್ ಅವರನ್ನು ಪಿ.ರಾಮಮೂರ್ತಿಯವರು ಕೆಜಿಎಫ್‌ಗೆ ಕಳುಹಿಸಿದರು. ಕೆಜಿಎಫ್‌ನಲ್ಲಿ ಬೆಳೆಯುತ್ತಿದ್ದ ಚಳುವಳಿಯನ್ನು ಗಮನದಲ್ಲಿಟ್ಟುಕೊಂಡು ಮದ್ರಾಸಿನ ಕಮ್ಯುನಿಸ್ಟ್ ಪಕ್ಷ 1943 ರಲ್ಲಿ ಕೆ.ಎಸ್.ವಾಸನ್ ಅವರನ್ನು ಕೆಜಿಎಫ್‌ಗೆ ಕಳುಹಿಸಿಕೊಟ್ಟಿತು. ವಜ್ರವೇಲು ಚೆಟ್ಟಿಯಾರ್, ವಿ.ಎಂ.ಗೋವಿಂದನ್, ಕೆ.ಎಸ್.ವಾಸನ್ ಇವರುಗಳು ಮುಖ್ಯವಾಗಿದ್ದು ಇತರೆ ಕೆಲವರನ್ನು ಒಳಗೊಂಡು 1943 ರಲ್ಲಿ ಕೆಜಿಎಫ್‌ನ ಮೊದಲ ಕಮ್ಯುನಿಸ್ಟ್ ಘಟಕ ಸ್ಥಾಪನೆಯಾಗಿತ್ತು[63]. ಇದು ಮುಂದೆ 1945 ರಲ್ಲಿ ಕೆಜಿಎಫ್ ಸ್ಥಳೀಯ ಸಮಿತಿಯಾಗಿ ಪರಿವರ್ತನೆಯಾಯಿತು. ವಜ್ರವೇಲು ಚೆಟ್ಟಿಯಾರ್ ಅದರ ಮೊದಲ ಕಾರ್ಯದರ್ಶಿಯಾಗಿದ್ದರು.


ಕೆ.ಎಸ್.ವಾಸನ್

ಉತ್ತರ ಕನ್ನಡ ಜಿಲ್ಲೆಯಲ್ಲಿ1937 ರಲ್ಲಿ ಕಾರವಾರದ ಹಳಗಾ ಮತ್ತು ಉಳಗಾ ಗ್ರಾಮಗಳಲ್ಲಿ ಸೈಯದ್ ಹೈದರ್, ಅಬ್ದುಲ್ ಹಮೀದ್, ಪುರುಷೋತ್ತಮ ಜೋಗಿ ನಾಯ್ಕ ಕಿಸಾನ್ ಸಭಾವನ್ನು ಪ್ರಾರಂಭಿಸುತ್ತಾರೆ (ವಿಠಲ ಭಂಡಾರಿ 2011: 10). ಆ ವೇಳೆಗಾಗಲೇ ಅಲ್ಲಿ ಸಣ್ಣ ಪ್ರಮಾಣದ ರೈತ ಪ್ರತಿಭಟನೆಗಳು ನಡೆಯುತ್ತಿರುತ್ತವೆ. ಮೂಲತಃ ಕಾಂಗ್ರೆಸಿಗರಾಗಿದ್ದ ಸೈಯದ್ ಹೈದರ್ ಅವರು 1924 ರ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ನಂತರ, ಬೇಸತ್ತು ಕಾಂಗ್ರೆಸ್‌ನ್ನು ತೊರೆಯುತ್ತಾರೆ ಮತ್ತು ಕಮ್ಯುನಿಸ್ಟ್ ಪಕ್ಷದ ಬಗ್ಗೆ ಒಲವನ್ನು ತೋರಿಸುತ್ತಾರೆ. ಇದು ಮುಂದೆ ಎಐಕೆಎಸ್‌ನ್ನು ಅದು ಪ್ರಾರಂಭವಾದ ಮರುವರ್ಷವೇ ಕಾರವಾರದಲ್ಲಿ ಆರಂಭಿಸಲು ಕಾರಣವಾಗುತ್ತದೆ. ಅಷ್ಟೊತ್ತಿಗೆ ಇವರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರೆಂದು ಹೇಳಲಾಗುತ್ತಿದೆ. ಆದರೆ ಅದಕ್ಕೆ ದಾಖಲೆಗಳು ಸಿಗುತ್ತಿಲ್ಲ. ಈ ಪ್ರಕಾರವಾಗಿ ನೋಡಿದರೆ ಇವರುಗಳು 1936 ಕ್ಕೂ ಮುಂಚೆ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದಿರಬಹುದು.

ಎರಡನೇ ಪ್ರಪಂಚ ಯುದ್ಧ ಸಂದರ್ಭದಲ್ಲಿ ಬೆಳೆದು ಬಂದ ಕಾರ್ಮಿಕ ಮತ್ತು ರೈತ ಹೋರಾಟಗಳ ನಡುವಿನಿಂದ ಬಿಜಾಪುರ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೀಜಗಳು ಮೊಳೆತವು. ಕೆಂಬಾವುಟದ ಅಡಿಯಲ್ಲಿ ಎಐಟಿಯುಸಿ, ಕಾರ್ಮಿಕರ ನಡುವೆ ಕೂಲಿ ಹೆಚ್ಚಳ, ತುಟ್ಟಿಭತ್ಯೆ ಹೆಚ್ಚಳ, ಬೆಲೆಗಳ ಇಳಿಕೆ, ಅಗ್ಗದರದಲ್ಲಿ ಆಹಾರಧಾನ್ಯಗಳು ಮುಂತಾದ ಪ್ರಶ್ನೆಗಳಿಗಾಗಿ ಮತ್ತು ಎಐಕೆಎಸ್ ಸಂಘಟನೆ ರೈತರ ನಡುವೆ, ಗೇಣಿಯಲ್ಲಿ ರೈತನ ಪಾಲು ಹೆಚ್ಚಾಗಬೇಕು, ಉಳುವವನಿಗೆ ಭೂಮಿ ಸಿಗಬೇಕು, ಜಮೀನ್ದಾರಿ ಪದ್ಧತಿ ತೊಲಗಬೇಕು ಮುಂತಾದ ಬೇಡಿಕೆಗಳಿಗಾಗಿ ನಡೆಸಿದ ಹೋರಾಟಗಳಲ್ಲಿ ಅನೇಕರು ಕಮ್ಯುನಿಸ್ಟರಾಗಿದ್ದರು. ಎನ್.ಕೆ.ಉಪಾಧ್ಯಾಯರು ನಾಸಿಕ್ ಜೈಲಿನಲ್ಲಿ 1941 ರಲ್ಲೇ ಕಮ್ಯುನಿಸ್ಟ್ ಪಾರ್ಟಿ ಸದಸ್ಯರಾಗಿದ್ದರು. 1944 ರಲ್ಲಿ ಇವರ ಜೊತೆಯಲ್ಲಿ ಬಾಲಸಿಂಗ್ ಮಾಸ್ತರ್ ಮತ್ತು ಎಂ.ಎಂ. ಮಕಾನ್‌ದಾರ ಇವರು ಸೇರಿ ಕಮ್ಯುನಿಸ್ಟ್ ಪಕ್ಷದ ಮೊದಲ ಘಟಕವನ್ನು ಆರಂಭಿಸಿದರು. ಇದನ್ನು ಆರಂಭಿಸುವುದರಲ್ಲಿ ಕರ್ನಾಟಕ ಕಮ್ಯುನಿಸ್ಟ್ ಪಕ್ಷದ ಜವಾಬ್ದಾರಿಯನ್ನು ಹೊತ್ತಿದ್ದ ಎನ್.ಎಲ್.ಉಪಾಧ್ಯಾಯರು ನೆರವು ನೀಡಿದರು (ಉಪಾಧ್ಯಾಯ 1996: 57).


ಶ್ರೀನಿವಾಸ ಗುಡಿ

ಗುಲ್ಬರ್ಗ ಭಾಗದಲ್ಲಿ ಹೈದರಾಬಾದಿನ ಪಕ್ಷದ ಮುಖಂಡರು ಮತ್ತು ಉರ್ದು ಕವಿಗಳೂ ಆಗಿದ್ದ ಮೊಕ್ದುಂ ಮೊಹಿಯುದ್ದೀನ್ ಹಾಗೂ ಅವರ ಜೊತೆಗಾರರಾದ ರಾಜ್‌ಬಹದೂರ್ ಗೌಡ್ ಇವರು ಶಹಾಬಾದ್‌ನ ಸಿಮೆಂಟ್ ಕಾರ್ಖಾನೆಯಲ್ಲಿ ಮತ್ತು ಗುಲ್ಬರ್ಗದ ಗಿರಣಿಯಲ್ಲಿ ಕಾರ್ಮಿಕ ಸಂಘಗಳನ್ನು ಸ್ಥಾಪಿಸಿದ್ದರು. ಹೈದರಾಬಾದ್ ನಿಜಾಂ ವಿರುದ್ಧ ನಡೆದ ತೆಲಂಗಾಣ ಹೋರಾಟದಿಂದ ಸ್ಫೂರ್ತಿ ಪಡೆದ ಶ್ರೀನಿವಾಸ ಗುಡಿ, ಅಬ್ದುಲ್ ಕರೀಂ, ವಿ.ಎನ್.ಪಾಟೀಲ್ ಕಮ್ಯುನಿಸ್ಟ್ ಪಕ್ಷದತ್ತ ಆಕರ್ಷಿತರಾದರು (ಕಕ್ಕಿಲ್ಲಾಯ 2003: 98).

ಮೇಲಿನ ವಿವರಣೆಯ ಆಧಾರದಲ್ಲಿ ಸಿ.ಬಿ.ಮೊಣ್ಣಯ್ಯ, ಎನ್.ಡಿ.ಶಂಕರ್ ಮತ್ತು ಎಂ.ಎಸ್.ರಾಮರಾವ್ ಇವರುಗಳು 1936 ನವೆಂಬರ್‌ನಲ್ಲಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ರಚಿಸಿದ್ದೇ **ಕರ್ನಾಟಕದ ಮೊದಲ ಕಮ್ಯುನಿಸ್ಟ್ ಘಟಕ**ವೆನ್ನಬಹುದು64. ಇದರ ಮೊದಲ ಕಾರ್ಯದರ್ಶಿಯಾಗಿ ಸಿ.ಬಿ.ಮೊಣ್ಣಯ್ಯನವರಾಗಿದ್ದರು.

ಕರ್ನಾಟಕದ ನಾನಾ ಭಾಗಗಳಲ್ಲಿ ಭಿನ್ನ ಸ್ತರಗಳಲ್ಲಿ ರೂಪ ತಳೆದಿದ್ದ ಮತ್ತು ತಳೆಯುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಘಟಕಗಳನ್ನು ಸಮನ್ವಯಗೊಳಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಒಂದು ಶಿಕ್ಷಣ ಶಿಬಿರವನ್ನು ಪಕ್ಷದ ಕೇಂದ್ರ ಸಮಿತಿ (ಬಹುಶಃ 1942ರ ಸುಮಾರಿಗೆ) ಏರ್ಪಡಿಸಿತ್ತು. ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಯೂನಿಯನ್ ಪ್ರವೇಶದೊಂದಿಗೆ ಆದ ಮಾರ್ಪಾಟಿನ ಬಗ್ಗೆ, ಕಾರ್ಮಿಕ-ರೈತ-ವಿದ್ಯಾರ್ಥಿ ಚಳುವಳಿಯನ್ನು ಬೆಳೆಸುವ ಅಗತ್ಯದ ಬಗ್ಗೆ, ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಜವಾಬ್ದಾರಿ ಸರ್ಕಾರಕ್ಕಾಗಿನ ಹೋರಾಟವನ್ನು ಬೆಂಬಲಿಸುವ ಬಗ್ಗೆ ಮತ್ತು ಪಕ್ಷದ ಸಂಘಟನೆಯ ಸಂಯೋಜನೆ ಬಗ್ಗೆ ವಿವರಣೆ ನೀಡಲು ಈ ಶಿಬಿರನ್ನು ನಡೆಸಲಾಗಿತ್ತು[65].

ದ್ವಿತೀಯ ಮಹಾಯುದ್ಧದ ನಂತರ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳನ್ನು ಕ್ರೋಢೀಕರಿಸುವ ಉದ್ದೇಶದಿಂದ ದಾವಣಗೆರೆಯಲ್ಲಿ **ಕಮ್ಯುನಿಸ್ಟ್ ಪಾರ್ಟಿಯ ಪ್ರಥಮ ಸಮ್ಮೇಳನ 1946** ರಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಂಘಟನೆ ಅಸ್ತಿತ್ವಕ್ಕೆ ಬಂತು. ಎನ್.ಎಲ್.ಉಪಾಧ್ಯಾಯ ಪಾರ್ಟಿಯ ಕಾರ್ಯದರ್ಶಿಯಾದರು. ಈ ಸಮಿತಿಯಲ್ಲಿ ಕುಳಕುಂದ ಶಿವರಾಯ, ಎನ್.ಡಿ.ಶಂಕರ್, ಎಸ್.ಎನ್.ಹೊಳ್ಳ, ವಿಜಾಪುರದ ಬಾಲಸಿಂಗ್ ಮಾಸ್ತರ್, ವಿ.ಎಂ.ಗೋವಿಂದನ್ ಇವರಿದ್ದರು (ಕೃಷ್ಣರಾವ್ 2012: 13).


ಸಮೂಹ ಸಂಘಟನೆಗಳು

ರಾಷ್ಟ್ರೀಯ ಹೋರಾಟದಲ್ಲಿ ವಿವಿಧ ಸಮೂಹ ಸಂಘಟನೆಗಳನ್ನು ಸ್ಥಾಪಿಸುವುದರಲ್ಲಿ ಮತ್ತು ಅವುಗಳ ಮೂಲಕ ವಿವಿಧ ಜನ ಸಮೂಹಗಳನ್ನು ಹೋರಾಟಕ್ಕೆ ಇಳಿಸುವುದರಲ್ಲಿ ಕಮ್ಯುನಿಸ್ಟ್ ಪಕ್ಷ ಮುತುವರ್ಜಿ ವಹಿಸಿದ್ದನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ–ಪೂರ್ವ ಸಂದರ್ಭದಲ್ಲಿ ಸಮೂಹ ಸಂಘಟನೆಗಳ ಮೂಲಕ ಯಾವ ರೀತಿಯ ಚಟುವಟಿಕೆಗಳನ್ನು ಮತ್ತು ಹೋರಾಟಗಳನ್ನು ಸಂಘಟಿಸಿದರೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಆಲ್ ಇಂಡಿಯಾ ಕಿಸಾನ್ ಸಭಾ (AIKS): ಸ್ವಾತಂತ್ರ್ಯ–ಪೂರ್ವ ಕರ್ನಾಟಕವು ವಿಭಿನ್ನ ಭೂ ಕಾಯ್ದೆಗಳ ಅಡಿಯಲ್ಲಿ ಸಿಲುಕಿತ್ತು. ಬಾಂಬೆ ಪ್ರಾಂತ್ಯದಲ್ಲಿ ವಾರ್ಲಿ ಆದಿವಾಸಿಗಳ ಹೋರಾಟವೂ ಸೇರಿದಂತೆ ನಡೆದಿದ್ದ ರೈತ ಚಳುವಳಿಗಳ ಪರಿಣಾಮವಾಗಿ ಮದ್ರಾಸ್, ಹೈದರಾಬಾದ್ ಮತ್ತು ಮೈಸೂರು ಸರ್ಕಾರಗಳಿಗಿಂತ ಭಿನ್ನವಾದ ಟೆನೆನ್ಸಿ ಕಾಯ್ದೆಯನ್ನು ಪಡೆಯಲು ಸಾಧ್ಯವಾಗಿತ್ತು. ಕಾರ್ಷಿಕ ಸಂಬಂಧಗಳು ಮುಖ್ಯವಾಗಿ ಭೂ ಹಿಡುವಳಿಗಳ ಒಡೆತನ ಸ್ವಲ್ಪ ಮಟ್ಟಿಗೆ ಭಿನ್ನವಾಗಿದ್ದರೂ, ಭೂ ತೆರಿಗೆ ಪದ್ಧತಿಯು ಬಹುತೇಕ ರೈತವಾರಿ ಸ್ವರೂಪದ್ದಾಗಿತ್ತು. ಭೂ ಒಡೆತನಗಳ ಪ್ರಶ್ನೆಗೆ ಬಂದಾಗ, ದೊಡ್ಡ ಅಥವಾ ಬೃಹತ್ ಹಿಡುವಳಿಗಳನ್ನು ಹೊಂದಿದ್ದವರು ಸ್ವಯಂ–ವ್ಯವಸಾಯದಲ್ಲಿ ತೊಡಗಿಲ್ಲದವರಾಗಿದ್ದರು. ದೊಡ್ಡ ಸಂಖ್ಯೆಯಲ್ಲಿ ಇವರು ಪೇಟೆ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಇನಾಂ–ಭೂಮಿಗಳ ಹೆಸರಲ್ಲಿ ಒಡೆತನವನ್ನು ಹೊಂದಿದ್ದರು. ಇನಾಂ ಭೂಮಿಗಳು ಚಾರಿತ್ರಿಕವಾಗಿ ಬ್ರಿಟಿಷ್‌ಪೂರ್ವ ಕಾಲದ ರಾಜರುಗಳು ತಮಗೆ ಇಷ್ಟವಾದವರಿಗೆ ನೀಡುತ್ತಿದ್ದ ಭೂಮಿಯಾಗಿತ್ತು. ವಿಚಿತ್ರವೆಂದರೆ ರೈತವಾರಿ ಪದ್ಧತಿಯಲ್ಲಿ ಇವರನ್ನೂ ಸಹ ವ್ಯವಸಾಯಗಾರರೆಂದು ಪರಿಗಣಿಸಲಾಗಿತ್ತು. ಆದರೆ ವಾಸ್ತವದಲ್ಲಿ ಇವರೆಲ್ಲರೂ ತಮ್ಮ ಭೂಮಿಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಗೇಣಿ ರೈತರಿಗೆ ವ್ಯವಸಾಯ ಮಾಡಲು ನೀಡಿದ್ದರು. ಹೀಗಾಗಿ ಇವರೆಲ್ಲಾ ಪಾಳೇಗಾರಿ ಮತ್ತು ಅರೆ–ಪಾಳೇಗಾರಿ ವ್ಯವಸ್ಥೆಯ ಭೂ ಒಡೆತನದ ರೂಪಕಗಳಾಗಿ, ಆಚರಣೆಯಲ್ಲಿ ಜಮೀನ್ದಾರಿ ಒಡೆಯರ ಗುಣಗಳನ್ನೇ ಹೊಂದಿದ್ದರು.

1936 ರಲ್ಲಿ ಎಐಕೆಎಸ್ ಆರಂಭವಾಗಿ, ದೇಶದ ವಿವಿಧ ಭಾಗಗಳಲ್ಲಿ ಪ್ರಾಂತೀಯ ಕಿಸಾನ್ ಸಭಾಗಳನ್ನು ಸ್ಥಾಪಿಸಿ ರೈತರನ್ನು ಚಳುವಳಿಗೆ ತೊಡಗಿಸುವ ಕುರಿತು ಎಐಕೆಎಸ್‌ನ ತೀರ್ಮಾನಗಳನ್ನು ಗಮನಿಸಿದ್ದೇವೆ. 1936 ರಲ್ಲಿ ನಡೆದ

ಎಐಕೆಎಸ್‌ನ ಮೊತ್ತ ಮೊದಲ ಸಮ್ಮೇಳನಕ್ಕೆ ಕರ್ನಾಟಕವನ್ನು ಪ್ರತಿನಿಧಿಸಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ನಾ.ಸು.ಹರ್ಡೀಕರ್ ಭಾಗವಹಿಸಿದ್ದರು (ರಸೂಲ್ 1989: 478). ಆದರೆ ಇವರು ಕರ್ನಾಟಕದಲ್ಲಿ ವಾಪಸ್ ಬಂದು ಎಐಕೆಎಸ್ ಚಟುವಟಿಕೆಗಳನ್ನು ಆರಂಭಿಸಿದ ಬಗ್ಗೆ ಹೆಚ್ಚಿನ ಅಥವಾ ಯಾವುದೇ ಮಾಹಿತಿಗಳು ಸಿಕ್ಕಿಲ್ಲ. ಆದರೆ ಕಮಲಾದೇವಿ ಚಟ್ಟೋಪಾಧ್ಯಾಯರು ಅಖಿಲ ಭಾರತ ಮಟ್ಟದಲ್ಲಿ ಕಿಸಾನ್ ಸಭಾದ ಜೊತೆ ಸಾಕಷ್ಟು ಕಾಲ ಗುರುತಿಸಿಕೊಂಡಿರುವುದನ್ನು ಕಾಣಬಹುದು. ಹರ್ಡೀಕರ್ ಅವರು ಬಾಂಬೆ ಕರ್ನಾಟಕದ ಜಿಲ್ಲೆಗಳಲ್ಲಿ ರೈತರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಲು ಶ್ರಮಿಸಿರುವುದನ್ನು ಕಾಣಬಹುದು.


ಕಮಲಾದೇವಿ ಚಟ್ಟೋಪಾಧ್ಯಾಯ

ಕರ್ನಾಟಕದಲ್ಲಿ ಪ್ರಾಂತೀಯ ಕಿಸಾನ್ ಸಭಾ ರಚಿಸುವ ಸಾಧ್ಯತೆಗಳು ಕಡಿಮೆಯಿತ್ತು. ಆದರೆ ಮಲಬಾರ್ ರೈತರ ಸಂಘಟನೆ ಮತ್ತು ಬಾಂಬೆ ಕಿಸಾನ್ ಸಂಘಟನೆಗಳ ಕ್ರಿಯಾಶೀಲತೆಯ ಪ್ರಭಾವ ನೆರೆಹೊರೆಯ ಕರ್ನಾಟಕದ ಪ್ರದೇಶಗಳ ಮೇಲಾಗಿವೆ. ಹೀಗಾಗಿ ಮಲಬಾರ್ ರೈತ ಹೋರಾಟಗಳ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಹಾಗೆಯೇ ಕಮ್ಯುನಿಸ್ಟ್ ಚಳುವಳಿಯ ಕೇಂದ್ರ ಸ್ಥಾನದಲ್ಲಿದ್ದ ಬಾಂಬೆ ಪ್ರಾಂತ್ಯದ ರೈತ ಹೋರಾಟಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಬೀರಿವೆ. ಸ್ವಾತಂತ್ರ್ಯಾ ನಂತರದಲ್ಲಿ ತೆಲಂಗಾಣ ರೈತ ಹೋರಾಟ ಕೋಲಾರ ಜಿಲ್ಲೆಯಲ್ಲಿ ಪ್ರಭಾವ ಬೀರಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸ್ವಾತಂತ್ರಪೂರ್ವ ಕರ್ನಾಟಕದ ಮೊದಮೊದಲ ಕಮ್ಯುನಿಸ್ಟ್ ನೇತೃತ್ವದ ರೈತ ಚಳುವಳಿ ಬಾಂಬೆ ಪ್ರಾಂತ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭವಾಗಿದೆ.

1942 ಕ್ಕೆ ಮೊದಲು ಮೈಸೂರು ಮತ್ತು ಬಾಂಬೆ ಕರ್ನಾಟಕ ಪ್ರದೇಶಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸಮಿತಿಗಳು ಇದ್ದವು. ಭಾಷಾವಾರು ಆಧಾರದಲ್ಲಿ ಮಾತ್ರ ಪ್ರಾಂತ ಸಮಿತಿಗಳನ್ನು ರಚಿಸಿಬೇಕೆಂದು ಕಿಸಾನ್ ಸಭಾ ಒತ್ತು ಕೊಟ್ಟಿದ್ದರಿಂದ ಇವುಗಳನ್ನು ಸ್ವತಂತ್ರ ಪ್ರಾಂತೀಯ ಪ್ರತ್ಯೇಕ ಸಮಿತಿಗಳಾಗಿ ಪರಿಗಣಿಸಲಾಗದೆಂದು ಎಐಕೆಎಸ್ ಬಾಂಬೆ ಸೆಂಟ್ರಲ್ ಕಿಸಾನ್ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಮಾಡಲಾಯಿತು[66]. ಅದಕ್ಕಾಗಿ ವಿಭಿನ್ನ ಸಂಸ್ಥಾನ ಮತ್ತು ಪ್ರಾಂತಗಳ ಆಡಳಿತಕ್ಕೆ ಒಳಪಟ್ಟ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಳಗೊಂಡ ಪ್ರತ್ಯೇಕ ಕಿಸಾನ್ ಸಮಿತಿಯನ್ನು ರೂಪಿಸಬೇಕಾದ ಅಂಶಕ್ಕೆ ಇದರಿಂದ ಮಹತ್ವ ದೊರೆಯಿತು. ಈ ಬಗ್ಗೆ 23-10-1942 ರ ಒಂದು ಪತ್ರದಲ್ಲಿ ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ಸ್ವಾಮಿ ಸಹಜಾನಂದ ಸರಸ್ವತಿ 'ಪ್ರಾಂತೀಯ ಸಭಾಗಳಿಗೆ ಟಿಪ್ಪಣಿ' ಹೆಸರಿನಲ್ಲಿ ಇದನ್ನು ದೃಢಪಡಿಸುತ್ತಾರೆ. ಆದರೆ ಈ ದಿಕ್ಕಿನಲ್ಲಿ ಕರ್ನಾಟಕ ಏಕೀಕರಣವಾಗುವವರೆಗೂ ಯಶಸ್ಸು ಸಿಕ್ಕಲಿಲ್ಲ. ಎಐಕೆಎಸ್‌ನ 10 ನೇ ಅಖಿಲ ಭಾರತ ಸಮ್ಮೇಳನದವರೆಗೂ ಕಿಸಾನ್ ಸಭಾದ ಕೇಂದ್ರ ಸಮಿತಿಯು ವಿಭಿನ್ನ ಪ್ರಾಂತಗಳ ಸಮಿತಿಗಳೊಂದಿಗೆ ಪ್ರತ್ಯೇಕವಾಗಿ ವ್ಯವಹರಿಸಿರುವುದನ್ನು ಕಾಣಬಹುದು. ಸೌತ್ ಕೆನರಾ ಜಿಲ್ಲಾ ರೈತ ಸಂಘ, ಬಿಜಾಪುರ ಜಿಲ್ಲಾ ರೈತ ಸಂಘ, ಕೋಲಾರ ಜಿಲ್ಲಾ ರೈತ ಸಂಘ ಮತ್ತು ಬೆಂಗಳೂರಿನಲ್ಲಿ ಕೆ.ವಿ.ಟೆಂಪಲ್ ಸ್ಟ್ರೀಟ್ ವಿಳಾಸದ ಸಂಘ ಹೀಗೆ ಪ್ರತ್ಯೇಕವಾಗಿ ಮಾನ್ಯತೆ ನೀಡಿರುವುದನ್ನು ಕಾಣಬಹುದು[67]. 1942 ಮಾರ್ಚ್ ವೇಳೆಗೆ

(ಬಾಂಬೆ) ಕರ್ನಾಟಕ ಭಾಗದ ಕಿಸಾನ್ ಸಭಾದ ಸದಸ್ಯತ್ವ 1000 ಮತ್ತು ಮೈಸೂರು ಭಾಗದ ಸದಸ್ಯತ್ವ 966 ಇತ್ತು. ಈ ಪ್ರದೇಶಗಳಿಂದ ಅಲ್ ಇಂಡಿಯಾ ಕಿಸಾನ್ ಕೌನ್ಸಿಲ್ ಸದಸ್ಯರಾಗಿ ಕ್ರಮವಾಗಿ ಎಂ.ಸೋಮಪ್ಪ ಮತ್ತು ಪಿ.ಹನುಮಂತ ಇವರುಗಳಿದ್ದರು[68].

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ಹೋರಾಟಗಳು ನಡೆದರೂ ಸಹ ಎಐಕೆಎಸ್‌ನ ಮಾರ್ಗದರ್ಶನ ದೊರೆತಿರುವುದನ್ನು ಕಾಣಬಹುದು. ಎಲ್ಲ ಕಡೆಗಳಲ್ಲೂ ಬೇಡಿಕೆಗಳು ಬಹುತೇಕ ಸಾಮಾನ್ಯವಾಗಿದ್ದವು. ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸದಂತೆ ತಡೆಯುವುದು, ಉಳುವವನಿಗೆ ಭೂಮಿ ಕೊಡಿಸುವುದು, ಗೇಣಿ ಪದ್ಧತಿಯನ್ನು ರದ್ದುಗೊಳಿಸುವುದು ಅಥವಾ ಕಡಿತಗೊಳಿಸುವುದು, ಹೆಚ್ಚುವರಿ ಭೂಮಿ ಹಂಚಿಕೆ ಮಾಡುವುದು, ರೈತರನ್ನು ಋಣಮುಕ್ತರನ್ನಾಗಿ ಮಾಡುವುದು, ಜಮೀನ್ದಾರರ ದಬ್ಬಾಳಿಕೆಗಳನ್ನು ಎದುರಿಸುವುದು, ಮುಂತಾದವು ರೈತ ಚಳುವಳಿಯ ಪ್ರಶ್ನೆಗಳಾಗಿದ್ದವು. ಈ ಎಲ್ಲಾ ಪ್ರಶ್ನೆಗಳನ್ನು ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಜೋಡಿಸುವ ಕೆಲಸವನ್ನು ಎಐಕೆಎಸ್ ಮಾಡಿತು.


ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಬಿಜಾಪುರ ಈ ಜಿಲ್ಲೆಗಳು ಬಾಂಬೆ ಸರ್ಕಾರದ ವ್ಯಾಪ್ತಿಯಲ್ಲಿದ್ದವು. ಈ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟವೂ ಜೋರಾಗಿ ನಡೆದಿತ್ತು. ಉತ್ತರ ಕನ್ನಡದ ದಿನಕರ ದೇಸಾಯಿಯವರು ಬಾಂಬೆಯಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸಂಪರ್ಕದಲ್ಲಿದ್ದರು. ಅದರಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದ ಗೋದಾವರಿ ಪರುಳೇಕರ್ ಸಹ ಇದ್ದರು. ಇವರು ಚಾರಿತ್ರಿಕವಾದ ವಾರ್ಲಿ ಆದಿವಾಸಿಗಳ ಹೋರಾಟದ ನಾಯಕಿಯಾಗಿದ್ದರು. ವಾರ್ಲಿ ಹೋರಾಟ ಬಾಂಬೆ ಕರ್ನಾಟಕದ ಪ್ರದೇಶಗಳಲ್ಲೂ ಪ್ರಭಾವ ಬೀರಿತ್ತು. ದಿನಕರ ದೇಸಾಯಿಯವರಿಗೆ ಗೋದಾವರಿ ಮತ್ತು ಶಾಮರಾವ್ ಪರುಳೇಕರ್ ಅವರ ಸಂಪರ್ಕದಿಂದಾಗಿ ಎಡಪಂಥೀಯ ಚಿಂತನೆಗಳು ಪ್ರಭಾವ ಬೀರಿದ್ದವು. ದಿನಕರ ದೇಸಾಯಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತರನ್ನು ಸಂಘಟಿಸಲು ಮುಂದಾದರು. ಅವರು ನಡೆಸಿದ ರೈತ ಹೋರಾಟಕ್ಕೆ ವರ್ಗ ಹೋರಾಟದ ಸೈದ್ಧಾಂತಿಕ ನೆಲೆ ಇರಲಿಲ್ಲವಾದ್ದರಿಂದ ಅದನ್ನು ಪ್ರಬಲ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವಾಗಿ ರೂಪಿಸಲಾಗಲಿಲ್ಲ (ವಿಠಲ ಭಂಡಾರಿ 2011: 8). ಇದಕ್ಕೆ ಭಿನ್ನವಾಗಿ ಕಮ್ಯುನಿಸ್ಟರು ನಡೆಸಿದ ರೈತ ಹೋರಾಟಗಳು ವರ್ಗ ಹೋರಾಟದ ತಳಹದಿಯನ್ನು ಹೊಂದಿದ್ದವು.

ದಿನಕರ ದೇಸಾಯಿಯವರು 1936 ರಲ್ಲಿ ಒಂದು ರೈತ ಕೂಟವನ್ನು ಆರಂಭಿಸಿದ್ದರು. ಇದರ ಮೂಲಕ ಚಟುವಟಿಕೆಗಳನ್ನು ಮಾಡುತ್ತಾ 1940 ರ ಮಾರ್ಚ್ 14 ರಂದು ಅಂಕೋಲದಲ್ಲಿ ರೈತರ ಸಮಾವೇಶವನ್ನು ಏರ್ಪಡಿಸಿದರು. ಇದರಲ್ಲಿ ಬಾಂಬೆ ಕೃಷಿ ಸಾಲ ಪರಿಹಾರ ಕಾಯ್ದೆ – 1939 ನ್ನು ಜಾರಿಗೆ ತರಬೇಕು, ಇದು ಆಗದಿದ್ದರೆ ರೈತರು ಗೇಣಿ ಕೊಡುವುದನ್ನು ನಿಲ್ಲಿಸಬೇಕು, ಗೇಣಿ ಮೂರನೇ ಒಂದು ಭಾಗಕ್ಕೆ ಇಳಿಯಬೇಕು, ಗೇಣಿ ಬಾಕಿ ಉಳಿಸಿಕೊಂಡವರ ಜಮೀನಿನ ಹಕ್ಕು ಕಿತ್ತುಕೊಂಡಲ್ಲಿ ಬೇರೆ ಯಾರೂ ಆ ಭೂಮಿಯನ್ನು ಗೇಣಿಗೆ ಪಡೆಯಬಾರದು ಎಂಬ ಬೇಡಿಕೆಗಳನ್ನು ತೀರ್ಮಾನಿಸಿದರು. ಇಲ್ಲಿ 'ಅಂಕೋಲಾ ತಾಲೂಕು ರೈತ ಸಂಘ' ಅಸ್ಥಿತ್ವಕ್ಕೆ ಬಂತು. ಇದರಲ್ಲಿ

ಕೆಂಬಾವುಟವನ್ನು ರೈತ ಸಂಘದ ಬಾವುಟವಾಗಿ ಸ್ವೀಕರಿಸಲಾಯಿತು. ಪರಿಣಾಮವಾಗಿ 1940 ರ ಮೇ 12 ನೇ ತಾರೀಖು ಅಂಕೋಲಾದಲ್ಲಿ ರೈತರ ಜಿಲ್ಲಾ ಸಮ್ಮೇಳನ ನಡೆಯಿತು. ಸುಮಾರು 5000 ರೈತರು ಸೇರಿದರು. ಇದರಿಂದ ಭಯಗೊಂಡ ಜಮೀನ್ದಾರಿ ವರ್ಗ, ದೇಸಾಯಿಯವರು ಕಮ್ಯುನಿಸ್ಟರೆಂದು, ಬ್ರಿಟಿಷ್ ಆಡಳಿತದ ವಿರುದ್ಧ ಪಿತೂರಿ ನಡೆಸುತ್ತಿರುವರೆಂದು ದೂರು ನೀಡಿದರು. ಈ ಬಗ್ಗೆ ವಿಚಾರಣೆ ನಡೆಸಲು ಥಕ್ಕರ್ ಬಾಪಾ ನೇತೃತ್ವದ ವಿಚಾರಣಾ ಆಯೋಗ ಬಂತು. ದೇಸಾಯಿಯವರು ತಾವು ಕಮ್ಯುನಿಸ್ಟ್ ಅಲ್ಲವೆಂದು ಹೇಳಿಕೆ ನೀಡಿದರು (ವಿಠಲ ಭಂಡಾರಿ 2011: 26–27). ಆದರೂ ಚಳುವಳಿಯ ತೀವ್ರತೆಗೆ ಹೆದರಿದ ಬಾಂಬೆ ಸರ್ಕಾರ ದಿನಕರ ದೇಸಾಯಿಯವರನ್ನು 1940 ರಲ್ಲಿ 5 ವರ್ಷಗಳ ಕಾಲ ಜಿಲ್ಲೆಯಿಂದ 'ಹದ್ದುಪಾರು' (ಗಡೀಪಾರು) ಮಾಡಿತು. ನಂತರ ಶೇಷಗಿರಿ ಪಿಕಳೆ ಮತ್ತು ದಯಾನಂದ ನಾಡಕರ್ಣಿ ಚಳುವಳಿಯನ್ನು ಮುಂದುವರಿಸಿದರು (ಕಾಮತ್: 187).

ಹೆಚ್ಚಿನ ಭೂಮಿ ಹೊಂದಿದ್ದ ಜಾತಿ–ವರ್ಗಗಳು ಒಂದು ಕಡೆ, ಭೂಮಿ ಇಲ್ಲದ ಅಥವಾ ಭೂಮಿ ಕಡಿಮೆ ಇರುವ ಜಾತಿ–ವರ್ಗಗಳು ಮತ್ತೊಂದು ಕಡೆ ಇದ್ದದ್ದನ್ನು ಇಲ್ಲಿ ಕಾಣಬಹುದು. ಉತ್ತರ ಕನ್ನಡದ ಸಿದ್ದಾಪುರದಲ್ಲಿ ರೈತರು ಗೇಣಿ ಕೊಡುವುದಿಲ್ಲವೆಂದು ಚಳುವಳಿ ನಡೆಸಿದಾಗ, ಸ್ವಾತಂತ್ರ್ಯ ಚಳುವಳಿಯಲ್ಲಿಯೇ ಬಿರುಕು ಬಂದಿದ್ದನ್ನು, ಭೂಮಾಲಕರೆಲ್ಲ ಸೇರಿ ಕಾಂಗ್ರೆಸ್ಸಿಗೆ ದೂರು ಕೊಟ್ಟಿದ್ದನ್ನು, ಕೊನೆಗೆ ಬ್ರಿಟಿಷ್ ಸರ್ಕಾರಕ್ಕೆ ದೂರು ಕೊಟ್ಟಿದ್ದನ್ನು ಕರನಿರಾಕರಣೆಯ ಚಳುವಳಿಯಲ್ಲಿ ಕಾಣಬಹುದು. ಇದರರ್ಥ ರೈತರಲ್ಲಿ ವರ್ಗ ಪ್ರಜ್ಞೆ ಜಾಗೃತವಾಗಿತ್ತು ಎಂದೇನಲ್ಲ, ಆದರೆ ವರ್ಗ ಸ್ವರೂಪವನ್ನು ತಿಳಿಸುತ್ತದೆ.

1920 ರಿಂದಲೇ ಕಮ್ಯುನಿಸ್ಟರ ಪ್ರಭಾವದಿಂದ ಸ್ವತಂತ್ರವಾಗಿ ಸಣ್ಣಪುಟ್ಟ ಹೋರಾಟಗಳನ್ನು ನಡೆಸುತ್ತಿದ್ದ ಉತ್ತರ ಕನ್ನಡದ ಕಾಳಿ ನದಿಯ ಇಕ್ಕೆಲಗಳ ಹಳಗ, ಉಳಗ, ಕಿನ್ನರ, ಗೋಪಶಿಟ್ಟಾ ಇತ್ಯಾದಿ ಹಳ್ಳಿಗಳ ರೈತರು ಮುಂದೆ ಎಐಕೆಎಸ್‌ನ ಹೋರಾಟಗಳಿಂದ ಪ್ರಭಾವಿತರಾದರು. ಅದೇ ವರ್ಷ ತೀರ್ವಾಳಿ ಬಂದರಿನಲ್ಲಿ ಹಾಯಿ ದೋಣಿಗೆ ಹುಲ್ಲು ತುಂಬುವುದನ್ನು ನಿಲ್ಲಿಸಿ ಪ್ರತಿಭಟಿಸಿದ್ದರು. 'ಇದ್ದವರ ಭೂಮಿ, ಉಳುವವನ ಭೂಮಿ, ನೈಸರ್ಗಿಕ ಸಂಪತ್ತು, ನದಿ, ಅರಣ್ಯ, ಇವುಗಳ ಮೇಲೆ ಎಲ್ಲರ ಹಕ್ಕು: ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆಗಳನ್ನು ರೈತರು ಮೊಳಗಿಸಿದ್ದರು. ಈ ಹಿನ್ನೆಲೆಯಿಂದ ಬಂದ ಪುರುಷೋತ್ತಮ ಜೋಗಿ ನಾಯ್ಕ, ಸೈಯದ್ ಹೈದರ್, ಅಬ್ದುಲ್ ಹಮೀದ್, ಮುಂತಾದವರು ಸೇರಿ 1937 ರಲ್ಲಿ ಕಾರವಾರದ ಹಳಗಾ–ಉಳಗಾದಲ್ಲಿ ಎಐಕೆಎಸ್‌ಗೆ ಸೇರಿದ ರೈತಸಂಘದ ಘಟಕವನ್ನುಪ್ರಾರಂಭಿಸಿದರು. ಇದು **ಕರ್ನಾಟಕದ ಮೊದಲ ಎಐಕೆಎಸ್ ಘಟಕ**ವಾಗಿದೆ. ಮುಂದೆ ಇದನ್ನು ವಿಸ್ತರಿಸಿ ರೈತ ಕೂಟವನ್ನು ಸ್ಥಾಪಿಸಲಾಯಿತು. ಇದರಲ್ಲಿ ಸೈಯದ್ ಹೈದರ್ ಸೈಯದ್ ಯೂಸುಫ್ ಅವರು ಅಧ್ಯಕ್ಷರಾಗಿ, ಎನ್.ಜಿ.ಮ್ಹಾಳ್ಸೇಕರ್ ಕಾರ್ಯದರ್ಶಿಯಾಗಿ ಹಾಗೂ ಪುರ್ಸು ಜೋಗು ನಾಯ್ಕ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಸ್ಥಳೀಯವಾಗಿ ಕಾಂಗ್ರೆಸ್ ಸರ್ಕಾರ ಬಂದ ಮೇಲೂ ಒಂದು ತಲೆ ಹುಲ್ಲಿಗೆ ನಾಲ್ಕು ಆಣೆ ಮತ್ತು ಒಂದು ಗಾಡಿಗೆ 1


ಎನ್.ಜಿ.ಮ್ಹಾಳ್ಸೇಕರ್

ರೂಪಾಯಿ ತೆರಿಗೆ ಕೊಡಬೇಕೆಂಬ ನೀತಿ ಜಾರಿಗೊಳಿಸಿದ್ದನ್ನು ವಿರೋಧಿಸಿ ಹೋರಾಟಗಳನ್ನು ನಡೆಸಿದರು. ಕ್ರಮೇಣ ರೈತಸಂಘದ ಮುಖಂಡರಿಗೆ ಕಮ್ಯುನಿಸಂನ ಪರಿಚಯವಾಯಿತು. ಮಹಾರಾಷ್ಟ್ರದ ಶಾಮರಾವ್ ಪರುಳೇಕರ್ ಅವರ ನೇತೃತ್ವದಲ್ಲಿ 1944 ರಲ್ಲಿ ಉಳಗಾದಲ್ಲಿ ರೈತರ ಮೊದಲ ಸಭೆ (ಪರಿಷತ್ತು) ನಡೆಯಿತು. 1946 ರಲ್ಲಿ ಬಾಡದಲ್ಲಿ 2 ನೇ ಸಭೆ ನಡೆಯಿತು[69]. 1947 ರಲ್ಲಿ ತೊರಲೇಬಾಗ್‌ನಲ್ಲಿ ನಡೆದ 3 ನೇ ಸಭೆ ಎಸ್.ಎಸ್.ಮಿರಾಜ್‌ಕರ್ ಅವರ ನೇತೃತ್ವದಲ್ಲಿ ನಡೆಯಿತು (ವಿಠಲ ಭಂಡಾರಿ 2011: 10–11). ಇವುಗಳಲ್ಲೆಲ್ಲಾ ಸಾವಿರಾರು ರೈತರು ಭಾಗವಹಿಸಿದ್ದರು. ರೈತ ಬಂಡಾಯ ಸ್ಫೋಟಗೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ಬಾಂಬೆ ಪ್ರಾಂತ್ಯದಲ್ಲಿ ಅಸ್ಥಿತ್ವದಲ್ಲಿದ್ದ 1939 ರ ಟೆನೆನ್ಸಿ ಕಾಯ್ದೆಯೂ (ಇದು 1941 ಮತ್ತು 1946 ರಲ್ಲಿ ತಿದ್ದುಪಡಿಯಾಗಿತ್ತು) ಗೇಣಿದಾರರಿಗೆ ಪ್ರಾಯೋಗಿಕವಾಗಿ ಹೆಚ್ಚಿನ ಉಪಯೋಗವಾಗಲಿಲ್ಲ. ಉತ್ಪತ್ತಿಯ ಐದರಲ್ಲಿ ನಾಲ್ಕು ಭಾಗದವರೆಗೂ ಜಮೀನ್ದಾರರಿಗೆ ಗೇಣಿ ಹೋಗುತ್ತಿತ್ತು. ಅಕ್ರಮವಾದ ವಸೂಲಿಗಳು ಮತ್ತು ಗುಲಾಮಗಿರಿ ರೀತಿಯ ಆಚರಣೆಗಳು ಅಸ್ಥಿತ್ವದಲ್ಲಿದ್ದವು. ಇವೆಲ್ಲವೂ ಸೇರಿ ಜಿಲ್ಲಾ ಮಟ್ಟದಲ್ಲಿ ರೈತ ಸಂಘವನ್ನು ಕಟ್ಟುವ ಅನಿವಾರ್ಯತೆಯನ್ನು ಸೃಷ್ಟಿಸಿತು. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಎಐಕೆಎಸ್‌ನ ಪ್ರಥಮ ಜಿಲ್ಲಾ ಸಮ್ಮೇಳನ 1945 ರ ಏಪ್ರಿಲ್ 22 ರಂದು ಹಿರೇಗುತ್ತಿಯಲ್ಲಿ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮಹಾರಾಷ್ಟ್ರದ ರೈತ ನಾಯಕರಾಗಿದ್ದ ಶಾಮರಾವ್ ಪರುಳೇಕರ್ ವಹಿಸಿದ್ದರು. 40 ಮೈಲುಗಳ ದೂರದ ಊರುಗಳಿಂದೆಲ್ಲಾ ರೈತರು ಕಾಲ್ನಡಿಗೆಯಲ್ಲಿ ಬಂದು ಇದರಲ್ಲಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಕೆಂಬಾವುಟವನ್ನು ತಮ್ಮದೆಂದು ಸ್ವೀಕರಿಸಿದರು. ಟೆನೆನ್ಸಿ ಕಾಯ್ದೆ ಮತ್ತು ಕೃಷಿಕರ ಸಾಲ ಪರಿಹಾರ ಕಾಯ್ದೆಯನ್ನು ಕೂಡಲೇ ಜಾರಿಗೊಳಿಸುವ ಮತ್ತಿತರ ನಿರ್ಣಯಗಳನ್ನು ಅಂಗೀಕರಿಸಿದರು. ಜಿಲ್ಲಾ ಸಮ್ಮೇಳನದ ಮರುದಿನವೇ ಕಾರವಾರ ತಾಲೂಕು ಸಮ್ಮೇಳನ 1945 ರ ಏಪ್ರಿಲ್ 23 ರಂದು ಪರುಳೇಕರ್ ಅಧ್ಯಕ್ಷತೆಯಲ್ಲಿ ನಡೆಯಿತು. ಇದರಲ್ಲಿ 5000 ರೈತರು ಭಾಗವಹಿಸಿದ್ದರು[70].

ಇಂತಹ ಕಾಲಘಟ್ಟದಲ್ಲಿ ಸಾಹಿತಿ ಕುಳಕುಂದ ಶಿವರಾಯರು (ನಿರಂಜನ) ಈ ಪ್ರದೇಶಗಳಿಗೆ ಭೇಟಿ ಕೊಟ್ಟು ಇಲ್ಲಿನ ರೈತ ಚಳುವಳಿಯನ್ನು ಆಧರಿಸಿ 'ಇಬ್ಬರು ಗುಂಡರು' ಮತ್ತು 'ಅಗಲಿದ ಬಾಂಧವ' ಎಂಬ ಎರಡು (ಸತ್ಯ ಘಟನೆಗಳ) ಕಥೆಗಳನ್ನು ಬರೆದರು. ತಮ್ಮ 'ಧ್ವನಿ' 1 ನೇ ಭಾಗದಲ್ಲಿ ನಿರಂಜನರು ವಿವರಿಸುವಂತೆ, 1946–47 ರ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ರೈತ ಸಂಘಟನೆ ಜೋರಾಗಿತ್ತು. ಎನ್.ಎಲ್.ಉಪಾಧ್ಯಾಯ, ಬಿ.ಎನ್.ಧಾರವಾಡಕರ್, ಎಂ.ಎಸ್.ಹಳದೀಪುರ್, ಡಿ.ವಿ.ಸಿಂಗ್ ನಾಯಕತ್ವ ನೀಡಿದ್ದರು. ಸ್ಥಳೀಯವಾಗಿ ಹೈದರ್ ಸಾಹೇಬ, ಜೋಗು ಪುರುಷೋತ್ತಮ ನಾಯ್ಕ, ಗಣು ಮಾಬಲ ನಾಯ್ಕ, ಮಾಳ್ಸೇಕರ್, ಜೂಡೋ ಕೈತಾನ್ ಮುಂತಾದವರು ನಾಯಕರಾಗಿದ್ದರು. ಇದರಲ್ಲಿ ಹೈದರ್ ಸಾಹೇಬ ಮತ್ತು ಪುರುಷೋತ್ತಮ ನಾಯ್ಕರನ್ನು ಗೂಂಡಾ ಕಾಯ್ದೆಯಡಿ ಗಡೀಪಾರು ಮಾಡಿದಾಗ ಹುಬ್ಬಳ್ಳಿಯಲ್ಲಿ ಅವರನ್ನು ಸಿ.ಬಿ.ಮೊಣ್ಣಯ್ಯನವರ ಉಸ್ತುವಾರಿಯಲ್ಲಿ ನೋಡಿಕೊಳ್ಳಲಾಗಿತ್ತು.

1945 ರಲ್ಲಿ ವಾಪಸ್ ಬಂದ ದಿನಕರ ದೇಸಾಯಿಯವರು ರೈತರ ಹೋರಾಟಗಳನ್ನು ತೀವ್ರಗೊಳಿಸಿದರು. ಅಷ್ಟೊತ್ತಿಗಾಗಲೇ ಜಿಲ್ಲೆಯಲ್ಲಿ ವಿಸ್ತಾರವಾಗಿ ಬೆಳೆದಿದ್ದ ಕಮ್ಯುನಿಸ್ಟರ ನೇತೃತ್ವದ ಎಐಕೆಎಸ್‌ನ ವಿವಿಧ ತಾಲೂಕುಗಳ

ಮುಖಂಡರು ಅವರೊಂದಿಗೆ ಕೈಜೋಡಿಸಿದರು. ಹಳದೀಪುರ, ಮಾವಿನಕುರ್ವೆ ಮುಂತಾದ ಪ್ರದೇಶಗಳಲ್ಲಿ ಚಳುವಳಿ ನಡೆಸಲು ಶೇಷಗಿರಿ ವೆಂಕಟರಾವ್ ಪಿಕಳೆಮತ್ತು ದಯಾನಂದ ನಾಡಕರ್ಣಿ ಪಾತ್ರ ವಹಿಸಿದರು. ಜಿಲ್ಲೆಯ ರೈತ ಚಳುವಳಿಯ ಮುಖ್ಯವಾಹಿನಿಯಾಗಿ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರು ಕೆಲಸ ಮಾಡುತ್ತಿದ್ದರೂ ಸಹ ಬ್ರಿಟಿಷರಿಗೆ ಮತ್ತು ಬಾಂಬೆ ಕಾಂಗ್ರೆಸ್ ಸರ್ಕಾರಕ್ಕೆ ಕಮ್ಯುನಿಸ್ಟರನ್ನು ಸದೆ ಬಡಿಯುವ ಕುರಿತೇ ಹೆಚ್ಚು ಆಸಕ್ತಿಯಿತ್ತು.

ಬಿಜಾಪುರದಲ್ಲಿ ರೈತ ಸಂಘ ಆರಂಭಗೊಂಡಿದ್ದು ವಿದ್ಯಾರ್ಥಿಗಳ ಮೂಲಕ. ಬಿಜಾಪುರ ನಗರದಲ್ಲಿ ನೆಲೆಸಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಎನ್.ಕೆ.ಉಪಾಧ್ಯಾಯ ಮತ್ತಿತರ ಕಮ್ಯುನಿಸ್ಟ್ ಮುಖಂಡರ ಸಂಪರ್ಕವಿತ್ತು. ರಜಾ ದಿನಗಳಲ್ಲಿ ಅವರು ತಮ್ಮ ಊರುಗಳಿಗೆ ಹೋದಾಗ ಅಲ್ಲಿಗೆ ಕಮ್ಯುನಿಸ್ಟ್ ಮುಖಂಡರನ್ನು ಭೇಟಿ ಮಾಡಿಸುತ್ತಿದ್ದರು. ಹಳ್ಳಿಗಳಲ್ಲಿದ್ದ ಪಾಳೇಗಾರಿ ಮತ್ತು ಅರೆ–ಪಾಳೇಗಾರಿ ಗ್ರಾಮೀಣ ಭೂಸಂಬಂಧಗಳ ಪರಿಣಾಮವಾಗಿ ರೈತರ ಮೇಲಿನ ದೌರ್ಜನ್ಯಗಳು, ಶೋಷಣೆ ತೀವ್ರವಾಗಿರುವುದನ್ನು ಕಂಡರು. ಅಂದು ಅಸ್ಥಿತ್ವದಲ್ಲಿದ್ದ ಕೃಷಿ ಸಂಬಂಧಗಳನ್ನು ಎನ್.ಕೆ.ಉಪಾಧ್ಯಾಯರು ಹೀಗೆ ವಿವರಿಸುತ್ತಾರೆ:

> ಗೌಡರು, ಸಾಹುಕಾರರು, ದೇಸಾಯರು, ಜಹಗೀರುದಾರರ ಆಡಳಿತ. ಇವರು ಎತ್ತರದಲ್ಲಿ ಕುಳಿತಿರುತ್ತಿದ್ದರು. ಇವರ ನಂತರ ಕುಲಕರ್ಣಿಯವರು, ರೈತರ ದಸ್ತಾವೇಜುಗಳನ್ನು, ಹಕ್ಕುಪತ್ರಗಳನ್ನು ಧನಿಯರ ಮುಲಾಜಿಗೆ ಅನುಗುಣವಾಗಿ ಏರುಪೇರು ಮಾಡುವ ಬ್ರಾಹ್ಮರು. ಇನ್ನು ಬಡ್ಡಿ ಸಾವುಕಾರರು ಜನರನ್ನು ತಮ್ಮ ಅಂಕೆಯಲ್ಲೇ ಇರುವಂತೆ ಮಾಡುವವರು. ಇನ್ನು ಬ್ರಿಟಿಷ್ ಸರಕಾರದ ನಿಜವಾದ ಪ್ರತಿನಿಧಿಗಳೆಂದರೆ ಪಟೇಲರು. ಅವರನ್ನು ಪೊಲೀಸ್ ಪಟೇಲರೆಂದೂ ಕರೆಯುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳು ಗ್ರಾಮಗಳಿಗೆ ಬಂದಾಗ ಅವರನ್ನು ಚೆನ್ನಾಗಿ ನೋಡಿಕೊಂಡವರಿಗೆ 'ಕೂಗಳತೆಯ ಭೂಮಿ' ಇನಾಮು ಸಿಗುತ್ತಿತ್ತು. ಈ ರೀತಿ ಬ್ರಿಟಿಷರು ಗ್ರಾಮಕ್ಕೆ ಬಂದಾಗ ಕೂರಲು ಕಂಬಳಿ ಹಾಸಿದ್ದಕ್ಕೆ, ರೈತ ಸಂಘದ ಮುಖಂಡರಾಗಿದ್ದ ರಾಜೇಸಾಬ ದೊಡ್ಡಮನೆ ಅವರಿಗೆ ನೂರಕ್ಕೂ ಹೆಚ್ಚು ಎಕರೆ ಭೂಮಿ ಸಿಕ್ಕಿತಂತೆ. ಈ ರೀತಿಯಲ್ಲಿ ಕೆಲವರು ಹತ್ತೈವತ್ತು ಗ್ರಾಮಗಳ ಮಾಲಕರಾಗಿರುತ್ತಿದ್ದರು (ಉಪಾಧ್ಯಾಯ 1996: 44–45).

ವಿಶೇಷವೆಂದರೆ, ವಿದ್ಯಾರ್ಥಿಗಳು ಇವರನ್ನು ಕರೆದುಕೊಂಡು ಊರಿನ ಮುಖ್ಯವಾದ ಇಂತಹ ಜನರಿಗೇ ಪರಿಚಯ ಮಾಡುತ್ತಿದ್ದರು. ಇವರನ್ನು ಉಪಯೋಗಿಸಿಯೇ ರೈತರ ಸಭೆಗಳನ್ನು ನಡೆಸಲಾಗುತ್ತಿತ್ತು. ಇವರು ಕೇವಲ ಬ್ರಿಟಿಷರ ಆಡಳಿತ ಮತ್ತು ಸ್ವಾತಂತ್ರ್ಯದ ವಿಚಾರಗಳಿಗೆ ಸೀಮಿತವಾಗಿ ಮಾಡನಾಡಿದಾಗ ವಿರೋಧ ಮಾಡುತ್ತಿರಲಿಲ್ಲ. ಈ ಅಂಶವನ್ನು ಕಮ್ಯುನಿಸ್ಟರು ಆರಂಭದಲ್ಲಿ ಸರಿಯಾಗಿ ಬಳಸಿದರು. ಹೀಗಾಗಿ ವರ್ಗದ ನೆಲೆಯಲ್ಲಿ ರೈತಸಂಘದ ಚಟುವಟಿಕೆಗಳು ಇಲ್ಲಿ ಆರಂಭವಾಗಲಿಲ್ಲ. ಕೆಂಬಾವುಟಕ್ಕೆ ಆರಂಭಿಕ ವಿರೋಧವಿರಲಿಲ್ಲ. ಬಿಜಾಪುರ ಪಂಚನದಿಗಳ ಜಿಲ್ಲೆಯಾದರೂ ನೀರಾವರಿ ಕೊರತೆ, ಬರಗಾಲದಂತಹ ಪ್ರಶ್ನೆಗಳನ್ನು ಎತ್ತಿ ಕೆಂಬಾವುಟದ ರೈತ ಸಂಘ ಹೋರಾಟಗಳನ್ನು ನಡೆಸಿತು.

ಬಿಜಾಪುರ ಜಿಲ್ಲೆಯ ರೈತ ಚಳುವಳಿಯಲ್ಲಿ ಮುಖ್ಯವಾದ ಹೋರಾಟವೆಂದರೆ ಬಾಗೇವಾಡಿ ತಾಲೂಕಿನ ಕೃಷ್ಣ ನದಿ ದಂಡೆಯ ಗಣಿ ಹಳ್ಳಿ ದೇಸಾಯಿ ಕಾಶೀರಾಯರ ವಿರುದ್ಧ ನಡೆದದ್ದು. ಇವರು ಸುಮಾರು 32 ಹಳ್ಳಿಗಳಲ್ಲಿ ಭೂಮಿಯನ್ನು ಹೊಂದಿದ್ದರು. 1945 ರ ಕೊನೆಯಲ್ಲಿ ಇವರು ತಮ್ಮ ಗೂಂಡಾಗಳನ್ನು ಬಳಸಿ ಗಣಿ ಊರಿನಲ್ಲಿದ್ದ ನೂರಕ್ಕೂ ಹೆಚ್ಚು ಮುಸ್ಲಿಂ ಮತ್ತು ಇತರೆ ಕುಟುಂಬಗಳನ್ನು ಊರಿನಿಂದ ಹೊರಗಾಕಿದ್ದರು. ಕಾಂಗ್ರೆಸ್‌ನವರು ಜನರ ರಕ್ಷಣೆಗೆ ನಿಲ್ಲದಿದ್ದಾಗ, ರೈತ ಸಂಘವು ವಿದ್ಯಾರ್ಥಿಗಳು ಮತ್ತು ಬಿಜಾಪುರದ ಬೀಡಿ ಕಾರ್ಮಿಕರ ಸಹಾಯದಿಂದ ದೇಸಾಯಿಯವರನ್ನು ಜಿಲ್ಲೆಯಿಂದ ಹದ್ದುಪಾರು ಮಾಡಿಸುವಲ್ಲಿ ಯಶಸ್ವಿಯಾಗಿತ್ತು. ಇದನ್ನು ಉಪಯೋಗಿಸಿ ರೈತರು ಮತ್ತು ಆ ಭಾಗದ ಲಮಾಣಿ ಜನರನ್ನು ರೈತ ಸಂಘದ ಅಡಿಯಲ್ಲಿ ಸಂಘಟಿಸಿದರು (ಉಪಾಧ್ಯಾಯ 1996: 45–46).

ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಎಐಕೆಎಸ್‌ನ ರೈತ ಹೋರಾಟಗಳು ಬಹುತೇಕ ಬಾಂಬೆ ಕರ್ನಾಟಕ ಭಾಗಕ್ಕೆ ಸೀಮಿತವಾಗಿವೆ. ಮದ್ರಾಸ್ ಪ್ರಾಂತದ ಭಾಗವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲಬಾರ್ ರೈತ ಬಂಡಾಯಗಳ ಪ್ರಭಾವ ಆಗಿದೆ. ಆದರೆ ಅದು ಸ್ವಾಂತಂತ್ರ್ಯದ ಗರ್ಭದೊಳಗೆ ಭ್ರೂಣವಾಗಿದ್ದು 1947 ರ ನಂತರ ಸ್ಪಷ್ಟ ಸಂಘಟನಾ ರೂಪ ಪಡೆದುಕೊಳ್ಳುತ್ತದೆ. ಇನ್ನು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಪೂರ್ವ ಕಮ್ಯುನಿಸ್ಟ್ ನೇತೃತ್ವದ ರೈತ ಚಳುವಳಿಗಳು ಅಷ್ಟಾಗಿ ಕಾಣುವುದಿಲ್ಲ. ಈ ಭಾಗದಲ್ಲಿ 1950 ರ ನಂತರದಲ್ಲಿ ಪ್ರಾರಂಭವಾಗುತ್ತವೆ.

❖ ❖ ❖

ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ (ಎಐಎಸ್‌ಎಫ್): ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಖಿಲ ಭಾರತ ಮಟ್ಟದಲ್ಲಿ 1936 ರಲ್ಲಿ ಎಐಎಸ್‌ಎಫ್ ಆರಂಭವಾದ ನಂತರ ಒಂದು ವ್ಯವಸ್ಥಿತ ವಿದ್ಯಾರ್ಥಿ ಚಳುವಳಿ ನಡೆದಿದೆ. ಎಐಎಸ್‌ಎಫ್ ಮಾತ್ರವೇ ರಾಷ್ಟ್ರೀಯ ಚಳುವಳಿಯಲ್ಲಿ ವಿದ್ಯಾರ್ಥಿಗಳಿಗೆ ನೇತೃತ್ವ ನೀಡಿದ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆಯಾಗಿದೆ. ಇದರಲ್ಲಿ ಕಮ್ಯುನಿಸ್ಟರು, ಕಾಂಗ್ರೆಸ್ಸಿಗರು, ಸೋಷಿಯಲಿಸ್ಟರು, ಸ್ವತಂತ್ರರು ಎಲ್ಲಾ ತೊರೆಗಳ ಜನರೂ ಇದ್ದರು. ಕರ್ನಾಟಕದ ಮಟ್ಟಿಗೆ ಎಐಎಸ್‌ಎಫ್ ಸಂಯೋಜಿತ ವಿದ್ಯಾರ್ಥಿ ಚಳುವಳಿ ಕ್ವಿಟ್ ಇಂಡಿಯ ಚಳುವಳಿ ಮತ್ತು ನಂತರದಲ್ಲಿ ಮಾತ್ರ ಕಾಣಬಹುದು. ಇದರಲ್ಲಿ ವಿಶೇಷವಾಗಿ ಕಮ್ಯುನಿಸ್ಟ್ ಪ್ರೇರಿತ ವಿದ್ಯಾರ್ಥಿಗಳ ಭಾಗವಹಿಸುವಿಕೆ ಕಾಣಬಹುದು. ಕರ್ನಾಟಕದಲ್ಲಿ ವಿವಿಧ ಪ್ರದೇಶಗಳಲ್ಲಿ ಇದು ವಿವಿಧ ರೀತಿಯಲ್ಲಿ ಸಂಭವಿಸಿದೆ.


ಎಐಎಸ್‌ಎಫ್‌ನ ಮುತುವರ್ಜಿಯಲ್ಲಿ ಫ್ಯಾಸಿಸಂಗೆ ವಿರುದ್ಧವಾಗಿ 'ಫ್ರೆಂಡ್ಸ್ ಆಫ್ ಸೋವಿಯತ್ ಯೂನಿಯನ್' ಕಲ್ಕತ್ತಾದಲ್ಲಿ ಆರಂಭವಾಗಿತ್ತು. ಇದೇ ಮಾದರಿಯಲ್ಲಿ ಮೈಸೂರಿನಲ್ಲಿ ಆರಂಭಿಸಬೇಕು ಮತ್ತು 'ಸೋವಿಯತ್ ಏಯ್ಡ್ ಡೇ' ಆಚರಿಸಬೇಕೆಂದು, ಎಐಎಸ್‌ಎಫ್‌ಗೆ ಸೇರ್ಪಡೆ ಹೊಂದಿದ್ದ ಮೈಸೂರು ಸ್ಟೇಟ್ ಸ್ಟೂಡೆಂಟ್ಸ್ ಫೆಡರೇಷನ್‌ನ (ಎಂಎಸ್‌ಎಸ್‌ಎಫ್) ಕಾರ್ಯದರ್ಶಿ ಸವಾಯ್ ಅಶ್ವಥ್ ರಾವ್ ಅವರಿಗೆ ಸೂಚಿಸಲಾಗಿತ್ತು[71]. ಎಂಎಸ್‌ಎಸ್‌ಎಫ್‌ನ

ಎರಡನೇ ಸಮ್ಮೇಳನವು 1941 ರ ಜನವರಿ 11 ರಂದು ಡಾ.ಕೆ.ಬಿ.ಕೃಷ್ಣ[72] ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಎನ್.ಡಿ.ಶಂಕರ್, ಎನ್.ಎನ್.ಚೆಂಡೂರ್, ಎಂ.ಎಸ್.ರಾಮರಾವ್, ಸವಾಯ್ ಅಶ್ವಥ್ ರಾವ್, ಎಸ್.ರಾಮಸ್ವಾಮಿ ಇವರುಗಳು ಇದರ ಮುಖ್ಯ ಸಂಘಟಕರಾಗಿದ್ದರು. ಸವಾಯ್ ಎ.ರಾವ್ ಅವರು ಎಐಎಸ್‌ಎಫ್‌ನ ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿದ್ದರು ಮತ್ತು ಎಂಎಸ್‌ಎಸ್‌ಎಫ್ ಕಾರ್ಯದರ್ಶಿಯಾಗಿದ್ದರು. ಈ ಸಮ್ಮೇಳನದಲ್ಲಿ ಫ್ಯಾಸಿಸಂ ಮತ್ತು ಇಂಪೀರಿಯಲಿಸಂ ವಿರುದ್ಧ ವಿದ್ಯಾರ್ಥಿಗಳನ್ನು ಅಣಿನೆರೆಸುವ ಮತ್ತು ಸೋವಿಯತ್ ರಾಷ್ಟ್ರವನ್ನು ಒಂದು ಮಾದರಿ ಪ್ರಭುತ್ವವನ್ನಾಗಿ ವಿದ್ಯಾರ್ಥಿಗಳ ನಡುವೆ ಪ್ರಚಾರ ಮಾಡುವ ತೀರ್ಮಾನವನ್ನು ಮಾಡಿದರು. ಈ ನಿರ್ಣಯಗಳಿಗೆ ವಿರೋಧ ವ್ಯಕ್ತಪಡಿಸಿ 'ಇಂಡಿಯನ್ ಸಮಧರ್ಮ ಯೂತ್ ಲೀಗ್'ನ ಅಧ್ಯಕ್ಷರಾಗಿದ್ದ ಕೆ.ಪ್ರಭುದೇವ್ ಎಂಬುವರ ನೇತೃತ್ವದಲ್ಲಿ 30 ವಿದ್ಯಾರ್ಥಿಗಳು ಸಮ್ಮೇಳನವನ್ನು ಬಹಿಷ್ಕರಿಸಿ ಹೋದರು[73]. ಸೈದ್ಧಾಂತಿಕ ಭಿನ್ನತೆಗಳು ಆಗಲೇ ಹೇಗೆ ಕಾರ್ಯಾಚರಣೆ ಮಾಡಿವೆ ಎಂಬುದನ್ನು ಇದರಿಂದ ಗಮನಿಸಬಹುದು.

ಕರ್ನಾಟಕದ ಪ್ರಮುಖ ಕಮ್ಯುನಿಸ್ಟ್ ನಾಯಕರಾಗಿದ್ದ ಎಂ.ಎಸ್.ಕೃಷ್ಣನ್ ಅವರು ಮದ್ರಾಸಿನಲ್ಲಿ ಓದುತ್ತಿರುವಾಗಲೇ ಕಮ್ಯುನಿಸಂ ಕಡೆಗೆ ಹೊರಳಿದ್ದರು. ಎಐಎಸ್‌ಎಫ್‌ಗೆ ಸೇರ್ಪಡೆ ಹೊಂದಿದ್ದ ಮದ್ರಾಸ್ ಸ್ಟೂಡೆಂಟ್ಸ್ ಆರ್ಗನೈಸೇಷನ್‌ನಲ್ಲಿ ಸಕ್ರಿಯವಾಗಿದ್ದರು. ರಸಾಯನಶಾಸ್ತ್ರದಲ್ಲಿ ಪದವಿ ಮುಗಿಸಿ 1941 ರಲ್ಲಿ ವಾಪಸ್ ಬಂದು ಬೆಂಗಳೂರಿನ ಯುವಿಸಿಇ ಕಾಲೇಜಿನಲ್ಲಿ ಇಂಜಿನಿಯರಿಂಗ್‌ಗೆ ಸೇರಿದರು. ನಂತರ ವಿದ್ಯಾರ್ಥಿಗಳ ನಡುವೆ ಸಕ್ರಿಯವಾಗಿದ್ದ ಬೆಂಗಳೂರು ಸ್ಟೂಡೆಂಟ್ಸ್ ಫೆಡರೇಷನ್ ಕಾರ್ಯದರ್ಶಿಯಾದರು. ಸವಾಯ್ ಎ.ರಾವ್ ಅವರ ನಂತರ ಇವರು ಎಂಎಸ್‌ಎಸ್‌ಎಫ್‌ನ ಕಾರ್ಯದರ್ಶಿಯಾಗಿ ಚುನಾಯಿತರಾದರು[74].

ಎಐಎಸ್‌ಎಫ್ ಸಿಪಿಐನ ನಿಲುವುಗಳಿಂದ ಹೆಚ್ಚು ಪ್ರಭಾವಿತಗೊಂಡಿತ್ತಾದರೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿತು. 1942 ರ ಆಗಸ್ಟ್ 9 ರಂದು ಕ್ವಿಟ್ ಇಂಡಿಯಾ ಕರೆಗೆ ತರಗತಿಗಳನ್ನು ಬಹಿಷ್ಕರಿಸುವ ತೀರ್ಮಾನ ಮಾಡಿತು. ಬೆಂಗಳೂರಿನ ಸೆಂಟ್ರಲ್, ಇಂಟರ್‌ಮೀಡಿಯಟ್ ಮತ್ತು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಬೃಹತ್ ಸಭೆಯನ್ನು ಉದ್ದೇಶಿಸಿ ಕೃಷ್ಣನ್ ಭಾಷಣ ಮಾಡಿದರು[75]. ಕ್ವಿಟ್ ಇಂಡಿಯಾ ಪ್ರಚಾರ, ತರಗತಿ ಬಹಿಷ್ಕಾರ, ಶಿಕ್ಷಣ ಸಂಸ್ಥೆಗಳ ಪಿಕೆಟಿಂಗ್ ಇವು ವಿದ್ಯಾರ್ಥಿಗಳ ಸಾಮಾನ್ಯ ಚಟುವಟಿಕೆಗಳಾದರೆ, ಭೂಗತರಾಗಿದ್ದ ಎನ್.ಡಿ.ಶಂಕರ್, ಸುಖತೀರ್ಥ, ಪ್ರಭುದೇವ್‌ನಂತಹ ಕೆಲವು ಎಡಪಂಥೀಯರು ಹಿಂಸಾತ್ಮಕ ಚಟುವಟಿಕೆಗಳನ್ನು ಸಂಘಟಿಸಿದರು. ಜಿಲೆಟಿನ್‌ಗಳು, ಡಿಟೋನೇಟರ್‌ಗಳು, ಸೇಫ್ಟಿ ಫ್ಯೂಸ್ ಮುಂತಾದ ವಸ್ತುಗಳನ್ನು ಕೆಜಿಎಫ್‌ನಿಂದ ಕದ್ದು ಸ್ಫೋಟಕಗಳನ್ನು ತಯಾರಿಸುತ್ತಿದ್ದರು. ಅಗ ವಿದ್ಯಾರ್ಥಿ ಕಾರ್ಯಕರ್ತರಾಗಿದ್ದ ಹೆಚ್.ಸಿ.ವೇಣುಗೋಪಾಲ್ ಎಂಬುವರು ರೈಲ್ವೆ ಟೆಲಿಫೋನ್ ತಂತಿಗಳನ್ನು ಕತ್ತರಿಸಲು ವಿದ್ಯಾರ್ಥಿಗಳ ಜೊತೆ ದಾವಣಗೆರೆಗೆ ಹೋಗುತ್ತಿದ್ದಾಗ, ಬಾಣಾವರ ರೈಲ್ವೆ ಸ್ಟೇಷನ್‌ನಲ್ಲಿ ಪೊಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮಾಡಿ ಹೊರಗೆ ಹಾಕಿದರು. ಸುದ್ದಿ ತಿಳಿದು ರೊಚ್ಚಿಗೆದ್ದ ವಿದ್ಯಾರ್ಥಿಗಳು ದಾವಣಗೆರೆ ರೈಲು ನಿಲ್ದಾಣವನ್ನು ಸುಟ್ಟು ಹಾಕಿದರು. ಈ ಪ್ರಕರಣದಲ್ಲಿ ಹಲವು ವಿದ್ಯಾರ್ಥಿಗಳು ಜೈಲುವಾಸವನ್ನು ಅನುಭವಿಸಿದರು[76]. ಎಐಎಸ್‌ಎಫ್‌ನ

ಕರೆಯಂತೆ 'ನ್ಯಾಷನಲ್ ಯೂನಿಟಿ'ಗಾಗಿ ಸಹಿ ಸಂಗ್ರಹ ಚಳುವಳಿಗಳನ್ನು ನಡೆಸಿದರು. ಬೆಂಗಳೂರು, ಮೈಸೂರು, ಭದ್ರಾವತಿ, ಕೋಲಾರ ಮುಂತಾದ ಕಡೆಗಳಲ್ಲಿ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು.


ಎಸ್.ಸೂರ್ಯನಾರಾಯಣ ರಾವ್

ಎಂ.ಎಸ್.ಕೃಷ್ಣನ್ ಅವರ ಬಾಲ್ಯದ ಗೆಳೆಯ ಎಸ್.ಸೂರ್ಯನಾರಾಯಣ ರಾವ್ (ಸೂರಿ)[77] ಅವರನ್ನು ವಿದ್ಯಾರ್ಥಿ ಚಳುವಳಿಗೆ ಆಕರ್ಷಿಸುವುದರಲ್ಲಿ ಕೃಷ್ಣನ್ ಪ್ರಮುಖ ಪಾತ್ರ ವಹಿಸಿದರು. ವೈ.ಆರ್.ಸತ್ಯನಾರಾಯಣ, ಬಿ.ಕೆ.ನರಸಿಂಹಮೂರ್ತಿ, ಎಂ.ಸಿ.ನರಸಿಂಹನ್, ಎಸ್.ವಿ.ಶಾಸ್ತ್ರಿ, ಮೊದಲಾದವರು ವಿದ್ಯಾರ್ಥಿ ಫೆಡರೇಷನ್ನಿನ ಸಕ್ರಿಯ ಕಾರ್ಯಕರ್ತರಾಗಿದ್ದರು (ಕೃಷ್ಣರಾವ್ 2012: 10).ಕ್ವಿಟ್ ಇಂಡಿಯಾ ಚಳುವಳಿ ವಿದ್ಯಾರ್ಥಿಗಳನ್ನು ಬೃಹತ್ ಪ್ರಮಾಣದಲ್ಲಿ ಹೋರಾಟಕ್ಕೆ ಧುಮುಕಿಸಿದ ಚಳುವಳಿಯಾಗಿತ್ತು. ಕ್ವಿಟ್ ಇಂಡಿಯಾ ಘೋಷಣೆಯಾಗಿ ಗಾಂಧೀಜಿ ಬಂಧನವಾದ ಕೂಡಲೇ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳು ಮುಷ್ಕರಕ್ಕೆ ಇಳಿದರು. ಆಗಷ್ಟೆ ಎಸ್ಎಸ್ಸಿ ಮುಗಿಸಿದ್ದ ಸೂರಿಯವರು ಎಲ್ಎಂಪಿ ಕಾಲೇಜಿನ ಬಳಿ ಪಿಕೆಟಿಂಗ್ ಮಾಡುತ್ತಿದ್ದಾಗ ಬಂಧನಕ್ಕೊಳಗಾದರು. ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಜೊತೆ ಇವರು ಒಂದೂವರೆ ವರ್ಷ ಮೈಸೂರಿನ ಜೈಲಿನಲ್ಲಿ ಇದ್ದರು. ಇವರೊಂದಿಗೆ ಇಂದಿರಾಗಾಂಧಿಯವರಿಗೆ ಪತ್ರಿಕಾ ಕಾರ್ಯದರ್ಶಿಯಾಗಿದ್ದ ಹೆಚ್.ವೈ.ಶಾರದಾಪ್ರಸಾದ್, ಪ್ರಸಿದ್ಧ ಗಾಂಧೀವಾದಿ ಹೆಚ್.ನರಸಿಂಹಯ್ಯ ಮುಂತಾದವರು ಇದ್ದರು. ಜೈಲಿನಲ್ಲಿ ಸರಿಯಾದ ಊಟ ತಿಂಡಿಗಾಗಿ, ಮತ್ತು ಜೈಲಧಿಕಾರಿಗಳ ದೌರ್ಜನ್ಯದ ವಿರುದ್ಧ ಪ್ರತಿಭಟನೆಗಳು ಶುರುವಾದವು. 1942 ಅಕ್ಟೋಬರ್ 27 ರಂದು ಅಧಿಕಾರಿಗಳು ಪೊಲೀಸರನ್ನು ಕರೆಸಿ ಜೈಲಿನೊಳಗೇ ಲಾಠಿ ಚಾರ್ಜ್ ಮಾಡಿಸಿದರು. ಸೂರಿಯವರಿಗೂ ತೀವ್ರವಾಗಿ ಲಾಠಿ ಪೆಟ್ಟು ಬಿತ್ತು. ಇವರ ಅಣ್ಣ ಸರ್ಕಾರಿ ನೌಕರರಾಗಿದ್ದರು. ಅವರನ್ನ ಬಳಸಿ ಸೂರಿಯವರಿಂದ ತಪ್ಪೊಪ್ಪಿಗೆ ಪತ್ರವನ್ನು ಪಡೆಯಲು ಪೊಲೀಸರು ಒತ್ತಡ ಹೇರಿದರು. ಆದರೆ ಬಾಲಕ ಸೂರಿ ತಪ್ಪೊಪ್ಪಿಗೆ ನೀಡಲು ನಿರಾಕರಿಸಿದರು. ಈ ಘಟನೆಯಲ್ಲಿ ಪೊಲೀಸರ ದಾಳಿಯಿಂದ ಮರಿಮಲ್ಲಪ್ಪ ಹೈಸ್ಕೂಲಿನ ವಿದ್ಯಾರ್ಥಿ ಶಂಕರಪ್ಪ ಎಂಬ ವಿದ್ಯಾರ್ಥಿ ಸಾವನ್ನಪ್ಪಿದರು[78]. ಸರಿಸುಮಾರು ಇದೇ ಕಾಲಕ್ಕೆ ಜನ ಜಾಗೃತಿ ಸಂಘದಲ್ಲಿ ಸಕ್ರಿಯವಾಗಿದ್ದ ಗೌರಮ್ಮನವರು ಮೈಸೂರಿನಲ್ಲಿ ಎಐಎಸ್ಎಫ್‌ನ ಕಾರ್ಯಕರ್ತರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ದಲಿತ ವಿದ್ಯಾರ್ಥಿನಿ ಸಿ.ಪಾರ್ವತಮ್ಮ ಎಂಬುವರು ಹಾಸ್ಟೆಲ್‌ನ ಊಟ–ತಿಂಡಿ ಸಮಸ್ಯೆಗಳ ವಿಚಾರದಲ್ಲಿ ತೊಂದರೆ ಅನುಭವಿಸುತ್ತಿದ್ದರು. ಗೌರಮ್ಮ ಮಧ್ಯಪ್ರವೇಶ ಮಾಡಿ ಸಮಸ್ಯೆ ಬಗೆಹರಿಸುವವರೆಗೂ ಪಾರ್ವತಮ್ಮನವರನ್ನು ತಮ್ಮ ಮನೆಯಲ್ಲೇ ಉಳಿಸಿಕೊಂಡು ಸಲಹಿದರು. ಬ್ರಾಹ್ಮಣರಾಗಿದ್ದ ಇವರ ಈ ನಡವಳಿಕೆ ಅಂದಿಗೆ ಒಂದು ಮುಖ್ಯ ಬೆಳವಣಿಗೆಯಾಗಿತ್ತು. ಇವರು ಜನಜಾಗೃತಿ ಸಂಘದ ಮತ್ತು ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದ ಎಂ.ಎಸ್. ರಾಮರಾವ್ ಅವರನ್ನು ಪೌರೋಹಿತ್ಯವಿಲ್ಲದೆ ಸರಳವಾಗಿ ವಿವಾಹವಾಗಿದ್ದೂ ಕೂಡಾ ಗಮನ ಸೆಳೆದಿತ್ತು.

ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿ ಅಖಿಲ ಭಾರತ ಮಟ್ಟದಲ್ಲಿ ಕಮ್ಯುನಿಸ್ಟರು ಮತ್ತು ಸೋಷಿಯಲಿಸ್ಟ್‌ರ ನಡುವೆ ವ್ಯತ್ಯಾಸಗಳು ಬಂದು, ಸೋಷಿಯಲಿಸ್ಟರು ಆಲ್ ಇಂಡಿಯಾ ಸ್ಟೂಡೆಂಟ್ಸ್ ಕಾಂಗ್ರೆಸ್‌ನ್ನು

ಸ್ಥಾಪಿಸಿದರು. ಇದರಿಂದ ಎಐಎಸ್‌ಎಫ್ ವಿಭಜನೆಯಾಯಿತು. ಆದರೆ ಇದರ ಪರಿಣಾಮ ಬೆಂಗಳೂರಿನಲ್ಲಿ ತಡವಾಗಿ ಕಾಣಿಸಿಕೊಂಡು 1944 ರ ಡಿಸೆಂಬರ್ 20 ರಂದು ನಡೆದ ವಾರ್ಷಿಕ ಸಭೆಯಲ್ಲಿ ಎಐಎಸ್‌ಎಫ್ ವಿಭಜನೆಯಾಯಿತು[79]. ಆಗ ಬೆಂಗಳೂರು ಸ್ಟೂಡೆಂಟ್ಸ್ ಫೆಡರೇಷನ್ ಸಮ್ಮೇಳನವನ್ನು 19 5 ರ ಆಗಸ್ಟ್ 4-5 ರಂದು ನಡೆಸಲು ತೀರ್ಮಾನಿಸಿದರು[80]. ಆದರೆ ಸರ್ಕಾರ ಈ ಸಮ್ಮೇಳನವನ್ನು ನಿಷೇಧ ಮಾಡಿತು. ನಿಷೇಧವಿದ್ದರೂ ಬೆಂಗಳೂರಿನಲ್ಲಿ (ಬಹುಶಃ ಬನಶಂಕರಿ ಪ್ರದೇಶದಲ್ಲಿ) ಸಮ್ಮೇಳನ ಮಾಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಗತಿಶೀಲ ಬರಹಗಾರರ ಸಂಘದ ಅ.ನ.ಕೃಷ್ಣರಾವ್ ಅವರು ವಹಿಸಿದ್ದರು[81]. ಈ ಪ್ರಕ್ರಿಯೆ ಮುಂದುವರಿದು 1945 ರ ಡಿಸೆಂಬರ್ 8 ರಂದು ಎಂಎಸ್‌ಎಸ್‌ಎಫ್‌ನ ರಾಜ್ಯ ಸಮ್ಮೇಳನವು ನಂಜನಗೂಡಿನಲ್ಲಿ ಜರುಗಿತು. ರಾಜಕೀಯ ವಿಚಾರಗಳೇ ಅಲ್ಲದೆ ಶೈಕ್ಷಣಿಕ ವಿಚಾರಗಳನ್ನು ಇದರಲ್ಲಿ ಚರ್ಚಿಸಲಾಯಿತು. ಈ ನಡುವೆ ಇಂಜಿನಿಯರಿಂಗ್ ಮುಗಿಸಿದ ಕೃಷ್ಣನ್ 1943 ರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದರು[82] ಮತ್ತು ಅವರಿಗೆ ಕಾರ್ಮಿಕ ಚಳುವಳಿಯಲ್ಲಿ ಕೆಲಸ ಮಾಡಲು ಕಮ್ಯುನಿಸ್ಟ್ ಪಕ್ಷ ನಿರ್ದೇಶನ ನೀಡಿತು. ಆಗ ಸೂರಿಯವರನ್ನು ಪೂರ್ಣವಾಗಿ (ಇವರು ಆಗ ಹೆಚ್‌ಎಎಲ್‌ನಲ್ಲಿ ಉದ್ಯೋಗದಲ್ಲಿದ್ದರು) ವಿದ್ಯಾರ್ಥಿ ಚಳುವಳಿಯಲ್ಲಿ ಕೆಲಸ ಮಾಡುವಂತೆ ಆಗಿನ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಎನ್.ಎಲ್.ಉಪಾಧ್ಯಾಯರು ಸಲಹೆ ನೀಡಿದರು. ಕೃಷ್ಣನ್ ಸಹ ಒತ್ತಾಯ ಮಾಡಿದ್ದರಿಂದ ಕೆಲಸಕ್ಕೆ ರಾಜೀನಾಮೆ ನೀಡಿ ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್‌ಗೆ ಸೇರಿದರು. ಮುಂದೆ ಬೆಂಗಳೂರು ವಿದ್ಯಾರ್ಥಿ ಫೆಡರೇಷನ್ನಿನ ಕಾರ್ಯದರ್ಶಿಯಾದರು. 1946 ರಲ್ಲಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಸಂಘದ ಸಮಾರೋಪ ಭಾಷಣಕ್ಕೆ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಮಗನನ್ನು ಕರೆಸಲಾಗಿತ್ತು. ದಯಾನಂದ ಸಾಗರ್ ಸಂಘದ ಕಾರ್ಯದರ್ಶಿಯಾಗಿದ್ದರು. ಮೈಸೂರಿನ ದಿವಾನರು ಮೊದಲು ತಿರುವಾಂಕೂರು ಸಂಸ್ಥಾನಕ್ಕೂ ದಿವಾನರಾಗಿದ್ದರು. ಅಪ್ಪಟ ಬ್ರಿಟಿಷರ ಏಜೆಂಟರಂತೆ ವರ್ತಿಸುತ್ತಿದ್ದ ಅವರು ತಿರುವಾಂಕೂರು ರಾಜನಿಗೆ ಭಾರತಕ್ಕೆ ಸೇರುವುದು ಬೇಡವೆಂಬ ಸಲಹೆಯನ್ನೂ ನೀಡಿದ್ದರು. ಸ್ವಾತಂತ್ರ್ಯ ಚಳುವಳಿಯ ಅಂತಹ ಉಚ್ರಾಯ ಸ್ಥಿತಿಯಲ್ಲಿ ಇಂತಹವರ ಮಗನ ಕೈಯಲ್ಲಿ ಭಾಷಣ ಮಾಡಿಸುವುದು ಅವಮಾನವೆಂದು ಅದನ್ನು ತಡೆಯಬೇಕೆಂದು ವಿದ್ಯಾರ್ಥಿ ಫೆಡರೇಷನ್ ತೀರ್ಮಾನಿಸಿತು. ಭಾಷಣ ತಡೆಯಬೇಕೆಂದು ವಿದ್ಯಾರ್ಥಿಗಳ ಮೆರವಣಿಗೆಯನ್ನು ತೆಗೆದರು. ಪೊಲೀಸರು ಮತ್ತು ಗೂಂಡಾಗಳು ಸೇರಿ ಮೆರವಣಿಗೆ ಅಡ್ಡಗಟ್ಟಿ ದಬ್ಬಾಳಿಕೆ ನಡೆಸಿದರು. ಪೊಲೀಸರು ಸೂರಿಯವರನ್ನು ಬಂಧಿಸಿದರು. ವಿದ್ಯಾರ್ಥಿಗಳ ತೀವ್ರ ವಿರೋಧದಿಂದಾಗಿ ಭಾಷಣ ಮಾಡಲು ದಿವಾನರ ಮಗನಿಗೆ ಆಗಲಿಲ್ಲ. ಇದರ ಪರಿಣಾಮವೆಂಬಂತೆ ಸೂರ್ಯನಾರಾಯಣ ರಾವ್, ಕೆ.ಸಿ.ರೆಡ್ಡಿ ಸಂಬಂಧಿ ರಾಮಕೃಷ್ಣ ಪ್ರಸಾದ್ ಸೇರಿದಂತೆ ಹಲವು ವಿದ್ಯಾರ್ಥಿಗಳನ್ನು ಹೊರಹಾಕಿದರು.

ಸ್ವಾತಂತ್ರ್ಯ ಬರುವವರೆಗೂ ಇಂತಹ ಚಟುವಟಿಕೆಗಳನ್ನು ಎಐಎಸ್‌ಎಫ್ ನಡೆಸುತ್ತಿತ್ತು. ಬಡ ವಿದ್ಯಾರ್ಥಿಗಳಿಗೆ ಶುಲ್ಕಗಳನ್ನು ಭರಿಸಲು ಸ್ಟೂಡೆಂಟ್ಸ್ ಏಡ್ ಸೊಸೈಟಿ ನಡೆಸುತ್ತಿದ್ದರು. ಹಣಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು, ಸಂಗೀತೋತ್ಸವಗಳನ್ನು, ವಿಚಾರ ಸಂಕಿರಣಗಳನ್ನು, ಕ್ರೀಡಾ ಕೂಟಗಳನ್ನು ನಡೆಸುತ್ತಿದ್ದರು. 1946 ರಲ್ಲಿ ಅಂಚೆ

ಮುಷ್ಕರವನ್ನು ಬೆಂಬಲಿಸಿ ಎಐಎಸ್‌ಎಫ್‌ನಿಂದ ಕರಪತ್ರ ಪ್ರಚಾರವನ್ನು ಮಾಡಿದ್ದರು. 1945–47 ರ ಅವಧಿಯಲ್ಲಿ ಬೆಂಗಳೂರಿನಲ್ಲಿ ನಡೆದ ಕಾರ್ಮಿಕ ಹೋರಾಟಗಳ ಅಲೆಯಲ್ಲಿ ಎಐಎಸ್‌ಎಫ್‌ನ ವಿದ್ಯಾರ್ಥಿಗಳು ಸೌಹಾರ್ದ ಬೆಂಬಲ ನೀಡಿ ಭಾಗವಹಿಸುತ್ತಿದ್ದರು. ಸಾಹಿತ್ಯ ಮಾರಾಟ ಮಾಡುತ್ತಿದ್ದರು.

ಆಗಸ್ಟ್ 15 ರಂದು ಬೆಂಗಳೂರಿನ ಚಿಕ್ಕಲಾಲ್‌ಬಾಗಿನಲ್ಲಿ ಸಂವಿಧಾನ ರಚನೆಯ ಬಗ್ಗೆ ಚರ್ಚಿಸಲು ಒಂದು ಸಭೆಯನ್ನು ಎಐಎಸ್‌ಎಫ್ ಏರ್ಪಡಿಸಿ ಇದಕ್ಕೆ ಕೆಂಗಲ್ ಹನುಂತಯ್ಯನವರನ್ನು ಕರೆಸಿದ್ದರು. ಮೈಸೂರಿನ ರಾಜಪ್ರಭುತ್ವವನ್ನು ತೀವ್ರವಾಗಿ ಟೀಕಿಸುತ್ತಿದ್ದರೆಂದು, ಅದಕ್ಕಾಗಿ ಇವರನ್ನು ಕಮ್ಯುನಿಸ್ಟ್ ಎಂದು ಕರೆಯುತ್ತಿದ್ದರೆಂದು ಸೂರಿಯವರು ಹೇಳುತ್ತಾರೆ. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟವನ್ನು ಬೆಂಬಲಿಸಿ ವಿದ್ಯಾರ್ಥಿಗಳನ್ನು ಬೀದಿಗಿಳಿಸಿ ಹೋರಾಟಗಳನ್ನು ಮಾಡಿದರು. ದಿವಾನರ ವಿರುದ್ಧ 'ಆರ್ಕಾಟ್ ಬಾಯ್ಕಾಟ್', 'ತಂಬೂಚೆಟ್ಟಿ ಚಟ್ಟಕಟ್ಟಿ' ಘೋಷಣೆಗಳನ್ನು ವಿದ್ಯಾರ್ಥಿಗಳ ನಡುವೆ ಜನಪ್ರಿಯಗೊಳಿಸುವಲ್ಲಿ ಎಐಎಸ್‌ಎಫ್ ಶ್ರಮಿಸಿತು[83].

ಮಂಗಳೂರಿನಲ್ಲಿ ಎಐಎಸ್‌ಎಫ್ ಕರ್ನಾಟಕದ ಇತರೆ ಕಡೆಗಳಿಗಿಂತ ಮೊದಲೇ ಆರಂಭವಾಗಿತ್ತು. 1939 ರಲ್ಲಿ ಮೊದಲ ಬಾರಿಗೆ ನಡೆದ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷತೆಯನ್ನು ಕಮ್ಯುನಿಸ್ಟ್ ವಿಚಾರ ಸರಣಿಯ ಡಾ।ಬಿ. ಕೆ.ಕೃಷ್ಣ ವಹಿಸಿದ್ದರು. ಎ.ರಾಘವನ್[84] ಆಗ ಎಐಎಸ್‌ಎಫ್‌ನ ಮಂಗಳೂರು ಘಟಕದ ಕಾರ್ಯದರ್ಶಿಯಾಗಿದ್ದರು. ಜಿಲ್ಲಾ ನ್ಯಾಯಾಧೀಶರಾಗಿದ್ದ ಕೆ.ಪಿ.ಡಿ.ನಾಯರ್, ಕಣ್ಣಾನೂರಿನ ಕೆ.ಶಂಕರ್, ಅಂಚೆ ತಂತಿ ಇಲಾಖೆಯಲ್ಲಿದ್ದ ಕೆ.ಪದ್ಮನಾಭನ್, ಕೊಡಗಿನವರಾದ ಮುಂಬೈನ ವಕೀಲ ಎಸ್.ಎಸ್.ಶಾನ್‌ಭಾಗ್, ಕಮ್ಯುನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಅಡ್ಡೂರು ಶಿವಶಂಕರ್ ರಾವ್, ಹರಿದಾಸ್ ಆಚಾರ್[85] ಮುಂತಾದವರು ವಿದ್ಯಾರ್ಥಿ ಚಳುವಳಿಯಲ್ಲಿ ಎಡ ವಿಚಾರಧಾರೆಯ ಪ್ರತಿಪಾದಕರಾಗಿದ್ದರು. ಅವರಿಗೆ ಆಗಲೇ ಭೂಗತ ಕಮ್ಯುನಿಸ್ಟ್ ಚಳುವಳಿಯ ಸಂಪರ್ಕವುಂಟಾಗಿತ್ತು. ವಿದ್ಯಾರ್ಥಿ ಸಮ್ಮೇಳನಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ, ಫ್ಯಾಸಿಸಂ ವಿರುದ್ಧ ಚರ್ಚೆ ಮತ್ತು ನಿರ್ಣಯಗಳು ಆಗುತ್ತಿದ್ದವು (ಕಕ್ಕಿಲ್ಲಾಯ 2003: 31–32).

ಎಐಎಸ್‌ಎಫ್‌ನ ಅಂದಿನ ಮುಖ್ಯ ಕೆಲಸಗಳು ಎಂದರೆ ರಾಷ್ಟ್ರೀಯ ನಾಯಕರ ಬಂಧನಗಳನ್ನು ಪ್ರತಿಭಟಿಸಿ ಮೆರವಣಿಗೆಗಳನ್ನು ನಡೆಸುವುದಾಗಿತ್ತು. ಅಂದು ದಿನಂಪ್ರತಿಯೆಂಬಂತೆ ಇದಕ್ಕೆ ಕಾರಣಗಳು ಸಿಕ್ಕೇ ಸಿಗುತ್ತಿದ್ದವು. ಜನವರಿ 26 ನ್ನು ಸ್ವಾತಂತ್ರ್ಯ ದಿನವೆಂದು ಆಚರಿಸಲಾಗುತ್ತಿತ್ತು. ಮಂಗಳೂರಿನ ಕೇಂದ್ರ ಮೈದಾನದಲ್ಲಿ ಕಾಂಗ್ರೆಸಿನ ತ್ರಿವರ್ಣ ಧ್ವಜ, ಕಾರ್ಮಿಕ ಸಂಘಗಳ ಕೆಂಪು ಧ್ವಜ ಮತ್ತು ವಿದ್ಯಾರ್ಥಿ ಫೆಡರೇಷನ್ನಿನ 'ಸ್ವಾತಂತ್ರ್ಯ, ಶಾಂತಿ, ಪ್ರಗತಿ' ಘೋಷಣೆಗಳುಳ್ಳ ಶ್ವೇತ ಧ್ವಜವನ್ನು ಹಿಡಿದು ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳನ್ನು ಮಾಡಲಾಗುತ್ತಿತ್ತು. 1941 ರ ವೇಳೆಗೆ ಬಿ.ವಿ.ಕಕ್ಕಿಲ್ಲಾಯರು ವಿದ್ಯಾರ್ಥಿ ಫೆಡರೇಷನ್ನಿನ ಕಾರ್ಯದರ್ಶಿಯಾಗಿದ್ದರು. 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಎಐಎಸ್‌ಎಫ್ ಸಕ್ರಿಯವಾಗಿ ಭಾಗವಹಿಸಿತು. ಬಂಧಿತ ರಾಷ್ಟ್ರೀಯ ನಾಯಕರ ಬಿಡುಗಡೆಗಾಗಿ,

ರಾಷ್ಟ್ರೀಯ ಸರ್ಕಾರಕ್ಕಾಗಿ ಪ್ರತಿಭಟನೆಗಳನ್ನು ಸಂಘಟಿಸಿತು. ವಿದ್ಯಾರ್ಥಿಗಳು ಮಂಗಳೂರಿನ ನ್ಯಾಯಾಲಯದ ಮುಂದೆ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಇದರಲ್ಲಿ ಭಾಗವಹಿಸಿದ ಎಸ್.ಆರ್.ಭಟ್ ಜೈಲಿನಲ್ಲಿ ಕಮ್ಯುನಿಸ್ಟರಾದರು. 1943 ಜೂನ್‌ನಲ್ಲಿ ತಲಚೇರಿಯ ಕೆ.ಪದ್ಮನಾಭನ್ ಎಐಎಸ್‌ಎಫ್‌ನ ಕಾರ್ಯದರ್ಶಿಯಾದರು (ಕಕ್ಕಿಲ್ಲಾಯ 2003: 45).

❖ ❖ ❖

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ): ಬ್ರಿಟಿಷರ ಕೈಗಾರಿಕಾ ನೀತಿಯಿಂದಾಗಿ ಭಾರತದ ಬಹುತೇಕ ಪ್ರದೇಶಗಳಲ್ಲಿ ಸಂಭವಿಸಿದ ಹಾಗೆ ಕರ್ನಾಟಕದಲ್ಲಿಯೂ ಔದ್ಯೋಗಿಕ ಬೆಳವಣಿಗೆಯು ಕುಂಠಿತಗೊಂಡಿತ್ತು. ಇಪ್ಪತ್ತನೇ ಶತಮಾನದ ಆರಂಭದವರೆಗೂ ಬಂಡವಾಳದ ಹೂಡಿಕೆಯು ವ್ಯಾಪಕವಾಗಿರಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಬೃಹತ್ ಬಂಡವಾಳ ಹೂಡಿಕೆಯು ಮೂರು ಸ್ಥಳಗಳಿಗೆ ಸೀಮಿತವಾಗಿತ್ತು. ಪಶ್ಚಿಮ ಮೈಸೂರಿನ ಕಾಫಿ ಮತ್ತು ಅಡಿಕೆ ತೋಟಗಳು, ಕೋಲಾರದ ಚಿನ್ನದ ಗಣಿ ಮತ್ತು ಬೆಂಗಳೂರಿನ ವಿವಿಧ ಮಿಲ್ಲುಗಳು, ಗಿರಣಿಗಳು ಮತ್ತು ಕಾರ್ಖಾನೆಗಳು (ಜಾನಕಿ ನಾಯರ್ 2010: 357).

ಬೆಂಗಳೂರು ಟಿಪ್ಪುವಿನ ಕಾಲಕ್ಕೇ ಬಟ್ಟೆಗಳನ್ನೂ ಮತ್ತು ಯುದ್ಧ ಉಪಕರಣಗಳನ್ನು ಉತ್ಪಾದಿಸುವ ಒಂದು ಕೇಂದ್ರವಾಗಿತ್ತು. ನಂತರ 19 ನೇ ಶತಮಾನದ ದೀರ್ಘ ಕಾಲ ಕೈಗಾರಿಕೆಗಳ ಬೆಳವಣಿಗೆ ಹಿನ್ನಡೆ ಅನುಭವಿಸಿತು. 1880 ರ ಸುಮಾರಿಗೆ ಹತ್ತಿ ಗಿರಣಿಗಳನ್ನು ಸ್ಥಾಪಿಸುವ ಪ್ರಯತ್ನಗಳು ನಡೆದವು. ಆಗ ಪ್ರಾರಂಭವಾದದ್ದೇ ಬಿನ್ನಿ ಮಿಲ್ (ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್) ಮತ್ತು ಮಹಾರಾಜಾ ಮಿಲ್. ಮೊದಲ ಮಹಾಯುದ್ಧ ಮುಗಿಯುವ ವೇಳೆಗೆ ಬೆಂಗಳೂರಿನ ಕೈಗಾರಿಕಾ ಚಿತ್ರಣ ಸಾಕಷ್ಟು ಬದಲಾವಣೆ ಕಂಡಿತು. ಹಲವಾರು ಸಣ್ಣ ಪ್ರಮಾಣದ ಬಟ್ಟೆ ಗಿರಣಿಗಳು, ತಂಬಾಕು ಕಾರ್ಖಾನೆಗಳು, ಚರ್ಮ ಹದಗೊಳಿಸುವ ಘಟಕಗಳು, ಪ್ರಿಂಟಿಂಗ್ ಪ್ರೆಸ್‌ಗಳು, ಮತ್ತು ವಿಭಿನ್ನ ವಸ್ತುಗಳನ್ನು ಉತ್ಪಾದಿಸುವ ಜಾಯ್‌ಂಟ್ ಸ್ಟಾಕ್ ಕಂಪನಿಗಳು ಪ್ರಾರಂಭವಾದವು. ಯುದ್ಧದ ಕಾರಣದಿಂದಾಗಿ ಇವುಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಳವಾಯಿತು. ಮೈಸೂರು ಸರಕಾರದ ಬೆಂಬಲವೂ ಸಾಕಷ್ಟು ದೊರೆಯಿತು. ಈ ಪ್ರಕ್ರಿಯೆಯ ಭಾಗವಾಗಿ 1940 ರ ದಶಕದಲ್ಲಿ ಹಿಂದೂಸ್ತಾನ್ ಏರೋನಾಟಕಲ್ ಲ್ಯಾಬೋರೇಟರಿಯಂತಹ ಬೃಹತ್ ಕೈಗಾರಿಕೆಗಳು ಆರಂಭವಾದವು (ಜಾನಕಿ ನಾಯರ್ 2010: 361). ಬೆಂಗಳೂರಿನಲ್ಲಾದ ಪೂರ್ವ–ಪಶ್ಚಿಮ ಬೆಳವಣಿಗೆಯು ಎರಡು ಆಯಾಮಗಳನ್ನು ಹೊಂದಿತ್ತು. ಪೂರ್ವದಲ್ಲಿ ಕಂಟೋನ್ಮೆಂಟ್ ಮತ್ತು ಮಿಲಿಟರಿ ಚಟುವಟಿಕೆಗಳು ಇದ್ದು ಅದು ಪೂರ್ಣವಾಗಿ ಬ್ರಿಟಿಷರ ಅಧೀನದಲ್ಲೇ ಇತ್ತು. ಪಶ್ಚಿಮ ಬೆಂಗಳೂರಿನ ಭಾಗದಲ್ಲಿ ಪೇಟೆ ಪ್ರದೇಶವಿದ್ದು ಮೈಸೂರು ಸರ್ಕಾರದ ಅಧೀನದಲ್ಲಿತ್ತು. ಇದರ ಭಾಗವಾಗಿ 1912 ರಲ್ಲಿ ಬ್ರಿಟಿಷ್ ಸರ್ಕಾರ, ಇತರರಿಗೆ ಅವಕಾಶ ನೀಡದೆ, ತಂಬಾಕು ಕಾರ್ಖಾನೆಯನ್ನು ಸ್ಥಾಪಿಸಲು ಮಾತ್ರ ಅವಕಾಶ ಕೊಟ್ಟಿತು. ಕೆಜಿಎಫ್‌ನಲ್ಲಿ ಚಿನ್ನ ಶೋಧನ ಕಾರ್ಯವು 1873 ರಲ್ಲಿ ಆರಂಭವಾಗಿ ಅದರ ಜೊತೆಯಲ್ಲೇ 'ಸ್ವಯಂಪರಿಪೂರ್ಣ'ವಾದ ಗಣಿ ಸಂಬಂಧಿ

ಚಟುವಟಿಕೆಗಳಿಗೇ ಪ್ರತ್ಯೇಕವಾದ ಒಂದು ಪಟ್ಟಣ ನಿರ್ಮಾಣವಾಯಿತು. ಕೋಲಾರ ಮತ್ತು ಬೆಂಗಳೂರು ಅಲ್ಲದೆ ಸಂಸ್ಥಾನದ ಇತರೆಡೆಗಳಲ್ಲೂ 1920–30 ರ ದಶಕದಲ್ಲಿ ಕೈಗಾರಿಕಾ ಕೇಂದ್ರಗಳು ಸ್ಥಾಪನೆಯಾದವು. ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಪೇಪರ್ ಮಿಲ್ಸ್, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ನಗರದಲ್ಲಿ ರೈಲ್ವೆ ವರ್ಕ್‌ಷಾಪ್ ಮತ್ತು ಕೆ.ಆರ್.ಮಿಲ್ಸ್ ಆರಂಭವಾಯಿತು.

ಮೈಸೂರು ರಾಜ್ಯದ ಕೈಗಾರಿಕಾ ಬೆಳವಣಿಗೆಯ ಜೊತೆಯಲ್ಲೇ ಆಧುನಿಕ ಕಾರ್ಮಿಕ ವರ್ಗದ ಬೆಳವಣಿಗೆಯಾಗಿದೆ. 1911 ರಲ್ಲಿ ಮೈಸೂರು ರಾಜ್ಯದಲ್ಲಿ 1,55,000 ಕಾರ್ಮಿಕರಿದ್ದರು. 1921 ರಲ್ಲಿ ಈ ಸಂಖ್ಯೆಯು 1,43,000 ಕ್ಕೆ ಇಳಿಯಿತು. ಇದಕ್ಕೆ ಮುಖ್ಯವಾಗಿ 1918 ರಲ್ಲಿ ಅಪ್ಪಳಿಸಿದ ಇನ್‌ಫ್ಲ್ಯುಯೆನ್ಜಾ ಖಾಯಿಲೆ ಕಾರಣವಾಗಿತ್ತು. 1931 ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ 65 ಲಕ್ಷದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ 2,01,000 ಅಂದರೆ ಜನಸಂಖ್ಯೆಯ ಶೇ.8.6 ರಷ್ಟು ಜನ ಕಾರ್ಮಿಕರಿದ್ದರು (ಬಾಲಕೃಷ್ಣ 1940: 260–261). ನಡುವೆ ಏರುಪೇರುಗಳಿದ್ದಾಗಲೂ ಒಟ್ಟಾರೆ ಕಾರ್ಮಿಕರ ಸಂಖ್ಯೆ ಸತತವಾಗಿ ಏರುಮುಖವಾಗಿತ್ತು ಎಂಬುದನ್ನು ಗಮನಿಸಬಹುದು. ಒಟ್ಟು ಸಂಖ್ಯೆಯಲ್ಲಿ ಹೆಚ್ಚಿನ ಕಾರ್ಮಿಕರು ಬಹುತೇಕ ಕೆಜಿಎಫ್ ಮತ್ತು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದರು. 1931 ರ ನಂತರ ಬೆಂಗಳೂರಿನ ಜನಸಂಖ್ಯೆಯಲ್ಲಿ ಶೇ.40 ಹೆಚ್ಚಳ ಕಂಡರೆ, ಅದು 1941 ರ ನಂತರದಲ್ಲಿ ಶೇ.100 ರಷ್ಟು ಹೆಚ್ಚಳ ಕಂಡಿತು (ಜಾನಕಿ ನಾಯರ್ 2016: 19). ಇವರಲ್ಲಿ ದೊಡ್ಡ ಪ್ರಮಾಣದಲ್ಲಿ ವಲಸೆ ಕಾರ್ಮಿಕರಿದ್ದರು. ಮೈಸೂರು ರಾಜ್ಯದಲ್ಲಿ ನೆಲೆಸಿದ ವಲಸೆ ಕಾರ್ಮಿಕರಲ್ಲಿ ಅತಿಹೆಚ್ಚು ಅಂದರೆ ಶೇ.86.3 ರಷ್ಟು ಕಾರ್ಮಿಕರು ಮದ್ರಾಸ್ ಪ್ರೆಸಿಡೆನ್ಸಿ ಭಾಗವಾದ ಉತ್ತರ ಆರ್ಕಾಟ್, ಸೇಲಂ ಮತ್ತಿತರ ಜಿಲ್ಲೆಗಳಿಂದ ಬಂದಿದ್ದರು (ಬಾಲಕೃಷ್ಣ 1940: 263). ಇಂತಹ ವಲಸೆಗೆ ಮುಖ್ಯವಾಗಿ, ಮೈಸೂರು ರಾಜ್ಯದ ಭೂಹಿಡುವಳಿಗಳ ವಿಶಾಲ ಸ್ವರೂಪ ಮತ್ತು ಸಾಮಾಜಿಕ ರಚನೆಗಳ ಕಾರಣದಿಂದ ಹೆಚ್ಚಿನ ಸಂಖ್ಯೆಯ ಕೃಷಿಕೂಲಿಕಾರರನ್ನು ಕೈಗಾರಿಕಾ ಉತ್ಪಾದನೆಗೆ ಅದು ಬಿಡುಗಡೆ ಮಾಡಲಿಲ್ಲ. 1901 ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಶೇ.19.8 ಕ್ಕೆ ಹೋಲಿಸಿದರೆ, ಮೈಸೂರು ರಾಜ್ಯದ ಜನಸಂಖ್ಯೆಯಲ್ಲಿ ಶೇ.7.7 ಮಾತ್ರ ಕೃಷಿ ಕೂಲಿಕಾರರಿದ್ದರು. ಹೀಗಾಗಿ ಇದು ಇಲ್ಲಿನ ಜನರನ್ನು ಹೆಚ್ಚಾಗಿ ಕೈಗಾರಿಕಾ ಕಾರ್ಮಿಕರಾಗಿ ಬಿಡುಗಡೆ ಮಾಡುವಲ್ಲಿ ತೊಡಕಾಗಿತ್ತು (ಜಾನಕಿ ನಾಯರ್ 2016: 23).

ಟೆಕ್ಸ್‌ಟೈಲ್ ಮಿಲ್ಲುಗಳು ಮತ್ತು ಚಿನ್ನದ ಗಣಿಯಲ್ಲಿ ಬಹುತೇಕ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕೋಲಾರದ ಚಿನ್ನದ ಗಣಿಯು ಅತಿ ಹೆಚ್ಚು, ಉದಾಹರಣೆಗೆ 1905 ರಲ್ಲಿ 35,000 ದಷ್ಟು, ಕಾರ್ಮಿಕರನ್ನು ತೊಡಗಿಸಿಕೊಂಡಿದ್ದ ಕೈಗಾರಿಕೆಯಾಗಿತ್ತು. ನಂತರ ಇದು ಏರಿಳಿತಗಳನ್ನು ಕಂಡು 1930 ರಲ್ಲಿ 18,000, 1940 ರಲ್ಲಿ 25,467, ಕೊನೆಗೆ 1946 ರ ಹೊತ್ತಿಗೆ ಸುಮಾರು 26,000 ಕಾರ್ಮಿಕರನ್ನು ಹೊಂದಿತ್ತು. 1945 ರ ಸುಮಾರಿಗೆ ಬೆಂಗಳೂರಿನ ಮೂರು ದೊಡ್ಡ ಜವಳಿ ಕಾರ್ಖಾನೆಗಳಲ್ಲಿ 12,000 ಕಾರ್ಮಿಕರು ಮತ್ತು ದೊಡ್ಡ ಉದ್ದಿಮೆಗಳಲ್ಲಿ 40,000 ಕಾರ್ಮಿಕರು ಕೆಲಸ ಮಾಡುತ್ತಿದ್ದರು (ಜಾನಕಿ ನಾಯರ್ 2016: 19). ವಿದ್ಯುತ್ ಮಗ್ಗಗಳ ಸಂಖ್ಯೆ ಹೆಚ್ಚಾಗಿ ಕೈಮಗ್ಗಗಳ ಬಳಕೆ ಗಣನೀಯವಾಗಿ ಕುಸಿಯಿತು. ಇವೆಲ್ಲವುಗಳ ಪರಿಣಾಮವಾಗಿ, ಕೆ.ಜಿ.ಎಫ್. ನಗರ ಸಂಪೂರ್ಣವಾಗಿ ಕಾರ್ಮಿಕ

ನಗರವಾಗಿ ಬೆಳೆದರೆ, ಬೆಂಗಳೂರು ಅಷ್ಟೊಂದು ಬೃಹತ್ ಅಲ್ಲದ ಕಾರ್ಮಿಕರ ಸಂಖ್ಯೆಯನ್ನು ಹೊಂದಿತ್ತು. ಹೀಗಾಗಿ ಇದು ಒಟ್ಟಾರೆಯಾಗಿ ಅಲ್ಲಿನ ಜನಜೀವನ, ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳ ಮೇಲೆ ನೇರ ಪರಿಣಾಮವನ್ನು ಬೀರಿದೆ. ಆಳ ಗಣಿಗಳಲ್ಲಿ ಇಳಿದು ಮಾಡಬೇಕಾದ ಅತ್ಯಂತ ಕಷ್ಟಕರ ಕೆಲಸದ ಕಾರಣದಿಂದ ಯೂರೋಪಿಯನ್ನರು ಉಸ್ತುವಾರಿ ಕೆಲಸಗಳಲ್ಲಿ ಮಾತ್ರವಿದ್ದರು. ಗಣಿಗಳಲ್ಲಿ ಖಾಯಂ ಮತ್ತು ಗುತ್ತಿಗೆ ಕಾರ್ಮಿಕರ ವಿಭಜನೆ ಸ್ಪಷ್ಟವಾಗಿತ್ತು. ಇನ್ನು ಭಾರತೀಯ ವಲಸಿಗ ಕಾರ್ಮಿಕರಲ್ಲೂ ಸುಮಾರು 9000 ಅಡಿಗೂ ಹೆಚ್ಚು ಆಳದ ಗಣಿಗಳೊಳಗೆ 55 ಡಿಗ್ರಿ ತಾಪಮಾನದಲ್ಲಿ ಮಾಡುವ ಕೆಲಸಗಳಲ್ಲಿ, ವಿಪರೀತ ಕಷ್ಟದ, ಅಪಾಯಕಾರಿಯಾದ ಮತ್ತು ಪ್ರತಿಫಲವಿಲ್ಲದ ಕೆಲಸಗಳಲ್ಲಿ ಗುತ್ತಿಗೆ ಕಾರ್ಮಿಕರೇ ಹೆಚ್ಚಾಗಿದ್ದರು. ಚಿನ್ನ ಕದಿಯುವುದನ್ನು ತಡೆಗಟ್ಟುವ ನೆಪದಲ್ಲಿ ಬಂದ ಹೆಚ್ಚೆಚ್ಚು ಬಿಗಿಯಾದ ಕಾನೂನುಗಳು ಮತ್ತು ಶಿಕ್ಷೆ ಕಾರ್ಮಿಕರಲ್ಲೂ ಮತ್ತು ನಾಗರಿಕರಲ್ಲೂ ತೀವ್ರವಾದ ಅತೃಪ್ತಿಯನ್ನು ಸೃಷ್ಟಿಸಿತು.

ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರ ದಿನದ **ದುಡಿಮೆಯ ಅವಧಿ** ನಿಗದಿಯಾದ ಬಗ್ಗೆ ಚರಿತ್ರೆಯಲ್ಲಿ ದಾಖಲಾಗಿದೆ. ಆದರೆ ಇದು ಬ್ರಿಟಿಷ್ ಭಾರತ ಸರ್ಕಾರದ ಸಾಧನೆಗಿಂತ ಉತ್ತಮವಾದದ್ದಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ 8 ಗಂಟೆಗಳ ಕೆಲಸದ ಕಾಯ್ದೆ ಜಾರಿಗೆ ಬಂದಿತ್ತು. ಆದರೆ ಮೈಸೂರಿನಲ್ಲಿ ಬಂದಿರಲಿಲ್ಲ. 1892 ರ ಮೈಸೂರು ಫ್ಯಾಕ್ಟರೀಸ್ ಆಕ್ಟ್‌ಗೆ 1914 ರಲ್ಲಿ ತಿದ್ದುಪಡಿ ತಂದು ದಿನಕ್ಕೆ 11 ಗಂಟೆಗಳ ಕೆಲಸದ ಅವಧಿಯನ್ನು ನಿಗದಿಗೊಳಿಸಲಾಯಿತು. ನಂತರ 1925 ರಲ್ಲಿ ಮತ್ತೊಮ್ಮೆ ತಿದ್ದುಪಡಿ ಮಾಡಿ ವಾರಕ್ಕೆ 60 ಗಂಟೆಗಳನ್ನು ನಿಗದಿಗೊಳಿಸಲಾಯಿತು. 1936 ರಲ್ಲಿ ದಿನಕ್ಕೆ 9 ಗಂಟೆ ಅವಧಿಯನ್ನು ಜಾರಿ ಮಾಡಲಾಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದು ಸಂವಿಧಾನ ಜಾರಿಯಾಗುವವರೆಗೂ ಇದು ಜಾರಿಯಲ್ಲಿತ್ತು (ಜಾನಕಿ ನಾಯರ್ 2010: 359). ಇದೇ ರೀತಿಯಲ್ಲಿ ದೇಶಾದ್ಯಂತ ನಡೆದ ಕಾರ್ಮಿಕ ಚಳುವಳಿಗಳ ಪರಿಣಾಮವಾಗಿ 1926 ರಲ್ಲಿ ಜಾರಿಗೆ ಬಂದ ಟ್ರೇಡ್ ಯೂನಿಯನ್ ಕಾಯ್ದೆಯು ಮೈಸೂರು ಸಂಸ್ಥಾನದಲ್ಲಿ 1941 ರವರೆಗೂ ಜಾರಿಗೆ ಬರಲಿಲ್ಲ. ಕಾರ್ಮಿಕ ಸಂಘಗಳ ಸ್ಥಾಪನೆಗೆ ಕಾನೂನುಬದ್ಧ ಅನುಮತಿಯನ್ನು ನೀಡಲು ಮುಂದಾಗಲಿಲ್ಲ. ಎರಡನೇ ಪ್ರಪಂಚ ಯುದ್ಧದ ಸಂದರ್ಭದಲ್ಲಿ ಬ್ರಿಟಿಷರ ಯುದ್ಧದ ಅಗತ್ಯಗಳಿಗೆ ಉತ್ಪಾದನೆಯನ್ನು ವಿಪರೀತ ಹೆಚ್ಚಳ ಮಾಡಿದಾಗ ಉಂಟಾದ ಕಾರ್ಮಿಕ ಹೋರಾಟಗಳನ್ನು ಪೂರ್ಣವಾಗಿ ಕಡೆಗಣಿಸಿ ಮುಂದುವರೆಯಲು ಮೈಸೂರು ರಾಜರ ಆಡಳಿತಕ್ಕೆ ಅಸಾಧ್ಯವಾಯಿತು. ಆಗ ಅನಿವಾರ್ಯವಾಗಿ 1941 ರ ಮೈಸೂರುಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿ ಮಾಡಿತು (ಜಾನಕಿ ನಾಯರ್ 2010: 360). ಅಲ್ಲಿಯವರೆಗೂ ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕ ಸಂಘಗಳನ್ನು ಧಾರ್ಮಿಕ ಸಂಸ್ಥೆಯಾಗಿ ನೋಂದಾಯಿಸಲಾಗುತ್ತಿತ್ತು. 'ಬೆಂಗಳೂರು ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್' 1926 ರಲ್ಲಿ ಇದೇ ರೀತಿ ಧಾರ್ಮಿಕ ಸಂಸ್ಥೆಯಾಗಿ ನೋಂದಣಿಯಾಗಿತ್ತು. 1926 ರಲ್ಲಿ ಬಿನ್ನಿಮಿಲ್ ಕಾರ್ಮಿಕರು ತಮ್ಮ ಸಂಘವನ್ನು ಮಾನ್ಯ ಮಾಡಬೇಕು ಹಾಗೂ ವೇತನ ಹೆಚ್ಚಳ ಮಾಡಬೇಕೆಂದು ಮುಷ್ಕರ ಮಾಡಿದರು. ಮಾಲೀಕರು ಮುಷ್ಕರ ಮುರಿಯಲು ಪೊಲೀಸರನ್ನು ಬಳಸಿದರು. ಆಗ ನಡೆದ ಗಲಾಟೆಯಲ್ಲಿ ಗೋಲೀಬಾರ್ ನಡೆಸಿದ್ದರಿಂದ ನಾಲ್ವರು ಕಾರ್ಮಿಕರು ತಮ್ಮ ಪ್ರಾಣಗಳನ್ನು ಕಳೆದುಕೊಂಡರು. ಮೈಸೂರು ಲೇಬರ್ ಆಕ್ಟ್ ಕಾರ್ಮಿಕ ಸಂಘಟನೆಗಳ

ಚಟುವಟಿಕೆಗಳಿಗೆ ಪ್ರಾಯೋಗಿಕವಾಗಿ ಅನಾನುಕೂಲವಾಗಿದ್ದರಿಂದ, ಅಖಿಲ ಭಾರತ ಕಾರ್ಮಿಕ ಚಳುವಳಿಯ ಜಾಲದ ಜೊತೆ ಕರ್ನಾಟಕದಲ್ಲಿ ಎಐಟಿಯುಸಿ ಬೆಳೆಯಲು ಆಗಲಿಲ್ಲ. ಆದರೆ ಇಲ್ಲಿ ಸ್ವತಂತ್ರ ಚಳುವಳಿಗಳು ನಡೆಯುತ್ತಿದ್ದವು. ಅದಕ್ಕೆ ಕಮ್ಯುನಿಸ್ಟರು ನಾಯಕತ್ವವನ್ನು ನೀಡಿದರು. ಅಖಿಲ ಭಾರತ ಕಮ್ಯುನಿಸ್ಟ್ ಕಾರ್ಮಿಕ ಮುಖಂಡರು ಕರ್ನಾಟಕಕ್ಕೆ ಹಲವು ಬಾರಿ ಭೇಟಿ ಕೊಟ್ಟು ಮಾರ್ಗದರ್ಶನ ಮಾಡಿದರು. ಎಐಟಿಯುಸಿ ಮೈಸೂರು ರಾಜ್ಯದ ಮೊದಲ ಸಮ್ಮೇಳನ ಬೆಂಗಳೂರಿನ ಮಲ್ಲೇಶ್ವರಂ ಸಮೀಪವಿದ್ದ ಪಿಟ್ ಕಾಲೋನಿ ಬಳಿ ನಡೆಯಿತು. ಇದಕ್ಕೆ ಎಐಟಿಯುಸಿ ಅಖಿಲ ಭಾರತ ಅಧ್ಯಕ್ಷರಾಗಿದ್ದ ಚಕ್ರೈ ಚೆಟ್ಟಿಯಾರ್ ಭಾಗವಹಿಸಿದ್ದರು[86].

ಮೈಸೂರು ರಾಜ್ಯದಲ್ಲಿ 1942 ಮತ್ತು 1947 ರ ನಡುವೆ ಒಂದು ಬಲಿಷ್ಠ ಕಾರ್ಮಿಕ ಚಳುವಳಿಯನ್ನು ವರ್ಗ ಕಣ್ಣೋಟದ ಆಧಾರದಲ್ಲಿ ಕಟ್ಟಲು ಪ್ರಯತ್ನಿಸಲಾಯಿತು. ಪ್ರಾರಂಭದಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರು, ಕೆಜಿಎಫ್, ನಂತರ ಯುದ್ಧಕಾಲದಲ್ಲಿ ಐಟಿಸಿ[87] ದಾವಣಗೆರೆ, ನಂತರ ಸಾಕಷ್ಟು ತಡವಾಗಿ ಹೆಚ್ಎಎಲ್, ಬಿಇಎಲ್, ಐಟಿಐ, ಹೆಚ್ಎಂಟಿ, ಹಳೇ ಮೈಸೂರು ಕೈಗಾರಿಕೆಗಳು, ಮೈಸೂರು ಪೇಪರ್ ಮಿಲ್ಸ್ ಹೀಗೆ ಸಂಘಟನೆ ವಿಸ್ತಾರವಾಯಿತು. ನಂತರ ಉಪಾಧ್ಯಾಯರು ಮುನಿಸಿಪಲ್ ಕಾರ್ಮಿಕರು ಮತ್ತು ಬೀಡಿ ಕಾರ್ಮಿಕರನ್ನು ತುಮಕೂರು, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಸಂಘಟಿಸಿದರು. ಆ ನಂತರ ರೇಷ್ಮೆ ಕಾರ್ಮಿಕರನ್ನು ಸಂಘಟಿಸಿದರು. 1952 ರ ನಂತರ ನೇಕಾರರನ್ನು ಸಂಘಟಿಸಲು ತೊಡಗಿದರು. ಹೀಗಾಗಿ ಕ್ವಿಟ್ ಇಂಡಿಯಾ ಚಳುವಳಿಯ ನಂತರದ ಅವಧಿಯಲ್ಲಿ ವಿವಿಧ ಕೈಗಾರಿಕೆಗಳು, ಕಾರ್ಮಿಕರ ಕಾಲೋನಿಗಳು, ವ್ಯಕ್ತಿಗಳು ಹೀಗೆ ವ್ಯಾಪಕವಾದ ಸಂಪರ್ಕವನ್ನು ಸಾಧಿಸುವ ಕೆಲಸಗಳನ್ನು ಮಾಡಲಾಯಿತು. ಬ್ರಿಟಿಷರ ನೇರ ಆಡಳಿತದಲ್ಲಿದ್ದ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ (ಕಂಟೋನ್ಮೆಂಟ್) ಪ್ರದೇಶದಲ್ಲಿ ಹಲವಾರು ಕೈಗಾರಿಕೆಗಳಿದ್ದವು. ಐಟಿಸಿ ಸೇರಿದಂತೆ, ಜೀವನಹಳ್ಳಿ ಪ್ರದೇಶದಲ್ಲಿ ಟ್ಯಾನರಿಗಳು, ಹೋಟೆಲುಗಳು, ಮುನಿಸಿಪಲ್ ಕಾರ್ಮಿಕರು ಇವರನ್ನು ಸಂಘಟಿಸುವುದರಲ್ಲಿ ಕಮ್ಯುನಿಸ್ಟರಾದ ಐ.ಮರಿದಾಸ್, ಎ.ಎನ್.ಸಿಂಗ್ ಮತ್ತು ದೇವದಾಸ್ ಪ್ರಮುಖ ಪಾತ್ರ ವಹಿಸಿದರು[88]. ಸಣ್ಣ ಗುಂಪುಗಳೊಂದಿಗೆ ಚರ್ಚಿಸುವುದು, ಸಾಹಿತ್ಯ ಮಾರುವುದು, ಯುದ್ಧದ ಕುರಿತು ಕಮ್ಯುನಿಸ್ಟರ ನಿಲುವುಗಳನ್ನು ವಿವರಿಸುವುದು, ಫ್ಯಾಸಿಸಂ ಜಗತ್ತಿಗೆ ಯಾವ ರೀತಿಯಲ್ಲಿ ಕಂಟಕವಾಗಿದೆ, ಅದಕ್ಕಾಗಿ ಜರ್ಮನಿ ಸೋಲಬೇಕಾದ ಅಗತ್ಯದ ಬಗ್ಗೆ, ಮಾನವ ಕುಲದ ರಕ್ಷಣೆ ಮಾಡಿಕೊಳ್ಳಲು ಸೋವಿಯತ್ ಯೂನಿಯನ್ ಗೆಲ್ಲಬೇಕಾದ ಅನಿವಾರ್ಯತೆ ಬಗ್ಗೆ, ಇತ್ಯಾದಿ ವಿಚಾರಗಳನ್ನು ಮಾತನಾಡಲಾಗುತ್ತಿತ್ತು. ಇಂತಹ ಚರ್ಚೆಗಳಲ್ಲಿ, ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ, ಆರ್ಥಿಕ ಸಮಾನತೆ ಮತ್ತು ಸ್ವಾತಂತ್ರ್ಯವೂ ಆಗಿದೆ ಎಂಬುದನ್ನು ವೈಯುಕ್ತಿಕ ನೆಲೆಯಲ್ಲಿ ಮನವರಿಕೆ ಮಾಡುವ ಕೆಲಸವನ್ನೂ ಮಾಡುತ್ತಿದ್ದರು ಎಂಬುದನ್ನು ಇವರ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಒಂದು ರೀತಿಯಲ್ಲಿ ಗ್ರಾಸ್‌ರೂಟ್ ಕೆಲಸವಿದು.

ಬೆಂಗಳೂರಿನ ಎರಡೂ ಆಡಳಿತ ವಲಯಗಳ ಕಾರ್ಮಿಕರನ್ನು ಅಣಿನೆರೆಸುವ ಪ್ರಯತ್ನಕ್ಕೆ ಕಮ್ಯುನಿಸ್ಟರು ಪ್ರಯತ್ನಿಸಿದರು. ಅದಕ್ಕಾಗಿ 'ಬೆಂಗಳೂರು ಸಿಟಿ ಮತ್ತು ಕಂಟೋನ್ಮೆಂಟ್ ಕಾರ್ಮಿಕರ ಸಮ್ಮೇಳನ'ವನ್ನು 1946–47

ರಲ್ಲಿ ನಡೆಸಿದರು. ಇದರಲ್ಲಿ ಮದ್ರಾಸಿನ ಹೆಸರಾಂತ ಕಾರ್ಮಿಕ ಮುಖಂಡ ಪಿ.ಜೀವಾನಂದಂ ಭಾಗವಹಿಸಿದ್ದರು[89]. ಇದಕ್ಕೂ ಹಿಂದೆ ಇಂತಹ ಒಂದು ಸಮ್ಮೇಳನವನ್ನು ನಡೆಸಲು ಮೈಸೂರು ಲೇಬರ್ ಆಕ್ಟ್ ಅವಕಾಶ ಕೊಟ್ಟಿರಲಿಲ್ಲ. ಕೇವಲ ಕೈಗಾರಿಕಾ ಕಾರ್ಮಿಕ ಸಂಘಗಳನ್ನು ಮಾತ್ರ ಅನುಮತಿಸಿತ್ತು. ಈ ಸಮ್ಮೇಳನದಲ್ಲಿ, ಮೈಸೂರಿನಿಂದ ಗೌರಮ್ಮ ಸೇರಿದಂತೆ, ಹೊರಗಿನಿಂದ ಕೆಲವರು ಸೌಹಾರ್ಧ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಕಮ್ಯುನಿಸ್ಟ್ ಸಮ್ಮೇಳನದ ರೀತಿಯಲ್ಲೇ ನಡೆದ ಈ ಸಮ್ಮೇಳನದಲ್ಲಿ ರಾಷ್ಟ್ರೀಯ ಜಾಗೃತಿ ಮತ್ತು ಕಾರ್ಮಿಕರ ಹಕ್ಕುಗಳ ಬಗ್ಗೆ ಚರ್ಚಿಸಲಾಯಿತು. ಎಂ.ಎಸ್.ಕೃಷ್ಣನ್ ಪ್ರಕಾರ ಈ ಸಮ್ಮೇಳನವು ಬೆಂಗಳೂರಿನ ದೇವರಜೀವನಹಳ್ಳಿಯಲ್ಲಿ ಭೂಗತವಾಗಿ ನಡೆಯಿತು. ಇದಕ್ಕೆ ವಜಾಗೊಂಡ ರೈಲ್ವೆ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಮುಖಂಡ ಪಳನಿ, ಡಿ.ಎಸ್.ಶ್ರೀರಾಮುಲು, ಅಂದಿನ ಬೆಂಗಳೂರಿನ ಡೆಪ್ಯೂಟಿ ಮೇಯರ್ ಜಯಶೀಲನ್, ರಾಯಿಸ್ಟ್ ಆಗಿದ್ದ ದೀನದಯಾಳ್ ನಾಯ್ಡು ಇವರೆಲ್ಲಾ ಸಹಕಾರ ನೀಡಿದರೆಂದು ಕೃಷ್ಣನ್ ಜೊತೆಗಾರರಾದ ಶಂಕರನಾರಾಯಣ ಹೇಳುತ್ತಾರೆ.

1945–46 ರ ವೇಳೆಗೆ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ತಯಾರಿ ನಡೆಸುತ್ತಾ, ಅದರ ಭಾಗವಾಗಿ ರೈಲ್ವೆ ಕಾರ್ಮಿಕರನ್ನು ಸಂಘಟಿಸಲು ಎಂ.ಎಸ್.ಕೃಷ್ಣನ್ ಮತ್ತು ಡಿ.ಎಸ್.ಶ್ರೀರಾಮುಲು ಜೊತೆಗೂಡಿದರು. ಆ ವೇಳೆಗೆ ಮದ್ರಾಸಿನ ವಿಭಾಗದಲ್ಲಿ ಎಂಎಸ್ಎಂ ರೈಲ್ವೆ ಮತ್ತು ಮೈಸೂರು ವಿಭಾಗದಲ್ಲಿದ್ದ ಎಂಎಸ್ಎ ರೈಲ್ವೆ ಕಾರ್ಮಿಕರ ನಡುವೆ ವೇತನ ತಾರತಮ್ಯ ಹೆಚ್ಚಾಗಿತ್ತು. ಮೊದಲಿಗೆ ಬೆಂಗಳೂರಿನಲ್ಲಿದ್ದ ಸಿಟಿ ರೈಲ್ವೆ ವರ್ಕ್‌ಷಾಪ್ ಕಾರ್ಮಿಕರನ್ನು ಸಂಘಟಿಸಿದರು. ನಂತರ ಮೈಸೂರು ರಾಜ್ಯಾದ್ಯಂತ ಸಂಚರಿಸಿ ರೈಲ್ವೆ ಕಾರ್ಮಿಕರನ್ನು ಸಂಘಟಿಸಿದರು. ಜವಾಬ್ದಾರಿ ಸರ್ಕಾರ ಮತ್ತು ವೇತನ ತಾರತಮ್ಯದ ಪ್ರಶ್ನೆಗಳನ್ನು ಒಟ್ಟಿಗೆ ತಂದು ಮುಷ್ಕರಕ್ಕೆ ಸಿದ್ದತೆ ನಡೆಸಿದರು. 1947 ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಒಂದು ತಿಂಗಳ ಯಶಸ್ವಿ ಮುಷ್ಕರವನ್ನು ನಡೆಸಿದರು. ಹನ್ನೊಂದು ಸಾವಿರ ಮೈಸೂರು ಸ್ಟೇಟ್ ರೈಲ್ವೆ ಕಾರ್ಮಿಕರು ಮೈಸೂರಿನ ದಿವಾನರ ದೌರ್ಜನ್ಯವನ್ನು ಎದುರಿಸಿಯೂ ಗೆಲುವನ್ನು ಸಾಧಿಸಿದರು. ಬೋನಸ್, ಮಧ್ಯಂತರ ಪರಿಹಾರಕ್ಕಾಗಿ ಮತ್ತು ಕಿರುಕುಳದ ವಿರುದ್ದ ಈ ಗೆಲುವನ್ನು ಪಡೆದರು. 1939 ರಲ್ಲಿ ಇದೇ ಕಾರ್ಮಿಕರು ನಡೆಸಿದ 31 ದಿನಗಳ ಮುಷ್ಕರವನ್ನು ದಮನ ಮಾಡಲಾಗಿತ್ತು. ಹತ್ತು ವರ್ಷ ಸೇವೆ ಮಾಡಿದವರೂ ಸಹ ಕೇವಲ 8 ರಿಂದ 10 ರೂ ಸಂಬಳ, ಕಡಿಮೆ ದರದ ರೇಷನ್ ಅಂಗಡಿಗಳ ಕೊರತೆ, ಗಂಭೀರ ಗಾಯಗಳಾದರೂ ಪರಿಹಾರವಿಲ್ಲ ಇತ್ಯಾದಿ ಬೇಡಿಕೆಗಳನ್ನು ಸರ್ಕಾರ ಕಡೆಗಣಿಸಿತ್ತು. ಕಡಿಮೆ ರಜೆಗಳು, ದೀರ್ಘ ಅವಧಿಯ ಕೆಲಸ, ದಂಡಗಳು, ಅಮಾನತ್ತುಗಳು, ಭ್ರಷ್ಟಾಚಾರ ಹೀಗೆ ಎಲ್ಲವೂ ಸಮಸ್ಯೆಗಳಾಗಿದ್ದವು. ಮುಷ್ಕರ ಮೂರು ತಿಂಗಳು ನಡೆದರೂ ರೈಲನ್ನು ಓಡಿಸುತ್ತೇವೆಂದು ದಿವಾನರು ಹಾಕಿದ ಬೆದರಿಕೆ ಯಾವುದೇ ಕೆಲಸ ಮಾಡಲಿಲ್ಲ. ಅಂತಿಮವಾಗಿ ಕಾರ್ಮಿಕರ ಬೇಡಿಕೆಗಳಿಗೆ ಮಣಿಯಬೇಕಾಯ್ತು[90].

ಇನ್ನು, ಅತ್ಯಂತ ಕೇಂದ್ರೀಕೃತವಾಗಿ ಒಂದು ಪ್ರದೇಶದಲ್ಲಿ ಕಮ್ಯುನಿಸ್ಟರ ಪ್ರಭಾವದಿಂದ ನಡೆದ ಕಾರ್ಮಿಕ ಚಳುವಳಿಯನ್ನು ಗುರುತಿಸುವುದಾದರೆ ಕೆಜಿಎಫ್ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಕೆಜಿಎಫ್ ಗಣಿಗಳಲ್ಲಿನ ನರಕ ಸದೃಶ ಪರಿಸ್ಥಿತಿಗಳ ವಿರುದ್ಧವಾಗಿ ಕಾರ್ಮಿಕರ ಆರಂಭಿಕ ಪ್ರತಿರೋಧವು ಅಸಂಘಟಿತವಾದುದು ಮತ್ತು

ಸ್ವಯಂಪ್ರೇರಿತವಾದುದು. ಆತ್ಮರಕ್ಷಣೆಗಾಗಿ ಮತ್ತು ಆತ್ಮಗೌರವಕ್ಕಾಗಿ ಪ್ರತಿಭಟನೆ, ವೈಯುಕ್ತಿಕ ಪ್ರತಿರೋಧದ ರೂಪದಲ್ಲಿ ಪ್ರಕಟವಾಗುತ್ತಿತ್ತು.ಇಂತಹುದೊಂದು ಗಮನಾರ್ಹವಾದ ಚಳುವಳಿ ನಡೆದದ್ದು 1930 ಏಪ್ರಿಲ್ 7 ರಂದು[91] ಜಾನ್ ಟೇಲರ್ ಕಂಪನಿಯು, 1929 ರಲ್ಲಿ ಮೈಸೂರು ಸರ್ಕಾರ ಜಾರಿಗೆ ತಂದಿದ್ದ ಕಾರ್ಮಿಕರ ಪರಿಹಾರ ಶಾಸನದನ್ವಯ ನೂತನವಾಗಿ ಸ್ಥಾಪಿಸಿದ್ದ ಸೆಂಟ್ರಲ್ ಲೇಬರ್ ರಿಜಿಸ್ಟ್ರಿಯಲ್ಲಿ ಕಾರ್ಮಿಕರ ಕೈಬೆರಳು ಗುರುತುಗಳನ್ನು ಸಂಗ್ರಹಿಸುವುದಕ್ಕೆ ಮುಂದಾಯಿತು. ಐದು ಗಣಿಗಳ ಸುಮಾರು 18,000 ಕಾರ್ಮಿಕರು 18 ದಿನಗಳು[92] ಕೈ **ಬೆರಳು ಗುರುತುಗಳನ್ನು ಪಡೆಯುವುದರ ವಿರುದ್ಧ ಮುಷ್ಕರ** ಮಾಡಿದರು.

ಬೆರಳು ಗುರುತುಗಳನ್ನು ಸಂಗ್ರಹಿಸುವುದನ್ನು ಕಾರ್ಮಿಕರು ಅಷ್ಟೊಂದು ತೀವ್ರವಾಗಿ ವಿರೋಧಿಸಿದ್ದಕ್ಕೆ ಮೂರು ಮುಖ್ಯ ಕಾರಣಗಳನ್ನು ಇದರಲ್ಲಿ ಗುರುತಿಸಬಹುದು. ಕೆಜಿಎಫ್ ಕಾರ್ಮಿಕರನ್ನು ಬಹಳ ಕಾಲದಿಂದ ಬಡ್ಡಿ ಮಾರವಾಡಿಗಳು ಸುಲಿಗೆ ಮಾಡುತ್ತಿದ್ದರು. ಅನಕ್ಷರಸ್ತ ಕಾರ್ಮಿಕರ ಕೈಬೆರಳ ಗುರುತುಗಳನ್ನು ಖಾಲಿ ಪ್ರಾಮಿಸರಿ ಹಾಳೆಗಳ ಮೇಲೆ ಪಡೆದುಕೊಂಡು, ಅವರ ಸಂಬಳಗಳನ್ನು ಹಿಡಿದುಕೊಳ್ಳಲು ಕೋರ್ಟಿನಿಂದ ಆದೇಶಗಳನ್ನು ಮಾಡಿಸುತ್ತಿದ್ದರು. ಇದರಿಂದ ಎಷ್ಟೋ ವೇಳೆ ಅವರಿಗೆ ಸಂಬಳವೇ ಬರುತ್ತಿರಲಿಲ್ಲ. ಹೀಗಾಗಿ ಅವರು ಊರು ಬಿಟ್ಟು ಹೋಗಬೇಕಾಗುತ್ತಿತ್ತು. ಎರಡನೆಯದಾಗಿ ಬೆರಳ ಗುರುತುಗಳು ಅಪರಾಧಗಳಿಗೆ ಸಂಬಂಧಿಸಿದ್ದಾಗಿತ್ತು. ಅಲ್ಲಿನ ವಡ್ಡರು, ಹಂದಿಜೋಗಿಗಳು ಮತ್ತು ಇತರ ಬುಡಕಟ್ಟು ಜನರನ್ನು ಸರ್ಕಾರ ಅಪರಾಧಿಗಳೆಂದೇ ಪರಿಗಣಿಸಿ ಬೆರಳ ಗುರುತುಗಳನ್ನು ಪಡೆಯುತ್ತಿತ್ತು. ಕಾರ್ಮಿಕರು ನಿರಂತರ ಪೋಲೀಸ್ ಕಣ್ಗಾವಲಿನಲ್ಲಿರುವುದು ಅವರ ಸ್ವಾಭಿಮಾನಕ್ಕೆ ಗಂಭೀರವಾದ ಪೆಟ್ಟಾಗಿತ್ತು (ಜಾನಕಿ ನಾಯರ್ 2010: 368). ಮೂರನೆಯದಾಗಿ, ಕಾರ್ಮಿಕರನ್ನು ಖಾಯಂ ಮಾಡಲು ಬೆರಳ ಗುರುತುಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂಬ ಸುದ್ದಿ ಹಬ್ಬಿತು. ಕಾರ್ಮಿಕರು ಖಾಯಂ ಆಗಲು ಸಿದ್ದರಿರಲಿಲ್ಲ! ಕಾರ್ಮಿಕರು ಶಾಶ್ವತವಾಗಿ ಗಣಿ ಕೆಲಸವೆಂಬ ಹಿಂಸೆಯನ್ನು ಅನುಭವಿಸುತ್ತಾ ಇರಲು ಸಿದ್ದರಿರಲಿಲ್ಲ. ಹೀಗಾಗಿ ಕೆಲಸ ಬಿಟ್ಟು ಹೋಗುತ್ತಿದ್ದರು. ಬ್ರಿಟಿಷ್ ಕಂಪನಿ ಮತ್ತೆ ಅವರನ್ನು ಹಿಡಿದು ತರುತ್ತಿತ್ತು. ಅದಕ್ಕಾಗಿ ಅವರ ಕೈಗಳಿಗೆ ಕಬ್ಬಿಣದಿಂದ ಮಾಡಿದ ಬಳೆಗಳನ್ನು ತೊಡಿಸಲಾಗುತ್ತಿತ್ತು. ಅದರಲ್ಲಿ ಗಣಿ ಹೆಸರನ್ನು ಕೆತ್ತಲಾಗಿರುತ್ತಿತ್ತು. ಈ ಎಲ್ಲಾ ಕಾರಣಗಳೂ ಸೇರಿ ವ್ಯವಸ್ಥಿತವಾದ ಕಾರ್ಮಿಕ ಸಂಘಗಳ ರಚನೆ ಆಗದಿದ್ದ ಸಂದರ್ಭದಲ್ಲಿ ಇಂತಹ ದೀರ್ಘ ಹೋರಾಟ ನಡೆಯಿತು. ಕೊನೆಗೆ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಮಧ್ಯಪ್ರವೇಶ ಮಾಡಿ, ಕೈಬೆರಳು ಗುರುತನ್ನು ನಿಲ್ಲಿಸುವಂತೆ ಗಣಿ ಆಡಳಿತ ಮಂಡಳಿಗೆ ಸಲಹೆ ನೀಡಿದ ನಂತರ ಮುಷ್ಕರ ನಿಂತಿತು (ಚಂದ್ರಶೇಖರ್ 1985: 110–111). ಈ ರೀತಿಯಾಗಿ ಪ್ರಾರಂಭವಾದ ಕೆಜಿಎಫ್‌ನ ಹೋರಾಟಗಳು ಹಲವು ಕಾರಣಗಳಿಗಾಗಿ ನಡೆಯತೊಡಗಿದವು. 1934 ರಲ್ಲಿ ಚಿನ್ನದ ಗಣಿ ಕಾರ್ಮಿಕನ ಮೇಲೆ ಯೂರೋಪಿಯನ್ ನೌಕರನೊಬ್ಬ ಹಲ್ಲೆ ಮಾಡಿದನೆಂದು, ಅದರ ವಿರುದ್ಧ



ಕಾರ್ಮಿಕನೂ ತನ್ನ ರಕ್ಷಣೆಗೆ ನೌಕರನ ಮೇಲೆ ಬಿದ್ದನೆಂಬ ವಿಷಯದಲ್ಲಿ, ವಿದೇಶೀ ನೌಕರನಿಗೆ ಅಮಾನತು ಶಿಕ್ಷೆ ಕೊಟ್ಟರೆ, ಇಲ್ಲಿನ ಕಾರ್ಮಿಕನನ್ನು ಕೆಲಸದಿಂದ ವಜಾ ಮಾಡಲಾಯಿತು. ಇದರ ವಿರುದ್ಧ 1934 ರ ಸೆಪ್ಟೆಂಬರ್ 1 ರಂದು ನಂದಿದುರ್ಗ ಗಣಿಯ 100 ಕ್ಕೂ ಹೆಚ್ಚು ಕಾರ್ಮಿಕರು ಮಿಂಚಿನ ಮುಷ್ಕರ ಮಾಡಿ ಕೆಲಸ ನಿಲ್ಲಿಸಿದರು. ಆದರೆ ಮಾರನೇ ದಿನ ಕೆಲಸಕ್ಕೆ ಹೋದರು (ಜಾನಕಿ ನಾಯರ್ 2010: 366).

1935 ರ ಜೂನ್ 30 ರಂದು ಮೈಸೂರು ಮೈನ್ಸ್‌ನ ಕಾರ್ಮಿಕರು ಬೋನಸ್ ನಿಯಮಗಳ ವಿರುದ್ಧ ಕೆಲಸವನ್ನು ನಿಲ್ಲಿಸಿ ಪ್ರತಿಭಟಿಸಿದರು. ಇವರು ಯೂರೋಪಿಯನ್ನರ ಮನೆಗಳ ಮೇಲೆ ಕಲ್ಲು ತೂರಿದರು, ಪಂಚಾಯತ್ ಕೋರ್ಟನ್ನು ಸುಟ್ಟರು ಮತ್ತು ಪೊಲೀಸರ ಮೇಲೆ ದಾಳಿ ನಡೆಸಿದರು ಎಂಬ ಕಾರಣಕ್ಕೆ ಪೊಲೀಸರು ನಡೆಸಿದ ಫೈರಿಂಗ್‌ನಲ್ಲಿ ಒಬ್ಬ ಕಾರ್ಮಿಕ ಸಾವನ್ನಪ್ಪಿದ. ಮುಂದುವರಿದ ಎರಡನೇ ದಿನದ ಪ್ರತಿಭಟನೆ ಮೇಲೆ ಮತ್ತೆ ಪೊಲೀಸ್ ಫೈರಿಂಗ್ ನಡೆದು ಮತ್ತೊಬ್ಬ ಕಾರ್ಮಿಕ ಅಸುನೀಗಿದ[93].

1938 ರಲ್ಲಿ ಕಾರ್ಮಿಕರು ತಾವು ಕೈಗೆ ಗುರುತಿನ ಪಟ್ಟಿಯನ್ನು ಕಟ್ಟಿಕೊಳ್ಳುವುದಿಲ್ಲ, ಕೂಲಿ ಹೆಚ್ಚಳ, ಸಂಘ ಕಟ್ಟಲು ಅವಕಾಶ ಬೇಕೆಂದು 28,000 ಕಾರ್ಮಿಕರು ಬೃಹತ್ ಮುಷ್ಕರವನ್ನು ಮಾಡಿದರು. ಇದರ ನಾಯಕತ್ವವನ್ನು ಎ.ಟಿ.ಲಕ್ಷ್ಮಣ ಮೊದಲಿಯಾರ್, ಕೆ.ಸಿ.ಫಿಲಿಪ್ಸ್, ಸಿ.ಬಿ.ಮೊಣ್ಣಯ್ಯ ಮತ್ತು ವಜ್ರವೆಲು ಚೆಟ್ಟಿಯಾರ್ ವಹಿಸಿದ್ದರು (ಅಚ್ಯುತ 1987: 22). ಕೆಜಿಎಫ್‌ನಲ್ಲಿ ಕಮ್ಯುನಿಸ್ಟರು ನಿರ್ಣಾಯಕವಾದ ಪ್ರವೇಶವನ್ನು ಪಡೆದದ್ದು ಈ ಹೋರಾಟದಲ್ಲಿ.

ಕಾರ್ಮಿಕ ಸಂಘ ಸ್ಥಾಪನೆ ಮಾಡಲು ಪ್ರಯತ್ನಗಳು ಶುರುವಾದಾಗ, ಕೆಜಿಎಫ್ ನಗರದೊಳಗೆ ಸಭೆ ಮಾಡಲು ಅವಕಾಶವಿರಲಿಲ್ಲ. ಮೈಸೂರು, ಮದ್ರಾಸ್ ಮತ್ತು ಆಂಧ್ರ ಮೂರೂ ಕೂಡುವ ಒಂದು ಹಳ್ಳಿ ಬೂದಗೂರು ಎಂಬಲ್ಲಿ ಸಭೆಗಳನ್ನು ನಡೆಸಲಾಗುತ್ತಿತ್ತು[94]. ಪಿ.ರಾಮಮೂರ್ತಿ ಭಾಗವಹಿಸಿದ್ದ ಮೊದಲ ಸಭೆಯಲ್ಲಿ ತೀರ್ಮಾನಿಸಿದ ಪ್ರಕಾರ 1941 ರಲ್ಲಿ ವಜ್ರವೇಲು ಚೆಟ್ಟಿಯಾರ್, ಎನ್.ಕೆ.ದೊರೆರಾಜ್, ಉತ್ತಿರಿನಾಥನ್, ಚಿತ್ತಿರೈ ದಶರಥನ್, ಆರೋಗ್ಯಸ್ವಾಮಿ, ಚಂದ್ರಹಾಸನ್ ಮುಂತಾದವರು ಸೇರಿ ಮೈಸೂರು ಟ್ರೇಡ್ ಯೂನಿಯನ್ ಕಾಯ್ದೆಯಡಿಯಲ್ಲಿ ಸಂಘವನ್ನು ನೋಂದಾಯಿಸಿ ಇಡೀ ಚಿನ್ನದ ಗಣಿಗೆ ಒಂದೇ ಸಂಘ ಇರಬೇಕೆಂಬ ಬೇಡಿಕೆಯನ್ನಿಟ್ಟರು. ಎಲ್ಲಾ ಗಣಿಗಳಿಗೂ ಒಂದೇ ಯೂನಿಯನ್ ಎಂಬ ಬೇಡಿಕೆಯನ್ನು ಜಾನ್ ಟೇಲರ್ ಕಂಪನಿಯು ಅದನ್ನು ಒಪ್ಪದಿದ್ದಾಗ 6 ಸಂಘಗಳನ್ನು[95] ಪ್ರತ್ಯೇಕವಾಗಿ ನೋಂದಣಿ ಮಾಡಿಸಿದರು. ಇವೆಲ್ಲವೂ ಕುಡುಗೋಲು ಸುತ್ತಿಗೆ ಇರುವ ಕೆಂಬಾವುಟದ ಸಂಘಗಳೇ ಆಗಿದ್ದವು. ಆದರೆ ನಾಯಕತ್ವದ ವಿಚಾರಕ್ಕೆ ಬಂದರೆ ಬೇರೆಯಾಗಿದ್ದವು[96].

1946 ರಲ್ಲಿ ವಸತಿ, ಕೂಲಿ ಹೆಚ್ಚಳ ಮುಂತಾದ 26 ಬೇಡಿಕೆಗಳನ್ನಿಟ್ಟು ವಾಸನ್ ಮತ್ತು ಗೋವಿಂದನ್ ಅವರ ನೇತೃತ್ವದಲ್ಲಿ ಎಲ್ಲಾ ಯೂನಿಯನ್‌ಗಳು ಸೇರಿ ನಡೆಸಿದ **76 ದಿನಗಳ ಮುಷ್ಕರ** ಕೆಜಿಎಫ್‌ನ ಕಾರ್ಮಿಕ ಚಳುವಳಿಯಲ್ಲಿ ಅತ್ಯಂತ ಚರಿತ್ರಾರ್ಹವಾದದ್ದು. ಆಡಳಿತ ವರ್ಗ ಮುಷ್ಕರದ ವಿಷಯದಲ್ಲಿ ಜನಮತ ಸಂಗ್ರಹ ನಡೆಯಬೇಕೆಂದು ಹೇಳಿತು. ಇದು 1945 ರ ಡಿಸೆಂಬರ್‌ನಲ್ಲಿ ನಡೆದು 28,000 ಕಾರ್ಮಿಕರ ಪೈಕಿ ಕೇವಲ 76

ಕಾರ್ಮಿಕರನ್ನು ಹೊರತುಪಡಿಸಿ ಉಳಿದವರೆಲ್ಲರೂ ಮುಷ್ಕರದ ಪರವಾಗಿ ಮತ ನೀಡಿದರು. ಜನವರಿ 7 ರಂದು ಮುಷ್ಕರ ಆರಂಭವಾಗಿ ಮಾರ್ಚ್ 22 ರವರೆಗೆ ಮುಷ್ಕರ ನಡೆದು 18 ಬೇಡಿಕೆಗಳು ಈಡೇರಿದವು. ಈ ಹೋರಾಟದ ನಂತರ ಕಮ್ಯುನಿಸ್ಟರ ಪ್ರಭಾವ ತೀವ್ರವಾಗಿ ಹೆಚ್ಚಾಯಿತು (ಅಚ್ಯುತ 1987: 23).

6 ಕಾರ್ಮಿಕರು ಗುಂಡಿಗೆ ಬಲಿಯಾದ ಹೋರಾಟವೊಂದು 1946 ರಲ್ಲಿ ನಡೆದು ಕೆಜಿಎಫ್‌ನಲ್ಲಿ ಕಮ್ಯುನಿಸ್ಟ್ ಚಳುವಳಿಯ ಹುತಾತ್ಮ ಪರಂಪರೆ ಸೃಷ್ಟಿಯಾಯಿತು. 1945 ರ ಡಿಸೆಂಬರ್‌ನಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಮಿಲಿಟೆಂಟ್ ಹೋರಾಟದಿಂದ ಭೀತರಾದ ಬ್ರಿಟಿಷ್ ಮಾಲೀಕರು ಇದನ್ನು ಸದೆ ಬಡಿಯಲು ತೀರ್ಮಾನಿಸಿದರು. ಕೆ.ಎಸ್.ವಾಸನ್ ಅವರನ್ನು ಕೊಲೆ ಮಾಡಿಸುವ ಸಂಚು ಮಾಡಿ 1946 ರ ನವೆಂಬರ್ 3 ರಂದು ಅವರ ಮೇಲೆ ಗೂಂಡಾಗಳಿಂದ ದಾಳಿ ನಡೆಯಿತು. ಇದು ತಿಳಿದ ಕಾರ್ಮಿಕರು ಭೂಗರ್ಭದೊಳಗೆ ತಂತಮ್ಮ ಕೆಲಸಗಳನ್ನು ಎಲ್ಲೆಲ್ಲಿ ಹೇಗಿದೆಯೋ ಹಾಗೇ ಬಿಟ್ಟು ತಮ್ಮ ಮುಖಂಡನನ್ನು ನೋಡಲು ಸಾಲು ಸಾಲಾಗಿ ಹೊರಬಂದು ತಮ್ಮ ಸೌಹಾರ್ದತೆಯನ್ನು ಪ್ರಕಟಿಸಿದರು. ಮತ್ತೆ ನವೆಂಬರ್ 4 ರಂದು ಇಂತಹುದೇ ಸುದ್ದಿ ಹರಡಿ ಇನ್ನೂ ಹೆಚ್ಚಿನ ಕಾರ್ಮಿಕರು ಸೇರಿದರು. ಆಗ ಮೈಸೂರು ಪೋಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ – ರಾಮಯ್ಯ, ಕಣ್ಣನ್, ಚಿನ್ನಪ್ಪನ್, ಕಾಳಿಯಪ್ಪನ್, ಸುಬ್ರಮಣಿ ಮತ್ತು ರಾಮಸಾಮಿ – 6 ಕಾರ್ಮಿಕರು ಕೊಲೆಯಾದರು. ಮೈಸೂರು ಸರ್ಕಾರ ಕಮ್ಯುನಿಸ್ಟರಿಗೂ ಮತ್ತು ಷೆಡ್ಯೂಲ್ಡ್ ಕಾಸ್ಟ್ ಫೆಡರೇಷನ್‌ನವರಿಗೂ ನಡೆದ ಗಲಭೆ ಎಂದು ಬಿಂಬಿಸಲು ಪ್ರಯತ್ನಿಸಿ ವಿಫಲವಾಯಿತು. ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಕೆ.ಎಸ್.ವಾಸನ್ ಮತ್ತು ವಿ.ಎಂ.ಗೋವಿಂದನ್ ಅವರನ್ನು ಗಡೀಪಾರು ಮಾಡಿತು. ಒಟ್ಟಾರೆ ಈ ಘಟನೆಯಿಂದ ಚಳುವಳಿಗೆ ತಕ್ಷಣಕ್ಕೆ ಹಿನ್ನಡೆಯಾಯಿತು. ಆಗ ಎಂ.ಸಿ.ನರಸಿಂಹನ್, ಪಿ.ವಿ.ದೇವದಾಸ್, ಸವರಿದಾಸ್ ಇವರುಗಳು ಕಾರ್ಮಿಕರ ನಡುವೆ ಕೆಲಸ ಮಾಡಿದರು. ಎನ್.ಎಲ್.ಉಪಾಧ್ಯಾಯ ಮತ್ತು ನರಸಿಂಹನ್ ಅವರು ಕೋಲಾರದ ವಕೀಲರಾಗಿದ್ದ ಆರ್. ಎನ್.ಬೈರಾರೆಡ್ಡಿಯವರು ವಕೀಲರಾಗಿ ಸಹಾಯ ಮಾಡುತ್ತಾ ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದರು (ಅಚ್ಯುತ 1987: 24).



ಹುತಾತ್ಮರ ಸಮಾಧಿಗಳು

ಮೈಸೂರು ಸಂಸ್ಥಾನದ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾಗಿದ್ದ ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ **ಕಾರ್ಖಾನೆ, ಮೈಸೂರು ಕಾಗದ ಕಾರ್ಖಾನೆ**ಗಳು ಪ್ರಮುಖವಾಗಿದ್ದವು. ಅವು ಪ್ರಾರಂಭವಾದಾಗಿನಿಂದ ಕಾರ್ಮಿಕರ ಹೋರಾಟಗಳು ಬಿಡಿ ಬಿಡಿಯಾಗಿ ಸಂಭವಿಸಿದ್ದರೂ ಎನ್.ಡಿ.ಶಂಕರ್ ಬೆಂಗಳೂರಿನಿಂದ ಗಡೀಪಾರಾಗಿ ಭದ್ರಾವತಿಗೆ ಹೋದ ಮೇಲೆ ಸಂಘಟಿತವಾದ ಮತ್ತು ಕಮ್ಯುನಿಸ್ಟರ ನೇತೃತ್ವದ ಕಾರ್ಮಿಕ ಹೋರಾಟಗಳು ಆರಂಭವಾದವು. ಶೇಷಗಿರಿ ಶಾಸ್ತ್ರಿ, ಹಾಲಪ್ಪ, ಮುಂತಾದವರು ಅಲ್ಲಿನ ಕಾರ್ಮಿಕ ನಾಯಕರಾಗಿದ್ದರು. **ಕರ್ನಾಟಕದ ಮೊದಲ ಮೇ ದಿನಾಚರಣೆ** 1942 ರಲ್ಲಿ ಭದ್ರಾವತಿಯಲ್ಲಿ ನಡೆದಾಗ ಸರ್ಕಾರದ ರಕ್ತ ಪಿಪಾಸುತನ ಪ್ರದರ್ಶನಗೊಂಡ ಮೇ

ದಿನಾಚರಣೆಯಾಗಿ ಚರಿತ್ರೆಯಲ್ಲಿ ದಾಖಲಾಯಿತು. ಮೊದಲ ಬಾರಿಗೆ 1942 ರ ಮೇ 1 ರಂದು ನಿಧಿಗೆ ಗ್ರಾಮದಲ್ಲಿ[97] ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ದಿನಾಚರಣೆಯಾಗಿ ಆಚರಿಸಲು ಭದ್ರಾವತಿ ಲೇಬರ್ ಅಸೋಸಿಯೇಷನ್ ಏಪ್ರಿಲ್ ತಿಂಗಳಲ್ಲಿ ತೀರ್ಮಾನ ಕೈಗೊಂಡಿತು. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕೂಲಿಗಾರರ ಸಂಘ, ಭದ್ರಾವತಿ ಇವರು, 'ಮೇ 1 ನೇ ತಾರೀಖು ಶುಕ್ರವಾರ ಅಖಿಲ ಪ್ರಪಂಚದ ಕೂಲಿಗಾರರ ದಿನಾಚರಣೆಯ ಸಂಬಂಧದಲ್ಲಿ ಭದ್ರಾವತಿಯ ಕೂಲಿಗಾರರೆಲ್ಲಾ 'ಕೂಲಿಗಾರರ ದಿನಾಚರಣೆ'ಯನ್ನು ಆಚರಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸುತ್ತದೆ' ಎಂಬ ಪತ್ರವನ್ನು[98] ಜಿಲ್ಲಾ ಪೊಲೀಸ್ ಎಸ್.ಪಿ.ಯವರಿಗೆ ನೀಡಿದರು. ಸಭೆ ಮತ್ತು ಮೆರವಣಿಗೆಗಳಿಗೆ ನಿರ್ಬಂಧವಿದ್ದುದರಿಂದ ಮ್ಯಾಜಿಸ್ಟ್ರೇಟರ ಅನುಮತಿ ಕೋರಿದರು. ಆದರೆ ಅಲ್ಲಿಂದ ಉತ್ತರ ಬರಲಿಲ್ಲ. ಕೊನೆಗೆ ಮೈಸೂರು ಸಂಸ್ಥಾನ ಸರ್ಕಾರವನ್ನು ಕೇಳಿದರು. ಅಲ್ಲಿಯೂ ಅನುಮತಿ ಸಿಗಲಿಲ್ಲ. ಅನುಮತಿ ಸಿಗಲಿ ಸಿಗದಿರಲಿ, ಕಾರ್ಯಕ್ರಮ ಮಾಡಲೇಬೇಕೆಂದು ತೀರ್ಮಾನಿಸಿದರು. ಆ ಪ್ರಕಾರವಾಗಿ 1942 ರ ಮೇ 1 ರಂದು ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದು ಬೃಹತ್ ಸಭೆಯನ್ನು ಮಾಡಿದರು. ಇದರಲ್ಲಿ ಸರ್ಕಾರದ ನಿಲುವನ್ನು ಖಂಡಿಸಿದರು. ಆಗ ಸುಮ್ಮನಿದ್ದ ಪೊಲೀಸರು ಮೇ 3 ರಂದು ಕಾರ್ಖಾನೆಗೇ ಹೋಗಿ ಕಾರ್ಮಿಕ ಸಂಘದ ಕಾರ್ಯದರ್ಶಿ ಮತ್ತು ಇತರ ಮೂವರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದೊಯ್ದರು. ಇದರ ವಿರುದ್ಧ ಮೂರು ಸಾವಿರ ಕಾರ್ಮಿಕರು ಠಾಣೆಗೆ ಮುತ್ತಿಗೆ ಹಾಕಿದರು. ಕಾರ್ಮಿಕ ನಾಯಕರನ್ನು ರಿಮ್ಯಾಂಡ್‌ಗೆ ಒಪ್ಪಿಸಲು ಬಿಡಲಿಲ್ಲ[99] ಎಂಬ ಕಾರಣಕ್ಕೆ ನಡೆಸಿದ ಗೋಲೀಬಾರ್‌ಗೆ ಇಬ್ಬರು ಕಾರ್ಮಿಕರು ಮತ್ತು ಮೂರು ವರ್ಷದ ಒಂದು ಮಗು ಬಲಿಯಾದರು. ಹೀಗೆ ಕರ್ನಾಟಕದ ಮಣ್ಣಿನಲ್ಲಿ ಮೇ ದಿನಾಚರಣೆಯು ಕಾರ್ಮಿಕರ ಬಲಿದಾನದೊಂದಿಗೆ ಆರಂಭವಾಯಿತು.

ಕಾರ್ಮಿಕ ಚಳುವಳಿಯಲ್ಲಿ ಕಮ್ಯುನಿಸ್ಟರ ಪ್ರಭಾವ ಮತ್ತು ಬೆಳವಣಿಗೆಗೆ ಸಂಬಂಧಿಸಿ ಕೆಜಿಎಫ್ ಮತ್ತು ಬೆಂಗಳೂರು ವಿಭಿನ್ನ ನೆಲೆಗಟ್ಟು ಹೊಂದಿತ್ತು ಎಂಬುದನ್ನು ಗಮನಿಸಬೇಕಾಗಿದೆ. ಬೆಂಗಳೂರಿನಲ್ಲಿ ಚದುರಿದ ರೀತಿಯ ಕಾರ್ಮಿಕ ವರ್ಗದ ಅಸ್ತಿತ್ವದ ಕಾರಣದಿಂದಾಗಿ ಬಂಡವಾಳಶಾಹಿ ಸಿದ್ಧಾಂತಗಳು ಅಥವಾ ರಾಜಕೀಯ ಸುಧಾರಣೆಗಳನ್ನು ಸಮರ್ಥವಾಗಿ ಎದುರಿಸಲು ಆಗಲಿಲ್ಲ ಎಂಬುದಾಗಿ ಸ್ವಾತಂತ್ರ್ಯ ಪೂರ್ವದ ಬೆಂಗಳೂರು ಮತ್ತು ಕೆಜಿಎಫ್‌ನ ಕಾರ್ಮಿಕ ಚಳುವಳಿಗಳನ್ನು ವಿಶ್ಲೇಷಿಸುತ್ತಾ ಜಾನಕಿ ನಾಯರ್ ಅವರು ಹೇಳುತ್ತಾರೆ. 1920 ರ ದಶಕದಲ್ಲಿ ಕಾರ್ಮಿಕರು ಸ್ವಯಂ ಆಗಿ ನಡೆಸುತ್ತಿದ್ದ ಮುಷ್ಕರಗಳು ಮತ್ತು ಹೋರಾಟಗಳು ತತ್‌ಕ್ಷಣದ ಮತ್ತು ಅಲ್ಪಕಾಲಿಕ ಸ್ವರೂಪದ್ದಾಗಿದ್ದವು. ಕಮ್ಯುನಿಸ್ಟರು ರಂಗ ಪ್ರವೇಶ ಮಾಡಿದ್ದು 1930 ರ ದಶಕದ ಕೊನೆ ಭಾಗದಲ್ಲಿ. ಅಷ್ಟರ ವೇಳೆಗೆ, ಅಂದರೆ 1940 ರ ದಶಕದ ಹೊತ್ತಿಗೆ ಕಾಂಗ್ರೆಸಿಗರು ಕಾರ್ಮಿಕರ ಈ ಹೋರಾಟಗಳನ್ನು ಸಾಮ್ರಾಜ್ಯಶಾಹಿ–ವಿರೋಧಿಯಾಗಿ ಪರಿವರ್ತಿಸುವುದರಲ್ಲಿ ಮತ್ತು ತಮ್ಮ ಅನುಕೂಲಕ್ಕೆ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದ್ದರು. ಕಾಂಗ್ರೆಸಿನ ಯಜಮಾನಿಕೆಗೆ ಸವಾಲು ಹಾಕುವಂತಹ ಒಂದು ಪರ್ಯಾಯವನ್ನು ನೀಡಲು ಕಮ್ಯುನಿಸ್ಟರಿಗೆ ಆಗಲಿಲ್ಲ, ಬದಲಿಗೆ ಅವರ ಕೆಲಸಗಳು ಕಾಂಗ್ರೆಸ್ ಕಾರ್ಯಕ್ರಮದ ಕೊರತೆಗಳನ್ನು ತೋರಿಸುವುದಕ್ಕೆ ಸೀಮಿತವಾಗಿತ್ತು (ಜಾನಕಿ ನಾಯರ್ 2016: 25).

ಜಾನಕಿ ನಾಯರ್ ಅವರು ಅಭಿಪ್ರಾಯಪಟ್ಟಂತೆ, ಕೆಜಿಎಫ್‌ನ ಬಹುಸಂಖ್ಯಾತರು ವಲಸಿಗರು ಮಾತ್ರವಲ್ಲ ಅವರು ಬಹುತೇಕ ಅಸ್ಪೃಶ್ಯ ದಲಿತ ಜಾತಿಗೆ ಸೇರಿದ ಕಾರ್ಮಿಕರಾಗಿದ್ದರು. ವೈಚಾರಿಕ ಜಾಗೃತಿ ಮತ್ತು ಅವಕಾಶಗಳು ಅವರಿಗೆ ಹೊಸದೊಂದು ಸಾಮಾಜಿಕ ವಾತಾವರಣದ ಸೃಷ್ಟಿಗೆ ಅವಕಾಶ ಒದಗಿಸಿತು. ಇಲ್ಲಿ ಜಾತಿ ಮತ್ತು ವರ್ಗದ ಪ್ರಶ್ನೆಗಳು ಒಂದಕ್ಕೊಂದು ಹೆಣೆದುಕೊಂಡಿದ್ದವು. ಹೀಗಾಗಿ ಇಲ್ಲಿ ಜಾತಿ ಮತ್ತು ವರ್ಗದ ಪ್ರಶ್ನೆಗಳನ್ನು ಕಡೆಗಣಿಸಿದ್ದ ಕೇವಲ ಸಾಮ್ರಾಜ್ಯಶಾಹಿ-ವಿರೋಧಿ ನೆಲೆಗಟ್ಟಿನ ಕಾಂಗ್ರೆಸ್ ರಾಜಕೀಯ ಹೆಚ್ಚು ಪ್ರಭಾವಶಾಲಿಯಾಗಿರಲಿಲ್ಲ. ವರ್ಗದ ಪ್ರಶ್ನೆಗಳಿಗೆ ಆದ್ಯತೆಯನ್ನು ನೀಡಿದ ಕಮ್ಯುನಿಸ್ಟರು ಸಾಕಷ್ಟು ಕಾಲ ಇಲ್ಲಿ ಪ್ರಭಾವಶಾಲಿಯಾಗಿದ್ದರು, ಆದರೆ ಸಾಮಾಜಿಕ ವಿಚಾರಗಳಿಗೆ ಇವರು ಮಹತ್ವವನ್ನು ನೀಡಲಾಗದೇ ಹೋದದ್ದರಿಂದ ತಮ್ಮ ರಾಜಕೀಯ ಭವಿಷ್ಯದಲ್ಲಿ ನಿರಂತರತೆಯನ್ನು ಕಾಪಾಡಿಕೊಳ್ಳಲಾಗಲಿಲ್ಲ (ಜಾನಕಿ ನಾಯರ್ 2016 25–26).

ಮದ್ರಾಸ್ ಸಂಸ್ಥಾನದ ಭಾಗವಾಗಿದ್ದಮಂಗಳೂರಿನಲ್ಲಿ 1935–36 ರ ಕಾಲದಲ್ಲಿ ಕಾರ್ಮಿಕ ಚಳುವಳಿ ಆರಂಭವಾಗಿತ್ತು. ಕೆಲಸಗಳಿಗಾಗಿ ಮಂಗಳೂರು ಮತ್ತು ಉಡುಪಿ ಭಾಗಗಳಿಗೆ ಬಂದ ಮಲಬಾರಿನ ಕಾರ್ಮಿಕರಿಗೆ ಕಮ್ಯುನಿಸ್ಟ್ ಪಕ್ಷದ ಹಿನ್ನೆಲೆ ಇದ್ದುದರಿಂದ ಇಲ್ಲಿನ ಸ್ಥಳೀಯ ಕಾರ್ಮಿಕರೊಂದಿಗೆ ಬೆರೆತರು ಮತ್ತು ಕಾರ್ಮಿಕರ ನಡುವೆ ಹೋರಾಟಗಳ ಮತ್ತು ಕಮ್ಯೂನಿಸಂನ ಬೀಜವನ್ನು ಬಿತ್ತಿದರು. ಆಗ ಮನೆಗಳ ಬದಲಿಗೆ ಕಾರ್ಖಾನೆಗಳಲ್ಲೇ ಬೀಡಿ ಕಟ್ಟುವ ಪದ್ಧತಿ ಇತ್ತು. ಅದು ಸಂಘಟನೆಗೆ ಅನುಕೂಲಕರವಾಗಿತ್ತು. ಉತ್ತರ ಕೇರಳದ ಭಾಗದಲ್ಲಿ ಚಾಲ್ತಿಯಲ್ಲಿದ್ದ ಅದ್ಭುತವಾದ ಪದ್ಧತಿಯೊಂದು ಮಂಗಳೂರಿಗೂ ಪಸರಿಸಿತು. ಬಹುತೇಕ ಅನಕ್ಷರಸ್ತರಾಗಿದ್ದ ಕಾರ್ಮಿಕರಿಗೆ ಅವರ ಕೆಲಸದ ಹಕ್ಕುಗಳು, ರಾಜಕೀಯ ಸ್ವಾತಂತ್ರ್ಯ ಹೋರಾಟ, ಸಾಮ್ರಾಜ್ಯಶಾಹಿ ಲೂಟಿ, ಕಮ್ಯುನಿಸ್ಟ್ ಸಿದ್ಧಾಂತ ಹೀಗೆ ಹಲವಾರು ವಿಚಾರಗಳನ್ನು ತಿಳಿಸುವ ಕೆಲಸವನ್ನು ಕಮ್ಯುನಿಸ್ಟ್ ಪಕ್ಷ ಆದ್ಯತೆಯಾಗಿ ಪರಿಗಣಿಸಿತು. ಕೆಲಸಗಾರರು ವಂತಿಗೆ ಹಾಕಿ ಪತ್ರಿಕೆಗಳನ್ನು ಕೊಂಡುಕೊಳ್ಳುವುದು, ಅಕ್ಷರ ಜ್ಞಾನವಿದ್ದ ಒಬ್ಬರು ಓದುವುದು ಅದನ್ನು ಎಲ್ಲರೂ ಕೇಳುವುದು, ಓದುವಾತನಿಗೆ ಬೀಡಿಯ ರೂಪದಲ್ಲಿ ಸಂಭಾವನೆ ನೀಡುವುದು. ಇದನ್ನು ಕೆಲವು ಮಾಲಕರು ತಡೆಯುತ್ತಿದ್ದರು. ಆಗ ಪತ್ರಿಕೆ ಓದುವ ಸ್ವಾತಂತ್ರ್ಯಕ್ಕಾಗಿ ಕೆಲಸಗಾರರು ಹೋರಾಡುತ್ತಿದ್ದರು[100]. ಇದು ಮಂಗಳೂರಿನ ಕಾರ್ಮಿಕರ ಹೋರಾಟದ ಪ್ರಥಮ ರೂಪವಾಗಿತ್ತು.

ಸಂಘದ ಕರಪತ್ರಗಳು, ಭೂಗತ ಕಮ್ಯುನಿಸ್ಟ್ ಘಟಕದ ಕೈಬರಹದ ಪ್ರಕಟಣೆಗಳು ಅದೇ ಮಾಧ್ಯಮದ ಮೂಲಕ ಬೀಡಿ ಕಾರ್ಮಿಕರ ನಡುವೆ ಪ್ರಸಾರವಾಗುತ್ತಿದ್ದವು. ಈ ಪ್ರಕಟಣೆಗಳನ್ನು ಆಗ ಕುಮಾರ ವೆಂಕಣ್ಣ ಬರೆದುಕೊಡುತ್ತಿದ್ದರು. ಕೆ.ಕೇಶವ ಕಾಮತ್, ಅಹಮದ್ ಬಾವಾ, ಸಿ.ಕೆ.ಗೋವಿಂದನ್, ತಲಚೇರಿ ನಾಣು, ಲಿಂಗಪ್ಪ ಸುವರ್ಣ, ಎಂ.ಅಪ್ಪು, ಬಿ.ಎಂ.ಮಂಜು ಮತ್ತು ಕೆ.ಮೋನಪ್ಪ ಶೆಟ್ಟಿ, ಬಿ.ಚೆನ್ನಯ್ಯ, ಸಂಕಪ್ಪ (ಸಂಕು) ಮೊದಲಾದವರು ಬೀಡಿ ಕಾರ್ಮಿಕರ ನಾಯಕರಾಗಿದ್ದರು (ಕಕ್ಕಿಲ್ಲಾಯ 2003: 44). ಬೀಡಿ ಕಾರ್ಮಿಕರು, ನೇಕಾರರು, ಪ್ರಿಂಟಿಂಗ್ ಪ್ರೆಸ್, ಸಾರಿಗೆ ಕಾರ್ಮಿಕರು ಇವರ ನಡುವೆ ಕಾರ್ಮಿಕ ಸಂಘಟನೆ ಬೆಳೆಯುತ್ತಿತ್ತು. ಆರಂಭದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕರು ಇವುಗಳನ್ನು ಬೆಳೆಸುವುದರಲ್ಲಿ ಪಾತ್ರ ವಹಿಸಿದ್ದರು. ಆದರೆ ಕಾಂಗ್ರೆಸ್ ಸೋಷಲಿಸ್ಟ್

ಪಕ್ಷದ ಕೆಲವು ನಾಯಕರ ವಿಧಾನಗಳಿಂದಾಗಿ ಮುದ್ರಣ ಮತ್ತು ಸಾರಿಗೆ ಕೆಲಸಗಾರರ ಹೋರಾಟಗಳು ಸಂಪೂರ್ಣ ವಿಫಲಹೊಂದಿ ಸಂಘಗಳು ಮಾಲೀಕರ ಕೈ ಸೇರಿದವು. ಮುಂದಿನ ವರ್ಷಗಳಲ್ಲಿ ಅವು ಕಮ್ಯುನಿಸ್ಟ್ ನಾಯಕತ್ವದಲ್ಲಿ ಮತ್ತೆ ಸಂಘಟಿತವಾದವು. ಇದಕ್ಕೆ ಭಿನ್ನವಾಗಿ ಕಾಂಗ್ರೆಸ್‌ನಲ್ಲಿದ್ದ ಎ.ಕೃಷ್ಣಶೆಟ್ಟರು ಸರಿಯಾದ ಕಾರ್ಮಿಕ ಚಳುವಳಿಗೆ ಸಹಾಯ ಮಾಡುತ್ತಿದ್ದರು. ಕೃಷ್ಣಶೆಟ್ಟರು ಸ್ಥಳೀಯವಾಗಿ ತುಂಬಾ ಜನಪ್ರಿಯ ವ್ಯಕ್ತಿಯಾಗಿದ್ದರು. ಇವರಲ್ಲದೆ ಹಸನಬ್ಬ ಒಡೆಯರ್, ಎಸ್.ನಾರಾಯಣ ಕಿಲ್ಲೆ, ಅಹಮದ್ ಬಾವಾ ಇವರುಗಳು ಕಾರ್ಮಿಕ ಚಳುವಳಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದರು. ಬೀಡಿ ಮತ್ತು ನೇಯ್ಗೆ ಕೆಲಸಗಾರರ ಸಂಘಗಳು ನಂತರದಲ್ಲಿ ಭೂಗತವಾಗಿದ್ದ ಕಮ್ಯುನಿಸ್ಟ್ ನಾಯಕರ ನೇತೃತ್ವದಲ್ಲಿ ತಮ್ಮ ಬೇಡಿಕೆಗಳಿಗಾಗಿ ನಿರಂತರವಾದ ಹೋರಾಟಗಳನ್ನು ನಡೆಸುತ್ತಿದ್ದವು. ಸಣ್ಣ ಬೇಡಿಕೆಗಳನ್ನು ಪಡೆಯಲೂ ಸಹ ದೊಡ್ಡ ಹೋರಾಟಗಳನ್ನೇ ಮಾಡಬೇಕಾಗುತ್ತಿತ್ತು.

ಜಿಲ್ಲೆಯಲ್ಲಿ ಬೆಳೆಯುತ್ತಿದ್ದ ಕಾರ್ಮಿಕ ಚಳುವಳಿಗಳನ್ನು ಹೋರಾಟಗಳನ್ನು ಮುನ್ನಡೆಸಲು ಸಂಘಟನಾತ್ಮಕ ಕ್ರಮಗಳು ಅಗತ್ಯವೆಂದು ಮನಗಂಡು 1944 ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರಥಮ ಸಮ್ಮೇಳನವನ್ನು ನಡೆಸಲಾಯಿತು[101]. ಕಾರ್ಮಿಕರ ತುಟ್ಟಿಭತ್ಯೆ ಮತ್ತು ಬೋನಸ್ ಬೇಡಿಕೆಗಳನ್ನು, ಆಹಾರ ಬೆಲೆ ಏರಿಕೆ ಮತ್ತು ಅಭಾವಗಳನ್ನು ತಡೆಗಟ್ಟಬೇಕೆಂದು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು (ಕಕ್ಕಿಲ್ಲಾಯ 2003: 56).

ಮಂಗಳೂರಿನ ಕಾಮನ್‌ವೆಲ್ತ್ ಹೆಂಚಿನ ಕಾರ್ಖಾನೆಗಳ ಕಾರ್ಮಿಕರ ತುಟ್ಟಿ ಭತ್ಯೆ ಬೇಡಿಕೆ ಮತ್ತು ಇತರೆ ಎಲ್ಲಾ ಹೆಂಚಿನ ಕಾರ್ಖಾನೆಗಳ ಕಾರ್ಮಿಕರ ಶೇ.25 ಬೋನಸ್ ಬೇಡಿಕೆಗಾಗಿ 1945 ರಲ್ಲಿ **ಹೆಂಚಿನ ಕಾರ್ಮಿಕರ ಮುಷ್ಕರ** ನಡೆಯಿತು. ಇದು ಹೆಂಚಿನ ಕಾರ್ಮಿಕರ ಮೊದಲ ಯಶಸ್ವಿ ಮುಷ್ಕರ. ಕಾಯ್ದೆ ಇಲ್ಲದಿದ್ದ ಸಂದರ್ಭದಲ್ಲಿ ಬೋನಸ್ ಪಡೆದದ್ದು ಕಾರ್ಮಿಕರಲ್ಲಿ ಬೆಳೆಯುತ್ತಿದ್ದ ಒಗ್ಗಟ್ಟು ಮತ್ತು ಜಾಗೃತಿಗೆ ಸಾಕ್ಷಿಯಾಗಿದೆ. ಈ ಮುಷ್ಕರದಿಂದ ಕಮ್ಯುನಿಸ್ಟ್ ಪಕ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆಯಲು ಅನುಕೂಲವಾಯಿತು. ಸಾಮೂಹಿಕ ಸ್ವರೂಪ ಪಡೆಯಿತು. ಏಕೆಂದರೆ ಬಹುತೇಕ ಹೆಂಚಿನ ಕಾರ್ಮಿಕರು ಹಳ್ಳಿಗಳ ಬಡ ರೈತ ಕುಟುಂಬ ಅಥವಾ ಕೂಲಿಕಾರ ಕುಟುಂಬಗಳಿಗೆ ಸೇರಿದವರಾಗಿದ್ದರು. ಹೆಂಚಿನ ಕಾರ್ಮಿಕರ ಎರಡನೆ ಮುಷ್ಕರ 1947 ಫೆಬ್ರವರಿ 2 ರಿಂದ ಮಾರ್ಚ್ 16 ವರೆಗೆ 42 ದಿನಗಳ ಕಾಲ ನಡೆಯಿತು. ವೇತನ ಹೆಚ್ಚಳ ಮತ್ತು ಬೋನಸ್‌ಗಾಗಿ ನಡೆದ ಈ ಮುಷ್ಕರದ ಸಿದ್ಧತೆಯೇ ವಿಶೇಷವಾದುದು. ಸುಮಾರು 34 ಹೆಂಚಿನ ಕಾರ್ಖಾನೆಗಳಿಗೆ ಮುಷ್ಕರದ ನೋಟೀಸ್ ಕೊಡುವ ಮೊದಲು ಮುಷ್ಕರದ ಪರ ಮತ್ತು ವಿರುದ್ಧ ಜನಮತಗಣನೆ ನಡೆಯಿತು. ಇದರಲ್ಲಿ ಶೇ.99.9 ರಷ್ಟು ಕಾರ್ಮಿಕರು ಪರವಾಗಿ ಮತ ನೀಡಿದರು. ಆ ಹೋರಾಟದಲ್ಲಿ ಮೂಡಿಬಂದ ಘೋಷಣೆಗಳು ತುಳು ಹಾಡುಗಳ ರೂಪದಲ್ಲಿ ಜನಪ್ರಿಯವಾಗಿದ್ದವು.

> ಬೀಡಿದ ಮಗ್ಗದ ಓಡುದ ಧನಿಕುಲೆ, ಮರ್ಯಾದೆಡೆಂಕ್ಲೆನ ಬೋನಸ್ ಕೊರ್ಲೆ
> (ಬೀಡಿಯ ಮಗ್ಗದ ಹಂಚಿನ ಧನಿಗಳೇ, ಮರ್ಯಾದೆಯಿಂದಲೇ ನಮ್ಮ ಬೋನಸ್ ಮಡಗಿ).

ನನ ಲಢಾಯಿ ನನ ಲಢಾಯಿ ನನ ಲಢಾಯಿ ಎಂಕ್ಲೆನ – ನುಪ್ಪು – ಕುಂಟು ಇಲ್ಲ್‌ಗಾದ್ ನನ ಲಢಾಯಿ ಎಂಕ್ಲೆನ. ಊರು ಮಾನ ಬದ್‌ಕ್‌ಗಾದ್ ನನ ಲಢಾಯಿ ಎಂಕ್ಲೆನ, ಬೇಲೆ ಕೂಲಿ ಬೋನಸ್‌ಗಾದ್ ನನ ಲಢಾಯಿ ಎಂಕ್ಲೆನ

(ಇನ್ನು ಸಮರ ಇನ್ನು ಸಮರ ಇನ್ನು ಸಮರ ನಮ್ಮದು, ಅನ್ನ ಅರಿವೆ ಸೂರುಗಳಿಗೆ ಇನ್ನು ಸಮರ ನಮ್ಮದು. ಊರು ಮಾನ ಬದುಕಿಗಾಗಿ ಇನ್ನು ಸಮರ ನಮ್ಮದು, ಕೆಲಸ ಕೂಲಿ ಬೋನಸ್‌ಗಾಗಿ ಇನ್ನು ಸಮರ ನಮ್ಮದು).

ಬ್ರಿಟಿಷರು ತಮ್ಮ ಅನುಕೂಲಕ್ಕಾಗಿ ರೂಪಿಸಿದ್ದ ಡಿಫೆನ್ಸ್ ಆಫ್ ಇಂಡಿಯಾ ಕಾಯ್ದೆಯನ್ನು ಬಳಸಿಯೇ ಮುಷ್ಕರವನ್ನು ಮುರಿಯಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸಿತು. ಮುಖಂಡರನ್ನು ಬಂಧಿಸಿತು. ಸಫಲವಾಗದೆ ಕೊನೆಗೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಆರ್ಬಿಟ್ರೇಷನ್ ಸಮಿತಿಗೆ ಮದ್ರಾಸ್ ಸರ್ಕಾರ ಶಿಫಾರಸು ಮಾಡಿತು. ಅಂತಿಮವಾಗಿ ತುಟ್ಟಿ ಭತ್ಯೆಯ ಹೆಚ್ಚಳ ಮತ್ತು ಶೇ.16.5 ಬೋನಸ್ ಹೆಚ್ಚಳದೊಂದಿಗೆ ಹೋರಾಟ ಜಯ ಪಡೆಯಿತು (ಕಕ್ಕಿಲ್ಲಾಯ 2003: 83–86).

ಬಿಡಿ ಬಿಡಿಯಾಗಿ ನಡೆಯುತ್ತಿದ್ದ ಬೀಡಿ ಕಾರ್ಮಿಕರ ಹೋರಾಟಗಳನ್ನು ಒಟ್ಟುಗೂಡಿಸಿ 1946 ರ ಅಕ್ಟೋಬರ್‌ನಲ್ಲಿ ದಕ್ಷಿಣ ಕನ್ನಡ, ಕಲ್ಲಿಕೋಟೆ, ಕಣ್ಣಾನೂರು ಮತ್ತು ತಲಚ್ಚೇರಿ ಪ್ರದೇಶಗಳ ಬೀಡಿ ಕಾರ್ಮಿಕರ ಜಂಟಿ ಮುಷ್ಕರ ನಡೆಯಿತು. ದ.ಕ. ಜಿಲ್ಲೆಯಲ್ಲಿ ಬೀಡಿ ಕೆಲಸಗಾರರ ಸಂಘಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವ ನೀಡಿತ್ತು. ಇದರ ಅಧ್ಯಕ್ಷರಾಗಿ ಎಸ್.ಎನ್.ಹೊಳ್ಳ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕೆ.ಮೋನಪ್ಪ ಶೆಟ್ಟಿ ಇದ್ದರು[102]. 52 ದಿನಗಳ ಕಾಲ ನಡೆದ ಈ ಮುಷ್ಕರದಲ್ಲಿ ತೀವ್ರವಾದ ದಾಳಿ ದಬ್ಬಾಳಿಕೆಗಳು ನಡೆದು ಕೊನೆಗೆ ಮದ್ರಾಸ್ ಪ್ರಾಂತ್ಯದ ಕಾರ್ಮಿಕ ಸಚಿವರು ಬಂದರು. ಬೀಡಿ ಕಾರ್ಮಿಕರ ಕೂಲಿ ಮತ್ತು ಬೋನಸ್ ವಿವಾದವನ್ನು ಡಿಫೆನ್ಸ್ ಆಫ್ ಇಂಡಿಯಾ ಕಾಯ್ದೆಯನ್ವಯ ದಕ್ಷಿಣ ಕನ್ನಡ ಜಿಲ್ಲಾ ಸೆಶನ್ಸ್ ನ್ಯಾಯಾಧೀಶರ ತೀರ್ಮಾನಕ್ಕೆ ಒಪ್ಪಿಸಿ ಆದೇಶಿಸಿದರು. ಕೊನೆಗೆ ನಾಲ್ಕಾಣೆ ಕೂಲಿ ಹೆಚ್ಚಳದ ಜಾಗದಲ್ಲಿ ಎರಡಾಣೆ, ಮೂರು ತಿಂಗಳ ಜಾಗದಲ್ಲಿ ಒಂದು ತಿಂಗಳ ಬೋನಸ್ ಕೊಡಬೇಕೆಂಬ ತೀರ್ಪು ಬಂತು. ಕಾರ್ಮಿಕರಿಗೆ ಅಂಶಿಕ ಜಯ ಲಭಿಸಿತು. ಇದರೊಂದಿಗೆ ಬೀಡಿ ಕೈಗಾರಿಕೆಯನ್ನು ಹಳ್ಳಿಗಳಿಗೆ ಹರಡುವ ಮೂಲಕ ಕಾರ್ಮಿಕ ಸಂಘಟನೆಗೆ ಪೆಟ್ಟು ಕೊಡುವ ತಂತ್ರದಲ್ಲಿ ಬೀಡಿ ಮಾಲೀಕರು ಯಶಸ್ವಿಯಾದರು.

ಬಿಜಾಪುರದಲ್ಲಿ ಕಾರ್ಮಿಕ ಸಂಘಟನೆಗೆ ಬೀಜ ಹಾಕಿದವರು ಎನ್.ಕೆ.ಉಪಾಧ್ಯಾಯ ಮತ್ತು ಬಾಲಸಿಂಗ್ ಮಾಸ್ತರ್. ಇಲ್ಲಿ ಆರಂಭಿಕ ಕೈಗಾರಿಕೆ ಎಂದರೆ ಬೀಡಿ ಕಾರ್ಖಾನೆಗಳು. ಕೆಲಸಗಾರರಲ್ಲಿ ಮುಸ್ಲಿಂ ಮಹಿಳೆಯರು ಜಾಸ್ತಿ, ಗಂಡಸರಲ್ಲೂ ಮುಸ್ಲಿಮರೇ ಹೆಚ್ಚು, ಅವರು ಬೀಡಿ ಕಟ್ಟುವ ಸ್ಥಳಗಳಲ್ಲಿಯೇ ಕುಳಿತು ರಾಜಕೀಯ ಪರಿಸ್ಥಿತಿ, ಕಾರ್ಮಿಕರ ಸಂಘ ಇತ್ಯಾದಿಗಳ ಬಗ್ಗೆ ಇವರು ಮಾತನಾಡುತ್ತಿದ್ದರು. ಸಿಪಿಐನ ಮುಖಪತ್ರಿಕೆ ಇಂಗ್ಲಿಷ್‌ನ ಪೀಪಲ್ಸ್ ವಾರ್, ಮರಾಠಿ ಪತ್ರಿಕೆ ಯುಗಾಂತರ್, ಕನ್ನಡದ ಅರುಣ ಇವುಗಳನ್ನು ಓದಿ ಹೇಳುತ್ತಿದ್ದರು. ಇಂತಹ ಕೆಲಸಗಳಿಗೆ ಇವರಿಗೆ ನೆರವಿಗೆ ಬಂದದ್ದು ಎಂ.ಎಂ.ಮಕಾನ್‌ದಾರ, ರಾಜೇಸಾಬ ಬೇಗನಪಲ್ಲಿ, ಮೆಹಬೂಬ್ ಸಾಬ್ ನಾಸ್‌ವಾಲೆ, ವಲ್ಲಿ ಅಹಮದ್ ದ್ರಾಕ್ಷಿ ಮುಂತಾದವರು. ಇವರ ಮಾತುಗಳನ್ನು ಕೇಳುತ್ತಾ ಕೇಳುತ್ತಾ ಅವರು ಕೆಂಬಾವುಟದ

ಅಡಿ ಸಂಘಟಿರಾದರು ಮತ್ತು ರಾಜಕೀಯ ಪ್ರಜ್ಞೆ ಬೆಳೆಯಿತು[103]. 1944–45 ರ ಸುಮಾರಿಗೆ ಬಿಜಾಪುರದ ಬೀಡಿ ಸಂಘಟನೆ ಆರಂಭವಾಯಿತು. 1945 ರಲ್ಲಿ ನಡೆದ ಮೂರನೆಯ ಮುಷ್ಕರದ ವೇಳೆಗೆ ಕೂಲಿ 8 ಆಣೆಯಿಂದ 1 ರೂ 6 ಆಣೆವರೆಗೆ ಹೆಚ್ಚಳವಾಗಿತ್ತು. 1946 ರ ಕೊನೆಯಷ್ಟರಲ್ಲಿ ಮುನಿಸಿಪಲ್ ಕೆಲಸಗಾರರ ಸಂಘ, ಪ್ರೆಸ್ ಕೆಲಸಗಾರರ ಸಂಘ, ಹಮಾಲರ ಸಂಘ, ಟಾಂಗಾವಾಲಗಳ ಸಂಘಗಳು ಆರಂಭವಾಗಿದ್ದವು. ಇವು ಮತ್ತು ವಿದ್ಯಾರ್ಥಿ ಸಂಘ, ಸೋವಿಯಟ್ ಮಿತ್ರ ಸಂಘ, ಕಮ್ಯುನಿಸ್ಟ್ ಪಕ್ಷಗಳ ಬೆಂಬಲ ಪಡೆದು, ಬೀಡಿ ಕಾರ್ಮಿಕರ ಮುಷ್ಕರದ ಪರವಾಗಿ 1947 ರ ಜನವರಿ 22 ರಂದು ಬಿಜಾಪುರದಲ್ಲಿ ಸಾರ್ವಜನಿಕ ಹರತಾಳವನ್ನು ನಡೆಸಲಾಯಿತು. 1 ಸಾವಿರ ಬೀಡಿ ಕಟ್ಟಲು 1 ರೂ 10 ಆಣೆ ಕೂಲಿ ನಿಗದಿಯಾಗಬೇಕೆಂದು 23 ದಿನಗಳ ಕಾಲ ನಡೆದ ಬೀಡಿ ಕಾರ್ಮಿಕರ ಮುಷ್ಕರ 1 ರೂ 8 ಆಣೆ ಪಡೆಯುವುದರೊಂದಿಗೆ ಯಶಸ್ವಿಯಾಯಿತು (ಉಪಾಧ್ಯಾಯ 1996: 22–28). ಇದರಿಂದ ಬಿಜಾಪುರದಲ್ಲಿ ಕಾರ್ಮಿಕ ಸಂಘಟನೆ ಬೆಳೆಯಲು ಮತ್ತು ಸಾರ್ವಜನಿಕರ ನಡುವೆ ಪ್ರಭಾವ ಬೆಳೆಯಲು ಸಹಾಯವಾಯಿತು. 23 ದಿನಗಳ ಹೋರಾಟದ ನಂತರ ಬೀಡಿ ಕಾರ್ಮಿಕರೇ ಸೇರಿ ಸ್ವಂತ ಬೀಡಿ ಕಾರ್ಖಾನೆ ತೆಗೆಯಬೇಕೆಂಬ ವಿಚಾರ ಬಂದು 'ಲಾಲ್ ತಾರಾ ಬೀಡಿ'ಯನ್ನು ಪ್ರಾರಂಭಿಸಿದರು. ಇದು ಹೆಚ್ಚಿನ ಕಾಲ ನಡೆಯಲಿಲ್ಲ. ಆದರೆ ಮುಂದೆ ಜಿಲ್ಲೆಯಲ್ಲಿ ಹೋಟೆಲ್ ಕೆಲಸಗಾರರ ಸಂಘ, ಗಾಣದ ಎಣ್ಣೆ ಕೆಲಸಗಾರರ ಸಂಘ, ಸಿನಿಮಾ ಕೆಲಸಗಾರರ ಸಂಘ, ಗುಮಾಸ್ತೆಯರ ಸಂಘ ಹೀಗೆ ವಿವಿಧ ಸಂಘಟನೆಗಳು ಆರಂಭವಾದವು.

ಬೀಡಿ ಸಂಘಟನೆ ರೀತಿಯಲ್ಲಿ ಬಿಜಾಪುರದಲ್ಲಿ ಪ್ರಭಾವ ಬೀರಿದ ಮತ್ತೊಂದು ಸಂಘಟನೆ ಎಂದರೆ ಮುನಿಸಿಪಲ್ ಕೆಲಸಗಾರರ ಸಂಘ 1945 ರಲ್ಲಿ ಸ್ಥಾಪನೆಯಾಯಿತು. ಕಡಿಮೆ ಸಂಬಳ, ಕೆಲಸದ ಭದ್ರತೆಯಿಲ್ಲ, ಸುರಕ್ಷಾ ಸಲಕರಣೆಗಳಿಲ್ಲ ಮುಂತಾದ ಸಮಸ್ಯೆಗಳು ಇವರನ್ನು ಕಾಡುತ್ತಿದ್ದವು. ಬೇರೆ ಬೇರೆ ಕಾರ್ಮಿಕರು ನಡೆಸುತ್ತಿದ್ದ ಹೋರಾಟಗಳಿಂದ ಸ್ಫೂರ್ತಿ ಪಡೆದ ಇವರು 1948 ರ ಮಾರ್ಚ್‌ನಲ್ಲಿ ಹೋರಾಟ ನಡೆಯಿತು. ಹೋರಾಟಕ್ಕೆ ಮುಖಂಡತ್ವ ಕಮ್ಯುನಿಸ್ಟರು ಎಂಬ ಕಾರಣಕ್ಕೆ ಸ್ವತಂತ್ರ ಭಾರತ ಸರ್ಕಾರ ಸುಮಾರು 200 ಜನರನ್ನು ಬಂಧಿಸಿ 23 ದಿನ ಜೈಲಿನಲ್ಲಿಟ್ಟಿತು (ಉಪಾಧ್ಯಾಯ 1996: 29–30).

❖ ❖ ❖

1936 ರಲ್ಲಿ ಲಕ್ನೋದಲ್ಲಿ ಆರಂಭವಾದ **ಎಐಪಿಡಬ್ಲ್ಯುಎ** ಮೈಸೂರು ಸಂಸ್ಥಾನದಲ್ಲಿ ಆರಂಭಿಸುವ ಪ್ರಯತ್ನಗಳು 1937 ರಲ್ಲಿ ಶುರುವಾಗಿದೆ. ಜನ ಜಾಗೃತಿ ಸಂಘದ ಪರವಾಗಿ ಕೆ.ಶ್ರೀನಿವಾಸಮೂರ್ತಿಯವರು ಎಐಪಿಡಬ್ಲ್ಯುಎ ಕಾರ್ಯದರ್ಶಿಗೆ 1937 ಜೂನ್ 25 ರಂದು ಬರೆದಿರುವ ಪತ್ರ ಈ ಬಗ್ಗೆ ಬೆಳಕು ಚೆಲ್ಲುತ್ತದೆ:

> ನಾವಿಲ್ಲಿ ಸಿವಿಲ್ ಲಿಬರ್ಟೀಸ್ ಯೂನಿಯನ್ ರಚಿಸುವ ಕೆಲಸದಲ್ಲಿ ನಿರತರಾಗಿದ್ದೇವೆ. ನಮ್ಮ ಚಟುವಟಿಕೆಗಳ ಕುರಿತು ತಿಳಿಯಲು ಕೆಲವು ಕರಪತ್ರಗಳನ್ನು ಕಳುಹಿಸುತ್ತಿದ್ದೇವೆ.

ನೀವು ಕಳುಹಿಸಿದ ಪಾರ್ಸೆಲ್ ತಲುಪಿರುವ ಬಗ್ಗೆ ನಿಮಗೆ ತಿಳಿಸಲಾಗದಿದ್ದಕ್ಕೆ ವಿಷಾದಿಸುತ್ತೇನೆ. ಕರ್ನಾಟಕದಲ್ಲಿ ಎಐಪಿಡಬ್ಲ್ಯುಎ ಬೆಳೆಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತೇನೆ.

ಇತ್ತೀಚೆಗೆ ಕಾಮ್ರೇಡ್ ಜಹೀರ್ ಅವರನ್ನು ಬಂಧಿಸಿರುವ ವಿಚಾರ ತಿಳಿಯಿತು. ದೇಶಕ್ಕೆ ಅವರ ಅಪ್ರತಿಮ ಸೇವೆಯನ್ನು ನಾವು ಗೌರವಿಸುತ್ತೇವೆ. ಆಡಳಿತಗಾರರ ಇಂತಹ ಪ್ರತಿಗಾಮಿತನವನ್ನು ಎದುರಿಸಲು ಒಂದು ಬಲಿಷ್ಠ ಸಂಘಟನೆಯನ್ನು ಕಟ್ಟಲು ಸಾಧ್ಯವಿರುವ ಎಲ್ಲವನ್ನೂ ನಾವು ಮಾಡುತ್ತೇವೆ[104].



ಕುಳಕುಂದ ಶಿವರಾಯ (ನಿರಂಜನ)

ಆದರೆ ಈ ದಿಕ್ಕಿನಲ್ಲಿ ನಂತರದ ದಿನಗಳಲ್ಲಿ ಪ್ರಯತ್ನಗಳು ನಡೆದ ಬಗ್ಗೆ ಮಾಹಿತಿಗಳಿಲ್ಲ. ಬಹುಶಃ ಜನಜಾಗೃತಿ ಸಂಘದ ವಿಭಿನ್ನ ಚಟುವಟಿಕೆಗಳ ನಡುವೆ ಇದಕ್ಕೆ ಅಗತ್ಯ ಗಮನವನ್ನು ನೀಡಲಾಗಲಿಲ್ಲ ಎಂದು ಕಾಣುತ್ತದೆ. ಜೊತೆಗೆ ಅಖಿಲ ಭಾರತ ಮಟ್ಟದಲ್ಲಿ ಬ್ರಿಟಿಷ್ ಆಡಳಿತಗಾರರು ಕಮ್ಯುನಿಸ್ಟರು ಮತ್ತು ಅವರ ನೇತೃತ್ವದ ಸಂಘಟನೆಗಳ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಗಳ ಕಾರಣದಿಂದ ಒಂದು ಸಂಘಟಿತ ಪ್ರಯತ್ನದ ಸ್ವಾತಂತ್ರ್ಯವೂ ಇರಲಿಲ್ಲ. ಕರ್ನಾಟಕದಲ್ಲಿ ಪ್ರಗತಿಪರ ಬರಹಗಾರರ ಸಂಘದ ಆರಂಭಿಕ ಬೆಳವಣಿಗೆಗೆ ಸಂಬಂಧಿಸಿ ಒಂದು ಚಿತ್ರಣ ನಮಗೆ ಸಿಗುವುದು ಕುಳಕುಂದ ಶಿವರಾವ್ ಅವರು ಎಐಪಿಡಬ್ಲ್ಯುಎಗೆ ಬರೆದ ಪತ್ರದಿಂದ. ಈ ಪತ್ರದಲ್ಲಿ ಇವರು ದಾಖಲು ಮಾಡಿರುವ ಪ್ರಕಾರ ಕರ್ನಾಟಕದಲ್ಲಿ ಪ್ರಗತಿಪರ ಬರಹಗಾರರ ಸಂಘ 1943 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕದಲ್ಲಿ ಹೊಸ ತಲೆಮಾರಿನ ಯುವಕರು ಹೊಸ ವಿಚಾರಧಾರೆಗಳನ್ನು ಬರೆಯಲು ಮತ್ತು ಮಾತನಾಡಲು ಆರಂಭಿಸಿದಾಗ ಅಷ್ಟೊತ್ತಿಗಾಗಲೇ ಹೆಸರು ಮಾಡಿದ್ದ ಹಿರಿಯ ತಲೆಮಾರಿನ ಬರಹಗಾರರು ಅದನ್ನು ತುಂಬಾ ಅನುಮಾನಗಳಿಂದಲೇ ಮತ್ತು ವಿರೋಧದಿಂದಲೇ ನೋಡಿದ್ದಾರೆ. ಸ್ವಾತಂತ್ರ್ಯ ಪೂರ್ವದ ಪ್ರಗತಿಪರ ಬರಹಗಾರರ ಚಟುವಟಿಕೆಗಳನ್ನು ಮೂರು ಹಂತಗಳಾಗಿ ವಿಂಗಡಿಸುವ ಕುಳಕುಂದ ಶಿವರಾಯರು 1946 ರಲ್ಲಿ ಬರೆದ ಪತ್ರದ ಸಾರಾಂಶವು ಹೀಗಿದೆ:

ಮೊದಲನೆಯದು, ಉತ್ಸಾಹಿ ಸಣ್ಣ ಗುಂಪಿನ ಪ್ರಚಾರ ಮತ್ತು ಹಿರಿಯ ಬರಹಗಾರರಿಂದ ತೀವ್ರವಾದ ದಾಳಿ; ಎರಡನೆಯದು, ಹೊಸ ಚಿಂತನೆಗಳ ಕ್ರೋಢೀಕರಣ, ಮತ್ತು ಹಿರಿಯರಿಂದ ಯಥಾರ್ಥವಾದ ಗ್ರಹಿಕೆ; ಮತ್ತು ಮೂರನೆಯದು, ಹೊಸ ಸೃಜನಶೀಲ ಪ್ರಗತಿಪರ ಬರಹಗಳ ಉಗಮ.

ಆರ್.ವಿ.ಜಾಗೀರ್‌ದಾರ್, ವಿ.ಕೆ.ಗೋಕಾಕ್ ಮತ್ತಿತರ ಪ್ರಧ್ಯಾಪಕರ ಬರವಣಿಗೆ ಮತ್ತು ಭಾಷಣಗಳು, ಹೊಸ ಚಿಂತನೆಗಳು ಮತ್ತು ಹೊಸ ಬರವಣಿಗೆಗಳ ಉಗಮದ ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಮೂಡಿಸಲು ಅನುಕೂಲ ಮಾಡಿದವು. ಪ್ರಗತಿಪರ ಸಾಹಿತ್ಯದ ಬಗ್ಗೆ ವಿಚಾರಗೋಷ್ಠಿ ಮತ್ತು ಎ.ಎನ್.ಕೃಷ್ಣರಾವ್ ಅವರು ಸಂಪಾದಿಸಿದ ಗಾರ್ಕಿ ಮತ್ತು ಅವರ ಬರವಣಿಗೆಗಳ ಕುರಿತ 400 ಪುಟಗಳ ಸಂಪುಟ 1944 ರಲ್ಲಿ ಪ್ರಕಟವಾಯಿತು.

ಈ ಹೊಸ ಚಳುವಳಿಯ ಪರ ಮತ್ತು ವಿರುದ್ಧದ ಚರ್ಚೆಗಳು ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆಯಿತು. ಕನ್ನಡದ ಎಲ್ಲ ಸಾಹಿತ್ಯಿಕ ಪತ್ರಿಕೆಗಳು, ಕೆಲವು ಸಾಹಿತ್ಯೇತರ ಪತ್ರಿಕೆಗಳು ಕೂಡಾ ಈ ವಿವಾದದಲ್ಲಿ ಭಾಗವಹಿಸಿದವು. ಕನ್ನಡ ಸಾಹಿತ್ಯದ ದಂತ ಗೋಪುರದ ಬುನಾದಿಯೇ ಅಲುಗಾಡತೊಡಗಿತು. ಸಾಹಿತ್ಯದ ಪರಿಶುದ್ಧತೆ ಮತ್ತು ಕಲೆಯ ಪವಿತ್ರತೆಯ ಪ್ರತಿಪಾದಕರು ಮತ್ತು ರಕ್ಷಕರು ಈ ಹೊಸ ಚಳುವಳಿಯ ಮೇಲೆ ಕಲ್ಲು ಎಸೆಯುವುದರಲ್ಲಿ ಸಂತಸಪಟ್ಟರು. ಇದರಿಂದಾಗಿ ಗಾಢವಾಗಿ ಹೊಸ ಚಳುವಳಿಯಲ್ಲಿ ಭಾಗವಹಿಸಿದವರು ಕೆಲವು ಸಂದರ್ಭಗಳಲ್ಲಿ ಕೆಲ ತಪ್ಪುಗಳನ್ನೂ ಎಸಗಿದರು. ಬೆಂಗಳೂರಿಗೆ ಸೇರಿದ ಎರಡು ಗುಂಪಿನ ಬರಹಗಾರರ ನೇತೃತ್ವದ ಈ ಪ್ರಾಂತ್ಯದ ಚಳುವಳಿಯು ಬೃಹತ್ ಮತ್ತು ಕಂಡರಿಯದ ಪ್ರಮಾಣವನ್ನು ತಲುಪಿತು.

ಸವಾಲು, ಪ್ರಚೋದನೆ ಮತ್ತು ಪ್ರತಿರೋಧದ ಈ ಅವಧಿಯ ನಂತರ ನಿಜವಾದ ಸೃಜನಶೀಲ ಕೆಲಸದ ಅವಧಿ ಆರಂಭವಾಯಿತು. ಒಬ್ಬ ಬರಹಗಾರ ಪಿಡಬ್ಲ್ಯುಎಗೆ ಸೇರಿರಲಿ ಅಥವಾ ಸೇರದಿರಲಿ, ಅತನ ಬರವಣಿಗೆ ಹೊಸ ಚಿಂತನೆಗಳನ್ನು ಪ್ರತಿಫಲಿಸಿತ್ತು. ಬೆಳಗಾಂನ ಸಾಮಾನ್ಯ ಜನರ ಬಗ್ಗೆ ಮಿರ್ಜಿ ಅಣ್ಣಾ ರಾವ್ ಬರೆದ 'ನಿಸರ್ಗ' ಮತ್ತು ಸಾಂಗ್ಲಿ ವೆಲ್ಲಿಂಗ್ಟನ್ ಕಾಲೇಜಿನ ಪ್ರೊ.ಹೆಚ್.ಬಿ.ಕುಲಕರ್ಣಿ ಬರೆದ 'ಭಗ್ನ ಮಂದಿರ' 1946 ರ ಅತ್ಯುತ್ತಮ ಪ್ರಗತಿಪರ ಕಾದಂಬರಿಗಳು. ಮರು-ಹುಟ್ಟಿದ ಭಾರತೀಯ ಯುವಜನರ ಕುರಿತಾದ ಮೂರು ಗಂಟೆಗಳ ನಾಟಕ ವಿ.ಕೆ.ಗೋಕಾಕರ 'ಯುಗಾಂತರ' ಈಗಷ್ಟೆ ಬಿಡುಗಡೆಯಾಗಿದ್ದು ಜನಪ್ರಿಯವಾಗುವ ಹಾಗೆ ಕಾಣುತ್ತಿದೆ. 1946 ರಲ್ಲಿ ಬಿಡುಗಡೆಯಾದ ಇವರ ಕವನಗಳ ಸಂಗ್ರಹ 'ಅಭ್ಯುದಯ' ಸ್ಪಷ್ಟವಾಗಿ ಗಾಳಿ ಯಾವ ದಿಕ್ಕಿಗೆ ಬೀಸುತ್ತಿದೆ ಎಂಬುದನ್ನು ಸೂಚಿಸುತ್ತಿದೆ. ಯುವ ಕವಿಗಳಾದ ಗೋಪಾಲಕೃಷ್ಣ ಅಡಿಗ, ವಿ.ಜಿ.ಭಟ್, ಮತ್ತು ಹೆಚ್.ವಿ.ನಾಗರಾಜರಾವ್ ಇವರುಗಳು ಎದ್ದು ಕಾಣುವ ಭರವಸೆಗಳು. ಬಂಡವಾಳಶಾಹಿ ಕ್ರೂರತೆಯನ್ನು ಪೂರ್ಣವಾಗಿ ಬಿಚ್ಚಿಡುವ ವಿ.ಜಿ.ಯವರ ಪದ್ಯಗಳು ಅತ್ಯಂತ ಜನಪ್ರಿಯವಾಗಿವೆ.

ಪ್ರಸ್ತುತ ಕರ್ನಾಟಕದಲ್ಲಿ ಹುಬ್ಬಳ್ಳಿ, ಬೆಂಗಳೂರು ಮತ್ತು ಮಂಗಳೂರು – ಮೂರು ಕಡೆಗಳಲ್ಲಿ ಪ್ರಗತಿಪರ ಬರಹಗಾರರ ಸಂಘದ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ಎಐಪಿಡಬ್ಲ್ಯುಎ ಸಮ್ಮೇಳನದಲ್ಲಿ ರಚಿಸಿದ ಕರ್ನಾಟಕ ಸಮಿತಿಯು ಇನ್ನೂ ಅಸ್ತಿತ್ವದಲ್ಲಿದೆ. ಆದರೆ ಯಾವುದೇ ಪ್ರಾಂತೀಯ ಸಂಘಟನೆಯನ್ನು ರಚಿಸಿಲ್ಲ. ಬೆಂಗಳೂರು ಘಟಕವು ಪುಸ್ತಕಗಳ ಪ್ರಕಟಣೆಯಲ್ಲಿ ಕಾರ್ಯನಿರತವಾಗಿದೆ. ಮಂಗಳೂರು ಘಟಕವು ವಿಚಾರಗೋಷ್ಠಿಗಳನ್ನು ಮತ್ತು ರೋಮೈನ್ ರೋಲ್ಯಾಂಡ್, ಠ್ಯಾಗೋರ್ ದಿನಾಚರಣೆ ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿದೆ. ಹುಬ್ಬಳ್ಳಿ ಘಟಕವು ಎಲೆಮರೆಯ ಪ್ರತಿಭೆಗಳನ್ನು ಹೊರತೆಗೆಯುವುದು ಮತ್ತು ಜನಪದ ಸಾಹಿತ್ಯವನ್ನು ಜನಪ್ರಿಯಗೊಳಿಸುವ ರಚನಾತ್ಮಕ ಕೆಲಸಗಳಲ್ಲಿ ಸಕ್ರಿಯವಾಗಿದೆ. ಇತ್ತೀಚೆಗೆ ಕೆಲವು ಕವಿಗಳು, ಸಣ್ಣ-ಕಥಾ ಬರಹಗಾರರು ಮತ್ತು ಕಾದಂಬರಿಕಾರರನ್ನು ಜೈಲಿಗೆ ಹಾಕಿದ ಸರ್.ಸಿ.ಪಿ.ರಾಮಸ್ವಾಮಿ ಐಯ್ಯರ್ ಅವರ ಕ್ರಮದ ವಿರುದ್ಧ ಇದು ಪ್ರತಿಭಟನಾ ಸಭೆಯನ್ನು ನಡೆಸಿದೆ. ನೂತನ ಮಾಸಿಕ ಪತ್ರಿಕೆ 'ಜನತಾ', ಮತ್ತು ಜನಪ್ರಿಯ ವಾರಪತ್ರಿಕೆ 'ದೇಶಬಂಧು' ಮತ್ತು ಕೆಲವು ಇತರೆ ಪತ್ರಿಕೆಗಳು ಚಳುವಳಿಗೆ ಅಮೂಲ್ಯವಾದ ಕೊಡುಗೆ ಸಲ್ಲಿಸುತ್ತಿವೆ.

> ಕಳೆದ ನವೆಂಬರ್‌ನಲ್ಲಿ ಕನ್ನಡದ ಖ್ಯಾತ ನಾಟಕಕಾರ ಟಿ.ಪಿ.ಕೈಲಾಸಂ ಅವರ ನಿಧನದಿಂದ ಕರ್ನಾಟಕ ಪ್ರಗತಿಪರ ಬರಹಗಾರರ ಚಳುವಳಿ ನಿರ್ದಿಷ್ಟವಾಗಿ ಮತ್ತು ಕನ್ನಡ ಸಾಹಿತ್ಯ ಒಟ್ಟಾರೆಯಾಗಿ ಸರಿಪಡಿಸಲಾಗದ ನಷ್ಟವನ್ನು ಅನುಭವಿಸಿತು. ಇವರು ಸಾಹಿತ್ಯ ದೊಡ್ಡಸ್ತಿಕೆಯ ಕೋಟೆಯನ್ನು ಮುರಿದು ಹಾಕಿ ನಾಟಕಗಳನ್ನು ಜನರ ಬಳಿಗೆ ಕೊಂಡೊಯ್ದ ಕ್ರಾಂತಿಕಾರಿ. ಪ್ರೇಕ್ಷಕರನ್ನು ಕ್ರಾಂತಿಕಾರಿ ಕ್ರಿಯೆಗೆ ಪ್ರಚೋದಿಸುವುದರಲ್ಲಿ ಯಶಸ್ವಿಯಾಗಿದ್ದ ಇವರು ದೊಡ್ಡ ಹಾಸ್ಯಗಾರರಾಗಿದ್ದರು. ಹಲವು ವರ್ಷಗಳ ಕಾಲ ಸಾಹಿತ್ಯದ ದೊಡ್ಡ ಜನ ಇವರನ್ನು ತಿರಸ್ಕಾರ ಮಾಡಿದರು ಮತ್ತು ಕಿರುಕುಳ ನೀಡಿದರು. ಆದರೆ ಭವಿಷ್ಯದಲ್ಲಿ ಅಪಾರ ನಂಬಿಕೆ ಹೊಂದಿದ್ದ ಮತ್ತು ಸೋಲಣಿಯದ ಸ್ಫೂರ್ತಿಯಿಂದ 61 ವರ್ಷಗಳ ಕಾಲ ಬದುಕಿದ್ದರು.
>
> ಕರ್ನಾಟಕದ ಪ್ರಗತಿಪರ ಬರಹಗಾರರ ಚಳುವಳಿಯು ಮುಂದಿನ ಮೇ ತಿಂಗಳಲ್ಲಿ ಹೊಸ ಘಟ್ಟವನ್ನು ಪ್ರವೇಶಿಸಲಿದೆ. ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ಪ್ರಗತಿಪರ ಬರಹಗಾರ ಸಮ್ಮೇಳನ ನಡೆಯಲಿದೆ (ಸುಧಿ ಪ್ರಧಾನ್ (1) 1960: 332–334)[105].

ಇದು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರಗತಿಪರ ಬರಹಗಾರರ ಚಳುವಳಿಯನ್ನು ಕಟ್ಟಿಕೊಡುತ್ತದೆ. ಇದಕ್ಕೊಂದು ವಿಶೇಷ ಶಕ್ತಿ ಪ್ರಾಪ್ರವಾದದ್ದು ಸ್ವಾತಂತ್ರ್ಯಾ ನಂತರದಲ್ಲಿ. ಪ್ರಗತಿಪರ ಲೇಖಕರ ಸಂಘ ಆರಂಭವಾದ ಐದಾರು ವರ್ಷಗಳ ನಂತರ ಐಪಿಟಿಎ(ಇಪ್ಟಾ) ಆರಂಭವಾಗಿದೆ. ಕರ್ನಾಟಕದ ಮಟ್ಟಿಗೆ ಸ್ವಾತಂತ್ರ್ಯಪೂರ್ವದಲ್ಲಿ ದೊಡ್ಡ ಪ್ರಮಾಣದ ಚಟುವಟಿಕೆಗಳು ನಡೆಯದಿದ್ದರೂ ಅದರ ಹೆಸರಿನ ಮೂಲ ಮಾತ್ರ ಬೆಂಗಳೂರಿನ ಜೊತೆ ನಂಟನ್ನು ಹೊಂದಿದೆ. ಇಪ್ಟಾದಲ್ಲಿ ಬರುವ 'ಪೀಪಲ್ಸ್ ಥಿಯೇಟರ್' ಎಂಬ ಹೆಸರನ್ನು ರೊಮೈನ್ ರೋಲ್ಯಾಂಡ್‌ರವರ 'ಪೀಪಲ್ಸ್ ಥಿಯೇಟರ್' ಎಂಬ ಹೆಸರಾಂತ ಪುಸ್ತಕದ ಆಧಾರದಲ್ಲಿ ಪ್ರಸಿದ್ದ ವಿಜ್ಞಾನಿ ಡಾ.ಹೋಮಿ ಬಾಬಾ ಅಥವಾ ಸಿಲೋನ್ ಮೂಲದ ಮಹಿಳೆ ಮತ್ತು 1941 ರಲ್ಲಿ ಆರಂಭವಾದ ಇಪ್ಟಾದ ಬೆಂಗಳೂರು ಘಟಕದ ಮೊದಲ ಕಾರ್ಯದರ್ಶಿ ಅನಿಲ್ ಡಿ'ಸಿಲ್ವಾ ಅವರು ಸೂಚಿಸಿರಬಹುದೆಂದು ಅಂದಾಜಿದೆ (ಸುಧಿ ಪ್ರಧಾನ್ 1960: xiii).

ರಾಮ್‌ಗೋಪಾಲ್ ಎಂಬ ನೃತ್ಯ ಕಲಾವಿದರ ಪ್ರದರ್ಶನದೊಂದಿಗೆ ಮೈಸೂರು ಪ್ರಾಂತ್ಯದ ಮೊಟ್ಟ ಮೊದಲ ಥಿಯೇಟರ್ ಬೆಂಗಳೂರಿನಲ್ಲಿ 1941 ರ ಏಪ್ರಿಲ್‌ನಲ್ಲಿ ಆರಂಭವಾಗಿದೆ. ಈ ಕಾರ್ಯಕ್ರಮ ಮೂಲತಃ ಬೆಂಗಳೂರಿನ ಕಾರ್ಮಿಕರಿಗೆ ಏರ್ಪಡಿಸಿದ್ದು. ಮೈಸೂರು ಸರ್ಕಾರ ಈ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿತು. ಹೀಗಾಗಿ ಕೇವಲ ಒಂದು ಕಾರ್ಯಕ್ರಮವನ್ನು ಮಾತ್ರ ನೀಡಲಾಯಿತು. ಇನ್ನು ಇಲ್ಲಿನ ಕಾರ್ಮಿಕ ನಾಯಕರಿಗೂ ಥಿಯೇಟರ್ ಪರಿಕಲ್ಪನೆಯು ಅಷ್ಟಾಗಿ ಇರಲಿಲ್ಲ. ಅವರೊಂದು ರೀತಿ ಸುಧಾರಣಾವಾದಿಗಳಾಗಿದ್ದರೆಂದು ಇಪ್ಟಾದ ಅಂದಿನ ಸಂಘಟಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೋಲಾರ ಚಿನ್ನದ ಗಣಿ ಕಾರ್ಮಿಕರ ಬಗ್ಗೆ ಈ ಅಭಿಪ್ರಾಯವಿರಲಿಲ್ಲ. ಅಲ್ಲಿನ ಕಾರ್ಮಿಕ ನಾಯಕರು ಕೋಲಾರದಲ್ಲಿ ಇಪ್ಟಾ ಘಟಕವೊಂದನ್ನು ಆರಂಭಿಸಲು ಸಹಾಯ ಮಾಡಿದರು ಎನ್ನಲಾಗಿದೆ.

ಆದರ ಕಾರ್ಯದರ್ಶಿ ಮತ್ತು ಸಂಘಟಕರಿಗೆ ಪೋಲೀಸರು ವಿಪರೀತ ಕಿರುಕುಳ ನೀಡಿದರು. ಇದರಲ್ಲಿ ಸರ್ಕಾರಿ ನೌಕರರು ಇದ್ದ ಕಾರಣದಿಂದಲೂ ಸಾಕಷ್ಟು ಕೆಲಸ ಮಾಡಲು ಆಗಲಿಲ್ಲ. ಅದರ ಜೊತೆಗೆ ಅದರ ಕಾರ್ಯದರ್ಶಿ

ಅನಿಲ್ ಡಿ ಸಿಲ್ವಾ ಬಾಂಬೆಗೆ ಹೋದರು. ನಂತರ ಬಂದ ಕಾರ್ಯದರ್ಶಿ ಕೇಸರಿ ಕೇಶವನ್ ಮೈಸೂರಿನಲ್ಲಿ ಒಂದು ಶಾಖೆಯನ್ನು ಆರಂಭಿಸಿದರು. ಇವರು ಕಾರ್ಮಿಕರಿಗಾಗಿ ಒಂದು ಪ್ರದರ್ಶನವನ್ನು ಏರ್ಪಡಿಸಿದರು. 'ದಾದಾ' ಎಂಬ ಕನ್ನಡ ಭಾಷಾಂತರ ನಾಟಕದ ಮೊದಲ ಪ್ರದರ್ಶನದಲ್ಲಿ 400 ಕಾರ್ಮಿಕರು ಭಾಗವಹಿಸಿದ್ದರು. ಮೈಸೂರು ಮತ್ತು ಬೆಂಗಳೂರಿನ ಕಾಮ್ರೇಡ್ಸ್ ಇದರ ಹೆಚ್ಚು ಪ್ರದರ್ಶನಗಳನ್ನು ಮಾಡುವ ಆಶಯದ ಕುರಿತು ಮತ್ತು 'ರೋರ್ ಚೈನಾ'ದ ಕನ್ನಡ ರೂಪಾಂತರವನ್ನು ಮಾಡಲು ಯೋಚಿಸಿರುವ ಬಗ್ಗೆ ಮೈಸೂರಿನ ಕಾಮ್ರೇಡ್ಸ್‌ನ್ನು ಅಭಿನಂದಿಸಿ ಸಮ್ಮೇಳನದ ಪ್ರಾಂತೀಯ ವರದಿಗಳಲ್ಲಿ ಮಂಡಿಸಲಾಗಿದೆ (ಸುಧಿ ಪ್ರಧಾನ್ 1960: 149).

ಇಪ್ಟಾದ ಮೊದಲ ಸಮ್ಮೇಳನ ಬಾಂಬೆಯಲ್ಲಿ 1943 ರ ಮೇ 25 ರಂದು ನಡೆಯಿತು. ನೂತನವಾಗಿ ಆಯ್ಕೆಯಾದ ಇಪ್ಟಾ ಅಖಿಲ ಭಾರತ ಸಮಿತಿಯಲ್ಲಿ ಮೈಸೂರು ಪ್ರದೇಶದಿಂದ ಕೇಸರಿ ಕೇಶವನ್ ಮತ್ತು ಮಂಗಳೂರು ಭಾಗದಿಂದ ಕುಳಕುಂದ ಶಿವರಾವ್ ಇವರುಗಳು ಸದಸ್ಯರಾಗಿದ್ದರು. ನಂತರ ಕರ್ನಾಟಕದ ಸಂಘಟನಾ ಪ್ರಾಂತೀಯ ಸಮಿತಿ ಎಂಬುದಾಗಿ ಶ್ರೀಮತಿ ಕೇಸರಿ ಕೇಶವನ್, ವಿ.ಆರ್.ಕಿಯೊನೂರ್ಕರ್, ಕುಳಕುಂದ ಶಿವರಾವ್ ಮತ್ತು ಎಸ್.ಸಿ.ಜೋಗ್ ಇವರುಗಳನ್ನು ಸಮ್ಮೇಳನ ನೇಮಿಸಿತು. (ಸುಧಿ ಪ್ರಧಾನ್ ಸಂ.1, 1960: 132–133)

1943 ರ ನವೆಂಬರ್ 27 ರಂದು ಇಪ್ಟಾ ಮಂಗಳೂರು ಕಮಿಟಿಯವರು ಅವರ ಮೊದಲ ನಾಟಕವನ್ನು ಗಣಪತಿ ಹೈಸ್ಕೂಲಿನಲ್ಲಿ ನಡೆಸಿದರು. ಇದು ಹಿಟ್ಲರ್‌ನನ್ನು ಕೇಂದ್ರವಾಗಿಟ್ಟುಕೊಂಡು ಮಾಡಿದ ನಾಟಕ. ಇದರಲ್ಲಿ ಯಕ್ಷಗಾನ ವಿಧಾನವನ್ನು ಬಳಸಿ ಮಾಡಿದರು. ಇದರಲ್ಲಿ ಹಿಟ್ಲರ್, ಮುಸೋಲಿನಿ, ಗೋರಿಂಗ್, ಮಾರ್ಷಲ್ ಪಿಟೈನ್ ಮುಂತಾದವರನ್ನು ಸ್ಟೇಜ್‌ನಲ್ಲಿ ತೋರಿಸಿದ್ದರಿಂದ, ಫ್ಯಾಸಿಸಂನ ಅಪಾಯಗಳನ್ನು ಮತ್ತು ಅದು ನಮ್ಮ ದೇಶಕ್ಕೂ ಯಾವಾಗ ಬೇಕಾದರೂ ಬರಬಹುದು ಎಂಬ ಬಗ್ಗೆ ಜನರಿಗೆ ಅರಿವು ಮೂಡಿಸಲು ಸಾಧ್ಯವಾಯಿತು. ಇದರ ನಂತರ ಕೆ.ಎ.ಅಬ್ಬಾಸ್ ಬರೆದ 'ಯೇ ಅಮೃತ್ ಹೈ' ಹಿಂದಿ ನಾಟಕವನ್ನು ಪ್ರದರ್ಶಿಸಿದರು. ಇದರಲ್ಲಿ ಜಾನ್ ಬುಲ್ ಪಾತ್ರವನ್ನು ಕೈಬಿಟ್ಟರೆ ಮಾತ್ರ ನಾಟಕ ಮಾಡಲು ಅನುಮತಿಸುವುದಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದೇಶಿಸಿದ್ದರು. ಜೊತೆಗೆ ಇಬ್ಬರು ನಟರು ಪಾತ್ರ ಮಾಡಬಾರದೆಂದು ನಿರ್ಬಂಧಿಸಿದ್ದರು. ಇಷ್ಟೆಲ್ಲಾ ತಾಪತ್ರಯಗಳನ್ನು ಎದುರಿಸಿ ನಾಟಕ ನಡೆಯಿತು. 1944 ರ ಸೆಪ್ಟೆಂಬರ್‌ನಲ್ಲಿ ಕಸ್ತೂರ್ಬಾ ಸ್ಮಾರಕ ನಿಧಿ ಸಲುವಾಗಿ ಮನರಂಜನಾ ಕಾರ್ಯಕ್ರಮದಲ್ಲಿ ಕನ್ನಡ ನಾಟಕವನ್ನು ಪ್ರದರ್ಶಿಸಲಾಯಿತು. ನವೆಂಬರ್ 7 ರಂದು ರಷ್ಯನ್ ಕ್ರಾಂತಿ ಕುರಿತು ಕನ್ನಡ ನಾಟಕವನ್ನು ಮತ್ತು ಕನ್ನಡದಲ್ಲಿ ಕ್ರಾಂತಿ ಗೀತೆಗಳನ್ನು ನೀಡಲಾಯಿತು. ಡಿಸೆಂಬರ್‌ನಲ್ಲಿ ಮಂಗಳೂರಿನ ಕಾರ್ಮಿಕರು ಎದುರಿಸುತ್ತಿರುವ ಸಂಕಷ್ಟಗಳ ಕುರಿತು, ಆಹಾರದ ಕೊರತೆಯ ಕುರಿತು ಕಾರ್ಯಕ್ರಮವನ್ನು ನೀಡಲಾಯಿತು. ತಮ್ಮ ಹಕ್ಕುಗಳಿಗಾಗಿ ಕಾರ್ಮಿಕರು ಒಗ್ಗಟ್ಟಾದರೆ ಮತ್ತು ಪರಿಹಾರಕ್ಕಾಗಿ ಹೋರಾಡಿದರೆ ತಮ್ಮ ಸಂಕಷ್ಟಗಳಿಗೆ ಪರಿಹಾರವಿದೆ ಎಂಬುದು ಇದರ ತಿರುಳಾಗಿತ್ತು. ನಂತರ ಉಡುಪಿಯಲ್ಲಿ ನಡೆದ ಬೀಡಿ ಕಾರ್ಮಿಕರ ಸಮ್ಮೇಳನದ ಸಂದರ್ಭದಲ್ಲೂ ಕಾರ್ಯಕ್ರಮ ನೀಡಲಾಯಿತು (ಸುಧಿ ಪ್ರಧಾನ್ 1960: 279–280). ಮಂಗಳೂರಿನಲ್ಲಿ ಕಾರ್ಮಿಕ ಚಳುವಳಿಗಳು ನಡೆಯುತ್ತಿದ್ದ ಕಾಲಘಟ್ಟದಲ್ಲಿ ಅಲ್ಲಿ ಸ್ವತಂತ್ರವಾಗಿ ನಾಟಕಗಳು ಮತ್ತು ಹಾಡುಗಳನ್ನು ಸ್ಥಳೀಯವಾಗಿ ರಚಿಸಿ ಪ್ರದರ್ಶಿಸಿರುವುದನ್ನು ಕಾಣಬಹುದು. ಆದರೆ ಇಪ್ಟಾದ ಜೊತೆ ಅದು ಬೆಸೆದುಕೊಂಡಿದ್ದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಇನ್ನು ಬೆಂಗಳೂರು ಮತ್ತು ಇತರೆ ಕಾರ್ಮಿಕ ಚಳುವಳಿಗಳ ಕೇಂದ್ರಗಳಲ್ಲೂ ಇಪ್ಟಾ ನಿರಂತರವಾಗಿ ಮುಂದುವರಿದ ಬಗ್ಗೆ ಅನುಮಾನಗಳಿವೆ.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕರ್ನಾಟಕದ ಕಮ್ಯುನಿಸ್ಟರ ಪಾತ್ರ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಹಲವಾರು ಕಾರಣಗಳಿಗಾಗಿ ಪ್ರಮುಖವಾದದ್ದು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕಮ್ಯುನಿಸ್ಟರ ಪಾತ್ರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ, ಎರಡನೇ ಪ್ರಪಂಚ ಯುದ್ಧದ ಬೆಳವಣಿಗೆಗಳ ಜೊತೆಯಲ್ಲೇ ಅದನ್ನಿಟ್ಟು ನೋಡಬೇಕಾಗಿದೆ. 1939 ರ ಸೆಪ್ಟೆಂಬರ್ 1 ರಂದು ಪೋಲೆಂಡಿನ ಮೇಲೆ ಹಿಟ್ಲರ್ ದಾಳಿ ಮಾಡುವುದರೊಂದಿಗೆ ಎರಡನೇ ಮಹಾಯುದ್ಧ ಆರಂಭವಾಯಿತು. ಇದು ಸಾಮ್ರಾಜ್ಯಶಾಹಿ ದೇಶಗಳ ನಡುವಿನ ಯುದ್ಧವೆಂದು ಭಾರತ ಕಮ್ಯುನಿಸ್ಟ್ ಪಕ್ಷ ಅಂದಾಜು ಮಾಡಿತು. ಇಂತಹ ಅಂದಾಜಿಗೆ ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ವಿಶ್ಲೇಷಣೆಯೂ ಕಾರಣವಾಗಿತ್ತು. ಜೊತೆಗೆ ಪರಸ್ಪರ ಯುದ್ಧದಲ್ಲಿ ತೊಡಗಬಾರದೆಂದು ಸ್ಟಾಲಿನ್ ಮತ್ತು ಹಿಟ್ಲರ್ ನಡುವೆ ಒಪ್ಪಂದವಾಗಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ಸಿಪಿಐ ಭಾರತದ ಜನತೆಗೆ ಯುದ್ಧವನ್ನು ವಿರೋಧಿಸಿ ಪ್ರತಿಭಟನೆಗಳನ್ನು ನಡೆಸಲು ಕರೆ ನೀಡಿತ್ತು.

ಯುದ್ಧವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಕಮ್ಯುನಿಸ್ಟ್ ಮುಖಂಡರನ್ನು ಬ್ರಿಟಿಷ್ ಸರ್ಕಾರ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಅಡಿಯಲ್ಲಿ ಸ್ಥಾನಬದ್ಧತೆಯಲ್ಲಿಡಲು ಆರಂಭಿಸಿತು. ದೇಶಾದ್ಯಂತ ಸಾವಿರಾರು ಕಮ್ಯುನಿಸ್ಟರನ್ನು ಬಂಧಿಸಲಾಯಿತು. ಬಾಂಬೆ ಕರ್ನಾಟಕ ಭಾಗದಲ್ಲಿ ಎನ್.ಎಲ್.ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ ಮತ್ತು ಸಂಗಡಿಗರಾದ ಸುಧೀರ್ ಫಕೀರ್, ಚಂದ್ರಕಾಂತ್ ಕಾಕೋಡ್ಕರ್, ದಿವಾಕರ್ ಕಾಕೋಡ್ಕರ್, ಚೌಧರಿ ಮುಂತಾದವರನ್ನು ಬಂಧಿಸಿ ನಾಸಿಕ್ ಜೈಲಿನಲ್ಲಿಡಲಾಯಿತು.

ತಾನು ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿದು, 1941 ರ ಜೂನ್ 22 ರಂದು ಹಿಟ್ಲರ್ ಸೋವಿಯತ್ ಯೂನಿಯನ್ ಮೇಲೆ ಆಕ್ರಮಣ ಮಾಡಿದನು. ಆರಂಭದಲ್ಲಿ ಅಮೇರಿಕ ಮತ್ತು ಇಂಗ್ಲೆಂಡುಗಳು ಸೋವಿಯತ್ ಯೂನಿಯನ್ ನಾಶವಾದರೆ ಒಳ್ಳೆಯದೆಂದೇ ಭಾವಿಸಿದ್ದರು. ಆದರೆ ಯುದ್ಧದ ಪ್ರಕ್ರಿಯೆಯಲ್ಲಿ ಹಿಟ್ಲರ್‌ನಿಂದ ತಮಗೂ ಅಪಾಯ ತಪ್ಪಿದ್ದಲ್ಲ ಎಂಬ ವಿಚಾರ ಸ್ಪಷ್ಟವಾಗತೊಡಗಿತು. ಆಗ ರಷ್ಯಾ–ಇಂಗ್ಲೆಂಡ್–ಅಮೇರಿಕ ನೇತೃತ್ವದ ಕೂಟ (Allies) ರೂಪುಗೊಂಡಿತು. ಮತ್ತೊಂದು ಕಡೆ ಜರ್ಮನಿ–ಇಟಲಿ–ಜಪಾನುಗಳ ನೇತೃತ್ವದಲ್ಲಿ ಇನ್ನೊಂದು ಕೂಟ (Axis) ರಚನೆಯಾಯಿತು. ಯಾವಾಗ ರಷ್ಯಾದ ಮೇಲೆ ಹಿಟ್ಲರ್ ಆಕ್ರಮಣ ಮಾಡಿದನೋ ಆಗ ಯುದ್ಧ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಆಯಿತೆಂದು, ಇದನ್ನು ಜನತೆಯ ಯುದ್ಧವನ್ನಾಗಿ ಮಾರ್ಪಡಿಸಬೇಕೆಂದು ಕಮಿನ್‌ಟರ್ನ್ ಕರೆ ನೀಡಿತು. ಭಾರತ ಕಮ್ಯುನಿಸ್ಟ್ ಪಕ್ಷವು ಈ ನಿಲುವನ್ನು ಅಂಗಿಕರಿಸಿತು.

ಇದುವರೆಗೂ ಯುದ್ಧವನ್ನು ವಿರೋಧಿಸಿ ಚಟುವಟಿಕೆ ಮಾಡುತ್ತಿದ್ದ ಕಮ್ಯುನಿಸ್ಟರು ಈಗ, ಜಗತ್ತನ್ನು ಹಿಟ್ಲರ್‌ನ ಆಕ್ರಮಣದಿಂದ ರಕ್ಷಿಸುವುದು ಮತ್ತು ಮಾನವ ಕುಲವನ್ನು ನಾಜಿಸಂ ಮತ್ತು ಫ್ಯಾಸಿಸಂಗಳಿಂದ ಕಾಪಾಡುವುದು ಮೊದಲ ಕರ್ತವ್ಯವೆಂದು ಭಾವಿಸಿತು. 1942 ರ ಫೆಬ್ರವರಿಯಲ್ಲಿ ಸಿಪಿಐನ ಪೊಲಿಟ್‌ಬ್ಯೂರೊ 'ಜನತೆಯ ಯುದ್ಧದಲ್ಲಿ ಭಾರತದ ಜನತೆ, ಜನತೆಯ ಪಾತ್ರ ನಿರ್ವಹಿಸುವಂತೆ ಮಾಡಿರಿ' ಎಂದು ನಿರ್ಣಯಿಸಿ ಕರೆ ನೀಡಿತು.

ಇಂತಹ ನಿರ್ಣಯದ ಪ್ರತಿಗಳನ್ನು ಜೈಲಿನಲ್ಲಿದ್ದವರಿಗೂ ಕಳುಹಿಸಲಾಗಿತ್ತು (ಉಪಾಧ್ಯಾಯ 1996: 9). ಬದಲಾದ ನಿಲುವಿನ ಹಿನ್ನೆಲೆಯಲ್ಲಿ ಭಾರತದ ಬ್ರಿಟಿಷ್ ಸರ್ಕಾರ ಸಿಪಿಐ ಮೇಲೆ ವಿಧಿಸಿದ್ದ ನಿಷೇಧವನ್ನು 1942 ಜೂನ್‌ನಲ್ಲಿ ತೆರವುಗೊಳಿಸಿತು. ಇದೇ ಸಂದರ್ಭಕ್ಕೆ ಕಾಂಗ್ರೆಸ್‌ನೊಳಗೆ ಇದಕ್ಕೆ ವಿರುದ್ಧವಾದ ಪ್ರಕ್ರಿಯೆ ನಡೆಯುತ್ತಿತ್ತು. ಬ್ರಿಟನ್ನಿನ ಪರವಾಗಿ ಭಾರತೀಯ ಸೈನಿಕರ ನೇಮಕಕ್ಕೆ ಕಾಂಗ್ರೆಸ್ ಸಹಕಾರ ನೀಡುತ್ತಿತ್ತು. ಆದರೆ ಅದನ್ನು ಚೌಕಾಸಿಯ ಕಾರಣಕ್ಕಾಗಿ ಮಾಡುತ್ತಿತ್ತು. ಯುದ್ಧಾನಂತರ ಕಾಂಗ್ರೆಸ್‌ನ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಬ್ರಿಟಿಷರು ನೀಡಿದ ಭರವಸೆಯನ್ನು ಅದು ಒಪ್ಪಲಿಲ್ಲ (ಈ ಕುರಿತು ಕಾಂಗ್ರೆಸ್‌ನೊಳಗೆ ನಡೆಯುತ್ತಿದ್ದ ವಾದಗಳನ್ನು ಅಧ್ಯಾಯ 2 ರಲ್ಲಿ ಚರ್ಚಿಸಲಾಗಿದೆ). ಕಾಂಗ್ರೆಸ್ ಮತ್ತು ಬ್ರಿಟಿಷರ ನಡುವಿನ ಈ ಸಂಘರ್ಷದಲ್ಲಿ 1942 ರ ಆಗಸ್ಟ್ 7 ರಂದು ಕ್ವಿಟ್ ಇಂಡಿಯಾ ಚಳುವಳಿ ತೀರ್ಮಾನವಾಯಿತು. ಈ ರೀತಿಯಾಗಿ ವಿಭಿನ್ನ ಕಾರಣಗಳಿಗಾಗಿ ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರ ನಿಲುವುಗಳು ಬೇರೆಯಾದವು.

ಬ್ರಿಟಿಷ್ ಸರ್ಕಾರ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ವಾಪಸ್ ಪಡೆದರೂ ಸಹ ಜೈಲುಗಳಲ್ಲಿದ್ದ ಎಲ್ಲಾ ಕಮ್ಯುನಿಸ್ಟ್ ಮುಖಂಡರನ್ನೂ ಬಿಡುಗಡೆ ಮಾಡಲಿಲ್ಲ. ಬ್ರಿಟಿಷರ ಈ ಇಬ್ಬಂದಿತನವನ್ನು ಇದರಲ್ಲಿ ಗಮನಿಸಬಹುದು. ಪ್ರಪಂಚ ಯುದ್ಧವು ಭಾರತದ ಕರಾವಳಿಗೆ ಪ್ರವೇಶ ಮಾಡತೊಡಗಿತ್ತು. ಪೂರ್ವ ಕರಾವಳಿ ನಗರಗಳ ಮೇಲೆ ಜಪಾನೀ ದಾಳಿ ನಡೆಯುತ್ತಿತ್ತು. ಜಪಾನೀ ಸೈನಿಕರನ್ನು ಭಾರತೀಯ ಸೈನಿಕರು ಎದುರಿಸಿ ಹೋರಾಡುವುದಕ್ಕೆ ಸಹಾಯಕವಾಗಿ ಮತ್ತು ಜಪಾನೀಯರೇನಾದರೂ ಭಾರತದ ದಕ್ಷಿಣ ಭಾಗದ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ದಾಳಿ ಮಾಡಿದರೆ ಅವರನ್ನು ಎದುರಿಸಲು ಗೆರಿಲ್ಲಾ ಮಾದರಿ ಹೋರಾಟವನ್ನು ನಡೆಸಬೇಕೆಂದು ಕಮ್ಯುನಿಸ್ಟ್ ಪಕ್ಷ ತೀರ್ಮಾನ ಮಾಡಿತ್ತು. ಅದರ ಭಾಗವಾಗಿ ಎನ್.ಕೆ.ಉಪಾಧ್ಯಾಯ ಅವರನ್ನೊಳಗೊಂಡು ದಕ್ಷಿಣ ರಾಜ್ಯಗಳ ಕೆಲವರು ಪುಣೆ ಬಳಿಯ ಸಿಂಹಘಡದಲ್ಲಿ ಗೆರಿಲ್ಲಾ ಮಾದರಿ ಯುದ್ಧ ತರಬೇತಿಯನ್ನು ಪಡೆದರು. ತರಬೇತಿ ಪಡೆದ ಇವರುಗಳು ತಂತಮ್ಮ ರಾಜ್ಯಗಳಿಗೆ ತೆರಳಿ ಅಲ್ಲಿ ಹೆಚ್ಚಿನ ಜನರಿಗೆ ತರಬೇತಿ ನೀಡಿದರು. ಎನ್.ಕೆ.ಉಪಾಧ್ಯಾಯರು ಬೆಂಗಳೂರು ಮತ್ತು ಮಂಗಳೂರಿನ ಕೆಲವು ಕಮ್ಯುನಿಸ್ಟ್ ಕಾರ್ಯಕರ್ತರಿಗೆ ತರಬೇತಿ ನೀಡಿದರು (ಉಪಾಧ್ಯಾಯ 1996: 10).

ಫ್ಯಾಸಿಸಂ ವಿರೋಧಿ ಯುದ್ಧವನ್ನು 'ಜನತಾ ಯುದ್ಧ'ವನ್ನಾಗಿ ಮಾಡಬೇಕೆನ್ನುವ ತೀರ್ಮಾನವನ್ನು ಕಮ್ಯುನಿಸ್ಟ್ ಪಕ್ಷ ಮಾಡಿದ್ದರೂ ಕೆಳಗಿನ ಹಂತದಲ್ಲಿ ಬ್ರಿಟಿಷ್ ವಿರೋಧಿ ಹೋರಾಟಗಳನ್ನು ನಿಲ್ಲಿಸಿರಲಿಲ್ಲ. ಆ ಅವಧಿಯಲ್ಲಿ ಬಿಡುಗಡೆಯಾದ ಕಮ್ಯುನಿಸ್ಟರೆಲ್ಲರೂ ಸಾಮೂಹಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅದರಲ್ಲಿ ಬಹಳ ಮುಖ್ಯವಾಗಿ ರೈಲ್ವೆ ಕಾರ್ಮಿಕರ ಸಂಘಟನೆ ಮಾಡಿದ್ದು. ಹುಬ್ಬಳ್ಳಿ ಭಾಗದಲ್ಲಿ ಎನ್.ಕೆ.ಉಪಾಧ್ಯಾಯ, ಮಂಗಳೂರು ಭಾಗದಲ್ಲಿ ಬಿ.ವಿ.ಕಕ್ಕಿಲ್ಲಾಯ, ಬೆಂಗಳೂರು ಭಾಗದಲ್ಲಿ ಎನ್.ಡಿ.ಶಂಕರ್, ಕೆ.ರಾಮಸ್ವಾಮಿ, ಎಂ.ಎಸ್. ರಾಮರಾವ್ ಮುಂತಾದವರ ನೇತೃತ್ವದಲ್ಲಿ ವ್ಯಾಪಕವಾದ ಚಳುವಳಿ ನಡೆಯಿತು. ಇದಲ್ಲದೆ ಬೀಡಿ, ಹೋಟೆಲ್, ಮುನಿಸಿಪಲ್, ಮುಂತಾದ ಕಾರ್ಮಿಕರ ಹೋರಾಟಗಳು ಬಾಂಬೆ ಕರ್ನಾಟಕ ಭಾಗದಲ್ಲಿ ನಡೆದವು. ಅದೇ ರೀತಿ

ಮದ್ರಾಸ್ ಪ್ರಾಂತ್ಯದ ಪ್ರದೇಶಗಳಲ್ಲಿ, ಮೈಸೂರು, ಬೆಂಗಳೂರು, ಕೆಜಿಎಫ್ ಪ್ರದೇಶಗಳಲ್ಲಿ ಕಾರ್ಮಿಕರ ಹೋರಾಟಗಳಲ್ಲಿ ಕಮ್ಯುನಿಸ್ಟರು ತಮ್ಮನ್ನು ತೊಡಗಿಸಿಕೊಂಡರು ಮತ್ತು ಅವನ್ನು ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲೇ ಬೆಸೆದರು. ಕ್ವಿಟ್ ಇಂಡಿಯ ಚಳುವಳಿಯಲ್ಲಿ ಕಾರ್ಮಿಕರು ಅಮೋಘವಾದ ಪಾತ್ರವನ್ನು ವಹಿಸಿದರು. ಬೆಂಗಳೂರಿನಲ್ಲಿ ಮೂರು ವಾರಕ್ಕೂ ಹೆಚ್ಚು ಕಾಲ ನಡೆದ ವಿವಿಧ ಫ್ಯಾಕ್ಟರಿಗಳ ಕಾರ್ಮಿಕರ ಮುಷ್ಕರಗಳಲ್ಲಿ ಅಂತಿಮವಾಗಿ ಬಿನ್ನಿ ಮಿಲ್‌ನಲ್ಲಿ 78, ಮಿನರ್ವ ಮಿಲ್‌ನಲ್ಲಿ 85 ಮತ್ತು ಮೈಸೂರು ಮಿಲ್‌ನಲ್ಲಿ 110 ಕಾರ್ಮಿಕರು ವಜಾ ಆಗಿ ಕೆಲಸ ಕಳೆದುಕೊಂಡರು (ಕಾಮತ್1990: 115).

ಫ್ಯಾಸಿಸಂ ವಿರುದ್ಧವಾಗಿ ಭಾರತದ ಕಾರ್ಮಿಕ ವರ್ಗವು ಸೋವಿಯತ್ ಯೂನಿಯನ್ ಪರವಾಗಿರಬೇಕೆಂದು ಕೋರುವ 1942 ರ ಮೇ ದಿನದ ಕಿರುಹೊತ್ತಿಗೆ ಮತ್ತು ನೆಹರೂ ಮತ್ತು ಸರೋಜಿನಿ ನಾಯ್ಡು ಅವರ ಹೇಳಿಕೆಯ ಕರಪತ್ರಗಳು ಇವರೊಂದಿಗೆ ಇದ್ದವು ಎನ್ನುವ ಕಾರಣಕ್ಕೆ ಕಾನೂನು ಬಾಹಿರ ಸಾಹಿತ್ಯ ಹೊಂದಿದ್ದರೆಂದು ಆರೋಪಿಸಿ ಕಕ್ಕಿಲ್ಲಾಯರನ್ನು ಮತ್ತು ಕಾಂಞಂಗಾಡಿನ ಕುಂಞಿಕಣ್ಣನ್‌ರನ್ನು ಬಂಧಿಸಿ 9 ತಿಂಗಳು ಮಂಗಳೂರು ಜೈಲಿಗೆ ಹಾಕಿದರು. ಇವರು ಹೊಂದಿದ್ದದ್ದು ಕಾನೂನು ಬಾಹಿರ ಸಾಹಿತ್ಯವಲ್ಲ ಎಂಬುದಾಗಿ ಎನ್.ಎಲ್.ಉಪಾಧ್ಯಾಯರು ಸಾಕ್ಷ್ಯ ನುಡಿದಿದ್ದರು. ಕಮ್ಯುನಿಸ್ಟ್ ಪಕ್ಷವು ಕಾನೂನುಬದ್ಧವಾದ ನಂತರವೂ ಕಮ್ಯುನಿಸ್ಟರ ಮೇಲಿನ ದಬ್ಬಾಳಿಕೆಗಳು ನಿಲ್ಲಲಿಲ್ಲ. ದೇಶಾದ್ಯಂತ 700 ಪಕ್ಷದ ಸದಸ್ಯರು ಜೈಲಿನಲ್ಲಿದ್ದರು. ಇದರ ಜೊತೆಗೆ 105 ಜನ ಜೀವಾವಧಿ ಶಿಕ್ಷೆಗಳನ್ನು ಅನುಭವಿಸುತ್ತಿದ್ದರು[106]. ಕಮ್ಯುನಿಸ್ಟ್ ಪಕ್ಷವು ಎರಡನೇ ಮಹಾಯುದ್ಧವನ್ನು ಜನತಾಯುದ್ಧವೆಂದು ಸಾರಿದ್ದರಿಂದ ಕಮ್ಯುನಿಸ್ಟರಿಗೆ ರಿಯಾಯಿತಿಯೇನೂ ಸಿಕ್ಕಿರಲಿಲ್ಲ. ಸೌಲಭ್ಯಗಳನ್ನೇನೂ ಕೇಳಿರಲಿಲ್ಲ. ಬ್ರಿಟಿಷ್ ಭಾರತ ಸರ್ಕಾರಕ್ಕೂ ಮತ್ತು ಬ್ರಿಟಿಷ್ ಸಾರ್ವಭೌಮ ಪ್ರಭುತ್ವಕ್ಕೂ ಅಪಾಯಕರವೆಂದೇ ಕಮ್ಯುನಿಸ್ಟರನ್ನು ಪರಿಗಣಿಸಿದ್ದರು. ಮಂಗಳೂರಿನ ಕಕ್ಕಿಲ್ಲಾಯರು ಮತ್ತು ಇನ್ನೂ ಹಲವಾರು ಕಮ್ಯುನಿಸ್ಟರನ್ನು ಕಣ್ಣಾನೂರು ಮತ್ತು ವೆಲ್ಲೂರು ಜೈಲುಗಳಲ್ಲಿ ಸ್ಥಾನಬದ್ಧತೆಯಲ್ಲಿಡಲಾಗಿತ್ತು. ಕಮ್ಯುನಿಸ್ಟ್ ಪಕ್ಷದ ಮೇಲಿನ ನಿರ್ಬಂಧ ತೆಗೆದಿದ್ದರೂ ಸಹ, ಅದನ್ನೊಂದು ಬಹಿಷ್ಕೃತ ಪಕ್ಷವೆಂದೇ ನೋಡಲಾಗುತ್ತಿತ್ತು. ಮಂಗಳೂರಿನಲ್ಲಿ ಕೆಲವು ಪತ್ರಿಕೆಗಳಂತೂ ಕಮ್ಯುನಿಸ್ಟ್ ವಿರೋಧಿ ಮತ್ತು ಕಾರ್ಮಿಕ ವಿರೋಧಿ ವಿಷ ಕಾರುವ ಕೆಲಸವನ್ನು ಮಾಡುತ್ತಿದ್ದವು.

ಕಮ್ಯುನಿಸ್ಟ್ ಪಕ್ಷ ಮತ್ತು ಸಂಘಟನೆಗಳ ಚಟುವಟಿಕೆಗಳೇ ಅಲ್ಲದೆ, ಕ್ವಿಟ್ ಇಂಡಿಯಾ ಹೋರಾಟದಲ್ಲಿ ಬಂಧಿಗಳಾದ ಇತರರನ್ನು ಬಿಡುಗಡೆ ಮಾಡಬೇಕೆಂದೂ ಕಮ್ಯುನಿಸ್ಟರು ಹೋರಾಟಗಳನ್ನು ಸಂಘಟಿಸಿದರು. ಹಾಗೆ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂಧಿತರಾಗಿದ್ದ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಬೇಕು ಮತ್ತು ಕೇಂದ್ರದಲ್ಲಿ ರಾಷ್ಟ್ರೀಯ ಸರ್ಕಾರ ಬರಬೇಕೆಂದು ಒತ್ತಾಯಿಸಿ 1943 ರಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಬೆಂಗಳೂರಿನಲ್ಲಿ ಎನ್.ಎಲ್.ಉಪಾಧ್ಯಾಯರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲು ಪ್ರಯತ್ನಿಸಲಾಯಿತು[107]. ಇದೊಂದು ವಿಶೇಷ ತೀರ್ಮಾನ. ಏಕೆಂದರೆ, ಕ್ವಿಟ್ ಇಂಡಿಯಾ ಚಳುವಳಿಯನ್ನು ಸೈದ್ಧಾಂತಿಕ ನೆಲೆಗಟ್ಟಿನಿಂದ ಕಮ್ಯುನಿಸ್ಟರು ಅಧಿಕೃತವಾಗಿ ಬೆಂಬಲಿಸಲಿಲ್ಲ ಎಂಬ ಕಾರಣಕ್ಕೆ ಟೀಕೆಗಳನ್ನು ಎದುರಿಸುತ್ತಿದ್ದಾಗ ಕಾಂಗ್ರೆಸ್ ರೀತಿಯದೇ ಬೇಡಿಕೆಗಳಿಗಾಗಿ

ಇಂತಹ ತೀರ್ಮಾನ ಮಾಡಿದ್ದು ಗಮನಾರ್ಹವಾದದ್ದು. ಇದೇ ರೀತಿ ರಾಜ್ಯ ಮತ್ತು ದೇಶಾದ್ಯಂತ ಕಮ್ಯುನಿಸ್ಟರು ಜನಚಳುವಳಿಗಳನ್ನು ಈ ಅವಧಿಯಲ್ಲಿ ತೀವ್ರಗೊಳಿಸಿ ಬಂಧನಕ್ಕೊಳಗಾದರು ಎಂಬುದನ್ನೂ ಗಮನಿಸಬಹುದು. ಪೊಲೀಸರು ಇವರನ್ನು ಬಂಧಿಸಿ ಸೆಂಟ್ರಲ್ ಜೈಲಿಗೆ ಹಾಕಿದರು. 3–4 ತಿಂಗಳ ನಂತರ ಸಾರ್ವತ್ರಿಕ ಬಿಡುಗಡೆಯಲ್ಲಿ ಹೊರಬಂದರು.

ಕ್ವಿಟ್ ಇಂಡಿಯಾ ಚಳುವಳಿಯ ಹಿನ್ನೆಲೆಯಲ್ಲಿ ಕಾಂಗ್ರೆಸಿಗರ ಜೊತೆ ಕಮ್ಯುನಿಸ್ಟರು ಸಹ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಬಂಧಿಗಳಾಗಿದ್ದರು. ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ಅಲ್ಪಕಾಲ ಹಿಂತೆಗೆದಿದ್ದ ಕಾಲದಲ್ಲೂ ಮೈಸೂರು ಸರ್ಕಾರ ಇಲ್ಲಿ ಕಮ್ಯುನಿಸ್ಟರನ್ನು ಬಂಧಿಸಿತ್ತು. ಅವರು ಹೊರಗಿರುವುದಕ್ಕಿಂತ ಜೈಲಿನ ಒಳಗಿರುವುದೇ ಉತ್ತಮವೆಂದು ಸರ್ಕಾರ ಭಾವಿಸಿತ್ತು. ಇವರಲ್ಲಿ ಪ್ರಮುಖವಾಗಿ ಎಂ.ಎಸ್.ರಾಮರಾವ್ ಇವರು ಜೈಲಿನಲ್ಲಿದ್ದರು. ಆ ಸಂದರ್ಭದಲ್ಲಿ ದೇಶವ್ಯಾಪಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಐಕ್ಯತೆ ಕಾಪಾಡಬೇಕೆಂದು ಒತ್ತಾಯಗಳು ಬಂದಿದ್ದವು. ಭಾರತ ಕಮ್ಯುನಿಸ್ಟ್ ಪಕ್ಷವು 'ಫಾರ್ ಎ ನ್ಯಾಷನಲ್ ಗವರ್ನಮೆಂಟ್' 'ನ್ಯಾಷನಲ್ ಯೂನಿಟಿ' ಎಂಬ ಘೋಷಣೆಗಳನ್ನು ನೀಡಿತ್ತು. ಇದನ್ನು ಬೆಂಬಲಿಸಿ ಎಂ.ಎಸ್.ರಾಮರಾವ್‌ರವರು ಜೈಲಿನೊಳಗಿದ್ದ 20–30 ಜನರ ಸಹಿಗಳನ್ನು ಸಂಗ್ರಹಿಸಿ ಆಚೆಗೆ ಕಳುಹಿಸಿದ್ದರು[108]. ಇದು 'ಕಾಂಗ್ರೆಸ್ ಪೇಟ್ರಿಯಟ್ಸ್ ಗ್ರೀಟ್ ಯೂನಿಟಿ ಕ್ಯಾಂಪೇನ್' ಎಂಬ ಹೆಸರಿನಲ್ಲಿ ಸಿಪಿಐನ ಮುಖವಾಣಿ "ಪೀಪಲ್ಸ್ ವಾರ್" ಪತ್ರಿಕೆಯ 1942 ರ ನವೆಂಬರ್ 1 ರ ಸಂಚಿಕೆಯ ಮುಖಪುಟದಲ್ಲಿ ಪ್ರಕಟವಾಯಿತು[109]. ಇದು ಸಾಕಷ್ಟು ಸುದ್ದಿ ಮಾಡಿತು. ಈ ಪತ್ರ ಹೊರಗೆ ಹೋದ ಬಗ್ಗೆ ಜೈಲಿನ ಅಧಿಕಾರಿಗಳು ದಂಗಾದರು. ಈ ಬಗ್ಗೆ ದೆಹಲಿಯ ಬ್ರಿಟಿಷ್ ಅಧಿಕಾರಿಗಳು ಮೈಸೂರಿನ ರೆಸಿಡೆಂಟರಿಂದ ವಿವರಣೆ ಬಯಸಿದರು. ಆಗ ಮೈಸೂರಿನ ರೆಸಿಡೆಂಟರು ನವದೆಹಲಿಯ ಸರ್ ಕೆನ್ನೆತ್ ಫಿಟ್ಜೆ, ಸೆಕ್ರೆಟರಿ ಟು ದಿ ಕ್ರೌನ್ ರೆಪ್ರೆಸೆಂಟೇಟಿವ್, ಇವರಿಗೆ ವಿವರಣೆ ನೀಡಿ 23–12–1942 ರಂದು ಪತ್ರ ಬರೆದರು:

> ಉಲ್ಲೇಖಿಸಲಾದ ಪತ್ರವು ಬೆಂಗಳೂರು ಸೆಂಟ್ರಲ್ ಜೈಲಿನ ಕಾಂಗ್ರೆಸ್ ಬಂಧಿಗಳು ಬರೆದಿರುವುದು ಸತ್ಯವಾಗಿದೆ. 'ಪೀಪಲ್ಸ್ ವಾರ್' ಪತ್ರಿಕೆಯ ನವೆಂಬರ್ 1 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಪತ್ರವು ಕಮ್ಯುನಿಸ್ಟ್ ಬಂಧಿಗಳು ಕರ್ನಾಟಕದ ಕಮ್ಯುನಿಸ್ಟ್ ಪಕ್ಷದ ಸಂಘಟಕರಾದ ಟಿ(ಎನ್).ಎಲ್.ಉಪಾಧ್ಯಾಯ ಅವರಿಗೆ ಬರೆದದ್ದಾಗಿದ್ದು ಅದನ್ನು ಅವರು 'ಪೀಪಲ್ಸ್ ವಾರ್' ಪತ್ರಿಕೆಯ ನವೆಂಬರ್ 1 ರ ಸಂಚಿಕೆಯಲ್ಲಿ ಪ್ರಕಟಿಸಿರುವ ಬಗ್ಗೆ ಮೈಸೂರು ಸರ್ಕಾರದಿಂದ ಮನವರಿಕೆಯಾಗಿದೆ. ಪಡೆದ ಇತರೆ ಮಾಹಿತಿಯೆಂದರೆ, ಜೈಲಿಗೆ ಅಂಟಿಕೊಂಡಿರುವ ಆಸ್ಪತ್ರೆಯ ಮೂಲಕ ಈ ಪತ್ರವನ್ನು ಕದ್ದು ಹೊರಗೊಯ್ಯಲಾಗಿದೆ[110].

ಈ ವರದಿಯನ್ನು ಆಧರಿಸಿ ಈ ಪ್ರಕರಣದಲ್ಲಿ ತಪ್ಪಿತಸ್ತರಿಗೆ ಶಿಕ್ಷೆ ವಿಧಿಸಬೇಕೆಂದು ಆದೇಶ ಬರುತ್ತದೆ. ಆ ಪ್ರಕಾರವಾಗಿ, ಮೈಸೂರಿನ ರೆಸಿಡೆಂಟರು 1943 ಫೆಬ್ರವರಿ 2 ರಂದು, ಈ ಘಟನೆಗೆ ಬೆಂಗಳೂರು ಸೆಂಟ್ರಲ್ ಜೈಲಿನ ಇಬ್ಬರು ವಾರ್ಡನ್‌ಗಳು ಕಾರಣರೆಂಬ ಮೈಸೂರು ಸರ್ಕಾರದ ಮಾಹಿತಿಯನ್ನಾಧರಿಸಿ ಅವರನ್ನು ಒಂದು ತಿಂಗಳು ಅಮಾನತ್ತುಗೊಳಿಸಿದರು.

1945 ರಲ್ಲಿ ಪ್ರಪಂಚ ಯುದ್ಧ ಮುಗಿದ ನಂತರ 1946 ರಲ್ಲಿ ನೆಹರೂ ಮತ್ತು ಲಿಯಾಖತ್‌ರ ಸಮ್ಮಿಶ್ರ ತಾತ್ಕಾಲಿಕ ಸರ್ಕಾರ ರಚನೆಯಾಗಿತ್ತು. ಮದ್ರಾಸ್ ಪ್ರಾಂತ್ಯದಲ್ಲಿ ಪ್ರಕಾಶಂ ಸರ್ಕಾರವಿತ್ತು. ಕಮ್ಯುನಿಸ್ಟರ ಮೇಲಿನ ಯುದ್ಧಾನಂತರದ ದಾಳಿಗಳನ್ನು ನಾವು ಆ ಸಂದರ್ಭಕ್ಕೆ ಗಮನಿಸಬಹುದು. 'ಬ್ರಿಟಿಷ್ ಚಕ್ರವರ್ತಿಯ ಅಧಿಪತ್ಯವನ್ನು ಬುಡಮೇಲು ಮಾಡುವುದಕ್ಕೂ, ಭಾರತದಲ್ಲಿ ವಿದ್ಯುಕ್ತವಾಗಿ ಸ್ಥಾಪಿತವಾಗಿದ್ದ ಅಧಿಕಾರವನ್ನು ಉರುಳಿಸುವುದಕ್ಕೂ, ಸಮಾಜದ ವಿವಿಧ ವರ್ಗಗಳ ನಡುವೆ ವೈಷಮ್ಯ ಪ್ರಚೋದಿಸುವುದಕ್ಕೂ, ಕಾನೂನು ಮತ್ತು ಕ್ರಮ ಕದಡುವುದಕ್ಕೂ' ಕಾರಣವೆಂಬಂತೆ ಕಮ್ಯುನಿಸ್ಟರ ಮೇಲೆ ಆರೋಪಗಳನ್ನು ಹೊರಿಸಲಾಗಿತ್ತು (ಕಕ್ಕಿಲ್ಲಾಯ 2003: 46). ಯುದ್ಧ ಮುಗಿದಾಗ ಬಹುತೇಕ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಬಿಡುಗಡೆಯಾದರು. ಆದರೆ ಹೊರಗೆ ಕಮ್ಯುನಿಸ್ಟರನ್ನು ದ್ರೋಹ ಬಗೆದವರು ಎಂದು ಟೀಕಿಸಲಾಗುತ್ತಿತ್ತು. ಇದೊಂದು ವಿಪರ್ಯಾಸ. ಏಕೆಂದರೆ ಬಹುತೇಕ ಕಡೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಮ್ಯುನಿಸ್ಟರು ಬ್ರಿಟಿಷರಿಂದಲೂ ಮತ್ತು ರಾಜ ಪ್ರಭುತ್ವಗಳಿಂದಲೂ ಈ ಅವಧಿಯಲ್ಲಿ ಬಂಧಿಸಲ್ಪಟ್ಟಿದ್ದರು. ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿ ಭಾರತ ಕಮ್ಯುನಿಸ್ಟ್ ಪಕ್ಷವು ದೇಶ ಮಟ್ಟದಲ್ಲಿ ತೆಗೆದುಕೊಂಡ ನಿಲುವುಗಳು ಒಂದೇ ಆಗಿರಲಿಲ್ಲ. ಆರಂಭದ ನಿಲುವು ಒಂದು ರೀತಿಯದ್ದಾಗಿತ್ತು, ಮತ್ತು ಕ್ರಮೇಣ ಅಂತರರಾಷ್ಟ್ರೀಯ ಪರಿಸ್ಥಿತಿಗಳಲ್ಲಿ ಆದ ಬದಲಾವಣೆಯಿಂದಾಗಿ ನಿಲುವು ಬದಲಾಯಿತು. ಬದಲಾದ ನಿಲುವುಗಳನ್ನು ಕಮ್ಯುನಿಸ್ಟ್ ಕಾರ್ಯಕರ್ತರು ಮೇಲಿನಿಂದ ತಳಮಟ್ಟದವರೆಗೂ ಒಂದೇ ರೀತಿಯಲ್ಲಿ ಗ್ರಹಿಸಲು ಸಾಧ್ಯವಾಗಿಲ್ಲ. ಗ್ರಹಿಸಿದರೂ ಅದನ್ನು ಅದೇ ರೀತಿ ಅಳವಡಿಸಿಕೊಳ್ಳಲು ಪ್ರಾಯೋಗಿಕವಾಗಿ ಅಸಾಧ್ಯವಾಗಿರಬಹುದು. ಹೀಗಾಗಿ ಕಮ್ಯುನಿಸ್ಟರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹೆಚ್ಚಿನ ಕಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದನ್ನು ಮತ್ತು ಅದೇ ರೀತಿ ಟೀಕೆಗಳಿಗೆ ಒಳಪಟ್ಟಿರುವುದನ್ನು ಕಾಣಬಹುದು.

'ಸಾಮ್ರಾಜ್ಯಶಾಹಿ ಯುದ್ಧ'ದಿಂದ 'ಜನತಾ ಯುದ್ಧ'ಕ್ಕೆ ಬದಲಾದ ಸಿಪಿಐನ ನಿಲುವಿನಿಂದಾಗಿ ಕಮ್ಯುನಿಸ್ಟರು ಮತ್ತು ಅವರು ಜನಸಮೂಹಗಳಲ್ಲಿ ಹೊಂದಿದ್ದ ಸಂಪರ್ಕಗಳಲ್ಲಿ ಗೊಂದಲ ಉಂಟಾಯಿತು. ಸಿಪಿಐನ ಬದಲಾದ ನಿಲುವನ್ನು ಮನವರಿಕೆ ಮಾಡುವುದು ಸಂಘಟಕರಿಗೆ ಸವಾಲಿನ ಕೆಲಸವಾಗಿತ್ತು111. ಯುದ್ಧ–ವಿರೋಧಿ ಘೋಷಣೆಗಳ ಜೊತೆಯಲ್ಲಿ ಸಿಪಿಐ ಇರಲಿಲ್ಲ ಎಂಬ ಕಾರಣಕ್ಕೆ ದೇಶದಲ್ಲಿನ ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ರಾಷ್ಟ್ರೀಯವಾದಿ ಜನಸಮೂಹಗಳಿಂದ ಬೇರ್ಪಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಸಿಪಿಐಗೆ ಅದು ಅಗ್ನಿಪರೀಕ್ಷೆಯ ಕಾಲವಾಗಿತ್ತು. ರಾಷ್ಟ್ರೀಯ ಕಾಂಗ್ರೆಸ್, ಸಮಾಜವಾದಿ ಪಕ್ಷ, ಇತರೆ ಎಡ ಗುಂಪುಗಳು, ಮಾತ್ರವಲ್ಲ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಹಿಂದೂ ಮಹಾಸಭಾ (ಇವೆರೆಡೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲವಾದರೂ, ಕಮ್ಯುನಿಸ್ಟರನ್ನು ವಿರೋಧಿಸಬಹುದಾದ ಯಾವುದೇ ಅವಕಾಶವನ್ನು ಅವು ಕಳೆದುಕೊಳ್ಳುತ್ತಿರಲಿಲ್ಲ) ಸೇರಿದಂತೆ ಸಿಪಿಐ ವಿರುದ್ಧ ತೀವ್ರವಾದ ಟೀಕೆಗಳನ್ನು ಮಾಡಿದವು. ಸಿಪಿಐ ನಿಲುವಿನ ಬಗ್ಗೆ ಹೊರಗಡೆ ಚರ್ಚೆಗಳು ಮಾತ್ರವಲ್ಲದೆ, ಪಕ್ಷದೊಳಗೇ ಪರ–ವಿರೋಧಗಳು ಬೆಳೆದವು (ಇನುಗುರ್ತಿ ನರಸಯ್ಯ 236).

ಇಎಂಎಸ್‌ರವರು ಸಿಪಿಐನ ನಿಲುವು ಸರಿಯಾಗಿತ್ತು ಎಂಬುದನ್ನು ಸಮರ್ಥಿಸುತ್ತಲೇ, ಜನರ ಭಾವನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದ್ದ ಬಗ್ಗೆ ಮತ್ತು ಅದನ್ನು ಸರಿಯಾಗಿ ಜನರ ಮುಂದಿಡುವಲ್ಲಿ ಆಗಿರುವ

ವಿಫಲತೆಯನ್ನು ಒಪ್ಪುತ್ತಾರೆ (ಇಎಂಎಸ್ 1993: 773). ಇಂತಹುದೇ ನಿಲುವನ್ನು ಸಿಪಿಐನ ಅನೇಕ ಮುಖಂಡರು ನಂತರ ತಮ್ಮ ಬರಹಗಳಲ್ಲಿ ವ್ಯಕ್ತಪಡಿಸಿದರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ಸಮ್ಮಿಳಿತಗೊಳಿಸುವಲ್ಲಿ ಸಿಪಿಐ ವಿಫಲವಾಯಿತೆಂದು ಮತ್ತು ರಾಷ್ಟ್ರೀಯ ಹೋರಾಟವನ್ನು ಫ್ಯಾಸಿಸ್ಟ್-ವಿರೋಧಿ ಹೋರಾಟಕ್ಕೆ ಅಧೀನಗೊಳಿಸಿತೆಂದು ಪಿ.ಸುಂದರಯ್ಯ ಬರೆದರು[112].

ಇದೇನೇ ಆದರೂ ಸಿಪಿಐ ಈ ಅವಧಿಯಲ್ಲಿ ವ್ಯಾಪಕವಾದ ಚಟುವಟಿಕೆಗಳ ಕಾರಣದಿಂದ ಕಾರ್ಮಿಕರು ಮತ್ತು ರೈತರ ನಡುವೆ ತನ್ನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಂಡಿತು. ಸರ್ಕಾರದ ನೀತಿಗಳ ವಿರುದ್ಧ ಮತ್ತು ಕಾಂಗ್ರೆಸ್ ನಾಯಕರನ್ನು ಜೈಲಿನಲ್ಲಿಟ್ಟು ಫ್ಯಾಸಿಸ್ಟ್-ವಿರೋಧಿ ಯುದ್ಧ ಗೆಲ್ಲಲು ಸಾಧ್ಯವಿಲ್ಲ ಎಂಬ ನೆಲೆಯಲ್ಲಿ ಆಂದೋಲನಗಳನ್ನು ನಡೆಸಿತು. ಸಿಪಿಐ ಈ ಅವಧಿಯಲ್ಲಿ ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ಸಾಮಾಜಿಕ-ಸಾಂಸ್ಕೃತಿಕ ಸಂಘಟನೆಗಳು, ವಿದ್ಯಾರ್ಥಿ, ಯುವಜನ ಸಂಘಟನೆಗಳ ಮೂಲಕ ಜನ ಚಳುವಳಿಗಳನ್ನು ವಿಸ್ತರಿಸಿದರು. ಬಂಗಾಲದ ಕ್ಷಾಮ ಪರಿಹಾರ ಸಂಗ್ರಹ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಕಮ್ಯುನಿಸ್ಟ್ ಪಕ್ಷದ ನಿಲುವುಗಳನ್ನು ಜನರಿಗೆ ತಿಳಿಸಲು ಬಿಜಾಪುರದಂತಹ ಪ್ರದೇಶಗಳಲ್ಲಿ ಪತ್ರಿಕೆಗಳನ್ನು ಜನರ ನಡುವೆ ಮಾರಾಟ ಮಾಡುವುದು, ಅವರೊಂದಿಗೆ ಚರ್ಚಿಸುವುದನ್ನು ಮಾಡುತ್ತಿದ್ದರು. (ಉಪಾಧ್ಯಾಯ 1996: 55) ಯುದ್ಧಕ್ಕೆ ಬೆಂಬಲ ನೀಡುತ್ತಿದ್ದಾರೆ ಎಂಬ ಆರೋಪಗಳನ್ನು ಹೊರಿಸಿದರೂ ಜನರ ನಡುವೆ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರಿಂದ ಕಮ್ಯುನಿಸ್ಟರು ಅಂತಲ್ಲೆಲ್ಲಾ ಜನಪ್ರಿಯರಾದರು. ಇವೆಲ್ಲವುಗಳ ಪರಿಣಾಮವಾಗಿ ಸಿಪಿಐ ಬೆಳವಣಿಗೆ ಕಂಡಿತು. ಕ್ವಿಟ್ ಇಂಡಿಯಾ ಚಳುವಳಿ ಮತ್ತು ಸಿಪಿಐ ನಿಲುವಿನ ಹಿನ್ನೆಲೆಯಲ್ಲಿ ನಡೆದ ಎಲ್ಲಾ ಬೆಳವಣಿಗೆಗಳನ್ನು 1948 ರಲ್ಲಿ ನಡೆದ ಸಿಪಿಐನ 2 ನೇ ಅಧಿವೇಶನದಲ್ಲಿ ತೀವ್ರವಾದ ಸ್ವಯಂ-ವಿಮರ್ಶೆಗೆ ನಂತರ ಗುರಿಪಡಿಸಲಾಯಿತು.

❖ ❖ ❖

ಸ್ವಾತಂತ್ರ್ಯ-ಪೂರ್ವ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯು ಭೌಗೋಳಿಕವಾಗಿ ತೀವ್ರ ಮಿತಿಗಳಿಗೆ ಒಳಪಟ್ಟ ಆದರೆ ಗಮನಾರ್ಹವಾದ ಹೋರಾಟಗಳನ್ನು ರೂಪಿಸಿದ ಚಳುವಳಿಯಾಗಿದೆ. ಮಿತಿಯೇನೆಂದರೆ, ವಿಭಿನ್ನ ಆಡಳಿತ ಪ್ರದೇಶಗಳ ಕಾರಣದಿಂದ ಕಮ್ಯುನಿಸ್ಟ್ ಸಿದ್ಧಾಂತದ ಪ್ರಭಾವವು ಏಕರೂಪವಾಗಿ ಇಲ್ಲಿ ಪರಿಣಮಿಸಲಿಲ್ಲ. ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ಎಲ್ಲ ಹೋರಾಟಗಳೂ ಇದೇ ಸಮಸ್ಯೆಯನ್ನು ಎದುರಿಸಿವೆ. ಈ ವಿಚಾರದಲ್ಲಿ ದಕ್ಷಿಣ ಭಾರತದ ಇತರ ರಾಜ್ಯಗಳು ಸರಿಸುಮಾರು ಕರ್ನಾಟಕಕ್ಕಿಂತ ಉತ್ತಮ ಪರಿಸ್ಥಿತಿಯಲ್ಲಿದ್ದವು. ಮೈಸೂರು ಸಂಸ್ಥಾನವನ್ನು ಮತ್ತು ಕೊಡಗನ್ನು ಹೊರತುಪಡಿಸಿ ಕನ್ನಡ ಭಾಷಿಕರ ಉಳಿದ ಭಾಗಗಳು, ಅವುಗಳು ಒಳಪಟ್ಟಿದ್ದ ಪ್ರಾಂತ್ಯ ಅಥವಾ ಸಂಸ್ಥಾನಗಳ ಆಡಳಿತದಲ್ಲಿ ಪ್ರಭಾವಶಾಲಿ ವಿಭಾಗಗಳಾಗಿರಲಿಲ್ಲ. ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿದ್ದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಒಂದಕ್ಕೊಂದು ಸಂಬಂಧವಿಲ್ಲದ ಕನ್ನಡದ ಭೂಪ್ರದೇಶಗಳಾಗಿದ್ದವು. ಹೀಗಾಗಿ ಆ ಪ್ರಾಂತ್ಯದ ಕಮ್ಯುನಿಸ್ಟ್ ಚಳುವಳಿಯ ಜೊತೆಯಲ್ಲಿ ಸಮನ್ವಯತೆಯನ್ನು ಸಾಧಿಸಲು ಆಗಿಲ್ಲ. ದಕ್ಷಿಣ ಕನ್ನಡವು ಭೌಗೋಳಿಕವಾಗಿ ಕೇರಳದ ಮಲಬಾರಿನ ಪ್ರಭಾವಕ್ಕೆ ಒಳಗಾಗಿದೆ. ಆದರೆ ಕರ್ನಾಟಕದ ಇತರ ಭಾಗಗಳೊಂದಿಗೆ ಅದರ ಸಂಪರ್ಕಗಳು

ಅಷ್ಟಾಗಿ ಕಾಣುವುದಿಲ್ಲ. ಮದ್ರಾಸ್ ಪ್ರಾಂತ್ಯಕ್ಕೇ ಸೇರಿದ ಬಳ್ಳಾರಿಯು ಆಂಧ್ರದ ಗಡಿಯ ಕಾರಣಕ್ಕೆ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಪ್ರಭಾವದಲ್ಲಿ ಉಳಿದುಬಿಟ್ಟಿತ್ತು. ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ ನಿಜಾಂ ನಿರಂಕುಶಾಡಳಿತ ಮತ್ತು ಪ್ರಬಲ ಪಾಳೇಗಾರಿ ವ್ಯವಸ್ಥೆಯ ಕಾರಣಕ್ಕೆ ದೀರ್ಘ ಕಾಲ ಕಮ್ಯುನಿಸ್ಟ್ ಚಳುವಳಿಯ ಪ್ರಭಾವ ಅಲ್ಲಿ ಬೀರಲಿಲ್ಲ. ತೆಲಂಗಾಣ ಸಶಸ್ತ್ರ ಹೋರಾಟದ ಪ್ರಭಾವವು ಸ್ವಾತಂತ್ರ್ಯಾ ನಂತರದಲ್ಲಷ್ಟೇ ಅಲ್ಲಿ ಉಂಟಾಯಿತು. ಬಾಂಬೆಯು ಸ್ವಾತಂತ್ರ್ಯ ಹೋರಾಟದ ಪ್ರಮುಖ ಕೇಂದ್ರವಾಗಿದ್ದರಿಂದ ಬಾಂಬೆ ಕರ್ನಾಟಕ ಪ್ರದೇಶವು ಇನ್ನೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದೆ. ಐಎನ್‌ಸಿಗೆ ಪ್ರಮುಖವಾಗಿ ನಿಧಿಯನ್ನು ಒದಗಿಸುತ್ತಿದ್ದ ಭಾರತೀಯ ಬಂಡವಾಳದಾರರ ಕೇಂದ್ರವೂ ಬಾಂಬೆಯಾದ್ದರಿಂದ ಇಲ್ಲಿನ ಪ್ರಭಾವ ಭಿನ್ನವಾಗಿದೆ. ಹೀಗಾಗಿ ಸ್ವಾತಂತ್ರ್ಯ–ಪೂರ್ವ ಕರ್ನಾಟಕವು ವಿವಿಧ ಆಡಳಿತಗಳ ಕಾರಣದಿಂದ ಕಮ್ಯುನಿಸ್ಟ್ ಚಳುವಳಿಯು ಸಾಧಾರಣವಾಗಿ ಏಕೀಕೃತವಾದ ಪ್ರಭಾವ ಅಥವಾ ಪರಿಣಾಮವನ್ನು ಉಂಟು ಮಾಡಲು ಸಾಧ್ಯವಾಗಿಲ್ಲ. ಈ ಅಂಶ ಇತರೆ ಹೋರಾಟಗಳ ವಿಚಾರದಲ್ಲೂ ಸತ್ಯವಾಗಿದೆ. ಈ ಮಿತಿಗೆ ಒಳಪಟ್ಟು ಆರಂಭವಾದ ಕಮ್ಯುನಿಸ್ಟ್ ಚಳುವಳಿಯ ಆರಂಭ ಮತ್ತು ಬೆಳವಣಿಗೆಯನ್ನು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಒಂದೇ ರೂಪದಲ್ಲಿ ಮತ್ತು ಪ್ರಮಾಣದಲ್ಲಿ ಕಾಣಲು ಸಾಧ್ಯವಿಲ್ಲ.

ಈ ಕಾರಣಗಳಿಗಾಗಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಆರಂಭವು ಇಡೀ ಕನ್ನಡ ಮಾತನಾಡುವ ಪ್ರದೇಶಗಳನ್ನೆಲ್ಲಾ ಒಟ್ಟಾಗಿ ಗಮನದಲ್ಲಿಟ್ಟುಕೊಂಡು ಆರಂಭವಾಗಿಲ್ಲ. ದೇಶದಲ್ಲಿ 1920 ರ ದಶಕದಿಂದಲೇ ಕಮ್ಯುನಿಸ್ಟ್ ಚಟುವಟಿಕೆಗಳು ಆರಂಭವಾದರೂ, ಮೇಲೆ ಚರ್ಚಿಸಿದ ಕಾರಣಕ್ಕೆ ಕರ್ನಾಟಕದಲ್ಲಿ ಅದು ತಡವಾಗಿ ಆರಂಭವಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು ಕೇಂದ್ರಿತವಾಗಿ ಚಟುವಟಿಕೆಯಲ್ಲಿದ್ದ ಜನಜಾಗೃತಿ ಸಂಘವು ಕಮ್ಯುನಿಸ್ಟ್ ಪಕ್ಷದ ಬಹಿರಂಗ ರೂಪವಾಗಿತ್ತು. 1936 ರಲ್ಲಿ ಬೆಂಗಳೂರಲ್ಲಿ ಸಿಪಿಐನ ಘಟಕ ಆರಂಭವಾಯಿತು. ಇತರೆ ಪ್ರದೇಶಗಳ ಸಿಪಿಐನ ಆರಂಭ ಮತ್ತು ಬೆಳವಣಿಗೆಯಲ್ಲಿ ಇದರ ಪಾತ್ರವೇನೂ ಇಲ್ಲ. ಸಿಪಿಐನ್ನು ಸಂಘಟನಾತ್ಮಕವಾಗಿ ಬೆಳೆಸಲು ಇವರಿಗೆ ಯೋಜನೆಯೂ ಇರಲಿಲ್ಲವೆಂದು ಕಾಣುತ್ತದೆ. ಇದೇ ರೀತಿ ಕೆಜಿಎಫ್, ಮಂಗಳೂರು, ಕಾರವಾರ, ಮೈಸೂರು ಮುಂತಾದ ಕಡೆಗಳಲ್ಲಿ ಸಿಪಿಐನ ಘಟಕಗಳು ಆರಂಭವಾಗಿವೆ. ಇವೆಲ್ಲವೂ ಪ್ರತ್ಯೇಕವಾಗಿ ಘಟಿಸಿವೆ. ಈ ರೀತಿ ಆರಂಭವಾದ ಘಟಕಗಳಿಗೆ ಸಿಪಿಐ ಕೇಂದ್ರ ಸಮಿತಿಯ ಮಾರ್ಗದರ್ಶನ ಇದ್ದ ಬಗ್ಗೆ ಹೆಚ್ಚಿನ ಮಾಹಿತಿಗಳಿಲ್ಲ. ಅದೇನಿದ್ದರೂ ಸಿಪಿಐನ ಬಾಂಬೆ ಕೇಂದ್ರವು ಉಪಾಧ್ಯಾಯ ಸಹೋದರರನ್ನು ಬಾಂಬೆ ಕರ್ನಾಟಕ ಮತ್ತು ಬೆಂಗಳೂರು ಪ್ರದೇಶಗಳಿಗೆ ಕಳುಹಿಸಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ತೀರ್ಮಾನಿಸಿದ ನಂತರ ಈ ಕಣ್ಣೋಟ ಕಾಣುತ್ತದೆ. ಆ ನಂತರವಷ್ಟೇ ಕನ್ನಡ ಭಾಷಿಕ ಪ್ರದೇಶಗಳ ನಡುವೆ ಸಮನ್ವಯತೆಯನ್ನು ಸಾಧಿಸಿ ಸಿಪಿಐ ಕಟ್ಟುವ ಪ್ರಯತ್ನಗಳು ನಡೆದಿವೆ.

ಅಖಿಲ ಭಾರತ ಮಟ್ಟದಲ್ಲಿ 1936 ರ ನಂತರ ಸಂಯುಕ್ತ ರಂಗದ ಕಾರ್ಯಾಚರಣೆ ಮತ್ತು ಸಮೂಹ ಸಂಘಟನೆಗಳ ಮೂಲಕ ವಸಾಹತು–ವಿರೋಧಿ ರಾಷ್ಟ್ರೀಯ ಚಳುವಳಿ, ಬಂಡವಾಳಶಾಹಿ ಮತ್ತು ಜಮೀನ್ದಾರಿ ಶೋಷಣೆ ವಿರುದ್ಧ ಸಿಪಿಐ ತೀವ್ರವಾದ ಚಟುವಟಿಕೆಗಳನ್ನು ನಡೆಸಿತು. ಇದರ ಪರಿಣಾಮ ಕರ್ನಾಟಕದಲ್ಲೂ ಎಐಟಿಯುಸಿ, ಎಐಕೆಎಸ್

ಮತ್ತು ಎಐಎಸ್‌ಎಫ್‌ನ ಹೋರಾಟಗಳು ವಿವಿಧ ಸ್ಥರದಲ್ಲಿ ನಡೆದಿವೆ. ಕಾರ್ಮಿಕ ಸಂಘಟನೆಯು ಬೆಂಗಳೂರು, ಕೆಜಿಎಫ್, ಮಂಗಳೂರು, ಭದ್ರಾವತಿ ಮುಂತಾದ ಪ್ರದೇಶಗಳಲ್ಲಿ ಸಕ್ರಿಯವಾಗಿತ್ತು ಮತ್ತು ಹಲವು ಗಮನಾರ್ಹ ಹೋರಾಟಗಳನ್ನು ನಡೆಸಿತು. ಕೆಜಿಎಫ್‌ನಲ್ಲಿ ಆರು ಕಾರ್ಮಿಕರು ಪೋಲೀಸರ ಗೋಲೀಬಾರಿನಿಂದ ಸಾವನ್ನಪ್ಪಿದರು. ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ವೇತನ ಹೆಚ್ಚಳ, ಸಾಮಾಜಿಕ ಭದ್ರತೆ, ಕೆಲಸದಲ್ಲಿ ಗೌರವ ಮತ್ತು ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡುವ ಕಾನೂನು ಇಂತಹ ಪ್ರಶ್ನೆಗಳು ಮುಖ್ಯವಾಗಿದ್ದವು. ಕಿಸಾನ್ ಸಭಾ ಹೋರಾಟಗಳು ದಕ್ಷಿಣ ಕನ್ನಡ ಮತ್ತು ಬಾಂಬೆ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ನಡೆದವು. ಉಲ್ಲೇಖಾರ್ಹ ಹೋರಾಟಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದವು. ಗೇಣಿ, ಗೇಣಿ ದರಗಳು, ಜಮೀನ್ದಾರರ ದೌರ್ಜನ್ಯಗಳು, ಕಿರುಕುಳಗಳು ಮತ್ತು ಸ್ವಲ್ಪ ಮಟ್ಟಿಗೆ ಭೂಮಿ ಪ್ರಶ್ನೆ ಅಂದಿನ ಪ್ರಮುಖ ಬೇಡಿಕೆಗಳಾಗಿದ್ದವು. ಕಮ್ಯುನಿಸ್ಟ್ ಪಕ್ಷದ ಸಂಘಟನಾ ತತ್ವವಾಗಿ 'ರೈತ–ಕಾರ್ಮಿಕ' ಸಖ್ಯತೆ ಪ್ರಶ್ನೆಯು ಸಣ್ಣ ಪ್ರಮಾಣದಲ್ಲಿ ಕೋಲಾರ ಜಿಲ್ಲೆ, ದಕ್ಷಿಣ ಕನ್ನಡ ಮತ್ತು ಬಿಜಾಪುರಗಳಲ್ಲಿ ಜಾರಿಗೊಂಡಿದ್ದನ್ನು ಕಾಣಬಹುದು. ವಿದ್ಯಾರ್ಥಿ ಸಂಘಟನೆ ಎಐಎಸ್‌ಎಫ್ ಬಹುತೇಕ ಬೆಂಗಳೂರು, ಮೈಸೂರು ಮತ್ತು ಮಂಗಳೂರಿಗೆ ಸೀಮಿತವಾಗಿತ್ತು. ಕ್ವಿಟ್ ಇಂಡಿಯಾ, ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಎಐಎಸ್‌ಎಫ್ ಕ್ರಿಯಾಶೀಲವಾಗಿದ್ದನ್ನು ಗಮನಿಸಬಹುದು. ಪ್ರಗತಿಪರ ಬರಹಗಾರರ ಸಂಘಟನೆಯು ಪ್ರಭಾವಶಾಲಿಯಾಗಿ ಇರದಿದ್ದರೂ 1944 ರಲ್ಲಿ ಮ್ಯಾಕ್ಸಿಂ ಗಾರ್ಕಿ ಕುರಿತ ಬರಹಗಳು ಪ್ರಕಟವಾದವು ಮತ್ತು ಸಮಾಜವಾದಿ ಚಿಂತನೆಗಳು ಪ್ರಕಟಗೊಳ್ಳಲು ಆರಂಭಿಸಿದವು. ಮೈಸೂರು ಮತ್ತು ಬೆಂಗಳೂರಿನಲ್ಲಿ ಇಪ್ಟಾದ ಚಟುವಟಿಕೆಗಳು ನಡೆದವು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಿಪಿಐನ ಬದಲಾದ ನಿಲುವು ಅಲ್ಪ ಪ್ರಮಾಣದ ಅತೃಪ್ತಿಯನ್ನು ಉಂಟು ಮಾಡಿದ್ದು ನಿಜವಾದರೂ, ಜನಸಮೂಹಗಳ ನಡುವೆ ಕಮ್ಯುನಿಸ್ಟರು ಕ್ರಿಯಾಶೀಲರಾಗಿದ್ದರು. ಜಾಗತಿಕ ಪರಿಸ್ಥಿತಿಗಳ ಕಾರಣಕ್ಕೆ ಕೇಂದ್ರ ಮಟ್ಟದಲ್ಲಿ ತೆಗೆದುಕೊಂಡ ಭಿನ್ನ ಸೈದ್ಧಾಂತಿಕ ನಿಲುವು ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಅದೇ ರೀತಿಯಲ್ಲಿ ಜಾರಿಗೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ಹೀಗೆ ಒಟ್ಟಾರೆಯಾಗಿ ಗಮನಿಸಿದಾಗ ಚದುರಿದ ರೀತಿಯ ಕಮ್ಯುನಿಸ್ಟ್ ಕ್ರಿಯಾಶೀಲತೆ ಮತ್ತು ವಿಸ್ತರಣೆ ಈ ಅವಧಿಯ ಲಕ್ಷಣವಾಗಿ ಕಂಡುಬರುತ್ತದೆ.

❖ ❖ ❖

ಟಿಪ್ಪಣಿಗಳು1

1. ಇವರು ಮೂಲತಃ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಹುದುಕೇರಿ ಗ್ರಾಮದವರು. ಬಾಲ್ಯದಲ್ಲೇ ವಿದ್ಯಾಭ್ಯಾಸ ತ್ಯಜಿಸಿ ಅಸಹಕಾರ ಚಳುವಳಿಗೆ ಧುಮುಕಿದರು. ಕಾಂಗ್ರೆಸ್‌ನ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಗಂಧದ ಮರ ಕಡಿದು ಅರಣ್ಯ ಸತ್ಯಾಗ್ರಹ ನಡೆಸಿದರೆಂಬ ಕಾರಣಕ್ಕೆ 1932 ರ ಫೆಬ್ರವರಿ 19 ರಂದು ಕಾರವಾರ ಜೈಲಿಗೆ ಕಳುಹಿಸಲ್ಪಟ್ಟರು. ಅಲ್ಲಿಂದ ವಿಜಾಪುರ ಜೈಲು ಕ್ಯಾಂಪಿಗೆ ಕಳುಹಿಸಲಾಗಿತ್ತು. ಅಲ್ಲಿರುವಾಗ ಅವರು ಜಾರ್ಜ್ ಬರ್ನಾರ್ಡ್ ಷಾ ಅವರ 'ಇಂಟೆಲಿಜೆಂಟ್ ವುಮೆನ್ಸ್ ಗೈಡ್ ಟು ಸೋಷಿಯಲಿಸಂ' ಪುಸ್ತಕ ಓದಿದರು. ಇದರಿಂದ ಸಮಾಜವಾದದ ಕಡೆಗೆ ಆಕರ್ಷಿತರಾದರು. 1933 ರಲ್ಲಿ ವಿರಾಜಪೇಟೆಯಲ್ಲಿ ವೈಯುಕ್ತಿಕ ಸತ್ಯಾಗ್ರಹ ನಡೆಸಿದರೆಂದು ಕಣ್ಣಾನೂರು ಜೈಲಿನಲ್ಲಿ ಆರು ತಿಂಗಳ ಶಿಕ್ಷೆ ಅನುಭವಿಸಿದರು. ಜೈಲಿನಲ್ಲಿ ಇಎಂಎಸ್ ನಂಬೂದಿರಿಪಾದ್ ಸಂಪರ್ಕಕ್ಕೆ ಬಂದರು. ಹಿಂದಿ ಪ್ರಚಾರದಲ್ಲಿ ಆಸಕ್ತಿ ವಹಿಸಿ ಕಾಶಿ ವಿದ್ಯಾಪೀಠಕ್ಕೆ ಅಧ್ಯಯನಕ್ಕೆಂದು ಹೋದರು. ಅಲ್ಲಿದ್ದಾಗ 1936 ರ ಮಾರ್ಚ್‌ನಲ್ಲಿ ನಡೆದ ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂಸೇವಕರಾಗಿ ಹೋಗಿದ್ದಾಗ, ಇವರಿಗೆ ದೊರೆತ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'ದ ಬಹಿಷ್ಕೃತ ಪ್ರತಿಗಳನ್ನು ಅಲ್ಲಿ ಗುಪ್ತವಾಗಿ ಹಂಚಿಕೆ ಮಾಡಿದರು (ಶಂಕರನಾರಾಯಣ ರಾವ್ 1989: 46–51). ಅದರ ಒಂದು ಪ್ರತಿಯನ್ನು ಸಿ.ಎಂ.ಪೂಣಚ್ಚವರಿಗೂ ಕಳುಹಿಸಿದ್ದರು (ಭೀಮಯ್ಯ 2009: 15). ಸುಮಾರು ಹತ್ತು ಬಾರಿ ಜೈಲುವಾಸ ಕಂಡವರು ಮೊಣ್ಣಯ್ಯ. ಗಡೀಪಾರು ಶಿಕ್ಷೆಗೆ ಒಳಗಾಗಿ, ಹುಬ್ಬಳ್ಳಿಗೆ ಹೋದರು. ಅಲ್ಲಿಂದ ಭೂಗತ ಕೆಲಸಗಳನ್ನು ಮಾಡಲು ಹೈದರಾಬಾದು, ಗುಲ್ಬರ್ಗಕ್ಕೆ ಹೋಗಿ, ಅಲ್ಲಿಂದ ತಪ್ಪಿಸಿಕೊಂಡು ಬಾಂಬೆಗೆ ಹೋದರು. ಅಜಯ್ ಘೋಷ್, ಎನ್.ಎಲ್.ಉಪಾಧ್ಯಾಯ ಅವರ ಸಲಹೆ ಮೇರೆಗೆ ಮಾರ್ಕ್ಸ್‌ವಾದದ ಅಧ್ಯಯನ ಮಾಡಿದರು. ಗಡೀಪಾರು ಅದೇಶ ಉಲ್ಲಂಘಿಸಿ ಹೋರಾಟಗಳನ್ನು ನಡೆಸಿದ್ದರಿಂದ 1939 ರಲ್ಲಿ ಮೊದಲಿಗೆ ಮೈಸೂರು ಮತ್ತು ನಂತರ ಬೆಂಗಳೂರು ಜೈಲಿಗೆ ದೂಡಲ್ಪಟ್ಟರು. ಅಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕೆಲಸಗಳನ್ನು ಮಾಡಿದ್ದಕ್ಕಾಗಿ ಇವರನ್ನು ಕೆ.ಜಿ.ಎಫ್. ಜೈಲಿಗೆ ಹಾಕಲಾಗಿತ್ತು. ಕೆ.ಜಿ.ಎಫ್. ಜೈಲಿನಲ್ಲಿ ಲಕ್ಷ್ಮಣ ಮೊದಲಿಯಾರ್ ಪರಿಚಯವಾಗಿ ಅವರ ಮೂಲಕ ಗುಪ್ತವಾಗಿ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿದರು.

2. ಡಾ.ದುರ್ಗಾಪ್ರಸಾದ್, ಚಕ್ಕೇರ ಬಿದ್ದಪ್ಪ ಮೊಣ್ಣಯ್ಯ – ಈ ಸ್ವಾತಂತ್ರ್ಯ ಹೋರಾಟಗಾರ ಮತ್ತು ಕಮ್ಯುನಿಸ್ಟನ ಅರಿಯದ ಮುಖ, ಕೊಡಗು ಸಮಾಚಾರ, 27–11–2002, ಪು. 6.

3. ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ಕೆ.ಶ್ರೀನಿವಾಸಮೂರ್ತಿಯವರು ರಾಮಸ್ವಾಮಿಯವರ ಸ್ನೇಹಿತ ಮತ್ತು ಅನುಯಾಯಿ. ಜನಜಾಗೃತಿ ಸಂಘದ ಸದಸ್ಯರಾಗಿದ್ದ ಇವರು ಸಮಾಜವಾದಿ ಒಲವುಳ್ಳವರಾಗಿದ್ದು ಕಮ್ಯುನಿಸ್ಟರೊಂದಿಗೆ ಸಂಪರ್ಕದಲ್ಲಿದ್ದರು. ನೋಡಿ: 'ನೋಟ್ ರಿಸೀವ್ಡ್ ಫ್ರಂ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರಿಗಾರ್ಡಿಂಗ್ ಪೊಲಿಟಿಕಲ್ ಎಜಿಟೇಟರ್ಸ್ ಇನ್ ದಿ ಸ್ಟೇಟ್. ಸಿಬಿ 15–37–210, ಪೇಜ್ 5 ಆಫ್ ಲಿಸ್ಟ್ ಆಫ್ ಸಿಂಪಥೈಸರ್ಸ್ ಅಂಡ್ ಹೆಲ್ಪರ್ಸ್ ಆಫ್ ಕಾಂಗ್ರೆಸ್, ಕೆಎಸ್ಎ.

4. ಅನಂತಸುಬ್ಬರಾವ್ ಅವರು ಮುಂದೆ ಕನ್ನಡ ಟೈಪ್‌ರೈಟರ್‌ಗೆ 'ಅನಂತ ಕೀಬೋರ್ಡ್' ಎಂಬ ಪದ್ಧತಿಯನ್ನು ರೂಪಿಸಿ ಪ್ರಸಿದ್ಧರಾದವರು. ಆಗ ತಾಯಿನಾಡು ದಿನಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದರು.

5. ಜಾನಕಿ ನಾಯರ್, ಕಂಟೆಂಡಿಂಗ್ ಐಡಿಯಾಲಜೀಸ್? ದಿ ಮಾಸ್ ಅವೇಕನರ್ಸ್ ಯೂನಿಯನ್ ಅಂಡ್ ದಿ ಕಾಂಗ್ರೆಸ್ ಇನ್ ಮೈಸೂರ್, 1936–1942, ಪು. 42, ಸೋಷಿಯಲ್ ಸೈಂಟಿಸ್ಟ್, ಸಂಪುಟ 22, ನಂ.7–8, ಜುಲೈ–ಆಗಸ್ಟ್ 1994.

6. ಎನ್.ಡಿ.ಶಂಕರ್ 1910 ರಲ್ಲಿ ನಾಗಮಂಗಲದ ಶ್ಯಾನುಭೋಗರ ಕುಟುಂಬದಲ್ಲಿ ಹುಟ್ಟಿ, ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಓದಿ ಶಿಕ್ಷಕರಾದರು. ನಾಗರಿಕ ಕಾನೂನು ಭಂಗ ಚಳುವಳಿಯ ಪ್ರಭಾವಕ್ಕೊಳಗಾಗಿ ಡಾ.ಹರ್ಡೀಕರ್ ನಾಯಕತ್ವದಲ್ಲಿ ಹುಬ್ಬಳ್ಳಿಯಲ್ಲಿ ತರಬೇತಿ ಪಡೆದು, ಉತ್ತರ ಕನ್ನಡದ ಯಲ್ಲಾಪುರದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾಗ ಪೊಲೀಸರು ಇವರನ್ನು ಬಂಧಿಸಿ ಐದು ತಿಂಗಳ ಸಜಾ ನಂತರ ಮೈಸೂರಿಗೆ ಗಡೀಪಾರು ಮಾಡಿದರು. 1937 ರಲ್ಲಿ ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದರು. ಸಮಾಜವಾದ ಮತ್ತು ಜನಾಂದೋಲನಗಳಲ್ಲಿ ನಂಬಿಕೆಯಿದ್ದ ಗೆಳೆಯರು ಸೇರಿ ಜನಜಾಗೃತಿ ಸಂಘವನ್ನು ಸ್ಥಾಪಿಸಿದವರಲ್ಲಿ ಇವರೂ ಒಬ್ಬರಾದರು. ಎನ್.ಡಿ.ಶಂಕರ್ ಎಐಸಿಸಿ ಸದಸ್ಯರಾಗಿದ್ದ ಸಂದರ್ಭದಲ್ಲಿ ಅವರಿಗೆ ಸಿಕ್ಕ ಸಂಪರ್ಕಗಳ ಕಾರಣದಿಂದ ಅವರು ಕಮ್ಯುನಿಸ್ಟರಾದರೆಂದು ಹೇಳಲಾಗಿದೆ. 1936 ರಲ್ಲಿ ಕಮ್ಯುನಿಸ್ಟ್ ಪಕ್ಷದ ಮೊದಲ ಘಟಕ ಪ್ರಾರಂಭವಾಗಿದ್ದ ಬಗ್ಗೆ ಶಂಕರ್ ಅವರಿಗೆ ತಿಳಿದಿರಲಿಲ್ಲವೆಂದು ಸಿ.ಬಿ.ಮೊಣ್ಣಯ್ಯನವರು ಹೇಳುತ್ತಾರೆ. ಆದರೆ ಶಂಕರ್ ಅವರ ಮಿತ್ರರಾಗಿದ್ದ ಡಿ.ಆರ್.ಕೃಷ್ಣಮೂರ್ತಿಯವರು ತಮಗೆ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಕುರಿತ ಲೇಖನದ ರಹಸ್ಯ ಪ್ರತಿಯೊಂದನ್ನು ಶಂಕರ್ ನೀಡಿದ್ದ ಬಗ್ಗೆ ಬರೆದಿದ್ದಾರೆ. (ಶಂಕರನಾರಾಯಣ ರಾವ್ 1989: 16). ಮೊದಲ ಕಮ್ಯುನಿಸ್ಟ್ ಘಟಕ ಆರಂಭವಾದಾಗ ಎನ್.ಡಿ.ಶಂಕರ್ ಕಮ್ಯುನಿಸಂ ಬಗ್ಗೆ ತಿಳಿದಿದ್ದಿರಬಹುದು, ಆದರೆ ಪ್ರಾಯೋಗಿಕವಾಗಿ ಘಟಕದ ಸದಸ್ಯರಾಗಿರದೇ ಇದ್ದಿರಬಹುದು.

7. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 45.

8. ಈ ಸಭೆಯ ಅಧ್ಯಕ್ಷತೆಯನ್ನು ಎನ್.ಬಾಲಕೃಷ್ಣಯ್ಯ, ಎಂ.ಎಲ್.ಸಿ. ವಹಿಸಿದ್ದರು. ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಅಧ್ಯಕ್ಷರಾದ ಪಿ.ಸುಬ್ಬರಾಮ ಸೆಟ್ಟಿ, ಲವಂಗ ಭರತಸ್ವಾಮಿ, ಮಿರ್ಜಾ ಹಾಲ್ ಮಾಲೀಕರಾದ ಮಿರ್ಜಾ ಅಜೀಜುಲ್ಲಾ ಬೇಗ್, ಹೊಸಹಳ್ಳಿ ವೀರಣ್ಣಗೌಡ, ವೀರಕೇಸರಿ ಸಂಪಾದಕರಾದ ಸೀತಾರಾಮಶಾಸ್ತ್ರಿ, ಕೆ.ಹೆಚ್.ಹನುಮಂತಪ್ಪ ಮುಂತಾದವರು ಭಾಗವಹಿಸಿದ್ದರು.

9. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು 46.

10. ಇವರು ನಂತರ ಬೆಂಗಳೂರಿನಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು. ಇಂದು ಇದು ಬೃಹತ್ ಶಿಕ್ಷಣ ಸಮೂಹವಾಗಿ ಬೆಳೆದಿದೆ.

11. **ನೋಟ್ ಆನ್ ದಿ ಆಕ್ಟಿವಿಟೀಸ್ ಆಫ್ ಮಾಸ್ ಅವೇಕರ್ಸ್ ಯೂನಿಯನ್, ಬೆಂಗಳೂರು, 15 ಆಫ್** 1937, 19–21, ಕಾನ್ಫಿಡೆನ್ಶಿಯಲ್ ಬ್ರಾಂಚ್, ಪು. 3, ಕೆಎಸ್ಎ. ಮೊಣ್ಣಯ್ಯನವರು ಅಷ್ಟೊತ್ತಿಗಾಗಲೇ ಬ್ರಿಟಿಷರ ವಿರುದ್ಧದ ಹೋರಾಟಗಳಲ್ಲಿ ಜೈಲುವಾಸವನ್ನು ಅನುಭವಿಸಿದ್ದರು ಮತ್ತು ಗಡೀಪಾರು ಶಿಕ್ಷೆಗೂ ಒಳಗಾಗಿದ್ದರು. ಆದ್ದರಿಂದ ಬ್ರಿಟಿಷರು ಮತ್ತು ಮೈಸೂರು ಸರ್ಕಾರ ಅವರನ್ನು 'ರಾಜಕೀಯ ಅಪರಾಧಿ' ಎಂದು ತೀರ್ಮಾನಿಸಿತ್ತು.

12. ಮನೆ ಕಂದಾಯದ ವಿರುದ್ಧ ಪ್ರತಿಭಟನೆಗಳನ್ನು ನಿಷೇಧಿಸಿ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಆದೇಶ ಹೊರಡಿಸಿದ್ದನ್ನು ವಿರೋಧಿಸಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರತಿಭಟನೆಗಳಾದವು. ಆಗ ನಾಗರಿಕ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದಿಟ್ಟುಕೊಂಡು 'ಸಿವಿಲ್ ಲಿಬರ್ಟೀಸ್ ಯೂನಿಯನ್' ರಚಿಸಲು ತೀರ್ಮಾನಿಸಿದರು. ಇದಕ್ಕೆ ಖ್ಯಾತ ನ್ಯಾಯವಾದಿ ಎಲ್.ಎಸ್.ರಾಜು ಅಧ್ಯಕ್ಷರಾಗಿದ್ದರು – ಭೀಮಯ್ಯ 2009: 18.

13. ಈ ಬಗ್ಗೆ ಜನಜಾಗೃತಿ ಸಂಘದ ಕಾರ್ಯದರ್ಶಿ ಕೆ.ಶ್ರೀನಿವಾಸಮೂರ್ತಿ ಅವರು ಹೊರಡಿಸಿದ ಹೇಳಿಕೆಯನ್ನು ನೋಡಿ. ಎನ್ ಅಪೀಲ್ ಫಾರ್ ಡೆಮಾಕ್ರಟಿಕ್ ಯುನೈಟೆಡ್ ಫ್ರಂಟ್, 22–5–37, ಸಿಬಿ ಫೈಲ್ಸ್, ಕೆಎಸ್ಎ.

14. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 46 ರಲ್ಲಿ ಉದ್ಧೃತ, ಮಾಸ್ ಅವೇಕರ್ಸ್ ಯೂನಿಯನ್, 20/7/1937 ರಿಂದ 14/7/1939 ರವರೆಗೆ, ಸಿಬಿ ಫೈಲ್ಸ್, ಕೆಎಸ್ಎ.

15. ಕಾಂಗ್ರೆಸಿನ ನಾಯಕರಲ್ಲಿ ಜವಾಬ್ದಾರಿ ಸರ್ಕಾರದ ವಿಚಾರ ಪ್ರಮುಖವಾಗಿದ್ದರೂ ಸಹ, ಅದರೊಳಗಿನ ಯುವ ಗುಂಪು ರಾಷ್ಟ್ರೀಯ ಹೋರಾಟದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದರು. ಎಂ.ಎನ್.ಜೋಯಿಸ್, ಹೆಚ್.ಸಿ.ಬೋರಣ್ಣಗೌಡ, ಕೆ.ಎಸ್.ಕುಮಾರನ್, ಹೆಚ್.ಎಸ್.ದೊರೆಸ್ವಾಮಿ, ಟಿ.ಕೆ.ಗಂಗಿರೆಡ್ಡಿ, ಕೆ.ಆರ್.ಶ್ರೀಧರಮೂರ್ತಿ, ಎಂ.ಎನ್.ಸೀತಾರಾಮಯ್ಯ ಮುಂತಾದವರು ಸೇರಿ ಪ್ರಜಾಪಕ್ಷ ಎಂಬ ಒಂದು ಸಣ್ಣ ಗುಂಪನ್ನು 1934 ರಲ್ಲಿ ಕಾಂಗ್ರೆಸ್‌ನೊಳಗೆ ಪ್ರಾರಂಭಿಸಿದರು. ಇವರು ಪೌರವಾಣಿ ಎಂಬ ವಾರಪತ್ರಿಕೆಯನ್ನೂ ಆರಂಭಿಸಿದರು. (ಗೆಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ಸ್ಟೇಟ್, ಬೆಂಗಳೂರು ಡಿಸ್ಟ್ರಿಕ್ಟ್, ಪ್ರಧಾನ ಸಂಪಾದಕರು: ಸೂರ್ಯನಾಥ್ ಯು ಕಾಮತ್, ಕರ್ನಾಟಕ ಸರ್ಕಾರದ ಪ್ರಕಟಣೆ, 1990, ಪು. 111).

16. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 46 ರಲ್ಲಿ ಉದ್ಧೃತ, ಸಿಎಸ್‌ಪಿ, 3/3/1937 ರಿಂದ 3/1/1939 ರವರೆಗೆ, ಸಿಬಿ ಫೈಲ್ಸ್, ಕೆಎಸ್ಎ.

17. ಅದೇ., ಪು. 47 ರಲ್ಲಿ ಉದ್ಧೃತ, ಕಲೆಕ್ಷನ್ ನಂ.39 ಆಫ್ 40–41, ಸಿಬಿ 63–40–21, 24 ಮತ್ತು 25, ಸಿಬಿ ಫೈಲ್ಸ್, ಕೆಎಸ್ಎ.

18. ಚೆಂಡೂರು ಮೂಲದ ಇವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಯಾಗಿದ್ದರು. ಇಂಟರ್‌ಮೀಡಿಯೆಟ್ ಓದಿದ್ದ ಇವರು ಆಸ್ತಿವಂತರಾಗಿರಲಿಲ್ಲ. ಅತೀವ ಬುದ್ಧಿವಂತರಾಗಿದ್ದ ಇವರು ತಮ್ಮ ಜೀವನಕ್ಕಾಗಿ ಬಸವನಗುಡಿಯಲ್ಲಿ ಹಾಲು ಪೂರೈಕೆ ವ್ಯಾಪಾರ ಮಾಡುತ್ತಿದ್ದರು. ಹಲವು ಬಾರಿ ಜೈಲು ವಾಸವನ್ನು ಅನುಭವಿಸಿದ್ದರು. ವ್ಯಾಪಕವಾದ ಓಡಾಟದಿಂದಾಗಿ ಕ್ರಾಂತಿಕಾರಿ ವಿಚಾರಗಳ ಸಂಪರ್ಕಕ್ಕೆ ಬಂದಿದ್ದರು. ಕಮ್ಯುನಿಸಂನ ಪರವಾಗಿದ್ದರು. ನಾಗರಿಕ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರ ಪತ್ನಿ ಸಹ ರಾಜಕೀಯ ಬಂಧಿಯಾಗಿದ್ದರು. ಟೊಬ್ಯಾಕೊ ಫ್ಯಾಕ್ಟರಿ ಮುಷ್ಕರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ('ನೋಟ್ ರಿಸೀವ್ಡ್ ಫ್ರಂ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ರಿಗಾರ್ಡಿಂಗ್ ಪೊಲಿಟಿಕಲ್ ಎಜಿಟೇಟರ್ಸ್ ಇನ್ ದಿ ಸ್ಟೇಟ್. ಸಿಬಿ 15–37–210, ಪೇಜ್ 2 ಆಫ್ ಲಿಸ್ಟ್ ಆಫ್ ಆಕ್ಟೀವ್ ಪೊಲಿಟಿಕಲ್ ಲೀಡರ್ಸ್ ಆಫ್ ಬೆಂಗಳೂರು ಸಿಟಿ, ಕೆಎಸ್ಎ.) ಮುಂದಕ್ಕೆ ರಾಯಿಸ್ಟರಾದ ಇವರು ರ್‍ಯಾಡಿಕಲ್ ಡೆಮಾಕ್ರಟಿಕ್ ಪಾರ್ಟಿಯ ಕಾರ್ಯದರ್ಶಿಯಾಗಿದ್ದರು.

19. ಬೆಂಗಳೂರು ಮತ್ತು ಹಾಸನದಲ್ಲಿ ಪಿತ್ರಾರ್ಜಿತ ಆಸ್ತಿಯನ್ನು ಹೊಂದಿದ್ದ ಇವರು ಇಂಟರ್‌ಮೀಡಿಯೆಟ್ ಓದಿದ್ದರು. ನಾಗರಿಕ ಅಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿದ್ದರು. ಭಾರತದಾದ್ಯಂತ ಸಂಚರಿಸಿದ್ದ ಇವರು ಕಾಂಗ್ರೆಸ್ ಮತ್ತು ಸಮಾಜವಾದಿ ಮುಖಂಡರೊಂದಿಗೆ ಸಂಪರ್ಕ ಗಳಿಸಿದರು. ಬಾಂಬೆಯಲ್ಲಿ ಎರಡು ವರ್ಷ ಇದ್ದ ಸಂದರ್ಭದಲ್ಲಿ ಕಾರ್ಮಿಕರು ಮತ್ತು ಸಮಾಜವಾದದ ಬಗ್ಗೆ ಆಸಕ್ತಿ ಬೆಳೆಸಿಕೊಂಡರು ಮತ್ತು ಇದರ ಸಾಹಿತ್ಯ ಪ್ರಸಾರದಲ್ಲಿ ತೊಡಗಿಸಿಕೊಂಡರು. ವಿದ್ಯಾರ್ಥಿಗಳ ನಡುವೆ ಪ್ರಭಾವಶಾಲಿಯಾಗಿದ್ದರು. ಉತ್ತಮ ವಾಗ್ಮಿಯಾಗಿದ್ದರು. ಪೊಲೀಸರನ್ನು ಕಣ್ತಪ್ಪಿಸಿ ಕೆಲಸ ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದರು. ಜನ ಜಾಗೃತಿ ಸಂಘದಲ್ಲಿ ಪದಾಧಿಕಾರಿಯಲ್ಲದಿದ್ದರೂ ಅದರ ಸಲಹಾಗಾರರಾಗಿದ್ದರು. ನೋಡಿ: 'ನೋಟ್ ರಿಸೀವ್ಡ್ ಫ್ರಂ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರಿಗಾರ್ಡಿಂಗ್ ಪೊಲಿಟಿಕಲ್ ಎಜಿಟೇಟರ್ಸ್ ಇನ್ ದಿ ಸ್ಟೇಟ್. ಸಿಬಿ 15–37–210, ಪೇಜ್ 4 ಆಫ್ ಲಿಸ್ಟ್ ಆಫ್ ಆಕ್ಟೀವ್ ಪೊಲಿಟಿಕಲ್ ಲೀಡರ್ಸ್ ಆಫ್ ಬೆಂಗಳೂರು ಸಿಟಿ, ಕೆಎಸ್ಎ.

20. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 48 ರಲ್ಲಿ ಉದೃತ, ಪ್ರಜಾಸತ್ತಾತ್ಮಕ ಸಂಯುಕ್ತ ರಂಗವನ್ನು ಕೋರಿ ಕರಪತ್ರ, ಸಿಎಸ್‌ಪಿ, 3/31937 ರಿಂದ 3/1/39, ಪೊಲೀಸ್, ಕೆಎಸ್ಎ.

21. ಅದೇ., ಪು. 48 ರಲ್ಲಿ ಉದೃತ, ಪ್ರಜಾಸತ್ತಾತ್ಮಕ ಸಂಯುಕ್ತ ರಂಗವನ್ನು ಕೋರಿ ಕರಪತ್ರ, ಸಿಎಸ್‌ಪಿ, 3/31937 ರಿಂದ 3/1/39, ಪೊಲೀಸ್, ಕೆಎಸ್ಎ.

22. ಎಫ್.ಕೆ.ನಾರಿಮನ್ ಅವರು 1937 ರಲ್ಲಿ ಮೈಸೂರಿನಲ್ಲಿ ನಡೆದ ವಕೀಲರ ಸಮ್ಮೇಳನದ ಸಲುವಾಗಿ ಬಂದಿದ್ದರು. ಮೈಸೂರಿನ ಜನಜಾಗೃತಿ ಸಂಘದ ಮುಖಂಡರಾದ ಸೋಮಸುಂದರ ಶರ್ಮ, ರಾಜಶೇಖರ್ ಮುಂತಾದವರು ಅವರೊಂದಿಗೆ ಮಾತನಾಡಿ ಬೆಂಗಳೂರಿನಲ್ಲಿ ಒಂದು ಭಾಷಣ ಕಾರ್ಯಕ್ರಮಕ್ಕೆ ಒಪ್ಪಿಸಿದರು. ಅದು ಜನಜಾಗೃತಿ ಸಂಘ ಮತ್ತು ಯುವ ಕಾಂಗ್ರೆಸ್ ವಿಭಾಗ ಸೇರಿ ಬೆಂಗಳೂರಿನ ಬನಪ್ಪಾ ಪಾರ್ಕಿನಲ್ಲಿ ಸಭೆ ಅಕ್ಟೋಬರ್ 24 ರಂದು ಏರ್ಪಾಡು ಮಾಡಿದ್ದರು. ಭಾಷಣ ಕೇಳಲು ಸಾವಿರಾರು ಜನ ಸೇರಿದ್ದರು. ನಾರಿಮನ್ ಭಾಷಣ ಮಾಡಬಾರದೆಂದು ಸರ್ಕಾರ ನಿಷೇಧ ಹೇರಿತು. ಆದರೆ ಅದನ್ನು ಉಲ್ಲಂಘಿಸಿ ಭಾಷಣ ಮಾಡುತ್ತಿದ್ದಂತೆಯೇ ಪೊಲೀಸರು ಅವರನ್ನು ಬಂಧಿಸಿ ಜೈಲಿಗೆ ಹಾಕಿದರು. ಜನರ ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಸರ್ಕಾರ ಅವರನ್ನು ಗಡೀಪಾರು ಮಾಡಿತು. ಇದನ್ನು ಪ್ರತಿಭಟಿಸಿ ಮರುದಿನ ಬೆಂಗಳೂರಿನಲ್ಲಿ ಹರತಾಳ ಆಚರಿಸಲಾಯಿತು. ಮೊಣ್ಣಯ್ಯ ಮುಂತಾದವರನ್ನು ಬಂಧಿಸಿದರು. ಆಗ ನಡೆದ ಗೋಲೀಬಾರಿನಲ್ಲಿ ಗುಂಡಪ್ಪ ಎಂಬಾತ ಸಾವನ್ನಪ್ಪಿದ. ಈ ಘಟನೆ 'ನಾರಿಮನ್ ಗಲಭೆ' ಎಂದು ಹೆಸರಾಗಿದೆ. (ಶಂಕರನಾರಾಯಣರಾವ್ 1989: 56, ಮತ್ತು ಗೆಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ **ಸ್ಟೇಟ್, ಬೆಂಗಳೂರು ಡಿಸ್ಟ್ರಿಕ್ಟ್, ಪ್ರಧಾನ ಸಂಪಾದಕರು: ಸೂರ್ಯನಾಥ್ ಯು ಕಾಮತ್, ಕರ್ನಾಟಕ** ಸರ್ಕಾರದ ಪ್ರಕಟಣೆ, 1990, ಪು. 108).

23. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 49 ರಲ್ಲಿ ಉದೃತ, ಸಿಎಸ್‌ಪಿ, 3/3/1937 ರಿಂದ 3/1/1939, ಸಿಬಿ ಫೈಲ್ಸ್, ಕೆಎಸ್ಎ. ಗಡೀಪಾರಿಗೆ ಸಂಬಂಧಿಸಿ ಎಲ್/ಪಿ&ಎಸ್/13/1300, ಮೈಸೂರು ಅಫೇರ್ಸ್, 1932–1939, ಐಓಎಲ್ ನೋಡಿ.

24. ಅದೇ., ಪು. 51 ರಲ್ಲಿ ಉದ್ಧೃತ, ಎನ್.ಡಿ.ಶಂಕರ್ ಪ್ರೈವೇಟ್ ಪೇಪರ್ಸ್, ಕೆಎಸ್ಎ.

25. ಅದೇ., ಪು. 51 ರಲ್ಲಿ ಉದ್ಧೃತ, ಸ್ಪೆಷಲ್ ಬ್ರಾಂಚ್ ರಿಪೋರ್ಟ್ಸ್ ಆನ್ ಮೀಟಿಂಗ್ಸ್ ಇನ್ ಬೆಂಗಳೂರ್ ಡಿಸ್ಟ್ರಿಕ್ಟ್, 10/1/1939 ಟು 18/5/1939, ಪೊಲೀಸ್, ಕೆಎಸ್ಎ.

26. ಅದೇ., ಪು. 51 ನ್ನು ನೋಡಿ.

27. ಅದೇ., ಪು. 51 ರಲ್ಲಿ ಉದ್ಧೃತ, ಲೆಟರ್ ಆಫ್ ಕೆ.ಬಿ.ಶ್ರೀನಿವಾಸ್ ಟು ಜನರಲ್ ಸೆಕ್ರೆಟರಿ, ಎಎಂಸಿಸಿ, 21.2.39, ಎನ್.ಡಿ.ಶಂಕರ್ ಪ್ರೈವೇಟ್ ಪೇಪರ್ಸ್.

28. ಅದೇ., ಪು. 52 ರಲ್ಲಿ ಉದ್ಧೃತ, ಫೋರ್ಟ್‌ನೈಟ್‌ಲೀ ರಿಪೋರ್ಟ್ ಫಾರ್ ದಿ ಫೋರ್ಟ್‌ನೈಟ್ ಎಂಡಿಂಗ್ ಜುಲೈ 30, 1939, ಸಿಆರ್ಆರ್, ಕೆಎಸ್ಎ.

29. ಗೆಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ಸ್ಟೇಟ್, ಬೆಂಗಳೂರು ಡಿಸ್ಟ್ರಿಕ್ಟ್, ಪ್ರಧಾನ ಸಂಪಾದಕರು: ಸೂರ್ಯನಾಥ್ ಯು ಕಾಮತ್, ಕರ್ನಾಟಕ ಸರ್ಕಾರದ ಪ್ರಕಟಣೆ, 1990, ಪು. 110.

30. ಫೈಲ್ ನಂ.139/41–42/ಎಸ್.ಬಿ., ಏಪ್ರಿಲ್ 6, 1942, ಬೆಂಗಳೂರು, ಕೆಎಸ್ಎ.

31. ಜಾನಕಿ ನಾಯರ್, ಸೋಷಿಯಲ್ ಸೈಂಟಿಸ್ಟ್ ಜುಲೈ–ಆಗಸ್ಟ್ 1994: ಪು. 55

32. ಅದೇ., ಪು. 57–58 ರಲ್ಲಿ ಉದ್ಧೃತ, ಲೆಟರ್ ಆಫ್ ಎಂ.ಎಸ್.ರಾಮರಾವ್ ಟು ಎನ್.ಡಿ.ಶಂಕರ್, 12/2/1944, ಎನ್.ಡಿ.ಶಂಕರ್ ಪ್ರೈವೇಟ್ ಪೇಪರ್ಸ್, ಕೆಎಸ್ಎ.

33. ಅದೇ., ಪು. 58.

34. ಅದೇ., ಪು. 58.

35. ಅದೇ., ಪು. 58 ರಲ್ಲಿ ಉದ್ಧೃತ, ಕಲೆಕ್ಷನ್ 31 ಆಫ್ 41–42; ಸಿಬಿ 12–100 ಟು 101, "ಬಿ" ಫಾರ್ ಫೆಬ್ರವರಿ 42, ಕೆಎಸ್ಎ.

36. ಎನ್.ಎಲ್.ಉಪಾಧ್ಯಾಯರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ವಿದ್ಯಾರ್ಥಿ ದೆಸೆಯಲ್ಲಿ ಕಾಂಗ್ರೆಸ್‌ನಲ್ಲಿದ್ದರು. ಪದವಿ ನಂತರ ಬಾಂಬೆಗೆ ಹೋದರು. 1939 ರಲ್ಲಿ ಬಾಂಬೆ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ ಆಯ್ಕೆಯಾದರು. ಇವರೊಂದಿಗೆ ಡಾ.ಗಂಗಾಧರ ಅಧಿಕಾರಿ, ಎಸ್.ಜಿ.ಪಾಟ್ಕರ್ ಮತ್ತಿನ್ನೊಬ್ಬರು ಆಯ್ಕೆಯಾದರು. ಇವರು 1936–1937 ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದಲ್ಲಿದ್ದರು. ಅದರಲ್ಲಿ ಕಮ್ಯುನಿಸ್ಟರೂ ಕೆಲಸ ಮಾಡುತ್ತಿದ್ದರು. ಅದರ ಮೂಲಕ ಕಮ್ಯುನಿಸ್ಟ್ ಪಕ್ಷದ ಜೊತೆ ಸಂಪರ್ಕಕ್ಕೆ ಬಂದರು. ಯುದ್ಧ ಪೂರ್ವ ಸಂದರ್ಭದಲ್ಲಿ ಸಂಯುಕ್ತರಂಗ ಕಾರ್ಯತಂತ್ರದ ಹಿನ್ನೆಲೆಯಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಒಳಗಿದ್ದು ಕೆಲಸ ಮಾಡುತ್ತಿದ್ದರು. ಕೇರಳದಲ್ಲಿ ಇಎಂಎಸ್ ನಂಬೂದಿರಿಪಾದ್ ಸೇರಿದಂತೆ ಬಹುತೇಕ ಕಮ್ಯುನಿಸ್ಟರು, ಅದೇ ರೀತಿ ಬಾಂಬೆ ಮುಂತಾದ ಕಡೆಗಳಲ್ಲೂ ಸಿಎಸ್‌ಪಿಯೊಳಗೆ ಕೆಲಸ ಮಾಡುತ್ತಿದ್ದರು.

37. ಜಾನಕಿ ನಾಯರ್ ಅವರು ಎನ್.ಎಲ್.ಉಪಾಧ್ಯಾಯ ಅವರೊಂದಿಗೆ 17–7–1987 ರಂದು ನಡೆಸಿದ ಸಂದರ್ಶನದ ಟಿಪ್ಪಣಿ.

38. ಅದೇ.

39. ವಜ್ರವೇಲುರವರು ಮುಂದೆ ಸ್ವಲ್ಪ ಕಾಲ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿದ್ದರು. ನಂತರ ಕಾಂಗ್ರೆಸ್ ಸೇರಿದರು.

40. ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿ ಕೆಲಸ ಮಾಡಿದ ಕೆ.ಶ್ರೀರಾಮುಲು ಸಹ ಜೈಲಿನಲ್ಲಿ ಸಂಪರ್ಕಕ್ಕೆ ಬಂದರು. ಇವರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಲಿಲ್ಲ, ಆದರೆ ಹಿತೈಷಿಗಳಾಗಿದ್ದರು.

41. ಅವರನ್ನು ಬೆಂಗಳೂರಿನ ಸುಬ್ರಮಣ್ಯಪುರದಲ್ಲಿದ್ದ ಯಾದಾಳಂ ಗ್ರೂಪ್‌ನ ಕೃಷ್ಣ ಟೆಕ್ಸ್‌ಟೈಲ್ಸ್ ಮಿಲ್ಸ್ ಕಾರ್ಮಿಕರ ಸಂಘದ ಚುನಾವಣೆಗೆ ನಿಲ್ಲಿಸಲಾಯಿತು. ಇವರೊಂದಿಗೆ ಐ.ಮರಿದಾಸ್ ಅವರೂ ಸ್ಪರ್ಧಿಸಿದರು. ಆಗಿದ್ದ ಮೈಸೂರು ಲೇಬರ್ ಆಕ್ಟ್‌ನ ಪ್ರಕಾರ, ಯಾವುದೇ ಯೂನಿಯನ್‌ನಲ್ಲಿ ಹೊರಗಿನವರು ಇಬ್ಬರಿಗಿಂತ ಹೆಚ್ಚಿರುವ ಹಾಗಿರಲಿಲ್ಲ ಮತ್ತು ಒಂದು ಸಂಘಕ್ಕೆ ಮಾತ್ರ ಅವಕಾಶವಿತ್ತು. ಇಂತಹ ನಿಯಮಗಳನ್ನು ಅಳವಡಿಸಿರುವುದರಲ್ಲಿ ಕೆ.ಟಿ.ಭಾಷ್ಯಂ ಕೈವಾಡವಿತ್ತು ಎಂಬುದು ಎಂ.ಎಸ್.ಕೃಷ್ಣನ್ ಅಭಿಪ್ರಾಯ.

42. ಜಾನಕಿ ನಾಯರ್ – ಎಂ.ಎಸ್.ಕೃಷ್ಣನ್ ಸಂದರ್ಶನ. ಪು. 2–3.

43. ಅದೇ., ಪು. 4.

44. ಜಾನಕಿ ನಾಯರ್ – ಎನ್.ಎಲ್.ಉಪಾಧ್ಯಾಯ ಸಂದರ್ಶನ, ಪು. 8.

45. ಜಾನಕಿ ನಾಯರ್ – ಎಂ.ಎಸ್.ಕೃಷ್ಣನ್ ಸಂದರ್ಶನ, ಪು. 7.

46. ಜಾನಕಿ ನಾಯರ್ – ಎನ್.ಎಲ್.ಉಪಾಧ್ಯಾಯ ಸಂದರ್ಶನ, ಪು. 20.

47. ಜಾನಕಿ ನಾಯರ್ – ಎಂಎಸ್.ರಾಮರಾವ್ ಸಂದರ್ಶನ, ಪು. 8.

48. ಲಕ್ಷ್ಮಣ ಮೊದಲಿಯಾರ್ ಚಾಂಪಿಯನ್ ರೀಫ್ ಮೈನ್ಸ್ ಲೇಬರರ್ಸ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿದ್ದರು.

49. ಆರ್.ಆರ್.ಷಣ್ಮುಗಂ ಮೈಸೂರು ಮೈನ್ಸ್ ಲೇಬರರ್ಸ್ ಅಸೋಸಿಯೇಷನ್ ಮುಖಂಡರಾಗಿದ್ದರು.

50. ವಜ್ರವೇಲು ಚೆಟ್ಟಿಯವರು ಕೆಜಿಎಫ್ ಪಕ್ಕದ ಕುಪ್ಪಂ ಪ್ರದೇಶಕ್ಕೆ ಸೇರಿದವರಾಗಿದ್ದು ಕಾರ್ಮಿಕರನ್ನು ಸಂಘಟಿಸುತ್ತಿದ್ದರು. ಪಿ.ರಾಮಮೂರ್ತಿ ಮಾರ್ಗದರ್ಶನದಲ್ಲಿ ವಜ್ರವೇಲು ಚೆಟ್ಟಿಯಾರ್ ಅವರು 1941 ರ ಸುಮಾರಿಗೆ ಇಡೀ ಚಿನ್ನದ ಗಣಿಗೆ ಒಂದೇ ಸಂಘ ಬೇಕೆಂಬ ಬೇಡಿಕೆಯನ್ನಿಟ್ಟರು. ಆದರೆ ಜಾನ್ ಟೇಲರ್ ಕಂಪನಿಯು ಅದನ್ನು ಒಪ್ಪದಿದ್ದಾಗ 6 ಸಂಘಗಳನ್ನು ಪ್ರತ್ಯೇಕವಾಗಿ ನೋಂದಣಿ ಮಾಡಿಸಿದರು. 1942 ರಲ್ಲಿ ಆಂಧ್ರದ ಪೊಲೀಸರು ಅವರನ್ನು ಬಂಧಿಸಿ ಜೈಲಿಗೆ ಹಾಕಿದ ನಂತರ ಕೆಜಿಎಫ್‌ನ ಸಕ್ರಿಯ ಚಟುವಟಿಕೆಯಿಂದ ದೂರವಾದರು. ನಂತರ ವಾಪಸ್ ಬಂದ ವಜ್ರವೇಲು ಚೆಟ್ಟಿಯಾರ್ ಅವರು ವಿ.ಎಂ.ಗೋವಿಂದನ್, ಕೆ.ಎಸ್.ವಾಸನ್ ಇವರುಗಳ ಜೊತೆ ಸೇರಿ 1943 ರಲ್ಲಿ ಕೆಜಿಎಫ್‌ನ ಮೊದಲ ಕಮ್ಯುನಿಸ್ಟ್ ಘಟಕ ಸ್ಥಾಪನೆ

ಮಾಡಿದರು. ಇದು ಮುಂದೆ 1945 ರಲ್ಲಿ ಕೆಜಿಎಫ್ ಸ್ಥಳೀಯ ಸಮಿತಿಯಾಗಿ ಪರಿವರ್ತನೆಯಾಯಿತು. ವಜ್ರವೇಲು ಚೆಟ್ಟಿಯಾರ್ ಅದರ ಮೊದಲ ಕಾರ್ಯದರ್ಶಿಯಾಗಿದ್ದರು. ಸ್ವಾತಂತ್ರ್ಯಾನಂತರ ಅವರು ಆಂಧ್ರಪ್ರದೇಶದ ವಿಧಾನಸಭೆಗೆ ಸೇರಿದ ಕುಪ್ಪಂ ಕ್ಷೇತ್ರದಿಂದ 1962 ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು.

51. ವಿ.ಎಂ.ಗೋವಿಂದನ್ ಮೂಲತಃ ಕೇರಳದವರು. ಶಾಲೆಯನ್ನು ತೊರೆದು 1936 ರಲ್ಲಿ ವಾರ್ಧಾದಲ್ಲಿ ಗ್ರಾಮೀಣ ಕೈಗಾರಿಕಾ ಸಂಘದಲ್ಲಿದ್ದರು. 1939 ರಲ್ಲಿ ಇಎಂಎಸ್ ನಂಬೂದಿರಿಪಾದ್ ಅವರು ಕೇರಳ ಕಾಂಗ್ರೆಸ್ ಘಟಕದ ಕಾರ್ಯದರ್ಶಿಯಾಗಿದ್ದಾಗ ಅದರ ಕಛೇರಿ ಕಾರ್ಯದರ್ಶಿಯಾಗಿದ್ದರು. ಸರಕಾರದ ದಬ್ಬಾಳಿಕೆಯಿಂದ ತಲೆಮರೆಸಿಕೊಂಡು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಕೆಜಿಎಫ್‌ನ ಗಡಿ ಪಟ್ಟಣವಾದ ಕುಪ್ಪಂಗೆ ಬಂದರು. ಅಲ್ಲಿ ಗಡೀಪಾರಾಗಿದ್ದ ಗಣಿ ಕಾರ್ಮಿಕರ ಸಂಪರ್ಕ ಬೆಳೆಸಿದರು. 1943 ರಲ್ಲಿ ಇವರು ವಿ.ವಿ.ಗಿರಿಯವರ ಜೊತೆಗಾರರಾದ ಪಿ.ಆರ್.ಕೆ.ಶರ್ಮರನ್ನು ಸೋಲಿಸಿ ಮೈಸೂರು ಮೈನ್ಸ್ ಲೇಬರ್ ಅಸೋಸಿಯೇಷನ್ ಅಧ್ಯಕ್ಷರಾದರು. ಮುಂದೆ ಮೈಸೂರು ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದರು. ಗೋವಿಂದನ್ ಅವರು ಕಾರ್ಮಿಕ ಚಳುವಳಿಯನ್ನು ಕೇವಲ ಆರ್ಥಿಕ ಪ್ರಶ್ನೆಗಳಿಗಾಗಿ ನೋಡದೆ ಕಾರ್ಮಿಕರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡಾ ಅಭಿವೃದ್ಧಿಗಾಗಿಯೂ ಅದನ್ನು ಬಳಸಬೇಕು ಎಂದು ಭಾವಿಸಿದ್ದರು. 1962 ಕಾರ್ಮಿಕರ ಕಾಲೋನಿಯಲ್ಲಿ ಕಾರ್ಮಿಕರೇ ನಡೆಸುವ ಪ್ರೌಢಶಾಲೆಯನ್ನು ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದು ಈಗಲೂ ನಡೆಯುತ್ತಿದೆ. ಕೊನೆ ಕಾಲಘಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷದೊಳಗಿನ ಬೆಳವಣಿಗೆಗಳು ಅವರಿಗೆ ಇಷ್ಟವಾಗದೇ ರಾಜೀನಾಮೆಯನ್ನು ನೀಡಿದರು. ತಾವಿದ್ದ ಸಿಪಿಐ(ಎಂ) ಪಕ್ಷ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನರ ವಿಚಾರದಲ್ಲಿ ಅಗತ್ಯವಾದ ಮುತುವರ್ಜಿ ಮಾಡುತ್ತಿಲ್ಲ ಎಂಬ ಅಸಮಾಧಾನವೂ ಇತ್ತು. (ವಿ.ಎಂ.ಗೋವಿಂದನ್ ಅವರನ್ನು ಕೆಜಿಎಫ್ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ.ವಿನೋದ್ ಅವರು ನಡೆಸಿದ ಸಂದರ್ಶನದ ವ್ಯಕಿ-ವಿವರದ ಟಿಪ್ಪಣಿಯಲ್ಲಿ ನಮೂದಿಸಿರುವಂತೆ.

52. ಜಾನಕಿ ನಾಯರ್ – ಎನ್.ಎಲ್.ಉಪಾಧ್ಯಾಯ ಸಂದರ್ಶನ, ಪು. 3.

53. ಅನಕ್ಷರಸ್ತ ಕಾರ್ಮಿಕರಿಗೆ ವ್ಯವಸ್ಥೆಯ ಅರಿವು ಮೂಡಿಸುವುದು ಹೇಗೆ? ತಮ್ಮ ಮೇಲಾಗುತ್ತಿರುವ ದಬ್ಬಾಳಿಕೆ ಮತ್ತು ಶೋಷಣೆಯನ್ನು ಎದುರಿಸುವುದು ಹೇಗೆ? ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಐಡಿಯಾಗಳನ್ನು ಕಾರ್ಮಿಕರ ಮನಸ್ಸಿನೊಳಗೆ ತರುವುದು ಹೇಗೆ? ಇತ್ಯಾದಿ ಪ್ರಶ್ನೆಗಳಿಗೆ ಮಲಬಾರಿನ ಕಮ್ಯುನಿಸ್ಟ್ ಪಕ್ಷ ಕಂಡುಕೊಂಡ ವಿಧಾನವಿದು. ಇದೊಂದು ಅದ್ಭುತ ಸಹಕಾರಿ ತತ್ವ. ಬೀಡಿ ಕಾರ್ಮಿಕರಲ್ಲೇ ಅಲ್ಪ ಸ್ವಲ್ಪ ಓದು ಬರುವವರನ್ನು ಒಂದು ಕೇಂದ್ರದ ನಡುವೆ ಕೂರಿಸುವುದು, ಅವರು ಕೆಲವು ಪತ್ರಿಕೆಗಳನ್ನು ಪೂರ್ತಿಯಾಗಿ ಓದುವುದು ನಡೆಯುತ್ತಿತ್ತು. ಓದುವ ವ್ಯಕ್ತಿಗೆ ಅಷ್ಟು ಸಮಯದಲ್ಲಿ ಎಷ್ಟು ಬೀಡಿಗಳನ್ನು ಸುತ್ತಬಹುದಾಗಿತ್ತೋ ಅಷ್ಟನ್ನು ಎಲ್ಲರೂ ತಮ್ಮ ಪಾಲಿನಿಂದ ನೀಡಲಾಗುತ್ತಿತ್ತು. ಇಂತಹ ಒಂದು ಮಾನವ ರೇಡಿಯೋಗಳು ಎನ್ನಲಾಗುತ್ತಿತ್ತು.

54. ಕಕ್ಕಿಲ್ಲಾಯ 2003: 67–69 ಮತ್ತು ಪ್ರಕಾಶ್ ಕೆ. ಅವರು ಶ್ರೀಯಾನ್ ಅವರೊಂದಿಗೆ ನಡೆಸಿದ ಸಂದರ್ಶನ, ಪು. 12.

55. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಎನ್.ಕೆ.ಉಪಾಧ್ಯಾಯರು 1938–39 ರಲ್ಲಿ ಬಾಂಬೆಯ ವಿದ್ಯಾರ್ಥಿ ಯುವಜನ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. 1941 ರಲ್ಲಿ ಯುದ್ಧವಿರೋಧಿ ಚಟುವಟಿಕೆಗಳ ಕಾರಣಕ್ಕಾಗಿ ಬಂಧನವಾಗಿ ನಾಸಿಕ್ ಜೈಲಿನಲ್ಲಿರುವಾಗ, ಇವರ ಅಣ್ಣನವರಾದ ಎನ್.ಎಲ್. ಉಪಾಧ್ಯಾಯರ ಪ್ರೇರಣೆಯಿಂದ ಜೈಲಿನಲ್ಲೇ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಅಲ್ಲಿಂದ ಬಿಡುಗಡೆಯಾದ ಮೇಲೆ ಕಮ್ಯುನಿಸ್ಟ್ ಪಕ್ಷದ ತೀರ್ಮಾನದಂತೆ 1944 ರಲ್ಲಿ ಹುಬ್ಬಳ್ಳಿ ಮತ್ತು ಬಿಜಾಪುರದಲ್ಲಿ ಪಕ್ಷದ ಕೆಲಸಗಳಲ್ಲಿ ತೊಡಗಿದರು. ಇವರು ಬರೆದ 'ನಾನು ನಡೆದು ಬಂದ ದಾರಿ' ಅವರ ಪುಟ್ಟ ಆತ್ಮಚರಿತ್ರೆಯಾಗಿದ್ದು, ಆ ಭಾಗದ ಆರಂಭಿಕ ಕಮ್ಯುನಿಸ್ಟ್ ಚಟುವಟಿಕೆಗಳ ಬಗ್ಗೆ ಮತ್ತು ಕಾರ್ಯಕರ್ತರ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

56. ಬಾಲಸಿಂಗ್ ಮಾಸ್ತರ್ ಮೂಲತಃ ಕಾಂಗ್ರೆಸಿಗರು. ಜೆಮ್‌ಷೆಡ್‌ಪುರದ ಎಐಸಿಸಿ ಸಭೆಯಲ್ಲಿ ಕಮ್ಯುನಿಸ್ಟರ ಸಂಪರ್ಕ ಪಡೆದಿದ್ದರು. ಎನ್.ಕೆ.ಉಪಾಧ್ಯಾಯ ಅವರ ಮುತುವರ್ಜಿಯಿಂದ ಅವರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಬಾಲಸಿಂಗ್ ಮಾಸ್ತರ್ ಅವರು ಬೀಡಿ ಕಾರ್ಮಿಕರನ್ನು ಮತ್ತು ಹೋಟೆಲ್ ಕಾರ್ಮಿಕರನ್ನು ಸಂಘಟಿಸಿದ್ದರು. ಇವರೊಂದಿಗೆ ಅಲ್ಲಾವುದ್ದೀನ್ ಹಿಪ್ಪರಗಿ, ವಲ್ಲಿ ಅಹಮದ್, ಜಂಗ್ಲೀಸಾಬ್ ಬಾಗೇವಾಡಿ, ನಬೀಸಾಬ, ಜಕ್ರಿಯಾ ಸಾಬ್ ಕಾಲೇಬಾಗ ಇವರೂ ಕೂಡಾ ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದರು (ಉಪಾಧ್ಯಾಯ 1996: 20).

57. ಪಿ.ಸುಂದರಯ್ಯ ಮದ್ರಾಸಿನಲ್ಲಿ ಓದುತ್ತಿದ್ದಾಗ ತನ್ನ 17 ನೇ ವಯಸ್ಸಿನಲ್ಲೇ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿ, ಅವರ ಭಾವ ಬೆಂಗಳೂರಿನ ಕಂಟೋನ್ಮೆಂಟ್ ಸೆಷನ್ಸ್ ಜಡ್ಜ್ ಆಗಿ ಬೆಂಗಳೂರಿಗೆ ವರ್ಗಾವಣೆ ಆದ್ದರಿಂದ ತಮ್ಮ ಪದವಿ ವಿದ್ಯಾಭ್ಯಾಸಕ್ಕೆಂದು 1931 ರಲ್ಲಿ ಬೆಂಗಳೂರಿಗೆ ಬಂದರು. ಇವರಿಗಿದ್ದ ರಾಷ್ಟ್ರೀಯವಾದಿ ಮತ್ತು ಸಮಾಜವಾದಿ ನಿಲುವುಗಳ ಕಾರಣಕ್ಕಾಗಿ ಇವರನ್ನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂದು ಭಾರತದ ಆರಂಭಿಕ ಕಮ್ಯುನಿಸ್ಟ್ ನಾಯಕರಲ್ಲೊಬ್ಬರಾಗಿದ್ದ ಅಮೀರ್ ಹೈದರ್ ಖಾನ್ ಅವರು ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ಭೇಟಿ ಮಾಡಿ ಚರ್ಚಿಸಿದರು. ಇವರ ಮೊದಲಿನ ಹೆಸರು ಪಿ.ಸುಂದರ ರಾಮ ರೆಡ್ಡಿ. ಇದರಲ್ಲಿ ಜಾತಿಸೂಚಕ ಶಬ್ದವಿದೆ ಎಂಬ ಕಾರಣಕ್ಕಾಗಿ ತಮ್ಮ ಹೆಸರನ್ನು ಪಿ.ಸುಂದರಯ್ಯ ಎಂದು ಬದಲಾಯಿಸಿಕೊಂಡಿದ್ದರು (ಪ್ರೊ.ಅನೂಪ್‌ಲಾಲ್ 2013–14: 129–130).

58. ಸಚ್ಚಿದಾನಂದ ವಿಷ್ಣು ಘಾಟೆ 1896 ರಲ್ಲಿ ಮಂಗಳೂರಿನಲ್ಲಿ ಜನಿಸಿ ಇಲ್ಲಿ ಮತ್ತು ಬಾಂಬೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು. 1925 ರ ಡಿಸೆಂಬರ್‌ನಲ್ಲಿ ಸಿಪಿಐನ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದರು. ಮೀರತ್ ಪಿತೂರಿ ಮೊಕದ್ದಮೆಯಲ್ಲಿ ಬಂಧಿತರಾಗಿದ್ದರು. ಬಾಂಬೆ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ನಂತರ ಮದ್ರಾಸ್‌ನಲ್ಲಿ ಪಕ್ಷದ ಕೆಲಸವನ್ನು ಮಾಡಿದರು. ನ್ಯೂ ಏಜ್ ಪತ್ರಿಕೆ ಸಂಪಾದಕರಾಗಿದ್ದರು.

59. ಗೌರಮ್ಮ ಮೈಸೂರಿನ ಎಐಎಸ್‌ಎಫ್ ಕಾರ್ಯಕರ್ತೆಯಾಗಿದ್ದರು. ಹಾಸ್ಟೆಲ್, ಊಟ–ತಿಂಡಿ ಅವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಿ ಸರಿಪಡಿಸುವವರೆಗೂ, ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ದಲಿತ ವಿದ್ಯಾರ್ಥಿನಿ ಸಿ.ಪಾರ್ವತಮ್ಮ ಅವರನ್ನು ತಮ್ಮ ಮನೆಯಲ್ಲೇ ಉಳಿಸಿಕೊಂಡು ಸಲಹಿದರು. ಬ್ರಾಹ್ಮಣರಾಗಿದ್ದ ಇವರ ಈ ನಡವಳಿಕೆ ಅಂದಿಗೆ ಒಂದು ಮುಖ್ಯ ಬೆಳವಣಿಗೆಯಾಗಿತ್ತು. ಮುಂದೆ ಇವರು ಜನಜಾಗೃತಿ ಸಂಘದ

ಮತ್ತು ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದ ಎಂ.ಎಸ್.ರಾಮರಾವ್ ಅವರನ್ನು ಪೌರೋಹಿತ್ಯವಿಲ್ಲದೆ ಸರಳವಾಗಿ ವಿವಾಹವಾಗಿದ್ದೂ ಕೂಡಾ ಗಮನ ಸೆಳೆದಿತ್ತು. ನಂತರ ಬೆಂಗಳೂರಿನಲ್ಲಿ ಮಹಿಳೆಯರ ನಡುವೆ ಸಾಕ್ಷರತೆ, ಶಿಕ್ಷಣದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು.

60. ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು ಮತ್ತು ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು ಮುಂತಾದ ಪುಸ್ತಕಗಳ ಲೇಖಕರು. ಮುನಿಸಿಪಲ್ ನೌಕರರನ್ನು ಸಂಘಟಿಸಲು ಶ್ರಮಿಸಿದ್ದರು.

61. ಜಾನಕಿ ನಾಯರ್ ಮತ್ತು ಎನ್.ಎಲ್.ಉಪಾಧ್ಯಾಯ ಸಂದರ್ಶನ.

62. ಅಚ್ಯುತ ಅವರು ತಮ್ಮ'ಕೆಜಿಎಫ್ ಮತ್ತು ಕೋಲಾರ ಜಿಲ್ಲೆಯ ಕಮ್ಯುನಿಸ್ಟ್ ಪಕ್ಷದ ಮತ್ತು ಚಳುವಳಿ ಬೆಳವಣಿಗೆಯ ಒಂದು ಕಿರು ನೋಟ' ಎಂಬ ಲೇಖನದಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ.

63. ಈ ಬಗ್ಗೆ ನಿರ್ದಿಷ್ಟ ಮತ್ತು ಖಚಿತವಾದ ಪ್ರಾಥಮಿಕ ಅಥವಾ ಅನುಷಂಗಿಕ ಆಧಾರ ಸ್ಪಷ್ಟವಾಗಿ ಸಿಕ್ಕಿಲ್ಲ. ಅಚ್ಯತ ಅವರು ಬರೆದ ಲೇಖನದಲ್ಲಿ 1943–44 ಎಂದು ಹೇಳಿದ್ದಾರೆ. ಹೀಗಾಗಿ ವಜ್ರವೇಲು ಚೆಟ್ಟಿಯಾರ್, ಗೋವಿಂದನ್, ವಾಸನ್ ಇವರುಗಳು ಕಮ್ಯುನಿಸ್ಟ್ ಪಕ್ಷದ ಹಿನ್ನೆಲೆಯಲ್ಲಿಯೇ 1943 ರಲ್ಲಿ ಒಂದು ಕಡೆ ಸೇರುವುದರಿಂದ ಅದನ್ನು ಆಧರಿಸಿ ಕಮ್ಯುನಿಸ್ಟ್ ಪಕ್ಷದ ಮೊದಲ ಘಟಕ 1943 ರಲ್ಲಿ ಪ್ರಾರಂಭವಾಗಿದೆ ಎಂದು ಪರಿಗಣಿಸಿದ್ದೇನೆ.

64. ಕಾರವಾರದ ಸೈಯದ್ ಹೈದರ್, ಅಬ್ದುಲ್ ಹಮೀದ್, ಪುರುಷೋತ್ತಮ ಜೋಗು ನಾಯ್ಕ ಇವರ ಆರಂಭಿಕ ದಾಖಲೆಗಳು ದೊರೆತರೆ ಬಹುಶಃ ಈ ಅಂದಾಜು ಬದಲಾಗಬಹುದು.

65. ಇದನ್ನು ಎಂ.ಎಸ್.ಕೃಷ್ಣನ್ ಅವರಿಗೆ ಸೇರಿದ್ದ ಅರಳೇಪೇಟೆಯಲ್ಲಿದ್ದ ಅವಿಭಕ್ತ ಕುಟುಂಬದ ಮನೆಯಲ್ಲಿ ನಡೆಸಲಾಯಿತು (ಕಕ್ಕಿಲ್ಲಾಯ 2003: 96).

66. ಬಾಂಬೆಯಲ್ಲಿ 1942 ಸೆಪ್ಟೆಂಬರ್ 24 ರಿಂದ 27 ರವರೆಗೆ ನಡೆದ ಸೆಂಟ್ರಲ್ ಕಿಸಾನ್ ಕೌನ್ಸಿಲ್ ಸಭೆಯ ನಿರ್ಣಯ, ಪು. 5, ಎಐಕೆಎಸ್ ಡಾಕ್ಯುಮೆಂಟ್ಸ್ 1942 ರಿಂದ 1944.

67. ಟ್ವೆಲ್ತ್ ಸೆಷನ್ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ, ಪ್ರೊಸೀಡಿಂಗ್ಸ್ ಅಂಡ್ ರೆಸಲ್ಯೂಷನ್ಸ್, ಮೋಗಾ, ಸೆಪ್ಟೆಂಬರ್ 13–19, 1954, ಪು. 61.

68. ಬಾಂಬೆಯಲ್ಲಿ 1942 ಸೆಪ್ಟೆಂಬರ್ 24 ರಿಂದ 27 ರವರೆಗೆ ನಡೆದ ಸೆಂಟ್ರಲ್ ಕಿಸಾನ್ ಕೌನ್ಸಿಲ್ ಸಭೆಯ ನಿರ್ಣಯ, ಪು. 21–22, ಎಐಕೆಎಸ್ ಡಾಕ್ಯುಮೆಂಟ್ಸ್ 1942 ರಿಂದ 1944.

69. ಹಳಗಾದಲ್ಲಿ ರೈತ ಪರಿಷತ್ತು 1946 ರ ಏಪ್ರಿಲ್ 5 ರಂದು ನಡೆಯಿತೆಂದು ಅದರ ಉದ್ಘಾಟನೆಯನ್ನು ಎಐಟಿಯುಸಿ ಮುಖಂಡರಾಗಿದ್ದ ಶಾಂತಾ ಮುಖರ್ಜಿಯವರು ಮಾಡಿದರೆಂದು ಮತ್ತು ಇದರ ಅಧ್ಯಕ್ಷತೆಯನ್ನು ಬಿಜಾಪುರದ ಬಾಲಸಿಂಗ್ ಮಾಸ್ತರ್ ವಹಿಸಿದ್ದರೆಂದು, ಬಿ.ಎನ್.ಧಾರವಾಡಕರ್ ಅವರು ಯುಗದೀಪ ವಾರಪತ್ರಿಕೆಯಲ್ಲಿ ಬರೆದಿದ್ದಾರೆ. ಯುಗದೀಪ, 19–4–1976, ಸಂಪುಟ 1, ಸಂಚಿಕೆ 8, ಕಾರವಾರ.

70. ಆಲ್ ಇಂಡಿಯಾ ಕಿಸಾನ್ ಸಭಾ, 1945, ನ್ಯೂ ಚಾರ್ಟರ್ ಆಫ್ ಕಿಸಾನ್ ಡಿಮಾಂಡ್ಸ್, ಆರ್ಗನೈಸೇಷನಲ್ ರಿಪೋರ್ಟೇಜ್ ನಂ.2 ಆಫ್ 1945–46, ಪು. 42–43. ಹಿರೇಗುತ್ತಿಯಲ್ಲಿ ನಡೆದ ಪ್ರಥಮ ಜಿಲ್ಲಾ ಸಮ್ಮೇಳನದ ಸ್ವಾಗತ ಸಮಿತಿಗೆ ಸ್ಥಳೀಯ ರೈತ ನಾಯಕರಾಗಿದ್ದ ಹೊನ್ನಪ್ಪ ರಾಮಚಂದ್ರ ನಾಯ್ಕ್ ಅಧ್ಯಕ್ಷರಾಗಿದ್ದರು. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ನೇತೃತ್ವ ಕೊಟ್ಟ ಕಾರಣದಿಂದ ಬಂಧನಕ್ಕೊಳಗಾಗಿದ್ದರು ಮತ್ತು 1941 ರಲ್ಲಿ ಬಿಡುಗಡೆಯಾಗಿದ್ದರು. ಈ ಸಮ್ಮೇಳನದಲ್ಲಿ ಎಐಕೆಎಸ್‌ನ ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಹೊನ್ನಪ್ಪ ರಾಮಚಂದ್ರ ನಾಯ್ಕ, ಕಾರ್ಯದರ್ಶಿಯಾಗಿ ಎನ್.ಜಿ.ಮ್ಹಾಳ್ಸೇಕರ, ಉಪಾಧ್ಯಕ್ಷರಾಗಿ ಹೈದರ್ ಸಾಹೇಬ್ ಆಯ್ಕೆಯಾದರು. ಶಾಮರಾವ್ ಪರುಳೇಕರ್ ಜೊತೆಗೆ ಎನ್.ಎಲ್.ಉಪಾಧ್ಯಾಯರು ಇದರಲ್ಲಿ ಭಾಗವಹಿಸಿದ್ದರು. ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರಗಳಿಂದ ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.

71. ಶೋಭಾ 1994: 70 ರಲ್ಲಿ ಉದ್ಧೃತ, ಸರ್ಕ್ಯುಲರ್ ನಂ.37, ಎಐಎಸ್‌ಎಫ್, ಡೆಲ್ಲಿ 25 ಆಗಸ್ಟ್ 1941, ಸಿಬಿ, ಕೆಎಸ್‌ಎ.

72. ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದು ಹಿಂದಿರುಗಿದ್ದ ಡಾ.ಬಿ.ಕೆ.ಕೃಷ್ಣ ಎಡ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದರು.

73. ಶೋಭಾ 1994: 74–76 ರಲ್ಲಿ ಉದ್ಧೃತ, ಫೈಲ್ ನಂ. 12–14, 100 ಟು 101 ಸಿಇ ನಂ. 31 ಆಫ್ '41' –42 ಸಿಬಿ, ಕೆಎಸ್‌ಎ.

74. ಅದೇ, ಪು.76 ರಲ್ಲಿ ಉದ್ಧೃತ, ರೀನ್‌ಡಾರ್ಪ್, ಜೂಲಿಯನ್, 1971, ಲೀಡರ್ಸ್ ಅಂಡ್ ಲೀಡರ್‌ಶಿಪ್ ಇನ್ ಟ್ರೇಡ್ ಯೂನಿಯನ್ಸ್ ಇನ್ ಬೆಂಗಳೂರು, ಕ್ರಿಶ್ಚಿಯನ್ ಲಿಟರರಿ ಸೊಸೈಟಿ, ಮದ್ರಾಸ್.

75. ಅದೇ, ಪು. 76–77 ರಲ್ಲಿ ಉದ್ಧೃತವಾಗಿರುವ, ಫೋರ್ಟ್‌ನೈಟ್ಲಿ ರಿಪೋರ್ಟ್ ಫಾರ್ ಸೆಪ್ಟೆಂಬರ್ 1944, ಪೊಲಿಟಿಕಲ್ – ಮೈಸೂರ್ ಸ್ಟೇಟ್, ಸಿಆರ್‌ಆರ್, ಕೆಎಸ್‌ಎ.

76. ಅದೇ, ಪು. 78–79 ರಲ್ಲಿ ಉದ್ಧೃತವಾಗಿರುವ, ಹೆಚ್.ಸಿ.ವೇಣುಗೋಪಾಲ್, 'ಎನ್ ಅಕೌಂಟ್ ಆಫ್ ಸಮ್ ಆಫ್ ಮೈ ಆಕ್ಟಿವಿಟೀಸ್ ಡ್ಯೂರಿಂಗ್ ದಿ ಸ್ಟ್ರಗಲ್ ಫಾರ್ ಫ್ರೀಡಂ 1942–48', ಪರಶುರಾಂ ಕಲೆಕ್ಷನ್ಸ್, ಪ್ರೈವೇಟ್ ಪೇಪರ್ಸ್, ಕೆಎಸ್‌ಎ.

77. ಎಸ್.ಸೂರ್ಯನಾರಾಯಣ ರಾವ್ ಹಾಸನದ ಅರಕಲಗೂಡಿನವರು. ಬೆಂಗಳೂರಿನ ಫೋರ್ಟ್ ಹೈಸ್ಕೂಲು, ಸೆಂಟ್ರಲ್ ಕಾಲೇಜಿನಲ್ಲಿ ಓದಿದ್ದು. ನಡುವೆ ಹಲವು ಕಡೆಗಳಲ್ಲಿ ಕೆಲಸ, ಹೆಚ್‌ಎಎಲ್‌ನಲ್ಲಿ ಉದ್ಯೋಗಕ್ಕೆ ರಾಜೀನಾಮೆ. ನಂತರ ವಿದ್ಯಾರ್ಥಿ ಚಳುವಳಿ. ನಂತರ ಕಾರ್ಮಿಕ ಚಳುವಳಿ. ಸ್ವಪ್ರಯತ್ನದಿಂದ ತಮ್ಮನ್ನು ರೂಪಿಸಿಕೊಂಡವರು. 'ಕಾಮ್ರೇಡ್ ಸೂರಿ' ಎಂದು ಜನಪ್ರಿಯರಾದ ಇವರು ಎಂ.ಎಸ್.ಕೃಷ್ಣನ್ ಮತ್ತು ಎಂ.ಸಿ.ನರಸಿಂಹನ್‌ರವರ ಜೊತೆಗಾರರು. ಭಾರತ ಮತ್ತು ಪಾಕಿಸ್ತಾನ ವಿಭಜನೆ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷದ ನಿಲುವು ಸರಿಯಿಲ್ಲ ಎಂಬ ಕಾರಣಕ್ಕೆ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಲು ಒಪ್ಪಿರಲಿಲ್ಲ. ಸ್ವಾತಂತ್ರ್ಯ ಬಂದ ನಂತರ ಎನ್.ಎಲ್.ಉಪಾಧ್ಯಾಯ ಮತ್ತು ಎಂ.ಎಸ್.ಕೃಷ್ಣನ್‌ರವರ ಒತ್ತಡಕ್ಕೆ ಮಣಿದು ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.

78. ಕೆಂಪು ಸೂರಿ'ಯ, ಐಕ್ಯರಂಗ ವಿಶೇಷ ಸಂಚಿಕೆ, ಸಂಪುಟ 24, ಆಗಸ್ಟ್ 2002, ಪು. 10., ವಿಶ್ವ ಕುಂದಾಪುರ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ, 2014, ಕ್ರಿಯಾ ಪ್ರಕಾಶನ, ಬೆಂಗಳೂರು, ಪು. 89. ಹುತಾತ್ಮ ಶಂಕರಪ್ಪನ ನೆನಪಿಗಾಗಿ ಮೈಸೂರಿನಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲಾಗಿದೆ.

79. ವಿ.ಎಸ್.ಕೃಷ್ಣಯ್ಯರ್, ಕಲ್ಲೂರು ಸುಬ್ಬರಾವ್ ಇದರ ಮುಖಂಡರಾಗಿದ್ದರು: – ಕೆಂಪು ಸೂರಿ'ಯ, ಐಕ್ಯರಂಗ ವಿಶೇಷ ಸಂಚಿಕೆ, ಸಂಪುಟ 24, ಆಗಸ್ಟ್ 2002, ಪು. 11.

80. ಸಮ್ಮೇಳನದ ಸ್ವಾಗತ ಸಮಿತಿಗೆ ಸೂರ್ಯನಾರಾಯಣ ರಾವ್ ಅವರು ಕಾರ್ಯದರ್ಶಿಯಾಗಿ, ಮುಂದೆ ಸಂಸದರಾಗಿದ್ದ ಮುಲ್ಕಾ ಗೋವಿಂದರೆಡ್ಡಿ ಅಧ್ಯಕ್ಷರಾಗಿ ಕೆಲಸ ಮಾಡಿದರು.

81. ಶೋಭಾ, op. cit, ಪು. 88–89 ರಲ್ಲಿ ಉದ್ಧೃತವಾಗಿರುವ ಎಫ್ಎನ್ಆರ್ ಫಾರ್ ಫಸ್ಟ್ ಹಾಫ್ ಆಫ್ ಆಗಸ್ಟ್ 1945, ಸಿಆರ್ಆರ್, ಕೆಎಸ್ಎ.

82. ಜಾನಕಿ ನಾಯರ್ – ಎಂ.ಎಸ್.ಕೃಷ್ಣನ್ ಸಂದರ್ಶನ, ಪು. 2.

83. ಕೆಂಪು ಸೂರಿ'ಯ, ಐಕ್ಯರಂಗ ವಿಶೇಷ ಸಂಚಿಕೆ, ಸಂಪುಟ 24, ಆಗಸ್ಟ್ 2002, ಪು. 12–14.

84. ರಾಘವನ್ ಅವರು ಬ್ಲಿಟ್ಸ್ ಪತ್ರಿಕೆಯ ದೆಹಲಿ ಬ್ಯೂರೋದ ಸಂಪಾದಕರಾಗಿದ್ದರು ಮತ್ತು ಹಿರಿಯ ಪತ್ರಿಕೋದ್ಯಮಿಯಾಗಿದ್ದರು.

85. ಮೊದಲಿಗೆ ಕಮ್ಯುನಿಸ್ಟ್ ಪಕ್ಷದ ಪ್ರಮುಖ ಕಾರ್ಯಕರ್ತರಾಗಿದ್ದರು ಮತ್ತು ನಂತರ ಸ್ವರ್ಣ ವ್ಯಾಪಾರಿಯಾಗಿದ್ದರು.

86. ಜಾನಕಿ ನಾಯರ್ – ಎಂ.ಎಸ್.ಕೃಷ್ಣನ್ ಸಂದರ್ಶನ, ಪು. 9.

87. ವೇತನ ಸಹಿತ ರಜೆ, ಬಡ್ತಿ, ಹೆರಿಗೆ ಸೌಲಭ್ಯ, ವೇತನ ಸಹಿತ ಆರೋಗ್ಯ ರಜೆ ಮುಂತಾದ ಬೇಡಿಕೆಗಳಿಗಾಗಿ ಐಟಿಸಿಯಲ್ಲಿ 1946 ಮೇ ಹೊತ್ತಿಗೆ ಮುಷ್ಕರವು ತೀವ್ರವಾಗಿ ನಡೆಯಿತು. ಕಮ್ಯುನಿಸ್ಟರಾಗಿದ್ದ ಎಸ್.ಎಸ್. ಚಂಡೂರ್ ಮತ್ತು ಎಸ್.ರಂಗಸ್ವಾಮಿ ಇವರುಗಳು ಕಾರ್ಮಿಕರನ್ನು ಅಣಿನೆರೆಸಲು ಮತ್ತು ಸಂಘವನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸಿದರು. ಆಡಳಿತವರ್ಗ ಬೇಡಿಕೆಗಳನ್ನು ಮಾನ್ಯ ಮಾಡಲಿಲ್ಲ. ಹೋರಾಟ ಸೋತಿತು. ಆದರೆ ಕೆಲಸದ ಪರಿಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಮಿಕರು ಅಪೂರ್ವವಾದ ಐಕ್ಯತೆಯನ್ನು ಪ್ರದರ್ಶಿಸಿದರು. (ಜಾನಕಿ ನಾಯರ್, ಕಾರ್ಮಿಕ ಚಳುವಳಿ ಚಾರಿತ್ರಿಕ ಅವಲೋಕನ, ಪು. 365–366, ವಿಜಯ್ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು), ಚಿನ್ನಸ್ವಾಮಿ ಸೋಸಲೆ (ಸಂಪುಟ ಸಂಪಾದಕರು), 2010, ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಚರಿತ್ರೆ ಸಂಪುಟ 6, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

88. ಜಾನಕಿ ನಾಯರ್ – ಎಂ.ಎಸ್.ರಾಮರಾವ್ ಅವರೊಂದಿಗೆ ಸಂದರ್ಶನ, ಪು. 7.

89. ಅದೇ., ಪು. 9.

90. ಪೀಪಲ್ಸ್ ವಾರ್ ಪತ್ರಿಕೆ, 22–12–1946.

91. ಅಚ್ಯುತ, ಕೆಜಿಎಫ್‌ನ ಕಾರ್ಮಿಕ ಚಳುವಳಿ ಕಮ್ಯುನಿಸ್ಟರ ಪಾತ್ರ, ಐಕ್ಯರಂಗ ಮೇ ವಿಶೇಷಾಂಕ, 3–5–1987, ಪು. 22.

92. ಮುಷ್ಕರ 24 ದಿನಗಳ ಕಾಲ ನಡೆಯಿತೆಂದು ಅಚ್ಯುತ್‌ರವರು ಹೇಳುತ್ತಾರೆ. ಅಚ್ಯುತ 1987: 22

93. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಫಾರ್ ದಿ ಇಯರ್ 1935–36, ಪು.8, ಕೆಎಸ್‌ಎ.

94. 1944 ರಲ್ಲಿ ಸಭೆಗಳನ್ನು, ಮೆರವಣಿಗೆಗಳನ್ನು ದೀರ್ಘಕಾಲ ನಿಷೇಧಿಸಲಾಗಿದ್ದ ಸಂದರ್ಭದಲ್ಲಿ, ಸಭೆಗಳನ್ನು ಮಾಡಲು ಬೂದಗೂರಿಗೆ ನಡೆದು ಹೋಗಬೇಕಿತ್ತು. ಸುಮಾರು 10 ಕಿ.ಮೀ.ನಷ್ಟು ದೂರದ ಈ ಊರಿಗೆ ಕಡಿಮೆಯೆಂದರೂ 10,000 ಕಾರ್ಮಿಕರು ಗಣಿ ಪ್ರದೇಶದಿಂದ ಅಲ್ಲಿಗೆ ನಡೆದು ಹೋಗುವುದು ಮತ್ತು ಸಭೆ ಮುಗಿಸಿ ಅಲ್ಲಿಂದ ವಾಪಸ್ ನಡೆದು ಬರುವುದನ್ನು ನೋಡುವುದೇ ಒಂದು ಅದ್ಭತ ಚಿತ್ರಣವಾಗಿತ್ತು ಎಂದು ಎಂ.ಎಸ್.ಕೃಷ್ಣನ್ ತಮ್ಮ ಸಂದರ್ಶನದಲ್ಲಿ ನೆನಪಿಸಿಕೊಂಡಿದ್ದಾರೆ.

95. ಪ್ರತ್ಯೇಕವಾಗಿ ನೋಂದಾಯಿತವಾದ 6 ಸಂಘಗಳು – ಮೈಸೂರು ಮೈನ್ಸ್ ಲೇಬರ್ ಅಸೋಸಿಯೇಷನ್, ಛಾಂಪಿಯನ್ ರೀಫ್ಸ್ ಲೇಬರ್ ಅಸೋಸಿಯೇಷನ್, ಊರಿಗಾಂ ಮೈನ್ಸ್ ಲೇಬರ್ ಅಸೋಸಿಯೇಷನ್, ನಂದಿದುರ್ಗ ಮೈನ್ಸ್ ಲೇಬರ್ ಅಸೋಸಿಯೇಷನ್, ಕೆಜಿಎಫ್ ಎಲೆಕ್ಟ್ರಿಸಿಟಿ ಲೇಬರ್ ಅಸೋಸಿಯೇಷನ್, ಬ್ರಿಕ್ ಮೇಕಿಂಗ್ ಕಂಪನಿ ಲೇಬರ್ ಅಸೋಸಿಯೇಷನ್.

96. ಅಚ್ಯುತ ಅವರು ಬರೆದ ಒಂದು ಸಣ್ಣ ಲೇಖನ ಕೆಜಿಎಫ್ ಮತ್ತು ಕೋಲಾರ ಜಿಲ್ಲೆಯ ಕಮ್ಯುನಿಸ್ಟ್ ಪಕ್ಷದ ಮತ್ತು ಚಳುವಳಿ ಬೆಳವಣಿಗೆಯ ಒಂದು ಕಿರು ನೋಟ ದಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ.

97. ರಿಪೋರ್ಟ್ ಡೇಟೆಡ್ 22–4–1942 ಬೈ ಅನ್ ಆಫೀಸರ್ ಆಫ್ ದಿ ಸ್ಪೆಷಲ್ ಬ್ರಾಂಚ್, ಭದ್ರಾವತಿ, ಫೈಲ್ ನಂ.139/41–42/ಎಸ್.ಬಿ., ಕೆಎಸ್‌ಎ.

98. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕೂಲಿಗಾರರ ಸಂಘ, ಭದ್ರಾವತಿ ಇವರು ತೆಗೆದುಕೊಂಡ ನಿರ್ಣಯವನ್ನು ಶಿವಮೊಗ್ಗ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆದ ಬಿ.ತಿಮ್ಮರಾಜ ಅರಸ್ ಅವರಿಗೆ ನೀಡಿದ ಪ್ರತಿ.

99. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ 1941–42, ಪು. 8, ಕೆಎಸ್‌ಎ.

100. ಕೇರಳದಾದ್ಯಂತ ಕಮ್ಯುನಿಸ್ಟರು ಇಂತಹವುಗಳನ್ನು ಅಗತ್ಯವಾದ ಕರ್ತವ್ಯವೆಂದು ತಿಳಿದು ಸತತವಾಗಿ ಮಾಡಿದ್ದರ ಫಲವೇ ಭಾರತದ ಮೊದಲ ಸಾಕ್ಷರ ರಾಜ್ಯ ಕೇರಳ ಎಂದಾಗಲು ಸಾಧ್ಯವಾಗಿದ್ದು.

101. ಸಮ್ಮೇಳನದ ಸ್ವಾಗತ ಸಮಿತಿ ಸಂಚಾಲಕರಾಗಿ ಕಕ್ಕಿಲ್ಲಾಯ ಇದ್ದರು. ಸಮ್ಮೇಳನದ ಅಧ್ಯಕ್ಷತೆ ವಹಿಸಲು ಎಸ್.ಎ.ಡಾಂಗೆ ಮೊದಲ ಬಾರಿಗೆ ಮಂಗಳೂರಿಗೆ ಬಂದರು. ಜೈಲಿನಲ್ಲಿದ್ದ ಎಸ್.ವಿ.ಘಾಟೆ ಮತ್ತು ಎಸ್.ಎನ್.ಹೊಳ್ಳ ಅವರನ್ನು ಬಿಡುಗಡೆ ಮಾಡಬೇಕೆಂಬ ಒತ್ತಾಯದ ಹಿನ್ನೆಲೆಯಲ್ಲಿ ಸಮ್ಮೇಳನದ ಸ್ಥಳಕ್ಕೆ ಘಾಟೆ

ನಗರವೆಂದು, ಪ್ರವೇಶದ ಸ್ಥಳಕ್ಕೆ ಹೊಳ್ಳ ದ್ವಾರವೆಂದು ಹೆಸರಿಡಲಾಗಿತ್ತು. ಸಮ್ಮೇಳನದಲ್ಲಿ ಅಂತಿಮವಾಗಿ ಎಸ್.ಕೆ.ಟಿ.ಯು.ಸಿ (ಸೌತ್ ಕೆನರಾ ಟ್ರೇಡ್ ಯೂನಿಯನ್ ಕಾಂಗ್ರೆಸ್) ಜಿಲ್ಲಾ ಸಮಿತಿ ರಚನೆಯಾಯಿತು. ಪ್ರಥಮ ಅಧ್ಯಕ್ಷರಾಗಿ ಕೆ.ಕೆ.ಶೆಟ್ಟಿ ಮತ್ತು ಕಾರ್ಯದರ್ಶಿಯಾಗಿ ಬಿ.ವಿ.ಕಕ್ಕಿಲ್ಲಾಯರು ಆಯ್ಕೆಯಾದರು. ಪದಾಧಿಕಾರಿಗಳಾಗಿ ಶಾಂತಾರಾಂ ಪೈ, ಕೇಶವ ಕಾಮತ್, ಸಿಂಪ್ಸನ್ ಸೋನ್ಸ್ ಮತ್ತು ಇತರರು ಆಯ್ಕೆಯಾದರು.

102. ಈ ಮುಷ್ಕರಲ್ಲಿ ಕಾರ್ಮಿಕರು 'ಬೀಡಿ ಎಳೆಯಬೇಡಿ (ಸೇದಬೇಡಿ)' ಎಂಬ ವಿಶೇಷ ಘೋಷಣೆಯನ್ನು ಹಾಕಿದ್ದು ಗಮನಾರ್ಹ. ಆದರೆ ಅದರಿಂದ ಮುಷ್ಕರದ ತೀವ್ರತೆ ಕಡಿಮೆಯಾಗುವ ಸಂಭವ ಕಂಡಿದ್ದರಿಂದ, ಘೋಷಣೆಯನ್ನು ಬದಲಾಯಿಸಿದರು. ಬೀಡಿ ಎಳೆಯಬೇಡಿ ಎಂಬ ಬೇಡಿಕೆ ಆರೋಗ್ಯದ ಕಾರಣಕ್ಕಾಗಿ ಎತ್ತಿದ ಬೇಡಿಕೆಯಲ್ಲ, ಬದಲಿಗೆ ಜನರಿಂದ ಬೀಡಿಗಳಿಗೆ ಬೇಡಿಕೆ ಕಡಿಮೆಯಾದರೆ ಮಾಲೀಕರಿಗೆ ಲಾಭ ಕಡಿಮೆಯಾಗುತ್ತದೆ. ಆಗ ಮಾಲೀಕರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಮುಂದಾಗುತ್ತಾರೆ ಎಂಬ ತಿಳುವಳಿಕೆಯಿಂದ ಬಂದದ್ದು.

103. 1945 ರಲ್ಲಿ ಬಂಗಾಳದ ಶಾಂತಾ ಮುಖರ್ಜಿ ಭಾಗವಹಿಸಿದ್ದ ಕಾರವಾರದಲ್ಲಿ ನಡೆದ ಕಿಸಾನ್ ಸಭಾ ಸಮ್ಮೇಳನಕ್ಕೆ ಬಿಜಾಪುರದಿಂದ 16 ಜನ ಬೀಡಿ ಕಾರ್ಮಿಕರನ್ನು ಕಳುಹಿಸಲಾಗಿತ್ತು. ಅವರಲ್ಲಿ ಎಂ.ಎಂ. ಮಕಾನ್‌ದಾರ, ರಾಜೇಸಾಬ ಬೇಗನಪಲ್ಲಿ, ಎಂ.ಕವಾಲ, ನೂರ್ ಅಲಂ, ಸಾಹೇಬಲಾಲ, ಹುಸೇನ್ ಸಾಬ್ ಗುಡಗುಂಟಿ ಮುಂತಾದವರು ಇದ್ದರು. ಬಾಂಬೆ ಸರ್ಕಾರ ನಿಷೇಧ ಹೇರಿದ್ದರೂ ಸಮ್ಮೇಳನವನ್ನು ನಡೆಸಿದ್ದರಿಂದ ಹಲವಾರು ಜನರನ್ನು ಬಂಧಿಸಲಾಗಿತ್ತು. ಇದರಲ್ಲಿ ಬಿಜಾಪುರದ ಬೀಡಿ ಕಾರ್ಮಿಕರೂ ಬಂಧಿತರಾಗಿದ್ದರು. ಜೈಲುವಾಸ ಅನುಭವಿಸಿ ಬಂದ ಇವರು ಕಾರ್ಮಿಕ ಸಂಘಗಳನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು (ಉಪಾಧ್ಯಾಯ 1996: 24).

104. ಫೈಲ್: ನೋಟ್ ಆನ್ ದಿ ಆಕ್ಟಿವಿಟೀಸ್ ಆಫ್ ಮಾಸ್ ಅವೇಕನರ್ಸ್ ಯೂನಿಯನ್, ಬೆಂಗಳೂರು, 15 ಆಫ್ 1937, 19–21, ಸಿಬಿ, ಪು.10, ಕೆಎಸ್‌ಎ.

105. ಕುಳಕುಂದ ಶಿವರಾಯರು ಕರ್ನಾಟಕದಲ್ಲಿ ಪ್ರಗತಿಪರ ಲೇಖಕರ ಚಳುವಳಿ ಕುರಿತು 25–12–1946 ರಲ್ಲಿ ಎಐಪಿಡಬ್ಲ್ಯುಎ ಕೇಂದ್ರಕ್ಕೆ ಬರೆದ ಪತ್ರ.

106. ಫುಲ್ ರಿಪೋರ್ಟಿಂಗ್ ಆನ್ ಫಸ್ಟ್ ಕಾಂಗ್ರೆಸ್ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಪೀಪಲ್ಸ್ ವಾರ್ ವಿಶೇಷ ಸಂಚಿಕೆ, ಜೂನ್ 13, 1943.

107. ಜಾನಕಿ ನಾಯರ್ – ಎನ್.ಎಲ್.ಉಪಾಧ್ಯಾಯ ಸಂದರ್ಶನ, ಪು. 3.

108. ಜಾನಕಿ ನಾಯರ್ ಅವರು ಎಂ.ಎಸ್.ರಾಮರಾವ್ ಅವರೊಂದಿಗೆ 28–7–1978 ರಂದು ನಡೆಸಿದ ಸಂದರ್ಶನ. ಈ ಸಂದರ್ಭದಲ್ಲಿ ರಾಮರಾವ್‌ರೊಂದಿಗೆ ಅವರ ಹೆಂಡತಿ ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿ ಗೌರಮ್ಮ ಮತ್ತು ಶಂಕರನಾರಾಯಣ ಸಹ ಇದ್ದರೆಂದು ಜಾನಕಿ ನಾಯರ್‌ರವರು ತಿಳಿಸಿದ್ದಾರೆ.

109. ಪೀಪಲ್ಸ್ ವಾರ್ ಪತ್ರಿಕೆ, 1–11–1942, ಪು. 1.

110. ಬೆಂಗಳೂರು ಸೆಂಟ್ರಲ್ ಜೈಲ್ – ಪಬ್ಲಿಕೇಷನ್ ಇನ್ ದಿ 'ಪೀಪಲ್ಸ್ ವಾರ್' ಆಫ್ ಎ ಲೆಟರ್ ಫ್ರಂ ಸಮ್ ಕಮ್ಯುನಿಸ್ಟ್ ಪ್ರಿಸನರ್ಸ್... ಫೈಲ್ ನಂ. 49(35) – ಜಿ/42, ಫೈಲ್ ನಂ. 33/49/42 – ಪೊಲಿ. (1), ಪೊಲಿಟಿಕಲ್ ಡಿಪಾರ್ಟ್‌ಮೆಂಟ್ 1942–44, ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ, ನವದೆಹಲಿ. (ಅನುವಾದ ಲೇಖಕರು).

111. G.O. No. 5558, dated 5th April 1943, Home Department, Government of Madras, quoted in Inugurthi Narasaiah, p. 235.

112. ಪಿ.ಸುಂದರಯ್ಯ, ವಿಪ್ಲವ ಪಥಂಲೋ ನಾ ಪಯಣಂ, ಭಾಗ–1, ಪು. 116–117.

❖ ❖ ❖

ಅಧ್ಯಾಯ 4

ಕರ್ನಾಟಕದ ಸ್ವಾತಂತ್ರ್ಯೋತ್ತರ ಕಮ್ಯುನಿಸ್ಟ್ ಚಳುವಳಿಯ ವಿವಿಧ ಆಯಾಮಗಳು

ಸ್ವಾತಂತ್ರ್ಯೋತ್ತರ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ವಿವಿಧ ಆಯಾಮಗಳನ್ನು ಅಭ್ಯಸಿಸಲು ಪ್ರಸ್ತುತ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಸಕ್ರಿಯವಾಗಿದ್ದ ಸಿಪಿಐ, ಬ್ರಿಟಿಷರಿಂದ ಭಾರತಕ್ಕೆ ಅಧಿಕಾರ ಹಸ್ತಾಂತರವಾದದ್ದನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲು ವಿಫಲವಾದ ಪರಿಣಾಮವಾಗಿ, ಭಾರತದಲ್ಲಿ ಸಾಮಾಜಿಕ ಕ್ರಾಂತಿಯ ದಾರಿ ಯಾವುದು ಎಂಬುದನ್ನು ತೀರ್ಮಾನಿಸುವ ವಿಚಾರದಲ್ಲಿ ತೀವ್ರವಾದ ಬಿಕ್ಕಟ್ಟನ್ನು ಎದುರಿಸಿತು. ಸಿಪಿಐನ ತೆಲಂಗಾಣ ಹೋರಾಟದ ಸಶಸ್ತ್ರ ಕ್ರಾಂತಿಯ ದಾರಿಯು ದುಃಸ್ಸಾಹಸವಾದಿ ನಿಲುವು[1] ಎಂಬ ಟೀಕೆಗೆ ಒಳಗಾಯಿತು. ಭಾರತದ ಕ್ರಾಂತಿಯ ದಾರಿಯನ್ನು ಪ್ರಸ್ತುತ ಪಡಿಸುವ 'ಕಾರ್ಯಕ್ರಮ'ವನ್ನು[2] ನಿರೂಪಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಯಿತು. ಈ ಹಿನ್ನೆಲೆಯಲ್ಲಿ 1951 ರಲ್ಲಿ ಸಿಪಿಐನ ನಿಯೋಗ ಸ್ಟಾಲಿನ್ ನೇತೃತ್ವದ[3] ಸಿಪಿಎಸ್‌ಯು ತಂಡವನ್ನು ಭೇಟಿ ಮಾಡಿತು. ಭಾರತದ ಕ್ರಾಂತಿ ಪಥವು ಚೈನಾ ಮಾದರಿಯೋ ಅಥವಾ ರಷ್ಯಾ ಮಾದರಿಯೋ ಎಂಬ ಹಲವು ಪ್ರಶ್ನೆಗಳು ಸಿಪಿಐನ ಆಂತರಿಕ ಚರ್ಚೆಗಳಲ್ಲಿ ಎದ್ದು ಬಂದವು[4]. ಇಂತಹ ಭಿನ್ನ ವಾದಗಳು ಸಿಪಿಐನ ಬೆಳವಣಿಗೆ ಮತ್ತು ವಿಸ್ತರಣೆಗೆ ಇದ್ದ ಅವಕಾಶಗಳ ಮೇಲೆ ಪರಿಣಾಮ ಬೀರಿತು. ಆದರೆ ಕರ್ನಾಟಕದಲ್ಲಿ ಸ್ವಾತಂತ್ರೋತ್ತರ ಕಾಲಘಟ್ಟದ ಆರಂಭಿಕ ಕಮ್ಯುನಿಸ್ಟ್ ಚಳುವಳಿ ಮೇಲೆ ಇದು ಅಷ್ಟೊಂದು ಪ್ರಭಾವ ಬೀರಿಲ್ಲವೆಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ನಂತರ ಏಕೀಕರಣದವರೆಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಿಪಿಐ ನಡೆಸಿದ ಚಳುವಳಿಗಳು ಮತ್ತು ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಮ್ಯುನಿಸ್ಟರ ಪಾತ್ರದ ಬಗ್ಗೆ ಚಾರಿತ್ರಿಕವಾಗಿ ಹೆಚ್ಚು ಅಧ್ಯಯನಗಳು ನಡೆಯದಿರುವ ಹಿನ್ನೆಲೆಯಲ್ಲಿ ಅಭ್ಯಸಿಸಲು ಯತ್ನಿಸಲಾಗಿದೆ. ಅದೇ ರೀತಿ ಗೋವಾ ವಿಮೋಚನಾ ಹೋರಾಟದಲ್ಲಿ ಕರ್ನಾಟಕದ ಸಿಪಿಐನ ಪಾತ್ರವನ್ನು ವಿಮರ್ಶಿಸಲಾಗಿದೆ. ಸಿಪಿಐನೊಳಗೆ ಬೆಳೆದು ಬಂದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು 1964 ರಲ್ಲಿ ಅದರ ವಿಭಜನೆಯಲ್ಲಿ ಕೊನೆಗೊಂಡ ಪ್ರಕ್ರಿಯೆಯನ್ನು, ಹಾಗೂ ಅದು ಮುಂದುವರಿದು ಮತ್ತೊಂದು ಎಡ–ತೀವ್ರವಾದಿ ವಿಭಜನೆ 1968 ರಲ್ಲಿ ಸಂಭವಿಸಿದ್ದನ್ನು ಮತ್ತು ಇವುಗಳ ಪರಿಣಾಮ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿ ಮೇಲೆ 1978 ರಲ್ಲಿ ಸಂಭವಿಸಿದ ಕುರಿತು ಚರ್ಚಿಸಲಾಗಿದೆ. 1962 ರ ಭಾರತ–ಚೀನಾ ಯುದ್ಧ ಮತ್ತು ತುರ್ತು–ಪರಿಸ್ಥಿತಿ, ಈ ಎರಡು ಸಂದರ್ಭಗಳಲ್ಲಿ ಕಮ್ಯುನಿಸ್ಟ್ ಚಳುವಳಿಯು ತೀವ್ರವಾದ ಟೀಕೆಗಳಿಗೆ ಒಳಗಾದ ಪ್ರಸಂಗಗಳ ಚಾರಿತ್ರಿಕ ಹಿನ್ನೆಲೆಯನ್ನು ಮತ್ತು ಆಂತರಿಕ ಸಂಗತಿಗಳನ್ನು, ತುರ್ತುಪರಿಸ್ಥಿತಿಯ ನಂತರದಲ್ಲಿ ರಾಜ್ಯ ರಾಜಕೀಯದಲ್ಲಿ ಆದ ಬದಲಾವಣೆಗಳನ್ನು ಮತ್ತು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (ಎಲ್‌ಪಿಜಿ) ನೀತಿಗಳ

ಆರಂಭದವರೆಗೆ ಒಟ್ಟಾರೆ ಕಮ್ಯುನಿಸ್ಟ್ ಪಕ್ಷಗಳ ಪಾತ್ರವನ್ನು ಚರ್ಚಿಸಲಾಗಿದೆ. ಸ್ವಾತಂತ್ರ್ಯದ ನಂತರದ ಅವಧಿಯಲ್ಲಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷಗಳು, ಕಾರ್ಮಿಕ, ರೈತ, ವಿದ್ಯಾರ್ಥಿ ಮುಂತಾದ ಸಮೂಹ ಸಂಘಟನೆಗಳ ಮೂಲಕ ನಡೆಸಿದ ಹೋರಾಟಗಳನ್ನು ಸಮಗ್ರೀಕರಿಸಲು ಪ್ರಯತ್ನಿಸಲಾಗಿದೆ. ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಸಾಧನೆಗಳೇನು ಮತ್ತು ಸಮಸ್ಯೆಗಳೇನು ಎಂಬುದಕ್ಕೆ ಕಾರಣಗಳನ್ನು ವಿಶ್ಲೇಷಿಸಲು, ಕಮ್ಯುನಿಸ್ಟರು ಭಾರತದಲ್ಲಿ ಜಾತಿ ಮತ್ತು ವರ್ಗದ ಕುರಿತು ಹೊಂದಿರುವ ನಿಲುವುಗಳನ್ನು ವಿಶ್ಲೇಷಿಸಲು ಪ್ರಸ್ತುತ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

❖ ❖ ❖

ಕರ್ನಾಟಕದ ಏಕೀಕರಣದವರೆಗಿನ ಕಮ್ಯುನಿಸ್ಟ್ ಚಳುವಳಿ

ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ ಹಾಗೆ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷ, ವ್ಯಾಪಕತೆಯಲ್ಲಿ ಸೀಮಿತವಾದರೂ, ರೂಪುಗೊಂಡಿದ್ದೇ ಅಖಿಲ ಭಾರತ ಮಟ್ಟದಲ್ಲಿ ಸಿಪಿಐ ಪ್ರಾರಂಭವಾದ ಸುಮಾರು ಎರಡು ದಶಕಗಳ ನಂತರ. ವಿಭಿನ್ನ ಪ್ರದೇಶಗಳ ಕೆಲವು ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದ್ದ ಸಂಘಟನಾ ಜಾಲವನ್ನು ಅದು ಹೊಂದಿತ್ತು. ಅಂತಹ ಕೇಂದ್ರಗಳಲ್ಲಿ ಸ್ವಾತಂತ್ರ್ಯಾ ನಂತರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ ನಂತರದ ಎರಡನೇ ಸ್ಥಾನ ಪಡೆದದ್ದು ರಾಜ್ಯದಲ್ಲಿ ಉತ್ಸಾಹವನ್ನು ಮೂಡಿಸಿತ್ತು. ಹೀಗಾಗಿ ಸಿಪಿಐನ ಕೇಂದ್ರ ಸಮಿತಿಯೊಳಗೆ ನಡೆಯುತ್ತಿದ್ದ ಸೈದ್ಧಾಂತಿಕ ಚರ್ಚೆಗಳು ಮತ್ತು ಅದರ ತೀವ್ರತೆ ಅದೇ ಪ್ರಮಾಣದಲ್ಲಿ ಕರ್ನಾಟಕದಲ್ಲಿ ನಡೆಯಲಿಲ್ಲ. ಆದರೆ ಸ್ವಾತಂತ್ರ್ಯಾ ನಂತರದ ಕರ್ನಾಟಕದ ಕಮ್ಯುನಿಸ್ಟ್ ಪಕ್ಷದ ಆರಂಭಿಕ ಹಂತವನ್ನು ಏರುಮುಖ ಚಟುವಟಿಕೆಗಳ ಮತ್ತು ಹೋರಾಟಗಳ ಬೆಳವಣಿಗೆಯಾಗಿಯೇ ನೋಡಬಹುದು.

ದೇಶದ ಹಲವು ಕಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಸಂಘಟನೆಗಳು ನಡೆಸುತ್ತಿದ್ದ ತೆಲಂಗಾಣ, ಪುನ್ನಪ್ರ–ವಯಲಾರ್, ತೇಭಾಗ, ವಾರ್ಲಿ ಆದಿವಾಸಿ ಹೋರಾಟ, ನಾವಿಕರ ಬಂಡಾಯ ಮುಂತಾದ ಹೋರಾಟಗಳ ಮಿಲಿಟೆನ್ಸಿಯನ್ನು ಕಂಡು ಕಾಂಗ್ರೆಸ್ ಚಿಂತಿತವಾಗಿತ್ತು. ಮುಖ್ಯವಾಗಿ ತೆಲಂಗಾಣ ಸಶಸ್ತ್ರ ರೈತ ಹೋರಾಟದ ಹಿನ್ನೆಲೆಯಲ್ಲಿ ನೆಹರೂ ಸರ್ಕಾರ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧ ಮಾಡಿದ್ದರಿಂದ, ಹಲವಾರು ಮುಖಂಡರು ಭೂಗತರಾದರು, ಹಲವರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಘಟಕ ಎನ್.ಎಲ್.ಉಪಾಧ್ಯಾಯರ ನಾಯಕತ್ವದಲ್ಲಿ ಬೆಂಗಳೂರಿನಲ್ಲಿ ಭೂಗತ ಸಂಘಟನೆಯನ್ನು ಸ್ಥಾಪಿಸಿತ್ತು. ಹುಬ್ಬಳ್ಳಿಯಲ್ಲಿ ಜನಶಕ್ತಿ ಪತ್ರಿಕೆಗೂ ಗುಪ್ತ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ರಾಜ್ಯದ ವಿವಿಧ ಕೇಂದ್ರಗಳೊಡನೆ ಸಂಪರ್ಕ ಸಾಧಿಸಲು ಶಾಂತಾರಾಂ ಪೈ ಅವರನ್ನು ನಿಯೋಜಿಸಲಾಗಿತ್ತು[5]. ಆ ವೇಳೆಗಾಗಲೇ ರಾಜ್ಯದಲ್ಲಿ ಪ್ರಾಂತೀಯ ಸಂಘಟನಾ ಸಮಿತಿ ರಚನೆಯಾಗಿತ್ತು. 1948 ರಲ್ಲಿ ನಿಷೇಧಕ್ಕೊಳಗಾಗಿದ್ದ ಸಿಪಿಐ 1951 ರಲ್ಲಿ ನಿಷೇಧ ತೆರವಾಗಿ ಹೊರ ಬಂದಿತು. ಸಂಘಟನಾ ಪರಿಸ್ಥಿತಿಗಳು ದುರ್ಬಲವಾಗಿದ್ದವು. ಪಕ್ಷದ ಪುನರ್‌ಸಂಘಟನೆ ಮಾಡಲು ಬೆಂಗಳೂರಿನ ಹೊರವಲಯದಲ್ಲಿ 1951 ರ ಕೊನೆಯಲ್ಲಿ ಎರಡು ದಿನಗಳ ಪ್ರಾಂತ ಸಮಾವೇಶ ಜರುಗಿತು. ಕೇಂದ್ರ

ಸಮಿತಿಯಿಂದ ಎಸ್.ವಿ.ಘಾಟೆ ಬಂದಿದ್ದರು. ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ಸಮಿತಿಯನ್ನು ವಿಸರ್ಜನೆ ಮಾಡಿ ಪ್ರಾಂತ ಸಂಘಟನಾ ಸಮಿತಿಯನ್ನು ತಾತ್ಕಾಲಿಕವಾಗಿ ರಚಿಸಲಾಯಿತು. ಜಿಲ್ಲೆಗಳ ಸಂಘಟನೆಯನ್ನು ಪುನರ್ರಚಿಸಿ ಸಮ್ಮೇಳನಗಳನ್ನು ಮಾಡಿ ಹೊಸ ಸಮಿತಿಗಳನ್ನು ರೂಪಿಸುವುದು ಇದರ ಉದ್ದೇಶವಾಗಿತ್ತು (ಕೃಷ್ಣರಾವ್ 2012: 23). ಈ ತಾತ್ಕಾಲಿಕ ಸಮಿತಿಗೆ ಸಿ.ಬಿ.ಮೊಣ್ಣಯ್ಯ ಕಾರ್ಯದರ್ಶಿಯಾಗಿದ್ದರು[6].

ನಿಷೇಧ ವಾಪಸಾತಿ ನಂತರ ಸಿಪಿಐ ಕೇಂದ್ರ ಸಮಿತಿಯು ಕಾರ್ಯಕ್ರಮದ ಕರಡನ್ನು ಸಿದ್ಧಪಡಿಸಿ ಪಕ್ಷದೊಳಗೆ ರಾಷ್ಟ್ರವ್ಯಾಪಿ ಚರ್ಚೆಗೆ ಮುಂದಾಯಿತು. ಕರ್ನಾಟಕ ರಾಜ್ಯ ಮಟ್ಟದಲ್ಲಿ ಇದನ್ನು ಚರ್ಚಿಸಲು ಮತ್ತು ತಮ್ಮ ಅಭಿಪ್ರಾಯಗಳನ್ನು ನೀಡಲು 1951 ರಲ್ಲಿ ಮಂಗಳೂರಿನ ಉಳ್ಳಾಲದಲ್ಲಿ ಸಮ್ಮೇಳನವನ್ನು ನಡೆಸಲಾಯಿತು[7]. ಈ ಸಮ್ಮೇಳನವು ಭೂಗತ ಜೀವನ ಮತ್ತು ದಬ್ಬಾಳಿಕೆಗಳಿಂದ ಶಿಥಿಲಗೊಂಡಿದ್ದ ಸ್ಥಳೀಯ ಪಕ್ಷವನ್ನು ಪುನಶ್ಚೇತನಗೊಳಿಸುವುದಕ್ಕೂ ಸಹಾಯವಾಯಿತು. ಮುಖ್ಯವಾಗಿ ತೆಲಂಗಾಣ ಹೋರಾಟ ಮತ್ತು ಭಾರತದ ಕ್ರಾಂತಿಯ ದಾರಿ ಯಾವುದು ಎಂಬ ವಿಚಾರದಲ್ಲಿ ಬಂದಿದ್ದ ಗೊಂದಲಗಳು, ನಿಷೇಧದ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಪಕ್ಷ ಎದುರಿಸುತ್ತಿದ್ದ ದಾಳಿ ದಬ್ಬಾಳಿಕೆಗಳಿಂದಾಗಿ ಸಮಸ್ಯೆಗಳು ಗಂಭೀರವಾಗಿದ್ದವು. ಇವೆಲ್ಲವನ್ನೂ ಪರಿಹರಿಸಿಕೊಳ್ಳುವ ಅಗತ್ಯವಿತ್ತು. ಸಮ್ಮೇಳನದ ಕೊನೆಯಲ್ಲಿ ನೂತನ ರಾಜ್ಯ ಸಮಿತಿ ರಚನೆಯಾಗಿ ಎನ್.ಎಲ್.ಉಪಾಧ್ಯಾಯ ಅದರ ಕಾರ್ಯದರ್ಶಿಯಾದರು.

ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ನಿಷೇಧಕ್ಕೆ ಮುಖ್ಯ ಕಾರಣವಾದ ತೆಲಂಗಾಣ ಹೋರಾಟವು ಮೈಸೂರು ರಾಜ್ಯದಲ್ಲಿ ಅಷ್ಟಾಗಿ ಪರಿಣಾಮ ಉಂಟು ಮಾಡಿರಲಿಲ್ಲ. ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದ ಕರ್ನಾಟಕದ ಪ್ರದೇಶಗಳಲ್ಲಿಯೂ ತೀವ್ರ ಪ್ರಭಾವ ಬೀರಲಿಲ್ಲ. ಗುಲ್ಬರ್ಗದ ಶ್ರೀನಿವಾಸ ಗುಡಿಯವರು ತೆಲಂಗಾಣ ಸಶಸ್ತ್ರ ಹೋರಾಟದ ಅನುಭವ ಪಡೆದಿದ್ದರು. ಆ ಸಂದರ್ಭಕ್ಕೆ ಗುಲ್ಬರ್ಗ ಭಾಗದಲ್ಲಿ ಗಣನೀಯ ಪ್ರಮಾಣದ ಕಾರ್ಮಿಕವರ್ಗ ಇರಲಿಲ್ಲ. ಶಹಾಬಾದಿನ ಎಸಿಸಿ ಸಿಮೆಂಟ್ ಕಾರ್ಮಿಕರು ಇದ್ದರು. ಇವರು ಅದರ ಪರವಾದ ಹೋರಾಟಗಳಲ್ಲಿ ಭಾಗವಹಿಸಿದ್ದರು[8]. ಉಳ್ಳಾಲದ ಸಮ್ಮೇಳನ ಮತ್ತು ನಂತರ ನಡೆದ ಸಿಪಿಐನ ಕಲ್ಕತ್ತಾ ಸಮ್ಮೇಳನದ ಚರ್ಚೆ ಮತ್ತು ತೀರ್ಮಾನಗಳ ಆಧಾರದಲ್ಲಿ ರಾಜ್ಯದಲ್ಲಿ ಸಮೂಹ ಸಂಘಟನೆಗಳು ಮತ್ತು ಪಕ್ಷದ ಚಟುವಟಿಕೆಗಳನ್ನು ತೀವ್ರಗೊಳಿಸುವ ನಿಲುವಿಗೆ ಬಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಸ್ತೃತವಾಗಿದ್ದ ಸ್ವಾತಂತ್ರ್ಯಪೂರ್ವ ಹೋರಾಟಗಳು ಸ್ವಾತಂತ್ರ್ಯಾ ನಂತರವೂ ಮುಂದುವರಿದವು. ದೇಶ ವಿಭಜನೆಯ ಜೊತೆಯಲ್ಲೇ ಬಂದ ಹಿಂದೂ–ಮುಸ್ಲಿಂ ಸಮಸ್ಯೆ ಉತ್ತರ ಭಾರತದಲ್ಲಿದ್ದಷ್ಟು ದಕ್ಷಿಣ ಭಾರತದಲ್ಲಿ ಇರಲಿಲ್ಲ. ಕೋಮುದ್ವೇಷದ ಆ ಹುಚ್ಚಿನ ದಿನಗಳಲ್ಲೂ ದಕ್ಷಿಣ ಕನ್ನಡ ಜಿಲ್ಲೆ ಶಾಂತಿಯನ್ನು ಕಾಪಾಡಿಕೊಂಡಿತ್ತು. ಸಣ್ಣ–ಪುಟ್ಟ ಘಟನೆಗಳು ನಡೆದಾಗ ಕಮ್ಯುನಿಸ್ಟ್ ಪಕ್ಷ ಮಧ್ಯಪ್ರವೇಶ ಮಾಡಿ ಮತ ನಿರಪೇಕ್ಷತೆಯ ಮಹತ್ವವನ್ನು ಹೇಳಿ ತಿಳಿಗೊಳಿಸುವ ಕೆಲಸ ಮಾಡುತ್ತಿತ್ತು. (ಕಕ್ಕಿಲ್ಲಾಯ 2003, 139). ಕಮ್ಯುನಿಸ್ಟರ ಇಂತಹ ಪ್ರಯತ್ನಗಳನ್ನು 'ದೇವರಲ್ಲಿ ನಂಬಿಕೆಯಿಲ್ಲದ' ಮತ್ತ 'ಮತಶ್ರದ್ಧೆಯಲ್ಲಿ ನಂಬಿಕೆಯಿಲ್ಲದ' ಕೆಲಸಗಳೆಂದು


ಮತಧರ್ಮಗಳನ್ನು ರಾಜಕೀಯದೊಂದಿಗೆ ಬೆರೆಸುವ ಹಿಂದೂ ಮತ್ತು ಮುಸ್ಲಿಂ ಮತಾಂಧರು ಖಂಡಿಸುತ್ತಿದ್ದರೆಂದು ಕಕ್ಕಿಲ್ಲಾಯ ಹೇಳಿದ್ದಾರೆ. ಮಲಬಾರಿನಲ್ಲಿ ಮುಸ್ಲಿಂ ಲೀಗ್ ಬೆಳವಣಿಗೆಯ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬೀರಿತು ಮತ್ತು ಕಾರ್ಮಿಕರ ಒಗ್ಗಟ್ಟಿನ ವಿಭಜನೆಗೆ ಕಾರಣವಾಯಿತು. ಬಂದರು ಕಾರ್ಮಿಕರು, ದೋಣಿಗಳಲ್ಲಿ ಮಣ್ಣು ಮತ್ತು ಸರಕು ಸಾಗಿಸುವ ಕೆಲಸಗಾರರು ಹೆಚ್ಚಿನವರು ಕೆಂಬಾವುಟದ ಅಡಿಯಲ್ಲಿ ಸಂಘಟಿತರಾಗಿದ್ದವರು, ಕ್ರಮೇಣ ಲೀಗಿನ ಪ್ರಭಾವಕ್ಕೆ ಒಳಗಾಗಿ ಪ್ರತ್ಯೇಕವಾದರು. 1948 ಜನವರಿ 30 ರಂದು ಗಾಂಧಿಯನ್ನು ಆರ್‌ಎಸ್‌ಎಸ್ ಪ್ರೇರಿತ ವ್ಯಕ್ತಿ ಕೊಲೆ ಮಾಡಿದ ಸುದ್ದಿ ಹಬ್ಬಿದಾಗ ಮಂಗಳೂರಿನಲ್ಲಿ ಕೆಲವು ಕಡೆಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸುವ ವಿಕೃತ ಪ್ರದರ್ಶನಗಳು ನಡೆದವು. ಈ ವಿಚಾರವಾಗಿ ಕಮ್ಯುನಿಸ್ಟರಿಗೂ ಮತ್ತು ಹಿಂದೂ ಮೂಲಭೂತವಾದಿಗಳಿಗೂ ಹಲವು ಕಡೆಗಳಲ್ಲಿ ಘರ್ಷಣೆಗಳು ನಡೆದವು.

ಸ್ವಾತಂತ್ರ್ಯ ನಂತರ ರಾಜ ಸಂಸ್ಥಾನಗಳು ಭಾರತ ಒಕ್ಕೂಟದಲ್ಲಿ ವಿಲೀನಗೊಳ್ಳಬೇಕೆಂಬ ಬೇಡಿಕೆ ತೀವ್ರಗೊಂಡ ಭಾಗವಾಗಿ **ಮೈಸೂರು ವಿಲೀನಕ್ಕಾಗಿ** ಮತ್ತು **ಜವಾಬ್ದಾರಿ ಸರ್ಕಾರಕ್ಕಾಗಿ** ನಡೆದ ಹೋರಾಟದಲ್ಲಿ ಸಿಪಿಐ ಸಕ್ರಿಯಾವಾಗಿ ಭಾಗವಹಿಸಿತು. ದಕ್ಷಿಣ ಕನ್ನಡ ಜಿಲ್ಲೆಯಿಂದ ಹಲವು ತಂಡಗಳನ್ನು ಮೈಸೂರು ರಾಜ್ಯದೊಳಕ್ಕೆ ಕಳುಹಿಸಲಾಗಿತ್ತು. ಅದರಲ್ಲಿ ಶಿವಶಂಕರರಾವ್, ಸಂಕಪ್ಪ, ದಾಸ ಶೇರಿಗಾರ ಇವರು ಭದ್ರಾವತಿಯಲ್ಲಿ ಬಂಧನಕ್ಕೊಳಗಾಗಿದ್ದರು. ಭೂಗತ ಚಟುವಟಿಕೆಯ ಸಂದರ್ಭದಲ್ಲಿ ಮಂಗಳೂರಿನಲ್ಲಿ ಒಂದು ಗಮನಾರ್ಹ ಘಟನೆ ನಡೆಯಿತು. ಕಮ್ಯುನಿಸ್ಟ್ ನಾಯಕರು ಭೂಗತವಾಗಿ ಕೆಲಸ ಮಾಡುವ ಭಾಗವಾಗಿ ಎಸ್.ಎನ್.ಹೊಳ್ಳ[9] ಅವರು ಜಪ್ಪು ಬಪ್ಪಾಲ್ ಪ್ರದೇಶದ ಕಾರ್ಮಿಕರ ಮನೆಯಲ್ಲಿದ್ದ ವಿಷಯ ಗೊತ್ತಾಗಿ ಪೊಲೀಸರು ಅವರನ್ನು 1948 ರ ಮಧ್ಯ ಭಾಗದಲ್ಲಿ ಬಂಧಿಸಿದರು. ಡಿಐಆರ್ ಅಡಿ ಅವರನ್ನು ಕಣ್ಣಾನೂರು ಜೈಲಿಗೆ ಪೊಲೀಸರ ಕಾವಲಿನಲ್ಲಿ ರೈಲಿನಲ್ಲಿ ರವಾನಿಸಲಾಗುತ್ತಿತ್ತು. ರೈಲು ಮಂಜೇಶ್ವರ ತಲುಪುವಷ್ಟರಲ್ಲಿ ರೈಲು ಬೋಗಿಗೆ ನುಗ್ಗಿದ ಕೆಲವು ಯುವಕರು ಹೊಳ್ಳರನ್ನು ಎತ್ತಿಕೊಂಡು ರೈಲಿನಿಂದ ಜಿಗಿದು ಪಾರಾಗಿಬಿಟ್ಟರು. ಇದು ದೊಡ್ಡ ಸುದ್ದಿಯಾಗಿ ನಂತರದಲ್ಲಿ ಕಮ್ಯುನಿಸ್ಟರು ಸಾಕಷ್ಟು ದಾಳಿಗಳನ್ನು ಎದುರಿಸಿದರು. ಇಂತಹ ಒಂದು ಕಾರ್ಯಾಚರಣೆಯಲ್ಲಿ ಎಂ.ಹೆಚ್.ಕೃಷ್ಣಪ್ಪನವರ ಪಾತ್ರ ಮುಖ್ಯವಾಗಿತ್ತು ಎನ್ನಲಾಗಿದೆ (ಶ್ರೀಯಾನ್: 2017). ಭೂಗತವಾಸ ಮತ್ತು ಚಟುವಟಿಕೆಗಳ ಹಿನ್ನೆಲೆಯಲ್ಲಿ 1950 ರಲ್ಲಿ ದಕ್ಷಿಣ ಕನ್ನಡದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಪುನರ್‌ಸಂಘಟಿಸಲಾಯಿತು[10].


ಎಸ್.ಎನ್.ಹೊಳ್ಳ

1952 ರ ಚುನಾವಣೆಯ ನಂತರ ಹೊಸ ಸಂಪರ್ಕಗಳೂ ಸೇರಿದಂತೆ **ಕೋಲಾರ** ಜಿಲ್ಲೆಯಾದ್ಯಂತ ಬಂದ ಸಂಪರ್ಕಗಳನ್ನು ಬಳಸಿ ಕಮ್ಯುನಿಸ್ಟ್ ಪಕ್ಷವನ್ನು ವಿಸ್ತರಿಸುವ ಕೆಲಸ ನಡೆಯಿತು. ಸವರಿದಾಸ್, ವಕೀಲರಾದ ಬೈರಾರೆಡ್ಡಿ, ಎಂ.ರತ್ನಂ, ಮೇಷಕ್ ಮುಂತಾದವರ ಜೊತೆಗೆ ಆರ್.ವೆಂಕಟರಾಮಯ್ಯ, ಜಕ್ಕರಸಕುಪ್ಪ ಡಿ.ನಾರಾಯಣ, ಚಿಕ್ಕಬಳ್ಳಾಪುರದ ಎಸ್.ಲಕ್ಷ್ಮಯ್ಯ, ಹೆಚ್.ಎಸ್.ರಾಮರಾವ್, ಚಿಂತಾಮಣಿಯ ಅಬ್ದುಲ್ ಮಜೀದ್, ಮುನಿಸ್ವಾಮಿಗೌಡ,

ಟಿ.ಕೆ.ಗಂಗಿರೆಡ್ಡಿ, ಬಾಗೇಪಲ್ಲಿಯ ಅಪ್ಪಸ್ವಾಮಿರೆಡ್ಡಿ, ಮುಂತಾದವರು ಕಮ್ಯುನಿಸ್ಟ್ ಪಕ್ಷಕ್ಕೆ ಆಕರ್ಷಿತರಾದರು. ಈ ಹಿನ್ನೆಲೆಯಲ್ಲಿ 1952 ರಲ್ಲಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಆರ್.ವೆಂಕಟರಾಮಯ್ಯ ಅದರ ಮೊದಲ ಕಾರ್ಯದರ್ಶಿಯಾಗಿದ್ದರು[11].


ಆರ್.ವೆಂಕಟರಾಮಯ್ಯ

ದೇಶದ ಎಲ್ಲಾ ಪ್ರದೇಶಗಳಲ್ಲಿ ನಡೆದಂತೆ ಸಿಪಿಐ ನಿಷೇಧದ ಪರಿಣಾಮ, ಕೆಜಿಎಫ್‌ನಲ್ಲಿ ಕಮ್ಯುನಿಸ್ಟರನ್ನು ಬಂಧಿಸಿ ಜೈಲಿಗೆ ಹಾಕುವ ಕೆಲಸ ಜೋರಾಗಿಯೇ ನಡೆಯಿತು. 1948 ರ ಏಪ್ರಿಲ್ 1 ರಂದು ಕೆಜಿಎಫ್‌ಗೆ ಭೇಟಿ ನೀಡಿದ ಮೈಸೂರು ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರ ನಿರ್ದೇಶನದಂತೆ ಏಪ್ರಿಲ್ 3 ರಂದು ಸುಮಾರು 70 ಜನ ಕಮ್ಯುನಿಸ್ಟ್ ಮುಖಂಡರನ್ನು ಬಂಧಿಸಿದರು. 1949 ರಲ್ಲಿ ಇವರನ್ನು ಬಿಡುಗಡೆ ಮಾಡಿ ಗಡೀಪಾರು ಮಾಡಲಾಯಿತು. ಇವರೆಲ್ಲರೂ ತಮ್ಮ ಕೆಲಸಗಳನ್ನು ಕಳೆದುಕೊಂಡರು (ಅಚ್ಯುತ 1987: 23). ಕಾರ್ಮಿಕ ಸಂಘಗಳನ್ನು ತಮ್ಮ ಕೈವಶ ಮಾಡಿಕೊಳ್ಳಲು ಕಾಂಗ್ರೆಸಿಗರು ಮತ್ತು ಸೋಷಿಯಲಿಸ್ಟರು ಸರ್ಕಾರದ ಬೆಂಬಲದೊಂದಿಗೆ ಪ್ರಯತ್ನಿಸಿದರು. ಮೈಸೂರು ಸರ್ಕಾರದ ಕಮ್ಯುನಿಸ್ಟ್ ವಿರೋಧಿ ನೀತಿ ತೀವ್ರಗೊಳ್ಳುತ್ತಾ ಹೋಯಿತು. ಮುಖಂಡರನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಹೈಕೋರ್ಟಿನಲ್ಲಿ ಎಂ.ವಿ.ಗೋವಿಂದನ್, ಕೆ.ಎಸ್.ವಾಸನ್ ಮತ್ತು ಎಸ್.ಆರ್.ವಿಠಲರಾವ್, ಅನಂತಸ್ವಾಮಿರಾವ್ ಇವರ ಪರವಾಗಿ ಹೇಬಿಯಸ್ ಕಾರ್ಪಸ್ ಸಲ್ಲಿಕೆಯಾಯಿತು. ಹೈಕೋರ್ಟು ಗೋವಿಂದನ್ ಮತ್ತು ವಾಸನ್ ಅವರ ಅರ್ಜಿಗಳನ್ನು ಪುರಸ್ಕರಿಸಿತು[12].ಮೈಸೂರು ಸರ್ಕಾರದ ಕಮ್ಯುನಿಸ್ಟ್ ವಿರೋಧಿ ನಿಲುವು ಎಷ್ಟರಮಟ್ಟಿಗೆ ಇತ್ತೆಂದರೆ, ಕಮ್ಯುನಿಸ್ಟರ ಸಂಘಗಳ ಬದಲಿಗೆ ಕಾಂಗ್ರೆಸ್‌ನ ಕಾರ್ಮಿಕ ಸಂಘವಾಗಿದ್ದ ಐಎನ್‌ಟಿಯುಸಿಯನ್ನು ಬೆಳೆಸಬೇಕೆಂಬ ಸ್ಪಷ್ಟ ಉದ್ದೇಶವನ್ನು ಅದು ಪ್ರಕಟಿಸಿತು.


> ಚಿನ್ನದ ಗಣಿಗಳ ಕಾರ್ಮಿಕರ ನಡುವೆ ಕಮ್ಯುನಿಸ್ಟ್ ಮತ್ತು ಎಡಪಂಥೀಯ ಪ್ರಭಾವವನ್ನು ಮತ್ತು ಕೋಮುವಾದವನ್ನು ಎದುರಿಸುವ ಸಲುವಾಗಿ ಐಎನ್‌ಟಿಯುಸಿ ಗಣಿ ಕಾರ್ಮಿಕರನ್ನು ಸಂಘಟಿಸಬೇಕು. ಇಷ್ಟಕ್ಕೂ ಮೈಸೂರು ಕಾಂಗ್ರೆಸ್ ಸರ್ಕಾರವನ್ನು ಹೊಂದಿದೆ ಮತ್ತು ಈ ರಾಜ್ಯದಲ್ಲಿ ಕೆಲಸ ಮಾಡುವ ಕಾರ್ಮಿಕರ ಉಸ್ತುವಾರಿಯನ್ನು ಐಎನ್‌ಟಿಯುಸಿ ತೆಗೆದುಕೊಳ್ಳುವುದು ಸರಿಯಾದುದಾಗಿದೆ[13]

ಎಂದು ಮೈಸೂರು ಸರ್ಕಾರ ಹೇಳಿತು.

> ಗಂಭೀರವಾದ ಆಹಾರದ ಕೊರತೆ ಉಂಟಾದ ಸಂದರ್ಭದಲ್ಲಿ ಅದರ ವಿರುದ್ಧ ಕಮ್ಯುನಿಸ್ಟ್ ಪಕ್ಷ ದೇಶವ್ಯಾಪಿ ಮಧ್ಯಪ್ರವೇಶಿಸುತ್ತಿರುವುದನ್ನು ಮತ್ತು ಭಾರತದ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಗಣನೀಯ ಸಂಖ್ಯೆಯಲ್ಲಿ ಚುನಾಯಿತರಾಗುವುದನ್ನು ಕಂಡು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಡೀನ್ ಅಚೆಸನ್:
>
> ಇತ್ತೀಚಿನ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಅಧಿಕ ಸಂಖ್ಯೆಯಲ್ಲಿ ಬಂದಿರುವರು, ಭಾರತವು ಕಮ್ಯುನಿಸ್ಟಾದರೆ ಇಡೀ ಏಷ್ಯಾಕ್ಕೆ ಅಪಾಯ ತಟ್ಟುವುದು. ಈ ಕಾರಣ ಬರುವ ನಾಲ್ಕು ವರ್ಷಗಳೊಳಗಾಗಿ ನಾವು 70 ಲಕ್ಷ ಟನ್ ಆಹಾರ ಧಾನ್ಯಗಳನ್ನೊದಗಿಸಲೇಬೇಕು[14].


ಎಂದು ಆತಂಕ ವ್ಯಕ್ತಪಡಿಸಿದ್ದರು.

ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾವತಿ ಕಮ್ಯುನಿಸ್ಟ್ ಚಳುವಳಿಯ ಆರಂಭಿಕ ಕೇಂದ್ರ. 1941–42 ರಲ್ಲಿ ಎನ್.ಡಿ.ಶಂಕರ್ ಮೂಲಕ ಕಾರ್ಮಿಕ ಚಳುವಳಿ ಮತ್ತು ಅದರ ಮೂಲಕ ಕಮ್ಯುನಿಸ್ಟ್ ಪಕ್ಷ ಬೆಳೆಯಿತು. ಸ್ವಾತಂತ್ರ್ಯಾ ನಂತರದಲ್ಲಿ ಚಂದು ಕುಟ್ಟಿಯವರು[15] ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮುಖಂಡರಾಗಿ ಚಟುವಟಿಕೆ ನಡೆಸುತ್ತಿದ್ದರು. ನಂತರದ ದಿನಗಳಲ್ಲಿ ಅಪ್ಪಣ್ಣ ಹೆಗಡೆ ಮತ್ತು ಕೆ.ಎಂ.ಶ್ರೀನಿವಾಸ್ ಇವರು ಪೂರ್ಣವಾಗಿ ಕಮ್ಯುನಿಸ್ಟ್ ಪಕ್ಷದ ಜೊತೆ ಗುರುತಿಸಿಕೊಂಡು ರೈತ ಚಳುವಳಿಯನ್ನು ಕಟ್ಟಿದರು. ಮುಂದಿನ ದಿನಗಳಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿ ಸಂಘದ ಮುಖಂಡರಾಗಿದ್ದ ಜಿ.ಎಸ್.ನಾಗರಾಜ್[16] ಅವರು ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿ ಬಂದರು. ತೀರ್ಥಹಳ್ಳಿಯಲ್ಲಿ ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡಿದ್ದ ವಾಮನ ಭಟ್ಟರು ಗೇಣಿದಾರರ ಹೋರಾಟಗಳಿಗೆ ಬೆಂಬಲಿಸುತ್ತಾ ಕಮ್ಯುನಿಸ್ಟ್ ಪಕ್ಷದಲ್ಲಿ ದುಡಿದರು. ಅಲ್ಲಿ ಷೇಕ್ ಅಹಮದ್ ಮತ್ತು ಅವರ ಸಹೋದರ ಮಹಮ್ಮದ್ ಸಾಬ್ ಮತ್ತಿತರರು ಬೀಡಿ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವಲ್ಲಿ ಸಕ್ರಿಯವಾಗಿದ್ದರು. ಅಂದು ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಕಮ್ಯುನಿಸ್ಟ್ ಪಕ್ಷದ ಸಂಘಟನೆ ಇತ್ತು[17]. ದೂರ್ವಾಸಪುರದ ಶಾಮಾಚಾರ್, ರಂಜಿತ್‌ಕಟ್ಟೆಯ ಮಹಮದ್‌ಸಾಬ್, ಸುರಳಿ ಸುಬ್ಬಯ್ಯ, ಯಡಗುಡ್ಡೆ ರಾಘವೇಂದ್ರ, ಜಾವಗಲ್‌ನ ವಿಜಯ್‌ಕುಮಾರ್ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಶ್ರಮಿಸಿದರು.



ಚಂದು ಕುಟ್ಟಿ

ತುಮಕೂರಿನ ಆರಂಭಿಕ ಕಮ್ಯುನಿಸ್ಟರಲ್ಲಿ ಮಹಮದ್ ದಸ್ತಗೀರ್ ಮೊದಲಿಗರು. ಬಾಂಬೆಯಲ್ಲಿ ಟೀ ಅಂಗಡಿಯಲ್ಲಿ ಟೀ ಮಾರುವ ಹುಡುಗನಾಗಿ ಅಲ್ಲಿನ ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದು, ಅವರ ಸಲಹೆ ಪಡೆದು ಕುಣಿಗಲ್‌ಗೆ ವಾಪಸ್ ಬಂದು ಕೆ.ವಿ.ಕೃಷ್ಣಸ್ವಾಮಿ ಎಂಬುವರ ಸಂಪರ್ಕ ಪಡೆದು ಕಮ್ಯುನಿಸ್ಟ್ ಪಕ್ಷದ ಅಡಿಪಾಯ ಹಾಕಿದರು. ಮೊದಲನೆಯದಾಗಿ ಕುಣಿಗಲ್ ಸ್ಟಡ್ ಫಾರ್ಮ್ ನೌಕರರನ್ನು ಸಂಘಟಿಸಿದರು. ಸುಮಾರು 110 ಜನ ಕಾರ್ಮಿಕರು ಖಾಯಂ ಆದರು. ಕುಣಿಗಲ್‌ನ ಪೌರಕಾರ್ಮಿಕರನ್ನು ಸಂಘಟಿಸಿದರು. ಇವರ ಬೆಂಬಲದಿಂದ ದಸ್ತಗೀರ್ ಅವರು ಮುನಿಸಿಪಾಲಿಟಿ ಸದಸ್ಯರಾಗಿ ಗೆದ್ದರು. ಮುನಿಸಿಪಲ್ ಕಾರ್ಮಿಕರು ನಿಂತುಕೊಂಡೇ ಸಂಬಳ ಪಡೆಯುವುದನ್ನು ವಿರೋಧಿಸಿ, ಅವರನ್ನು ಕುರ್ಚಿ ಮೇಲೆ ಕುಳ್ಳರಿಸಿ ಸಂಬಳ ಕೊಡಬೇಕೆಂದು ಹೋರಾಟ ನಡೆಯಿತು. ಅದರಲ್ಲಿ ಜಯಗಳಿಸಿದರು. ಜೊತೆಗೆ ಇವರನ್ನು ಖಾಯಂಗೊಳಿಸಿದರು. ದಸ್ತಗೀರ್ ಟೈಲರ್ ಕೆಲಸ ಮಾಡುತ್ತಿದ್ದರಿಂದ ರೈತರ ಸಂಪರ್ಕ ವ್ಯಾಪಕವಾಗಿ ಬಂದಿತ್ತು. ಅದನ್ನು ಉಪಯೋಗಿಸಿ ರೈತಸಂಘವನ್ನು ಕಟ್ಟಲು ಮುಂದಾದರು. ಇದರಿಂದ ಗ್ರಾಮೀಣ ಪ್ರದೇಶಗಳಿಗೆ ಕಮ್ಯುನಿಸ್ಟ್ ಪಕ್ಷವನ್ನು ತೆಗೆದುಕೊಡು ಹೋಗಲು ಸಾಧ್ಯವಾಯಿತು[18].



ಮಹಮದ್ ದಸ್ತಗೀರ್

ದಾವಣಗೆರೆಯಲ್ಲಿ ಬೆಳೆಯುತ್ತಿದ್ದ ಕಾರ್ಮಿಕ ಸಂಘಟನೆಗಳಿಗೆ ನೆರವು ನೀಡಲು ಮಂಗಳೂರಿನಿಂದ ಶಿವಶಂಕರರಾವ್ ಅವರನ್ನು ಕಳುಹಿಸಲಾಗಿತ್ತು. ಕಾಟನ್ ಮಿಲ್ ಕೆಲಸಗಾರರ ಮುಷ್ಕರವೊಂದರಲ್ಲಿ ಭಾಗವಹಿಸಿದ್ದಕ್ಕೆ ಬಂಧನವಾಗಿದ್ದರು. 1949 ರಲ್ಲಿ ಆವರಗೆರೆ ಗ್ರಾಮದಲ್ಲಿ ಹತ್ತಿ ಗಿರಣಿ ಕಾರ್ಮಿಕರ ಸಭೆ ನೆಪದಲ್ಲಿ ಮುರುಗಯ್ಯ ಮತ್ತು ಶಿವಶಂಕರ್‌ರಾವ್ ಅವರ ಮೇಲೆ ದಾಳಿ ನಡೆಯಿತು. ದಾಳಿಯಲ್ಲಿ ಶಿವಶಂಕರ್‌ರಾವ್ ಹಲ್ಲುಗಳು ಮುರಿದಿದ್ದವು. ಕಮ್ಯುನಿಸ್ಟರ ಮೇಲೆ ದಾಳಿಗಳನ್ನು ಮಾಡಲೆಂದೇ ಮಾಲೀಕರು ಗೂಂಡಾ ಪಡೆಗಳನ್ನು ಸಾಕಿದ್ದರು. ಮುಂದೆ ಕಕ್ಕಿಲ್ಲಾಯರೂ ದಾವಣಗೆರೆ ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ ಬಂಧನವಾಗಿ ಜೈಲುವಾಸ ಅನುಭವಿಸಿದ್ದರು. ಸಿಂಪ್ಸನ್ ಸೋನ್ಸ್, ಎಂ.ಸಿ.ನರಸಿಂಹನ್ ಮುಂತಾದವರ ಕೆಲಸಗಳಿಂದಾಗಿ ಇಲ್ಲಿ ದೊಡ್ಡ ಸಂಖ್ಯೆಯ ಕಾರ್ಮಿಕ ಮುಖಂಡರು ಪಂಪಾಪತಿ, ಸುರೇಶ್, ಶೇಖರಪ್ಪ, ಹೆಚ್.ಕೆ.ರಾಮಚಂದ್ರಪ್ಪ, ಹಾನುಗೋಡು ರಾಮಚಂದ್ರಪ್ಪ, ತಿಪ್ಪೇಸ್ವಾಮಿ ಮುಂತಾದವರು ಬೆಳೆದು ಬಂದರು (ಶಿರಿ 2003; 139). ಮಿಲ್ ಮಾಲೀಕರ ಗೂಂಡಾ ದಾಳಿಗಳಿಗೆ ಕಮ್ಯುನಿಸ್ಟ್ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿರೋಧ ಒಡ್ಡಲು ತೀರ್ಮಾನಿಸಿದರು. 1964 ರ ಮಾರ್ಚ್ 10 ರಂದು ಗೂಂಡಾ ದಾಳಿಯನ್ನು ಪ್ರತಿರೋಧಿಸಿದಾಗ ಹೆಗ್ಗಪ್ಪ ಎಂಬ ಮಾಲೀಕರ ಗೂಂಡಾ ಸಾವನ್ನಪ್ಪಿದ. ಈ ಪ್ರಕರಣದಲ್ಲಿ ಕೇಸ್ ನಡೆದು ತಿಪ್ಪೇಸ್ವಾಮಿಯವರಿಗೆ ಜೀವಾವಧಿ ಶಿಕ್ಷೆ ಮತ್ತು ಪಂಪಾಪತಿ ಮತ್ತಿತರರಿಗೆ ಎರಡು ವರ್ಷ ಶಿಕ್ಷೆಯಾಯಿತು. ಇದರಿಂದ ಕಾರ್ಮಿಕ ಚಳುವಳಿಗೆ ಧಕ್ಕೆಯಾಯಿತು. ಉಳಿದವರಲ್ಲಿ ಅನೇಕರನ್ನು ಮಾಲೀಕರು ಕೆಲಸದಿಂದ ವಜಾ ಮಾಡಿದರು. ಈ ಪರಿಸ್ಥಿತಿ ಇರುವಾಗಲೇ ಕಮ್ಯುನಿಸ್ಟ್ ಪಕ್ಷ ವಿಭಜನೆಯಾದದ್ದು ಇಲ್ಲಿ ಗಂಭೀರ ಪರಿಣಾಮವನ್ನು ಬೀರಿತು. ಇದರಿಂದ ದಾಯಾದಿ ಮತ್ಸರಕ್ಕೆ ಅವಕಾಶವಾಯಿತೆಂದು ಸಿಂಪ್ಸನ್ ಸೋನ್ಸ್ ಅಭಿಪ್ರಾಯಪಟ್ಟಿದ್ದಾರೆ.



ಪಂಪಾಪತಿ

ಮೈಸೂರಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲೇ ಮಾರ್ಕ್ಸ್‌ವಾದದ ಪ್ರಭಾವ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರ ನಡುವೆ ಆಗಿತ್ತು. ಕುಣಿಗಲ್ ಶ್ರೀನಿವಾಸಮೂರ್ತಿಯವರ[19] ಸಹೋದರ ಕುಣಿಗಲ್ ಶ್ರೀಧರ್[20] ಪ್ರಾಧ್ಯಾಪಕರಾದ ಬಿ.ಎಸ್.ಕೇಶವನ್[21] ಮುಂತಾದವರು ಈ ಗುಂಪುಗಳಲ್ಲಿದ್ದರು. ಶೈಕ್ಷಣಿಕ ಮತ್ತು ಇತರೆ ವಲಯಗಳಲ್ಲೂ[22] ಸಾಕಷ್ಟು ಇದರಿಂದ ಪ್ರಭಾವಿತರಾಗಿದ್ದರು. ಆರಂಭದ ಮೂರು ವರ್ಷಗಳು (1948–1951) ಉಗ್ರಪ್ಪ, ರಾಜಶೇಖರ್, ಎನ್.ಪಿ.ಶಂಕರನಾರಾಯಣ ರಾವ್, ರೈಲ್ವೆ ಕಾರ್ಮಿಕ ದೇವರಾಜೇ ಅರಸ್ ಮುಂತದವರೆಲ್ಲಾ ಜೈಲಿನಲ್ಲಿದ್ದರು. ಜೈಲಿನೊಳಗೆ ಸುಧಾರಣೆಗಳಿಗಾಗಿ ಹೋರಾಟ ಮಾಡಿದರೆಂದು ಇವರನ್ನು ಶಿವಮೊಗ್ಗ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಶಿವಮೊಗ್ಗ ಜೈಲಿನಲ್ಲಿ ವಿವಿಧ ಜಿಲ್ಲೆಗಳ ಸುಮಾರು 60–70 ಕಮ್ಯುನಿಸ್ಟರನ್ನು ಬಂಧಿಸಲಾಗಿತ್ತು. ಈ ಅವಧಿಯಲ್ಲಿ ಬೀಡಿ ಕಾರ್ಮಿಕರ ಸಂಘಟನೆ ಐಎನ್‌ಟಿಯುಸಿ ಕೈವಶವಾಗಿತ್ತು (ಉಗ್ರಪ್ಪ 2008: 30). ಉಗ್ರಪ್ಪ ಜೈಲಿನಿಂದ ಬಿಡುಗಡೆಗೊಂಡ ನಂತರ ಮೈಸೂರಿನ ಮುನಿಸಿಪಲ್ ಕಾರ್ಮಿಕರ ನಡುವೆ ಚಟುವಟಿಕೆಗಳನ್ನು ಮುಂದುವರಿಸಿದರು. ಇವರ ಜೊತೆಯಲ್ಲಿ ಸೋಮಸುಂದರ ಶರ್ಮ, ಬೆಳ್ಳಿಯಪ್ಪ, ಸಿ.ಕೆ.ಮೋನ್, ತಿಮ್ಮೇಗೌಡ,

ಪುಟ್ಟಸ್ವಾಮಿ ಮುಂತಾದವರು ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾದರು. ಇವರೆಲ್ಲರ ಪರಿಶ್ರಮದಿಂದ ರೇಷ್ಮೆ, ಹೋಟೆಲ್, ಲಾರಿ ಮುಂತಾದ ವಿಭಾಗಗಳ ಕಾರ್ಮಿಕರ ಸಂಘಗಳು ಆರಂಭಗೊಂಡವು.

ಕೊಳ್ಳೇಗಾಲದ ಸಮೀಪ ಕಾವೇರಿ ನದಿ ನೀರು ತುಂಬಿ ವಾಸಕ್ಕೆ ಸಮಸ್ಯೆಯಾದಾಗ ಒಂದೇ ರಾತ್ರಿಯಲ್ಲಿ ಕಟ್ಟಿಗೆ ಹಾಗೂ ಮಟ್ಟಾಳೆಯಿಂದ ಸುಮಾರು 100 ಗುಡಿಸಲುಗಳನ್ನು ನಿರ್ಮಿಸಿ ಬಡವರಿಗೆ ಸಹಾಯ ಮಾಡಿದ್ದು, ಕಮ್ಯುನಿಸ್ಟ್ ಪಕ್ಷದ ಬಗ್ಗೆ ಜನರಲ್ಲಿ ಅಭಿಮಾನ ಮೂಡಿಸಿತು. ಇಂತಹ ಹೋರಾಟಗಳ ಪರಿಣಾಮವಾಗಿ ಮುಂದೆ ಕಮ್ಯುನಿಸ್ಟ್ ಪಕ್ಷದ ಮೂವರು ಸದಸ್ಯರು ಪುರಸಭೆಗೆ ಆಯ್ಕೆಯಾಗಿದ್ದರು (ಉಗ್ರಪ್ಪ 2008: 53–54).

ಉಳ್ಳಾಲದಲ್ಲಿ ನಡೆದ ಸಿಪಿಐ ರಾಜ್ಯ ಸಮ್ಮೇಳನದ ನಂತರ ಸಿ.ಬಿ.ಮೊಣ್ಣಯ್ಯನವರು ವಾಪಸ್ ಬಂದು ಸಿಪಿಐನ **ಕೊಡಗು** ಜಿಲ್ಲಾ ಕಾರ್ಯದರ್ಶಿಯಾದರು. ಕೊಡಗಿನ ಆರಂಭಿಕ ಕಮ್ಯುನಿಸ್ಟರಾದ ಬಿ.ಎನ್.ಕುಟ್ಟಪ್ಪ, ವೈ.ಟಿ.ಅಯ್ಯಪ್ಪ, ಡಾ.ನಂಜುಂಡೇಶ್ವರ, ಬಿ.ಎನ್.ವೆಂಕಟರಮಣ, ವೈ.ಟಿ.ಗಣಪತಿ, ವಾಂಚೀರ ಕಾವೇರಪ್ಪ, ಡಾ.ಐ.ಆರ್.ಅಸ್ರಣ್ಣ, ಅಂತೋಣಿ, ಕೆ.ಬಿ.ನಾಣಯ್ಯ ಮುಂತಾದವರು ಸ್ವಾತಂತ್ರ್ಯ–ಪೂರ್ವ ಮತ್ತು ನಂತರದಲ್ಲೂ ಜನಚಳುವಳಿಗಳನ್ನು ಕಟ್ಟಿದವರು. 1963 ರಲ್ಲಿ ಮಡಿಕೇರಿಯಲ್ಲಿ ಇಎಂಎಸ್ ಭಾಗವಹಿಸಿದ್ದ ಸಿಪಿಐನ ಬಹಿರಂಗ ಸಭೆಯಲ್ಲಿ 3–4 ಸಾವಿರ ಜನ ಸೇರಿದ್ದರು. ಇದನ್ನು ವಿಫಲಗೊಳಿಸಲು ಜನಸಂಘದವರು ಸಾಕಷ್ಟು ಪ್ರಯತ್ನಿಸಿದರು. ಸಭೆ ಮುಗಿಸಿ ಹೋಗುವಾಗ ಮಹಿಳೆಯರ ಮೇಲೆ ಹಿಂಸೆ ನಡೆಸಿದರು. ಆಗ ಲಾಠಿ ಚಾರ್ಜ್ ಸಹ ನಡೆಯಿತು. ಇದನ್ನು ಜಿಲ್ಲೆಯ ಮೊದಲ ಲಾಠಿ ಚಾರ್ಜ್ ಎನ್ನಲಾಗಿದೆ[23]. ಕಮ್ಯುನಿಸ್ಟ್ ಪಕ್ಷದೊಳಗೆ ನಡೆಯುತ್ತಿದ್ದ ಎಡ–ಬಲ ಚರ್ಚೆಗಳ ಕಾರಣದಿಂದ ಮುಖಂಡರು ಮತ್ತು ಕಾರ್ಯಕರ್ತರಲ್ಲಿನ ವಿಭಜನೆಯನ್ನು ಕಂಡು ಆತಂಕಿತರಾಗಿ ಮೊಣ್ಣಯ್ಯನವರು ಮುಂದಿನ ದಿನಗಳಲ್ಲಿ ಪತ್ರವನ್ನು ಬರೆದದ್ದನ್ನು ಗಮನಿಸಬಹುದು[24].

ಬೆಳಗಾಂನಲ್ಲಿ ಪಕ್ಷದ ಪ್ರಾರಂಭ ಎಂಬುದು ಸ್ವಾತಂತ್ರ್ಯ ಬಂದ ನಂತರದಲ್ಲೇ ಆಗಿದೆ. ರಾಮದಾಸ್ ಗೊಳಿಕೇರಿ ಎಂಬುವರು 1948 ರ ಸುಮಾರಿಗೆ ಬೆಳಗಾವಿಯಲ್ಲಿ ಸಿಪಿಐ ಕಛೇರಿ ಸ್ಥಾಪಿಸಿದ್ದರು. ಮೈಸೂರಿನ ಪ್ರಾಧ್ಯಾಪಕರಾದ ಸೋಮಸುಂದರ ಶರ್ಮ ಎಂಬುವರು ಬೆಳಗಾಂನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಮೈಸೂರಿನಲ್ಲೇ ಸಿಪಿಐನ ಸದಸ್ಯರಾಗಿದ್ದರು. ಕೃಷ್ಣ ಮೆಣಸೆಯವರು[25] ಇವರ ಸಂಪರ್ಕಕ್ಕೆ ಬಂದು, ನಂತರದಲ್ಲಿ ಅಲ್ಲಿ ಕಮ್ಯುನಿಸ್ಟ್ ಘಟಕವೊಂದು ಆರಂಭವಾಯಿತು. ಮಂಗಳೂರಿನ ಉಳ್ಳಾಲದಲ್ಲಿ ನಡೆದಿದ್ದ ಸಿಪಿಐನ ಸಮ್ಮೇಳನದಲ್ಲಿ ಕೃಷ್ಣ ಮೆಣಸಿಯವರು ಭಾಗವಹಿಸಿದ್ದರು. 1948 ರಲ್ಲಿ ಸಿಪಿಐನ ಬೆಳಗಾವಿ ನಗರ ಸಮಿತಿ ರಚಿಸಲಾಯಿತು. ಕೃಷ್ಣ ಮೆಣಸೆ, ರಾಮದಾಸ್ ಗೊಳಿಕೇರಿ, ಬಿ.ಎನ್. ಧಾರವಾಡಕರ್, ಶಾಂತಾರಾಂ ನಾಯ್ಕ, ಗಾವಂಕರ್ ಇದರ ಸದಸ್ಯರಾಗಿದ್ದರು. ಕಾರವಾರದಿಂದ ಗಡೀಪಾರಾಗಿ ಬಂದಿದ್ದ ಕೆಲವು ಕಮ್ಯುನಿಸ್ಟರು ಅದೇ ಸಮಯದಲ್ಲಿ ಖಾನಾಪುರದಲ್ಲೂ ಮತ್ತು ಬೆಳಗಾವಿಯಲ್ಲೂ ಇದ್ದ ಕಮ್ಯುನಿಸ್ಟರ ಜೊತೆ ಸೇರಿಕೊಂಡರು. ಆಗ ಇಡೀ ಜಿಲ್ಲೆಯಾದ್ಯಂತ ಪಕ್ಷ ಮತ್ತು ಚಳುವಳಿಯನ್ನು ವಿಸ್ತರಿಸಲು ಸಾಧ್ಯವಾಯಿತು. ರಾಯಭಾಗ್‌ನಲ್ಲಿ ರೈತರನ್ನು ಸಂಘಟಿಸುತ್ತಿದ್ದ ಬಿ.ಎಲ್.ಪಾಟೀಲ್

ಎಂಬ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಕೊಲೆ ಮಾಡಲಾಯಿತು. ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯನ್ನು ಸಹಿಸದ ರಾಜಕೀಯ ಕೊಲೆಯಾಗಿತ್ತದು[26]. ಇಲ್ಲಿನ ಸಂಘಟನೆಗಳ ವಿಸ್ತಾರ ಹೇಗಿತ್ತೆಂದರೆ, 'ವೇಶ್ಯೆ'ಯರ ಸಂಘಟನೆಯನ್ನೂ ಮಾಡಿದ್ದರು[27]. ಹೀಗೆ ಬೆಳವಣಿಗೆಯಾಗುತ್ತಿದ್ದ ಕಮ್ಯುನಿಸ್ಟ್ ಪಕ್ಷ 1952 ಮತ್ತು 1955 ರ ನಡುವೆ ಗೋವಾ ವಿಮೋಚನಾ ಚಳುವಳಿಯಲ್ಲಿ ತೊಡಗಿಸಿಕೊಂಡಿತು. ಇದರಲ್ಲಿ ಇಡೀ ಕಮ್ಯುನಿಸ್ಟ್ ಪಕ್ಷದ ಎಲ್ಲಾ ನಾಯಕರೂ ತೊಡಗಿಸಿಕೊಂಡಿದ್ದರು. ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೇರೆಲ್ಲಾ ಚಟುವಟಿಕೆಗಳು ಹಿಂದೆ ಸರಿದಿದ್ದವು. ಇದೇ ಕಾಲಘಟ್ಟದಲ್ಲಿ ಭಾಷಾವಾರು ರಾಜ್ಯ ರಚನೆ ಹೋರಾಟವೂ ನಡೆದು 1956 ರಲ್ಲಿ ಏಕೀಕರಣವಾಗಿ ಮೈಸೂರು ರಾಜ್ಯ ಉದಯವಾಗಿತ್ತು. ಜೊತೆಯಲ್ಲೇ ಮಹಾರಾಷ್ಟ್ರ ಕರ್ನಾಟಕ ಗಡಿ ವಿವಾದವೂ ಆರಂಭವಾಗಿತ್ತು. ಇದರಿಂದಾಗಿ ಬೆಳಗಾವಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಅಡ್ಡಿಯಾಯಿತು[28].

ಬಿಜಾಪುರದಲ್ಲಿ ಎಲ್ಲ ಕಡೆಗಳಲ್ಲಾದಂತೆ ಎನ್.ಕೆ.ಉಪಾಧ್ಯಾಯ, ಬಾಲಸಿಂಗ್ ಮಾಸ್ತರ್ ಇವರನ್ನು ಬಂಧಿಸಲು ಸರ್ಕಾರ ಮುಂದಾಯಿತು. ಬಾಲಸಿಂಗ್ ಅವರು ಮೈಸೂರಿಗೆ ಗುಪ್ತವಾಗಿ ಹೋಗಿ ಅಲ್ಲಿನ ಬೀಡಿ ಸಂಘಟನೆಯ ಆಶ್ರಯದಲ್ಲಿ ಗುಪ್ತವಾಗಿ ಉಳಿದರು. ಉಪಾಧ್ಯಾಯರು ಬಿಜಾಪುರದಲ್ಲೇ ತಲೆತಪ್ಪಿಸಿಕೊಂಡಿದ್ದರು. ಒಮ್ಮೆ ಗಣಿ ಗ್ರಾಮದಲ್ಲಿ ಕುರಿ ಕಾಯುವ ವೇಷದಲ್ಲಿದ್ದ ಇವರನ್ನು ಪೊಲೀಸರು ಬಂಧಿಸಿ ಯರವಾಡಾ ಜೈಲಿನಲ್ಲಿಟ್ಟಿದ್ದರು. ಜೈಲಿನಿಂದ ತಪ್ಪಿಸಿಕೊಳ್ಳಲು ಮುನಿಸಿಪಲ್ ಕೆಲಸಗಾರರು ಯೋಜನೆ ರೂಪಿಸಿದ್ದರು. ಆದರೆ ಅದು ವಿಫಲವಾಗಿತ್ತು (ಉಪಾಧ್ಯಾಯ 1996: 37). ಜೈಲಿನಿಂದ ಬಂದ ನಂತರ ಪವರ್‌ಲೂಮ್ ಕೆಲಸಗಾರರ ಸಂಘಕ್ಕೆ ಚಾಲನೆ ಸಿಕ್ಕಿತು. 1956 ರಲ್ಲಿ ಬಾಗಲಕೋಟೆಯ ತೆಂಡೂಲ್ಕರ್ ಸಿಮೆಂಟ್ ಕಾರ್ಖಾನೆಯ ಗುತ್ತಿಗೆ ಮತ್ತು ಹಮಾಲಿ ಕಾರ್ಮಿಕರ ಹೋರಾಟ ನಡೆದು ಸಿಮೆಂಟ್ ಕಂಪನಿ ಕೆಲಸಗಾರರ ಸಂಘ ಗಟ್ಟಿಯಾಗಿ ಬೆಳೆಯಿತು. ಇದರ ಪ್ರಭಾವದಿಂದಾಗಿ ಗುಲ್ಬರ್ಗಾ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಮ್ಯುನಿಸ್ಟ್ ಸಂಘಟನೆ ಬೆಳೆಯಿತು. ಜಿನ್ನಿಂಗ್ ಕಾರ್ಮಿಕರು, ಸ್ಲೇಟ್, ಕೈಮಗ್ಗ, ನಗರಸಭೆ ಮುಂತಾದ ಕಾರ್ಮಿಕರ ಸಂಘಗಳು ಬೆಳೆದವು.

ಈ ಅವಧಿಯಲ್ಲಿ ಉತ್ತರ ಕರ್ನಾಟಕದ ಭಾಗದ ಜಿಲ್ಲೆಗಳಿಗೆ ಸಂಬಂಧಿಸಿ ನಡೆದ **ಕೃಷ್ಣಾ ಮೇಲ್ದಂಡೆ ಹೋರಾಟ** ಗಮನಾರ್ಹವಾದುದು. ಕೃಷ್ಣಾ ಕಾವೇರಿ ನದಿಗಳ ನೀರಾವರಿ ಯೋಜನೆಗಳ ಬಗ್ಗೆ ಏಕೀಕರಣ ಪೂರ್ವದಿಂದಲೇ ಸಿಪಿಐ ತನ್ನ ನಿಲುವುಗಳನ್ನು ಪ್ರಕಟಿಸಿತ್ತು. ಕೃಷ್ಣಾ ನದಿ ನೀರಿಗೆ ಸಂಬಂಧಿಸಿ ಗುಲಾಟಿ ಆಯೋಗದ ವರದಿ ಪ್ರಕಟವಾದ ದಿನದಿಂದಲೂ, ಕರ್ನಾಟಕಕ್ಕೆ ಬರಬೇಕಾದ ನೀರಿನ ಪಾಲಿಗಾಗಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗಾಗಿ ಕಮ್ಯುನಿಸ್ಟ್ ಪಾರ್ಟಿ ಮಧ್ಯಪ್ರವೇಶ ಮಾಡುತ್ತಿತ್ತು. ಆ ಸಂದರ್ಭಕ್ಕೆ ಈ ಭಾಗದಿಂದಲೇ ನಿಜಲಿಂಗಪ್ಪನವರು ಆರಿಸಿ ಬಂದು ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದಲ್ಲಿ ಈ ಸಮಸ್ಯೆಗಳು ಇನ್ನೂ ಬೇಡಿಕೆಗಳಾಗಿರುವಾಗಲೇ ಆಂಧ್ರ ಪ್ರದೇಶದಲ್ಲಿ ನಾಗರ್ಜುನ ಸಾಗರ ನೀರಾವರಿ ಯೋಜನೆ ಪೂರ್ಣಗೊಂಡು ಶ್ರೀಶೈಲ ಯೋಜನೆ ಆರಂಭಗೊಂಡಿತ್ತು. ಮಹಾರಾಷ್ಟ್ರದಲ್ಲಿ ಕೊಯ್ನಾ ಯೋಜನೆ ಶುರುವಾಗಿತ್ತು. ಅಂತಹ ಸಂದರ್ಭದಲ್ಲಿ ಬಿಜಾಪುರ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ ಸರ್ಕಾರಕ್ಕೆ ಒಂದು ತಿಂಗಳ ಗಡುವು ನೀಡಿ, ಅಲಮಟ್ಟಿ ಬಳಿ ಕೃಷ್ಣಾ ನದಿಗೆ ಅಣೆಕಟ್ಟು

ಕಟ್ಟಿ ನೀರಾವರಿ ಯೋಜನೆ ಆರಂಭಿಸದಿದ್ದರೆ 1964 ರ ಮೇ 1 ರಿಂದ ಉಪವಾಸ ಕೂರಲಾಗುವುದೆಂದು ಎಚ್ಚರಿಕೆ ನೀಡಿತು. ಅದೇ ಸಂದರ್ಭದಲ್ಲಿ ಎನ್.ಕೆ.ಉಪಾಧ್ಯಾಯರು ಬಿಜಾಪುರ ನಗರ ಸಭೆಯ ಸದಸ್ಯರಾಗಿ ವಾಟರ್ ವರ್ಕ್ಸ್ ಕಮಿಟಿ ಅಧ್ಯಕ್ಷರಾಗಿದ್ದರು. ಅದನ್ನು ಬಳಸಿಕೊಂಡು ಉಳಿದ ಪಕ್ಷಗಳ ಸದಸ್ಯರನ್ನು ಒಟ್ಟು ಕೂಡಿಸಿಕೊಂಡು ನಗರಸಭೆಯಿಂದಲೇ ಉಪವಾಸದ ಕುರಿತು ಸರ್ಕಾರಕ್ಕೆ ತೀರ್ಮಾನವನ್ನು ಕಳುಹಿಸಿದರು. ಈ ಪ್ರಕಾರವಾಗಿ ಉಪವಾಸ ಶುರುವಾಗಿ ವಿದ್ಯಾರ್ಥಿಗಳು, ಸಂಘ–ಸಂಸ್ಥೆಗಳು, ಕಾರ್ಮಿಕರು, ಹೀಗೆ, ಒಬ್ಬೊಬ್ಬರು ಒಂದೊಂದು ದಿನ ಉಪವಾಸದಲ್ಲಿ ಪಾಲ್ಗೊಂಡರು. ಇದು ಇಡೀ ಜಿಲ್ಲೆಯಲ್ಲಿ ಪ್ರಭಾವ ಬೀರಿತು. 22 ದಿನಗಳ ಸತ್ಯಾಗ್ರಹದ ನಂತರ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು ಉಪಾಧ್ಯಾಯರಿಗೆ ಟೆಲಿಗ್ರಾಂ ಕಳುಹಿಸಿ ಕೇಂದ್ರ ನೀರಾವರಿ ಮಂತ್ರಿ ಡಾ.ಕೆ.ಎಲ್.ರಾವ್ ಅವರನ್ನು ಕಳುಹಿಸುವ ಭರವಸೆ ನೀಡಿದರು. ಆ ಪ್ರಕಾರವಾಗಿ ಕೆಲ ದಿನಗಳ ನಂತರ ಕೆ.ಎಲ್.ರಾವ್ ಬಂದು ಅಲಮಟ್ಟಿ ಪರಿಶೀಲಿಸಿ ಹೋದರು. ಕೊನೆಗೆ ಇಂದಿರಾ ಗಾಂಧಿಯವರು ಬಂದು ಅಡಿಗಲ್ಲು ಹಾಕಿದರು. ಉಪಾಧ್ಯಾಯರ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ನಡೆಸಿದ ಈ ಹೋರಾಟ ಮುಂದಿನ ದಿನಗಳಲ್ಲಿ ಅಲಮಟ್ಟಿ ಯೋಜನೆ ಆರಂಭವಾಗುವುದರಲ್ಲಿ ಪ್ರಮುಖವಾಗಿದೆ. ಆದರೆ ಆರಂಭಿಕ ಚಳುವಳಿ ನಡೆಸಿದ ಕಮ್ಯುನಿಸ್ಟ್ ಪಕ್ಷ ನಂತರದಲ್ಲಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಸಂಯುಕ್ತರಂಗದ ಪಾತ್ರ ವಹಿಸಿದ್ದರೆ, ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಸ್ವರೂಪವೇ ಬದಲಾಗುತ್ತಿತ್ತು ಎನ್ನುತ್ತಾರೆ ಉಪಾಧ್ಯಾಯರು (ಉಪಾಧ್ಯಾಯ 1996: 63–64). ಕೃಷ್ಣಾ ಮೇಲ್ದಂಡೆ ಯೋಜನೆಯ ರಾಜಕೀಯ ಲಾಭವನ್ನು ಇತರರು ಪಡೆದುಕೊಂಡರು. ಹೋರಾಟ ಆರಂಭಿಸಿದ ಕಮ್ಯುನಿಸ್ಟ್ ಪಕ್ಷ ರಾಜಕೀಯವಾಗಿ ಬೆಳವಣಿಗೆಯಾಗಲಿಲ್ಲ.

ಗುಲ್ಬರ್ಗಾ ಜಿಲ್ಲೆಯ ಕಮ್ಯುನಿಸ್ಟ್ ಪಾರ್ಟಿ ರಜಾಕಾರರ ವಿರುದ್ಧ ಹೋರಾಟದಲ್ಲಿ ಅತ್ಯಂತ ಸಕ್ರಿಯವಾಗಿ ಕೆಲಸ ಮಾಡಿತು. ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧವಿದ್ದುದರಿಂದ ಬಹುತೇಕ ಮುಖಂಡರು ಭೂಗತರಾಗಿದ್ದು ಕೆಲಸ ಮಾಡುತ್ತಿದ್ದರು. ಕರ್ನಾಟಕದ ಸಿಪಿಐ ಗುಲ್ಬರ್ಗದ ಕಮ್ಯುನಿಸ್ಟ್ ಕಾರ್ಯಕರ್ತರಿಗೆ ಸಹಾಯ ಮಾಡಬೇಕೆಂದು ತೀರ್ಮಾನಿಸಿತು. ಆ ಪ್ರಕಾರವಾಗಿ ರಾಜ್ಯ ಸಮಿತಿಯಿಂದ ಎನ್.ಎಲ್.ಉಪಾಧ್ಯಾಯ ಮತ್ತು ಎಸ್.ಎನ್.ಹೊಳ್ಳ ಇವರಿಗೆ ಜವಾಬ್ದಾರಿ ನೀಡಲಾಗಿತ್ತು. ಇವರು ಗುಲ್ಬರ್ಗ ಜಿಲ್ಲೆಯಲ್ಲಿಯೇ ಭೂಗತವಾಗಿದ್ದುಕೊಂಡು ಅಲ್ಲಿನವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಬಿಜಾಪುರದ ಕಮ್ಯುನಿಸ್ಟ್ ಪಕ್ಷ ಬಿಜಾಪುರ ಮತ್ತು ಸೊಲ್ಲಾಪುರದ ಗಡಿಯಲ್ಲಿ ಎರಡು ಕ್ಯಾಂಪುಗಳನ್ನು ಸಂಘಟಿಸಿತ್ತು. ಹಣ ಸಂಗ್ರಹಣೆ, ಪ್ರಚಾರ ಪ್ರಕ್ಷೋಭೆ, ಸಾರ್ವಜನಿಕ ಸಭೆಗಳನ್ನು ನಡೆಸಲಾಗುತ್ತಿತ್ತು. ಬಿಜಾಪುರದಿಂದ ಸ್ವಯಂಸೇವಕರನ್ನು ಕಳುಹಿಸಲಾಗಿತ್ತು. ಗುಲ್ಬರ್ಗದಲ್ಲಿ ಕೇಶವರಾವ್ ತಿರಗುಳ, ಗಂಗಾಧರ ನಮೋಶಿ, ಕಾದಂಬರಿ ಜಹಗೀರ್‌ದಾರ, ಶ್ರೀನಿವಾಸ ಗುಡಿ, ಅಬ್ದುಲ್ ಕರೀಂ, ಮುಂತಾದವರು ಕ್ಯಾಂಪುಗಳಿದ್ದ ಪ್ರದೇಶಗಳಲ್ಲಿ ಮತ್ತು ಬಿಜಾಪುರ ನಗರ, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಪ್ರಚಾರವನ್ನು ಮಾಡುತ್ತಿದ್ದರು. ಹೈದರಾಬಾದಿನಿಂದ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಡಾ.ರಾಜ್‌ಬಹಾದ್ದೂರ್‌ಗೌಡ್, ಮುಕ್ತುಂ ಮೊಹಿಯುದ್ದೀನ್ ಇವರುಗಳು ಇಲ್ಲೆಲ್ಲಾ ನಡೆಯುವ ಪ್ರಚಾರಕ್ಕೆ ಬರುತ್ತಿದ್ದರು (ಉಪಾಧ್ಯಾಯ 1996: 57–58). ರಜಾಕಾರರ ವಿರುದ್ಧ ತೆಲಂಗಾಣ

ಕಮ್ಯುನಿಸ್ಟ್ ಪಕ್ಷ ನಡೆಸಿದ ಗಂಭೀರವಾದ ಹೋರಾಟಕ್ಕೆ, ಗುಲ್ಬರ್ಗ ಜಿಲ್ಲೆಯಲ್ಲಿ ಬೆಂಬಲಾರ್ಥವಾಗಿ ಕರ್ನಾಟಕದ ಸಿಪಿಐ ಮತ್ತು ಬಿಜಾಪುರದ ಕಮ್ಯುನಿಸ್ಟ್‌ರು ಕೆಲಸ ಮಾಡಿರುವುದನ್ನು ಕಾಣಬಹುದು.

ಸ್ವಾತಂತ್ರ್ಯದ ಹೊಸ್ತಿಲಲ್ಲಿ ಸಿಪಿಐ ವ್ಯಾಪಕವಾದ ಚಟುವಟಿಕೆಗಳನ್ನು ನಡೆಸುತ್ತಿತ್ತು. ಇದೇ ಸಂದರ್ಭಕ್ಕೆ ತೆಲಂಗಾಣ ರೈತ ಹೋರಾಟವೂ ಆರಂಭವಾಗಿತ್ತು. ಸ್ವಾತಂತ್ರ್ಯಾ ನಂತರ ಉದ್ಭವಿಸಿದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೆಹರೂ ಸರ್ಕಾರ 1948 ರಲ್ಲಿ ಸಿಪಿಐ ಪಕ್ಷವನ್ನು ನಿಷೇಧಿಸಿತು. 1951 ರಲ್ಲಿ ನಿಷೇಧ ತೆರವಾಗುವವರೆಗೂ ಜೈಲುಗಳಲ್ಲಿದ್ದ ಸಿಪಿಐನ ಬಹುತೇಕ ಮುಖಂಡರು ಹೊರಬಂದಾಗ ಕರ್ನಾಟಕದಲ್ಲಿ ಸಂಘಟನಾ ಪರಿಸ್ಥಿತಿಗಳು ದುರ್ಬಲವಾಗಿದ್ದವು. ಪಕ್ಷವನ್ನು ಪುನರ್‌ಸಂಘಟನೆ ಮಾಡಲು ಬೆಂಗಳೂರಿನ ಹೊರವಲಯದಲ್ಲಿ 1951 ರ ಕೊನೆಯಲ್ಲಿ ಎರಡು ದಿನಗಳ ಕಾಲ ಪ್ರಾಂತ ಸಮಾವೇಶ ಜರುಗಿತು. ಸಿಪಿಐನ ಕೇಂದ್ರ ಸಮಿತಿಯಿಂದ ಎಸ್.ವಿ.ಘಾಟೆ ಬಂದಿದ್ದರು. ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ಸಮಿತಿಯನ್ನು ವಿಸರ್ಜನೆ ಮಾಡಿ ಪ್ರಾಂತ ಸಂಘಟನಾ ಸಮಿತಿಯನ್ನು ತಾತ್ಕಾಲಿಕವಾಗಿ ರಚಿಸಲಾಯಿತು. ಜಿಲ್ಲೆಗಳ ಸಂಘಟನೆಯನ್ನು ಪುನರ್ರಚಿಸಿ ಸಮ್ಮೇಳನಗಳನ್ನು ಮಾಡಿ ಹೊಸ ಸಮಿತಿಗಳನ್ನು ರೂಪಿಸುವುದು ಇದರ ಉದ್ದೇಶವಾಗಿತ್ತು (ಕೃಷ್ಣರಾವ್ 2012: 23). ಈ ತಾತ್ಕಾಲಿಕ ಸಮಿತಿಗೆ ಸಿ.ಬಿ.ಮೊಣ್ಣಯ್ಯ ಕಾರ್ಯದರ್ಶಿಯಾಗಿದ್ದರು (ಶಂಕರನಾರಾಯಣ ರಾವ್ 1989: 65). ಈ ಸಭೆಯ ತೀರ್ಮಾನದಂತೆ ಮಂಗಳೂರಿನಲ್ಲಿ ಸಮ್ಮೇಳನ ನಡೆಯಿತು. ಮೊಣ್ಣಯ್ಯ ಬಿಡುಗಡೆಯಾಗಿ ಎನ್.ಎಲ್.ಉಪಾಧ್ಯಾಯ ಕಾರ್ಯದರ್ಶಿಯಾದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಮ್ಯುನಿಸ್ಟರ ಪಾತ್ರ

ಕನ್ನಡ ಭಾಷೆ ಹುಟ್ಟಿ 2 ಸಾವಿರ ವರ್ಷಗಳಿಗೂ ಮೇಲಾಗಿದೆ. ಆದರೆ ಕನ್ನಡ ಮಾತನಾಡುವವರೆಲ್ಲಾ ಒಂದೇ ಆಡಳಿತಕ್ಕೊಳಪಡಬೇಕೆಂಬ ಏಕೀಕರಣದ ಕೂಗು 20ನೇ ಶತಮಾನದಲ್ಲೇ ಹುಟ್ಟಿದ್ದು. ಇದಕ್ಕೆ ಮೊದಲು ಕನ್ನಡನಾಡು ಒಂದಾಗಬೇಕೆಂದಾಗಲೀ, ಕನ್ನಡಿಗರೆಲ್ಲಾ ಒಂದೇ ಆಡಳಿತದಡಿ ಬರಬೇಕೆಂಬ ಘೋಷಣೆಯಾಗಲೀ ಹುಟ್ಟಿರಲಿಲ್ಲ. ಭಾರತ ಸಮಾಜದ ಸಾಮಾಜಿಕ-ಆರ್ಥಿಕ-ರಾಜಕೀಯ ಬೆಳವಣಿಗೆಯ ನಿರ್ದಿಷ್ಟ ಕಾಲಘಟ್ಟದಲ್ಲಿ ಈ ಘೋಷಣೆ ಹುಟ್ಟಿದೆ. ಇಂತಹ ಒಂದು ಪ್ರಕ್ರಿಯೆಯನ್ನು ಲೆನಿನ್ ಹೀಗೆ ವಿವರಿಸಿದ್ದಾರೆ:

> ಜಗತ್ತಿನೆಲ್ಲೆಡೆಯಲ್ಲಿಯೂ ಬಂಡವಾಳಶಾಹಿ ವ್ಯವಸ್ಥೆಯು ಊಳಿಗಮಾನ್ಯ ವ್ಯವಸ್ಥೆಯ ಮೇಲೆ ತನ್ನ ಅಂತಿಮ ವಿಜಯವನ್ನು ಸಾಧಿಸಿದ ಅವಧಿ ಭಾಷಾ ಜನಾಂಗಗಳ ಆಂದೋಲನಗಳೊಂದಿಗೆ ಬೆಸೆಯಲ್ಪಟ್ಟಿದೆ. ಸರಕು ಉತ್ಪಾದನೆ ಮತ್ತು ವ್ಯಾಪಾರ ಪೂರ್ಣ ವಿಜಯವನ್ನು ಸಾಧಿಸಬೇಕಾದರೆ, ಬಂಡವಾಳಶಾಹಿ ವರ್ಗ ತನ್ನ ಆಂತರಿಕ ಮಾರುಕಟ್ಟೆಯನ್ನು ಕೈವಶ ಮಾಡಿಕೊಳ್ಳಬೇಕು. ದೇಶೀಯ ಭಾಷಾ ಜನಾಂಗಗಳ ಚಳುವಳಿಗಳ ಆರ್ಥಿಕ ತಳಹದಿ ಇಲ್ಲಿದೆ. ಮನುಷ್ಯ ಮನುಷ್ಯರ ನಡುವಿನ ವ್ಯವಹಾರದಲ್ಲಿ ಭಾಷೆ ಅತ್ಯಂತ ಮಹತ್ವದ ಸಾಧನ. ಈ ಭಾಷೆಯ ಅಭಿವೃದ್ಧಿಗೆ, ಸಾಹಿತ್ಯದ ಬೆಳವಣಿಗೆಗೆ ಇರುವ ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಲ್ಪಡಬೇಕು.

> ಆಧುನಿಕ ಉತ್ಪಾದನಾ ವ್ಯವಸ್ಥೆಯ ಪ್ರಮಾಣಕ್ಕೆ ಸರಿಯಾದಷ್ಟು ಮುಕ್ತ ವಾಣಿಜ್ಯಕ್ಕೆ ವಿವಿಧ ವರ್ಗಗಳಿಗೆ ಸೇರಿದ ಜನತೆಯನ್ನು ಒಂದು ವಿಶಾಲವಾದ ಪ್ರದೇಶಗಳಲ್ಲಿ ಒಗ್ಗೂಡಿಸುವುದಕ್ಕೆ, ಮಾರುಕಟ್ಟೆ ಮತ್ತು ಸಣ್ಣ ದೊಡ್ಡ ಮಾಲೀಕರ ನಡುವೆ, ಕೊಳ್ಳುವವರ ಮತ್ತು ಮಾರುವವರ ನಡುವೆ ನಿಕಟ ಸಂಬಂಧ ಏರ್ಪಡಿಸುವುದಕ್ಕೆ ಭಾಷೆಯ ಅನಿರ್ಬಂಧಿತವಾದ ಬೆಳವಣಿಗೆ ಹಾಗೂ ಐಕ್ಯತೆ ಇಲ್ಲದೆ ಸಾಧ್ಯವಿಲ್ಲ (ಲೆನಿನ್ 1977: 243–251).

ಈ ರೀತಿಯಾಗಿ ಸ್ವಾತಂತ್ರ್ಯೋತ್ತರ ಭಾರತದ ಒಂದು ಮಹತ್ತರ ಬೆಳವಣಿಗೆಯಾಗಿ ಮೂಡಿ ಬಂದ ರಾಜ್ಯಗಳ ಪುನರ್ವಿಂಗಡನೆ ಮತ್ತು ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸುವ ಘಟನೆಯು ಬಹುಮುಖ್ಯವಾದ ಪ್ರಜಾಸತ್ತಾತ್ಮಕವಾದ ಬೆಳವಣಿಗೆಯಾಗಿದೆ. ಇಂತಹ ಬೆಳವಣಿಗೆ ದೇಶದಲ್ಲಿ ಮತ್ತು ರಾಜ್ಯದಲ್ಲಿ ತಂತಾನೆ ಸಂಭವಿಸಿದ್ದಲ್ಲ:

ಕರ್ನಾಟಕವು ಊಳಿಗಮಾನ್ಯ ಸಮಾಜದ ಬಸಿರಲ್ಲಿ ಇನ್ನೂ ಇರುವಾಗಲೇ, ಇಲ್ಲಿ ಬ್ರಿಟಿಷರ ಸಂಪರ್ಕದೊಡನೆ ಹುಟ್ಟಿದ ಬಂಡವಾಳಶಾಹಿಯ ಅಗತ್ಯಗಳಿಗೆ ಅನುಗುಣವಾಗಿ ಕನ್ನಡ ಮಾತನಾಡುವವರೆಲ್ಲರೂ ಒಂದೇ ರಾಜಕೀಯ ಆಡಳಿತದಲ್ಲಿರಬೇಕೆಂಬ ಕೂಗು ಸಣ್ಣದಾಗಿ ಹುಟ್ಟಿ, ಬರಬರುತ್ತ ಬೆಳವಣಿಗೆಯಾಗಿ, ಶಿಕ್ಷಣದ ಪ್ರಗತಿ, ಸಾಹಿತ್ಯದ ನವೋದಯ ಹಲವು ಹಂತಗಳಲ್ಲಿ ಒಂದರ ಹಿಂದೆ ಒಂದು ಹೆಜ್ಜೆಯಿಟ್ಟು, ಒಂದು ಮತ್ತೊಂದಕ್ಕೆ ಕಾರಣವಾಗಿ, ಕೊನೆಯಲ್ಲಿ ಕರ್ನಾಟಕ ಏಕೀಕರಣದ ಕೂಗಿಗೆ ಕಾರಣವಾದವು'[29].

ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರು, ಮುಖ್ಯವಾಗಿ ಬ್ರಿಟಿಷರು, ಇಲ್ಲಿನ ಪರಿಸ್ಥಿತಿಯ ಲಾಭ ಪಡೆದು ಹಣ ಮತ್ತು ಭೂಮಿ ಎರಡೂ ರೂಪದಲ್ಲಿ ವಿವಿಧ ಭಾಗಗಳನ್ನು ವಶಪಡಿಸಿಕೊಂಡರು. ವಾಣಿಜ್ಯ ವ್ಯವಹಾರ, ಕೈಗಾರಿಕೆ, ಕಾಫಿ ತೋಟಗಳು ಮುಂತಾದ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಪ್ರಾರಂಭಿಸಿದರು. ಈ ರೀತಿಯಾಗಿ ಹಿಡಿತ ಸ್ಥಾಪಿಸಿದ ಬ್ರಿಟಿಷರು ಇಲ್ಲಿ ರೂಪಿಸಿದ ಪ್ರಾಂತ್ಯಗಳು ಅವುಗಳ ವಿಸ್ತೀರ್ಣವಾಗಲೀ, ಭಾಷೆ ಅಥವಾ ಸಂಸ್ಕೃತಿಯಾಗಲೀ, ಆಡಳಿತೆಯ ಅನುಕೂಲತೆಯಾಗಲೀ ಅಥವಾ ದೇಶದ ಐಕ್ಯತೆಯಾಗಲೀ, ಆಧಾರವಾಗಿದ್ದು ರಚನೆಯಾದದ್ದಲ್ಲವೆಂಬುದು ಸ್ಪಷ್ಟವಾಗಿದೆ. ಕೆಲವು ಬಹುಭಾಷಾ ಪ್ರಾಂತಗಳಾಗಿದ್ದವು. ಕೆಲವು ದೊಡ್ಡದಾಗಿಯೂ ಇನ್ನು ಅತಿ ಚಿಕ್ಕ ಪ್ರಾಂತಗಳಾಗಿಯೂ ಇದ್ದವು. ಈ ಪ್ರಾಂತಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ಅನುಕೂಲಕ್ಕೆ ತಕ್ಕಂತೆ ಕೃತ್ರಿಮವಾಗಿ ರಚಿಸಿತ್ತೆಂಬುದು ಚರಿತ್ರೆ ಎತ್ತಿ ತೋರಿಸುತ್ತದೆ.

ಕನ್ನಡ ನಾಡು ಒಂದಾಗಬೇಕೆಂಬ ಹೋರಾಟ 1905 ರಲ್ಲಿ ಆರಂಭವಾಯಿತು. 1905 ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ನಡೆದ ಹೋರಾಟವೇ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಗೆ ನಾಂದಿಯಾಯಿತು. ಬಂಗಾಳದ ಚಳುವಳಿಯ ಪರಿಣಾಮ ಕರ್ನಾಟಕದ ಜನತೆಯ ಮೇಲೂ ಆಯಿತು. ಏಕೀಕರಣ ಚಳುವಳಿಯ ಪಿತಾಮಹರಾದ ಆಲೂರು ವೆಂಕಟರಾಯರು

> 1905 ರಿಂದ 1915 ರ ತನಕ, ಕನ್ನಡಿಗರೆಲ್ಲರ ಐಕ್ಯತೆಯನ್ನು ಸಾಧಿಸುವುದರ ಸಲುವಾಗಿ ನಾವು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಲಕ್ಷ್ಯ ಕೊಡಬೇಕಾಯಿತು.

1917 ರಲ್ಲಿ ಮಾಂಟೇಗು ಕ್ಲೆಂಫೋರ್ಡ್ ಸುಧಾರಣಾ ಸಮಿತಿ ಬಂತು. ಕರ್ನಾಟಕ ಏಕೀಕರಣವಾಗಬೇಕೆಂದು ನಾವು ಮೊದಲನೇ ಸಲ ಈ ಕಮಿಟಿಯ ಮುಂದೆ ಮನವಿ ಮಾಡಿಕೊಂಡೆವು. ನಮ್ಮ ಜೀವನದ ಕನಸಾದ ಐಕ್ಯ ಕರ್ನಾಟಕದ ಸಾಧನೆಯ ಚಳುವಳಿ ಅಂದಿನಿಂದ ಪ್ರಾರಂಭವಾಯಿತು (ರಾಮರಾವ್ 1956: 3).

ಎಂದಿದ್ದಾರೆ. 1915 ರಲ್ಲಿ ಕನ್ನಡ ಪರಿಷತ್ತು ಸ್ಥಾಪನೆಯಾದಾಗಿನಿಂದ ಈ ಚಳವಳಿ ಹೆಚ್ಚಾಗಿ ಬೆಳೆಯಿತು. ಭಾರತದ ರಾಷ್ಟ್ರೀಯ ಹೋರಾಟದ ಅಂಗವಾಗಿಯೇ ಭಾಷಾವಾರು ಪ್ರಾಂತ ರಚನೆಯ ಹೋರಾಟವೂ ಬೆಳೆಯಿತು. 1920–21 ರಲ್ಲಿ ಅಸಹಕಾರ ಚಳುವಳಿ ನಡೆದಾಗ ಇದು ಬಲಗೊಂಡಿತು. ಪರಿಣಾಮವಾಗಿ ಭಾಷಾವಾರು ಆಧಾರದ ಮೇಲೆ ಕಾಂಗ್ರೆಸ್ ಪ್ರಾಂತ ಸಮಿತಿಗಳನ್ನು ರಚಿಸಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಂಸ್ಥೆಯೂ ಆಗ ಸ್ಥಾಪನೆಯಾಯಿತು. 1928 ರಲ್ಲಿ ನೆಹರೂ ಸಮಿತಿಯು ಕರ್ನಾಟಕ ಪ್ರಾಂತವಾಗಬೇಕೆಂದು ಸ್ಪಷ್ಟವಾಗಿ ತಿಳಿಸಿತು. 1937 ರಲ್ಲಿ ಬೊಂಬಾಯಿ ಮತ್ತು ಮದ್ರಾಸ್ ಅಸೆಂಬ್ಲಿಗಳಲ್ಲಿ ಈ ಪ್ರಾಂತಗಳ ರಚನೆಯಾಗಬೇಕೆಂಬ ನಿರ್ಣಯಗಳಾದವು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾಷಾವರು ಪ್ರಾಂತ್ಯಗಳ ಪರವಾಗಿದ್ದ ಕಾಂಗ್ರೆಸ್ ಸ್ವಾತಂತ್ರ್ಯ ಬಂದ ನಂತರ ತಾನೇ ಕೊಟ್ಟ ಆಶ್ವಾಸನೆಗಳನ್ನು ಮುರಿಯುತ್ತಾ ಬಂದಿತು. ಸಂವಿಧಾನ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಎಲ್ಲ ಕಡೆಗಳಿಂದಲೂ ಒತ್ತಾಯ ಬಂದರೂ ಕಾಂಗ್ರೆಸ್ ನಾಯಕತ್ವ ಒಪ್ಪಲಿಲ್ಲ. ಇಂತಹ ಸಂದರ್ಭದಲ್ಲಿ 1948 ರಲ್ಲಿ ಧರ್ ಸಮಿತಿಯ ನೇಮಕವಾಯಿತು. 'ಮೈಸೂರು ಇತರ ಪ್ರದೇಶಗಳನ್ನು ಸೇರಿಸಿಕೊಳ್ಳಲು ತಯಾರಾಗಿದ್ದರೆ ಎಲ್ಲ ಪ್ರದೇಶಗಳನ್ನು ಒಟ್ಟು ಸೇರಿಸಿ ಪ್ರತ್ಯೇಕ ಪ್ರಾಂತ ರಚನೆ ಮಾಡಲು ಸಾಧ್ಯವಿತ್ತು. ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ವಿಲೀನಗೊಳ್ಳಲು ತಯಾರಿಲ್ಲವೆಂದು ತೋರುವುರಿಂದ ಕೇಂದ್ರದ ಭಾಗಗಳನ್ನು ಭಾರತೀಯ ಸಂಸ್ಥಾನದಲ್ಲಿ ಸೇರಿಸಲು ಕೇಂದ್ರ ಸರಕಾರ ತಯಾರಾಗಿದೆಯೇ ಎಂಬುದನ್ನು ನಾವು ಹೇಳಲು ಸಾಧ್ಯವಿಲ್ಲ' ಎಂದು 1948 ರ ಡಿಸೆಂಬರ್ 10 ರಂದು ಅದು ವರದಿ ಮಾಡಿತು. ಇದನ್ನು ಕನ್ನಡ ಜನತೆ ತೀವ್ರವಾಗಿ ಪ್ರತಿಭಟಿಸಿದರು. ನಂತರ ಕಾಂಗ್ರೆಸ್ ಜವಹರಲಾಲ್ ನೆಹರೂ, ವಲ್ಲಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ (ಜೆವಿಪಿ) ಸಮಿತಿಯನ್ನು ನೇಮಿಸಿತು. ಈ ಸಮಿತಿಯೂ ಕರ್ನಾಟಕದ ಬೇಡಿಕೆಯನ್ನು ನಿರಾಕರಿಸಿತು. ಭಾಷಾವಾರು ಪ್ರಾಂತವು ರಚನೆಯಾಗಬೇಕೆಂದು ಒತ್ತಾಯಪಡಿಸುವುದಾದರೆ ಸಂಬಂಧಪಟ್ಟ ಪಕ್ಷಗಳು ಒಮ್ಮತಾಭಿಪ್ರಾಯಕ್ಕೆ ಬಂದರೆ ಮಾನ್ಯ ಮಾಡಬಹುದೆಂದು ಅದು ಅಭಿಪ್ರಾಯಪಟ್ಟಿತು. ಇದರ ಉದ್ದೇಶ ಮೈಸೂರು ಕಾಂಗ್ರೆಸ್ ನಾಯಕರನ್ನು ವಿರೋಧವಾಗಿ ಎತ್ತಿ ಕಟ್ಟುವುದಾಗಿತ್ತು. ಕರ್ನಾಟಕ ಕಾಂಗ್ರೆಸ್ ಸಮಿತಿಯು ಈ ವರದಿಯನ್ನು ಖಂಡಿಸಿದರೂ ನೇರವಾದ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸಿತು. ಜನತೆಯ ಒತ್ತಾಯದಿಂದ 1949 ರ ಡಿಸೆಂಬರ್ 3 ರಂದು ಸಭೆ ಸೇರಿ ಕರ್ನಾಟಕದ ಪ್ರಾಂತ ಅಸೆಂಬ್ಲಿ ಮತ್ತು ಕೇಂದ್ರದ ಸದಸ್ಯರೆಲ್ಲರೂ ಕಾಂಗ್ರೆಸ್ ನಾಯಕರ ಅನುಮತಿ ಪಡೆದು ರಾಜೀನಾಮೆ ಕೊಡಬೇಕೆಂದು ಕರ್ನಾಟಕ ಕಾಂಗ್ರೆಸ್ ಸಮಿತಿ ತೀರ್ಮಾನ ಮಾಡಿತು. ಆದರೆ ಮೇಲಿನ ನಾಯಕರಿಗೆ ಹೆದರಿ ನಿರ್ಣಯವನ್ನು ಜಾರಿಗೆ ತರಲೇ ಇಲ್ಲ. ಕಾಂಗ್ರೆಸ್ ರಾಜೀನಾಮೆಯ ನಾಟಕಆಡಿತು. ಕೇಂದ್ರ ಸರಕಾರದ ಧೋರಣೆಯಿಂದಲೂ, ಕರ್ನಾಟಕ ಕಾಂಗ್ರೆಸ್‌ನವರ ವರ್ತನೆಯಿಂದಲೂ ಕರ್ನಾಟಕದ ಹಲವಾರು

ಕಾರ್ಯಕರ್ತರು ಬೇಸತ್ತು ಕಾಂಗ್ರೆಸ್ಸಿಗೇ ರಾಜೀನಾಮೆ ಕೊಟ್ಟು ಹೊರಗೆ ಬಂದರು ಮತ್ತು ಏಕೀಕರಣ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.

ಇಂತಹ ಸಂದರ್ಭದಲ್ಲಿ, ಸ್ವಾತಂತ್ರ್ಯ ಪೂರ್ವದಿಂದಲೂ ಭಾರತ ಕಮ್ಯುನಿಸ್ಟ್ ಪಕ್ಷ ಭಾಷಾವಾರು ಪ್ರಾಂತ್ಯ ರಚನೆಯ ಪರವಾಗಿ ವಾದಿಸುತ್ತಿತ್ತು. ಹೀಗಾಗಿಯೇ 1951 ರಲ್ಲಿ ಉಳ್ಳಾಲದಲ್ಲಿ ಸೇರಿದ್ದ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಚಳುವಳಿಯನ್ನು ನಡೆಸುವ ನಿರ್ಣಯವನ್ನು ಕೈಗೊಂಡಿತು. ಎಸ್. ಆರ್.ಭಟ್ ಬರೆದ ಒಂದೇ ಕರ್ನಾಟಕ ಇಂದೇ ರಚನೆಯಾಗಲಿ ಎಂಬ ಕಿರುಹೊತ್ತಿಗೆಯನ್ನು ಕಮ್ಯುನಿಸ್ಟ್ ಪಕ್ಷವು ಪ್ರಕಟಿಸಿತು (ಕಕ್ಕಿಲ್ಲಾಯ 2003: 218). ಕರ್ನಾಟಕಕ್ಕೆ ಸೇರಬೇಕಾದ ಕೆಲವು ಪ್ರದೇಶಗಳಿಗೆ ಸಂಬಂಧಿಸಿ ಆಗ ಕಮ್ಯುನಿಸ್ಟ್ ಪಕ್ಷದ ರಾಜ್ಯಸಭಾ ಸದಸ್ಯ ಬಿ.ವಿ.ಕಕ್ಕಿಲ್ಲಾಯ ಅವರು ಪಿ.ಸುಂದರಯ್ಯನವರ ಮೂಲಕ ಬಳ್ಳಾರಿ ಜಿಲ್ಲೆಯ ಕನ್ನಡ ಭಾಗಗಳಾದ ಕೊಳ್ಳೇಗಾಲ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಪೂರ್ಣವಾಗಿ ಕರ್ನಾಟಕಕ್ಕೆ ಸೇರುವಂತೆ ಆಂಧ್ರದ ಸಂಸದರನ್ನು ಮನವೊಲಿಸಲು ಪ್ರಭಾವ ಬೀರಿದ್ದರು (ಕಕ್ಕಿಲ್ಲಾಯ 2003: 218). ರಾಜ್ಯದ ಎಲ್ಲಾ ಭಾಗಗಳಲ್ಲೂ ಕಮ್ಯುನಿಸ್ಟರು ಏಕೀಕರಣದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅಖಿಲ ಭಾರತ ಕಿಸಾನ್ ಸಭಾ ಭಾಷೆ ಆಧಾರದಲ್ಲಿ ಪ್ರಾಂತೀಯ ಕಿಸಾನ್ ಸಭಾ ಸಮಿತಿಗಳನ್ನು ರಚಿಸುವ ಬಗ್ಗೆ 1942 ರಲ್ಲೇ, 'ರೈತ ಸಂಘದ ಪ್ರತ್ಯೇಕ ಪ್ರಾಂತೀಯ ಸಭಾಗಳನ್ನು ಆರಂಭಿಸಲು ಮೈಸೂರು ಒಂದು ದೊಡ್ಡ ರಾಜ್ಯವಾಗಿ ಅನುಕೂಲವಾಗಿದೆ. ನೆರೆಹೊರೆಯ ಪ್ರಾಂತಗಳಲ್ಲಿ ಮಾತನಾಡುವ ಒಂದೇ ಭಾಷೆಯ ಜನರನ್ನು ಭಾಷಿಕವಾಗಿ ವಿಭಾಗಿಸಿ ಇದರಲ್ಲಿ ಸೇರಿಸಿ ಸಭಾಗಳನ್ನು ರಚಿಸಬಹುದು' ಎಂದು ಸ್ಪಷ್ಟವಾಗಿ ಹೇಳಿತ್ತು (ರಸೂಲ್ 1989: 93)[30].

1952 ರ ಚುನಾವಣೆಯಲ್ಲಿ ಪೂರ್ಣವಾಗಿ ಗೆದ್ದರೆ ತಾವು ಏಕೀಕರಣ ಮಾಡುತ್ತೇವೆಂದು ಹೇಳಿಕೊಂಡು ಕಾಂಗ್ರೆಸ್ ಮೈಸೂರಿನಲ್ಲಿ ಅಧಿಕಾರಕ್ಕೆ ಬಂದಿತ್ತು. ಆದರೆ ಜನವರಿ 1953 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಭಾಷಾವಾರು ಪ್ರಾಂತಗಳ ರಚನೆಯ ವಿರುದ್ಧ ತೀರ್ಮಾನ ಮಾಡಿತು. ಗಾಯದ ಮೇಲೆ ಬರೆ ಎಳೆದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇದರ ವಿರುದ್ಧವಾಗಿ 1953 ರ ಮಾರ್ಚ್‌ನಲ್ಲಿ ಅದರಗುಂಚಿ ಶಂಕರಗೌಡರು ಆಮರಣಾಂತ ಉಪವಾಸ ಆರಂಭಿಸಿದರು. 1953 ರ ಏಪ್ರಿಲ್ 19 ರಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸಭೆ ಹುಬ್ಬಳ್ಳಿಯಲ್ಲಿ ಸೇರಿತು. ಕಾಂಗ್ರೆಸ್ ನಾಯಕರು ರಾಜೀನಾಮೆ ಕೊಡಬೇಕೆಂದು 25 ಸಾವಿರಕ್ಕೂ ಹೆಚ್ಚು ಜನ ಈ ಸಭೆ ನಡೆಯುವಲ್ಲಿ ಪ್ರತಿಭಟನೆ ಮಾಡಿದರು. ಜನರನ್ನು ಎದುರಿಸಲಾಗದ ಕಾಂಗ್ರೆಸ್ ನಾಯಕರು ಪೊಲೀಸರನ್ನು ಬಳಸಿ ಗೋಲೀಬಾರು ನಡೆಸಿದರು. ಜನತೆಯ ಒತ್ತಡಕ್ಕೆ ಮಣಿದು 1954 ರೊಳಗೆ ರಾಜ್ಯ ರಚನೆ ಆಗದಿದ್ದರೆ ಕಾಂಗ್ರೆಸ್ ಶಾಸಕರು ರಾಜೀನಾಮೆ ಕೊಡುವುದೆಂದು ಕೆ.ಪಿ.ಸಿ.ಸಿ. ತೀರ್ಮಾನಿಸಿತು. 'ಹುಬ್ಬಳ್ಳಿ ಗಲಭೆ' ಎಂದು ಪ್ರಸಿದ್ಧವಾದ ಪ್ರಕರಣದಲ್ಲಿ ಸ್ಥಾನಬದ್ಧತೆಯಡಿಯಲ್ಲಿ ಬಂಧಿತರಾದವರ ಪೈಕಿ ಎನ್.ಕೆ.ಉಪಾಧ್ಯಾಯ, ಎ.ಜೆ.ಮುಧೋಳ, ಬಿ.ಎನ್.ಧಾರವಾಡಕರ್, ಸಿದ್ದಪ್ಪ ಕಮ್ಮಾರ್, ಸಿ.ಜಿ.ಪಾಟೀಲ್, ಮುಲ್ಲಾ(ಕಕ್ಕಿಲ್ಲಾಯ 2003: 221) ಮತ್ತು ಬಿ.ಎನ್.ಮುನವಳ್ಳಿ(ಪ್ರಕಾಶ್ 2001: 9) ಮುಂತಾದ 13 ಜನ ಕಮ್ಯುನಿಸ್ಟ್ ನಾಯಕರಿದ್ದರು.

ಹೋರಾಟಕ್ಕೆ ಒಂದು ಸಂಘಟಿತ ರೂಪ ಕೊಡಲು ಹುಬ್ಬಳ್ಳಿಯ ಶ್ರೀ ಮಹದೇವಪ್ಪ ಮುರಗೋಡರ ಸಿದ್ಧಾಶ್ರಮದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತೀರ್ಮಾನಿಸಿದಂತೆ ದಾವಣಗೆರೆಯಲ್ಲಿ 1953 ಮೇ 28 ರಂದು ಸರ್ವಪಕ್ಷ ಸಮ್ಮೇಳನ ನಡೆಯಿತು. ಅದರಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಕಮ್ಯುನಿಸ್ಟ್ ಪಾರ್ಟಿ, ಪಿ.ಎಸ್.ಪಿ. ಮತ್ತು ಅನೇಕ ಸ್ವತಂತ್ರರು ಇದರಲ್ಲಿ ಭಾಗವಹಿಸಿ ಅಖಿಲಕರ್ನಾಟಕ ರಾಜ್ಯ ನಿರ್ಮಾಣ (ಅಕರಾನಿ) ಪರಿಷತ್ತನ್ನು ಸ್ಥಾಪಿಸಿದರು (ರಾಮರಾವ್ 1956: 3). ಈ ಸಮ್ಮೇಳನದಲ್ಲಿ ಎನ್.ಎಲ್.ಉಪಾಧ್ಯಾಯರ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷದ ಒಂದು ದೊಡ್ಡ ತಂಡ ಬಿ.ವಿ.ಕಕ್ಕಿಲ್ಲಾಯ, ಎಂ.ಎಸ್.ರಾಮರಾವ್, ಸಿ.ಬಿ.ಮೊಣ್ಣಯ್ಯ, ಎನ್.ಕೆ.ಉಪಾಧ್ಯಾಯ, ಎಂ.ಎಸ್.ಕೃಷ್ಣನ್, ಎಂ.ಸಿ.ನರಸಿಂಹನ್, ಐ.ಮರಿದಾಸ್ ಮುಂತಾದವರು ಭಾಗವಹಿಸಿದ್ದರು. ಅಕರಾನಿ ಪರಿಷತ್ತಿಗೆ ಕಮ್ಯುನಿಸ್ಟ್ ಪಕ್ಷದ ಬಿ.ವಿ.ಕಕ್ಕಿಲ್ಲಾಯ ಅವರು ಕಾರ್ಯದರ್ಶಿಯಾದರು[31].

1953 ಸೆಪ್ಟೆಂಬರ್ ಮೊದಲ ವಾರದಲ್ಲಿ 'ಕರ್ನಾಟಕ ವಾರ' ಆಚರಿಸಲು ಅಕರಾನಿ ಪರಿಷತ್ತು ಕರೆ ನೀಡಿತು. ಬಿ.ವಿ.ಕಕ್ಕಿಲ್ಲಾಯರು ಮತ್ತು ಶಿವಮೂರ್ತಿ ಸ್ವಾಮಿಗಳೂ ಕೂಡಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಡೆದ ಸಭೆಗಳಲ್ಲಿ ಭಾಗವಹಿಸಿ ಜಾಗೃತಿ ಮೂಡಿಸಿದರು. ಹೊಸಮನಿ ಸಿದ್ಧಪ್ಪ, ಚೆನ್ನಪ್ಪ ವಾಲಿ, ಬೆಂಕಿ ಸ್ವಾಮಿ, ಶಾಂತಿನಾಥ ಇಂಗಳೆ, ಡಿ.ಜಿ.ಮುಲ್ಲಾ, ಮಹದೇವಪ್ಪ ಮುರಗೋಡು, ಮುಂತಾದವರು (ಕಕ್ಕಿಲ್ಲಾಯ 2003: 224) ಬಿಜಾಪುರದಲ್ಲಿ ಎನ್. ಕೆ.ಉಪಾಧ್ಯಾಯ(ಉಪಾಧ್ಯಾಯ 1996: 58) ಮುಂತಾದ ಕಮ್ಯುನಿಸ್ಟರು ಸಕ್ರಿಯವಾಗಿ ಭಾಗವಹಿಸಿದರು. ಬಾಂಬೆ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಐದು ಸಾವಿರಕ್ಕೂ ಹೆಚ್ಚು ಹೋರಾಟಗಾರರನ್ನು ಬಂಧಿಸಿ ಹಿಂಡಲಗಾ, ಅಹಮದಾಬಾದ್, ನಾಸಿಕ್, ಯರವಾಡ ಮುಂತಾದ ಜೈಲುಗಳಲ್ಲಿಟ್ಟಿತು. ಬಂಧನಕ್ಕೆ ಒಳಗಾದವರಲ್ಲಿ ಹೆಚ್ಚಿನವರು ಕಮ್ಯುನಿಸ್ಟರಾಗಿದ್ದರು (ಗೋವಿಂದರಾಜು 2009: 61). ಮುರಾರ್ಜಿ ದೇಸಾಯಿ ಸರ್ಕಾರದ ಕಮ್ಯುನಿಸ್ಟ್ ವಿರೋಧಿ ನಿಲುವೂ ಇದಕ್ಕೆ ಕಾರಣವಾಗಿತ್ತು.

ಅಕರಾನಿ ಪರಿಷತ್ತಿನ ಎರಡನೆ ಸಮ್ಮೇಳನವು 1953 ಡಿಸೆಂಬರ್ 3 ರಂದು ಕೆ.ಆರ್.ಕಾರಂತರ ಅಧ್ಯಕ್ಷತೆಯಲ್ಲಿ ಹಂಪಿಯಲ್ಲಿ ಜರುಗಿತು. ಇದರಲ್ಲಿ ಶಿವಮೂರ್ತಿ ಸ್ವಾಮಿಗಳು ಕರ್ನಾಟಕ ಏಕೀಕರಣವಾಗುವಾಗ ಸೇರಿಸಬೇಕಾದ ಪ್ರದೇಶಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. ಬಿ.ವಿ.ಕಕ್ಕಿಲ್ಲಾಯರು ಕಮ್ಯುನಿಸ್ಟ್ ಪಕ್ಷದ ನಿಲುವುಗಳನ್ನು ಮಂಡಿಸಿದರು. ಅದರಲ್ಲಿ ಕಾಸರಗೋಡು ತಾಲೂಕಿನ ಕನ್ನಡ ಬಹುಸಂಖ್ಯಾತ ಗ್ರಾಮಗಳು ಬಹುತೇಕ ಚಂದ್ರಗಿರಿ ನದಿಯ ಉತ್ತರ ಭಾಗಗಳು ಕರ್ನಾಟಕದಲ್ಲಿ ವಿಲೀನವಾಗಬೇಕು, ಕೇಂದ್ರಾಡಳಿತ ಪ್ರದೇಶ ಕೊಡಗು ಪೂರ್ತಿಯಾಗಿ ಕರ್ನಾಟಕಕ್ಕೆ ಸೇರಬೇಕು, ಬಳ್ಳಾರಿ ಜಿಲ್ಲೆಯ ಕನ್ನಡ ಮತ್ತು ತೆಲುಗು ಗಡಿಗಳ ನಿರ್ಧಾರವನ್ನು ಆಯೋಗಕ್ಕೆ ಬಿಡಬೇಕೆಂದು, ಗ್ರಾಮಗಳನ್ನು ಘಟಕಗಳನ್ನಾಗಿ ಪರಿಗಣಿಸಿ ಭಾಷಾ ಬಾಂಧವ್ಯ ಮತ್ತು ಪ್ರಾದೇಶಿಕ ಹೊಂದಾಣಿಕೆಗಳ ದೃಷ್ಟಿಯಿಂದ ಗಡಿ ನಿರ್ಣಯವಾಗಬೇಕೆಂದು ಕಕ್ಕಿಲ್ಲಾಯರು ಹೇಳಿದರು. ಅದೇ ರೀತಿ ಮಹಾರಾಷ್ಟ್ರ–ಕರ್ನಾಟಕ ಮತ್ತು ಆಂಧ್ರ–ಕರ್ನಾಟಕ ಗಡಿಗಳನ್ನು ನಿರ್ಧರಿಸಬೇಕೆಂದು ತಿಳಿಸಿದರು. ಅಕರಾನಿ ಪರಿಷತ್ತಿನೊಳಗೆ ಇವಲ್ಲದೆ ಬೇರೆ ಕೆಲವು ಅಭಿಪ್ರಾಯಗಳೂ ಇದ್ದವು. ಆದರೂ ಮುಂದೆ ರಚನೆಯಾಗಲಿದ್ದ ಆಯೋಗದ ಮುಂದೆ ಅಕರಾನಿ

ನಿಲುವನ್ನು ಮಂಡಿಸಲು ಮನವಿಯನ್ನು ತಯಾರಿಸಲು ಶಿವಮೂರ್ತಿ ಸ್ವಾಮಿಗಳು, ಬಿ.ವಿ.ಕಕ್ಕಿಲ್ಲಾಯ ಮತ್ತು ಬಳ್ಳಾರಿ ವಕೀಲರಾದ ಸತ್ಯವಂತರಾವ್ ಇವರಿರುವ ಸಮಿತಿಯನ್ನು ರಚಿಸಲಾಯಿತು. ದೆಹಲಿಯ ಶಿವಮೂರ್ತಿ ಸ್ವಾಮಿಗಳ ನಿವಾಸದಲ್ಲಿ ಹಲವು ವಾರಗಳ ಕಾಲ ಅಧ್ಯಯನ ನಡೆಸಿ ಮನವಿಯನ್ನು ಸಿದ್ಧಪಡಿಸಿದರು. ಇದರ ಬೆರಳಚ್ಚನ್ನು ಕಮ್ಯುನಿಸ್ಟ್ ಪಕ್ಷದ ಸಂಸದೀಯ ಕಛೇರಿಯಲ್ಲಿ ಸಿದ್ಧಪಡಿಸಲಾಯಿತು.

ಹುಬ್ಬಳ್ಳಿ ಘಟನೆ, ಉಪ–ಚುನಾವಣೆಗಳ ಫಲಿತಾಂಶ ಮತ್ತು ಕಮ್ಯುನಿಸ್ಟರ ಹೆಚ್ಚಿದ ಚಟುವಟಿಕೆಗಳು ಸೇರಿದಂತೆ ಭಾಷಾವಾರು ರಾಜ್ಯಗಳ ರಚನೆಗೆ ಜನತೆಯ ಚಳುವಳಿಗಳು ತೀವ್ರವಾಗುತ್ತಿರುವುದನ್ನು ಕಂಡು ಕೇಂದ್ರದ ನೆಹರೂ ಸರ್ಕಾರ 1953 ಡಿಸೆಂಬರ್ 29 ರಂದು ಫಜಲ್ ಅಲಿ ಆಯೋಗವನ್ನು ನೇಮಿಸಿತು (ಗೋವಿಂದರಾಜು 2009: 61). ಅಕರಾನಿ ಪರಿಷತ್ತು ಮತ್ತು ಕಮ್ಯುನಿಸ್ಟ್ ಪಕ್ಷ ಪ್ರತ್ಯೇಕವಾಗಿ ಮನವಿಗಳನ್ನು ಅರ್ಪಿಸಿದವು. ಇಡೀ ಕಾರವಾರ ಜಿಲ್ಲೆ ಪೂರ್ಣವಾಗಿ, ಬೆಳಗಾಂ ನಗರ ಮತ್ತು ಅದಕ್ಕೆ ನೀರು ಪೂರೈಸುವ ಸ್ಥಳ ಕರ್ನಾಟಕದಲ್ಲಿ ಉಳಿಯಬೇಕು, ಕನ್ನಡ ಹೆಚ್ಚು ಮಾತನಾಡುವ ಗ್ರಾಮಗಳು ಕರ್ನಾಟಕಕ್ಕೆ ಸೇರಬೇಕು, ಮರಾಠಿ ಬಾಹುಳ್ಯವುಳ್ಳ ಮತ್ತು ಮಹಾರಾಷ್ಟ್ರಕ್ಕೆ ಅಂಟಿಕೊಂಡಿರುವ ಗ್ರಾಮೀಣ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಿಸಬಹುದೆಂದು ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿತು. ಈ ನಡುವೆ ರಾಜ್ಯದೊಳಗೆ ಏಕೀಕರಣದ ವಿಚಾರದಲ್ಲಿ ಎದ್ದು ಬಂದ ವಿಭಿನ್ನ ನಿಲುವುಗಳು ವಿಭಿನ್ನ ಪ್ರದೇಶಗಳ ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ಸ್ವ–ಹಿತಾಸಕ್ತಿಯ ಸಂಘರ್ಷಗಳ ಪ್ರತಿಬಿಂಬವಾಗಿತ್ತು. ಈ ಹಿನ್ನೆಲೆಯಲ್ಲಿ 1955 ಮೇ 9–12 ರಂದು ಮಡಿಕೇರಿಯಲ್ಲಿ ನಡೆದ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿ ಸಭೆಯು ಕೆಳಕಂಡ ನಿರ್ಣಯವನ್ನು ಕೈಗೊಂಡಿತು:

> ಇತ್ತೀಚೆಗೆ ನಡೆದ ಘಟನೆಗಳಿಂದ ಕರ್ನಾಟಕ ಏಕೀಕರಣದ ಬಗ್ಗೆ ಚಳುವಳಿಯು ಬಲಹೊಂದುತ್ತಿರುವುದು ಕಂಡು ಬರುತ್ತಿದೆ. ಆರು ಆಡಳಿತೆಗಳಲ್ಲಿ ಹರಿದು ಹಂಚಲ್ಪಟ್ಟಿರುವ ಕರ್ನಾಟಕವನ್ನು ಒಂದುಗೂಡಿಸಿ ಒಂದೇ ಪ್ರಾಂತೀಯ ಆಡಳಿತೆಯೊಳಗೆ ತರಬೇಕೆಂಬ ಕನ್ನಡಿಗರ ಬಯಕೆಗೆ ಹೆಚ್ಚು ಹೆಚ್ಚಿನ ಬೆಂಬಲವು ದೊರಕುತ್ತಿದೆ. ಅಖಂಡ ಕರ್ನಾಟಕ ಪ್ರಾಂತ ರಚನೆಯು ಈಗ ಅನಿವಾರ್ಯವಾಗಿದೆ.
>
> ಆದರೆ ಕೆಲವು ಪ್ರತಿಗಾಮಿ ಸ್ವಾರ್ಥ ಸಾಧಕ ಗುಂಪುಗಳು ಕನ್ನಡಿಗರ ಈ ಮೂಲಭೂತವಾದ ಮತ್ತು ನ್ಯಾಯವಾದ ಬೇಡಿಕೆಯನ್ನು ವಿರೋಧಿಸುತ್ತವೆ. ಅನಾವಶ್ಯಕ ತಡಮಾಡುವ ಮತ್ತು ತೊಡಕು ಉಂಟುಮಾಡುವ ಕೇಂದ್ರ ಸರ್ಕಾರದ ಧೋರಣೆಯಿಂದ ಈ ಪ್ರತಿಗಾಮಿಗಳು ಧೈರ್ಯ ಹೊಂದಿ ಏಕೀಕರಣ ವಿರೋಧವಾಗಿ ಕೂಗೆಬ್ಬಿಸುತ್ತಾರೆ. ಮೈಸೂರು ಅಸೆಂಬ್ಲಿಯಲ್ಲಿ ಶೇಷಾದ್ರಿ ಸಮಿತಿಯ ವರದಿಯನ್ನು ಚರ್ಚಿಸುವಾಗ ಬಹುಸಂಖ್ಯಾತ ಸದಸ್ಯರು ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡುತ್ತಾರಾದರೂ ಕೆಲವು ಸದಸ್ಯರು ಅದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಕಾಂಗ್ರೆಸ್ ಪಕ್ಷದೊಳಗಿನ ಭಿನ್ನಾಭಿಪ್ರಾಯದ ಕಾರಣದಿಂದ ಅಸೆಂಬ್ಲಿಯಲ್ಲಿ ಯಾವುದೇ ಠರಾವು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದು ಕನ್ನಡಿಗರನ್ನೆಲ್ಲಾ ದಂಗುಪಡಿಸಿದೆಯಲ್ಲದೆ, ಎರಡು ಕೋಟಿ ಕನ್ನಡಿಗರ ಹಿತಕ್ಕೆ ಸಂಬಂಧಿಸಿದ ವಿಷಯದಲ್ಲಿ ಕಾಂಗ್ರೆಸಿನ ಅಸಮರ್ಥತೆಯನ್ನು ಬಯಲು ಮಾಡಿದೆ.

ಕೊಡಗು ಕಾಂಗ್ರೆಸ್ ಸರ್ಕಾರವು ತನ್ನ ಹಳೆಯ ವಾಗ್ದಾನಗಳನ್ನು ಮುರಿದು ಕರ್ನಾಟಕ ಏಕೀಕರಣವನ್ನು ವಿರೋಧಿಸುತ್ತದೆ. ಕೊಡಗಿನಲ್ಲಿ ಪ್ರಬಲವಾಗಿರುವ ಬ್ರಿಟಿಷ್ ಪ್ಲಾಂಟರ್‌ಗಳನ್ನು ಪ್ರತಿಗಾಮಿಗಳಾದ ಪ್ರತ್ಯೇಕತಾವಾದಿಗಳನ್ನೂ ಕೆಲವು ರಾಜಕೀಯ ಸ್ವಾರ್ಥಪರರನ್ನೂ ತೃಪ್ತಿಪಡಿಸುವುದಕ್ಕೆ ಕೊಡಗಿನ ಸರಕಾರವು ಈ ಧೋರಣೆಯನ್ನು ವಹಿಸಿರುತ್ತದೆ. ಕೊಡಗಿನ ಜನತೆ ಕರ್ನಾಟಕದಲ್ಲಿ ಕೊಡಗು ಸೇರಬೇಕೆಂದು ಬಯಸುತ್ತದೆ ಎನ್ನುವುದು ನಿರ್ವಿವಾದವಾಗಿದೆ.

ಇದೇ ರೀತಿ ಬೇರೆ ಕೆಲವು ಕಡೆಗಳಲ್ಲಿ ಕರ್ನಾಟಕ ಏಕೀಕರಣವನ್ನು ಕೆಲವರು ವಿರೋಧಿಸುತ್ತಾರೆ. ಭಾರತ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಸಮಿತಿಯು ಕನ್ನಡಿಗರ ಭಾಗಗಳನ್ನೆಲ್ಲಾ ಒಳಗೊಂಡಿರುವ ಅಖಂಡ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕೆಂಬ ಕೇಳಿಕೆಯನ್ನು ಮತ್ತೊಮ್ಮೆ ಘೋಷಿಸುತ್ತದೆ. ಪ್ರಾಂತಗಳ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಇದಿರು ನೋಡುತ್ತಾ, ಕೈಕಟ್ಟಿ ಕುಳಿತುಕೊಳ್ಳದೆ, ಕರ್ನಾಟಕ ಪ್ರಾಂತ ರಚನೆಯ ಕೇಳಿಕೆಯನ್ನು ಸಾಧಿಸಲು ಚಳವಳಿಯನ್ನು ಬಲಪಡಿಸಬೇಕೆಂದು ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಸಮಿತಿಯು ಕರ್ನಾಟಕದ ಜನರನ್ನೂ ಅವರ ಸಂಘಟನೆಗಳನ್ನೂ ಕೇಳಿಕೊಳ್ಳುತ್ತದೆ. ಇದು ಕನ್ನಡಿಗರ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಂಸ್ಕೃತಿಯ ಪ್ರಗತಿಗೆ ಅತ್ಯಾವಶ್ಯಕವಿದೆ. ಮುಂದಿನ ಚುನಾವಣೆಯು ಕರ್ನಾಟಕ ಅಸೆಂಬ್ಲಿಗೆ ಎಂಬ ಘೋಷಣೆಯ ತಳಹದಿಯಲ್ಲಿ ಬಲವಾದ ಮತ್ತು ವಿಶಾಲವಾದ ಚಳವಳಿಯನ್ನು ಬೆಳೆಸಲು ಕಮ್ಯುನಿಸ್ಟ್ ಪಾರ್ಟಿಯ ಕರೆ ಕೊಡುತ್ತದೆ[32].

ಕೊಡಗು ಪ್ರತ್ಯೇಕ ರಾಜ್ಯವಾಗಿಯೇ ಉಳಿಯಬೇಕೆಂಬ ವಾದಗಳಿಗೆ ವಿರುದ್ಧವಾಗಿ ಕಮ್ಯುನಿಸ್ಟ್ ಪಕ್ಷ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತದೆ. ಕೊಡಗಿನ ಆರ್ಥಿಕ ಜೀವನವು ಉಳಿದ ಪ್ರದೇಶಗಳ ಆರ್ಥಿಕ ಜೀವನಕ್ಕಿಂತ ಮೇಲ್ಮಟ್ಟದ್ದೆಂದೂ, ಇದಕ್ಕೆ ಕೊಡಗು ಪ್ರತ್ಯೇಕವಾಗಿ ಉಳಿದದ್ದೇ ಕಾರಣವೆಂದೂ, ಅದರ ಸಾಂಸ್ಕೃತಿಕ ಭಿನ್ನತೆಯ ರಕ್ಷಣೆಗಾಗಿ ಮತ್ತು ಇತರ ಕೆಲವು ಕಾರಣಗಳಿಗಾಗಿ ಕೊಡಗು ಪ್ರತ್ಯೇಕವಾಗಿ ಉಳಿಯಬೇಕೆಂಬ ವಾದವು ಕೊಡಗಿನಲ್ಲಿತ್ತು. ಫಜಲ್ ಅಲಿ ಸಮಿತಿಗೆ ಕೊಡಗು ಕಮ್ಯುನಿಸ್ಟ್ ಪಾರ್ಟಿಯು ಅರ್ಪಿಸಿದ ಮನವಿಯಲ್ಲಿ ಕೊಡಗು ಸಮೇತವಾದ ಕರ್ನಾಟಕ ಕೂಡಲೇ ರಚಿಸಬೇಕೆಂದು ಒತ್ತಾಯಿಸಿತು. ಕೊಡಗು ಪ್ರತ್ಯೇಕವಾಗಿಯೇ ಉಳಿಯಬೇಕೆಂಬುದು ಸ್ಥಾಪಿತ ಹಕ್ಕುಳ್ಳವರ ಎಂದರೆ ಯೂರೋಪಿಯನ್ ಮತ್ತು ಹಿಂದೀ ಪ್ಲಾಂಟರುಗಳ ಜಮೀನ್ದಾರರುಗಳ ಕೇಳಿಕೆಯಾಗಿದೆ ಎಂದು ಈ ಮನವಿಯು ಖಂಡಿಸಿತು. 1951 ರ ಖಾನೆಶುಮಾರಿ ವರದಿಯು ಇಂತಹ ಕೇಳಿಕೆಯ ವಿರುದ್ಧವಾಗಿದೆ ಎಂದು ಅಂದಿನಿಂದಲೂ ಪ್ರತ್ಯೇಕತೆಯ ವಿರುದ್ಧ ಕಮ್ಯುನಿಸ್ಟ್ ಪಕ್ಷ ಧ್ವನಿಯೆತ್ತುತ್ತಲೇ ಬಂದಿರುವುದನ್ನು ಕಾಣಬಹುದು:

ಕನ್ನಡ ನಾಡು ಒಂದೇ ಆಗಬೇಕು. ಕನ್ನಡಿಗರು ಒಂದಾಗಬೇಕು ಎಂಬ ಈ ಕೇಳಿಕೆ ಎರಡು ಕೋಟಿ ಕನ್ನಡಿಗರ ಬಹು ಹಿಂದಿನ ಕೇಳಿಕೆಯಾಗಿದೆ . . . ಕನ್ನಡವು ಕೊಡಗಿನ ಬಹುಜನರ ಮಾತೃಭಾಷೆಯಾಗಿದೆ. ಸರಕಾರಿ ಭಾಷೆಯೂ ಕನ್ನಡವೇ ಆಗಿದೆ. ಕೊಡಗಿನಲ್ಲಿ ಶೇ.34 ಮಂದಿ ಕನ್ನಡವನ್ನು, ಶೇ.29 ಮಂದಿ ಕೊಡಗು ಭಾಷೆಯನ್ನೂ ಶೇ.14 ಮಂದಿ ಮಲೆಯಾಳಿ ಭಾಷೆಯನ್ನೂ, ಶೇ.9.2 ಮಂದಿ ತುಳು ಭಾಷೆಯನ್ನೂ, ಶೇ.6 ತಮಿಳು ಭಾಷೆಯನ್ನೂ, ಶೇ.1.7 ತೆಲುಗು ಭಾಷೆಯನ್ನೂ, ಶೆ.0.1 ಇಂಗ್ಲಿಷ್ ಭಾಷೆಯನ್ನೂ, ಶೇ.4.7 ಮಂದಿ ಇತರ ಭಾಷೆಗಳನ್ನು ಆಡುವವರಿದ್ದಾರೆ.

ಇಲ್ಲಿನ ಜನಸಂಖ್ಯೆಯ ಸುಮಾರು ಶೇ.34 ರಷ್ಟು ಮಂದಿ ಸ್ವಂತ ಭೂಮಿಯುಳ್ಳ ರೈತರು, ಶೇ. 10 ಮಂದಿ ಬೇರೆಯವರ ಗದ್ದೆ ಬೇಸಾಯ ಮಾಡುವ ರೈತರು, ಶೇ.11 ಮಂದಿ ಬೇಸಾಯ ಕೂಲಿಗಾರರು, ಹೆಚ್ಚುಕಡಿಮೆ ಶೇ.3 ರಷ್ಟು ಮಂದಿ ಬೇಸಾಯ ಮಾಡದ ಜಮೀನ್ದಾರರು, ಶೇ.24 ಮಂದಿ ತೋಟ ಕೆಲಸಗಾರರು, ಶೇ.3 ಮಂದಿ ವ್ಯಾಪಾರವನ್ನು ಅವಲಂಬಿಸಿರುವವರು, ಶೇ.1 ರಷ್ಟು ಮಂದಿ ಟ್ರಾನ್ಸ್‌ಪೋರ್ಟ್ ಸರ್ವಿಸಿನಲ್ಲಿರುವವರು, ಮತ್ತುಳಿದ ಶೇ.14 ರಷ್ಟು ಮಂದಿ ಬೇರೆ ಬೇರೆ ವಹಿವಾಟಿನಲ್ಲಿರುವವರು ಆಗಿದ್ದಾರೆ.

ಮುಖ್ಯ ವ್ಯವಸಾಯ ಭತ್ತ. ಎರಡನೆಯದು ಕಾಫಿ. ಒಟ್ಟು 44,408 ಎಕ್ರೆಗಳಲ್ಲಿ ಕಾಫಿ ತೋಟಗಳಿವೆ. ಇದರಲ್ಲಿ ಶೇ.50 ರಷ್ಟು ತೋಟಗಳು 40 ಮಂದಿ ಯೂರೋಪಿಯನ್ನರ ಕೈಯೊಳಗಿದೆ. ಒಟ್ಟು 4371 ಕಾಫಿ ತೋಟಗಳು ಇಲ್ಲಿವೆ. ಈ ತೋಟಗಳಲ್ಲಿ ಶೇ.75 ರಷ್ಟು 5 ಎಕ್ರೆಗಳಿಗಿಂತ ಸಣ್ಣದಿರುವ ಒಟ್ಟು ಕಾಫಿ ಉತ್ಪಾದನೆಯ ಶೇ.10 ರಷ್ಟನ್ನು ಉತ್ಪಾದಿಸುವ ತೋಟಗಳಾಗಿವೆ. ಇವು 1951ರ ಖಾನೆಶುಮಾರಿ ವರದಿ. ಇದರಿಂದ ಕೊಡಗಿನ ಬಹುಸಂಖ್ಯಾಕ ಜನರು ವಿಪರೀತ ಬಡತನದಿಂದ ಬಳಲುತ್ತಿದ್ದಾರೆ ಎಂಬುದನ್ನು ಕಾಣಬಹುದು.

1941–42 ರ ತನಕ ಇಲ್ಲಿನ ಉತ್ಪತ್ತಿ ಸುಮಾರು 12 ಲಕ್ಷ ರೂ. ಆ ಬಳಿಕ ಯುದ್ಧದ ದೆಸೆಯಿಂದಾಗಿ 1948–49ಕ್ಕೆ ಈ ಉತ್ಪನ್ನ 39–40 ಲಕ್ಷಕ್ಕೇರಿತು. 1951 ರಲ್ಲಿ ಕೊಡಗನ್ನು 'ಸಿ' ಪ್ರಾಂತವಾಗಿ ಮಾಡಿದ ಕೂಡಲೇ ಪ್ರಾಂತದ ಕಾಡುಗಳ ಮೇಲೆ ಕಂಡಾಬಟ್ಟೆ ತೆರಿಗೆ ಹಾಕಿ ಈ ಆಯವನ್ನು 1 ಕೋಟಿಗೆ ಏರಿಸಲಾಯಿತು. ಇದರಲ್ಲಿ ಕೇಂದ್ರ ಸರಕಾರ ಕೊಡುವ ಸಹಾಯ–ಸಾಲಗಳಾದ 32 ಲಕ್ಷ ರೂ ಕೂಡಾ ಸೇರಿದೆ.

ಇದೀಗ ಕೊಡಗನ್ನು ಪ್ರತ್ಯೇಕ ಪ್ರಾಂತವೆಂದು ಹೇಳುವುದಾದರೂ ನಿಜಾರ್ಥದಲ್ಲಿ ಅದು ಬೇರೆ ಪ್ರಾಂತಗಳನ್ನು ಹೊಂದಿಕೊಳ್ಳಲೇಬೇಕಾಗಿದೆ. ಹೈಕೋರ್ಟು, ವಿಶ್ವವಿದ್ಯಾಲಯ, ಯಾಂತ್ರಿಕ ತಜ್ಞರ ಸಹಾಯಗಳಿಗಾಗಿ ಇತರ ಪ್ರಾಂತಗಳನ್ನು ಹೊಂದಿಕೊಂಡಿರಬೇಕಾಗಿದೆ. ಆ ನಂತರ ಬಂದ ಬ್ರಿಟಿಷರು, ಕೊಡಗಿನ ಯೂರೋಪಿಯನ್ ಪ್ಲಾಂಟರುಗಳ ಹಿತ ರಕ್ಷಣೆಗಾಗಿ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇರಿಸಿದರು. ಇವರ ಮನೋಭಾವ ಸ್ಥಳೀಯ ಕೆಲವರಲ್ಲೂ ಪ್ರತಿಧ್ವನಿಸಿ ಈ ಸ್ಥಾಪಿತ ಹಕ್ಕಿನ ಮನೋಭಾವ ಪ್ಲಾಂಟರುಗಳಲ್ಲೂ ಜಮೀನ್ದಾರರುಗಳಲ್ಲೂ ಬೆಳೆಯಿತು. ಈ ವರ್ಗ, ತಮ್ಮ 'ಗತ್ತನ್ನು' ಉಳಿಸಲಿಕ್ಕಾಗಿ, ತಮ್ಮ ಹಕ್ಕನ್ನು ಕಾಯಲಿಕ್ಕಾಗಿ ಪ್ರಾಂತದ ಬಹು ಸಂಖ್ಯಾಕ ಬಡವರಿಗೆ ಬೆಲೆಯನ್ನೀಯಲು ನಿರಾಕರಿಸುತ್ತಿವೆ. ಈಗಿದ್ದಂತೆಯೇ ಮುಂದೆಯೂ ಕೊಡಗು ಇರಬೇಕು ಎಂಬುದು ಇಲ್ಲಿನ ಯೂರೋಪಿಯನ್ ಪ್ಲಾಂಟರುಗಳ, ಹಿರಿ ದೇಶೀ ಪ್ಲಾಂಟರುಗಳ ಹಿತಾಸಕ್ತಿಯಾಗಿದೆ[33].

ಪುನರ್ವಿಂಗಡಣಾ ಆಯೋಗಕ್ಕೆ ಏನೆಲ್ಲಾ ಮನವಿಗಳನ್ನು ಕೊಟ್ಟ ಮೇಲೂ ವರದಿ ಪ್ರಕಟಣೆ ನಿಧಾನವಾಗುತ್ತಿರುವುದರ ವಿರುದ್ಧ ಸಿಪಿಐನ ಕೇಂದ್ರ ಸಮಿತಿ ಆಕ್ಷೇಪವನ್ನು ಪ್ರಕಟಿಸಿತು[34]. ರಾಜ್ಯ ಪುನರ್ವಿಂಗಡಣಾ ಆಯೋಗವು, ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅನುರೂಪವಾಗಿದ್ದು ನಿರಂತರವಾಗಿರುವ ಭೌಗೋಳಿಕ ಪ್ರದೇಶಗಳನ್ನು ಒಟ್ಟುಗೂಡಿಸುವ ಸರ್ವಸಮ್ಮತವಾದ ತತ್ವದ ಬದಲಿಗೆ, ಹಣಕಾಸಿನ ಮತ್ತು ಆಡಳಿತಾತ್ಮಕ ಅನಾನುಕೂಲತೆಗಳನ್ನು ಮುಂದು ಮಾಡಿ ರಾಷ್ಟ್ರೀಯ ಐಕ್ಯತೆ ಮತ್ತು ರಕ್ಷಣೆಯ ನೆಪದಲ್ಲಿ ಮುಂದೂಡುತ್ತಿದೆ. ಇದು ಕೆಲವು ಪ್ರದೇಶಗಳಲ್ಲಾದರೂ ರಾಜ್ಯ

ರಚನೆಯನ್ನು ಮುಂದೂಡಲು ನೆಪವಾಗಿದೆ. ಸೆಪ್ಟೆಂಬರ್ 1954 ಕ್ಕಿಂತ ನಿಧಾನವಾಗದ ಹಾಗೆ ಮಧ್ಯಂತರ ವರದಿಯನ್ನು ಒಪ್ಪಿಸಬೇಕೆಂದು ಮತ್ತು ಈ ತತ್ವದ ಆಧಾರದಲ್ಲಿ ಒಟ್ಟು 20 ರಾಜ್ಯಗಳನ್ನು ರಚಿಸಬಹುದೆಂದು ಬಗ್ಗೆ ಕಮ್ಯುನಿಸ್ಟ್ ಪಾರ್ಟಿಯು ಒತ್ತಾಯಿಸಿತು. 'ತೆಲುಗು ಮಾತನಾಡುವ ಪ್ರದೇಶಗಳನ್ನು ಹೊರತುಪಡಿಸಿ ಪ್ರಸಕ್ತ ಮೈಸೂರು ರಾಜ್ಯ, ಜೊತೆಗೆ ಕನ್ನಡ ಮಾತನಾಡುವ ಮದ್ರಾಸ್, ಹೈದರಾಬಾದ್, ಬಾಂಬೆ ಮತ್ತು ಆಂಧ್ರ ರಾಜ್ಯಗಳ ಪ್ರದೇಶಗಳು ಮತ್ತು ಕೊಡಗು'ನ್ನು ಒಳಗೊಂಡು ಕರ್ನಾಟಕದ ರಾಜ್ಯ ರಚನೆಗೆ ಸಿಪಿಐ ಒತ್ತಾಯ ಮಾಡಿತು[35]. ಕಾಂಗ್ರೆಸ್‌ನ ಏರುಪೇರಿನ ನಿಲುವುಗಳ ಹಿನ್ನೆಲೆಯಲ್ಲಿ ಮುಂದೆ ಸಂಭವಿಸಬಹುದಾದ ಅನಾಹುತಗಳನ್ನು ಮನಗಂಡು, ಮುಖ್ಯವಾಗಿ ಗಡಿ ರೇಖೆಗಳನ್ನು ತೀರ್ಮಾನಿಸುವಾಗ ಅನುಸರಿಸಬೇಕಾದ ತತ್ವಗಳನ್ನೂ ಅದು ಪ್ರತಿಪಾದಿಸಿತು. ಸಿಪಿಐ ಪ್ರತಿಪಾದಿಸಿದ (ಬಹುಶಃ ಇಂದಿಗೂ ಸೂಕ್ತವಾದ) ತತ್ವಗಳು ಈ ರೀತಿಯಿದ್ದವು.

1. ಗ್ರಾಮವನ್ನು ಘಟಕವನ್ನಾಗಿ ಪರಿಗಣಿಸಬೇಕು. ಇದನ್ನು ಆ ಗ್ರಾಮದಲ್ಲಿ ಬಹುಸಂಖ್ಯಾತ ಜನರು ಮಾತನಾಡುವ ನಿರ್ದಿಷ್ಟ ಭಾಷೆಯ ಮತ್ತು ಆ ಗ್ರಾಮವು ನಿರ್ದಿಷ್ಟ ಭಾಷಾ ರಾಜ್ಯಕ್ಕೆ ನಿರಂತರವಾಗಿರುವ ಆಧಾರದಲ್ಲಿ ಇದನ್ನು ತೀರ್ಮಾನಿಸಬೇಕು.

2. ಗಡಿ ರೇಖೆಯನ್ನು ಎಷ್ಟೇ ಎಚ್ಚರಿಕೆಯಿಂದ ಗುರುತಿಸಿದರೂ, ಈ ಗಡಿಯ ಎರಡೂ ಬದಿಗಿನ ಪ್ರದೇಶಗಳು ಮತ್ತು ಪ್ರತಿಯೊಂದು ರಾಜ್ಯದ ಒಳಗೆ ಭಾಷಾ ಅಲ್ಪಸಂಖ್ಯಾತರು ಉಳಿಯುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಇವರಿಗೆ ಪ್ರಾಥಮಿಕ ಮತ್ತು ಪ್ರೌಢ ಹಂತಗಳ ಶಿಕ್ಷಣವನ್ನು ಅವರ ಮಾತೃಭಾಷೆಯಲ್ಲಿ ನೀಡುವುದನ್ನು ಖಾತ್ರಿಗೊಳಿಸಬೇಕು. ಕಾಲೇಜು ಶಿಕ್ಷಣವನ್ನೂ ಅವರ ಮಾತೃಭಾಷೆಯಲ್ಲೇ ನೀಡಬೇಕೆನ್ನುವ ಪ್ರಶ್ನೆಗೆ ಸಂಬಂಧಿಸಿದಂತೆ, ಎಲ್ಲಿಯವರೆಗೆ ಮತ್ತು ಯಾವ ಪ್ರಾಯೋಗಿಕ ಪರಿಸ್ಥಿತಿಗಳಲ್ಲಿ ಎಂಬುದನ್ನು ತೀರ್ಮಾನಿಸಲು ಸಂಬಂಧಿಸಿದ ರಾಜ್ಯಗಳಿಗೆ ಬಿಡಬೇಕು. ಆಗ ಮಾತ್ರ ಈ ಗಡಿ ಪ್ರದೇಶಗಳು, ಅನೈಕ್ಯತೆ ಮತ್ತು ವೈಷಮ್ಯದ ಕೇಂದ್ರಗಳಾಗದೆ, ಭಾಷಾವಾರು ರಾಜ್ಯಗಳ ನಡುವೆ ಪರಸ್ಪರ ಬಾಂಧವ್ಯದ ಕೇಂದ್ರಗಳಾಗುತ್ತವೆ.

3. ಗಡಿಗಳನ್ನು ಗುರುತಿಸುವಾಗ ಅದರೊಳಗೆ ಆದಿವಾಸಿ (ಬುಡಕಟ್ಟು) ಪ್ರದೇಶಗಳಿರಬಹುದು. ಒಂದು ನಿರ್ದಿಷ್ಟ ವಿಶಿಷ್ಟ ಬುಡಕಟ್ಟು ವಾಸಿಸುವ ಬುಡಕಟ್ಟು ಪ್ರದೇಶವನ್ನು, ಯಾವುದಾದರೂ ಒಂದು ಭಾಷಾ ರಾಜ್ಯಕ್ಕೆ, ಅದು ಯಾವ ನೆರೆ ರಾಜ್ಯದೊಡನೆ ತನ್ನ ಸಾಂಸ್ಕೃತಿಕ ಮತ್ತು ಭಾಷಿಕ ಸಾಮ್ಯತೆಯನ್ನು ಹೊಂದಿದೆಯೋ ಅದರೊಂದಿಗೆ, ಹಾಗೆಯೇ ಯಾವ ರಾಜ್ಯದೊಂದಿಗೆ ಅದರ ಆರ್ಥಿಕ ಬೆಳವಣಿಗೆ ಹೆಚ್ಚು ಸಾಮೀಪ್ಯವಾಗಿದೆಯೋ ಮತ್ತು ಹೆಚ್ಚು ಸಹಜವಾಗಿ ಬೆಳೆಯಬಹುದೋ ಅದರೊಂದಿಗೆ ಜೋಡಿಸಬೇಕು[36].

ವಿಪರೀತ ಸಣ್ಣ ವಿವರಗಳ ಬಗ್ಗೆ ತಮ್ಮ ಶಕ್ತಿಯನ್ನು ವ್ಯಯ ಮಾಡದೆ, ಈ ತತ್ವಗಳ ಆಧಾರದಲ್ಲಿ ರಾಜ್ಯಗಳ ರಚನೆಗೆ ಚಳುವಳಿಗಳನ್ನು ತೀವ್ರಗೊಳಿಸಲು ಸಿಪಿಐ ಕರೆ ನೀಡಿತು. ಒಮ್ಮೆ ರಾಜ್ಯ ರಚನೆಯಾದರೆ ಲಭ್ಯವಿರುವ ಜನಗಣತಿಗಳ ಆಧಾರದಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಳ್ಳಬಹುದು ಎನ್ನುತ್ತಾ, ಮೇಲಿನ ತತ್ವಗಳ ಆಧಾರದಲ್ಲಿ ವಿವಾದಿತ ಪ್ರದೇಶಗಳ ಕುರಿತು ಪರಸ್ಪರ ಚರ್ಚಿಸಿ ಒಪ್ಪಂದಕ್ಕೆ ಬರಲು ತನ್ನ ಪ್ರಾಂತೀಯ ಸಮಿತಿಗಳಿಗೆ ಕರೆ ನೀಡಿತು. ಸಿಪಿಐ ಕೇಂದ್ರ ಸಮಿತಿಯು ತಾನು ಅಂಗೀಕರಿಸಿದ ಈ ನಿಲುವುಗಳ ಆಧಾರದಲ್ಲಿ ವಿವರವಾದ ಮನವಿಯನ್ನು ರಾಜ್ಯಗಳ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಿತು[37]. 1948 ರಲ್ಲಿ ರಚನೆಯಾಗಿದ್ದ ಜೆವಿಪಿ ಸಮಿತಿ ಭಾಷಾವಾರು ರಾಜ್ಯ ರಚನೆಗೆ ವಿರೋಧ ವ್ಯಕ್ತಪಡಿಸಿತ್ತು. ಆದರೆ ಅದು ತನ್ನ ವರದಿಯಲ್ಲಿ ವ್ಯಾಪಕವಾದ ಜನಾಭಿಪ್ರಾಯವಿದ್ದರೆ

ಒಂದು ಪ್ರಜಾಪ್ರಭುತ್ವ ಸರ್ಕಾರ ಅದಕ್ಕೆ ತಲೆಬಾಗಬೇಕು ಎಂದಿತ್ತು. ಜೊತೆಗೆ 'ಈ ಕೆಲವು ಭಾಷಿಕ ಪ್ರದೇಶಗಳು, ಮುಖ್ಯವಾಗಿ ಕೇರಳ ಮತ್ತು ಕರ್ನಾಟಕಗಳು, ನಿಜವಾಗಿ ಹೇಳಬೇಕೆಂದರೆ ದೊಡ್ಡ ಬಹು–ಭಾಷಿಕ ಸಂಸ್ಥಾನಗಳ ಜೊತೆಗಿನ ತಮ್ಮ ಸಂಯೋಗದಿಂದಾಗ ಹಿಂದೆ ನಷ್ಟ ಅನುಭವಿಸಿವೆ' ಎಂದೂ ಆ ವರದಿಯಲ್ಲಿ ಹೇಳಿದ್ದನ್ನು ಸಿಪಿಐ ತನ್ನ ಮನವಿಯಲ್ಲಿ ಪ್ರಸ್ತಾಪಿಸಿತು[38].

ಅಂತಿಮವಾಗಿ ಜನತೆಯ ಹೋರಾಟದ ಪರಿಣಾಮವಾಗಿ ರಾಜ್ಯ ಪುನರ್ವಿಂಗಡಣಾ ಆಯೋಗ ನವೆಂಬರ್ 1955 ರಲ್ಲಿ ವರದಿ ಪ್ರಕಟಿಸಿತು. ಅದರಲ್ಲಿ ಕರ್ನಾಟಕ ಪ್ರಾಂತ ರಚನೆಗೆ ಪುರಸ್ಕಾರ ಸಿಕ್ಕಿತ್ತು. ಆದರೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದೂ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದೂ ಶಿಫಾರಸ್ಸು ಮಾಡಲಾಗಿತ್ತು. ಅದನ್ನು ಪ್ರತಿಭಟಿಸಿ ಜನತೆ ಹೋರಾಡಬೇಕಾಯಿತು. ಸಾವಿರಾರು ಜನ ಬಳ್ಳಾರಿ ಮತ್ತು ಕಾಸರಗೋಡಿನಲ್ಲಿ ಜೈಲಿಗೆ ಹೋದರು. ಹರತಾಳಗಳಾದವು. ಬಳ್ಳಾರಿಯಲ್ಲಿ ಜಯ ದೊರೆಯಿತು. ಕಾಸರಗೋಡು ಕೇರಳಕ್ಕೆ ಸೇರಿಸಲ್ಪಟ್ಟಿತು. ಕಾಸರಗೋಡಿನ ವಿಚಾರದಲ್ಲಿ 1957 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರವಿದ್ದಾಗ, ಸಿಪಿಐನ ರಾಷ್ಟ್ರೀಯ ನಿಲುವಿನ ಆಧಾರದಲ್ಲಿ ಚರ್ಚಿಸಲು ಅವಕಾಶಗಳಿದ್ದವು. ಅಂದರೆ, ಗ್ರಾಮಗಳನ್ನು ಆಧಾರವಾಗಿಟ್ಟುಕೊಂಡ ಗಡಿ ರೇಖೆ ನಿರ್ಣಯ ವಿಧಾನ ಚಾಲ್ತಿಗೆ ಬಂದಿದ್ದರೆ ಕನ್ನಡಿಗರ ಕಾಸರಗೋಡಿನ ಕನಸು ಸಾಕಾರಗೊಳ್ಳಲು ಹೆಚ್ಚು ಸಾಧ್ಯತೆಗಳಿದ್ದವು.

ಏಕೀಕರಣ ಚಳುವಳಿಯು ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡಿದ್ದಲ್ಲದೆ ಕೊಡಗು ಮತ್ತು ಮೈಸೂರು ಪ್ರದೇಶಗಳಲ್ಲಿ ತಲೆಯೆತ್ತಿದ 'ಎರಡು ಕರ್ನಾಟಕದ ಅಪಸ್ವರ'ವನ್ನೂ ಎದುರಿಸಬೇಕಾಯಿತು. ಹಿಂದೆ ಕರ್ನಾಟಕಕ್ಕೆ ಬೆಂಬಲ ಕೊಟ್ಟಿದ್ದ ಈ ನಾಯಕರುಗಳು ಅಧಿಕಾರಕ್ಕೆ ಬಂದ ಮೇಲೆ ತಮ್ಮ ಸ್ವಾರ್ಥ ದೃಷ್ಟಿಯಿಂದ ಏಕೀಕರಣವನ್ನು ವಿರೋಧಿಸಿದರು. ಒಂದೇ ಕರ್ನಾಟಕವಾದರೆ ಮೈಸೂರು 'ವೈಶಿಷ್ಟ್ಯ' ಹೋಗುವುದೆಂಬ ಹುಯಿಲೆಬ್ಬಿಸಿದರು. ಈ ನಡುವೆ ಪಾರ್ಲಿಮೆಂಟಿನಲ್ಲಿ ಪ್ರಾಂತ ಪುನರ್ವಿಂಗಡಣೆಯ ಚರ್ಚೆ ಮುಗಿಯುವ ಮುಂಚೆಯೇ ಬಹು ಭಾಷಾ ಪ್ರಾಂತ ರಚನೆಯನ್ನು ಜನತೆಯ ಮೇಲೆ ಹೊರಿಸುವ ಪ್ರಯತ್ನವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಕಾಂಗ್ರೆಸ್ ಸರ್ಕಾರ ಮಾಡುತ್ತಿತ್ತು. ಕೇರಳ–ಕರ್ನಾಟಕಗಳ ಅಥವಾ ಕರ್ನಾಟಕ–ಆಂಧ್ರಗಳನ್ನೊಳಗೊಂಡ 'ದಕ್ಷಿಣ ಪ್ರದೇಶ'ಮತ್ತು 'ಪಶ್ಚಿಮ ಪ್ರದೇಶ'ಗಳ ರಚನೆಗೆ ಪ್ರಯತ್ನ ನಡೆಯಿತು[39]. ಮೈಸೂರು ವಿಧಾನಸಭೆಯಲ್ಲಿ ಹನುಮಂತಯ್ಯನವರು ಇದರ ಪರವಾಗಿ ಠರಾವನ್ನು ಅಂಗೀಕರಿಸಿ ಬಹುಭಾಷಾ ಪ್ರಾಂತ್ಯಕ್ಕೆ ಬೆಂಬಲಕೊಟ್ಟರು. ಒಂದೇ ಕರ್ನಾಟಕವಾದರೆ ಮೈಸೂರಿನ ವೈಶಿಷ್ಟ್ಯ ಹೋಗುವುದೆಂದವರು ದಕ್ಷಿಣ ಪ್ರಾಂತವಾದರೆ ಮೈಸೂರಿನ ವೈಶಿಷ್ಟ್ಯ ಹೇಗೆ ಉಳಿಸಿಕೊಳ್ಳತ್ತಾರೆಂಬುದನ್ನು ವಿವರಿಸಲು ವಿಫಲವಾದರು. ಶಾಸನಸಭೆಯಲ್ಲಿ ಕಮ್ಯುನಿಸ್ಟ್ ಶಾಸಕರಾಗಿದ್ದ ಕೆ.ಎಸ್.ವಾಸನ್ ಇದನ್ನು ವಿರೋಧಿಸಿದರು. ಈ ಗಂಡಾಂತರವನ್ನು ವಿರೋಧಿಸಿ ಕಮ್ಯುನಿಸ್ಟ್ ಪಾರ್ಟಿ 1956 ರ ಮಾರ್ಚ್ 18 ರಂದು ಪ್ರಾಂತ್ಯದಾದ್ಯಂತ 'ದಕ್ಷಿಣ ಪ್ರಾಂತ ಪ್ರತಿಭಟನಾ ದಿನಾಚರಣೆ'ಯನ್ನು ಆಚರಿಸಿತು(ಅರುಣ 8–4–1956: 1). ಹೀಗೆ ಪ್ರತಿ ಹೆಜ್ಜೆಗೂ ಜನತೆ ಕರ್ನಾಟಕ ಏಕೀಕರಣಕ್ಕಾಗಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಬೇಕಾಯಿತು. ಕಮ್ಯುನಿಸ್ಟ್ ಪಾರ್ಟಿ

ತತ್ವಬದ್ಧವಾದ ಹೋರಾಟವನ್ನು ನಡೆಸಿತು. ಅಂತೂ ಕೊನೆಗೆ ಜನತೆಯ ಆಶೋತ್ತರಗಳು ಕೈಗೂಡಿ 1956 ರ ನವೆಂಬರ್ 1 ರಂದು ಕರ್ನಾಟಕದ ಏಕೀಕರಣವಾಯಿತು. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಯಾದರು. ಈ ಬಗ್ಗೆ ಸಿಪಿಐ ಈ ರೀತಿಯಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿತು:

> ಕನ್ನಡಿಗರ ಬಹು ದಿನದ ಬಯಕೆಯಾದ ಕನ್ನಡ ನಾಡಿನ ಆಡಳಿತೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಿಜಲಿಂಗಪ್ಪನವರ ಮೇಲಿದೆ. ಪ್ರಾಂತದ ಪುನರ್ಘಟನೆಯಿಂದ ಉದ್ಭವಿಸುವ ಸಮಸ್ಯೆಗಳನ್ನು ವಿಶಾಲ ದೃಷ್ಟಿಯಿಂದ ಬಗೆಹರಿಸಬೇಕಿದೆ. ಪಕ್ಷದ ಸಂಕುಚಿತ ಮನೋಭಾವವನ್ನು ಬಿಟ್ಟು ನಾಡಿನ ಎಲ್ಲಾ ಪ್ರಜಾಪ್ರಭುತ್ವ ಪಕ್ಷಗಳ, ಶಕ್ತಿಗಳ ಹಾಗೂ ಜನತೆಯ ಬೆಂಬಲವನ್ನು ಪಡೆದುಕೊಂಡಲ್ಲಿ, ನಾಡಿನ ಮುಂದಿರುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿದೆ. ಈಗ ವಿಶಾಲ ಮೈಸೂರಿಗೆ ಸೇರುವ 5 ಭಾಗಗಳಲ್ಲೂ ಗೇಣಿ ಶಾಸನ, ಕಾರ್ಮಿಕ ಶಾಸನ ಮೊದಲಾದ ಜನತಾ ಹಿತ ಶಾಸನಗಳು ಭಿನ್ನಭಿನ್ನವಾಗಿವೆ. ಮುಂದುವರಿದ ಬೊಂಬಾಯಿ ಗೇಣಿ ಶಾಸನವನ್ನು ವಿಶಾಲ ಮೈಸೂರಿನ ಎಲ್ಲಾ ಭಾಗಗಳಿಗೆ ಅನ್ವಯಿಸುವಂತೆ ಮಾಡಬೇಕು. ಸರ್ಕಾರಿ ನೌಕರರಿಗೆ ಈ ಕೂಡಲೇ ಬೊಂಬಾಯಿಯ ಸಂಬಳ ಸಾರಿಗೆ ಅನ್ವಯಿಸುವಂತೆ ಆಗಬೇಕು. ಕರ್ನಾಟಕ ಪ್ರಾಂತದಲ್ಲಿರುವ ಅಪಾರ ಸಂಪತ್ತನ್ನು ಸರಿಯಾಗಿ ಬಳಸಿಕೊಂಡು, ನಾಡನ್ನು ಸಮೃದ್ಧವಾಗಿ ಮುನ್ನಡೆಸಿಕೊಂಡು ಹೋಗಬೇಕು.
>
> ನೂತನ ಪ್ರಾಂತದ ಮುಖ್ಯಮಂತ್ರಿಗಳ ಸ್ಥಾನಕ್ಕೆ ಕರ್ನಾಟಕ ಪ್ರಾಂತ ಸ್ಥಾಪನೆಗೆ ವಿರೋಧಿಗಳ ಆಯ್ಕೆಯಾಗದಿದ್ದುದು ಸ್ವಾಗತಾರ್ಹವಾದ ಅಂಶ. ಆದರೆ ಕಾಂಗ್ರೆಸಿನೊಳಗೂ ಮತ್ತು ಹೊರಗೂ ಇರುವ ಏಕೀಕರಣ ವಿರೋಧಿಗಳು, ಪ್ರಾಂತದ ಮುನ್ನಡೆಗೆ ಅಡ್ಡಿ ಆತಂಕಗಳನ್ನು ತರುವ ಯತ್ನ ಕಡಿಮೆ ಮಾಡಿಲ್ಲ. ಕರ್ನಾಟಕ ಪ್ರಾಂತದ ಸ್ಥಾಪನೆಯನ್ನು ತೀವ್ರವಾಗಿ ವಿರೋಧಿಸಿದವರೂ, ಎರಡು ಕರ್ನಾಟಕಗಳ ಕೂಗನ್ನೆಬ್ಬಿಸಿ ಚಳುವಳಿ ನಡೆಸಲು ಸಾಹಸ ಪಟ್ಟವರೂ ಮೈಸೂರು ಕಾಂಗ್ರೆಸ್ ಶಾಸನ ಸಭಾ ಸದಸ್ಯರಲ್ಲಿರುವರೆಂಬುದನ್ನು ಮರೆಯುವಂತಿಲ್ಲ. ಪ್ರತಿಗಾಮಿಗಳ ಈ ಯತ್ನವನ್ನು ಮುರಿಯಲು ಪ್ರಬಲವಾದ ಪ್ರಜಾಪ್ರಭುತ್ವ ಚಳುವಳಿಯನ್ನು ನಿರ್ಮಿಸಬೇಕಿದೆ (ರಾಮರಾವ್ 1956: 4).

ಭಾಷಾವಾರು ರಾಜ್ಯ ರಚನೆಗೆ ಮೊದಲಿನಿಂದಲೂ ಸ್ಪಷ್ಟವಾದ ತಾತ್ವಿಕ ನಿಲುವನ್ನು ಹೊಂದಿದ್ದ ಕಮ್ಯುನಿಸ್ಟ್ ಪಕ್ಷವು ಭಾರತದ ಎಲ್ಲ ಭಾಗಗಳಲ್ಲೂ ಇದಕ್ಕಾಗಿ ತನ್ನನ್ನು ತೊಡಗಿಸಿಕೊಂಡಿದೆ. ಮೊದಲ ಭಾಷಾವಾರು ರಾಜ್ಯ ಆಂಧ್ರಪ್ರದೇಶದ ರೂಪುಗೊಂಡ ಪ್ರಕ್ರಿಯೆಯಲ್ಲಿದ್ದ ಆಂಧ್ರ ಮಹಾಸಭಾದ ನಾಯಕತ್ವದಲ್ಲಿ ಕಮ್ಯುನಿಸ್ಟರೇ ಇದ್ದರೆಂಬುದನ್ನು ಗಮನಿಸಬಹುದು. ಮಹಾರಾಷ್ಟ್ರ, ಗುಜರಾತ್, ಕೇರಳ ಹೀಗೆ ಎಲ್ಲ ಕಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಅಲ್ಲಿನ ಏಕೀಕರಣ ಹೋರಾಟ ಸಮಿತಿಗಳಲ್ಲಿ ಮುಂಚೂಣಿ ಪಾತ್ರ ವಹಿಸಿದೆ. ಹಾಗೆಯೇ ಕರ್ನಾಟಕದಲ್ಲೂ ಈ ಪಾತ್ರ ವಹಿಸಿದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಭಾಷಾ ರಾಜ್ಯಗಳು ನಿರ್ಮಾಣವಾಗಿ ಆರು ದಶಕಗಳು ತುಂಬಿರುವಾಗ ಏಕೀಕರಣದ ಆಶಯಗಳು ಈಡೇರಿವೆಯಾ ಎಂಬ ಪ್ರಶ್ನೆ. ಎಲ್ಲಾ ಕಡೆಗಳಲ್ಲಿ ಗಡಿ ವಿವಾದಗಳು ಸೌಹಾರ್ದ ಸಂಬಂಧಗಳನ್ನು ಹಾಳುಗೆಡುವುತ್ತಿರುವ ವಿಷಮಯ ಸನ್ನಿವೇಶಗಳು ಸೃಷ್ಟಿಯಾಗಿವೆ. ಕರ್ನಾಟಕಕ್ಕೆ ಹಲವು ಕಡೆಗಳಲ್ಲಿ ಗಡಿ ವ್ಯತ್ಯಾಸಗಳು ಇದ್ದಾಗಲೂ ಎಂದಿಗೂ ಪರಸ್ಪರ ದ್ವೇಷವನ್ನು ಬೆಳೆಸುತ್ತಿರುವ

ಪ್ರಶ್ನೆಯೆಂದರೆ ಮಹಾರಾಷ್ಟ್ರ ಗಡಿಯ ಪ್ರಶ್ನೆ. ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸಿದ ಗ್ರಾಮವನ್ನು ಘಟಕವಾಗಿ ಪರಿಗಣಿಸಿ ಗಡಿ ರೇಖೆಗಳನ್ನು ಗುರುತಿಸಬೇಕೆಂಬ ಅಂಶವನ್ನು ಕಡೆಗಣಿಸಿದ್ದು ಇದರ ಮೂಲದಲ್ಲಿದೆ. ಬೆಳಗಾವಿಯ ಕಮ್ಯುನಿಸ್ಟ್ ಪಕ್ಷವು ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿತ್ತು. ಅಲ್ಲಿನ ಕಮ್ಯುನಿಸ್ಟರು ಕರ್ನಾಟಕ ಏಕೀಕರಣಕ್ಕಾಗಿಯೂ ಮತ್ತು ಮಹಾರಾಷ್ಟ್ರ ಏಕೀಕರಣ ಹೋರಾಟ ಸಮಿತಿಯ ಜೊತೆಯಲ್ಲಿದ್ದೂ ಕೆಲಸ ಮಾಡಿದ್ದರು. ಗ್ರಾಮವನ್ನು ಘಟಕವಾಗಿ ಪರಿಗಣಿಸದೇ ತಾಲೂಕನ್ನೇ ಘಟಕವಾಗಿ ಪರಿಗಣಿಸಿದ್ದರ ಪರಿಣಾಮವಾಗಿ ಕಮ್ಯುನಿಸ್ಟ್ ಪಾರ್ಟಿಯ ತಿಳುವಳಿಕೆಗೆ ಭಿನ್ನವಾದ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಭಾಷಾ ಸಮಸ್ಯೆ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದ ಬೆಳಗಾವಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆ ಕುಂಠಿತವಾಗಿದೆ[40].

ಇದಲ್ಲದೆ ರಾಜ್ಯಗಳೊಳಗೇ ಪ್ರತ್ಯೇಕ ರಾಜ್ಯಗಳ ಬೇಡಿಕೆಗಳು ಬೆಳೆಯುತ್ತಿವೆ. ಸ್ವಾತಂತ್ರ್ಯಾ ನಂತರ ಭಾರತ ಕಂಡುಕೊಂಡ ಅಭಿವೃದ್ಧಿ ಪಥಗಳು ಭಾಷಾವಾರು ರಾಜ್ಯಗಳ ಕಲ್ಪನೆಯನ್ನೇ ಪ್ರಶ್ನಿಸುತ್ತಿವೆ. ಜೊತೆಗೆ ಜಾಗತೀಕರಣ ದಾಳಿಗಳು ಭಾಷಾವಾರು ರಾಜ್ಯಗಳ ಪ್ರಜಾಸತ್ತಾತ್ಮಕ ಕಲ್ಪನೆಯನ್ನು ದುರ್ಬಲಗೊಳಿಸುತ್ತಿದೆ. ಭಾಷಾ ರಾಷ್ಟ್ರೀಯತೆಗಳ ಪ್ರಜಾಪ್ರಭುತ್ವ ಅಂಶವನ್ನು ದುರ್ಬಲಗೊಳಿಸುತ್ತಾ, ಮಾರುಕಟ್ಟೆ ಅಂಶಗಳನ್ನು ಗಟ್ಟಿಗೊಳಿಸುತ್ತಾ ನಡೆದಿರುವ ಪ್ರಸಕ್ತ ಸನ್ನಿವೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರ ಭವಿಷ್ಯದಲ್ಲಿ ಏನಿರುತ್ತದೆ ಎಂಬ ಅಂಶ ಮುಖ್ಯವಾಗಿದೆ.

ಗೋವಾ ವಿಮೋಚನಾ ಹೋರಾಟದಲ್ಲಿ ಕರ್ನಾಟಕದ ಕಮ್ಯುನಿಸ್ಟರ ಪಾತ್ರ

ಈ ಭಾಗದಲ್ಲಿ ಒಟ್ಟಾರೆಯಾಗಿ ಕಮ್ಯುನಿಸ್ಟರು ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ, ನಿರ್ದಿಷ್ಟವಾಗಿ ಕರ್ನಾಟಕದ ಕಮ್ಯುನಿಸ್ಟರು ವಹಿಸಿದ ಪಾತ್ರ, ಪೋರ್ಚುಗೀಸು ಕಮ್ಯುನಿಸ್ಟ್ ಪಕ್ಷದ ಸಹಾಯ, ಹೋರಾಟದ ವಿವರಗಳು, ವ್ಯಕ್ತಿಗಳು ಇತ್ಯಾದಿ ಅಂಶಗಳನ್ನು ಚರ್ಚಿಸಲಾಗಿದೆ. ಬ್ರಿಟಿಷರ ವಿರುದ್ಧ ಹೋರಾಡಿ ಭಾರತ ಸ್ವಾತಂತ್ರ್ಯ ಗಳಿಸಿದರೂ ಪೋರ್ಚುಗೀಸರ ಹಿಡಿತದಲ್ಲಿ ಗೋವಾ ವಸಾಹತುವಾಗಿ ಮುಂದುವರಿದಿತ್ತು. ಪೋರ್ಚುಗೀಸರು ಬ್ರಿಟಿಷರಿಗಿಂತ ಮೊದಲು ಭಾರತಕ್ಕೆ ಬಂದವರು. 1510 ರಲ್ಲಿ ಗೋವೆಗೆ ಬಂದ ಪೋರ್ಚುಗೀಸರು 1561 ರಿಂದ 1961 ನೇ ಇಸವಿಯವರೆಗೂ, ಅಂದರೆ 400 ವರ್ಷಗಳ ಕಾಲ ಅಲ್ಲಿ ತಮ್ಮ ವಸಾಹತು ಆಡಳಿತವನ್ನು ನಡೆಸಿದರು. 1926 ರಲ್ಲಿ ಪೋರ್ಚುಗಲ್‌ನಲ್ಲಿ ಸಾಲಾಜಾರ್‌ನ ಸರ್ವಾಧಿಕಾರಿ ಆಡಳಿತ ಬಂದಿತ್ತು. ಅವನು ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿ, ಕಮ್ಯುನಿಸ್ಟ್ ಎಂದವರನ್ನೆಲ್ಲಾ ಜೈಲಿಗೆ ಹಾಕುತ್ತಿದ್ದನು. ಜಗತ್ತಿನ ಸರ್ವಾಧಿಕಾರಿಗಳೆಲ್ಲರೂ ಇದುವರೆಗೂ ಕಮ್ಯುನಿಸ್ಟರ ಬಗ್ಗೆ ಇಂತಹುದೇ ನಿಲುವನ್ನು ತಾಳಿದ್ದಾರೆ. ಇದರ ಪರಿಣಾಮವಾಗಿ ಗೋವಾದಲ್ಲಿ ಕಮ್ಯುನಿಸ್ಟರು ಭೂಗತವಾಗಿ ಕೆಲಸ ಮಾಡಬೇಕಾಗಿತ್ತು. ಪೋರ್ಚುಗಲ್‌ನ ಕಮ್ಯುನಿಸ್ಟ್ ಪಕ್ಷ ಗೋವಾದ ಕಮ್ಯುನಿಸ್ಟರಿಗೆ ಬೆಂಬಲ ಸೂಚಿಸಿತ್ತು (ಆನಂದ ಮೆಣಸೆ 2012: 7). 1935 ರ ಕಾಂಗ್ರೆಸ್ ಅಧಿವೇಶನದಲ್ಲಿ, ಗೋವಾ ಪ್ರಶ್ನೆಯು ಪೋರ್ಚುಗೀಸರ ವಿರುದ್ಧವಾಗಿದ್ದುದರಿಂದ, ಎಐಸಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಮಾತ್ರ ಸೀಮಿತವಾಗಬೇಕೆಂದು ತೀರ್ಮಾನ ಮಾಡಿತು. ಪರಿಣಾಮವಾಗಿ ಗೋವಾದಲ್ಲಿ ಕಾಂಗ್ರೆಸ್‌ನ್ನು ವಿಸರ್ಜಿಸಲಾಯಿತು (ಆನಂದ ಮೆಣಸೆ 2012: 12).

ಈ ಮಧ್ಯೆ ಗೋವಾದ ಶಾಮರಾವ್ ಮಡಕಯಿಕರ್ ಮತ್ತು ಬೆಳಗಾಂನಲ್ಲಿದ್ದ ರಘುನಾಥ್ ದೇಶಪಾಂಡೆ, ಬಾಲು ಸುಂಠಣಕರ, ಕರಗುಪ್ಪಿಕರ ಮತ್ತಿತರ ಕೆಲವು ರಾಯಿಸ್ಟರ (ಎಂ.ಎನ್.ರಾಯ್ ಅನುಯಾಯಿಗಳು) ನಡುವೆ ಸಂಪರ್ಕವೇರ್ಪಟ್ಟಿತ್ತು. ಎಂ.ಎನ್.ರಾಯ್ ಅವರು 1948 ರಲ್ಲಿ ತಮ್ಮ ರ್‍ಯಾಡಿಕಲ್ ಡೆಮಾಕ್ರಟಿಕ್ ಪಾರ್ಟಿಯನ್ನು ವಿಸರ್ಜನೆ ಮಾಡಿದ್ದರಿಂದ, ಇವರೆಲ್ಲಾ ಸೇರಿ ಮುಂಬಯಿ ನಗರದಲ್ಲಿ ನಡೆದ ಸಮಾವೇಶದಲ್ಲಿ ಗೋವಾ ಕಮ್ಯುನಿಸ್ಟ್ ಪಕ್ಷವನ್ನು, ಗೋವನ್ ಪೀಪಲ್ಸ್ ಪಾರ್ಟಿ ಹೆಸರಿನಲ್ಲಿ ಸ್ಥಾಪಿಸಿದರು. ಭೂಗತವಾಗಿ ಕೆಲಸಗಳನ್ನು ಮಾಡಬೇಕಾದ್ದರಿಂದ ಬೆಳಗಾವಿ ಜಿಲ್ಲೆಯ ಖಾನಾಪುರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಕೆಲಸ ಮಾಡುತ್ತಿದ್ದರು. ಆಗ ಬೆಳಗಾವಿಯ ಕಮ್ಯುನಿಸ್ಟರಾಗಿದ್ದ ಕೃಷ್ಣ ಮೆಣಸೆ, ಶಾಂತಾ ನಾಯ್ಕ, ಕೃಷ್ಣಾ ಭೋಂಗಾಳೆ ಇವರುಗಳು ಖಾನಾಪುರಕ್ಕೆ ಹೋಗಿ ಸಹಾಯ ಮಾಡುತ್ತಿದ್ದರು. ಖಾನಾಪುರದಲ್ಲಿ ಇದೇ ಸಂದರ್ಭಕ್ಕೆ ಕಾರವಾರದಿಂದ ಗಡೀಪಾರಾಗಿ ಬಂದಿದ್ದ ಎನ್.ಜಿ.ಮ್ಹಾಳ್ಶೇಕರ್ ಅವರು ಈ ಎಲ್ಲಾ ಕೆಲಸಗಳಿಗೆ ಸಹಾಯಕರಾಗಿದ್ದರು. ಇದರಿಂದ ಈ ಪ್ರದೇಶದಲ್ಲಿ ಕಿಸಾನ್ ಸಭಾ ಚಟುವಟಿಕೆಗಳು ಹೆಚ್ಚಾದವು. ನಂತರ ಮುಂಬಯಿ ಪಕ್ಷವು ತೀರ್ಮಾನ ಮಾಡಿ ಬೆಳಗಾವಿಯಲ್ಲಿ ಗೋವನ್ ಪೀಪಲ್ಸ್ ಪಾರ್ಟಿ ಕಚೇರಿಯನ್ನು ಆರಂಭಿಸಿತು. ಈ ಪ್ರಕ್ರಿಯೆಯಲ್ಲಿ ಕಾಶೀನಾಥ ತೆಂಡೂಲ್ಕರ್ ಮತ್ತು ಪ್ರೇಮಾ ತೆಂಡೂಲ್ಕರ್ ಅವರು ಪಾತ್ರ ಗಮನಾರ್ಹವಾಗಿತ್ತು (ಆನಂದ ಮೆಣಸೆ 2012: 27–29).

1954 ರ ಸುಮಾರಿಗೆ ದಾದರ (ಅಂದಿಗೆ ಒಂದು ಸಣ್ಣ ಹಳ್ಳಿ) ಮತ್ತು ನಗರ ಹವೇಲಿಯನ್ನು ಮುಕ್ತಿಗೊಳಿಸುವ ಹೋರಾಟವನ್ನು ನಡೆಸಲು ಮಹಾರಾಷ್ಟ್ರ ಕಮ್ಯುನಿಸ್ಟ್ ಪಕ್ಷ ತೀರ್ಮಾನಿಸಿತ್ತು. ಯಶಸ್ವಿ ಹೋರಾಟ ಮಾಡಿದ್ದ ವಾರಲೀ ಆದಿವಾಸಿಗಳು ಮತ್ತು ಗೋವನ್ ಪೀಪಲ್ಸ್ ಪಾರ್ಟಿ ಸೇರಿ ಈ ಹೋರಾಟವನ್ನು ಮಾಡುವುದೆಂದು ತೀರ್ಮಾನಿಸಿದ್ದರು. ಆದರೆ ಅಂತಹುದೊಂದು ಹೋರಾಟ ನಡೆದು ಇದರ ರಾಜಕೀಯ ಲಾಭ ಕಮ್ಯುನಿಸ್ಟರಿಗೆ ಸಿಗಬಾರದೆಂದು ಯೋಚಿಸಿದ ಮೊರಾರ್ಜಿ ದೇಸಾಯಿ ಸರ್ಕಾರ, ಯುನೈಟೆಡ್ ಫ್ರಂಟ್ ಆಫ್ ಗೋವನ್ಸ್ ಸಂಘಟನೆಯ ಮೂಲಕ 1954 ರ ಜುಲೈ 21 ರಂದು ದಾದರನ್ನು ವಿಮೋಚನೆಗೊಳಿಸಿದರು. ಆಗಸ್ಟ್ 15 ರಂದು ನಗರ ಹವೇಲಿಗಳೂ ಸಹ ವಿಮೋಚನೆಗೊಂಡವು. ಇದರಿಂದ ಪೋರ್ಚುಗೀಸರು ಮತ್ತು ಗೋವನ್ನರು ಇಬ್ಬರಲ್ಲೂ ವಿಭಿನ್ನ ಪ್ರಭಾವಗಳು ಬೀರಿದವು. ದಾದರ್ ಮತ್ತು ನಗರ್ ಹವೇಲಿಗಳಿಗಿಂತ ಗೋವಾ ದೊಡ್ಡದಾದ್ದರಿಂದ ಇದಕ್ಕೆ ಭಿನ್ನವಾದ ಯೋಜನೆಗಳನ್ನು ಮಾಡಿದರು.


ಗೋವನ್ ಪೀಪಲ್ಸ್ ಪಾರ್ಟಿಯು ತೆಲಂಗಾಣ ಹೋರಾಟದ ಪ್ರಭಾವವನ್ನೂ ಒಳಗೊಂಡು ಸಶಸ್ತ್ರ ಹೋರಾಟದ ಮೂಲಕ ಗೋವಾ ವಿಮೋಚನೆ ಮಾಡಬೇಕೆಂದು, ನಾರಾಯಣ ಪಾಲೇಕರ ಸಮಿತಿ[41] ನೀಡಿದ ಶಿಫಾರಸ್ಸುಗಳ ಆಧಾರದಲ್ಲಿ, 1954 ರ ಅಕ್ಟೋಬರ್ 21–23 ರವರೆಗೆ ಖಾನಾಪುರದಲ್ಲಿ ನಡೆದ ಸಭೆಯಲ್ಲಿ ಸಶಸ್ತ್ರ ಹೋರಾಟ ಮಾಡಬೇಕೆಂಬ ತೀರ್ಮಾನಕ್ಕೆ ಬಂದು, ತೆಲಂಗಾಣದ ಕಮ್ಯುನಿಸ್ಟ್ ಮುಖಂಡ ನಾರಾಯಣರೆಡ್ಡಿಯವರ ಬಳಿಯಿಂದ ಹಲವು ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡರು (ಆನಂದ ಮೆಣಸೆ 2012: 55). ಇದೇ ಸಂದರ್ಭಕ್ಕೆ ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ ಮುಖಂಡರೊಬ್ಬರು ಗೋವಾ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಶಸ್ತ್ರ ಹೋರಾಟದ ಸಾಧಕ

ಭಾದಕಗಳ ಬಗ್ಗೆ ಚರ್ಚೆ ನಡೆಯಿತು. ಪೋರ್ಚುಗೀಸ್ ಸೈನ್ಯ ಶಕ್ತಿಯನ್ನು ಎದುರಿಸುವಷ್ಟು ಶಸ್ತ್ರಾಸ್ತ್ರಗಳ ಲಭ್ಯತೆ ಮತ್ತು ಭಾರತದ ಸರ್ಕಾರದ ಪಾತ್ರ, ಇವುಗಳನ್ನು ಗಮನಿಸಿ ಗೋವನ್ ಪೀಪಲ್ಸ್ ಪಾರ್ಟಿಯು ನಂತರ ಸಶಸ್ತ್ರ ಹೋರಾಟವನ್ನು ಕೈಬಿಟ್ಟಿತು.

1955 ರ ಮೇ ತಿಂಗಳಲ್ಲಿ 'ಗೋವಾ ವಿಮೋಚನಾ ಸಹಾಯಕ ಸಮಿತಿ' ಪುಣೆಯಲ್ಲಿ ರಚನೆಯಾಯಿತು. ಇದು ಮುಂದೆ ಗೋವಾ ಸತ್ಯಾಗ್ರಹ ಸಮಿತಿಯಾಗಿ ಮಾರ್ಪಟ್ಟಿತು. ಇದರಲ್ಲಿ ವಿವಿಧ ಪಕ್ಷಗಳ ಮುಖಂಡರಿದ್ದರು. ಸಿಪಿಐ ಪರವಾಗಿ ವಿಷ್ಣುಪಂತ ಚಿತಲೆ ಇದ್ದರು. ಈ ಹೋರಾಟದಲ್ಲಿ ತಾನು ಭಾಗಿಯಾಗುವುದಾಗಿ ಕಮ್ಯುನಿಸ್ಟ್ ಪಕ್ಷ ಘೋಷಿಸಿತು. ಸಂಸತ್ತಿನಲ್ಲಿ ಗೋವಾ ವಿಮೋಚನೆ ವಿಚಾರವನ್ನು ಮಂಡಿಸಲು ಸಂಸದರ ಸಮಿತಿಯನ್ನು ರಚಿಸಲಾಗಿತ್ತು. ಇದರಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಹಿರೇನ್ ಮುಖರ್ಜಿ ಮತ್ತು ರೇಣು ಚಕ್ರವರ್ತಿ ಇದ್ದರು.

ಗೋವಾ ಗಡಿಗೆ ಹೋಗುವುದು ಮತ್ತು ಅದನ್ನು ಪ್ರವೇಶ ಮಾಡುವುದೆಂದು ಸತ್ಯಾಗ್ರಹ ಸಮಿತಿಯು ತೀರ್ಮಾನಿಸಿತು. ಇದಕ್ಕೆ ಬೇಕಾದ ತುಕಡಿಗಳನ್ನು ಕಮ್ಯುನಿಸ್ಟ್ ಪಕ್ಷವು ರೂಪಿಸಿತು. ಕಮ್ಯುನಿಸ್ಟ್ ಸತ್ಯಾಗ್ರಹಿಗಳ ಪಟ್ಟಿಯನ್ನು ಸಿದ್ದಪಡಿಸಿತು. ಹಣಕಾಸಿನ ನೆರವನ್ನು ಮುಂಬೈನ ಕಾರ್ಮಿಕರಿಂದ ಸಂಗ್ರಹ ಮಾಡುವ ಭರವಸೆಯನ್ನು ಕಮ್ಯುನಿಸ್ಟ್ ಪಕ್ಷ ನೀಡಿತು. ಜನರಲ್ಲಿ ಜಾಗೃತಿ ಮೂಡಿಸಲು ಕಲಾತಂಡಗಳನ್ನು ರೂಪಿಸಲಾಯಿತು. ಹೀಗೆ ಗೋವಾ ವಿಮೋಚನೆಗೆ ಸಿಪಿಐ ತನ್ನ ಪಾತ್ರ ನಿರ್ವಹಿಸಲು ಸಿದ್ದತೆ ಮಾಡಿಕೊಂಡಿತು. ಸತ್ಯಾಗ್ರಹಿಗಳನ್ನು ನೋಂದಾಯಿಸಿಕೊಂಡ ನಂತರ, ಯಾವ ಗುಂಪು ಗೋವಾದ ಯಾವ ಭಾಗದಲ್ಲಿ ಪ್ರವೇಶ ಮಾಡಬೇಕೆಂದು ಅವರಿಗೆ ನಿರ್ದೇಶನ ನೀಡಲಾಗುತ್ತಿತ್ತು. ಮಹಾರಾಷ್ಟ್ರದಿಂದ ಬರುವ ಸತ್ಯಾಗ್ರಹಿಗಳು ಪುಣೆಯಿಂದ ಬೆಳಗಾವಿಗೆ ಬಂದು ನಂತರ ಸಾವಂತವಾಡಿಗೆ ಹೋಗುವುದೆಂದು, ಮತ್ತು ಕರ್ನಾಟಕದಿಂದ ಹೋಗುವ ಸತ್ಯಾಗ್ರಹಿಗಳು ಬೆಳಗಾವಿ ಮುಖಾಂತರ ಸಾವಂತವಾಡಿಗೆ ಹೋಗುವುದೆಂದು ತೀರ್ಮಾನಿಸಲಾಗಿತ್ತು. 1955 ಜೂನ್ 10 ರಂದು ಮೊದಲ ಗುಂಪು ಸತ್ಯಾಗ್ರಹ ಹೂಡುವುದೆಂದು ತೀರ್ಮಾನವಾಯಿತು. ಹೀಗೆ ಆರಂಭವಾದ ಸತ್ಯಾಗ್ರಹಿಗಳ ದಂಡು ದಿನದಿನಕ್ಕೆ ಬೆಳೆಯುತ್ತಲೇ ಹೋಯಿತು. ಪ್ರತಿದಿನ ಸತ್ಯಾಗ್ರಹಿಗಳಲ್ಲೂ ಕಮ್ಯುನಿಸ್ಟರು ಮುಂಚೂಣಿಯಲ್ಲಿರುವುದನ್ನು ಕಂಡು ಕಲ್ಕತ್ತಾದಿಂದ ಮುಝಾಫರ್ ಅಹ್ಮದ್ ಅವರು ಅಭಿನಂದನೆಗಳನ್ನು ತಿಳಿಸಿ ಇಲ್ಲಿನ ಘಟಕಗಳಿಗೆ ಪತ್ರಗಳನ್ನು ಬರೆದರು.

ಈ ಪ್ರಕ್ರಿಯೆಯ ಭಾಗವಾಗಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮುಖ್ಯವಾಗಿ ಬಿಜಾಪುರ, ಹುಬ್ಬಳ್ಳಿ ಮತ್ತು ದಕ್ಷಿಣ ಕನ್ನಡ, ಉಡುಪಿ ಮುಂತಾದ ಕಡೆಗಳಲ್ಲಿ ಗೋವಾ ವಿಮೋಚನಾ ಸರ್ವಪಕ್ಷ ಸಮಿತಿಗಳು ರಚನೆಯಾದವು. 1955 ರ ಆಗಸ್ಟ್ 3 ರಂದು ನಡೆದ ಸತ್ಯಾಗ್ರಹವು ಗೋವಾ ವಿಮೋಚನಾ ಹೋರಾಟಕ್ಕೆ ಒಂದು ತಿರುವನ್ನು


ಗೋವಾ ಸತ್ಯಾಗ್ರಹಿಗಳು

ನೀಡಿತು. ಅಂದು ನಡೆದ ಸತ್ಯಾಗ್ರಹದಲ್ಲಿ ಒಟ್ಟು 59 ಜನರಿದ್ದರು. ಜುಲೈ 30 ರಂದು ಮಂಗಳೂರಿನಿಂದ ಹೊರಟ ಎ.ಕೃಷ್ಣಶೆಟ್ಟಿಯವರ ನೇತೃತ್ವದ ಐದು ಜನರ ಮೊದಲ ತಂಡ[42] ಜುಲೈ 31 ರಂದು ಸಾವಂತವಾಡಿ ತಲುಪಿತ್ತು. ಗಡಿ ನುಗ್ಗುವ ತಂಡಕ್ಕೆ ಬಾಬುರಾವ್ ಥೋರಟ್ ನಾಯಕರಾಗಿ ಮತ್ತು ಎ.ಕೃಷ್ಣಶೆಟ್ಟರು ಉಪನಾಯಕರಾಗಿ ಆಯ್ಕೆಯಾಗಿದ್ದರು (ಶ್ರೀಯಾನ್ 2016: 24). ಈ ಹೋರಾಟದಲ್ಲಿ ಪಶ್ಚಿಮ ಬಂಗಾಳದ ನಿತ್ಯಾನಂದ ಸಾಹಾ ಮತ್ತು ಮಹಾರಾಷ್ಟ್ರದ ಬಾಬುರಾವ್ ಥೋರಟ್ ಅವರು ಪೋರ್ಚುಗೀಸ್ ಪೊಲೀಸರ ಗುಂಡಿಗೆ ಬಲಿಯಾದರು. ಇಬ್ಬರೂ ಸಹ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರು (ಆನಂದ ಮೆಣಸೆ 2012: 82–84). ಇದರ ವಿರುದ್ಧ ದೇಶಾದ್ಯಂತ ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ, ವಿದ್ಯಾರ್ಥಿ ಸಂಘಟನೆಗಳು ಆಗಸ್ಟ್ 12 ರಂದು ಹರತಾಳವನ್ನು ನಡೆಸಿದವು.

ಇದರ ಮುಂದುವರಿದ ಭಾಗವಾಗಿ ಗೋವಾ ವಿಮೋಚನಾ ಸಹಾಯಕ ಸಮಿತಿ 1955 ರ ಆಗಸ್ಟ್ 15 ರಂದು ಗೋವಾ ಗಡಿಯುದ್ದಕ್ಕೂ ಸಾಮೂಹಿಕ ಸತ್ಯಾಗ್ರಹಕ್ಕೆ ಕರೆ ನೀಡಿತು. ದೇಶದ ತುಂಬೆಲ್ಲಾ ಇದಕ್ಕೆ ಉತ್ಸಾಹದಿಂದ ಪ್ರತಿಕ್ರಿಯೆ ಬಂದು ಸಾವಿರಾರು ಸತ್ಯಾಗ್ರಹಿಗಳು ನೋಂದಾಯಿಸಿಕೊಂಡರು. ವಿಶೇಷವೆಂದರೆ, ಕಮ್ಯುನಿಸ್ಟರ ಪ್ರಧಾನ ಪಾತ್ರದ ಬಗ್ಗೆ ಮೊರಾರ್ಜಿ ಸರ್ಕಾರಕ್ಕೆ ತುಂಬಾ ವಿರೋಧವಿತ್ತು ಮತ್ತು ಅದಕ್ಕಾಗಿ ಸಾಕಷ್ಟು ತಾಪತ್ರಯಗಳನ್ನು ನೀಡಿದರೆಂದು ಆನಂದ ಮೆಣಸಿಯವರು ಆರೋಪಿಸುತ್ತಾರೆ. ಮೊರಾರ್ಜಿ ಸರ್ಕಾರದ ಅಸಹಕಾರ ಏನೇ ಇದ್ದರೂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಅಂದಾಜು ಮೂರು ಸಾವಿರವಿದ್ದದ್ದು ಐದು ಸಾವಿರಕ್ಕೆ ಮುಟ್ಟಿತು. ಆಗಸ್ಟ್ 14 ರ ರಾತ್ರಿ ಸಾವಂತವಾಡಿಯಲ್ಲಿ ತಂಗಿದ್ದರಿಂದ ಆ ಗ್ರಾಮ ಸತ್ಯಾಗ್ರಹ ಗ್ರಾಮವಾಗಿ ಮಾರ್ಪಾಟಾಯಿತು. ದೇಶದ ವಿವಿಧ ಭಾಗಗಳಿಂದ ಕಮ್ಯುನಿಸ್ಟ್ ಮುಖಂಡರು ಮತ್ತು ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು.

ಮಂಗಳೂರಿನಿಂದ ಬಿ.ವಿ.ಕಕ್ಕಿಲ್ಲಾಯರ ನೇತೃತ್ವದ ಎರಡನೇ ತಂಡ ಇದರಲ್ಲಿ ಭಾಗವಹಿಸಿತು[43]. ಈ ತಂಡ ಬೀರೂರು ಮೂಲಕ ಹುಬ್ಬಳ್ಳಿ ತಲುಪಿದಾಗ ಅಲ್ಲಿ ಎ.ಜೆ.ಮುಧೋಳ ಇವರನ್ನು ಸೇರಿಕೊಂಡರು. ಮತ್ತೊಂದು ಕಡೆ ಬಿಜಾಪುರ ಜಿಲ್ಲೆಯಿಂದ ಸತ್ಯಾಗ್ರಹಕ್ಕೆ ಹೋಗುವವರನ್ನು ಮೂರು ತಂಡಗಳಾಗಿ[44] ಮಾಡಲಾಗಿತ್ತು. ಒಂದು ತಂಡಕ್ಕೆ ಕಮ್ಯುನಿಸ್ಟ್ ನೇತಾರ ಎನ್.ಕೆ.ಉಪಾಧ್ಯಾಯರು ನೇತೃತ್ವ ನೀಡಿದ್ದರು. ಸುಮಾರು 70 ಜನರಷ್ಟಿದ್ದ ಉಪಾಧ್ಯಾಯರ ತಂಡಕ್ಕೆ[45] ಬಾಗಲಕೋಟೆಯಲ್ಲಿ ಕಮ್ಯುನಿಸ್ಟ್ ಮುಖಂಡರಾಗಿದ್ದ ಡಿ.ಎಂ.ಕಲಾಸಿ ನೇತೃತ್ವದ ತಂಡ ಸೇರಿಕೊಂಡಿತು. ಆಗಸ್ಟ್ 14 ರಂದು ಇವರೆಲ್ಲಾ ಬೆಳಗಾವಿಗೆ ಬರುವಷ್ಟರಲ್ಲಿ ಎಸ್.ಎ.ಡಾಂಗೆ, ಎಸ್.ಜಿ.ಸರ್ದೇಸಾಯಿ, ಸುಶೀಲಾ ಗೋಪಾಲನ್, ಎನ್.ಎಲ್.ಉಪಾಧ್ಯಾಯ ಮುಂತಾದ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರೆಲ್ಲಾ ಅಲ್ಲಿ ನೆರೆದಿದ್ದರು (ಉಪಾಧ್ಯಾಯ 1996: 59). 1955 ರ ಆಗಸ್ಟ್ ಎರಡನೇ ವಾರದಲ್ಲಿ ಬೆಂಗಳೂರು ಮತ್ತು ಮೈಸೂರಿನಿಂದ ಸತ್ಯಾಗ್ರಹಿಗಳು ಗೋವಾ ಸತ್ಯಾಗ್ರಹದಲ್ಲಿ ಭಾಗವಹಿಸಲು ಬೆಳಗಾವಿಗೆ ತೆರಳಿದ್ದರು[46].

ಸಾವಂತವಾಡಿಯ ಬಾಂದಾ ಮೂಲಕ ಗೋವಾ ಗಡಿಯ ಪತ್ರಾದೇವಿ ಎಂಬಲ್ಲಿ ಸತ್ಯಾಗ್ರಹವನ್ನು ಮಾಡುವುದು ಮತ್ತು ಇದಕ್ಕೆ ಕಮ್ಯುನಿಸ್ಟ್ ಮುಖಂಡ ವಿಷ್ಣುಪಂತ ಚಿತಳೆ ನೇತೃತ್ವ ವಹಿಸುವುದು ಎಂದು ತೀರ್ಮಾನವಾಗಿತ್ತು.

ಎಲ್ಲರನ್ನೂ ಒಟ್ಟಿಗೆ ಕಳುಹಿಸಲು ಸಾಧ್ಯವಿಲ್ಲದ್ದರಿಂದ ತುಕಡಿಗಳನ್ನು ಮಾಡಲಾಯಿತು. ಮೊದಲ ತುಕಡಿಯಲ್ಲಿ 642 ಸತ್ಯಾಗ್ರಹಿಗಳನ್ನು ಆಯ್ಕೆ ಮಾಡಲಾಯಿತು. ಒಂದಾದ ನಂತರ ಮತ್ತೊಂದು ತುಕಡಿ ಹೋಗಬೇಕೆಂದು ನಿರ್ಧರಿಸಲಾಗಿತ್ತು. ಮೊದಲ ತುಕಡಿಯಲ್ಲಿ ಗೋವಿಂದ ಪಾನ್ಸಾರೆ, ಕೇರಳದ ಲಂಕಾಸುಂದರಮ್, ಭಗತ್‌ಸಿಂಗ್‌ರ ಒಡನಾಡಿ ಪಂಡಿತ್ ಕಿಶೋರಿಲಾಲ್ ಮುಂತಾದವರಿದ್ದರು.

ಗೋವಾ ಗಡಿಯನ್ನು ದಾಟುತ್ತಿದಂತೆ ಪೋರ್ಚುಗೀಸ್ ಸೈನಿಕರು ನಡೆಸಿದ ಗೋಲೀಬಾರಿಗೆ ಕಮ್ಯುನಿಸ್ಟ್ ಮುಖಂಡರಾದ ವಿಷ್ಣುಪಂತ್ ಚಿತಳೆ, ಕರ್ನಲ್ ಸಿಂಗ್ ಹಾಗೂ ಶೇಖ್ ಸನಾವುಲ್ಲಾ ಹುತಾತ್ಮರಾದರು. ಗೋವಾದ ಗಡಿಯುದ್ದಕ್ಕೂ ಅಲ್ಲಲ್ಲಿ ನಿಶ್ಚಯವಾಗಿದ್ದ ಸ್ಥಳಗಳಿಂದ ಗಡಿ ದಾಟಿ ಭಾರತದ ಬಾವುಟವನ್ನು ಹಾರಿಸುವ ಸತ್ಯಾಗ್ರಹಿಗಳ ಮೇಲೆ ನಡೆದ ಗೋಲೀಬಾರುಗಳಿಂದ ಹಲವಾರು ಸತ್ಯಾಗ್ರಹಿಗಳು ಹುತಾತ್ಮರಾದರು. ಉಪಾಧ್ಯಾಯರ ತಂಡ ಮುನ್ನುಗ್ಗುತ್ತಿದ್ದಂತೆಯೇ ಗುಂಡುಗಳಿಂದ ತಪ್ಪಿಸಿಕೊಳ್ಳಲು ಕೆಳಗೆ ಮಲಗಿ ತೆವಳುತ್ತಾ ಸಾಗಿದರು. ಬಿಜಾಪುರ ಜಿಲ್ಲೆಯ ಉಕ್ಕಲಿ ಗ್ರಾಮದ ಧರೆಪ್ಪ ಬೆಳ್ಳಿಕಟ್ಟೆಯವರ ತೊಡೆಗೆ ಗುಂಡು ತಾಕಿತು. ರೇವು ಬಾಯಿ ಮೋಸಲಗಿಯವರು ಇದನ್ನೆಲ್ಲಾ ನೋಡಿ ಮೂರ್ಛೆ ಹೋದರು.

ಕಕ್ಕಿಲ್ಲಾಯರ ನೇತೃತ್ವದ ತಂಡ ಇದ್ದುಸ್ ಎಂಬ ಒಂದು ಗ್ರಾಮವನ್ನು ಪ್ರವೇಶಿಸಲು ನಿರ್ಧರಿಸಲಾಗಿತ್ತು. ಅದರಂತೆ ಗ್ರಾಮ ಪ್ರವೇಶಿಸಿದ ತಂಡದಲ್ಲಿದ್ದ ನೀಲಯ ಬಂಗೇರರು ಒಂದು ಎತ್ತರದ ಮರದ ಮೇಲೇರಿ ಭಾರತದ ಬಾವುಟವನ್ನು ಹಾರಿಸಿ ಬಂದರು. ಆಗ ಪ್ರವೇಶಿಸಿದ ಪೋರ್ಚುಗೀಸ್ ಪೊಲೀಸರ ದಾಳಿಗಳನ್ನು ತಪ್ಪಿಸಿಕೊಳ್ಳಲು ಮಲಗಿಕೊಂಡು ತೆವಳಲು ಶುರು ಮಾಡಿದರು. ಪೊಲೀಸರಿಂದ ತೀವ್ರವಾದ ಪಟ್ಟುಗಳನ್ನು ತಿಂದು ಗಡಿಯಾಚೆ ಎಸೆಯಲ್ಪಟ್ಟರು. ಉಡುಪಿಯ ಕಮ್ಯುನಿಸ್ಟರಾಗಿದ್ದ ದಾಸ ಶೇರಿಗಾರ ಅವರು ಮತ್ತೊಂದು ಗುಂಪಿನೊಂದಿಗೆ ಕಾರವಾರದ ಮೂಲಕ ಗೋವಾ ಪ್ರವೇಶಿಸಿದ್ದರು (ಕಕ್ಕಿಲ್ಲಾಯ 2003: 236–237). ನಿರಂತರವಾಗಿ ಹೀಗೆ ನಡೆಯುತ್ತಿದ್ದ ಗೋವಾ ಪ್ರವೇಶ ಸತ್ಯಾಗ್ರಹ ಚಳುವಳಿಯು ಅಪಾರವಾದ ಸಾವು–ನೋವುಗಳನ್ನು ಉಂಟುಮಾಡಿತು. ಈ ಹಿನ್ನೆಲೆಯಲ್ಲಿ ಚರ್ಚಿಸಿದ ಮುಖಂಡರು ಹೆಚ್ಚಿನ ಜೀವಹಾನಿ ಆಗಬಾರದೆಂದು ಸತ್ಯಾಗ್ರಹವನ್ನು ನಿಲ್ಲಿಸಿದರು. 1962 ರಲ್ಲಿ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವುದಕ್ಕೆ ಮುಂಚೆ ಗೋವಾದಲ್ಲಿ ಭಾರತೀಯರ ಜೀವ ಮತ್ತು ಸ್ವತ್ತುಗಳ ರಕ್ಷಣೆ ಮತ್ತು ಭಾರತವನ್ನು ಸೇರಬೇಕೆಂಬ ಗೋವಾ ಜನರ ಸ್ವಯಂ–ನಿರ್ಧಾರದ ಹಕ್ಕನ್ನು ಮುಂದು ಮಾಡಿ, ಭಾರತ ಸರ್ಕಾರ 1961 ಡಿಸೆಂಬರ್ 18 ಮತ್ತು 19 ರಂದು ಸೈನಿಕ ಕಾರ್ಯಾಚರಣೆ ಮೂಲಕ ಗೋವಾವನ್ನು ಪೋರ್ಚುಗೀಸರಿಂದ ವಿಮೋಚನೆಗೊಳಿಸಿತು.

ಗೋವಾ ವಿಮೋಚನಾ ಚಳುವಳಿಗೆ ಸಾಮಾನ್ಯವಾಗಿ ಎಲ್ಲ ಪಕ್ಷಗಳೂ ಬೆಂಬಲ ನೀಡಿದವು. ಆರಂಭದಲ್ಲಿ ಮಹಾರಾಷ್ಟ್ರದ ಮೊರಾರ್ಜಿ ದೇಸಾಯಿ ಸರ್ಕಾರ ಕಮ್ಯುನಿಸ್ಟ್ ವಿರೋಧಿ ಧೋರಣೆಯ ಕಾರಣಕ್ಕಾಗಿ ಕಮ್ಯುನಿಸ್ಟರಿಗೆ

ಹಲವು ತೊಂದರೆಗಳನ್ನು ನೀಡಿತ್ತು. ಆದರೆ ಕಮ್ಯುನಿಸ್ಟ್ ಪಕ್ಷ ಅತ್ಯಂತ ದೃಢವಾಗಿ ಗೋವಾ ವಿಮೋಚನಾ ಹೋರಾಟಕ್ಕೆ ನಾಯಕತ್ವವನ್ನು ನೀಡಿತು. ಗೋವನ್ ಪೀಪಲ್ಸ್ ಪಾರ್ಟಿಯು ಕಮ್ಯುನಿಸ್ಟ್ ಪಕ್ಷದ ನಿಲುವುಗಳನ್ನು ಗೋವಾದ ಜನತೆಯ ನಡುವೆ ಪ್ರಚಾರ ಮಾಡಿತು. ದೇಶಾದ್ಯಂತ ಪ್ರಚಾರಾಂದೋಲನಗಳನ್ನು, ಸಾರ್ವಜನಿಕ ಸಭೆ ಸಮಾರಂಭಗಳನ್ನು ನಡೆಸುವ ಮೂಲಕ ವಿಮೋಚನೆಗೆ ಬೇಕಾದ ಭೂಮಿಕೆಯನ್ನು ಸಿದ್ದಪಡಿಸಿತು. ದೇಶದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳ ತಂಡಗಳನ್ನು ಅಣಿನೆರೆಸಿತು. ಹಲವಾರು ಕಮ್ಯುನಿಸ್ಟ್ ಪಕ್ಷದ ಮುಖಂಡರು ಕಾರ್ಯಕರ್ತರು ತಮ್ಮ ಪ್ರಾಣಗಳನ್ನು ಕಳೆದುಕೊಂಡರು. ಗೋವಾ ವಿಮೋಚನೆಯೆಂಬುದು ಸಾಮ್ರಾಜ್ಯಶಾಹಿ-ವಿರೋಧಿ ಮತ್ತು ಪ್ರಜಾಪ್ರಭುತ್ವಕ್ಕಾಗಿನ ಹೋರಾಟದ ಅವಿಭಾಜ್ಯ ಅಂಗ ಎಂಬುದಾಗಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ನೇತೃತ್ವದ ಸಮೂಹ ಸಂಘಟನೆಗಳು ತೀರ್ಮಾನಿಸಿದ್ದವು.

ಗೋವಾ ವಿಮೋಚನೆಯ ನಂತರ ಪೋರ್ಚುಗೀಸ್ ಸರ್ಕಾರ, ಭಾರತ ಸರ್ಕಾರ ತನ್ನ ಪ್ರದೇಶದ ಮೇಲೆ ದುರಾಕ್ರಮಣ ಮಾಡಿ ವಶಪಡಿಸಿಕೊಂಡಿದೆ ಎಂದು ವಿಶ್ವಸಂಸ್ಥೆಗೆ ದೂರು ನೀಡಿತು. ಅಮೇರಿಕ ಮತ್ತು ಬ್ರಿಟನ್‌ನ ಮಾಧ್ಯಮಗಳು ಭಾರತದ ಕ್ರಮವನ್ನು ಆಕ್ರಮಣಕಾರಿ ಎಂದು ದೂರಿದವು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ 'ದುರಾಕ್ರಮಣ' ವಿರುದ್ಧ ನಿರ್ಣಯವನ್ನು ಮಂಡಿಸಲಾಗಿತ್ತು. ವಿ.ಕೆ.ಕೃಷ್ಣ ಮೆನನ್ ಆಗ ಆಹ್ವಾನಿತರಾಗಿ ಅಲ್ಲಿ ಮಾಡಿದ ಭಾಷಣ ಸಾಕಷ್ಟು ಸುದ್ದಿ ಮಾಡಿತ್ತು. ಕೊನೆಗೆ ಸಮಾಜವಾದಿ ಸೋವಿಯತ್ ರಷ್ಯಾ ಭಾರತದ ಪರವಾಗಿ ವೀಟೋ ಚಲಾಯಿಸಿದ್ದರಿಂದ ನಿರ್ಣಯ ಬಿದ್ದು ಹೋಯಿತು.

ಹೆಚ್ಚಿದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು : ಸಿಪಿಐ ವಿಭಜನೆ

ಭಾರತ ಕಮ್ಯುನಿಸ್ಟ್ ಪಕ್ಷವು ಸ್ವಾತಂತ್ರ್ಯಾ ನಂತರದ ಮೊದಲ ದಶಕದಲ್ಲಿ ವಿವಿಧ ಜನಚಳುವಳಿಗಳಲ್ಲಿ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿತ್ತು. ಕಾರ್ಮಿಕರು ಮತ್ತು ರೈತರ ಪ್ರಶ್ನೆಗಳಲ್ಲಿ ತನ್ನ ಮಧ್ಯಪ್ರವೇಶವನ್ನು ವಿಸ್ತರಿಸಿಕೊಂಡಿತ್ತು. ಮುಖ್ಯವಾಗಿ ಭಾಷಾವಾರು ಪ್ರಾಂತಗಳ ರಚನೆಯಲ್ಲಿ ಬೇರಾವುದೇ ರಾಜಕೀಯ ಪಕ್ಷಗಳಿಗಿಂತ ಪ್ರಮುಖ ಮತ್ತು ಸ್ಪಷ್ಟವಾದ ಪಾತ್ರ ವಹಿಸಿತು. 1951 ರವರೆಗೂ ಮೊದಲಿಗೆ ಬ್ರಿಟಿಷರಿಂದ ನಂತರ ಕಾಂಗ್ರೆಸ್ ಸರ್ಕಾರದಿಂದ ನಿರಂತರವಾದ ನಿಷೇಧಗಳ ತೊಂದರೆಗಳಿಂದ ಅದು ಹೊರ ಬರುತ್ತಿತ್ತು. ಇದರ ಜೊತೆ ಜೊತೆಯಲ್ಲೇ ಸಿಪಿಐನಲ್ಲಿ ಸೈದ್ಧಾಂತಿಕ ಭಿನ್ನತೆಗಳ ಕುರಿತು ಚರ್ಚೆಗಳು ತೀವ್ರಗೊಳ್ಳುತ್ತಿದ್ದವು. ಇಂತಹ ಹಿನ್ನೆಲೆಯಲ್ಲಿ ತನ್ನ ನಾಲ್ಕನೇ ಅಧಿವೇಶನದ ರಾಜಕೀಯ ನಿರ್ಣಯದಲ್ಲಿ ಸಿಪಿಐ, ದೇಶದಲ್ಲಿ ಜನತಾ ಪ್ರಜಾಪ್ರಭುತ್ವವನ್ನು ಸಾಧಿಸುವುದು ಮತ್ತು ಅದನ್ನು ಸಾಧಿಸಲು ಕಾರ್ಮಿಕ ವರ್ಗ ನೇತೃತ್ವ ಕೊಡುವುದು ಎಂಬ ಗುರಿಯನ್ನು ನಿಗದಿಪಡಿಸಿಕೊಂಡಿತು. ಆದರೆ ಇದಕ್ಕೆ ಒಂದು ಪರ್ಯಾಯ ನಿರ್ಣಯವನ್ನು ಪಿ.ಸಿ.ಜೋಷಿ, ಸಿ.ರಾಜೇಶ್ವರರಾವ್, ರವಿನಾರಾಯಣ ರೆಡ್ಡಿ, ಎಸ್. ಎಸ್.ಯೂಸುಫ್, ಭವಾನಿಸೇನ್, ಸೋಮನಾಥ ಲಹಿರಿ, ಕೆ.ದಾಮೋದರನ್, ಮುಂತಾದವರು ಸೇರಿ ಮಂಡಿಸಿದರು. ಇದರಲ್ಲಿ,

> ಕಾಂಗ್ರೆಸ್–ವಿರೋಧಿ ಪ್ರಜಾಸತ್ತಾತ್ಮಕ ರಂಗ ರಚನೆಯ ಆಲೋಚನೆಯನ್ನು ಕೈಬಿಡಬೇಕು. ಇಂತಹ ಹಳಸಲು ಯೋಜನೆಯಿಂದ ಜನರ ನಡುವೆ ಒಡಕುಂಟಾಗುತ್ತದೆ ಹಾಗೂ ಒಗ್ಗೂಡಿಸುವ ಪಕ್ಷದ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ. ರಾಷ್ಟ್ರೀಯ ಐಕ್ಯತೆ ಮತ್ತು ಪ್ರಗತಿಪರ ಶಕ್ತಿಗಳ ಪರವಾಗಿ ಧ್ರುವೀಕರಣ ನಡೆದಿರುವ ಫಲವಾಗಿ ರಾಷ್ಟ್ರೀಯ ಐಕ್ಯತೆಯ ಪರ್ಯಾಯ ಸರ್ಕಾರವನ್ನು ಸ್ಥಾಪಿಸಬಹುದೆಂದು ಸಿಪಿಐ ನಂಬುತ್ತದೆ (ಸುರ್ಜಿತ್ 1996: 46).

ಎಂದು ಹೇಳಿದರು. ಇದರ ಸಾರಾಂಶವೇನೆಂದರೆ ಸಿಪಿಐ ಕಾಂಗ್ರೆಸ್‌ನೊಂದಿಗೆ ಸೇರಿ ಸರ್ಕಾರ ರಚಿಸಬೇಕೆಂಬುದಾಗಿತ್ತು. ಆದರೆ ಈ ನಿರ್ಣಯ ಅಂಗೀಕಾರವಾಗಲಿಲ್ಲ. ಸರ್ಕಾರದ ವರ್ಗಸ್ವರೂಪ ಯಾವುದು ಎಂಬ ವಿಚಾರಕ್ಕೆ ಸಂಬಂಧಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಅಜಯ್ ಘೋಷ್ ಅವರು ಒಂದು ರಿಯಾಯಿತಿಯನ್ನು ಪ್ರಕಟಿಸಿದರು. ಅದರ ಪ್ರಕಾರ ದೊಡ್ಡ ಬಂಡವಾಳಶಾಹಿ ನೇತೃತ್ವದಲ್ಲಿರುವ ಬಂಡವಾಳಶಾಹಿ–ಭೂಮಾಲಕ ಪ್ರಭುತ್ವ ಎಂದು ತೀರ್ಮಾನಿಸಿಕೊಂಡರೂ, ದೊಡ್ಡ ಬಂಡವಾಳದಾರರ ನೇತೃತ್ವ ಎಂದು ಹೇಳಬೇಕಾಗಿಲ್ಲ ಎಂದು ವಿಶ್ಲೇಷಣೆ ಮಾಡಿದರು. ಆದರೆ ಈ ರಿಯಾಯಿತಿಯೂ ಹೆಚ್ಚಿನ ಕಾಲ ಸಮಸ್ಯೆಯನ್ನು ಮುಂದೂಡಲಿಲ್ಲ. 1957 ರಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ಬಂದ ಹಿನ್ನೆಲೆಯಲ್ಲಿ, ಈ ಗುಂಪು ಕೋಮುವಾದಿ ಹಾಗೂ ಪ್ರತಿಗಾಮಿ ಶಕ್ತಿಗಳ ವಿರುದ್ಧ ಸಿಪಿಐ ಗಮನ ಕೇಂದ್ರೀಕರಿಸಬೇಕೆಂದು ಒತ್ತಾಯಿಸಿತು. ಆದರೆ ಈ ವಾದವೂ ಸೋತು ಕಾಂಗ್ರೆಸ್‌ನ ಅಧಿಕಾರದ ಏಕಸ್ವಾಮ್ಯವನ್ನು ಮುರಿಯುವ ತೀರ್ಮಾನವನ್ನು ಸಿಪಿಐ ಮಾಡಿತು. ಈ ಚುನಾವಣೆಯಲ್ಲಿ ಸಿಪಿಐ ಕೇರಳ ರಾಜ್ಯದಲ್ಲಿ ಅಧಿಕಾರಕ್ಕೆ ಹಿಡಿಯಿತು. ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದ ಜಗತ್ತಿನ ಮೊದಲ ಕಮ್ಯುನಿಸ್ಟ್ ಸರ್ಕಾರ ಎಂಬುದಾಗಿ ಇದನ್ನು ಗುರುತಿಸಲಾಗುತ್ತದೆ[47].ಆದರೆ ಇದು ಹೆಚ್ಚು ಕಾಲ ಉಳಿಯಲಿಲ್ಲ. ಸಮಾಜವಾದಿ ಎಂಬ ಹೆಸರನ್ನು ಹೊಂದಿದ್ದ ನೆಹರೂ ಸರ್ಕಾರ 1959 ರ ಜುಲೈ 31 ರಂದು ಕೇರಳ ಸರ್ಕಾರವನ್ನು ವಜಾ ಮಾಡಿತು. ಭಾರತದಲ್ಲಿ ಸಂವಿಧಾನ ಜಾರಿಗೊಂಡ ನಂತರದಲ್ಲಿ ಕಲಂ 356 ನ್ನು ಬಳಸಿ ವಜಾಗೊಳಿಸಿದ ಮೊದಲ ಸರ್ಕಾರವೂ ಇದೇ ಎಂದು ಗುರುತಿಸಲಾಗಿದೆ. ಇದು ಸಿಪಿಐನೊಳಗೆ ನಡೆಯುತ್ತಿದ್ದ ಕಾಂಗ್ರೆಸ್ ಜೊತೆ ಸೇರಿ ಸರ್ಕಾರ ಎಂಬ ಪ್ರಶ್ನೆಗಳಿಗೆ ಒಂದು ತಾತ್ಕಾಲಿಕ ಪರಿಹಾರವನ್ನು ಕೊಟ್ಟಿತು. ಆದರೆ ಅದು ಕೂಡಾ ಹೆಚ್ಚು ಕಾಲ ನಿಲ್ಲಲಿಲ್ಲ. ದೇಶದ ಅತ್ಯಂತ ಪ್ರತಿಗಾಮಿ ಬಂಡವಾಳಶಾಹಿಗಳ ಗುಂಪು ಕಾಂಗ್ರೆಸ್‌ನ್ನು ತೊರೆದು 'ಸ್ವತಂತ್ರ ಪಕ್ಷ'ದ ಕಡೆ ಹೋಗಿರುವುದರಿಂದ, ಪ್ರಗತಿಪರವಾದ ಮತ್ತು ಸಾಮ್ರಾಜ್ಯಶಾಹಿ ವಿರೋಧಿಯಾದ ಬಂಡವಾಳಶಾಹಿಗಳ ಗುಂಪು ಕಾಂಗ್ರೆಸ್‌ನೊಂದಿಗಿದೆ. ಆದ್ದರಿಂದ ಕಾಂಗ್ರೆಸ್ ಪ್ರಗತಿಪರವಾಗಿದೆ ಎಂಬುದಾಗಿ ಸಿಪಿಐನ ಒಂದು ಗುಂಪು ಪ್ರತಿಪಾದಿಸಿತು[48]. ಇದೇ ಸಂದರ್ಭಕ್ಕೆ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಚೀನೀ ಕಮ್ಯುನಿಸ್ಟ್ ಪಕ್ಷಗಳು ನೆಹರೂ ಸರ್ಕಾರವನ್ನು ಪ್ರಗತಿಪರ ಸರ್ಕಾರವೆಂದು ವಿಶ್ಲೇಷಣೆ ಮಾಡಿದವು ಮತ್ತು ಸಿಪಿಐ ನೆಹರೂ ಸರ್ಕಾರಕ್ಕೆ ಬೆಂಬಲ ಕೊಡುವುದರ ಪರವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸಿದವು.

ಇಂತಹ ಪರಿಸ್ಥಿತಿಯಲ್ಲಿ ಸಿಪಿಐನ ಕಾರ್ಯದರ್ಶಿಯಾಗಿದ್ದ ಅಜಯ್ ಘೋಷ್ ನಿಧನರಾದರು. ಸಿಪಿಐ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಮುಖ್ಯವಾಗಿ ಎರಡು ವಿಚಾರಗಳು ಚರ್ಚೆಗೆ ಬಂದವು. ಒಂದು, ನೂತನ

ಕಾರ್ಯದರ್ಶಿ ಯಾರನ್ನು ಮಾಡಬೇಕೆಂಬ ವಿಷಯ. ಈ ವಿಚಾರದಲ್ಲಿ ಸಿಪಿಐ ರಾಷ್ಟ್ರೀಯ ಮಂಡಳಿಯೊಳಗೆ ಭಿನ್ನಾಭಿಪ್ರಾಯ ಎಷ್ಟಿತ್ತೆಂದರೆ, ಮೊದಲ ಬಾರಿಗೆ ಅಧ್ಯಕ್ಷ ಎಂಬ ಹೊಸ ವ್ಯವಸ್ಥೆ ಜಾರಿಗೆ ತಂದು ಎಸ್.ಎ.ಡಾಂಗೆ ಅಧ್ಯಕ್ಷರಾಗಿ ಮತ್ತು ಇ.ಎಂ.ಎಸ್.ನಂಬೂದಿರಿಪಾದ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಇನ್ನೊಂದು, ಈ ಸಭೆಯಲ್ಲಿ ಎರಡು ಕರಡು ನಿರ್ಣಯಗಳು ಮಂಡನೆಯಾದವು. ಒಂದನ್ನು ಭೂಪೇಶ್ ಗುಪ್ತ ಮತ್ತೊಂದನ್ನು ಪಿ.ಸಿ.ಜೋಷಿ ಮಂಡಿಸಿದರು. ಇದರಲ್ಲಿ ಜೋಷಿ ಮಂಡಿಸಿದ ವರದಿಯು[49] ಕಾಂಗ್ರೆಸ್ ಜೊತೆ ಹೊಂದಾಣಿಕೆಯನ್ನು ಉತ್ತಮಪಡಿಸಲು ಪ್ರತಿಪಾದಿಸಿತು. ಭೂಪೇಶ್ ಗುಪ್ತ ಮಂಡಿಸಿದ ವರದಿಯು[50] ಕೋಮುವಾದಿ ಮತ್ತು ಪ್ರತಿಗಾಮಿ ಶಕ್ತಿಗಳ ಶಕ್ತಿಯನ್ನು ಕಡೆಗಣಿಸಬಾರದೆಂದೂ ಅದೇ ರೀತಿ ವಿಜೃಂಭಿಸಬಾರದೆಂದೂ ಪ್ರತಿಪಾದಿಸಿತು. ಇವೆರಡರಿಂದಲೂ ಆಗುವ ಅಪಾಯಗಳ ಬಗ್ಗೆ ಇದು ಎಚ್ಚರಿಸಿತು.

ಸಿಪಿಐನೊಳಗೆ ಈ ರೀತಿಬೆಳವಣಿಗೆಗಳಾಗುತ್ತಿದ್ದಾಗ, ಭಾರತ ಮತ್ತು ಚೀನಾ ಗಡಿ ಸಮಸ್ಯೆ ಉಲ್ಬಣಿಸಿತು.ನೆಹರೂ ಸರ್ಕಾರದ ಕುರಿತ ಧೋರಣೆಯ ಬಗ್ಗೆ ಚರ್ಚೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ, ಗಡಿ ಸಮಸ್ಯೆಯು ಸೇರಿಕೊಂಡು ಸಿಪಿಐ ಒಳಗಿನ ವಿಭಜನೆಯನ್ನು ತೀವ್ರಗೊಳಿಸಿತು. ಸಿಪಿಐ ಒಳಗಿನ ಕಾಂಗ್ರೆಸ್ ಪರವಾದ ಗುಂಪು ಮತ್ತು ಕಾಂಗ್ರೆಸ್ ಎರಡೂ ಈ ಸಂದರ್ಭವನ್ನು ಬಳಸಿಕೊಂಡವು.

ಭಾರತ ಚೀನಾ ನಡುವಿನ 1962 ರ ಯುದ್ಧ ಸಂದರ್ಭದಲ್ಲಿ ಕಮ್ಯುನಿಸ್ಟರ ಮೇಲೆ ದಾಳಿಗಳು ತೀವ್ರಗೊಂಡವು. ಯುದ್ಧ ಸಂದರ್ಭದಲ್ಲಿ ಸಿಪಿಐನ ಹಲವಾರು ಮುಖಂಡರನ್ನು ಸರ್ಕಾರ ಡಿಐಆರ್ ಅಡಿಯಲ್ಲಿ ಬಂಧಿಸಿ ಜೈಲಿನಲ್ಲಿಟ್ಟಿತು. ಸಿಪಿಐನ ಮುಖಂಡರನ್ನು ಚೀನೀ ಏಜೆಂಟರು, ರಾಷ್ಟ್ರ ದ್ರೋಹಿಗಳು ಎಂದೆಲ್ಲಾ ಮಾಧ್ಯಮಗಳು ಹೇಳಲು ಶುರು ಮಾಡಿದವು. ಈ ವಿಚಾರದಲ್ಲಿ ಸರ್ಕಾರದ ಆಕ್ರಮಣಗಳು ಒಂದೆಡೆಯಾದರೆ, ಸಿಪಿಐ ಒಳಗಿನ ಭಿನ್ನತೆಗಳು ಇದನ್ನು ಇನ್ನಷ್ಟು ಹೆಚ್ಚಿಸಿದವು. ಕಾಂಗ್ರೆಸ್ ವಿರೋಧಿ ಗುಂಪಿನವರು ಹೆಚ್ಚಾಗಿ ಬಂಧನಗಳಿಗೆ ಒಳಗಾದರು. ಹಲವಾರು ರಾಜ್ಯಗಳಲ್ಲಿ ಸಿಪಿಐನ ಒಂದು ಗುಂಪಿನ ಮುಖಂಡರನ್ನು ಚೀನೀ ಏಜೆಂಟರೆಂದು ಜರಿದು ಬಂಧಿಸುವಾಗ, ಕನಿಷ್ಠ ಅಂತಹ ಕ್ರಮಗಳನ್ನು ವಿರೋಧಿಸುವ ನಿರ್ಣಯಗಳನ್ನು ತೆಗೆದುಕೊಳ್ಳಲೂ ಸಹ ಸಿಪಿಐಗೆ ಸಾಧ್ಯವಾಗಲಿಲ್ಲ[51].

ರಾಜ್ಯದಲ್ಲಿ ಇದರ ಪರಿಣಾಮವಾಗಿ ಹಲವಾರು ಕಡೆಗಳಲ್ಲಿ ಕಮ್ಯುನಿಸ್ಟರನ್ನು ಸರ್ಕಾರ ಬಂಧಿಸಿ ಜೈಲಿಗಟ್ಟಿತು. ಕೆಜಿಎಫ್‌ನಲ್ಲಿ ಕಾರ್ಮಿಕ ಚಳುವಳಿಯ ಮೇಲೆ ದಾಳಿಗಳನ್ನು ನಡೆಸಲು ಈ ಸಂದರ್ಭವನ್ನು ಬಳಸಲಾಯಿತು. ಕಾರ್ಯಕರ್ತರ ಮನೆಗಳ ಮೇಲೆ ದಾಳಿಗಳು ನಡೆದು ನೂರಾರು ಸಕ್ರಿಯ ಕಮ್ಯುನಿಸ್ಟ್ ಕಾರ್ಯಕರ್ತರು ಮನೆಗಳನ್ನು ತೊರೆದು ಹೋದರು. ಕಮ್ಯುನಿಸ್ಟರ ಕಾರ್ಮಿಕ ಸಂಘದ ಕಛೇರಿಯನ್ನು ಗೂಂಡಾಗಳು ವಶಪಡಿಸಿಕೊಂಡರು. ನವೆಂಬರ್ 1962 ರಲ್ಲಿ ಗೋವಿಂದನ್ ಅವರನ್ನು ಬಂಧಿಸಿ ಬೆಳಗಾಂ ಜೈಲಿಗೆ ಹಾಕಲಾಯಿತು. 1963 ರಲ್ಲಿ ಹೈಕೋರ್ಟ್ ಅದೇಶದಿಂದ ಬಿಡುಗಡೆಯಾದರು. ಎನ್.ಎಲ್.ಉಪಾಧ್ಯಾಯ, ಎಂ.ಎಸ್.ಕೃಷ್ಣನ್, ಎಸ್.ಸೂರ್ಯನಾರಾಯಣರಾವ್, ಎಂ.ಸಿ.ನರಸಿಂಹನ್, ಸಿ.ಆರ್.ಕೃಷ್ಣರಾವ್, ಎಂ.ಎಸ್.ಧಾರೇಶ್ವರ್, ಎಂ.ಹೆಚ್.ಕೃಷ್ಣಪ್ಪ, ಎ.ಕೃಷ್ಣಶೆಟ್ಟಿ, ಎ.ಶಾಂತಾರಾಂ

ಪೈ, ಮೋನಪ್ಪ ಶೆಟ್ಟಿ, ಗಂಗಾಧರ ನಮೋಶಿ ಮುಂತಾದ ರಾಜ್ಯ ನಾಯಕರನ್ನೆಲ್ಲಾ ಇಡಿಯಾಗಿ ಬಂಧಿಸಿದ ಕಾಂಗ್ರೆಸ್ ಸರ್ಕಾರ ಇವರನ್ನು ಬೆಂಗಳೂರು ಮತ್ತು ಬಳ್ಳಾರಿ ಜೈಲುಗಳಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿತು. ಈ ಅವಧಿಯಲ್ಲಿ ಸಿಂಪ್ಸನ್ ಸೋನ್ಸ್‌ರು ಸಿಪಿಐನ ತಾತ್ಕಾಲಿಕ ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು (ಕಕ್ಕಿಲ್ಲಾಯ 2003: 276–277).

ಇಷ್ಟಕ್ಕೂ ಚೀನಾ ಮತ್ತು ಭಾರತ ಯುದ್ಧ ನಡೆದರೆ ಭಾರತದಲ್ಲಿ ಒಂದು ವಿಭಾಗದ ಕಮ್ಯುನಿಸ್ಟರನ್ನು ಬಂಧಿಸಿ ಜೈಲಿಗೆ ಹಾಕಿದ್ದು ಏಕೆಂದರೆ, ಕಮ್ಯುನಿಸ್ಟ್ ಪಕ್ಷದಲ್ಲಿ ನೆಹರೂ ಪರವಾಗಿದ್ದ ಒಂದು ಮುಖಂಡತ್ವವನ್ನು ಕಾಪಾಡುವ ಮತ್ತು ಆ ಮೂಲಕ ಸಿಪಿಐ ವಿಭಜನೆಯಾದರೆ ಆ ಗುಂಪಿಗೆ ಬಹುಮತ ದೊರೆಯುವಂತೆ ಮಾಡುವ ಉದ್ದೇಶದಿಂದ ಗಡಿ ವಿವಾದವನ್ನು ನೆಹರೂ ಸರ್ಕಾರ ತನ್ನ ಅನುಕೂಲಕ್ಕೆ ಬಳಸಿಕೊಂಡಿತು ಎಂದು ಸುರ್ಜಿತ್‌ರವರು ಅಭಿಪ್ರಾಯ ಅಭಿಪ್ರಾಯಪಟ್ಟಿದ್ದಾರೆ (ಸುರ್ಜಿತ್ 1996: 60). ಜಗತ್ತಿಗೆ ಪಂಚಶೀಲ ತತ್ವಗಳ ಪ್ರತಿಪಾದನೆ ಮಾಡುವಾಗ ಜೊತೆಗಾರರಾಗಿದ್ದ ಚೀನಾ ಮತ್ತು ಭಾರತ, ಗಡಿ ರೇಖೆಯ ವಿಚಾರದಲ್ಲಿ ಪರಸ್ಪರ ಶತ್ರುಗಳಾಗಿದ್ದಕ್ಕೆ ಬ್ರಿಟಿಷ್ ವಸಾಹತುಶಾಹಿಗಳು ರೂಪಿಸಿದ ಮ್ಯಾಕ್‌ಮೋಹನ್ ರೇಖೆಯು, ಭಾರತ ಮತ್ತು ಚೀನಾ ನಡುವಿನ ಗಡಿ ರೇಖೆಯ ಅಸ್ಪಷ್ಟತೆಯ ಸಮಸ್ಯೆಯನ್ನು ಅದರೊಳಗೇ ಅಂತರ್ಗತವಾಗಿ ಹುದುಗಿಸಿಬಿಟ್ಟಿದೆ. ಯುದ್ಧಕ್ಕೆ ಇದು ಮುಖ್ಯ ಕಾರಣವಾದರೂ, ಪರಸ್ಪರ ಸಂಬಂಧಗಳು ಹದಗೆಡಲು ಇತರೆ ಹಲವು ಕಾರಣಗಳಿದ್ದವು. ಅವೆಲ್ಲವುಗಳ ಬಗ್ಗೆ ಚರ್ಚಿಸುವುದು ಇಲ್ಲಿನ ಉದ್ದೇಶವಲ್ಲ. ಆದರೆ ಪ್ರಮುಖವಾದ ಇನ್ನೊಂದು ಕಾರಣವನ್ನು ಗಮನಿಸಬೇಕು. 1959 ರ ವೇಳೆಗೆ ಚೀನಾ ಕಮ್ಯುನಿಸ್ಟ್ ಪಕ್ಷವು ನೆಹರೂ ಸರ್ಕಾರದ ಕುರಿತು ಪ್ರಕಟಿಸಿದ ಲೇಖನಗಳು[52] ಚಾರಿತ್ರಿಕವಾಗಿ ಪ್ರಮುಖ ಅಂಶಗಳಾಗಿವೆ. ಭಾರತದ ನೆಹರೂ ಸರ್ಕಾರದ ವರ್ಗ ಸ್ವರೂಪದ ಬಗ್ಗೆ ಅದು ಮಾಡಿದ ವಿಶ್ಲೇಷಣೆ ಎರಡು ಲೇಖನಗಳಲ್ಲಿ ಪ್ರಕಟಗೊಂಡಿತು. ಭಾರತೀಯ ಬಂಡವಾಳಶಾಹಿಯು ದಲ್ಲಾಳಿ ವರ್ಗವಾಗಿದೆ, ನೆಹರೂ ಸರ್ಕಾರ ಕೈಗೊಂಬೆ ಸರ್ಕಾರವಾಗಿದೆ ಮತ್ತು ಈ ಕಾರಣದಿಂದಾಗಿ ಭಾರತದ ಪ್ರಸಕ್ತ ಕ್ರಾಂತಿಯು ಸಾಮ್ರಾಜ್ಯಶಾಹಿ–ವಿರೋಧಿ ಕಾಲಘಟ್ಟವಾಗಿದೆ ಎಂದು ಆ ಲೇಖನಗಳಲ್ಲಿ ವಿಶ್ಲೇಷಿಸಲಾಯಿತು. ಟಿಬೆಟ್ ಕುರಿತ ಭಾರತದ ನಿಲುವೂ ಸಹ ಇಂತಹ ಒಂದು ವಿಶ್ಲೇಷಣೆಗೆ ಕಾರಣವಾಗಿತ್ತು. ಇದಕ್ಕೆ ಮೊದಲು ಚೀನಾ ಕಮ್ಯುನಿಸ್ಟ್ ಪಕ್ಷ, ಭಾರತದ ನೆಹರೂ ಸರ್ಕಾರ ಪ್ರಗತಿಪರ ನೀತಿಗಳನ್ನು ಅನುಸರಿಸುತ್ತಿದೆಯೆಂದೂ, ಅದ್ದರಿಂದ ಅದಕ್ಕೆ ಸಿಪಿಐ ಬೆಂಬಲಿಸಬೇಕೆಂದು ಹೇಳಿತ್ತು. ಈ ಬದಲಾದ ನೀತಿಗಳೂ ಸಹ ನೆಹರೂ ಸರ್ಕಾರ ಮತ್ತು ಚೀನಾ ಸರ್ಕಾರಗಳ ನಡುವಿನ ಸಂಬಂಧಗಳನ್ನು ದುರ್ಬಲಗೊಳಿಸುವಲ್ಲಿ ಕಾಣಿಕೆ ನೀಡಿದವು.

ಭಾರತದ ಕಮ್ಯುನಿಸ್ಟರು 1962 ರ ಭಾರತ ಚೀನಾ ಯುದ್ಧ ಸಂದರ್ಭದಲ್ಲಿ ಚೀನಾ ಪರ ವಹಿಸಿದರು ಎಂಬ ಆರೋಪವನ್ನು ಸಾಮಾನ್ಯವಾಗಿ ಮಾಡಲಾಗುತ್ತದೆ. ಈಗಾಗಲೇ ಗಮನಿಸಿದ ಹಾಗೆ ಈ ವಿಚಾರ ಹಲವು ಆಯಾಮಗಳನ್ನು ಒಳಗೊಂಡ ಘಟನೆಯಾಗಿದೆ. ಸಿಪಿಐನೊಳಗೆ ಇಷ್ಟೊತ್ತಿಗಾಗಲೇ ಕಾಂಗ್ರೆಸ್ ಕುರಿತು ಎರಡು ಗುಂಪುಗಳು ವಿಭಜನೆಯಾಗಿದ್ದ ಕಾರಣಕ್ಕೆ ಗಡಿ ವಿವಾದಕ್ಕೆ ಸಂಬಂಧಿಸಿ ಒಂದೇ ಅಭಿಪ್ರಾಯ ಇರಲಿಲ್ಲ. ಕಾಂಗ್ರೆಸ್‌ನ ನೆಹರೂ ಧೋರಣೆಗಳ ಪರವಾಗಿದ್ದ ಗುಂಪು ಪೂರ್ಣವಾಗಿ ಸರ್ಕಾರವನ್ನು ಬೆಂಬಲಿಸಿತು. ಎಸ್.ಎ.ಡಾಂಗೆಯವರು

ಚೀನಾ ವಿರೋಧಿ ನಿಲುವಿನ ಪ್ರಬಲ ಪ್ರತಿಪಾದಕರಾಗಿದ್ದರು. ಚೀನಾ ಭಾರತದ ಗಡಿಯೊಳಗೆ ನುಗ್ಗಿ ನಂತರ ತಾವಾಗಿಯೇ ಅದನ್ನು ನಿಲ್ಲಿಸಿದ್ದ ಕ್ರಮಗಳನ್ನು ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟಿಗೆ ಅವರು ಹೋಲಿಸಿದರು[53]. ಭಿನ್ನಾಭಿಪ್ರಾಯಗಳು ಏನೇ ಇದ್ದರೂ ದೇಶದ ರಕ್ಷಣೆಯ ವಿಚಾರದಲ್ಲಿ ಸಿಪಿಐ ಸರಕಾರಕ್ಕೆ ಬೆಂಬಲ ನೀಡಿತು ಮತ್ತು ಶಾಂತಿಯುತ ಪರಿಹಾರಕ್ಕೂ ಒತ್ತಾಯಿಸಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚು, ಪ್ರೆಸ್, ಬೀಡಿ ಮತ್ತಿತರ ಅಸಂಘಟಿತ ಕೆಲಸಗಾರರು ಕೇಂದ್ರ ಸರಕಾರದ ರಕ್ಷಣಾ ನಿಧಿಗೆ ರೂ. 25,000 ಗಳನ್ನು ಸಂಗ್ರಹಿಸಿ ಕಳುಹಿಸಿದ್ದರು. ಮಂಗಳೂರಿನ ಕೇಂದ್ರ ಮೈದಾನದಲ್ಲಿ ಚೀನೀ ಆಕ್ರಮಣವನ್ನು ಖಂಡಿಸಿ ಸಿಪಿಐ ಬಹಿರಂಗ ಸಭೆಯನ್ನು ನಡೆಸಿತು. ದೇಶ ರಕ್ಷಣೆಯ ಪರವಾಗಿ ಕರ್ನಾಟಕದಾದ್ಯಂತ ಪ್ರಚಾರ ನಡೆಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಎಂ.ಎಸ್.ಕೃಷ್ಣನ್, ಬಿಜಾಪುರದಲ್ಲಿ ಎನ್. ಕೆ.ಉಪಾಧ್ಯಾಯ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲಿ ಬಿ.ವಿ.ಕಕ್ಕಿಲ್ಲಾಯ ಸಾರ್ವಜನಿಕ ಸಭೆಗಳನ್ನು ನಡೆಸಿದರು (ಕಕ್ಕಿಲ್ಲಾಯ 2003: 275–276). ಚೀನೀ ಪರ ಇದ್ದರು ಎಂದು ಆರೋಪಿಸಲಾಗುವ ಗುಂಪಿನ ಮುಖಂಡರೂ ಸಹ ದೇಶ ರಕ್ಷಣೆಯ ವಿಚಾರದಲ್ಲಿ ಸ್ಪಷ್ಟ ಅಭಿಪ್ರಾಯಗಳನ್ನು ಮಂಡಿಸಿದ್ದರು. ಉದಾಹರಣೆಗೆ, ಜ್ಯೋತಿಬಸುರವರು,

> ನಮ್ಮ ನಿಲುವು ಸ್ಪಷ್ಟ. ಭಾರತದ ಗಡಿ ರಕ್ಷಣೆಯನ್ನು ಗಟ್ಟಿಗೊಳಿಸಬೇಕು ಮತ್ತು ಆಕ್ರಮಣ ಮಾಡುವ ದೇಶದ ರಾಜಕೀಯ ಲಕ್ಷಣಗಳು ಏನೇ ಆಗಿದ್ದರೂ, ನಮ್ಮ ಪಕ್ಷವು ಭಾರತದ ಸ್ವಾತಂತ್ರ್ಯ ರಕ್ಷಣೆಗೆ ಬೇಕಾದ ತನ್ನೆಲ್ಲಾ ಪ್ರಯತ್ನಗಳನ್ನು ಹಾಕುವುದಕ್ಕೆ ಹಿಂಜರಿಯುವುದಿಲ್ಲ[54]

ಎಂದು ಹೇಳಿದರೆ, ಇಎಂಎಸ್‌ರವರು,

> ಚೀನೀಯರು ತಮ್ಮದೆಂದು ಭಾವಿಸುವ ಪ್ರದೇಶವನ್ನು ಹೊಕ್ಕಿದ್ದಾರೆ, ಹೀಗಾಗಿ ಆಕ್ರಮಣದ ಪ್ರಶ್ನೆ ಇಲ್ಲ. ಅದೇ ಸಂದರ್ಭದಲ್ಲಿ ಭಾರತೀಯರು ತಮ್ಮದೆನ್ನುವ ಪ್ರದೇಶವನ್ನು ರಕ್ಷಿಸುತ್ತಿದ್ದಾರೆ, ಹೀಗಾಗಿ ಅವರೂ ಕೂಡಾ ಆಕ್ರಮಣವನ್ನು ಮಾಡುತ್ತಿಲ್ಲ[55]

ಎಂದು ಹೇಳಿದರು. ಇಎಂಎಸ್ ನಂಬೂದಿರಿಪಾದರು, ಸಾಮ್ರಾಜ್ಯವಾದಿಗಳು ನಿರ್ಮಿಸಿರುವ ಮತ್ತು ಶಾಶ್ವತವಾಗಿ ಸಮಸ್ಯೆಗಳನ್ನು ಸೃಷ್ಟಿಸಿ ಹೋಗಿರುವ ಗಡಿಗಳಿಗೆ ಸಂಬಂಧಿಸಿ, ಅವುಗಳನ್ನು ಶಾಂತಿಯುತವಾಗಿ ಮತ್ತು ಮಾತುಕತೆಗಳ ಮೂಲಕ ರಾಜಕೀಯವಾಗಿಯೇ ಪರಿಹಾರ ಕಂಡುಕೊಳ್ಳಬೇಕೆಂದು ಬಯಸುತ್ತಿದ್ದರು. ಇಎಂಎಸ್ ಅವರು ನಿಧನರಾದ ಸಂದರ್ಭದಲ್ಲಿ ಬರೆಯುತ್ತಾ ಸುರ್ಜಿತ್ ಅವರು ಹೇಳಿರುವ ವಿಚಾರಗಳನ್ನು ಇಲ್ಲಿ ಗಮನಿಸಬಹುದು:

> ಅದರ ನಿಜವಾದ ಅರ್ಥದಲ್ಲಿ ಅವರು ಅಂತರರಾಷ್ಟ್ರೀಯವಾದಿ. ಉದ್ರೇಕಕಾರಿ ಪೂರ್ವಾಗ್ರಹಗಳು ವ್ಯಾಪಕವಾಗಿದ್ದಾಗ ಅವರು ಗಡಿ ವಿವಾದದ ಶಾಂತಿಯುತ ಪರಿಹಾರಕ್ಕೆ ಒತ್ತಾಯಿಸಿ ದೇಶಾದ್ಯಂತ ಪ್ರವಾಸ ಮಾಡಿದರು. ಅದೇ ರೀತಿಯಲ್ಲಿ ಭಾರತ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲೂ ಶಾಂತಿಯುತ ಪರಿಹಾರಕ್ಕೆ ಒತ್ತಾಯಿಸಿದ್ದರು. ಒಬ್ಬ ನಿಜವಾದ ಕಮ್ಯುನಿಸ್ಟ್ ಆಗಿ ಅವರು ಯಾವಾಗಲೂ ಭಾರತದ ಕಮ್ಯುನಿಸ್ಟ್ ಚಳುವಳಿಯು ಜಾಗತಿಕ ಕ್ರಾಂತಿಕಾರಿ ಚಳುವಳಿ ಪ್ರಕ್ರಿಯೆಯ ಭಾಗವಾಗಿದೆ ಎಂದು ತಿಳಿದಿದ್ದರು[56].

ಭಾರತ ಕಮ್ಯುನಿಸ್ಟ್ ಪಕ್ಷದೊಳಗೆ ಭಾರತ–ಚೀನಾ ಯುದ್ಧಕ್ಕೆ ಸಂಬಂಧಿಸಿ ಪರ–ವಿರೋಧಗಳು ಸ್ಪಷ್ಟವಾಗಿ ರೂಪುಗೊಂಡು, ಪರಸ್ಪರ ಟೀಕೆಗಳು, ಕಮ್ಯುನಿಸ್ಟ್ ಪಕ್ಷದ ಎಲ್ಲೆಗಳನ್ನು ಮೀರಿ ಬೆಳೆಯಿತು. ಕಾಂಗ್ರೆಸ್, ಜನಸಂಘ,

ಸ್ವತಂತ್ರ ಪಕ್ಷ ಯುದ್ಧೋತ್ಸಾಹವನ್ನು ತೋರುತ್ತಿದ್ದಾಗ, ಸಿಪಿಐನ ಪ್ರಧಾನ ನಾಯಕತ್ವವೂ ಯುದ್ಧದ ಪರವಾಗಿದ್ದಾಗ ಮಾತುಕತೆಗಳ ಮೂಲಕ ಶಾಂತಿಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಮತ್ತು ನೆರೆಹೊರೆಯ ದೇಶಗಳೊಂದಿಗೆ ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ಸಿಪಿಐನ ಒಂದು ವಿಭಾಗ ಪ್ರತಿಪಾದಿಸುತ್ತಿತ್ತು. ಪ್ರವಾಹಕ್ಕೆದುರಾಗಿ ಈಜುವ ಸಾಹಸವನ್ನು ಇದು ಮಾಡುತ್ತಿತ್ತು. 1962 ರಲ್ಲಿ ಜನಸಂಘದ ನಾಯಕರಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು ಚೀನಾದೊಂದಿಗೆ ಯುದ್ಧ ಮಾಡಬೇಕೆಂಬುದರ ವಕ್ತಾರರಾಗಿದ್ದರು. ಆದರೆ ಅವರೇ ಭಾರತದ ಪ್ರಧಾನಿಯಾದಾಗ ಚೀನಾ ಜೊತೆ ಶಾಂತಿಯ ಪ್ರತಿಪಾದಕರಾಗಿದ್ದರು. ಅವರೇನೂ ಕಮ್ಯುನಿಸ್ಟರಾಗಿರಲಿಲ್ಲ. ಚರಿತ್ರೆಯ ವಿಭಿನ್ನ ತಿರುವುಗಳು ಎನ್ನುವುದು ಇದನ್ನೇ.

ಇದೇನೇ ಆದರೂ, ಚೀನಾದೊಂದಿಗಿನ ಯುದ್ಧವು ಸಿಪಿಐನೊಳಗೆ ಸೈದ್ಧಾಂತಿಕ ಭಿನ್ನತೆಗಳು ಮತ್ತಷ್ಟು ತೀವ್ರಗೊಳ್ಳುವಂತೆ ಮಾಡಿದವು. ಇವುಗಳ ನಡುವೆ ಹೊಂದಾಣಿಕೆ ಅಸಾಧ್ಯದ ಪರಿಸ್ಥಿತಿ ಎಂಬಂತಾಗಿ ಸಿಪಿಐ ವಿಭಜನೆಯತ್ತ ಸಾಗಿತು. ಎರಡೂ ಗುಂಪುಗಳು ಒಟ್ಟಾಗಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮವನ್ನು ಅಂಗೀಕರಿಸುವ ಪ್ರಯತ್ನ ಅಂತಿಮವಾಗಿ ನಡೆದದ್ದು 1961 ರಲ್ಲಿ ವಿಜಯವಾಡದಲ್ಲಿ ನಡೆದ ಸಿಪಿಐನ 6 ನೇ ಅಧಿವೇಶನದಲ್ಲಿ. ಅಲ್ಲಿ ಎರಡು ಕಾರ್ಯಕ್ರಮಗಳು ಮಂಡನೆಯಾದವು. ಹೊಂದಾಣಿಕೆ ಬರಲು ಅಸಾಧ್ಯವೆನ್ನುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಪರಿಷ್ಕರಣವಾದಕ್ಕೆ ವಿರುದ್ಧ ಎಂಬ ಗುಂಪು ತೆನಾಲಿಯಲ್ಲಿ ಒಂದು ಸಮಾವೇಶವನ್ನು ನಡೆಸಿ, ಅದರಲ್ಲಿ ತೀರ್ಮಾನಿಸಿದಂತೆ ಸಿಪಿಐನ ಏಳನೇ ಸಮ್ಮೇಳನವನ್ನು 1964 ರಲ್ಲಿ ಕಲ್ಕತ್ತಾದಲ್ಲಿ ನಡೆಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವನ್ನು ಆರಂಭಿಸಿತು.

ಕಮ್ಯುನಿಸ್ಟ್ ಪಕ್ಷದ ವಿಭಜನೆಯು ಭಾರತದ ರಾಜಕಾರಣದಲ್ಲಿ ಒಂದು ಅತ್ಯಂತ ಮಹತ್ತರವಾದ ಘಟನೆಯಾಗಿದೆ. ಸಿಪಿಐನ ಅಖಿಲ ಭಾರತ ಮುಖಂಡರ ವೈಯುಕ್ತಿಕ ಭಿನ್ನತೆಗಳು ವಿಭಜನೆಗೆ ಕಾರಣವಾಯಿತು ಎನ್ನುವುದರಿಂದ ಹಿಡಿದು ಚೀನಾ ಕಮ್ಯುನಿಸ್ಟ್ ಪಕ್ಷದ ಚಿತಾವಣೆಯಿಂದ ಭಾರತದ ಕಮ್ಯುನಿಸ್ಟ್ ಪಕ್ಷ ವಿಭಜನೆಯಾಯ್ತು, ಸಿಪಿಐ ನಾಯಕತ್ವ ಸುಧಾರಣಾವಾದಿ ದಾರಿಯನ್ನು ಹಿಡಿದಿದ್ದರಿಂದ ಪಕ್ಷ ಇಬ್ಭಾಗವಾಗಬೇಕಾಯ್ತು ಎನ್ನುವವರೆಗೆ ಅನೇಕ ಕಾರಣಗಳು ಚರ್ಚೆಯಲ್ಲಿವೆ. ವಿಭಜನೆಯ ಪ್ರಕ್ರಿಯೆಯಲ್ಲಿ ಎದ್ದು ಬಂದ ವಿಷಯಗಳು ಯಾವುವು ಎಂಬುದನ್ನು ಆಧರಿಸಿ ಕೆಳಗಿನ ಚರ್ಚೆಯನ್ನು ಮಾಡಲಾಗಿದೆ.

ಸಿಪಿಐ ವಿಭಜನೆಯಾಗಿ ಎರಡು ಪಕ್ಷಗಳು ಪ್ರತ್ಯೇಕವಾಗಿ ಎರಡು ಕಾರ್ಯಕ್ರಮಗಳನ್ನು[57] ಅಂಗೀಕರಿಸಿದವು. 1964 ರ ಅಕ್ಟೋಬರ್–ನವೆಂಬರ್‌ನಲ್ಲಿ ಕಲ್ಕತ್ತಾದಲ್ಲಿ 7 ನೇ ಸಮ್ಮೇಳನ ನಡೆಸಿ ಸಿಪಿಐ(ಎಂ) ತನ್ನ ಕಾರ್ಯಕ್ರಮ ಅಂಗೀಕರಿಸಿತು. ಅದೇ ವರ್ಷದ ಡಿಸೆಂಬರ್‌ನಲ್ಲಿ ಬಾಂಬೆಯಲ್ಲಿ 7ನೇ ಸಮ್ಮೇಳನ ನಡೆಸಿ ಸಿಪಿಐ ತನ್ನ ಕಾಯಕ್ರಮವನ್ನು ಅಂಗೀಕರಿಸಿತು. ಈ ಎರಡೂ ಕಾರ್ಯಕ್ರಮಗಳು ಯಾವ ರೀತಿ ಬೇರೆಯಾಗಿದ್ದವು ಎಂಬುದರ ಮೂಲಕ ಅವುಗಳ ವಿಭಜನೆಯ ಕಾರಣಗಳನ್ನು ಗುರುತಿಸಬಹುದು. ಭಾರತ ಸ್ವಾತಂತ್ರ್ಯದ ಕುರಿತು ಸಿಪಿಐನೊಳಗೆ

ನಡೆದ ಚರ್ಚೆಗಳನ್ನು ಹಿಂದೆ ಗಮನಿಸಲಾಗಿದೆ. ಸಿಪಿಐ ಸುಧಾರಣವಾದಿ ಪಕ್ಷವೆಂದು ಮತ್ತು ಸಿಪಿಐ(ಎಂ) ಎಡ–ತೀವ್ರವಾದಿ ಅಥವಾ ದುಸ್ಸಾಹಸವಾದಿ ಪಕ್ಷವೆಂದು ತೀವ್ರವಾದ ಟೀಕೆ–ವಿಮರ್ಶೆಗಳನ್ನು ನಡೆಸಲು ಕಾರಣವಾದ ಅಂಶಗಳನ್ನು ಗಮನಿಸೋಣ.

ಕ್ರಾಂತಿಗಳು ತನ್ನ ಘಟ್ಟ ಯಾವುದೆಂದು ಸ್ಪಷ್ಟಪಡಿಸಿಕೊಳ್ಳದೆ ಮುಂದೆ ಸಾಗುವುದಿಲ್ಲ. ಈ ಹಿನ್ನೆಲೆಯಲ್ಲಿ **ಭಾರತದ ಕ್ರಾಂತಿಯ ಘಟ್ಟ** ಯಾವುದೆಂದು ಮತ್ತು ಇದಕ್ಕಾಗಿ ಭಾರತದ ಪ್ರಭುತ್ವವನ್ನು ವ್ಯಾಖ್ಯಾನಿಸಬೇಕಾಗಿತ್ತು. ಈ ಕುರಿತು 1964 ರ ಸಿಪಿಐನ ಕಾರ್ಯಕ್ರಮವು ಹೀಗೆ ವಿಶ್ಲೇಷಣೆ ಮಾಡಿತು:

> ಭಾರತದ ರಾಷ್ಟ್ರೀಯ ಆರ್ಥಿಕತೆಯಲ್ಲಿ ಬಂಡವಾಳವಾದವನ್ನು ಎತ್ತಿ ಹಿಡಿಯುವ ಮತ್ತು ಬಂಡವಾಳಶಾಹಿ ಉತ್ಪಾದನಾ, ವಿತರಣಾ ಮತ್ತು ವಿನಿಮಯ ಸಂಬಂಧಗಳನ್ನು ಬೆಳಸುವ, ಒಟ್ಟಾರೆ ರಾಷ್ಟ್ರೀಯ ಬಂಡವಾಳದಾರರ ವರ್ಗ ಆಳ್ವಿಕೆಯ ಸಾಧನವೇ ಭಾರತದ ಪ್ರಭುತ್ವ. ಸರ್ಕಾರದ ಅಧಿಕಾರದಲ್ಲಿ ದೊಡ್ಡ ಬಂಡವಾಳಶಾಹಿಯು ಗಮನಾರ್ಹ ಪ್ರಭಾವವನ್ನು ಹೊಂದಿರುತ್ತದೆ. ರಾಷ್ಟ್ರೀಯ ಬಂಡವಾಳಶಾಹಿಯು ಜಮೀನ್ದಾರರನ್ನು ಒಳಗೊಂಡಿದ್ದು, ಅವರನ್ನು ಮಂತ್ರಿಮಂಡಲಗಳಲ್ಲಿ ಸರ್ಕಾರಿ ಹುದ್ದೆಗಳಲ್ಲಿ, ಮುಖ್ಯವಾಗಿ ರಾಜ್ಯ ಮಟ್ಟದಲ್ಲಿ ಸೇರಿಸಿಕೊಳ್ಳುತ್ತದೆ (ಕಾರಟ್ 2016: 3).

ಈ ಕಾರ್ಯಕ್ರಮವು 1968 ರಲ್ಲಿ ಮತ್ತೆ ತಿದ್ದುಪಡಿಯಾಗಿ ದೊಡ್ಡ ಬಂಡವಾಳಶಾಹಿಯ ಗಮನಾರ್ಹ ಪ್ರಭಾವದ ಬದಲಿಗೆ ಬಲಿಷ್ಟ ಪ್ರಭಾವ ಹೊಂದಿರುತ್ತದೆ ಎಂದು ಬದಲಾಯಿತು.

ಭಾರತದ ಪ್ರಭುತ್ವವು ಬಂಡವಾಳಶಾಹಿಯಾಗಿದ್ದು, ಪ್ರಜಾಪ್ರಭುತ್ವ ಕ್ರಾಂತಿಯ ಹಂತದಲ್ಲಿರುವುದರಿಂದ ಅದನ್ನು ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ (National Democratic Revolution-NDR) ಎಂದು ಸಿಪಿಐ ವಿಶ್ಲೇಷಣೆ ಮಾಡಿತು. ಪ್ರಭುತ್ವದ ಹಿಡಿತವು ಬಂಡವಾಳಶಾಹಿ ವರ್ಗದ ಕೈಯಲ್ಲಿರುವಾಗ, ಅದರ ಪ್ರಧಾನ ವೈರುಧ್ಯವು ಕಾರ್ಮಿಕ ವರ್ಗದೊಂದಿಗೆ ಇರುತ್ತದೆ. ಹೀಗಾಗಿ ಬಂಡವಾಳಶಾಹಿ ವರ್ಗದ ವಿರುದ್ಧ ಕ್ರಾಂತಿ ಮಾಡುವುದೆಂದರೆ, ಅದು ಕಾರ್ಮಿಕ ವರ್ಗದ ಕ್ರಾಂತಿ ಆಗಿರುತ್ತದೆ, ಅರ್ಥಾಥ್ ಅದು ಸಮಾಜವಾದಿ ಕ್ರಾಂತಿ ಆಗಿರುತ್ತದೆ. ಹೀಗಾಗಿ ಪ್ರಜಾಪ್ರಭುತ್ವ ಕ್ರಾಂತಿಯ ಘಟ್ಟ ಇರಲು ಸಾಧ್ಯವಿಲ್ಲ. ಬಂಡವಾಳಶಾಹಿ ಪ್ರಭುತ್ವ ಇರುವಾಗ ಪ್ರಜಾಪ್ರಭುತ್ವ ಕ್ರಾಂತಿ ಎಂಬುದು ವೈರುಧ್ಯಗಳ ತಪ್ಪು ವಿಶ್ಲೇಷಣೆಯಾಗಿದೆ ಎಂಬುದು ವಿಭಜನೆಗೆ ಕಾರಣವಾದ ಅಂಶಗಳಲ್ಲಿ ಒಂದಾಯಿತು.

ಭಾರತದಲ್ಲಿ ಪ್ರಭುತ್ವದ ನೇತೃತ್ವವನ್ನು ದೊಡ್ಡ ಬಂಡವಾಳದಾರರು ವಹಿಸಿದ್ದು ಅವರು ಜಮೀನ್ದಾರಿ ಪದ್ಧತಿಯನ್ನು ರಕ್ಷಿಸುತ್ತಿದ್ದಾರೆ ಮತ್ತು ವಿದೇಶೀ ಏಕಸ್ವಾಮ್ಯಗಳ ಜೊತೆ ಸಹಯೋಗ ಹೊಂದಿದ್ದಾರೆಂದು ಸಿಪಿಐ(ಎಂ) ವಿಶ್ಲೇಷಣೆ ಮಾಡಿತು. ಆದ್ದರಿಂದ ಭಾರತದ ಕ್ರಾಂತಿಯ ಹಂತ ಜನತಾ ಪ್ರಜಾಪ್ರಭುತ್ವ ಕ್ರಾಂತಿ (Peoples Democratic Revolution- PDR) ಯಾಗಿದೆ ಎಂದಿತು. ಭಾರತವು ಬಂಡವಾಳಶಾಹಿ ವರ್ಗ ಮತ್ತು ಜಮೀನ್ದಾರಿ ವರ್ಗದ ಜಂಟಿ ಪ್ರಭುತ್ವವನ್ನು ಹೊಂದಿದ್ದು ನೇತೃತ್ವವನ್ನು ದೊಡ್ಡ ಬಂಡವಾಳಶಾಹಿ ವರ್ಗ ನೀಡಿದೆಯಷ್ಟೆ. ಊಳಿಗಮಾನ್ಯ

ವ್ಯವಸ್ಥೆಯು ನಾಶವಾಗದೆ ಸಮಾಜವಾದಿ ಪ್ರಭುತ್ವದ ಕಡೆ ಹೋಗಲಾಗದು, ಆದ್ದರಿಂದ ಪ್ರಸಕ್ತ ಹಂತವು ಪ್ರಜಾಪ್ರಭುತ್ವ ಕ್ರಾಂತಿಯ ಹಂತವಾಗಿದೆ ಎಂದು ಸಿಪಿಐ(ಎಂ) ವಿಶ್ಲೇಷಣೆ ಮಾಡಿತು.

ಸಿಪಿಐ ಮತ್ತು ಸಿಪಿಐ(ಎಂ) ಎರಡೂ ಪಕ್ಷಗಳು ಹೇಳುವ 'ಪ್ರಜಾಪ್ರಭುತ್ವ' ಕ್ರಾಂತಿ ಮತ್ತು 'ಸಮಾಜವಾದಿ' ಕ್ರಾಂತಿ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. 'ಭೂಮಿ ಮತ್ತು ಸ್ವಾತಂತ್ರ್ಯಕ್ಕಾಗಿನ ಹೋರಾಟವು ಪ್ರಜಾಪ್ರಭುತ್ವ ಚಳುವಳಿಯಾಗಿದ್ದರೆ, ಬಂಡವಾಳದ ಆಡಳಿತವನ್ನು ನಾಶ ಮಾಡುವುದಕ್ಕಾಗಿನ ಹೋರಾಟವು ಸಮಾಜವಾದಿ ಚಳುವಳಿಯಾಗಿದೆ (ಲೆನಿನ್ 1977: 43–44).

ಎರಡು ಕಮ್ಯುನಿಸ್ಟ್ ಪಕ್ಷಗಳ ನಡುವಿನ ಅತಿ ಮುಖ್ಯವಾದ ವ್ಯತ್ಯಾಸಗಳಲ್ಲಿ ಇನ್ನೊಂದು ಭಾರತೀಯ **ದೊಡ್ಡ ಬಂಡವಾಳದಾರರ ಪಾತ್ರಕ್ಕೆ** ಸಂಬಂಧಿಸಿದ್ದು. ದೊಡ್ಡ ಬಂಡವಾಳಶಾಹಿಯು ಭಾರತದ ಪ್ರಭುತ್ವದ ನಾಯಕತ್ವದಲ್ಲಿ ಇಲ್ಲ, ಅದು ಕೇವಲ ಬಲಿಷ್ಟ ಪ್ರಭಾವ ಹೊಂದಿದೆಯೆಂದು, ಜೊತೆಗೆ ಜಮೀನ್ದಾರಿಯೊಂದಿಗೆ ಬಲಿಷ್ಟವಾದ ಸಂಪರ್ಕಗಳನ್ನು ಹೊಂದಿದೆಯೆಂದು ಸಿಪಿಐ ಹೇಳಿತು. ಅಂದರೆ ಜಮೀನ್ದಾರಿ ವರ್ಗವು ಪ್ರಭುತ್ವದ ಭಾಗವಲ್ಲ ಎಂದು ವಿಶ್ಲೇಷಿಸಲಾಯಿತು. ಭಾರತದ ಪ್ರಭುತ್ವವು, ರಾಷ್ಟ್ರೀಯ ಬಂಡವಾಳದಾರರ ಪ್ರಭುತ್ವವಾದ್ದರಿಂದ, ಅದನ್ನು ದೊಡ್ಡ ಬಂಡವಾಳದಾರರು, ಸಾಮ್ರಾಜ್ಯಶಾಹಿಗಳು ಮತ್ತು ಜಮೀನ್ದಾರಿ ವರ್ಗಗಳ ವಿರುದ್ಧ ಪ್ರಗತಿಪರವಾದ ದಿಕ್ಕಿನಲ್ಲಿ ಕೊಂಡೊಯ್ಯುವ ಜವಾಬ್ದಾರಿಯನ್ನು ಕಾರ್ಮಿಕ ವರ್ಗದ ಮೇಲೆ ಇದು ಹೊರಿಸಿತು. ಈ ತಿಳುವಳಿಕೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರಕ್ಕೆ ಸಿಪಿಐನ ಬೆಂಬಲ ಮತ್ತು ಐಕ್ಯತೆಯ ಧೋರಣೆ ರೂಪುಗೊಂಡಿದೆ (ಸಿಪಿಐ(ಎಂ) 1969: 12). ಭಾರತದ ಪ್ರಭುತ್ವದ ಕುರಿತು 1956 ರ ನಂತರ ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿಯು ಹೊಂದಿದ್ದ ತಿಳುವಳಿಕೆಯಿಂದ ಸಿಪಿಐನ ಈ ವ್ಯಾಖ್ಯಾನ ಪ್ರಭಾವಿತಗೊಂಡಿದೆ.

ಸ್ವಾತಂತ್ರ್ಯಾ ನಂತರದಲ್ಲಿ ಪ್ರಭುತ್ವದ ಅಧಿಕಾರವನ್ನು ಹಿಡಿದ **ಬಂಡವಾಳಶಾಹಿ ವರ್ಗ ಅನುಸರಿಸಿದ ಅಭಿವೃದ್ಧಿ ಪಥ** ಯಾವುದೆಂಬುದು ಭಿನ್ನಾಭಿಪ್ರಾಯಗಳಿಗೆ ಮತ್ತೊಂದು ಕಾರಣವಾಗಿದೆ. ಪಂಚವಾರ್ಷಿಕ ಯೋಜನೆಗಳ ಹಾದಿಯನ್ನು ತುಳಿದ ಭಾರತದ ಆಳುವ ವರ್ಗಗಳು, ಸಮಾಜವಾದಿ ಮಾದರಿ ಸಮಾಜ ನಿರ್ಮಾಣ ಮಾಡುತ್ತಿರುವುದಾಗಿ ಅದಕ್ಕೆ ಹೆಸರನ್ನು ನೀಡಿದವು. 1955–56 ಕ್ಕೆ ಹಿಂದೆ ಪಂಚವಾರ್ಷಿಕ ಯೋಜನೆಗಳನ್ನು, ಸಾಮ್ರಾಜ್ಯಶಾಹಿಗಳ ನಿರ್ದೇಶನದ ಪ್ರಕಾರ ಅವರ ಜೊತೆಗೂಡಿ ಮಾಡುತ್ತಿರುವ ಯೋಜನೆಗಳೆಂದು ಸಿಪಿಐ ಅವನ್ನು ಜರಿದಿತ್ತು. ವಿದೇಶೀ ಸಂಸ್ಥೆಗಳು ಮತ್ತು ಅವರ ಸಲಹೆಗಾರರು, ಉನ್ನತ ಸ್ಥಾನಗಳಲ್ಲಿರುವ ಅಧಿಕಾರಶಾಹಿಗಳು ಮತ್ತು ಷೇರು ಮಾರುಕಟ್ಟೆಯಲ್ಲಿರುವ ದೊಡ್ಡ ಜೂಜುಕೋರರು ಸರ್ಕಾರದ ಬಜೆಟ್‌ನ್ನು ಲೂಟಿ ಮಾಡಲು ಒಂದು ಸಾಧನ ಎಂದು ಇವುಗಳನ್ನು ಟೀಕಿಸಲಾಗಿತ್ತು. ನಂತರದ ಕಾಲಘಟ್ಟದಲ್ಲಿ ಈ ತಿಳುವಳಿಕೆ ಎಡ–ತೀವ್ರವಾದದ ಫಲವೆಂದು ಅದನ್ನು ತಿದ್ದುಪಡಿ ಮಾಡುವ ಪ್ರಯತ್ನವನ್ನು ಮಾಡಲಾಯಿತು. ಈ ತಿಳುವಳಿಕೆ ಸರಿಯಾದುದಲ್ಲ ಎಂಬ ಚರ್ಚೆ ನಡೆಯಿತು. ಆದರೆ ಸಿಪಿಐನ ಎರಡು ಗುಂಪುಗಳ ನಡುವೆ ಒಮ್ಮತಾಭಿಪ್ರಾಯ ಬರಲಿಲ್ಲ. ಹೀಗಾಗಿ ಪಕ್ಷ ವಿಭಜನೆಯಾದ ನಂತರ ಸಿಪಿಐ ಮತ್ತು ಸಿಪಿಐ(ಎಂ) ಎರಡೂ ಪ್ರತ್ಯೇಕವಾದ ಅಂದಾಜುಗಳನ್ನು ಮಾಡಿದವು.

ಪ್ರಭುತ್ವದ ಅಧಿಕಾರವನ್ನು ಹೊಂದಿರುವ ರಾಷ್ಟ್ರೀಯ ಬಂಡವಾಳದಾರರು ದೇಶವನ್ನು 'ಸ್ವತಂತ್ರ' ಬಂಡವಾಳಶಾಹಿ ಬೆಳವಣಿಗೆಯ ಪಥದಲ್ಲಿ ನಡೆಸುವ ಗುರಿಯನ್ನು ಹೊಂದಿದ್ದಾರೆ ಎಂದು ಸಿಪಿಐ ವಿಶ್ಲೇಷಣೆ ಮಾಡಿತು[58]. ಇಂತಹ ಗುರಿಯಿಂದಾಗಿ ಕಾಂಗ್ರೆಸ್ ಸರ್ಕಾರಗಳು ಗಣನೀಯ ಪ್ರಮಾಣದಲ್ಲಿ ಪಾಳೇಗಾರಿ ಪಳೆಯುಳಿಕೆಗಳನ್ನು ನಾಶ ಮಾಡಿವೆ, ಸಾರ್ವಜನಿಕ ಉದ್ದಿಮೆಗಳು ರಾಷ್ಟ್ರೀಯ ಆರ್ಥಿಕತೆಯನ್ನು ಬೆಳೆಸಲು ಕಾರಣವಾಗಲಿವೆ ಮತ್ತು ವಿದೇಶೀ ಏಕಸ್ವಾಮ್ಯ ಬಂಡವಾಳದ ಹಿಡಿತವನ್ನು ದುರ್ಬಲಗೊಳಿಸಲಿವೆ ಎಂದೂ ಸಿಪಿಐ ವಿಮರ್ಶಿಸಿತು. ಒಟ್ಟಾರೆ ಇದರ ಸಾರಾಂಶವೇನೆಂದರೆ, ಪ್ರಭುತ್ವದ ಅಧಿಕಾರ ಇರುವುದು ರಾಷ್ಟ್ರೀಯ ಬಂಡವಾಳದಾರರ ಕೈಯಲ್ಲಿ. ಇವರು ಸ್ವತಂತ್ರ ಬಂಡವಾಳಶಾಹಿ ಪಥವನ್ನು ಮುನ್ನಡೆಸುತ್ತಿದ್ದಾರೆ. ಇವರ ಜೊತೆಯಲ್ಲಿ ರಾಷ್ಟ್ರೀಯ ಕಾರ್ಮಿಕ ವರ್ಗ ಕೈಜೋಡಿಸಬೇಕು. ರಾಷ್ಟ್ರೀಯ ಪ್ರಜಾಪ್ರಭುತ್ವವನ್ನು ಸಾಧಿಸಲು ಸಮಾಜವಾದಿ ನೆರವು ಅಗತ್ಯ[59] ಎಂದು ಹೇಳಿದ ಸಿಪಿಐ ಬಂಡವಾಳಶಾಹಿ ಬೆಳವಣಿಗೆಯ ಸಾಧ್ಯತೆಗಳನ್ನು ಅತಿಯಾಗಿ ಅಂದಾಜು ಮಾಡಿತು.

ಸ್ವಾತಂತ್ರ್ಯಾ ನಂತರದಲ್ಲಿ ದೊಡ್ಡ ಬಂಡವಾಳದಾರರು ಎರಡು ಗುಣಗಳನ್ನು ಅಳವಡಿಸಿಕೊಂಡರು. ಅವರು ಸಾಮ್ರಾಜ್ಯವಾದಿಗಳೊಂದಿಗೆ ಸಂಘರ್ಷ ಮತ್ತು ಹೊಂದಾಣಿಕೆಯ ಮಾರ್ಗವನ್ನು ಮತ್ತು ಜಮೀನ್ದಾರಿ ವರ್ಗಗಳೊಂದಿಗೆ ಸಹಯೋಗದ ಮಾರ್ಗವನ್ನು ಅಳವಡಿಸಿಕೊಂಡರೆಂದು ಸಿಪಿಐ(ಎಂ) ಅಂದಾಜು ಮಾಡಿತು. ಇಂತಹ ಒಂದು ಅಂದಾಜಿನಲ್ಲಿ ದೊಡ್ಡ ಬಂಡವಾಳದಾರರು ಒಂದು ನಿರ್ದಿಷ್ಟ ರೀತಿಯ ಬಂಡವಾಳಶಾಹಿ ಪಥವನ್ನು ಅನುಸರಿಸಿದರು. ದೊಡ್ಡ ಬಂಡವಾಳದಾರರು ಆರಂಭದಲ್ಲಿ ಅನುಸರಿಸಿದ ಬಂಡವಾಳಶಾಹಿ ಬೆಳವಣಿಗೆಯ ಪಥವನ್ನು ಅತಿಯಾಗಿ ಆಗಲೀ ಅಥವಾ ಕಡಿಮೆಯಾಗಿ ಆಗಲೀ ಅಂದಾಜು ಮಾಡಲಿಲ್ಲ ಎಂದು ಸಿಪಿಐ(ಎಂ) ಪ್ರತಿಪಾದಿಸಿತು.

ಇಂತಹುದೇ ಕಣ್ಣೋಟದಲ್ಲಿ ಭಾರತದ **ವಿದೇಶಾಂಗ ನೀತಿ**ಗೆ ಸಂಬಂಧಿಸಿದಂತೆ ಎರಡು ಕಮ್ಯುನಿಸ್ಟ್ ಪಕ್ಷಗಳು ಎರಡು ಭಿನ್ನ ನಿಲುವುಗಳನ್ನು ತೆಗೆದುಕೊಂಡವು. ಅಲಿಪ್ತ ನೀತಿಯನ್ನು (Non-Aligned Movement) ಸಾಮ್ರಾಜ್ಯಶಾಹಿ–ವಿರೋಧಿ, ವಸಾಹತು–ವಿರೋಧಿ ಮತ್ತು ಶಾಂತಿ ನೆಲೆಗಟ್ಟಿನ ನೈಜವಾದ ನೀತಿಯೆಂದು ಸಿಪಿಐ ಅಂದಾಜು ಮಾಡಿತು. ಮತ್ತೊಂದು ಕಡೆ, ಭಾರತದ ವಿದೇಶಾಂಗ ನೀತಿಯು ಭಾರತದ ದೊಡ್ಡ ಬಂಡವಾಳದಾರರ ದ್ವಿಮುಖ ಧೋರಣೆಯನ್ನು, ಅಂದರೆ ಸಾಮ್ರಾಜ್ಯಶಾಹಿಯೊಡನೆ ಸಂಘರ್ಷ ಮತ್ತು ಸಹಯೋಗದ ಗುಣವನ್ನು ಪ್ರತಿಬಿಂಬಿಸುತ್ತದೆ ಎಂದು ಸಿಪಿಐ(ಎಂ) ವ್ಯಾಖ್ಯಾನಿಸಿತು.

ಈ ರೀತಿಯಾಗಿ ಭಾರತದ ಕ್ರಾಂತಿಯ ಘಟ್ಟವನ್ನು ಅಂದಾಜು ಮಾಡುವುದರಿಂದ ಹಿಡಿದು, ಪ್ರಭುತ್ವದ ವ್ಯಾಖ್ಯಾನ, ದೊಡ್ಡ ಬಂಡವಾಳದಾರರ ಪಾತ್ರ, ಭಾರತದ ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಯ ವಿಧಾನ, ವಿದೇಶಾಂಗ ನೀತಿ, ಕ್ರಾಂತಿ ಮಾಡಬೇಕಾದ ವರ್ಗಗಳು ಮತ್ತು ಅವುಗಳ ಪಾತ್ರ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಪಾತ್ರ ಮತ್ತು ಅದರ ಕುರಿತು ಅಂದಾಜು, ಇತ್ಯಾದಿ ಅಂಶಗಳಲ್ಲಿ ಈ ಭಿನ್ನತೆಗಳು ಸ್ಪಷ್ಟವಾಗಿ ಕಾಣುತ್ತವೆ. ಸ್ವಾತಂತ್ರ್ಯ ಪೂರ್ವದಲ್ಲೇ ಈ ಭಿನ್ನತೆಗಳ ಬೀಜಗಳು ಹುಟ್ಟಿಕೊಂಡರೂ ಸಹ, ಸ್ವಾತಂತ್ರ್ಯಾ ನಂತರದಲ್ಲಿ

ಇವು ತೀವ್ರಗೊಂಡವು. ಸುಮಾರು ಹದಿನೇಳು ವರ್ಷಗಳ ಸುದೀರ್ಘ ಸೈದ್ಧಾಂತಿಕ ಸಂಘರ್ಷದ ನಂತರವೇ 1964 ರಲ್ಲಿ ವಿಭಜನೆಯಾದ ಕಮ್ಯುನಿಸ್ಟ್ ಪಕ್ಷವು ನಂತರದಲ್ಲಿ ಪ್ರತ್ಯೇಕವಾಗಿ ಸಿಪಿಐ ಮತ್ತು ಸಿಪಿಐ(ಎಂ) ಎಂಬ ಹೆಸರಿನಲ್ಲಿ ಕಾರ್ಯಕ್ರಮ ಎಂಬುದನ್ನು ಅಳವಡಿಸಿಕೊಂಡವು. ಸಿಪಿಐ ಸುಧಾರಣಾವಾದಿ ತಿಳುವಳಿಕೆಯನ್ನು ಹೊಂದಿದೆ ಎಂಬ ಕಾರಣಕ್ಕೆ ಅದರಿಂದ ಹೊರಬಂದವರು ಸ್ಥಾಪಿಸಿದ ಸಿಪಿಐ(ಎಂ) 1967–68 ರಲ್ಲಿ ವಿಭಜನೆಯನ್ನು ಕಂಡಿತು. ಸಿಪಿಐ(ಎಂ) ಬೇರ್ಪಡುವಾಗ ಅದನ್ನು ಎಡ–ಪಂಥೀಯ ಅಥವಾ ಎಡ–ತೀವ್ರವಾದಿ ಅಥವಾ ಚೀನಾ ಕಮ್ಯುನಿಸ್ಟ್ ಪಕ್ಷದ ಏಜೆಂಟರೆಂದು ಜರಿಯಲು ಕಾರಣವಾಗಿದ್ದ, ಅದರೊಳಗಿದ್ದ ಗುಂಪು ಅದೇ ಕಾರಣಗಳಿಗಾಗಿ ಸಿಡಿದು ಹೊರ ಬಂದಿತು. ಅದೇ ಮುಂದೆ ನಕ್ಸಲ್ ಅಥವಾ ಮಾವೋವಾದಿ ಕಮ್ಯುನಿಸ್ಟರೆಂದು ಕರೆಯಲ್ಪಡುವ ಗುಂಪಾಗಿದೆ. ಇದರ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ಮೇಲೆ ಚರ್ಚಿಸಲಾದ ವಿಚಾರಗಳಲ್ಲಿ ವ್ಯಕ್ತಿಗತವಾದ ಅಂಶಗಳೇನಿವೆ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ, ಬಹುತೇಕ ಯಾವುದರಲ್ಲೂ ವೈಯುಕ್ತಿಕ ಅಂಶಗಳು ಕಾಣುವುದಿಲ್ಲ. 2015 ರಲ್ಲಿ ಸಿಪಿಐ ತನ್ನ ಕಾರ್ಯಕ್ರಮವನ್ನು ನೂತನವಾಗಿ ಅಂಗೀಕರಿಸಿದೆ . ಈ ಕಾರ್ಯಕ್ರಮಕ್ಕೂ ಮತ್ತು ಅದರ ಆರಂಭದ ಕಾರ್ಯಕ್ರಮಕ್ಕೂ ಮೂಲಭೂತ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಇಲ್ಲಿ ವ್ಯಕ್ತಿಗತ ಅಂಶಗಳ ಬದಲಿಗೆ ಗುರುತಿಸಬಹುದಾದ ಒಂದಂಶವಿದೆ; ಅದೇನೆಂದರೆ, ಸೈದ್ಧಾಂತಿಕ ಭಿನ್ನತೆಗಳನ್ನು ವ್ಯಕ್ತಪಡಿಸುತ್ತಿದ್ದ ಕಮ್ಯುನಿಸ್ಟ್ ನಾಯಕರ ವಿಧಾನಗಳು, ಕೆಲವರು ಅನುಸರಿಸಿದ ಕಮ್ಯುನಿಸ್ಟ್ ವಿರೋಧಿಯೆನ್ನಬಹುದಾದ ನಡವಳಿಕೆಗಳು, ಶತ್ರುಗಳ ರೀತಿಯಲ್ಲಿ ಬಿಂಬಿಸಿಕೊಂಡ ಘಟನೆಗಳು, ಮುಂತಾದವುಗಳು ಹಲವಾರು ಬಾರಿ ವ್ಯಕ್ತಿಗತ ನೆಲೆಯಲ್ಲಿ ನೋಡುವಂತಹ ಅವಕಾಶಗಳನ್ನು ಸೃಷ್ಟಿಮಾಡಿವೆ.

ಕಮ್ಯುನಿಸ್ಟ್ ಪಕ್ಷದ ವಿಭಜನೆಯು ಕರ್ನಾಟಕದಲ್ಲಿ ಉಂಟುಮಾಡಿದ ಪರಿಣಾಮಗಳನ್ನು ಗಮನಿಸಬಹುದು. ಎರಡು ಕಮ್ಯುನಿಸ್ಟ್ ಪಕ್ಷಗಳು ಸ್ಥಾಪನೆಯಾಗುತ್ತಿದ್ದಂತೆ, ರಾಜ್ಯಗಳಲ್ಲಿ ಮತ್ತು ಕೆಳ ಮಟ್ಟಗಳಲ್ಲಿ ಅದರ ಪರಿಣಾಮ ತೀವ್ರಾವಾಗಿ ತಟ್ಟಿತು. ಒಟ್ಟೊಟ್ಟಿಗೆ ಕೆಲಸ ಮಾಡುತ್ತಿದ್ದ ಮುಖಂಡರು ಮತ್ತು ಕಾರ್ಯಾಕರ್ತರು ಈಗ ತಾವೆಲ್ಲಿ ಹೋಗಬೇಕು, ಯಾರ ಜೊತೆ ಗುರುತಿಸಿಕೊಳ್ಳಬೇಕು, ಯಾವ ಕಮ್ಯುನಿಸ್ಟ್ ಪಕ್ಷ ಸರಿ, ಯಾವುದು ತಪ್ಪು ಎಂಬ ಚರ್ಚೆಗಳು ಮತ್ತು ಸೈದ್ಧಾಂತಿಕ ಸಂಘರ್ಷಗಳಲ್ಲಿ ತೊಡಗುವಂತಾಯಿತು. ಪರಸ್ಪರ ಜೊತೆಯಾಗಿ ಕೆಲಸ ಮಾಡುತ್ತಿದ್ದವರು ಬೇರೆ ಬೇರೆಯಾಗಿ ಕೆಲಸ ಮಾಡುವ ಅನಿವಾರ್ಯತೆಗೆ ಒಳಗಾದರು. ಇದು ಕೇವಲ ವ್ಯಕ್ತಿಗಳಾಗಿ ಬೇರೆಯಾದರು ಎಂಬುದಕ್ಕಿಂತ, ಇಡೀ ಸಂಘಟನೆಗಳು, ಚಳುವಳಿಗಳು, ಹೋರಾಟಗಳು ವಿಭಜನೆಯಾದವು. ಅಖಿಲ ಭಾರತ ಮಟ್ಟದಲ್ಲಿ ಸ್ವಾತಂತ್ರ್ಯಾ ನಂತರ ತೀವ್ರವಾಗಿ ನಡೆಯಲಾರಂಭಿಸಿದ ಚರ್ಚೆಗಳು ಮತ್ತು ಭಿನ್ನಾಭಿಪ್ರಾಯಗಳು ಅದೇ ಕಾಲದಿಂದ ಮತ್ತು ಅಷ್ಟೇ ತೀವ್ರತೆಯಿಂದ ನಡೆದ ಬಗ್ಗೆ ಹೆಚ್ಚಿನ ಮಾಹಿತಿಗಳಿಲ್ಲ. ಆದರೆ ವಿಭಜನಾ ಪೂರ್ವ ಕೆಲ ವರ್ಷಗಳಲ್ಲಿ, ಮುಖ್ಯವಾಗಿ ಸಿಪಿಐನ ಆರನೇ ಮಹಾಧಿವೇಶನದ ನಂತರದಲ್ಲಿ ಇದರ ಪ್ರಭಾವ ಮತ್ತು ತೀವ್ರತೆ ಹೆಚ್ಚಾಗಿದೆ ಎನ್ನಬಹುದು. ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಐಕ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಎನ್.

ಎಲ್.ಉಪಾಧ್ಯಾಯ ಮತ್ತು ಬಿ.ವಿ.ಕಕ್ಕಿಲ್ಲಾಯರು ಹಲವಾರು ಜಿಲ್ಲೆಗಳಿಗೆ ಪ್ರವಾಸ ಮಾಡಿ ಪರಿಸ್ಥಿತಿಯನ್ನು ವಿವರಿಸುವ ಕೆಲಸ ಮಾಡಿದರು. ಕಕ್ಕಿಲ್ಲಾಯರು ರಾಷ್ಟ್ರೀಯ ಪ್ರಜಾಪ್ರಭುತ್ವದ ನಿಲುವನ್ನು ಪ್ರತಿಪಾದಿಸಿದರೆ, ಉಪಾಧ್ಯಾಯರು ಜನತಾ ಪ್ರಜಾಪ್ರಭುತ್ವದ ನಿಲುವನ್ನು ಪ್ರತಿಪಾದಿಸುತ್ತಿದ್ದರು. ಎಲ್ಲಿಯೂ ಐಕ್ಯತೆಯ ಪ್ರಶ್ನೆ ಮೂಡಲಿಲ್ಲ. ಹೀಗಾಗಿ ಕರ್ನಾಟಕದಲ್ಲೂ ಸಿಪಿಐ ಎರಡು ಹೋಳಾಯಿತು. 1964 ರ ಆಗಸ್ಟ್ 8 ರಿಂದ 10 ರವರೆಗೆ ಬೆಂಗಳೂರಿನಲ್ಲಿ ಸೇರಿದ್ದ ಕಮ್ಯುನಿಸ್ಟ್ ಪಕ್ಷದ ರಾಜ್ಯ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಎಂ.ಎಸ್.ಉಗ್ರಪ್ಪ, ಸಿಂಪ್ಸನ್ ಸೋನ್ಸ್ ಮತ್ತು ಎನ್.ಕೆ.ಉಪಾಧ್ಯಾಯ ವಹಿಸಿದ್ದರು. ಭಾಗವಹಿಸಿದ್ದ 21 ಸದಸ್ಯರ ಪೈಕಿ 12 ಸದಸ್ಯರು ಸಿಪಿಐ(ಎಂ) ಪಕ್ಷದ ಜೊತೆ ಗುರುತಿಸಿಕೊಳ್ಳಲು ಒಲವು ತೋರಿದರು. ಉಳಿದ 9 ಸದಸ್ಯರು[61] ಸಭಾತ್ಯಾಗ ಮಾಡಿದರು. ಈ 9 ಜನ ಪತ್ರಿಕಾ ಹೇಳಿಕೆ ನೀಡಿ ಸಿಪಿಐ(ಎಂ)ಗೆ ಒಲವು ತೋರಿದ ಸದಸ್ಯರು ಪಕ್ಷದ ಸದಸ್ಯತ್ವ ಕಳೆದುಕೊಂಡಿದ್ದಾರೆ ಎಂದು ಸಾರಿದರು (ಶಿರಿ 2003: 110) ಮತ್ತು ಎನ್.ಎಲ್.ಉಪಾಧ್ಯಾಯ ಅವರನ್ನು ಪಕ್ಷದ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕಿ ಅವರ ಸ್ಥಾನದಲ್ಲಿ ಬಿ.ವಿ.ಕಕ್ಕಿಲ್ಲಾಯ ಅವರನ್ನು ಚುನಾಯಿಸಿದರು[62]. ಎನ್.ಎಲ್.ಉಪಾಧ್ಯಾಯ, ಎ.ಕೃಷ್ಣಶೆಟ್ಟಿ, ಎಂ.ಹೆಚ್.ಕೃಷ್ಣಪ್ಪ, ಪಿ.ರಾಮಚಂದ್ರರಾವ್, ಎಸ್.ಸೂರ್ಯನಾರಾಯಣ ರಾವ್, ಎನ್.ಕೆ.ಉಪಾಧ್ಯಾಯ, ಎಂ.ಎಸ್. ಉಗ್ರಪ್ಪ, ಹೆಚ್.ಎಸ್.ರಾಮರಾವ್, ವಿ.ಎಂ.ಗೋವಿಂದನ್, ಬಿ.ಎನ್.ಕುಟ್ಟಪ್ಪ ಮುಂತಾದವರು ಸಿಪಿಐ(ಎಂ)ನಲ್ಲಿ ಉಳಿದರು.

ಕಮ್ಯುನಿಸ್ಟ್ ಪಕ್ಷದ ವಿಭಜನೆ ಅದರ ಹಲವಾರು ಮುಖಂಡರಲ್ಲಿ ಅತೀವವಾದ ನೋವನ್ನು ಮತ್ತು ಭಾವುಕತೆಯನ್ನು ಉಂಟು ಮಾಡಿರುವುದನ್ನು ಗಮನಿಸಬಹುದು. 'ಜೀವನದಲ್ಲಿ ನನಗೆ ದುಃಖವನ್ನು ತಾಳಲಾರದೆ ಎರಡು ಬಾರಿ ಅತ್ತಿದ್ದೇನೆ. ಒಂದು ಬಾರಿ ನನ್ನ ತಾಯಿ ತೀರಿಕೊಂಡಾಗ, ನಂತರ ಪಕ್ಷ ಒಡೆದಾಗ' ಎಂಬ ಸಿಂಪ್ಸನ್ ಸೋನ್ಸ್ ಅವರ ಮಾತುಗಳನ್ನು ಆ ಕಾಲಘಟ್ಟದ ಬಹುತೇಕ ಕಮ್ಯುನಿಸ್ಟರಿಗೆ ಅನ್ವಯಿಸಬಹುದು. ಹಲವಾರು ಜಿಲ್ಲೆಗಳಲ್ಲಿ ಬಲಿಷ್ಟವಾಗಿದ್ದ ಕಾರ್ಮಿಕ ಸಂಘಟನೆಗಳು ಮತ್ತು ಚಳುವಳಿಗಳು ನಷ್ಟ ಅನುಭವಿಸಿದವು.

ಕೊಡಗಿನಲ್ಲಿ 'ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಇದ್ದದ್ದು ಕಮ್ಯುನಿಸ್ಟ್ ಪಕ್ಷ ಮಾತ್ರ. ಭೂಸುಧಾರಣಾ ಹೋರಾಟಗಳು ಮತ್ತು ದುಡಿಯುವ ವರ್ಗದ ಪರವಾಗಿ ಕಮ್ಯುನಿಸ್ಟರ ಸಂಘಟನೆಗಳು ಪ್ರಬಲವಾದ ಹೋರಾಟ ನಡೆಸಿದವು. ಕಮ್ಯುನಸ್ಟ್ ಪಕ್ಷದ ವಿಭಜನೆ ಮತ್ತು ಎಮರ್ಜೆನ್ಸಿಯ ನಂತರ ಅವರ ಶಕ್ತಿ ಕುಸಿಯಿತು. ಇಲ್ಲದಿದ್ದರೆ ಜಿಲ್ಲೆಯ ಮೂರೂ ಕ್ಷೇತ್ರಗಳನ್ನು ಕಮ್ಯುನಿಸ್ಟರೇ ಹಿಡಿಯುತ್ತಿದ್ದರು' ಎಂಬ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ[63]. ಈ ಅಭಿಪ್ರಾಯ ಬಹುತೇಕ ಸಿಪಿಐ ಮತ್ತು ಸಿಪಿಐ(ಎಂ)ನ ನಾಯಕರು ವ್ಯಕ್ತಪಡಿಸುವುದನ್ನು ಕಾಣಬಹುದು[64].

ಕಮ್ಯುನಿಸ್ಟ್ ಪಕ್ಷದ ವಿಭಜನೆಯಿಂದ ತುರ್ತುಪರಿಸ್ಥಿತಿವರೆಗೆ : ವಿಭಜನೆಯ ನಂತರದ ನಾಲ್ಕೈದು ವರ್ಷಗಳು ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಂದಿಗ್ಧ ಕಾಲ. ವಿಭಜನೆಯ ನಿರಾಶೆ, ಅತೃಪ್ತಿ, ಬೇಸರುಗಳು ಕಾರ್ಯಕರ್ತರಲ್ಲಿ ಮನೆ ಮಾಡಿದವು. ಹೋರಾಟಗಳನ್ನು ನಡೆಸಬೇಕಾದ ಕಾಲಘಟ್ಟದಲ್ಲಿ ಒಂದು ರೀತಿಯ ಸೂತಕ

ಕಮ್ಯುನಿಸ್ಟ್ ಪಕ್ಷಗಳ ಮನೆ ಹೊಕ್ಕಿತ್ತು. ಯಾರು ಯಾರೊಂದಿಗಿದ್ದಾರೆ ಮತ್ತು ಯಾರೊಂದಿಗಿರಬೇಕು ಎಂಬ ಪ್ರಶ್ನೆಗಳು ಕೆಳ ಹಂತದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಿತು. ಎರಡು ಕಮ್ಯುನಿಸ್ಟ್ ಪಕ್ಷಗಳ ಮುಖಂಡರು ವಿವಿಧ ಜಿಲ್ಲೆಗಳಿಗೆ ಪ್ರವಾಸ ಮಾಡಿ ತಮ್ಮ ನಿಲುವುಗಳನ್ನು ವಿವರಣೆ ಮಾಡಲು ಪ್ರಯತ್ನಿಸಿದರು. ಈ ನಡುವೆ ಹಲವಾರು ಸಾಧಾರಣ ಕಾರ್ಯಕರ್ತರು ಕಮ್ಯುನಿಸ್ಟ್ ಪಕ್ಷಗಳಿಂದ ಹೊರ ಹೋದರು ಮತ್ತು ತಟಸ್ಥರಾದರು. ಸಿಪಿಐ(ಎಂ) ಜೊತೆ ಕಮ್ಯುನಿಸ್ಟ್ ಚಳುವಳಿಯ ಪ್ರಮುಖ ಜಿಲ್ಲೆಯಾಗಿದ್ದ ಕೋಲಾರ ಮತ್ತು ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಬಹುತೇಕರು ಉಳಿದುಕೊಂಡರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡೂ ಕಡೆ ಹಂಚಿಕೆಯಾದರು. ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಬಹುತೇಕ ಕಾರ್ಮಿಕ ಮುಖಂಡರು ಮತ್ತು ಬೆಳಗಾವಿಯ ಬಹುತೇಕ ಮುಖಂಡರು ಸಿಪಿಐನೊಂದಿಗೆ ಉಳಿದುಕೊಂಡರು. ಕೊಡಗು, ತುಮಕೂರು, ಮೈಸೂರು, ಚಿಕ್ಕಮಗಳೂರು, ಬಿಜಾಪುರ, ಗುಲ್ಬರ್ಗಾ, ಧಾರವಾಡ ಮುಂತಾದ ಜಿಲ್ಲೆಗಳಲ್ಲಿ ಸ್ವಲ್ಪ ಹೆಚ್ಚೋ ಕಡಿಮೆಯೋ ಎರಡೂ ಪಕ್ಷಗಳಲ್ಲಿ ಹಂಚಿಹೋದರು. ಯಾರ್‍ಯಾರು ಯಾವ ಪಕ್ಷಕ್ಕೆ ಹೋದರೆಂಬುದರ ಮೇಲೆ ಅವರಿದ್ದ ಸಮೂಹ ಸಂಘಟನೆಗಳ ಪ್ರಭಾವವೂ ಅವರಿಗೆ ಲಭ್ಯವಾಯಿತು. ಬಹುತೇಕ ಕಾರ್ಯಕರ್ತರು ಎಡ (ಇಂತು, ಸಿಪಿಐ(ಎಂ)) ಕಮ್ಯುನಿಸ್ಟ್ ಪಕ್ಷಕ್ಕೆ ಹೋದರು[65]. ಹೀಗೆ ತೀವ್ರವಾದ ಮಥನ ನಡೆದು, ಮುಖಂಡರ ವಿಶೇಷ ಪ್ರಯತ್ನಗಳಿಂದ ನಿಧಾನಕ್ಕೆ ಗರಿಗೆದರಿ ಹೊರಬಂದ ಸಿಪಿಐ ಮತ್ತು ಸಿಪಿಐ(ಎಂ)ನ ಚಟುವಟಿಕೆಗಳು ಪ್ರತ್ಯೇಕವಾಗಿ ನಡೆಯಲು ಆರಂಭವಾಯಿತು. ಧಾರವಾಡದಲ್ಲಿ 1971 ರಲ್ಲಿ ವಿ.ಎನ್.ಹಳಕಟ್ಟಿ, ಹದ್ಲಿ, ಯಡೂರು ಮಹಾಬಲ, ಬಿಜಾಪುರದ ದೇಸಾಯಿ, ಕಮ್ಮಾರ್, ಜಿ.ಎ.ಹಿರೇಮಠ್, ವೀರಣ್ಣ ಪಾಟೀಲ ಮುಂತಾದ ಗೆಳೆಯರು ಸೇರಿ 'ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್' ಆರಂಭಿಸಿದ್ದರು. ದಾಂಡೇಲಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಲು ಹೋಗಿ ಎಂ.ಕೆ.ಭಟ್ಟರ ಪರಿಚಯವಾದ ನಂತರ ಅವರ ಮುತುವರ್ಜಿಯಿಂದ ಇಡೀ ಮಾರ್ಕ್ಸಿಸ್ಟ್ ಸ್ಟಡಿ ಗುಂಪು 1973 ರಲ್ಲಿ ಸಿಪಿಐ(ಎಂ)ನ ಮೊದಲ ಶಾಖೆಯಾಯಿತು[66]. ಹೀಗೆ ಪ್ರಾರಂಭವಾದ ಚಟುವಟಿಕೆ ನಂತರ ರೈತಸಂಘ, ಕಾರ್ಮಿಕ ಸಂಘಗಳ ಚಟುವಟಿಕೆಗಳಾಗಿ ವಿಸ್ತಾರವಾದವು. 1975 ರಷ್ಟರಲ್ಲಿ ಸಿಪಿಐ(ಎಂ)ನ ನಾಲ್ಕು ಜಿಲ್ಲೆಗಳ ಪ್ರಾದೇಶಿಕ ಸಮಿತಿ ರಚನೆಯಾಗಿ ಅದಕ್ಕೆ ಹಳಕಟ್ಟಿ ಕಾರ್ಯದರ್ಶಿಯಾಗಿದ್ದರು.

ಇಂತಹ ಬೆಳವಣಿಗೆಗಳ ಆಧಾರದಲ್ಲಿ **ಸಮೂಹ ಸಂಘಟನೆಗಳ ವಿಭಜನೆ** ಆರಂಭವಾಯಿತು. ಸಿಪಿಐ ನಾಯಕತ್ವದಲ್ಲಿದ್ದ ಕಾರ್ಮಿಕ ಸಂಘಟನೆ ಎಐಟಿಯುಸಿಯಿಂದ ಪ್ರತ್ಯೇಕವಾಗಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಮತ್ತು ವಿದ್ಯಾರ್ಥಿ ಸಂಘಟನೆ ಎಐಎಸ್‌ಎಫ್‌ನಿಂದ ಪ್ರತ್ಯೇಕವಾಗಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸಂಘಟನೆಗಳು ಸಿಪಿಐ(ಎಂ)ನ ಮಾರ್ಗದರ್ಶನದಲ್ಲಿ 1970 ರಲ್ಲಿ ಸ್ಥಾಪನೆಯಾದವು. ರೈತ ಸಂಘಟನೆ ಎಐಕೆಎಸ್ ಹೆಸರಿನಲ್ಲೇ ಎರಡೂ ಪಕ್ಷಗಳು ಮುಂದುವರಿದವು. ಆದರೆ ಸಿಪಿಐ ನೇತೃತ್ವದ ಸಂಘವನ್ನು ಎಐಕೆಎಸ್ (ಅಜೊಯ್ ಭವನ್) ಎಂದು, ಸಿಪಿಐ(ಎಂ) ನೇತೃತ್ವದ ಸಂಘವನ್ನು ಎಐಕೆಎಸ್(ಎಕೆಜಿ ಭವನ್) ಎಂದು ಕರೆಯಲಾಯಿತು. 1954 ರಲ್ಲಿ ಆರಂಭವಾಗಿದ್ದ ಸಿಪಿಐ ಮಹಿಳಾ ಸಂಘಟನೆ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ (ಎನ್‌ಎಫ್‌ಐಡಬ್ಲ್ಯು) ನಿಂದ ಪ್ರತ್ಯೇಕವಾಗಿ ಸಿಪಿಐ(ಎಂ) ನೇತೃತ್ವದಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ವುಮೆನ್ಸ್ ಅಸೋಸಿಯೇಷನ್ (ಎಐಡಿಡಬ್ಲ್ಯುಎ) ಮತ್ತು 1959 ರಲ್ಲಿ

ಆರಂಭವಾಗಿದ್ದ ಆಲ್ ಇಂಡಿಯಾ ಯೂತ್ ಫೆಡರೇಷನ್ (ಎಐವೈಎಫ್) ನಿಂದ ಪ್ರತ್ಯೇಕವಾಗಿ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಡಿವೈಎಫ್ಐ) ಇವೆರೆಡೂ 1980 ರಲ್ಲಿ ಸ್ಥಾಪನೆಯಾಯಿತು. ಈ ರೀತಿಯಾಗಿ ಅಖಿಲ ಭಾರತ ಮಟ್ಟದಲ್ಲಿ ಸಮೂಹ ಸಂಘಟನೆಗಳ ವಿಭಜನೆ ನಡೆದು ಪ್ರತ್ಯೇಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ಎಲ್ಲಾ ಸಂಘಟನೆಗಳ ಕರ್ನಾಟಕ ರಾಜ್ಯ ಘಟಕಗಳು ಕ್ರಮೇಣ ಪ್ರಾರಂಭವಾದವು.

ಕಮ್ಯುನಿಸ್ಟ್ ಚಳುವಳಿಯಲ್ಲಿ ಮತ್ತೊಂದು ಎಡ–ಪಂಥೀಯ ವಿಭಜನೆ

ಅವಿಭಜಿತ ಸಿಪಿಐನಲ್ಲಿ ಭಿನ್ನಾಭಿಪ್ರಾಯಗಳು ಬೆಳೆದು ಕಾಂಗ್ರೆಸ್ ಪರವಾದ ಗುಂಪನ್ನು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪರವಾದವರೆಂದೂ, ಮತ್ತೊಂದು ಗುಂಪನ್ನು ಚೀನಾ ಕಮ್ಯುನಿಸ್ಟ್ ಪಕ್ಷದ ಪರವಾದವರೆಂದೂ ವಾದಿಸುತ್ತಿದ್ದುದನ್ನು ಗಮನಿಸಿದ್ದೇವೆ. ಸಿಪಿಐ(ಎಂ) ಪಕ್ಷವು ಚೀನಾ ಮಾದರಿ ಅನುಸರಿಸುತ್ತಿಲ್ಲವೆಂದು ಅರೋಪಿಸಿಕೊಂಡು ಅದರಿಂದ ವಿಭಜನೆಯಾಗಿ ಹೊರಬಂದ ಗುಂಪೇ ಮುಂದೆ ಸಿಪಿಐ(ಎಂ–ಎಲ್) ಪಕ್ಷವಾಗಿ ರೂಪುಗೊಂಡಿತು. ಈ ಪಕ್ಷದ ಅನುಯಾಯಿಗಳನ್ನೇ ಎಡ–ಪಂಥೀಯರು ಅಥವಾ ಮಾವೋವಾದಿಗಳು ಅಥವಾ ನಕ್ಸಲ್‌ವಾದಿಗಳೆಂದು ಕರೆಯಲಾಗಿದೆ. ನಕ್ಸಲ್‌ವಾದಿಗಳು ಎಂದು ಜನಪ್ರಿಯವಾಗಿ ಕರೆಯಲಾಗುವ ಹೆಸರು ವಾಸ್ತವದಲ್ಲಿ ಒಂದು ವಾದವಲ್ಲ. ನಕ್ಸಲ್‌ಬಾರಿ ಎಂಬುದು ಪಶ್ಚಿಮ ಬಂಗಾಲದಲ್ಲಿರುವ ಒಂದು ಹಳ್ಳಿಯ ಹೆಸರು. 1964 ರಲ್ಲಿ ಸಿಪಿಐ(ಎಂ) ಪಕ್ಷ ರಚನೆಯಾದ ನಂತರದಲ್ಲಿ ಅದರೊಳಗಿನ ಒಂದು ಗುಂಪು ಚೀನಾ ಮಾದರಿ ಅಥವಾ ಮಾವೋ ಮಾದರಿ ಎಂದುಕೊಂಡು ನಕ್ಸಲ್‌ಬಾರಿ ಹಳ್ಳಿಯಲ್ಲಿ ನಡೆಸಿದ ಗೆರಿಲ್ಲಾ ಮಾದರಿ ಕಾರ್ಯಾಚರಣೆಯ ಕಾರಣಕ್ಕಾಗಿ ಅದಕ್ಕೆ ಆ ಹೆಸರು ಬಂದಿದೆ. ಈ ತಾತ್ವಿಕ ನೆಲೆಗಟ್ಟಿನ ಕಮ್ಯುನಿಸ್ಟ್ ಗುಂಪುಗಳು ನಂತರದಲ್ಲಿ ಹತ್ತಾರು ಗುಂಪುಗಳಾಗಿ ವಿಭಜನೆಯಾಗಿವೆ. ಇದರಲ್ಲಿ ಪ್ರಮುಖವಾದ ಪಕ್ಷವಾಗಿ ಈಗಿರುವ ಸಿಪಿಐ(ಮಾವೋವಾದಿ) ಪಕ್ಷದ ಪ್ರಕಾರ, 'ಭಾರತದ ಪ್ರಸಕ್ತ ಪ್ರಭುತ್ವ ಯಂತ್ರವು, ಸಾಮ್ರಾಜ್ಯಶಾಹಿಗಳಿಗೆ ಸೇವೆ ಸಲ್ಲಿಸುತ್ತಿರುವ (ಗುಲಾಮರಾಗಿರುವ) ದಲ್ಲಾಳಿ ಅಧಿಕಾರಶಾಹಿ ಬಂಡವಾಳದಾರರು ಮತ್ತು ದೊಡ್ಡ ಜಮೀನ್ದಾರರ ವರ್ಗ ದಮನ, ವರ್ಗ ಶೋಷಣೆ ಮತ್ತು ವರ್ಗ ಆಳ್ವಿಕೆಯ ಸಾಧನವಾಗಿದೆ'. ಅಂದರೆ, ಭಾರತದ ಪ್ರಭುತ್ವ ಪೂರ್ತಿಯಾಗಿ ಸಾಮ್ರಾಜ್ಯಶಾಹಿಗಳಿಗೇ ಸೇವೆ ಸಲ್ಲಿಸುತ್ತಿರುವ ದಲ್ಲಾಳಿ ಅಧಿಕಾರಶಾಹಿ ಬಂಡವಾಳದಾರರು ಮತ್ತು ದೊಡ್ಡ ಜಮೀನ್ದಾರರ ಜಂಟಿ ಕೂಟವಾಗಿದೆ. ಭಾರತದ ಬಂಡವಾಳವರ್ಗವು ಸ್ವತಂತ್ರ ನೆಲೆಯಿಲ್ಲದ, ಅಮೇರಿಕ ಸಾಮ್ರಾಜ್ಯಶಾಹಿಯ ದಲ್ಲಾಳಿ ವರ್ಗವಾಗಿರುವುದರಿಂದ, ಈ ಎರಡೂ ವರ್ಗಗಳ ವಿರುದ್ಧ ಇಡೀ ದೇಶದ ಜನತೆ ಒಟ್ಟಾಗಿ ಕ್ರಾಂತಿ ಮಾಡುವುದೇ ಈ ಕಾಲಘಟ್ಟದ ಪ್ರಧಾನ ವೈರುಧ್ಯವೆಂದು ವಿಶ್ಲೇಷಿಸುತ್ತದೆ (ಸಿಪಿಐ(ಎಂ) 1969: 11–12).

ಮಾವೋವಾದಿಗಳು ಭಾರತದ ದೊಡ್ಡ ಬಂಡವಾಳಶಾಹಿಯನ್ನು **ದಲ್ಲಾಳಿ** ಎಂದು ಕರೆಯುತ್ತಾರೆ. ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯಲ್ಲಿ ಈ ದಲ್ಲಾಳಿ ಶಬ್ದಕ್ಕೆ ವಿಶೇಷ ಅರ್ಥವಿದೆ ಮತ್ತು ಸ್ಪಷ್ಟ ವಿವರಣೆಯೂ ಇದೆ. ವಸಾಹತು ಮತ್ತು ಅರೆ–ವಸಾಹತು ದೇಶಗಳು ವ್ಯಾಪಕವಾಗಿದ್ದ ಕಾಲಘಟ್ಟದಲ್ಲಿ ಬಂಡವಾಳಶಾಹಿ ಇನ್ನೂ ಆರಂಭಿಕ ಹಂತದಲ್ಲಿದ್ದಾಗ ಅಂತಹ ಬಂಡವಾಳವನ್ನು ವಿವರಿಸಲು ಕಮ್ಯುನಿಸ್ಟ್ ಅಂತರರಾಷ್ಟ್ರೀಯವು

ದಲ್ಲಾಳಿ[67] (comprodor) ಶಬ್ದವನ್ನು ಬಳಸಿತ್ತು. ಭಾರತದಲ್ಲಿನ ಬೆಳೆಯುತ್ತಿರುವ ವರ್ಗ ಕ್ರಾಂತಿಯ ಭಯದಿಂದ, ಭಾರತದ ದೊಡ್ಡ ಮತ್ತು ದೊಡ್ಡದಲ್ಲದ ಬಂಡವಾಳಶಾಹಿ ವರ್ಗವು ಇಡಿಯಾಗಿ ಸಾಮ್ರಾಜ್ಯಶಾಹಿಯ ಜೊತೆಯಲ್ಲಿದೆ. ಅದು ಬ್ರಿಟಿಷ್ ಸಾಮ್ರಾಜ್ಯಶಾಹಿಯ ದಲ್ಲಾಳಿಯಾಗಿದೆ. ಆದ್ದರಿಂದ, ವಿದೇಶೀ ಸಾಮ್ರಾಜ್ಯಶಾಹಿ ಬಂಡವಾಳದೊಂದಿಗೆ ಅದಕ್ಕೆ ಯಾವುದೇ ವೈರುಧ್ಯವಿಲ್ಲ ಎಂದಾಗಿದೆ. ಹೀಗಾಗಿ ಸಾಮ್ರಾಜ್ಯಶಾಹಿ ಮತ್ತು ಅದರ ಭಾರತದ ಬಾಲಬಡುಕ ಬಂಡವಾಳಶಾಹಿಯ ವಿರುದ್ಧ ಇಡೀ ಭಾರತದ ಜನತೆಯ ರಾಷ್ಟ್ರೀಯ ಐಕ್ಯತಾ ರಂಗದ ಹೋರಾಟವನ್ನು ಎಡ–ತೀವ್ರವಾದಿಗಳು ಪ್ರತಿಪಾದಿಸಿದರು. ಇದನ್ನೇ ಅವರು ರಾಷ್ಟ್ರೀಯ ವಿಮೋಚನಾ ಯುದ್ಧ (National Liberation War) ಎಂದು ಕರೆದರು (ಸಿಪಿಐ(ಎಂ) 1969: 13).

ಬಂಡವಾಳಶಾಹಿ ಆರ್ಥಿಕ ಬೆಳವಣಿಗೆ ಪಥದ ಕುರಿತು ವ್ಯಾಖ್ಯಾನಿಸುತ್ತಾ, ಭಾರತದಲ್ಲಿ ಬಂಡವಾಳಶಾಹಿವರ್ಗ ಸ್ವತಂತ್ರವಲ್ಲದ್ದರಿಂದ, ಮಹತ್ವವಾದ ಬಂಡವಾಳಶಾಹಿ ಆರ್ಥಿಕತೆಯಾಗಲೀ ಮತ್ತು ಅದರ ಸಂಬಂಧಗಳಾಗಲೀ ಬೆಳವಣಿಗೆಯಾಗಿಲ್ಲ ಎಂದು ಎಡ–ತೀವ್ರವಾದಿಗಳ ಗುಂಪು ಪ್ರತಿಪಾದಿಸಿತು. ಏನೇ ಬೆಳವಣಿಗೆ ಆಗಿದ್ದರೂ ಅದು ವಿದೇಶೀ ಏಕಸ್ವಾಮ್ಯ ಬಂಡವಾಳದ ಹಿಡಿತ ಮತ್ತು ಪಾಳೇಗಾರಿ ಮತ್ತು ಅರೆ–ಪಾಳೇಗಾರಿ ಭೂ ಸಂಬಂಧಗಳ ಕ್ರೋಢೀಕರಣವಷ್ಟೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಹಾಗೆಯೇ ಈಗಲೂ ದೊಡ್ಡ ಬಂಡವಾಳದಾರರ ಪರಿಸ್ಥಿತಿ ಇದೆ ಎಂಬುದು ಇದರರ್ಥ[68]. ಇದು ಸಹಜವಾಗಿಯೇ, ಭಾರತದ ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಯನ್ನು ತೀರಾ ಕಡಿಮೆ ಅಂದಾಜು ಮಾಡಿತು. ಮುಂದುವರಿದು, ಬಂಡವಾಳಶಾಹಿ ಬೆಳವಣಿಗೆಗೆ ಸಮಾಜವಾದಿ ನೆರವು ಅಗತ್ಯವೆಂದು ಹೇಳಿದ ಸಿಪಿಐನ ಕಾರ್ಯಕ್ರಮದ ತಿಳುವಳಿಕೆಗೆ ಸಂಪೂರ್ಣ ವಿರುದ್ಧವಾಗಿ ಎಡ–ತೀವ್ರವಾದಿಗಳು, ಅಮೇರಿಕನ್ ಬಂಡವಾಳ ಹರಿದು ಬರುವುದೇ ಸೋವಿಯತ್ ನೆರವಿನ ಮೂಲಕ ಎಂದು ಅಂದಾಜು ಮಾಡಿತು. ಸೋವಿಯತ್ ನೆರವು ಎಂಬುದು ಚೀನಾ ಜನತಾ ಗಣರಾಜ್ಯದ ವಿರುದ್ಧ ಪ್ರತಿಗಾಮಿ ಸರ್ಕಾರಗಳನ್ನು ತಡೆಗೋಡೆಯಾಗಿ ಹುಟ್ಟುಹಾಕಲು ಬರುತ್ತಿರುವ ನೆರವು ಎಂದು ಅಂದಾಜು ಮಾಡಿತು. ಸಾರ್ವಜನಿಕ ಉದ್ದಿಮೆಗಳೂ ಸಹ ಸಾಮ್ರಾಜ್ಯವಾದಿಗಳಿಗೆ ವಿಧೇಯರಾಗುವ ಸಾಧನ ಎಂದು ಇವರು ಬಣ್ಣಿಸಿದರು.

ವಿದೇಶಾಂಗ ನೀತಿಗೆ ಸಂಬಂಧಿಸಿ, ಭಾರತದ ಅಲಿಪ್ತ ನೀತಿಯನ್ನು ಸಂಪೂರ್ಣವಾಗಿ ನಿರಾಕರಿಸುವ ಧೋರಣೆಯನ್ನು ಇವರು ಅನುಸರಿಸಿದರು. ಅಲಿಪ್ತ ನೀತಿಯೆಂಬುದು ಒಂದು ಮಿಥ್ಯೆ ಎಂದು, ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ದಮನ ಮಾಡುವ ಅಮೇರಿಕನ್ ಸಾಮ್ರಾಜ್ಯವಾದಿಗಳ ಜಾಗತಿಕ ವ್ಯೂಹದ ಭಾಗವಾಗಿರುವ ಒಂದು ವಂಚನೆಯ ಅಂಶವೆಂದು ಪರಿಗಣಿಸಿದರು. ಭಾರತದ ಪ್ರಭುತ್ವವು ಅರೆ–ಪಾಳೆಗಾರಿ, ಅರೆ–ವಸಾಹತು ಆಗಿರುವುದರಿಂದ ಸಾಮ್ರಾಜ್ಯಶಾಹಿ ಆಳ್ವಿಕೆ ಮುಂದುವರೆದಿದೆ. ಆದ್ದರಿಂದ ರಾಷ್ಟ್ರೀಯ ವಿಮೋಚನಾ ಕ್ರಾಂತಿ ಇನ್ನೂ ಮುಕ್ತಾಯವಾಗಿಲ್ಲ. ಹೀಗಾಗಿಯೇ ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಯ ಘಟ್ಟವು ಮುಂದುವರೆದಿದೆ. ಈ ಕ್ರಾಂತಿಯ ಘಟ್ಟವನ್ನು ಸಾಧಿಸಲು ಸಶಸ್ತ್ರ ಕ್ರಾಂತಿಯ ದಾರಿಯನ್ನು ಅನುಸರಿಸಬೇಕು ಎಂಬುದು ಮಾವೋವಾದಿಗಳ ನಿಲುವಾಗಿದೆ.

ಕಮ್ಯುನಿಸ್ಟ್ ಚಳುವಳಿಯೊಳಗೊಂದು ಇಂತಹ ಕವಲು ಒಡೆದು 1969 ರ ಮೇ ತಿಂಗಳಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ–ಲೆನಿನ್‌ವಾದಿ) ಪಾರ್ಟಿ ಸ್ಥಾಪನೆಯಾಯಿತು. ಅದು ಎಂ.ಎಲ್. ಪಾರ್ಟಿ ಎಂದು ಹೆಚ್ಚು ಪರಿಚಿತವಾಗಿದೆ. ಇದರ ಪರಿಣಾಮ ಮುಖ್ಯವಾಗಿ ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ಪಂಜಾಬ್, ತಮಿಳುನಾಡು, ಕೇರಳ, ಉತ್ತರ ಪ್ರದೇಶ, ಬಿಹಾರ ಮುಂತಾದ ಕಡೆಗಳಲ್ಲಿ ಸಂಭವಿಸಿತು. ಕರ್ನಾಟಕದಲ್ಲಿ ಇದರ ಪರಿಣಾಮ ಒಂದು ದಶಕದ ನಂತರ ಆರಂಭವಾಯಿತು.

ಸಿಪಿಐ(ಎಂ)ನೊಳಗೆ ನಡೆಯುತ್ತಿದ್ದ ಎಡ–ತೀವ್ರವಾದದ ತಿಕ್ಕಾಟವು 1978 ರಲ್ಲಿ ಎಂ.ಹೆಚ್.ಕೃಷ್ಣಪ್ಪ, ಬಿ.ಎನ್. ಕುಟ್ಟಪ್ಪ, ಬಿ.ಎನ್.ವೆಂಕಟರಮಣ, ಹೆಚ್.ಎಸ್.ರಾಮರಾವ್ ಮುಂತಾದವರನ್ನು ಆ ಪಕ್ಷದಿಂದ ಹೊರಹಾಕುವುದರಲ್ಲಿ ಪರ್ಯಾವಸಾನವಾಯಿತು. ಎಡ–ತೀವ್ರವಾದದ ಸಶಸ್ತ್ರ ಕ್ರಾಂತಿಯ ಪ್ರಭಾವ ಹೇಗಿತ್ತು ಹೇಗಿತ್ತು ಎಂಬುದಕ್ಕೆ ಈ ಪ್ರಕರಣವನ್ನು ಗಮನಿಸಬಹುದು. 1968–69 ರ ಸುಮಾರಿಗೆ ತೀರ್ಥಹಳ್ಳಿಯ ಕಸಬಾ ಮತ್ತು ಆಗುಂಬೆ ಹೋಬಳಿಗಳಲ್ಲಿ ಕಮ್ಯುನಿಸ್ಟರು ಪ್ರಬಲವಾಗಿದ್ದರು[69]. ಪ್ರತಿ ಹೋಬಳಿಯಲ್ಲಿ ಸಿಪಿಐ(ಎಂ)ನ ಘಟಕಗಳಿದ್ದವು. ಇವನ್ನು ಗಟ್ಟಿಗೊಳಿಸಲು ರಾಜ್ಯ ಮಟ್ಟದ ತರಬೇತಿ ಶಾಲೆಯನ್ನು 1969 ರಲ್ಲಿ ಒಂದು ವಾರ ಕಾಲ ಇಲ್ಲಿ ನಡೆಸಲಾಗಿತ್ತು. ಬಿ.ಎನ್. ಕುಟ್ಟಪ್ಪ, ಪಿ.ರಾಮಚಂದ್ರರಾವ್ ಮತ್ತಿತರರು ತರಗತಿಗಳನ್ನು ನೀಡಿದರು. ಕೊನೆಯ ದಿನ ಕವಲೆದುರ್ಗ ಕೋಟೆಯಲ್ಲಿ ಶಿಬಿರಾರ್ಥಿಗಳಿಗೆ ಬಂದೂಕು ತರಬೇತಿ ನೀಡಲಾಯಿತು. ಎಂ.ಹೆಚ್.ಕೃಷ್ಣಪ್ಪ ತರಬೇತಿಯನ್ನು ನೀಡಿದರು. ಇದರ ಜಾಡನ್ನು ಹಿಡಿದ ಪತ್ರಿಕೆಗಳು 'ತೀರ್ಥಹಳ್ಳಿಯಲ್ಲಿ ನಕ್ಸಲರು' ಎಂದು ಸುದ್ದಿ ಮಾಡಿದವು .

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ.ಹೆಚ್.ಕೃಷ್ಣಪ್ಪನವರು ಅದರಿಂದ ಉಚ್ಚಾಟನೆಗೊಂಡ ಬಳಿಕ ತಮ್ಮ ಕೆಲವು ಆಪ್ತರೊಂದಿಗೆ ಸೇರಿ 1978 ರ ನವೆಂಬರ್ 12–13 ರಂದು ಬೆಂಗಳೂರಿನಲ್ಲಿ ಸಮಾವೇಶವನ್ನು ನಡೆಸಿ **ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ** ಸ್ಥಾಪನೆ ಮಾಡಿದರು. ನಂತರ ಇವರು ವಿವಿಧ ನಕ್ಸಲ್ ಗುಂಪುಗಳೊಡನೆ ಸಂಪರ್ಕವನ್ನು ಬೆಳೆಸಿದರು. ಆದರೆ ರಾಜ್ಯದಲ್ಲಿ ಅದು ನೆಲೆ ಕಾಣಲಿಲ್ಲ (ಶ್ರೀಯಾನ್ 2017: 107). ಆದರೆ 1978 ರಲ್ಲಿ ಇವರನ್ನೆಲ್ಲಾ ಹೊರಹಾಕಿದ ಮೇಲೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಿಪಿಐ(ಎಂ)ನ ಬೆಂಬಲಕ್ಕೆ ಸಾಕಷ್ಟು ಹೊಡೆತ ಬಿತ್ತು. ಬಹಳ ಮುಖ್ಯವಾಗಿ ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಗಣನೀಯವಾಗಿ ಮುಖಂಡರು ಹೊರಹಾಕಲ್ಪಟ್ಟರು. ಅವರನ್ನು ಅನುಸರಿಸಿ ಹಲವಾರು ಜಿಲ್ಲಾ ಮಟ್ಟದ ಕಾರ್ಯಕರ್ತರು ಹೊರ ನಡೆದರು. ಕೊಡಗು ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷ ಬಹುತೇಕ ತನ್ನ ನೆಲೆ ಕಳೆದುಕೊಂಡಿತು. ಕೃಷ್ಣಪ್ಪನವರ ಚಟುವಟಿಕೆಗಳಲ್ಲಿ ಎಡ ತೀವ್ರವಾದದ ಲಕ್ಷಣಗಳು ಕಾಣಿಸುತ್ತಿದ್ದವಾದರೂ, ಅದು ನಕ್ಸಲ್‌ವಾದಿ ಸಂಘಟನೆಯಾಗಿ ಬೆಳೆದಿರಲಿಲ್ಲ. ಇದಕ್ಕೆ ಬಹಳ ಮುಖ್ಯವಾಗಿ ಇವರು ಸಾಮೂಹಗಳ ನಡುವಿನ ಕೆಲಸದಲ್ಲಿ ನಂಬಿಕೆಯಿಟ್ಟಿದ್ದು ಒಂದು ಪ್ರಮುಖ ಕಾರಣವಾಗಿತ್ತು. ಹೀಗಾಗಿ ದೇಶದ ಇತರೆಡೆಗಳಲ್ಲಿ 1960 ರ ದಶಕದ ಉತ್ತರಾರ್ಧದಲ್ಲಿ ನಕ್ಸಲ್ ಅಥವಾ ಮಾವೋವಾದಿ ಚಳುವಳಿ ಹುಟ್ಟಿದರೂ ಕರ್ನಾಟಕದಲ್ಲಿ ಆ ಸಂದರ್ಭದಲ್ಲಿ ಅಂತಹ ಬೆಳವಣಿಗೆ ಕಂಡು ಬರುವುದಿಲ್ಲ.

1980 ರ ದಶಕದ ಮಧ್ಯಭಾಗದಿಂದ ನಕ್ಸಲ್‌ವಾದಿ ಚಟುವಟಿಕೆಗಳು ಕರ್ನಾಟಕದಲ್ಲಿ ಆರಂಭವಾಗಿದೆ. ಮೊದಲು ಬೀದರ್ ನಂತರ ರಾಯಚೂರು ಜಿಲ್ಲೆ ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆಯ ಆರಂಭ ಬಿಂದುಗಳಾಗಿವೆ. ನಂತರ ಅದು ಬೆಂಗಳೂರು, ಮೈಸೂರು, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಿಗೆ ವಿಸ್ತರಿಸಿತು. ಪ್ರಧಾನವಾಗಿ ಪ್ರಚಾರ ಸ್ವರೂಪದ ಚಟುವಟಿಕೆಗಳಾಗಿ ಶುರುವಾದವು. 1985 ರ ಹೊತ್ತಿಗೆ ಚಿತ್ರದುರ್ಗದ ಸುತ್ತಮುತ್ತ ರಾ. ಪ್ರಭಾಕರ್, ಬೆಂಗಳೂರಿನಲ್ಲಿ ವೀರಮಣಿ, ಮೈಸೂರು ಹಾಗೂ ಶಿವಮೊಗ್ಗದಲ್ಲಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯದಲ್ಲಿ ಸಾಕೇತ್ ರಾಜನ್ ಚಟುವಟಿಕೆ ನಡೆಸುತ್ತಿದ್ದರು. ವಿದ್ಯಾರ್ಥಿ ಯುವಜನರ ನಡುವೆ ಇವರು ಮಂಡಿಸುತ್ತಿದ್ದ ವಾದಗಳು ಸಾಕಷ್ಟು ಜನರ ಗಮನ ಸೆಳೆದವು (ಮಂಜುನಾಥ ಅದ್ದೆ 2009: 62–63). ಕಾರ್ಯಕರ್ತರನ್ನು ತಯಾರು ಮಾಡಲು ತರಬೇತಿ ಶಿಬಿರಗಳಿಗೆ ಆದ್ಯತೆ ನೀಡಿದರು. ತರಗತಿಗಳನ್ನು ನೀಡಲು ಆಂಧ್ರಪ್ರದೇಶದ ವಿಪ್ಲವ ರಚಯಿತುಲ ಸಂಘಂ (ವಿರಸಂ)ನ ಕಾರ್ಯದರ್ಶಿ ಕೆ.ವಿ.ರಮಣರೆಡ್ಡಿ ಮತ್ತು ರ್‍ಯಾಡಿಕಲ್ ಸ್ಟೂಡೆಂಟ್ಸ್ ಯೂನಿಯನ್ (ಆರ್‌ಎಸ್‌ಯು) ಪದಾಧಿಕಾರಿಗಳು ಬಂದು ಹೋಗುತ್ತಿದ್ದರು. ಮೊದಮೊದಲಗೆ ಆಂಧ್ರದ ಗಡಿಗೆ ಹೊಂದಿಕೊಂಡಿದ್ದ ಪ್ರದೇಶಗಳ ಕೆಲವು ಭಾಗಗಳಿಗೆ ಸೇರಿದವರಷ್ಟೇ ನಕ್ಸಲ್ ಚಳುವಳಿಯ ಭಾಗವಾಗಿದ್ದರು. ನಂತರ ಕರ್ನಾಟಕದಲ್ಲಿ ಸ್ವತಂತ್ರವಾಗಿ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳನ್ನು ಸ್ಥಾಪಿಸಿ ವಿಸ್ತರಿಸಲು ಯೋಜಿಸಿದರು. ಈ ರೀತಿಯಾಗಿ 1985 ರಲ್ಲಿ ಪ್ರಗತಿಪರ ವಿದ್ಯಾರ್ಥಿ ಕೇಂದ್ರ (ಪಿವಿಕೆ) ಮತ್ತು ಪ್ರಗತಿಪರ ಯುವಜನ ಸಂಘ (ಪಿವೈಸಿ) ಸ್ಥಾಪನೆಯಾದವು. ಪಿವಿಕೆ ನಾಯಕರಾಗಿ ಸಾಕೇತ್ ರಾಜನ್ ಜನವಿಮುಕ್ತಿ ಎಂಬ ಪತ್ರಿಕೆಯ ಮೂಲಕ ವಿದ್ಯಾಥಿಗಳಲ್ಲಿ 'ಸ್ವತಂತ್ರ ಭಾರತದಲ್ಲಿ ಸಮೃದ್ಧ ಕರ್ನಾಟಕ ಕಟ್ಟೋಣ' ಎಂಬ ವಿಚಾರಗಳನ್ನು ಬಿತ್ತಲು ಪ್ರಯತ್ನಿಸಿದರು. ಪಿವೈಸಿ ಮೂಲಕ ಯುವಜನರನ್ನು ಬಳಸಿ 'ಕರ್ನಾಟಕ ಜನ ಕಲಾ ಮಂಡಳಿ'ಯನ್ನು ಸ್ಥಾಪಿಸಿದರು. ಇಲ್ಲಿನ ಕಲಾ ತಂಡಗಳನ್ನು ರೂಪಿಸಲು ಆಂಧ್ರದ ಗದ್ದರ್ ಸೇರಿದಂತೆ ಅಲ್ಲಿನ 'ಜನ ನಾಟ್ಯ ಮಂಡಳಿ'ಯ ಹಲವಾರು ಜನ ಬಂದು ತರಬೇತಿ ನೀಡಿದರು. ಕೆಲವು ಜಿಲ್ಲೆಗಳಲ್ಲಿ ಹಲವಾರು ಹಿಂದುಳಿದ ದಲಿತ ಯುವಜನರು ಈ ಸಂಘಟನೆಗಳ ಜತೆಗೆ ಬಂದರು. ಆದರೂ ಜನಬೆಂಬಲವೇನೂ ಹೆಚ್ಚಾಗಲಿಲ್ಲ. ಆಗ 'ಕರ್ನಾಟಕ ವಿಮೋಚನಾ ರಂಗ' (ಕೆವಿಆರ್) ಎಂಬ ಮತ್ತೊಂದು ಸಂಘಟನೆಯನ್ನು 1989 ರಲ್ಲಿ ಆರಂಭಿಸಿದರು. ಇದರ ಮುಖಂಡರಾಗಿ ಬಂಜಗೆರೆ ಜಯಪ್ರಕಾಶ್ ಮತ್ತು ಜಾಣಗೆರೆ ವೆಂಕಟರಾಮಯ್ಯ ಇದ್ದರು. ನಂತರ ಜಾಣಗೆರೆ ಇದರಿಂದ ದೂರವಾದರು. ದುಡಿಯುವ ಜನರ ವಿಮೋಚನೆ, ಸಮಾನತೆ, ಸಂಪತ್ತಿನ ಹಂಚಿಕೆ, ಸಾಮ್ರಾಜ್ಯಶಾಹಿ ವಿರೋಧ, ಸ್ವಾಭಿಮಾನಿ ಕರ್ನಾಟಕದ ನಿರ್ಮಾಣದಂತಹ ಘೋಷಣೆಗಳೊಂದಿಗೆ ಹೆಚ್ಚು ಜನರನ್ನು ತಲುಪುವ ಕೆಲಸಕ್ಕೆ ಕೆವಿಆರ್ ಮುಂದಾಯಿತು. ಕೆವಿಆರ್ 'ಸ್ವತಂತ್ರ ಕರ್ನಾಟಕ' ಎಂಬ ಪತ್ರಿಕೆಯನ್ನು ಪ್ರಕಟಿಸಿತು. ಇದರ ಹಿಂದೆಯೇ 'ಮಹಿಳಾ ಜಾಗೃತಿ'ಯನ್ನು ಆರಂಭಿಸಲಾಯಿತು. ಕೃಷಿಕೂಲಿಗಾರರ ನಡುವೆ ಕೆಲಸ ಮಾಡಲು 'ರೈತ ಕೂಲಿ ಸಂಘ' ಆರಂಭವಾಯಿತು. ಈ ರೀತಿಯಾಗಿ ವಿವಿಧ ಸಂಘಟನೆಗಳನ್ನು[71] ಆರಂಭ ಮಾಡಿದ ನಕ್ಸಲ್ ಗುಂಪುಗಳು ರಾಜ್ಯದ ಕೆಲವು ಪ್ರಶ್ನೆಗಳನ್ನು ಕೈಗೆತ್ತಿಕೊಂಡವು. ಕೈಗಾ ಅಣುಸ್ಥಾವರ, ಬೀದರ್‌ನ ಕೋಳಂಬ ಕೆಮಿಕಲ್ ಕೈಗಾರಿಕೆ ಮಾಲಿನ್ಯ, ಬಿಡದಿ–ಮೈಸೂರು ನಡುವಿನ

ಜಪಾನ್ ಟೌನ್‌ಶಿಪ್, ತುಂಗಾ ಮೂಲ ಮುಂತಾದ ಹೋರಾಟಗಳನ್ನು ಕೆವಿಆರ್‌ನ ನೇತೃತ್ವದಲ್ಲಿ ನಡೆಸಿದರು (ಮಂಜುನಾಥ ಅದ್ದೆ 2009: 64–65). ಇಂತಹ ಹೋರಾಟಗಳ ಸಂದರ್ಭದಲ್ಲಿ ಕರ್ನಾಟಕದ ಬುದ್ದಿಜೀವಿ ಮತ್ತು ಶೈಕ್ಷಣಿಕ ವಲಯದ ಒಂದು ವಲಯದಿಂದ ನಿರೀಕ್ಷೆಗಿಂತ ಹೆಚ್ಚಿನ ಬೆಂಬಲವನ್ನು ಪಡೆದುಕೊಂಡರು. ಇಂತಹ ಬೆಂಬಲ ಪಡೆಯಲು 'ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ'ವನ್ನು ಆರಂಭಿಸಲಾಗಿತ್ತು. ಕರ್ನಾಟಕದಲ್ಲಿ ಸಾಂಪ್ರದಾಯಿಕ ಕಮ್ಯುನಿಸ್ಟ್ ಪಕ್ಷಗಳ ಕೆಲಸಗಳು ಮತ್ತು ಹೋರಾಟಗಳ ವಿಧಾನದಿಂದ ಅತೃಪ್ತಿ ಹೊಂದಿದ್ದ ಆದರೆ, ಸಾಮಾಜಿಕ ಬದಲಾವಣೆಯಲ್ಲಿ ತೀವ್ರತೆಯನ್ನು ಮತ್ತು ಹೊಸತನ್ನು ಬಯಸುತ್ತಿದ್ದ ಈ ವರ್ಗ ಸಹಜವಾಗಿಯೇ ಇಂತಹ ಹೋರಾಟಗಳನ್ನು ಮತ್ತು ಒಕ್ಕೂಟವನ್ನು ಬೆಂಬಲಿಸಿತು.

ಸೈದ್ಧಾಂತಿಕ ಭಿನ್ನತೆಗಳು ಏನೇ ಇದ್ದರೂ ಕಮ್ಯುನಿಸ್ಟ್ ಚಳುವಳಿಯೊಂದು ಎತ್ತಿಕೊಳ್ಳಬಹುದಾದ ಪ್ರಶ್ನೆಗಳನ್ನು ಆಧರಿಸಿ ಕೆಲಸ ಮಾಡುತ್ತಿದ್ದಾಗಲೇ 1990 ರ ನಂತರ ಈ ಗುಂಪುಗಳಲ್ಲಿ ತೀವ್ರವಾದ ವ್ಯೂಹಾತ್ಮಕ ಬದಲಾವಣೆಯೊಂದು ಕಾಣಿಸಿಕೊಂಡಿತು. ನಕ್ಸಲರ ಸಶಸ್ತ್ರ ಹೋರಾಟದ ಲೈನಿಗೆ ಪೂರಕವಾಗಿ 1990–91 ರ ನಡುವೆ ಬೀದರ್ ಮತ್ತು ರಾಯಚೂರು ಭಾಗಗಳಲ್ಲಿ ಮೊದಲಿಗೆ ಸಶಸ್ತ್ರ ಪಡೆಯನ್ನು ಆರಂಭಿಸಿದರು. ಸಣ್ಣದಾಗಿ ಆರಂಭವಾದ ಈ ಪಡೆಯು 1995 ರ ವೇಳೆಗೆ ಸಂಖ್ಯೆಯನ್ನು ಹೆಚ್ಚಿಸಿಕೊಂಡಿತು. ಮುಂದಿನ ಸಶಸ್ತ್ರ ಹೋರಾಟಕ್ಕೆ ವಿದ್ಯಾರ್ಥಿ ಯುವಜನರಿಂದ ಕಾರ್ಯಕರ್ತರನ್ನು ರೂಪಿಸುವ ತಂತ್ರದ ಭಾಗವಾಗಿ ಆರಂಭದ ವರ್ಷಗಳಲ್ಲಿ ಸಮೂಹ ಕೇಂದ್ರಿತ ಹೋರಾಟಗಳನ್ನು ನಡೆಸಲಾಯಿತು ಎಂಬ ಮಾತು ನಿಜವಾಯಿತು. ನಕ್ಸಲ್‌ವಾದಿಗಳ 'ಹಿಂಸೆ'ಯ ಒಳನೋಟವನ್ನು ಪಡೆದುಕೊಂಡ ವಿದ್ವತ್ ವಲಯದ ಕೆಲವರು ಇವರ ಬೆಂಬಲದ ಪರಿಧಿಯಿಂದ ಹೊರ ಬಂದರು. ಆ ವೇಳೆಗೆ ರಾಯಚೂರಿನಲ್ಲಿ ಮೊದಲ ಎನ್‌ಕೌಂಟರ್‌ಗೆ ಭಾಸ್ಕರ್ ಬಲಿಯಾಗಿದ್ದರು. ಇದೇ ವೇಳಗೆ ಅಖಿಲ ಭಾರತ ಮಟ್ಟದಲ್ಲಿ ವಿವಿಧ ನಕ್ಸಲ್ ಗುಂಪುಗಳ ನಡುವೆ ಐಕ್ಯತೆಯ ಚರ್ಚೆ ನಡೆಯುತ್ತಿತ್ತು. ಮಾವೋಯಿಸ್ಟ್ ಕೋ–ಆರ್ಡಿನೇಷನ್ ಸೆಂಟರ್ (ಎಂಸಿಸಿ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್–ಲೆನಿನಿಸ್ಟ್) (ಸಿಪಿಐ(ಎಂ–ಎಲ್)), ಪೀಪಲ್ಸ್ ವಾರ್ ಗುಂಪು (ಪಿಡಬ್ಲ್ಯುಜಿ) ಇವೆಲ್ಲವೂ ಒಟ್ಟು ಸೇರಿ 2004 ರಲ್ಲಿ ಹೊಸದಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾವೋವಾದಿ) ಯನ್ನು ಪ್ರಾರಂಭಿಸಲಾಯಿತು. ಇಂತಹ ಪ್ರಯತ್ನದಲ್ಲಿ ಸಾಕೇತ್ ರಾಜನ್ ಕೆಲಸ ಮಾಡಿದ್ದರು. ಆ ನಂತರದಲ್ಲಿ ರೆಡ್ ಕಾರಿಡಾರ್‌ನ ಹಳೆಯ ಯೋಜನೆಯ ಭಾಗವಾಗಿ ತಮ್ಮ ಅಡಗು ತಾಣಗಳ ಕಾರ್ಯಾಚಾರಣೆಯನ್ನು ಹೆಚ್ಚು ಕಾಡು ಇರುವ ಮಲೆನಾಡಿನ ಪ್ರದೇಶಗಳಾದ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳ ಭಾಗಕ್ಕೆ **ಸ್ಥಳಾಂತರಿಸಿದರು. ನಕ್ಸಲರ ಈ ಕಾರ್ಯಾಚರಣೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದ ಒಂದು ಗುಂಪು ಕಾಡಿನೊಳಗೆ ಕೆಲಸ** ಮಾಡಿದರೆ, ಕಾಡಿನ ಹೊರಗೆ ನಾಡಿನಲ್ಲಿ ಪೂರಕ ಕೆಲಸಗಳಲ್ಲಿ ಇನ್ನೊಂದು ಗುಂಪು ಕೆಲಸ ಮಾಡುತ್ತಿತ್ತು. ಕಾಡಿನಲ್ಲಿ ಶಸ್ತ್ರ ಹಿಡಿದು ಹೋರಾಟ ಮಾಡುವವರ ಪರವಾಗಿ ಅಭಿಪ್ರಾಯ ರೂಪಿಸುವುದು ಮತ್ತು ಇತರೆ ಸಹಾಯಗಳನ್ನು ಮಾಡುವುದು ಈ ಹೊರಗಿರುವ ಗುಂಪಿನ ಕೆಲಸವಾಗಿತ್ತು. ದ

ಜನರಿಂದ ದೂರವಿದ್ದು ಕಾಡಿನೊಳಗೆ ಅವಿತು ಕ್ರಾಂತಿಯನ್ನು ಸಾಧಿಸುವ ದುಸ್ಸಾಹಸದ ವಿರುದ್ಧವಾಗಿ ಈ ಗುಂಪುಗಳೊಳಗೆ ಭಿನ್ನಾಭಿಪ್ರಾಯಗಳು ಬೆಳೆದು ಕಾಡಿನೊಳಗಿನ ಕೆಲವು ಪ್ರಮುಖ ಮುಖಂಡರು ಆಚೆ ಬರುವ ಪ್ರಕ್ರಿಯೆ ಆಗಲೇ ಶುರುವಾಗಿತ್ತು[72].ಇಂತಹ ಭಿನ್ನಾಭಿಪ್ರಾಯಗಳಿಗೆ ಮೂಲಭೂತವಾಗಿ ಕಾರ್ಯಾಚರಣೆ ಮತ್ತು ಸಿದ್ಧಾಂತದ ನಡುವೆ ಬರುತ್ತಿದ್ದ ಕಾಂಟ್ರಡಿಕ್ಷನ್‌ಗಳೂ ಕಾರಣವಾಗಿದ್ದವು. ಉದಾಹರಣೆಗೆ ಕೊಡಗಿನಲ್ಲಿ ಆ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ 'ಕೊಡಗು ಪ್ರತ್ಯೇಕ ರಾಜ್ಯ'ದ ಹೋರಾಟಕ್ಕೆ ಕವಿರಂ ಭಾಷಾ ರಾಷ್ಟ್ರೀಯತೆ ಆಧಾರದಲ್ಲಿ ಬೆಂಬಲ ನೀಡಿತು. ಕೊಡಗಿನಲ್ಲಿ 'ಪರಿಪೂರ್ಣವಾದ ಏಕರೂಪಿ ಸಮಾಜ'ದ ಪರಿಧಿಯೊಳಗೆ ದಲಿತರು, ಕೃಷಿ ಕಾರ್ಮಿಕ ಸಮುದಾಯಗಳು, ಹಿಂದುಳಿದ ಭೂಹಿಡುವಳಿ ಸಮುದಾಯಗಳು ಎಂದೂ ಇರಲಿಲ್ಲ (ತಂಬಂಡ 2014: 2). 'ಏಕರೂಪದ ಭಾರತವನ್ನಾಗಲೀ ಅಥವಾ ಕೊಡವ ಮತ್ತು ತುಳು ಭಾಷಿಕ ಪ್ರದೇಶಗಳನ್ನೊಳಗೊಂಡ ಏಕರೂಪಿ ಕರ್ನಾಟಕವನ್ನಾಗಲೀ ಸೈದ್ಧಾಂತಿಕವಾಗಿ ಒಪ್ಪಿಕೊಳ್ಳದ ಕವಿರಂಗೆ ಏಕರೂಪಿ ಗುಣಲಕ್ಷಣಗಳು ಹೇರಲಾದ ಕೊಡಗನ್ನು ಒಪ್ಪಿಕೊಳ್ಳುವುದು ಕಾಂಟ್ರಡಿಕ್ಷನ್ ಎಂದು ಗೊತ್ತಾಗದಿರುವುದು ಗಮನಾರ್ಹವಾಗಿದೆ ಎಂದು ವಿಜಯ್ ತಂಬಂಡ ಪೂಣಚ್ಚರವರು ಅಭಿಪ್ರಾಯಪಟ್ಟಿರುವುದನ್ನು ಇಲ್ಲಿ ಗಮನಿಸಬಹುದು (ತಂಬಂಡ 2014: 6). ಈ ರೀತಿ ಹೊರ ಬಂದವರು ಈಗ ಪ್ರತ್ಯೇಕವಾದ ಕಮ್ಯುನಿಸ್ಟ್ ಪಕ್ಷವನ್ನು ಆರಂಭಿಸಿದ್ದಾರೆ. ಈಗ ಪ್ರಶ್ನೆಯಿರುವುದು ಇವರ ಮುಂದಿರುವ ಸಾಮಾಜಿಕ ಬದಲಾವಣೆಯ ಮಾರ್ಗ ಯಾವುದೆಂಬುದು. ಎಡ–ತೀವ್ರವಾದದ ಪ್ರಶ್ನೆಗಳಾದ ಶಸ್ತ್ರ ಸಜ್ಜಿತ ಹೋರಾಟ, ಚುನಾವಣೆಗಳ ಬಹಿಷ್ಕಾರ, ವರ್ಗ ಸಂಘಟನೆಗಳ ಮೂಲಕ ಸಮೂಹಗಳ ನಡುವೆ ಕೆಲಸಕ್ಕೆ ವಿರೋಧ, ಮುಂತಾದ ಕಲ್ಪನೆಗಳನ್ನು ತ್ಯಜಿಸಿದಂತಾಗಿದೆ. ಇನ್ನು ಪ್ರಭುತ್ವದ ಸ್ವರೂಪ, ಬಂಡವಾಳಶಾಹಿಯ ವಿಶ್ಲೇಷಣೆ, ಕಾರ್ಮಿಕ ವರ್ಗದ ಪಾತ್ರ ಇವುಗಳ ಬಗ್ಗೆ ಅವರ ನಿಲುವೇನು ಎಂಬುದನ್ನು ನಿರೂಪಿಸುವುದು, ಸಿಪಿಐ(ಎಂ) ಪಕ್ಷದಿಂದ ಹೊರಬರುವಾಗ ಮುಂದು ಮಾಡಿದ್ದ ಪ್ರಶ್ನೆಗಳು ಈಗಲೂ ಉಳಿದುಕೊಂಡಿದೆಯೇ ಎಂಬ ಪ್ರಶ್ನೆಗಳಿವೆ.

ತುರ್ತು ಪರಿಸ್ಥಿತಿ ಕುರಿತು ಕಮ್ಯುನಿಸ್ಟ್ ಚಳುವಳಿಯಲ್ಲಿನ ಭಿನ್ನ ನಿಲುವುಗಳು

ತುರ್ತು ಪರಿಸ್ಥಿತಿ ದೇಶ ಕಂಡ ಕರಾಳ ಅಧ್ಯಾಯಗಳಲ್ಲಿ ಒಂದು. ಭಾರತದಲ್ಲಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ಸ್ಥಾಪನೆಯಾಗಿ ಮೂರು ದಶಕಗಳು ಕಳೆಯುವ ಮೊದಲೇ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬಂದಿದೆಯೆಂದು ಕಾಂಗ್ರೆಸ್ ಸರ್ಕಾರ 1975 ಜೂನ್ 26 ರಂದು ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿತು. ಇದು ಕಮ್ಯುನಿಸ್ಟ್ ಚಳುವಳಿಯೊಳಗೂ ಬಿರುಗಾಳಿಯನ್ನು ಎಬ್ಬಿಸಿತ್ತು. ಸಿಪಿಐ ವಿಭಜನೆಯಾಗಿ ಒಂದು ದಶಕ ಕಳೆಯುವುದರೊಳಗೇ ಎರಡು ಕಮ್ಯುನಿಸ್ಟ್ ಪಕ್ಷಗಳು ಆಳುವ ವರ್ಗದ ತೀರ್ಮಾನದ ವಿಚಾರದಲ್ಲಿ ಪ್ರಸ್ಪರ ವಿರುದ್ಧವಾಗಿ ಬಹಿರಂಗವಾಗಿ ನಿಲ್ಲುವ ಸ್ಥಿತಿ ಬಂದಿತು. ತುರ್ತುಸ್ಥಿತಿಯನ್ನು ದೇಶದ ಮೇಲೆ ಹೇರಬೇಕಾದ ಪರಿಸ್ಥಿತಿ ಬಂದದ್ದು ಏತಕ್ಕಾಗಿ ಎಂಬುದನ್ನು ಮೊದಲು ಗಮನಿಸೋಣ.

ಸ್ವಾತಂತ್ರ್ಯ ನಂತರ ಸುಮಾರು ಎರಡು ದಶಕಗಳ ಕಾಲ ಕಾಂಗ್ರೆಸ್ ದೇಶದ ಏಕಮೇವಾದ್ವಿತೀಯ ಪಕ್ಷವಾಗಿತ್ತು. ಕೇರಳದಲ್ಲಿ 1957 ರ ಚುನಾವಣೆಯಲ್ಲಿ ಸಿಪಿಐ ಅಧಿಕಾರಕ್ಕೆ ಬರುವ ಮೂಲಕ ಈ ಪ್ರಕ್ರಿಯೆಯ ಮೊದಲ ಕೊಂಡಿ ಕಳಚಿತ್ತು. ಆದರೆ ಕಾಂಗ್ರೆಸ್‌ಗೆ ದೊಡ್ಡ ಹೊಡೆತ ಬಿದ್ದದ್ದು ಎಂಟು ರಾಜ್ಯಗಳಲ್ಲಿ ಅದು 1967 ರ ಚುನಾವಣೆಯಲ್ಲಿ ಸೋತಾಗ. ಕಾಂಗ್ರೆಸ್ ಮೊದಲ ಬಾರಿಗೆ ಇಂತಹ ಬಿಕ್ಕಟ್ಟಿಗೆ ಸಿಲುಕಿತು. ಪರಿಣಾಮವಾಗಿ 1969 ರಲ್ಲಿ ಕಾಂಗ್ರೆಸ್ ವಿಭಜನೆಯಾಯಿತು. ಇಂತಹುದೊಂದು ಪರಿಸ್ಥಿತಿಗೆ ಹಲವು ಕಾರಣಗಳಿದ್ದವು. ಬೆಲೆ ಏರಿಕೆ, ಭ್ರಷ್ಟಾಚಾರ, ನಿರುದ್ಯೋಗ, ಕೃಷಿ ಬಿಕ್ಕಟ್ಟು, ಕೈಗಾರಿಕಾ ಬೆಳವಣಿಗೆಯಲ್ಲಿ ಹಿಂಜರಿಕೆ, ಸ್ವಜನ ಪಕ್ಷಪಾತ ಇತ್ಯಾದಿಗಳಿಂದ ಬೇಸತ್ತ ಜನರ ಅಭಿಪ್ರಾಯ ಕಾಂಗ್ರೆಸ್‌ನ ವಿರುದ್ಧ ಕ್ರೋಢೀಕರಣಗೊಳ್ಳುತ್ತಿತ್ತು. ಅಲಹಾಬಾದ್ ಹೈಕೋರ್ಟಿನ ತೀರ್ಪುಅದಕ್ಕೆ ತಿದಿಯನ್ನೊತ್ತಿತು. ಕಾಂಗ್ರೆಸ್‌ನ ಧೋರಣೆಗಳಲ್ಲಿ ಅಡಕವಾಗಿದ್ದ ದೊಡ್ಡ ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ಪರವಾದ ನೀತಿಗಳ ಬಿಕ್ಕಟ್ಟಿನ ಫಲವಿದು. ನೆಹರೂ ಕಾಲಘಟ್ಟದವರೆಗೆ ಸಮಾಜವಾದಿ ಮಾದರಿ ಸಮಾಜದ[73] ಪ್ರತಿಪಾದನೆಯನ್ನು ಹೆಸರಿಗಾದರೂ ಮಾಡುತ್ತಿದ್ದ ಕಾಂಗ್ರೆಸ್, ಇಂದಿರಾಗಾಂಧಿ ಬಂದ ನಂತರದಲ್ಲಿ ಬದಲಾಗುತ್ತಿತ್ತು. 'ನಾವು ಕೆಲವು ನಿಯಂತ್ರಣಗಳನ್ನು ಕಿತ್ತು ಹಾಕಿದ್ದೇವೆ ಮತ್ತು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿರುವವುಗಳನ್ನು ತೆಗೆದುಹಾಕಲು ನಾವು ಯಾವಾಗಲೂ ಸಿದ್ದರಾಗಿದ್ದೇವೆ'[74] ಎಂದು 1966 ರಲ್ಲಿ ಇಂದಿರಾಗಾಂಧಿಯವರು ಹೇಳಿದಾಗ ಆರ್ಥಿಕತೆಯನ್ನು ಖಾಸಗಿಯವರ ಪರವಾಗಿ ಬದಲಾಯಿಸುವ ಸ್ಥಿತ್ಯಂತರವನ್ನು ಅದು ಸ್ಪಷ್ಟವಾಗಿ ಧ್ವನಿಸುತ್ತಿತ್ತು. ಆದರೆ ಅದಕ್ಕೆ ಆಗಿನ್ನೂ ಅಷ್ಟು ಬಲ ಬಂದಿರಲಿಲ್ಲ. ದೊಡ್ಡ ಬಂಡವಾಳ ವರ್ಗದೊಳಗೆ ಆಗುತ್ತಿದ್ದ ಹಿತಾಸಕ್ತಿಗಳ ಸಂಘರ್ಷವನ್ನು ಇದು ಪ್ರತಿಫಲಿಸುತ್ತಿತ್ತು.

ದೇಶದ ಜನ ಜೀವನದಲ್ಲಿ ಸಂಕಷ್ಟಗಳು ಹೆಚ್ಚಿ ರಾಜಕೀಯವಾಗಿ ಕಾಂಗ್ರೆಸ್ ಉಳಿದುಕೊಳ್ಳಬೇಕಾದ ಹಿನ್ನೆಲೆಯಲ್ಲಿ ಅದು ಎಡ-ಮುಖವಾಡವನ್ನು ಹಾಕಿತು. ಇಂದಿರಾಗಾಂಧಿಯವರ ಎಡ ತಿರುವನ್ನು ಸಿಪಿಐ ಬಲವಾಗಿ ನಂಬಿತು. ತುರ್ತು ಪರಿಸ್ಥಿತಿಯನ್ನು ಕಾಂಗ್ರೆಸ್ ಹೇರುವ ಎಲ್ಲಾ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿದ್ದಾಗಲೂ ಸಿಪಿಐ 'ವಿಶ್ವ ಫ್ಯಾಸಿಸ್ಟ್-ವಿರೋಧಿ ಸಮ್ಮೇಳನ'ವನ್ನು ಪಾಟ್ನಾದಲ್ಲಿ ಸಂಘಟಿಸಿತು. ಇದರಲ್ಲಿ ಜಗತ್ತಿನ ಹಲವು ಕಮ್ಯುನಿಸ್ಟ್ ಪಕ್ಷಗಳು ಭಾಗವಹಿಸಿದ್ದವು ಮತ್ತು ಫ್ಯಾಸಿಸಂ ಎದುರಿಸಬೇಕೆನ್ನುವ ನೆಪದಲ್ಲಿ ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದವು. ಈ ಸಮ್ಮೇಳನವು ಜಾಗತಿಕ ಅಭಿಪ್ರಾಯದ ಮೇಲೆ ಪರಿಣಾಮ ಬೀರುವಂತೆ ಮಾಡಿತು. ಲೋಕಸಭೆಯಲ್ಲಿ ಮಾತನಾಡುತ್ತಾ ಸಿಪಿಐ(ಎಂ) ನಾಯಕ ಎ.ಕೆ.ಗೋಪಾಲನ್,

> ಬಲ ಪ್ರತಿಗಾಮಿಗಳ ವಿರುದ್ಧವಾಗಿ ತುರ್ತುಪರಿಸ್ಥಿತಿಯನ್ನು ತರಲಾಗಿದೆ ಎಂಬ ಸೋಗಿನಲ್ಲಿ ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷವನ್ನು ಮತ್ತು ಇತರೆ ಕೆಲವು ಕಮ್ಯುನಿಸ್ಟ್ ಪಕ್ಷಗಳನ್ನು ದಾರಿತಪ್ಪಿಸಲಾಗಿದೆ, ವಾಸ್ತವದಲ್ಲಿ ತುರ್ತುಪರಿಸ್ಥಿತಿಯ ನಿಜವಾದ ಉದ್ದೇಶ ತಮ್ಮ ಭವಿಷ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಜನತೆಯ ವಿರುದ್ಧವಾಗಿದೆ ಎಂಬುದನ್ನು ಇವರು ಕಾಣುತ್ತಿಲ್ಲ[75]

ಎಂದು ವಾದಿಸಿದರು. ಆರಂಭದಲ್ಲಿ ಕೆಲವು ಅನುಮಾನಗಳನ್ನು ಇಟ್ಟುಕೊಂಡು ಕಾಂಗ್ರೆಸ್‌ನ 20 ಅಂಶದ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ ಸಿಪಿಐ, ಕ್ರಮೇಣ ಅದರ ಜಾರಿಗೆ ಒತ್ತಾಯಿಸಿ ಜನರನ್ನು ಅಣಿನೆರೆಸಲು ಆರಂಭಿಸಿತು.

ಕೇರಳದಲ್ಲಿ ಕಾಂಗ್ರೆಸ್ ಪಾರ್ಟಿ ಜೊತೆ ಸಂಯುಕ್ತ ರಂಗ ಸರ್ಕಾರದಲ್ಲಿ ಪಾಲ್ಗೊಂಡಿತು. ಆದರೆ ತುರ್ತುಪರಿಸ್ಥಿತಿಯ ಅತಿರೇಕಗಳು ಹೆಚ್ಚುತ್ತಾ ಹೋದಂತೆಲ್ಲಾ ಅದನ್ನು ಸಮರ್ಥಿಸಿಕೊಳ್ಳಲು ಸಿಪಿಐಗೆ ಕಷ್ಟವಾಗತೊಡಗಿತು. ರಾಜಕೀಯ ಎದುರಾಳಿಗಳನ್ನು ದಮನ ಮಾಡುವ ಮತ್ತು ತುರ್ತುಪರಿಸ್ಥಿತಿ ಜಾರಿ ಮಾಡುತ್ತಿರುವ ಕಾಂಗ್ರೆಸ್‌ನ ಧೋರಣೆಗಳ ಬಗ್ಗೆ ಸಿಪಿಐನೊಳಗೆ ಅತೃಪ್ತಿ ಬೆಳೆದು 1976 ರ ಅಕ್ಟೋಬರ್‌ನಲ್ಲಿ ಅದು ಜಾರಿಯಾದ 17 ತಿಂಗಳ ನಂತರ ಮೊದಲ ಬಾರಿಗೆ ಹೇಳಿಕೆಯನ್ನು ನೀಡಿತು. 'ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡುವ ತಕ್ಷಣದ ಅಪಾಯಗಳನ್ನು ಇಲ್ಲವಾಗಿಸಲು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕಾದ ಅನಿವಾರ್ಯತೆಯನ್ನು ಸಂಪೂರ್ಣವಾಗಿ ಮನಗಂಡು ರಾಷ್ಟ್ರೀಯ ಎಮರ್ಜೆನ್ಸಿಗೆ ಬೆಂಬಲ ನೀಡಿದ್ದಾಗಿಯೂ, ಇದರಿಂದ ಆರಂಭದಲ್ಲಿ ಪ್ರತಿಗಾಮಿಗಳ ವಿರುದ್ಧ ಪ್ರಖರವಾದ ಹೊಡೆತಗಳನ್ನು ನೀಡಲು ಸಾಧ್ಯವಾಗಿದ್ದಾಗಿಯೂ, ಬರಬರುತ್ತಾ ಅದನ್ನು ಹೆಚ್ಚಾಗಿ ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ಜನತೆಯ ವಿರುದ್ಧ ಬಳಸಾಗುತ್ತಿರುವುದಾಗಿಯೂ ಸಿಪಿಐ ಗುರುತಿಸಿತು. ಹಲವಾರು ರಾಜ್ಯಗಳಲ್ಲಿ ಡಿಐಆರ್ ಮತ್ತು ಎಂಐಎಸ್‌ಎ(ಮೀಸಾ) ಅಡಿ ಸಿಪಿಐ, ಕಾಂಗ್ರೆಸ್ ಮತ್ತು ಇತರೆ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಂಧಿಸುತ್ತಿರುವುದನ್ನು ಹೇಳಿಕೆಯಲ್ಲಿ ಪ್ರಸ್ತಾಪಿಸಿತು[76]. ವಿಶೇಷವೆಂದರೆ (ಇಂದಿರಾ ವಿರೋಧಿ) ಕಾಂಗ್ರೆಸಿಗರನ್ನು ಈ ಕಾಯ್ದೆಯಡಿಯಲ್ಲಿ ಬಂಧಿಸಲಾಗುತ್ತಿರುವ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿದ ಸಿಪಿಐ, ಸಾವಿರಾರು ಸಂಖ್ಯೆಯಲ್ಲಿ ಬಂಧನವಾಗಿ ಜೈಲುಗಳಿದ್ದ ಸಿಪಿಐ(ಎಂ)ನವರ ಬಗ್ಗೆ ಪ್ರಸ್ತಾಪಿಸಲಿಲ್ಲ. ದೇಶಾದ್ಯಂತ ಕಮ್ಯುನಿಸ್ಟರನ್ನು ಜೈಲುಗಳಲ್ಲಿ ಹಾಕಿದ ಭಾಗವಾಗಿ ಕರ್ನಾಟಕದಲ್ಲೂ ಹಲವಾರು ಜನರನ್ನು ಜೈಲಿಗೆ ಹಾಕಲಾಗಿತ್ತು. ಇವರಲ್ಲಿ ವಿ.ಜೆ.ಕೆ.ನಾಯರ್, ಪಿ.ಜಗನ್ನಾಥ್, ಹೆಚ್.ಎಸ್.ರಾಮರಾವ್, ಮುಂತಾದವರಿದ್ದರು.

ಬೆಲೆ ಏರಿಕೆ ನಿಯಂತ್ರಣ, ರೈತರಿಗೆ ಬೆಳೆಗಳಿಗೆ ಬೆಂಬಲ ಬೆಲೆ, ಕಾರ್ಮಿಕರಿಗೆ ವೇತನ ಮತ್ತು ಕೆಲಸದ ಭದ್ರತೆ ಇತ್ಯಾದಿ ಭರವಸೆಗಳು, ಸಿಪಿಐ ತುರ್ತುಪರಿಸ್ಥಿತಿಗೆ ಬೆಂಬಲ ನೀಡಲು ಕಾರಣವಾಗಿತ್ತು ಎಂಬುದನ್ನು ಉಚ್ಚರಿಸುತ್ತಾ, ಇವುಗಳಲ್ಲಿ ಯಾವುದೂ ಸಹ ಜಾರಿಯಾಗುತ್ತಿಲ್ಲ ಎಂದು ಸಿಪಿಐ ಮತ್ತು ಅದರ ಅಂಗಸಂಘಟನೆಗಳು ಟೀಕಿಸಿದವು. ಜೊತೆಗೆ ಏಕಸ್ವಾಮ್ಯದಾರರು, ಸಗಟು ವ್ಯಾಪಾರದಾರರು ಮತ್ತು ಕಳ್ಳದಾಸ್ತಾನುಗಾರರ ಬಗ್ಗೆ ಸರ್ಕಾರ ಮೃಧು ಧೋರಣೆ ಅನುಸರಿಸುತ್ತಿರುವುದಾಗಿ ಸಿಪಿಐ ಟೀಕಿಸಲು ಆರಂಭಿಸಿತು[77]. ಸಿಪಿಐ(ಎಂ) ಪಕ್ಷವನ್ನು ಮತ್ತು ಅದರ ನಿಲುವುಗಳನ್ನು ಸಿಪಿಐ ಯಾವ ರೀತಿಯಲ್ಲಿ ನೋಡುತ್ತಿತ್ತು ಎಂಬುದನ್ನು ಸಿಪಿಐನ ಈ ವಿಶ್ಲೇಷಣೆಯಿಂದ ಅರ್ಥಮಾಡಿಕೊಳ್ಳಬಹುದು:

> **ಸಿಪಿಎಂ ನಾಯಕತ್ವ ತನ್ನ ಹಳೆಯ ಅವಕಾಶವಾದಿ ಧೋರಣೆಗಳನ್ನು ಮುಂದುವರಿಸುತ್ತಿದೆ.** ಪ್ರತಿಗಾಮಿ ಪಕ್ಷಗಳ ರಂಗದ ಭಾಗವಾಗಿರಲು ಅದು ನಿರಾಕರಿಸಿದೆಯಾದರೂ, ಸಿವಿಲ್ ಲಿಬರ್ಟೀಸ್ ಯೂನಿಯನ್ ಬ್ಯಾನರ್ ಅಡಿಯಲ್ಲಿ ಅದು ಸಹಕರಿಸುತ್ತಿದೆ. ಕಾಂಗ್ರೆಸ್ ಮತ್ತು ಸಿಪಿಐ ನಡುವೆ ಬೆಳೆದಿರುವ ಬಿಗುವಿನ ಪರಿಸ್ಥಿತಿಯನ್ನು ಅದು ಸಂಭ್ರಮಿಸುತ್ತಿದೆ. ಕುರುಡು ಕಾಂಗ್ರೆಸ್-ವಿರೋಧಿಯಾದ ನಕಾರಾತ್ಮಕ ಮತ್ತು ಅವಕಾಶವಾದಿ ಧೋರಣೆಯನ್ನು ಬದಲಾಯಿಸಿಕೊಳ್ಳಲು ಅದು ನಿರಾಕರಿಸುತ್ತಿದೆ. ಕಾಂಗ್ರೆಸ್‌ನೊಳಗಿರುವ ಪ್ರಜಾಪ್ರಭುತ್ವ ಶಕ್ತಿಗಳೊಂದಿಗಿನ ಐಕ್ಯತೆಯ ಮಹತ್ವವನ್ನು ಗುರುತಿಸಲು ಅದು ನಿರಾಕರಿಸುತ್ತಿದೆ. ಅಥವಾ

ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ದೇಶವನ್ನು ಮುಂದಕ್ಕೊಯ್ಯಲು ಈ ಶಕ್ತಿಗಳು ಕಾಂಗ್ರೆಸ್‌ನೊಳಗೆ ನಿರ್ವಹಿಸುತ್ತಿರುವ ಮಹತ್ತರವಾದ ಪಾತ್ರವನ್ನು ಅದು ಗುರುತಿಸುತ್ತಿಲ್ಲ. ಇತ್ತೀಚಿನ ಘಟನೆಗಳು, ಅದರ ಗೊಡ್ಡು ಮತ್ತು ಛಿದ್ರಕಾರಿ ಸ್ವರೂಪವನ್ನು ಸ್ಪಷ್ಟವಾಗಿ ಬಿಂಬಿಸಿವೆ. ಈ ವಿಚಾರಗಳ ಬಗ್ಗೆ ವಾಸ್ತವ ದೃಷ್ಟಿಕೋನದ ನಿಲುವನ್ನು ತೆಗೆದುಕೊಳ್ಳಲು ಚಿಂತಿಸಬೇಕೆಂದು ನಾವು ಸಿಪಿಎಂನ್ನು ವಿನಂತಿಸುತ್ತೇವೆ.

ಜನತೆಯ ವಿಷಯಗಳಲ್ಲಿ ನಮ್ಮ ಪಕ್ಷದೊಂದಿಗೆ ಮತ್ತು ಸಮೂಹ ಸಂಘಟನೆಗಳೊಂದಿಗೆ ಸಹಕರಿಸಲು ಸಿದ್ಧವಿರುವುದಾಗಿ ಸಿಪಿಎಂ ವ್ಯಕ್ತಪಡಿಸಿದೆ. ಕುರುಡು ಕಾಂಗ್ರೆಸ್–ವಿರೋಧಿಯಾದ ಸಿಪಿಎಂನ ಪ್ರಸಕ್ತ ಗೊಡ್ಡು ಧೋರಣೆಯಿಂದಾಗಿ, ರಾಜಕೀಯ ವಿಷಯಗಳಲ್ಲಿ ಯಾವುದೇ ಸಂಯುಕ್ತ ಕಾರ್ಯಾಚರಣೆಗಳನ್ನು ಮಾಡಲಾಗದಿದ್ದರೂ, ಸ್ಥಳೀಯ ಮಟ್ಟದಲ್ಲಿ ಸಮೂಹ ಪ್ರಶ್ನೆಗಳ ಆಧಾರದಲ್ಲಿ ಸಿಪಿಎಂ ಜೊತೆಗೆ ಸಹಕರಿಸಲು ಸಾಧ್ಯವಿದೆ ಎಂಬುದನ್ನು ನಮ್ಮ ಪಕ್ಷ ತನ್ನ ನಿಲುವನ್ನು ದೃಢಪಡಿಸುತ್ತದೆ[78]

ಎಂದಿತು. ತುರ್ತು ಪರಿಸ್ಥಿತಿಗೆ ಸಂಬಂಧಿಸಿ ಎರಡು ಕಮ್ಯುನಿಸ್ಟ್ ಪಕ್ಷಗಳ ನಡುವಿನ ಧೋರಣೆಗಳಲ್ಲಿ ಇದ್ದ ವ್ಯತ್ಯಾಸದ ಕೇಂದ್ರ ಬಿಂದು ಎಲ್ಲಿದೆ ಎಂಬುದು ಇದರಲ್ಲಿ ಸ್ಪಷ್ಟಗೊಳ್ಳುತ್ತದೆ. ಈ ಕೇಂದ್ರ ಬಿಂದುವೇ ಕಮ್ಯುನಿಸ್ಟ್ ಪಕ್ಷದ ವಿಭಜನೆಯಲ್ಲೂ ಪ್ರಮುಖ ಪಾತ್ರ ವಹಿಸಿದೆ. ಇದೇನೇ ಆದರೂ 1977 ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರಾಜಯಗೊಂಡ ಒಂಭತ್ತು ತಿಂಗಳ ನಂತರ, ತುರ್ತು ಪರಿಸ್ಥಿತಿಗೆ ತಾನು ನೀಡಿದ ಬೆಂಬಲ ತಪ್ಪು ಎಂದು ಸಿಪಿಐ ತೀರ್ಮಾನಿಸಿತು.

ಮತ್ತೊಂದೆಡೆ ಸಿಪಿಐ(ಎಂ) ತುರ್ತು ಪರಿಸ್ಥಿತಿ ವಿರುದ್ಧ ನಿಲುವನ್ನು ತೆಗೆದುಕೊಂಡಿತು. ಭಾರತ ಕಮ್ಯುನಿಸ್ಟ್ ಪಕ್ಷ 1964 ರಲ್ಲಿ ವಿಭಜನೆಯಾದ ಮೇಲೆ, ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಅದು ಪ್ರಚ್ಛನ್ನವಾಗಿ ತೋರ್ಪಡೆಯಾದ ಸಂದರ್ಭವೆಂದರೆ 1975 ರಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ತುರ್ತುಪರಿಸ್ಥಿತಿಯನ್ನು ಹೇರಿದಾಗ. ಈಗಾಗಲೇ ಚರ್ಚಿಸಿದಂತೆ ಸಿಪಿಐನ ವಿಭಜನೆಗೆ ಕಾರಣವಾದ ಒಂದು ಪ್ರಮುಖ ವಿಚಾರವೆಂದರೆ, ಕಾಂಗ್ರೆಸ್‌ನ ವರ್ಗ ಸ್ವರೂಪಕ್ಕೆ ಸಂಬಂಧಿಸಿದ್ದು. ಕಾಂಗ್ರೆಸ್ ಕುರಿತು ಸಿಪಿಐ ಮತ್ತು ಸಿಪಿಎಂ ಭಿನ್ನ ನಿಲುವುಗಳನ್ನು ತೆಗದುಕೊಳ್ಳಲು ಇದು ಮೂಲ ಕಾರಣವಾಯಿತು. ಪರಿಣಾಮವಾಗಿ ಉಳಿದ ಬೆಳವಣಿಗೆಗಳ ಬಗ್ಗೆಯೂ ನಿಲುವುಗಳು ವ್ಯತ್ಯಾಸಗೊಂಡವು. ಜೆ.ಪಿ.ಚಳುವಳಿ ಕುರಿತೂ ಭಿನ್ನವಾದ ಅಂದಾಜುಗಳನ್ನು ಮಾಡಿದವು.

1973–74 ರಲ್ಲಿ ನಡೆದಿದ್ದ 21 ದಿನಗಳ ರೈಲ್ವೆ ಮುಷ್ಕರವನ್ನು ಕಾಂಗ್ರೆಸ್ ತೀವ್ರವಾದ ಹಿಂಸೆಯನ್ನು ನೀಡಿ ವಿಫಲಗೊಳಿಸಿತ್ತು. ಇದರಲ್ಲಿ ಸಿಪಿಎಂ ಮತ್ತು ಸಿಪಿಐ ಒಟ್ಟಿಗೆ ಕೆಲಸ ಮಾಡಿದ್ದವು. ಸರ್ಕಾರದ ವಿರುದ್ಧ ಅತೃಪ್ತಿ ಹೆಚ್ಚಾಗಿತ್ತು. ಇದೇ ಸಂದರ್ಭದಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಮಧ್ಯಮ ವರ್ಗಗಳ ಹೋರಾಟಗಳು ವ್ಯಾಪಕಗೊಳ್ಳುತ್ತಿತ್ತು. ಇದನ್ನು ಕ್ರೋಢೀಕರಿಸಿ ದೇಶವ್ಯಾಪಿ ಹೋರಾಟಕ್ಕೆ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ರಾಷ್ಟ್ರೀಯ ಸಮನ್ವಯ ಸಮಿತಿ ರಚಿತಗೊಂಡಿತು. ಜೆ.ಪಿ.ಚಳುವಳಿ ಎತ್ತಿದ ಪ್ರಶ್ನೆಗಳಿಗೆ ಸಿಪಿಎಂ ಬೆಂಬಲ ನೀಡಿತು. ಆದರೆ ಸಮನ್ವಯ ಸಮಿತಿ ಸೇರಲು ನಿರಾಕರಿಸಿತು. ಕಾರ್ಮಿಕರು ಹಾಗೂ ಗ್ರಾಮೀಣ ಬಡವರಿಗಾಗಿ ಜೆ.ಪಿ.ಚಳುವಳಿಯ

[illegible]

ಕಾರ್ಯಕ್ರಮದಲ್ಲಿ ಗಂಭೀರವಾದ ಪ್ರಸ್ತಾವಗಳು ಇರಲಿಲ್ಲ. ಜೊತೆಗೆ ಸಮನ್ವಯ ಸಮಿತಿಯಲ್ಲಿ ಜನಸಂಘ, ಸ್ವತಂತ್ರ ಪಕ್ಷ, ಮತ್ತು ಕಾಂಗ್ರೆಸ್(ಓ) ಪಕ್ಷಗಳು ಇದ್ದದ್ದು ಈ ನಿರಾಕರಣೆಗೆ ಕಾರಣ ಎಂದು ಸಿಪಿಎಂ ಹೇಳಿತು. ಇಂದಿರಾ ಕಾಂಗ್ರೆಸ್ ಜೊತೆ ಸೇರದೆ ಸ್ವತಂತ್ರವಾಗಿ ಉಳಿದು ಒಂದು ಕಡೆ ತುರ್ತು ಪರಿಸ್ಥಿತಿ ವಿರುದ್ಧ ಮತ್ತೊಂದೆಡೆ ಜನರ ದಿನನಿತ್ಯದ ಸಮಸ್ಯೆಗಳ ವಿರುದ್ಧವಾಗಿ ಚಳುವಳಿಗಳನ್ನು ರೂಪಿಸಲು ಪ್ರಯತ್ನಿಸಿತು. ಸಿಪಿಐ ಕೂಡಾ ಜೆ.ಪಿ. ನೇತೃತ್ವದ ಸಮನ್ವಯ ಸಮಿತಿಯನ್ನು ಸೇರಲಿಲ್ಲ. ಆದರೆ ಅದು ಆ ಚಳುವಳಿಯನ್ನು ಬೆಂಬಲಿಸಲಿಲ್ಲ. ಜೆ.ಪಿ. ಚಳುವಳಿಯನ್ನು ಫ್ಯಾಸಿಸ್ಟ್ ಸ್ವರೂಪದ್ದು ಎಂದು ಟೀಕಿಸಿತು ಮತ್ತು ಇಂದಿರಾಗಾಂಧಿಯ ತುರ್ತುಪರಿಸ್ಥಿತಿಯನ್ನು ಬೆಂಬಲಿಸಿ ಅದರ ಜೊತೆಯಲ್ಲಿ ನಿಂತಿತು. ಹೀಗಾಗಿ ಜೆಪಿ ಚಳುವಳಿಯ ಮೂಲಕ ಎದ್ದು ಬಂದ ಜನತೆಯ ನಿರೀಕ್ಷೆಗಳಿಗೆ ಎರಡೂ ಕಮ್ಯುನಿಸ್ಟ್ ಪಕ್ಷಗಳು ಸೇರಿ ರೂಪಿಸಬಹುದಾಗಿದ್ದ ಒಂದು ರಾಷ್ಟ್ರೀಯ ಎಡ ಪರಿಹಾರದ ಬೆಳವಣಿಗೆಯಾಗಲಿಲ್ಲ. ಸಿಪಿಐ ಕಾಂಗ್ರೆಸ್ ಜೊತೆಗಿತ್ತು, ಸಿಪಿಎಂ ದೇಶವ್ಯಾಪಿ ಸ್ವತಂತ್ರವಾಗಿ ಒಂದು ಎಡ ಪರ್ಯಾಯವನ್ನು ರೂಪಿಸುವ ಪರಿಸ್ಥಿತಿ ಇರಲಿಲ್ಲ. ಅಂತಹ ಪ್ರಯತ್ನವನ್ನು ಅದೂ ಸಹ ಗಂಭೀರವಾಗಿ ಮಾಡಲಿಲ್ಲ.

ಇಂತಹ ಎಲ್ಲಾ ಸಂಗತಿಗಳನ್ನು ಸಮಗ್ರವಾದ ವಿಶ್ಲೇಷಣೆಗೆ ಸಿಪಿಐ ಒಳಪಡಿಸಬೇಕಿತ್ತು. ಸಿಪಿಐನ ರಾಷ್ಟ್ರೀಯ ಮಂಡಳಿ ತುರ್ತು ಪರಿಸ್ಥಿತಿಗೆ ಬೆಂಬಲ ನೀಡಿದ್ದು ತಪ್ಪುಎಂದು ತೀರ್ಮಾನಿಸಿದ್ದನ್ನು ಮುಂದುವರಿಸಿ, ತಪ್ಪಿನ ಹಿಂದಿನ ತಾತ್ವಿಕ ತಳಹದಿಯನ್ನು ವಿಮರ್ಶಿಸಬೇಕಾಗಿತ್ತು. ಆದರೆ, ದೇಶದ ಪ್ರಜಾಸತ್ತಾತ್ಮಕ ಪ್ರಗತಿಗೆ ಕಾಂಗ್ರೆಸ್ ಜೊತೆಗಿನ ಐಕ್ಯತೆಯನ್ನು ಕೇಂದ್ರವಾಗಿ ಪ್ರತಿಪಾದಿಸಿದ ಒಂದು ಧೋರಣೆಯನ್ನು ವಿಮರ್ಶಿಸಲು ಸಿಪಿಐ ಮುಂದಾಗಲಿಲ್ಲ[79].

ಎಮರ್ಜೆನ್ಸಿ ನಂತರ ನವ–ಉದಾರವಾದಿ ಘಟ್ಟದ ಆರಂಭದವರೆಗೆ

1970 ಮತ್ತು 80 ರ ದಶಕ ಸ್ವಾತಂತ್ರ್ಯಾ ನಂತರದ ಮಹತ್ವದ ಕಾಲಘಟ್ಟ, ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರವನ್ನು ರಾಜ್ಯದಲ್ಲಿ ಸ್ಥಾಪಿಸಲು ಪ್ರಮುಖವಾಗಿ ಕಾರಣವಾದ ದಶಕ. ವಿದ್ಯಾರ್ಥಿ ಚಳುವಳಿಗಳು, ಕಾರ್ಮಿಕ ಚಳುವಳಿಗಳು, ರೈತ ಚಳುವಳಿಗಳು, ಸಾಂಸ್ಕೃತಿಕ ಚಳುವಳಿ, ಬಂಡಾಯ, ದಲಿತ ಚಳುವಳಿಗಳು, ಬೆಲೆ ಏರಿಕೆ ವಿರುದ್ಧ ಚಳುವಳಿಗಳು, ಅಧ್ಯಾಪಕರ ಚಳುವಳಿ ಹೀಗೆ ಚಳುವಳಿಗಳ ಮಹಾಪೂರವೇ ಹರಿದ ಕಾಲಘಟ್ಟವದು. ಸಮಕಾಲೀನ ಸಂದರ್ಭದ ವಾಸ್ತವಕ್ಕೆ ಇವು ಪರಕೀಯ ಎನ್ನುವಷ್ಟು ಬದಲಾಗಿರುವ ಸವಾಲುಗಳು ಮುಂದೊತ್ತಿಕೊಂಡು ಬಂದಿವೆ.

ತುರ್ತು ಪರಿಸ್ಥಿತಿಯ ನಂತರ **ಕಾರ್ಮಿಕ ಮತ್ತು ರೈತ ಹೋರಾಟಗಳು** ಬೃಹತ್ ಪ್ರಮಾಣದಲ್ಲಿ ಬೆಳೆದು ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತೀವ್ರವಾಗಿ ಬದಲಾವಣೆ ಮಾಡಿದವು.ಇವುಗಳಲ್ಲಿ ಗಮನಾರ್ಹವಾದ ಹೋರಾಟವೆಂದರೆ ಬೆಂಗಳೂರಿನ ಮೈಕೋ ಹೋರಾಟ ಮತ್ತು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಹೋರಾಟ. ಒಂದು ಖಾಸಗಿ ಬಹುರಾಷ್ಟ್ರೀಯ ಕಂಪನಿ ಕಾರ್ಮಿಕರ ಬೇಡಿಕೆಗಳಿಗಾಗಿ ಬೆಂಗಳೂರು ಮತ್ತು ರಾಜ್ಯದ ಜನ ತೀವ್ರವಾಗಿ ಸ್ಪಂದಿಸಿದ **ಮೈಕೋ ಹೋರಾಟ** ಪ್ರಮುಖವಾದದ್ದು. ಪಶ್ಚಿಮ ಜರ್ಮನಿ ಮೂಲದ ಬಹುರಾಷ್ಟ್ರೀಯ ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೋ) 1951 ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಗಿ

ಅಪಾರ ಲಾಭ ಗಳಿಸುತ್ತಿದ್ದರೂ ಕಡಿಮೆ ವೇತನ, ಕೆಲಸದ ಹೊರೆ, ಸೌಲಭ್ಯಗಳ ಕೊರತೆ, ಅಗೌರವದ ನಡವಳಿಕೆಗಳು ಇತ್ಯಾದಿ ಸಮಸ್ಯೆಗಳಿಂದ ಕಾರ್ಮಿಕರು ನರಳುತ್ತಿದ್ದರು. ಕಾರ್ಮಿಕರ ವೇತನಕ್ಕೂ ಆಡಳಿತ ವರ್ಗದವರ ವೇತನಕ್ಕೂ 10 ರಿಂದ 70 ಪಟ್ಟು ವ್ಯತ್ಯಾಸವಿತ್ತು. ಖಾಯಂ ಕೆಲಸಗಾರರ ಬದಲಿಗೆ ಅಪ್ರೆಂಟಿಸ್, ಟ್ರೈನಿ ಹೆಸರಿನಲ್ಲಿ ನಿರಂತರವಾಗಿ ಕೆಲಸ ಮಾಡಿಸುವ ಪದ್ಧತಿ ಹೆಚ್ಚಾಗಿತ್ತು. ಮದುವೆಯಾದ ಹೆಣ್ಣು ಮಕ್ಕಳಿಗೆ ಕೆಲಸ ನಿರಾಕರಿಸಲಾಗುತ್ತಿತ್ತು. ಸಣ್ಣಪುಟ್ಟ ವಿಚಾರಗಳಿಗೂ ಅಮಾನತ್ತು, ವಜಾದಂತಹ ಕಿರುಕುಳಗಳು ಹೆಚ್ಚಾಗಿತ್ತು. ಇವೆಲ್ಲವುಗಳ ವಿರುದ್ಧ ಕಾರ್ಮಿಕರ ಮನಸ್ಸು ಮಡುಗಟ್ಟಿತ್ತು.

ಹೀಗಿರುವಾಗ 1979 ಏಪ್ರಿಲ್ ತಿಂಗಳಲ್ಲಿ ಒಂದು ಘಟನೆ ನಡೆಯಿತು. ಆಡಳಿತ ಮಂಡಳಿಯ ಒಬ್ಬಾತ ಕಾರ್ಮಿಕ ಮುಖಂಡರೊಬ್ಬರನ್ನು 'ದಕ್ಷಿಣ ಭಾರತದ ನಾಯಿಗಳು' ಎಂದು ಹೀಯಾಳಿಸಿದ ಎಂದು, ಅಧಿಕಾರಿ ಕ್ಷಮೆ ಕೇಳಬೇಕೆಂದು ಏಪ್ರಿಲ್ 8 ರಂದು ಕಾರ್ಮಿಕರು ಊಟ ಬಹಿಷ್ಕಾರ ಮಾಡಿದರು. ಸುಮಾರು 4 ಸಾವಿರ ಕಾರ್ಮಿಕರು ಮೆರವಣಿಗೆ ನಡೆಸಿ ಕಾರ್ಮಿಕ ಆಯುಕ್ತರಿಗೆ ಮನವಿ ನೀಡಿದರು. ಅವರು ಸಂಧಾನ ಸಭೆ ನಡೆಸುವುದರೊಳಗೆ ಏಪ್ರಿಲ್ 14 ರಂದು 7 ಜನ ಕಾರ್ಮಿಕ ಮುಖಂಡರನ್ನು ಅಮಾನತ್ತು ಮಾಡಿದರು. ಇದರ ವಿರುದ್ಧ ಕಾರ್ಮಿಕರು ಮುಷ್ಕರಕ್ಕಿಳಿದರೆ, ಆಡಳಿತ ಮಂಡಳಿ ಬೀಗಮುದ್ರೆ ಘೋಷಿಸಿತು. ನಂತರ ನಡೆದ ಕಾರ್ಮಿಕರ ಪ್ರತಿಭಟನೆಗಳ ಮೇಲೆ ಪೊಲೀಸರು ಲಾಠಿ ಚಾರ್ಜ್, ಅಶ್ರುವಾಯು ಮುಂತಾದವೆಲ್ಲಾ ನಡೆದವು. ನೂರಾರು ಕಾರ್ಮಿಕರು ಆಸ್ಪತ್ರೆ ಸೇರಿದರು. ಇದರ ವಿರುದ್ಧ ಬೆಂಗಳೂರಿನಲ್ಲಿ ವಿವಿಧ ಸಂಘಟನೆಗಳ ಸೌಹಾರ್ದ ಸಮಿತಿ ರಚನೆಯಾಯಿತು. ಏಪ್ರಿಲ್ 18 ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಲಾಯಿತು. ಸರ್ಕಾರದ ಮಧ್ಯಪ್ರವೇಶದಿಂದ ಆಡಳಿತ ಮಂಡಳಿ ಕ್ಷಮೆಯಾಚಿಸಿತು. ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದ ಸೂರ್ಯನಾರಾಯಣ ರಾವ್‌ರವರ ಆಯ್ಕೆ ಪ್ರಶ್ನಿಸಿ ಆಡಳಿತ ಮಂಡಳಿ ಮೊಕದ್ದಮೆ ಹೂಡಿತ್ತು. ಆದರೆ ಅದರಲ್ಲೂ ಅದು ವಿಫಲವಾಯಿತು.

ವೇತನ ಪರಿಷ್ಕರಣೆ ಮತ್ತಿತರ ಪ್ರಶ್ನೆಗಳನ್ನು ಪರಿಹರಿಸುವ ವಿಚಾರದಲ್ಲಿ ಆಡಳಿತ ಮಂಡಳಿಯ ನಿರ್ಲಕ್ಷ್ಯವನ್ನು ಖಂಡಿಸಿ ರಾಷ್ಟ್ರದ ಬೇರೆ ಬೇರೆ ಕಡೆ ಇರುವ ಮೈಕೋ ಘಟಕಗಳ ಕಾರ್ಮಿಕರು 1979 ರ ಸೆಪ್ಟೆಂಬರ್ 1 ರಂದು ಸಾಂಕೇತಿಕ ಮುಷ್ಕರ ನಡೆಸಿದರು. ಈ ಕಾರಣಕ್ಕಾಗಿ 26 ಮುಖಂಡರನ್ನು ಅಮಾನತು ಮಾಡಿದರು. ಈ ಹಿನ್ನೆಲೆಯಲ್ಲಿ ಎಲ್ಲಾ ಸಂಘಟನೆಗಳ ಸಮನ್ವಯ ಸಮಿತಿಯನ್ನು ರಚಿಸಿ 1979 ರ ಅಕ್ಟೋಬರ್ 5 ರಂದು ಕಾರ್ಮಿಕರು ಅನಿರ್ದಿಷ್ಟ ಮುಷ್ಕರ ಆರಂಭಿಸಿದರು. ಆಡಳಿತ ಮಂಡಳಿ ಪೊಲೀಸರನ್ನು ಬಳಸಿಕೊಂಡು ಕಾರ್ಖಾನೆ ಸುತ್ತ ನಿಷೇಧಾಜ್ಞೆಯನ್ನು ಜಾರಿಗೊಳಿಸಿಕೊಂಡಿತು. ಅಮಾನುತಗಳು ವಾಪಸ್ ಆಗಬೇಕು, ಬ್ಯಾರೆಲ್ ಗ್ರೈಂಡಿಂಗ್ ವಿಭಾಗದಲ್ಲಿ ಒಬ್ಬ ಕಾರ್ಮಿಕ ಎರಡು ಯಂತ್ರ ನಡೆಸಬೇಕೆಂಬ ನಿಯಮ ರದ್ದಾಗಬೇಕು, ವೇತನ ಪರಿಷ್ಕರಣೆ ಇತ್ಯಾದಿ ಬೇಡಿಕೆಗಳನ್ನಿಟ್ಟು ಶುರುವಾಗಿದ್ದ ಈ ಮುಷ್ಕರಕ್ಕೆ ಶೇ.99 ಕಾರ್ಮಿಕರ ಬೆಂಬಲವಿತ್ತು. ಮುಷ್ಕರವನ್ನು ಮುರಿಯಲು ಸಂಘದ ಅಧ್ಯಕ್ಷರಿಗೆ ಕೊಲೆ ಬೆದರಿಕೆ ಹಾಕಲಾಯಿತು. ಆ ಕಾಲಕ್ಕೆ ಬೆಂಗಳೂರಿನಲ್ಲಿ ಕುಪ್ರಸಿದ್ಧರಾಗಿದ್ದ ಗೂಂಡಾಗಳನ್ನು ಆಡಳಿಗ ವರ್ಗ ನಿಯೋಜಿಸಿತು. ಕಾರ್ಮಿಕರ ಮನೆಗಳಿಗೆ ತೆರಳಿ ಬೆದರಿಕೆ ಹಾಕುವುದು ಆರಂಭವಾಯಿತು. ಮೈಕೋ ಕಾರ್ಮಿಕರ ಯೂನಿಫಾರಂ

ಕಂಡರೆ ಸಾಕು ಅವರನ್ನು ಎಲ್ಲೆಂದರಲ್ಲಿ ಹೊಡೆದು ಭಯಭೀತಗೊಳಿಸುವ ಕೆಲಸ ಹೆಚ್ಚಾಯಿತು. ಒಂದು ರೀತಿಯಲ್ಲಿ ಬೆಂಗಳೂರಿನ ಹಲವಾರು ಬೀದಿಗಳಲ್ಲಿ ಬಹಿರಂಗ ಕಾಳಗದ ಸನ್ನಿವೇಶ ಸೃಷ್ಟಿಯಾಯಿತು. ಬೆಂಗಳೂರಿನ ಸಿಐಟಿಯು ಮತ್ತು ಇತರೆ ಸಂಘಟನೆಗಳ ನೇತೃತ್ವದಲ್ಲಿ ಸೌಹಾರ್ಧ ಬಹಿರಂಗ ಸಭೆ ನವೆಂಬರ್ 7 ರಂದು ನಡೆದು 15 ಸಾವಿರ ಜನ ಬೆಂಬಲ ನೀಡಿದರು. ಆದರೆ ಆಡಳಿತ ವರ್ಗ ಮಣಿಯಲಿಲ್ಲ. ದಾಳಿಗಳು ಹೆಚ್ಚಾದವು. ಅಂದಿನ ಗುಂಡೂರಾವ್ ಸರ್ಕಾರದ ಕೃಪಾಪೋಷಿತ ರೌಡಿ ಗ್ಯಾಂಗ್‌ಗಳನ್ನು ಆಳಿತವರ್ಗ ಕಾರ್ಮಿಕರ ವಿರುದ್ಧ ಬಳಸಿತು. ಸಂಘದ ಕಛೇರಿಗಳಿಗೆ ನುಗ್ಗಿ ಮುಖಂಡರನ್ನೇ ಹೊಡೆದರು. ಸಂಘದ ಕಾರ್ಯದರ್ಶಿ ನೀಲಕಂಠಯ್ಯನವರನ್ನು ಥಳಿಸಿ ಸಂಘದ ಕಛೇರಿಯಿಂದಲೇ ಹೊರಗೆ ಬಿಸಾಕಿದರು. ಹೀಗಿರುವಾಗ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಸಭೆ ಸೇರಿ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿ ಡಿಸೆಂಬರ್ 3 ರಂದು **ಬೆಂಗಳೂರು ಬಂದ್** ನಡೆಸಲು ತೀರ್ಮಾನಿಸಿದರು. ಸಿಐಟಿಯು ರಾಜ್ಯ ಸಮಿತಿಯು ಅಂದು ರಾಜ್ಯಾದ್ಯಂತ ತನ್ನ ಘಟಕಗಳು ಪ್ರತಿಭಟಿಸಬೇಕೆಂದು ಕರೆ ನೀಡಿತು. ದಾಳಿಗಳನ್ನು ಎದುರಿಸಲು ಒಂದು ಸ್ವಯಂ ಸೇವಕ ಪಡೆಯನ್ನು ರಚಿಸಿದರು. ವ್ಯಾಪಕವಾದ ಪ್ರಚಾರ ನಡೆಸಿದರು. ಬಂದ್ ವಿಫಲಗೊಳಿಸಲು ಆಡಳಿತವರ್ಗ ಮತ್ತು ಸರ್ಕಾರ ಎಲ್ಲಾ ಪ್ರಯತ್ನಗಳನ್ನು ನಡೆಸಿತು. ಆರ್‌ಎಸ್‌ಎಸ್ ನೇರವಾಗಿ ಕರೆ ನೀಡಿ ಬಂದ್ ವಿಫಲಗೊಳಿಸಲು ಹೇಳಿತು. ಮುನ್ನೆಚ್ಚರಿಕೆ ಕ್ರಮವಾಗಿ ಹಲವಾರು ಮುಖಂಡರನ್ನು ಬಂಧಿಸಲಾಯಿತು. ಹಲವು ಕಡೆಗಳಲ್ಲಿ ಕಾರ್ಮಿಕ ಮುಖಂಡರನ್ನು ಬಹಿರಂಗವಾಗಿ ಬೇಡಿಗಳಾಕಿ ಮೆರವಣಿಗೆ ಮಾಡಲಾಯಿತು. ಜಂಟಿ ಸಮಿತಿಯ ಮುಖಂಡರಾದ ಸೂರ್ಯನಾರಾಯಣರಾವ್, ಕೃಷ್ಣನ್, ರಘುಪತಿ, ವಾಟಾಳ್ ನಾಗರಾಜ್ ಮುಂತಾದವರನ್ನೆಲ್ಲಾ ಬಂಧಿಸಿ ಬಿಡುಗಡೆ ಮಾಡಿದರು. ಆದರೆ ಏನೆಲ್ಲ ಮಾಡಿದಾಗಲೂ ಬೆಂಗಳೂರು ಬಂದ್ ಯಶಸ್ವಿಯಾಯಿತು.

ಒಂದು ಖಾಸಗಿ ಬಹುರಾಷ್ಟ್ರೀಯ ಕಂಪನಿ ಕಾರ್ಮಿಕರ ಹೋರಾಟಕ್ಕೆ ಬೆಂಗಳೂರನ್ನೇ ಬಂದ್ ಮಾಡಿದ್ದು ಇದೇ ಪ್ರಥಮವಾಗಿತ್ತು. ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಅಂದು ಕೆಲಸಕ್ಕೆ ಗೈರುಹಾಜರಾದರು. ಹಣಕಾಸು ಸಂಸ್ಥೆಗಳು, ಬ್ಯಾಂಕ್‌ಗಳ ನೌಕರರು ಮುಷ್ಕರ ಮಾಡಿದರು. ಶಾಲಾ ಕಾಲೇಜುಗಳು ಮುಚ್ಚಿದ್ದವು. ಹೀಗೆ ವಿಶಾಲ ತಳಹದಿಯಲ್ಲಿ ಜನತೆಯ ಬೆಂಬಲ ಈ ಮುಷ್ಕರಕ್ಕೆ ಸಿಕ್ಕಿತು. ಕೊನೆಗೆ ಆಡಳಿತ ವರ್ಗ ಡಿಸೆಂಬರ್ 29 ರಂದು ಸಂಘದೊಂದಿಗೆ ಒಪ್ಪಂದಕ್ಕೆ ಬಂದು ಡಿಸೆಂಬರ್ 30 ರಂದು ಮುಷ್ಕರವನ್ನು ವಾಪಸ್ ತೆಗೆದುಕೊಳ್ಳಲಾಯಿತು. 85 ದಿನಗಳ ಕಾಲ ನಡೆದ ಮುಷ್ಕರ ಒಂದು ಅಚ್ಚಳಿಯದ ಛಾಪನ್ನು ಮೂಡಿಸಿತು[80]. ಈ ಹೋರಾಟದಿಂದ ಕಾರ್ಮಿಕರು ಗಳಿಸಿದ್ದರ ಕುರಿತು ಮುಷ್ಕರದ ವಿಜಯೋತ್ಸವ ರ್‍ಯಾಲಿಯಲ್ಲಿ ಮಾತನಾಡುತ್ತಾ ಸಂಘದ ಅಧ್ಯಕ್ಷರಾದ ಸೂರ್ಯನಾರಾಯಣರಾವ್‌ರವರು, 'ಮುಷ್ಕರದ ಸಾಧನೆ ಕೇವಲ ಮೈಕೊ ಕಾರ್ಮಿಕರದ್ದೋ ಮತ್ತು ಕಾರ್ಮಿಕರಿಗಾಗಿಯೋ ಅಲ್ಲ, ಬದಲಿಗೆ ಇಡೀ ಬೆಂಗಳೂರಿನ ಕಾರ್ಮಿಕ ವರ್ಗದ್ದು'[81] ಎಂದು ಹೇಳಿದರು. ಅಂದರೆ ಒಂದು ದೀರ್ಘಕಾಲಿಕ ಮುಷ್ಕರದಿಂದ ಸಾಧಿಸಬಹುದಾಗಿದ್ದ ಬೃಹತ್ ಅನುಕೂಲಗಳು ತಕ್ಷಣಕ್ಕೆ ಮೈಕೋ ಕಾರ್ಮಿಕರಿಗೆ ಸಿಗದಿದ್ದರೂ, ದೀರ್ಘಾವಧಿಯಲ್ಲಿ ಪಡೆದುಕೊಳ್ಳಬಹುದಾದ ಅವಕಾಶಗಳ ಬಾಗಿಲನ್ನು ಇದು ತೆರೆದು

ಬಿಟ್ಟಿತು. ಕಾರ್ಮಿಕರಲ್ಲಿ ಮೂಡಿ ಬಂದ ಮಿಲಿಟೆನ್ಸಿಯು ಬೆಂಗಳೂರಿನ ಕಾರ್ಮಿಕರಲ್ಲಿ ಸುರುಳಿ ಪರಿಣಾಮವನ್ನು ಉಂಟುಮಾಡಿತು. ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಪತ್ರಿಕೆಯ ಲೇಖನವೊಂದರ ಪ್ರಕಾರ, ಬೆಂಗಳೂರಿನಲ್ಲಿ ಹೆಚ್ಚುತ್ತಿದ್ದ ಆಡಳಿತ ವರ್ಗದ ಉತ್ಪಾದನೆ ಮತ್ತು ಉತ್ಪಾದಕತೆ ಸಂಬಂಧಿತ ಬೇಡಿಕೆಗಳಿಗೆ ಕಾರ್ಮಿಕ ಸಂಘಗಳು ಪ್ರತಿಕ್ರಿಯಿಸುವ ಹೊಸ ವಿಧಾನಕ್ಕೆ ಈ ಮುಷ್ಕರವು ನಾಂದಿ ಹಾಡಿತು... ಸಾಮಾನ್ಯ ಆರ್ಥಿಕ ಬೇಡಿಕೆಗಳಿಂದ ಹೆಚ್ಚೆಚ್ಚು ಉತ್ಪಾದನಾ ಸಂಬಂಧಿತ ಪ್ರಶ್ನೆಗಳಿಗೆ ಸ್ಥಿತ್ಯಂತರವನ್ನು ಇದು ಕಾಣಿಸಿತು (ದಿಲೀಪ್ 1980: 60). ಜೊತೆಗೆ ಸೂರಿ ಒಬ್ಬ ಕಾರ್ಮಿಕ ನಾಯಕರಾಗಿ ಕಾರ್ಮಿಕರಲ್ಲಿ ಮಿಲಿಟೆನ್ಸಿಯನ್ನು ಹೊಮ್ಮಿಸುವುದಕ್ಕೆ ಒಂದು ಸಂಕೇತವಾದರು. ಇದು 1980 ರ ದಶಕದಲ್ಲಿ ಬೆಂಗಳೂರಿನ ವಿವಿಧ ಪ್ರದೇಶಗಳ ಕಾರ್ಮಿಕರ ಹೋರಾಟಗಳ ದೃಷ್ಟಿಕೋನದಲ್ಲಿ ಗುಣಾತ್ಮಕವಾದ ಬದಲಾವಣೆಗೆ ಕಾರಣವಾಯಿತು.

ರಾಜಕೀಯವಾಗಿ ಗಮನಿಸಿದಾಗ, ಗುಂಡೂರಾವ್ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಾರ್ಮಿಕರು ಗಟ್ಟಿಗೊಳ್ಳಲು ಈ ಮುಷ್ಕರವು ಕಾರಣೀಭೂತವಾಯಿತು. ಕಾರ್ಮಿಕರ ಬೇಡಿಕೆಗಳ ವಿಚಾರದಲ್ಲಿ ಅದರ ಪಾತ್ರ ಹಾಗೆ ನೋಡಿದರೆ ಅಂತಹ ಮಹತ್ವದ್ದೇನಾಗಿರಲಿಲ್ಲ. ಆದರೆ ಮುಷ್ಕರವನ್ನು ಮುರಿಯಲು ಗುಂಡೂರಾವ್ ಅವರ ಖಾಸಗಿ ಗೂಂಡಾಪಡೆ ಆಡಳಿತ ವರ್ಗದ ಪರವಾಗಿ ಕೆಲಸ ಮಾಡಿದ್ದು ಕಾರ್ಮಿಕರಲ್ಲಿ ಅಪಾರವಾದ ಅತೃಪ್ತಿಯನ್ನು ಮೂಡಿಸಿತು. ಕರ್ನಾಟಕದ ಮೊದಲ ಕಾಂಗ್ರೆಸ್ಸೇತರ ಸರ್ಕಾರ 1983 ರಲ್ಲಿ ಬರುವುದರಲ್ಲಿ ಈ ಮೈಕೋ ಮುಷ್ಕರವು ಬಹಳ ಮುಖ್ಯವಾದ ಪಾತ್ರ ವಹಿಸಿತು. ಒಂದು ಕೈಗಾರಿಕಾ ಕಾರ್ಮಿಕರ ಹೋರಾಟವನ್ನು ಸಾಮಾನ್ಯ ಜನರ ಮನೋಸ್ಥಿತಿಯೊಂದಿಗೆ ಮೇಳೈಸುವ ವಿಧಾನವನ್ನು ಈ ಹೋರಾಟದಲ್ಲಿ ಕಾಣಬಹುದು. ಆಡಳಿತ ವರ್ಗದವರೂ ಹೇಳುವಂತೆ, 'ಸೂರಿಯವರು ಮುಷ್ಕರವನ್ನು ನಡೆಸಿದ ರೀತಿ ವಿಶಿಷ್ಟವಾದದ್ದು. ನಿರಂತರವಾದ ಪತ್ರಿಕಾಗೋಷ್ಠಿಗಳು, ಕಾರ್ಮಿಕರ ಕುಟುಂಬಗಳನ್ನೂ ಒಳಗೊಂಡು ಮೆರವಣಿಗೆಗಳು, ಇತರೆ ಕೈಗಾರಿಕೆಗಳ ಕಾರ್ಮಿಕರನ್ನು ಒಳಗೊಂಡು ಜಂಟಿ ಮೆರವಣಿಗೆಗಳು, ಕಾರ್ಮಿಕ ಸಂಘಗಳ ಜಂಟಿ ಸಮನ್ವಯ ಸಮಿತಿ ರಚಿಸಿದ್ದು, ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿದ್ದು, ಹೀಗೆ ಇಂತಹ ಚಟುವಟಿಕೆಗಳ ಜೊತೆ ಆಡಳಿತವರ್ಗ ಪೈಪೋಟಿ ನಡೆಸಲಾಗಲಿಲ್ಲ' (ದಿಲೀಪ್ 1980: 68).

ಮೈಕೋ ಹೋರಾಟ ಇದ್ದಕ್ಕಿದ್ದಂತೆ ಪ್ರತ್ಯೇಕವಾಗಿ ನಡೆದದ್ದಲ್ಲ. ಇಲ್ಲಿ ಗಮನಿಸಬೇಕಾದ ಒಂದಂಶವಿದೆ. ಸೂರಿ ಮತ್ತು ಕೃಷ್ಣನ್ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಜೊತೆಯಾಗಿ ವಿದ್ಯಾರ್ಥಿ ಚಳುವಳಿ ಮತ್ತು ಕಾರ್ಮಿಕ ಚಳುವಳಿಗಳನ್ನು ಕಟ್ಟಿದವರು. 1964 ರಲ್ಲಿ ಕಮ್ಯುನಿಸ್ಟ್ ಪಕ್ಷ ವಿಭಜನೆ ಆದ ಮೇಲೆ ಕೃಷ್ಣನ್ ಸಿಪಿಐನಲ್ಲಿ ಮತ್ತು ಸೂರಿ ಸಿಪಿಐ(ಎಂ)ನಲ್ಲಿ ಬೇರೆಯಾದರು. 1979 ರಲ್ಲಿ ಮೈಕೋ ಕಾರ್ಮಿಕ ಸಂಘಕ್ಕೆ ಸೂರಿ ಅಧ್ಯಕ್ಷರಾಗುವುದಕ್ಕೆ ಮುಂಚೆ ಕೃಷ್ಣನ್ ಅಧ್ಯಕ್ಷರಾಗಿದ್ದರು. ಕೃಷ್ಣನ್ ಅವರ ವಿಧಾನದಲ್ಲಿ ಮೇಲ್ನೋಟಕ್ಕೆ ಸೂರಿಯವರಷ್ಟು ಮಿಲಿಟೆನ್ಸಿ ಕಾಣುತ್ತಿರಲಿಲ್ಲ. ಆದರೆ 1980 ರ ದಶಕದವರೆಗೂ ಬೆಂಗಳೂರಿನ ಕೈಗಾರಿಕಾ ಕಾರ್ಮಿಕರ ನಡುವೆ ಹೆಚ್ಚಿನ ಪ್ರಭಾವವಿದ್ದದ್ದು ಎಐಟಿಯುಸಿಗೆ. ಖಾಸಗಿ ಕೈಗಾರಿಕೆಗಳೇ ಅಗಬಹುದು ಅಥವಾ ಸಾರ್ವಜನಿಕ ಉದ್ದಿಮೆಗಳೇ

ಆಗಬಹುದು, ಪ್ರಧಾನವಾಗಿ ಎಐಟಿಯುಸಿ ಚಟುವಟಿಕೆಗಳು ಇದ್ದವು. ವಿಭಜನೆಯ ಕಾರಣಕ್ಕೆ ಎರಡೂ ವಿಭಾಗಗಳ ನಡುವೆ ವೈಮನಸ್ಸುಗಳೂ ಇದ್ದವು. ಹಾಗಿದ್ದಾಗಲೂ ಮೈಕೋ ಮುಷ್ಕರಕ್ಕೆ ಬೆಂಬಲಾರ್ಥವಾಗಿ ಜಂಟಿ ಹೋರಾಟ ಸಮಿತಿಯನ್ನು ರಚಿಸಿದಾಗ ಎಐಟಿಯುಸಿ ಮುಖಂಡರು ಇದರಲ್ಲಿ ಪಾಲ್ಗೊಂಡು ಬೆಂಬಲ ನೀಡಿದರು. ಕೃಷ್ಣನ್ ಅವರು ಬಂದ್ ಸಮಯದಲ್ಲಿ ಬಂಧನಕ್ಕೊಳಗಾಗಿದ್ದರು. ಸಿಪಿಐ ಒಳಗಿನ ಹೊಸ ತಲೆಮಾರಿನ ಮುಖಂಡರು ಇದಕ್ಕೆ ಕಾರಣರಾಗಿದ್ದರು[82].

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಹೋರಾಟವು 1980 ರ ದಶಕದ ಮತ್ತೊಂದು ಮಹತ್ತರವಾದ ಕಾರ್ಮಿಕರ ಹೋರಾಟ. 1.25 ಲಕ್ಷ ಕಾರ್ಮಿಕರು 75 ದಿನಗಳ ಕಾಲ ದೇಶವ್ಯಾಪಿ, ಪ್ರಧಾನವಾಗಿ ಬೆಂಗಳೂರು ಕೇಂದ್ರದಲ್ಲಿ ನಡೆಸಿದ ಹೋರಾಟವಿದು. ಬೆಂಗಳೂರಿನ ಹೆಚ್‌ಎಎಲ್, ಬಿಇಎಲ್, ಬಿಇಎಂಎಲ್, ಹೆಚ್‌ಎಂಟಿ ಮತ್ತು ಐಟಿಐ ಈ ಐದು ಕೈಗಾರಿಕೆಗಳು ಮತ್ತು ದೇಶಾದ್ಯಂತ[83] ಇರುವ ಹಲವು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಇದರಲ್ಲಿ ಭಾಗಿಯಾದರು. ಬೆಂಗಳೂರಿನಲ್ಲಿ ನೇರವಾಗಿ 70,000 ಕಾರ್ಮಿಕರು ಹೋರಾಟದಲ್ಲಿದ್ದರು. ಇದಲ್ಲದೆ ಈ ಕೈಗಾರಿಕೆಗಳನ್ನು ಅವಲಂಬಿಸಿದ್ದ ಲಕ್ಷಾಂತರ ಕಾರ್ಮಿಕರು ಇದರಿಂದ ಬಾಧಿತರಾಗಿದ್ದರು. 1980 ರ ಡಿಸೆಂಬರ್ 26 ರಂದು ಆರಂಭವಾಗಿ 1981 ರ ಮಾರ್ಚ್ 12 ರವರೆಗೆ ನಡೆದ ಈ ಮುಷ್ಕರ ಸಾರ್ವಜನಿಕ ಉದ್ದಿಮೆಗಳ ಇದುವರೆಗಿನ ಹೋರಾಟಗಳಲ್ಲಿ ಅತ್ಯಂತ ಧೀರ್ಘವಾದುದು. ಇಷ್ಟಕ್ಕೂ ಈ ದೀರ್ಘ ಮುಷ್ಕರಕ್ಕೆ ಕಾರಣವೇನೆಂದರೆ, ಬೆಂಗಳೂರಿನಲ್ಲೇ ಇರುವ ಮತ್ತೊಂದು ಕೇಂದ್ರ ಸರ್ಕಾರಿ ಸ್ವಾಮ್ಯದ ಬಿಹೆಚ್‌ಇಎಲ್ ಸಂಸ್ಥೆಯಲ್ಲಿದ್ದ ವೇತನ ಸಮಾನತೆಗೆ ಸಂಬಂಧಿಸಿತ್ತು. ಈ ವೇತನ ಸಮಾನತೆಯು ವಿಭಿನ್ನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಕಾರ್ಮಿಕರ ನಡುವಿನ ಅಥವಾ ವೇತನ ಶ್ರೇಣಿಗಳ ನಡುವಿನ ಸಮಾನತೆಯ ಪ್ರಶ್ನೆಯಾಗಿರಲಿಲ್ಲ. ಅಥವಾ ಇಡೀ ದೇಶಕ್ಕೆಲ್ಲಾ ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲೂ ಒಂದೇ ರೀತಿಯ ವೇತನ ಸಮಾನತೆಯ ಪ್ರಶ್ನೆಯೂ ಆಗಿರಲಿಲ್ಲ. ಬದಲಿಗೆ ಕೇವಲ ಕನಿಷ್ಟ ವೇತನದ ವಿಚಾರದಲ್ಲಿ ಸಮಾನತೆಯ ಬೇಡಿಕೆಯಾಗಿತ್ತು. ಇದಕ್ಕಾಗಿ ಒಂದು ಜಂಟಿ ಕ್ರಿಯಾ ಸಮಿತಿ (ಜೆಎಫ್) ರಚಿಸಲಾಗಿತ್ತು. ಇದರಲ್ಲಿ ಮೈಕೆಲ್ ಫರ್ನಾಂಡಿಸ್, ಎಂ.ಎಸ್.ಕೃಷ್ಣನ್, ಹೆಚ್.ಮಹಾದೇವನ್, ಡಿ.ರಾಜಗೋಪಾಲ್, ಬಿ.ಇ.ಶಂಭು, ಮತ್ತು ಟಿ.ಜಿ.ಶ್ರೀನಿವಾಸಮೂರ್ತಿ ಇವರುಗಳು ಜಂಟಿ ಸಂಚಾಲಕರಾಗಿದ್ದರು[84]. ಸರ್ಕಾರ ಮುಷ್ಕರದ ದಿನದಿಂದಲೇ ನಗರದಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆ ಸೆಕ್ಷನ್ 35 ಜಾರಿಗೊಳಿಸಿತು. ಮುಷ್ಕರ ಆರಂಭಗೊಳ್ಳುವ ಮುಂಚೆ ಹಲವಾರು ಪ್ರತಿಭಟನೆಗಳು, ಕಪ್ಪು ಪಟ್ಟಿ ಧರಿಸುವುದು, ಡಿಸೆಂಬರ್ 10 ರಂದು ವಿವಿಧ ರಾಜಧಾನಿಗಳಲ್ಲಿ ರಾಜ್‌ಭವನ್ ಚಲೋ ಇತ್ಯಾದಿ ಕಾರ್ಯಕ್ರಮಗಳು ನಡೆದಿದ್ದವು. ಆದರೆ ಭಾರತ ಸರ್ಕಾರ ಇದಕ್ಕೆ ಮಹತ್ವ ನೀಡಲಿಲ್ಲ. ಕರ್ನಾಟಕ


ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಹೋರಾಟದಲ್ಲಿ

ಸರ್ಕಾರದ ಕಾರ್ಮಿಕ ಇಲಾಖೆಯೂ ಸಹ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಮುಷ್ಕರ ಆರಂಭವಾಗಿ ಹಲವು ದಿನಗಳಾದರೂ ಕೇಂದ್ರ ಸರ್ಕಾರ ಗಮನ ಕೊಡದಿದ್ದಾಗ 1981 ರ ಜನವರಿ 20 ರಂದು ಬೆಂಗಳೂರು ಬಂದ್ ನಡೆಸಲಾಯಿತು. ಕಾರ್ಮಿಕ ಹೋರಾಟಗಳ ಸಲುವಾಗಿ ಬೆಂಗಳೂರು ಬಂದ್ ಆಚರಣೆ ಎಂಬುದು ಮೈಕೋ ಹೋರಾಟದ ನಂತರ, ಇದು ಎರಡನೆ ಬಾರಿಗೆ ನಡೆಯಿತು. ಬಂದ್ ಯಶಸ್ವಿಯಾಯಿತು. ಪೊಲೀಸ್ ಗೋಲೀಬಾರ್ ನಡೆದು ಹೆಚ್ಎಎಲ್ ಬಳಿ ಇಬ್ಬರು ಸಾವನ್ನಪ್ಪಿದರು. 1000 ಕ್ಕೂ ಹೆಚ್ಚು ಜನರ ಬಂಧನವಾಯಿತು. ಪೊಲೀಸರೇ ಕಲ್ಲುಗಳನ್ನು ತೂರಿ ದೌರ್ಜನ್ಯಕ್ಕಿಳಿದರು[85]. ನ್ಯಾಯಾಂಗ ತನಿಖೆಗೆ ಜೆಎಫ್ ಆಗ್ರಹಿಸಿತು. ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಮತ್ತು ಸಂಸದರಾಗಿದ್ದ ಇಂದ್ರಜಿತ್ ಗುಪ್ತ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಮತ್ತು ಸಂಸದರಾಗಿದ್ದ ಪಿ.ರಾಮಮೂರ್ತಿ ಗೋಲೀಬಾರ್‌ನ್ನು ಖಂಡಿಸಿ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಒತ್ತಾಯಿಸಿದರು. ವಿಧಾನಸಭೆಯಲ್ಲೂ ಇದು ಪ್ರತಿಧ್ವನಿಸಿ ವಿರೋಧಪಕ್ಷಗಳು ಸದನ ಬಹಿಷ್ಕಾರ ನಡೆಸಿದವು. ಆದರೆ ಗುಂಡೂರಾವ್ ಸರ್ಕಾರವಾಗಲೀ, ಕೇಂದ್ರದ ಇಂದಿರಾಗಾಂಧಿ ಸರ್ಕಾರವಾಗಲೀ ಬಗ್ಗಲಿಲ್ಲ. ಈ ನಡುವೆ ಫೆಬ್ರವರಿ 5 ರಂದು ಬೆಂಗಳೂರಿಗೆ ಬಂದ ನರಗುಂದ ಹುತಾತ್ಮ ಜ್ಯೋತಿ ಜಾಥಾವನ್ನು ಸ್ವಾಗತಿಸಿ ಜೆಎಫ್ ಬೆಂಬಲ ನೀಡಿತು. ಕಾರ್ಮಿಕರು ತಮ್ಮ ಮನೆಗಳಿಂದ ಊಟದ ಪೊಟ್ಟಣಗಳನ್ನು ತಂದು ರೈತರಿಗೆ ನೀಡಿದರು. ಕೇಂದ್ರ ಸಂಪರ್ಕ ಮಂತ್ರಿ ಸಿ.ಎಂ.ಸ್ಟೀಫನ್ ಹೇಳಿಕೆ ನೀಡಿ ಮುಷ್ಕರದ ಮುಖಂಡರನ್ನು ದೇಶದ್ರೋಹಿಗಳೆಂದು ಮತ್ತು ಶೇ. 150 ರಾಜಕೀಯ ಪ್ರೇರಿತ ಹೋರಾಟ ಎಂದು ಜರಿದದ್ದು ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿತು. ರಾಷ್ಟ್ರ ವಿರೋಧಿ ಮುಷ್ಕರವನ್ನು ನಿಷೇಧ ಮಾಡುವಂತೆ ಗುಂಡೂರಾವ್ ಹೇಳಿದ್ದು ಗಾಯದ ಮೇಲೆ ಉಪ್ಪು ಸುರಿದಂತಾಯಿತು. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ದೆಹಲಿಯಲ್ಲಿ ಅಖಿಲ ಭಾರತ ಸಮಾವೇಶವನ್ನು ಫೆಬ್ರವರಿ 22 ರಂದು ನಡೆಸಿದವು. ಮತ್ತು ಮುಷ್ಕರ ಬೆಂಬಲಾರ್ಥವಾಗಿ ಮಾರ್ಚ್ 11 ರಂದು ದೇಶವ್ಯಾಪಿ ಮುಷ್ಕರವನ್ನು ನಡೆಸಲು ತೀರ್ಮಾನಿಸಿದವು. ಫೆಬ್ರವರಿ 27 ರಂದು ಲೋಕಸಭೆಯಲ್ಲೂ ಬೆಂಗಳೂರಿನ ಹೋರಾಟ ಪ್ರತಿಧ್ವನಿಸಿತು. ಈ ನಡುವೆ ಜೆಎಫ್ ಮುಖಂಡ ಡಿ.ರಾಜಗೋಪಾಲ್ ಮೇಲೆ ಹಲ್ಲೆ ನಡೆಯಿತು. ಅಂತೂ ಕೊನೆಗೆ ಮಾರ್ಚ್ 5 ರಂದು ಮುಖ್ಯಮಂತ್ರಿ ಗುಂಡೂರಾವ್ ದೆಹಲಿಗೆ ನಿಯೋಗವನ್ನು ಕರೆದುಕೊಂಡು ಹೋಗುವುದಾಗಿ ಭರವಸೆ ನೀಡಿದರು. ಈ ನಡುವೆ ಇಂದಿರಾ ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆ ಎನ್ಎಸ್‌ಯುಐ(ಐ) ಹೆಸರಿನಲ್ಲಿ ಬೆಂಗಳೂರಿನ ಎಲ್ಲಾ ಕಡೆಗಳಲ್ಲಿ ಮುಷ್ಕರವನ್ನು ಮುರಿಯುವ ದೃಷ್ಟಿಯಿಂದ ತಮಿಳು ಮತ್ತು ಮಲಯಾಳಿ ಕಾರ್ಮಿಕರ ವಿರುದ್ಧ ಭಾಷಾ ದ್ವೇಷವನ್ನು ಹುಟ್ಟಿಸುವ ಪ್ರಚೋದನಕಾರಿ ಹೇಳಿಕೆಗಳುಳ್ಳ ಪೋಸ್ಟರ್‌ಗಳನ್ನು ಹಾಕಿತು. ಈ ಕುರಿತು ಮತ್ತು ಐಎನ್‌ಟಿಯುಸಿ ಮುಖಂಡ ಎಫ್.ಎಂ.ಖಾನ್‌ರ ಪಾತ್ರದ ಕುರಿತು ವ್ಯಾಪಕ ಖಂಡನೆ ವ್ಯಕ್ತವಾಯಿತು. ಇಡೀ ಹೋರಾಟದಲ್ಲಿ ಐಎನ್‌ಟಿಯುಸಿ(ಐ) ಮುಷ್ಕರದಿಂದ ದೂರ ಉಳಿಯಿತು ಮಾತ್ರವಲ್ಲ, ಮುಷ್ಕರ ಮುರಿಯಲು ಪ್ರಯತ್ನಿಸಿತು[86]. ಇವೆಲ್ಲವುಗಳ ನಡುವೆಯೂ ಜೆಎಫ್‌ನ ನಿಯೋಗವನ್ನು ಕರೆದೊಯ್ಯುವುದಾಗಿ ಮುಖ್ಯಮಂತ್ರಿ ನೀಡಿದ ಭರವಸೆಯ ಮೇಲೆ ಮುಷ್ಕರ ಮಾರ್ಚ್ 12 ರಂದು ವಾಪಸ್ ಆಯಿತು.

ತಿಂಗಳ ಮೇಲಾದರೂ ಮಾತುಕತೆ ನಡೆಯದಿದ್ದಾಗ ಏಪ್ರಿಲ್ 29 ರಂದು ಜೆಎಫ್ ನೇತೃತ್ವದಲ್ಲಿ ಮೈಕೆಲ್ ಫರ್ನಾಂಡಿಸ್, ಮಹಾದೇವನ್, ಶಂಭು, ರಂಗನಾಥನ್, ಶಿವಣ್ಣ, ಮಣಿ ಮತ್ತು ಮಾಧವರಾವ್ ಇವರು ಏಪ್ರಿಲ್ 29 ರಂದು ಉಪವಾಸ ಸತ್ಯಾಗ್ರವನ್ನು ಆರಂಭಿಸಿದರು. ಇದೇ ರೀತಿ ಹೈದರಾಬಾದ್ ಮತ್ತು ದೆಹಲಿಯಲ್ಲೂ ಉಪವಾಸ ಸತ್ಯಾಗ್ರಹಗಳು ಶುರುವಾದವು. ಮೇ ದಿನಾಚರಣೆ ರ್‍ಯಾಲಿಯಲ್ಲಿ ಇದೇ ಮುಖ್ಯ ವಿಷಯವಾಯಿತು. ಮಹದೇವನ್, ಬಾಬು ಮ್ಯಾಥ್ಯು, ಕೆ.ಎಂ.ಪುಟ್ಟಯ್ಯ, ಎಸ್.ಸೂರ್ಯನಾರಾಯಣ ರಾವ್ ಇವರೆಲ್ಲಾ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿದರು. ಉಪವಾಸ ನಿರತರ ಬೆಂಬಲಾರ್ಥವಾಗಿ ಮೇ 3 ರಂದು 50,000 ಕಾರ್ಮಿಕರು ಮೆರವಣಿಗೆ ಮಾಡಿದರು. ಮೇ 4 ರಂದು ಸಾರ್ವಜನಿಕ ಉದ್ದಿಮೆ ಕಾರ್ಮಿಕರಲ್ಲದೆ, ಇತರೆ ಕಾರ್ಮಿಕರೂ ಒಳಗೊಂಡು 60,000 ಕಾರ್ಮಿಕರು ಮೆರವಣಿಗೆ ನಡೆಸಿದರು[87]. ಬೆಂಗಳೂರಿನಲ್ಲಿ ಹಿಂಸಾಚಾರ ಭುಗಿಲೆದ್ದಿತು. ಮೇ 5 ರಂದು ಬಸ್‌ಗಳು ಮತ್ತು ಅಂಚೆ ಕಛೇರಿ ಬೆಂಕಿಗೆ ಆಹುತಿಯಾಯಿತು. ಸರ್ಕಾರ ಸೈನ್ಯವನ್ನು ಸಿದ್ಧತೆಯಲ್ಲಿಟ್ಟಿತು. ಮೇ 6 ರಂದು ಮತ್ತೆ 2 ಬಸ್‌ಗಳು ಬೆಂಕಿಗೆ ಆಹುತಿಯಾದವು. 500 ಜನರ ಬಂಧನವಾಯಿತು. 12 ದಿನಗಳ ನಂತರ ಬೆಂಗಳೂರಿನ ಹೆಚ್‌ಎಎಲ್, ಐಟಿಐ, ಬಿಇಎಲ್ ಮತ್ತು ಬಿಇಎಂಎಲ್ ಲಾಕ್‌ಔಟ್ ಘೋಷಣೆ ಮಾಡಿದವು. ಕೆಜಿಎಫ್‌ನಲ್ಲಿ 27 ದಿನಗಳ ಸತ್ಯಾಗ್ರಹ ನಡೆಯಿತು. ಸರ್ಕಾರ ಬೆಂಗಳೂರು ನಗರದಲ್ಲಿ ಮಾತ್ರವಲ್ಲದೆ ಹೊರ ವಲಯದಲ್ಲೂ ನಿಷೇಧಾಜ್ಞೆಗಳನ್ನು ಜಾರಿಗೊಳಿಸಿತು. ಮೇ 25 ರಂದು ಜೆಎಫ್ ನಾಯಕರನ್ನು ಸರ್ಕಾರ ಬಂಧಿಸಿತು. ಕೊನೆಗೆ 1981 ಮೇ 26 ರಂದು ತಿಂಗಳಿಗೆ ರೂ. 25 ಮತ್ತು ರೂ. 700 ಲಂಪ್‌ಸಮ್ ನೀಡುವುದಾಗಿ ಸರ್ಕಾರದ ಜೊತೆ ಒಪ್ಪಂದವಾಗಿ ಹೋರಾಟ ಮುಕ್ತಾಯವಾಯಿತು.

ಇಡೀ ಹೋರಾಟವನ್ನು ವಿಶ್ಲೇಷಿಸುತ್ತಾ ಬಾಬೂ ಮ್ಯಾಥ್ಯೂ ಅವರು ಹೇಳುವುದು ಏನೆಂದರೆ, ಈ ಮುಷ್ಕರದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ 1000 ಕ್ಕೂ ಹೆಚ್ಚು ಕಾರ್ಮಿಕರ ಸ್ಥಳೀಯ ಸಮಿತಿಗಳನ್ನು ರಚಿಸಲಾಗಿತ್ತು. ಆ ಸಮಿತಿಗಳಲ್ಲಿ ವಿವಿಧ ಕಾರ್ಖಾನೆಗಳ ಕಾರ್ಮಿಕರು ಇರುತ್ತಿದ್ದರು. ಅವರು ಮುಷ್ಕರದ ವಿಷಯಗಳನ್ನು ಜನರಿಗೆ ತಿಳಿಸುವುದು ಮತ್ತು ಅದರ ಪರವಾದ ಜನಾಭಿಪ್ರಾಯವನ್ನು ರೂಪಿಸುವ ಕೆಲಸ ಮಾಡುತ್ತಿದ್ದರು. ಈ ಕೆಲಸಗಳಲ್ಲಿ ಸ್ಥಳೀಯವಾಗಿ ಕಾರ್ಮಿಕರ ಕುಟುಂಬಗಳ ಸದಸ್ಯರು ಭಾಗವಹಿಸುತ್ತಿದ್ದರು. ಈ ಮುಷ್ಕರದಿಂದ ಹೊರಹೊಮ್ಮಿದ ಅದ್ಭುತ ಸಂಘಟನಾ ರಚನೆಯಿದು. ಆದರೆ ಅದರ ಸಾಮರ್ಥ್ಯವನ್ನು ಗ್ರಹಿಸದೆ ಅದನ್ನು ನಶಿಸಲು ಬಿಡಲಾಯ್ತು. ಕಾರ್ಮಿಕ ನಾಯಕರಿಗೆ ಇಂತಹ ಬೃಹತ್ ಶ್ರಮಶಕ್ತಿಯನ್ನು ಸರಿಯಾಗಿ ಹೇಗೆ ಬಳಸಬೇಕೆಂಬ ಬಗ್ಗೆ ಅರಿವಿರಲಿಲ್ಲ[88].

❖ ❖ ❖

ಈ ಅವಧಿಯ ಅತ್ಯಂತ ಪ್ರಮುಖವಾದ ರೈತ ಹೋರಾಟವೆಂದರೆ **ಮಲಪ್ರಭಾ ರೈತರ ಹೋರಾಟ** ಅಥವಾ ನರಗುಂದ ರೈತ ಬಂಡಾಯ. ಮಲಪ್ರಭಾ ನದಿಗೆ ಅಣೆಕಟ್ಟು ಕಟ್ಟಿ ರೈತರ ಜಮೀನುಗಳಿಗೆ ನೀರು ಹರಿಸುವ ಪ್ರಕ್ರಿಯೆಯಲ್ಲಿ ರೈತರು ಹೆಚ್ಚೆಚ್ಚು ಸಾಲದ ಸುಳಿಗೆ ಸಿಲುಕುತ್ತಾ ಸಾಗಿದರು. ಹಾಗಿರುವಾಗ ಅಭಿವೃದ್ಧಿ ತೆರಿಗೆ ಮತ್ತು

ನೀರಿನ ತೆರಿಗೆಗಳನ್ನು ಕೊಡಬೇಕೆಂದು ಸರ್ಕಾರ ಒತ್ತಡ ಹಾಕತೊಡಗಿತು. ಇದರ ವಿರುದ್ಧ 'ಮಲಪ್ರಭಾ ನೀರಾವರಿ ರೈತ ಸಮನ್ವಯ ಸಮಿತಿ' ರಚಿಸಿಕೊಂಡರು. 1980 ಜುಲೈ 21 ರಂದು ನರಗುಂದದಲ್ಲಿ ಸಾವಿರಾರು ರೈತರು, ತಮಗೆ ಸ್ಪಂದನೆ ಸಿಗದೆ ತಹಶೀಲ್ದಾರ ಕಛೇರಿಗೆ ನುಗ್ಗಲು ಯತ್ನಿಸಿದಾಗ ನಡೆದ ಗೋಲೀಬಾರ್‌ನಲ್ಲಿ ಒಬ್ಬ ರೈತ ಮೃತನಾದ. ಹಿಂಸಾರೂಪ ತಾಳಿದ ಹೋರಾಟದಲ್ಲಿ ಮೂವರು ಪೊಲೀಸ್ ಅಧಿಕಾರಿಗಳು ಪ್ರಾಣ ಕಳೆದುಕೊಂಡರು. ನಂತರ ನಡೆದ ರೈತರ ರಾಜ್ಯ ಪಾದಯಾತ್ರೆ, ಅದು ಉಂಟು ಮಾಡಿದ ತಲ್ಲಣಗಳು, ಅದರ ರಾಜಕೀಯ ಪರಿಣಾಮಗಳು, ಇದರಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರ ಇವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಧಾರವಾಡ, ಬೆಳಗಾವಿ, ಮತ್ತು ಬಿಜಾಪುರ (ಈಗ ಬಾಗಲಕೋಟೆ) ಜಿಲ್ಲೆಗಳಿಗೆ ಒಳಪಟ್ಟ 9 ತಾಲೂಕುಗಳಿಗೆ[89] ಸೇರಿದ 5,26,850 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುವ ಈ ಯೋಜನೆ (ಸೊಪ್ಪಿನ್ 2011: 22) ನೀರು ಹರಿಯಲು ಶುರು ಮಾಡಿದ ನಂತರ, ಬೆಳೆ ಪದ್ಧತಿಯಲ್ಲಿ, ಬದಲಾವಣೆ, ಮಣ್ಣಿನ ಗುಣದಲ್ಲಿ ಬದಲಾವಣೆ, ಇಳುವರಿಯಲ್ಲಿ ಏರಿಳಿತ, ಆಹಾರ ಧಾನ್ಯಗಳಿಗಿಂತ ವಾಣಿಜ್ಯ ಬೆಳಗಳಿಗೆ ಸ್ಥಿತ್ಯಂತರ, ಲಾಗುವಾಡುಗಳ ವೆಚ್ಚದಲ್ಲಿ ಏರಿಕೆ, ಸಾಲ ಪ್ರಮಾಣಗಳಲ್ಲಿ ಹೆಚ್ಚಳ, ಹೀಗೆ ವಾಸ್ತವದಲ್ಲಿ ರೈತರಿಗೆ ಸಕಾರಾತ್ಮಕ ಪರಿಣಾಮದ ಬದಲಿಗೆ ನಕಾರಾತ್ಮಕ ಪರಿಣಾಮ ಉಂಟು ಮಾಡಿತು. ಇವೆಲ್ಲವುಗಳ ನಡುವೆ ಕಿಡಿ ಹೊತ್ತಿಸಿದ ಸಮಸ್ಯೆಯೆಂದರೆ, ರೈತರಿಗೆ ಕಾಲುವೆಗಳಲ್ಲಿ ನೀರು ಹರಿಸಲು ಪ್ರಾರಂಭಿಸಿದ್ದು 1976–77 ರಲ್ಲಿ. ಆದರೆ ಅಭಿವೃದ್ಧಿ ತೆರಿಗೆ ಮತ್ತು ನೀರಾವರಿ ತೆರಿಗೆ ಹೆಸರಿನಲ್ಲಿ 1973–74 ರಿಂದಲೇ ಕೊಡಬೇಕೆಂದು ಆದೇಶ ಮಾಡಿದ್ದು. ಇದು ರೈತರಿಗೆ ಗಾಯದ ಮೇಲೆ ಬರೆ ಎಳೆದಂಗಾಯ್ತು. 1979 ರ ಇದೇ ವೇಳೆಗೆ ಹಳಿಯಾಳದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಅರಣ್ಯ ಹಿಡಿಯುವ ಹೋರಾಟ ನಡೆದು ಕಮ್ಯುನಿಸ್ಟ್ ಮುಖಂಡ ಮಾರುತಿ ಪವಾರ್‌ನನ್ನು ಪೊಲೀಸರು ಗುಂಡಿಟ್ಟು ಕೊಂದಿದ್ದರು. ಇದರ ಪ್ರಭಾವವೂ ಸೇರಿ ಇಲ್ಲಿನ ರೈತರಲ್ಲಿ ಒಂದು ಸಂಘಟನೆಯ ಅಗತ್ಯವನ್ನು ಅದು ಹೇಳುತ್ತಿತ್ತು. ಅದೇ ಸಂದರ್ಭಕ್ಕೆ ಧಾರವಾಡದಲ್ಲಿ ವಿದ್ಯಾರ್ಥಿಗಳ ನಡುವೆ ಪ್ರಭಾವಶಾಲಿಯಾಗಿ ಬೆಳೆದಿದ್ದ ವಿ.ಎನ್.ಹಳಕಟ್ಟಿಯವರು ರೈತ ಸಂಘವನ್ನು ಕಟ್ಟಬೇಕೆಂದು ಹೊರಟಿದ್ದರು. ಈ ನಿಟ್ಟಿನಲ್ಲಿ ಕುಂದಗೋಳದ ಒಂದು ಗ್ರಾಮದಲ್ಲಿ ರೈತರ ತರಬೇತಿ ಶಿಬಿರ ನಡೆಸಿದ್ದರು[90]. ಆ ಸಂದರ್ಭಕ್ಕೆ ಬಿ.ಎನ್.ಸೊಪ್ಪಿನ್[91] ಅವರು ತಮ್ಮ ಊರಾದ ಅಗಳವಾಡಿಯಲ್ಲಿ ಮಲಪ್ರಭಾ ರೈತರ ಸಮಸ್ಯೆಗಳ ವಿಚಾರದಲ್ಲಿ ಸಭೆಯನ್ನು ಕರೆದಿದ್ದರು. ಅದರಲ್ಲಿ ಹಳಕಟ್ಟಿ, ಯಾವಗಲ್ ಮುಂತಾದವರು ಭಾಷಣ ಮಾಡಿದರು. ಅಲ್ಲಿ 28 ಜನ ಮುಖಂಡರಿರುವ 'ಮಲಪ್ರಭಾ ನೀರಾವರಿ ರೈತ ಸಮನ್ವಯ ಸಮಿತಿ – ನವಲಗುಂದ ತಾಲೂಕು' ರಚನೆಯಾಯಿತು. ಅದು ಹಾಗೇ ಮುಂದುವರಿದು ಹಳ್ಳಿ ಹಳ್ಳಿಗೂ ಸಂದೇಶ ಹೋಯಿತು. ಈ ಸಮಿತಿಯು 23 ಬೇಡಿಕೆಗಳ ಪಟ್ಟಿಯನ್ನು ತಯಾರಿಸಿತು. 1980 ಏಪ್ರಿಲ್ 3 ರಂದು ಮುಖ್ಯಮಂತ್ರಿ ಗುಂಡೂರಾವ್ ನರಗುಂದಕ್ಕೆ ಬಂದಿದ್ದಾಗ, ಹೋರಾಟ ಸಮಿತಿಯು ಮನವಿ ಪತ್ರವನ್ನು ನೀಡಿತು. ಕಾಕತಾಳಿಯವೆಂಬಂತೆ ಎಸ್.ಬಂಗಾರಪ್ಪನವರ ನೇತೃತ್ವದಲ್ಲಿ ಕೃಷಿ ಅಧ್ಯಯನ ಸಮಿತಿಯನ್ನು ಸರ್ಕಾರ ರಚಿಸಿತು. ಇದರಿಂದ ರೈತರಲ್ಲಿ ವಿಶ್ವಾಸ ಹೆಚ್ಚಾಯಿತು. ಚಳುವಳಿಯನ್ನು ವಿಸ್ತರಿಸುವ ದೃಷ್ಟಿಯಿಂದ 1980 ಜುಲೈ 1 ರಂದು ನರಗುಂದ, ನವಲಗುಂದ ಮತ್ತು ಸವದತ್ತಿ

ತಾಲೂಕುಗಳನ್ನು ಸೇರಿಸಿ 'ಮಲಪ್ರಭಾ ನೀರಾವರಿ ರೈತ ಹೋರಾಟ ಸಮನ್ವಯ ಸಮಿತಿ' ರಚನೆಯಾಯಿತು. ಇದರ ಮುಖಂಡರಾಗಿ ಕಮ್ಯುನಿಸ್ಟರಾದ ವಿ.ಎನ್.ಹಳಕಟ್ಟಿ, ಎಸ್.ಕಪ್ಪಣ್ಣನವರ್[92] ಮತ್ತು ಕ್ರಾಂತಿರಂಗದ ಭಾಗವಾಗಿದ್ದ ಬಿ.ಆರ್.ಯಾವಗಲ್ ಮತ್ತು ಶಿವದೇವಗೌಡ ಪಾಟೀಲ್, ಬಿ.ಬಿ.ಗಾಣಗೇರಾ, ಶಿವಣ್ಣ ಬಾಳೀಕಾಯಿ, ರಾಜಶೇಖರಪ್ಪ, ಹೊಸಕೇರಿ ಇವರುಗಳು ಸಂಚಾಲಕರಾಗಿದ್ದರು. ಈ ರೀತಿಯಲ್ಲಿ ಸಿದ್ದಗೊಂಡ ರೈತ ಹೋರಾಟವು ಸರ್ಕಾರಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟರೂ ಸ್ಪಂದಿಸದೇ ಇದ್ದಾಗ 1980 ರ ಜುಲೈ 21 ರ ಘಟನೆ ಜರುಗಿತು. ಅಗಳವಾಡಿಯ ಯುವ ರೈತ ಬಸಪ್ಪ ಲಕ್ಕುಂಡಿಯ ಜೀವವನ್ನು ಪೊಲೀಸ್ ಗುಂಡು ಬಲಿ ತೆಗೆದುಕೊಂಡಿತು (ಸೊಪ್ಪಿನ್ 2011: 40–52).

ಮಾರನೇ ದಿನ ನರಗುಂದಕ್ಕೆ ಬಂದ ಮುಖ್ಯಮಂತ್ರಿ ಸೇಡಿನ ಕ್ರಮಗಳಿಗೆ ಮುಂದಾದರು. ನಂತರ 89 ರೈತರನ್ನು ಬಂಧಿಸಿ ಜೈಲಿಗೆ ಹಾಕಿದರು. ರಾಜ್ಯದಲ್ಲಿ ಆ ವೇಳೆಗೆ ತಾಂಡವವಾಡುತ್ತಿದ್ದ ಅಗತ್ಯ ವಸ್ತುಗಳ ಬೆಲೆ ಏರಿಕೆ ಸಮಸ್ಯೆ ಜೊತೆಗೆ ಇದು ಕಿಡಿ ಹೊತ್ತಿಸಿತು. ಇದು ದಿನದಿನಕ್ಕೂ ರಾಜ್ಯವನ್ನು ವ್ಯಾಪಿಸಿತು. ಇಡೀ ರಾಜ್ಯಾದ್ಯಂತ ನಡೆದ ಪೊಲೀಸ್ ಗೋಲೀಬಾರ್‌ಗಳಿಂದ 135 ಜನರ ಪ್ರಾಣಗಳನ್ನು ಗುಂಡೂರಾವ್ ಸರ್ಕಾರ ಬಲಿ ಪಡೆಯಿತು. ಈ ನಡುವೆ ಶಿವಮೊಗ್ಗ ಜಿಲ್ಲೆಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಒಟ್ಟಿಗೆ ಸೇರಿ ಹೋರಾಟ ಮಾಡುವ ಪ್ರಸ್ತಾಪವಿಟ್ಟಿದ್ದರು. ಇದರ ಭಾಗವಾಗಿ ಶಿವಮೊಗ್ಗದಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಯಿತು. ಇದರಲ್ಲಿ ನರಗುಂದ ರೈತ ಬಂಡಾಯದ ಮುಖಂಡರನ್ನು ಕಡೆಗಣಿಸಿದರೆಂಬ ಭಾವನೆ (ಸೊಪ್ಪಿನ್ 2011: 56) ಮತ್ತು ಶಿವಮೊಗ್ಗದ ಮುಖಂಡರ ಕಣ್ಣೋಟಗಳ ಬಗ್ಗೆ ಅಸಮಾಧಾನಗಳು ಹುಟ್ಟಿಕೊಂಡವು. ಮಹಾರಾಷ್ಟ್ರದ ಶರದ್ ಜೋಷಿಯಂತಹ ರೈತ ಮುಖಂಡರ ದೃಷ್ಟಿಕೋನ ಹೇಗಿತ್ತೆಂದರೆ 'ಭಾರತ್ ವರ್ಸಸ್ ಇಂಡಿಯಾ' ಎಂಬ ವಾದವನ್ನು ಮಾಡುತ್ತಿದ್ದರು. ಹಳ್ಳಿಯ ಜನರನ್ನು ಮತ್ತು ನಗರಗಳ ಕಾರ್ಮಿಕರನ್ನು ಎತ್ತಿ ಕಟ್ಟುವ ಭಾಗವಾಗಿ ಇಂತಹ ವಾದಗಳನ್ನು ಮಾಡುತ್ತಿದ್ದರು (ಹಳಕಟ್ಟಿಯೊಂದಿಗೆ ಸಂದರ್ಶನ). ಇದೇನೇ ಮಿತಿಗಳಿದ್ದರೂ ಒಟ್ಟಾಗಿ ಹೋರಾಟವೆಂಬುದು ವಾಸ್ತವದಲ್ಲಿ ಜಾರಿಯಾಗುವುದು ಕಷ್ಟವಾಯಿತು. ಪ್ರಾಂತ ರೈತ ಸಂಘವು 1980 ರ ಡಿಸೆಂಬರ್ 12 ರಂದು 30,000 ರೈತರು ಮತ್ತು ಕಾರ್ಮಿಕರ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿತು. ಪಿ.ರಾಮಚಂದ್ರರಾವ್, ಹೆಚ್.ಮುಗವಾಳಪ್ಪ, ಹಳಕಟ್ಟಿ, ಭೀಮಸಿ ಕಲಾದಗಿ, ಆರ್.ವೆಂಕಟರಾಮಯ್ಯ, ಅಪ್ಪಸ್ವಾಮಿರೆಡ್ಡಿ ನೇತೃತ್ವ ನೀಡಿದ್ದರು (ಸೊಪ್ಪಿನ್ 2011: 57).

ಬಂಧಿತ ರೈತರನ್ನು ಬಿಡುಗಡೆ ಮಾಡಬೇಕು ಮತ್ತು ಇತರ ಬೇಡಿಕೆಗಳನ್ನು ಆಗ್ರಹಿಸಿ ಕಾಲ್ನಡಿಗೆ ಜಾಥಾ ಮಾಡಬೇಕೆಂದು ಹೋರಾಟ ಸಮಿತಿ ತೀರ್ಮಾನಿಸಿತು. ಆದರೆ ಇದರ ರಾಜಕೀಯ ಸ್ವರೂಪ ಭಿನ್ನವಾಯಿತು. ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್(ಯು), ಲೋಕದಳ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಜಂಟಿ ಆಶ್ರಯದಲ್ಲಿ 1981 ರ ಜನವರಿ 2 ರಂದು 'ಕರ್ನಾಟಕ ಪ್ರಗತಿಪರ ಜನತಂತ್ರ ರಂಗ'ವನ್ನು ರಚಿಸಲಾಯಿತು. ಇದರಡಿಯಲ್ಲಿ ರೂಪಿಸಲಾದ ಹೋರಾಟ ಸಮಿತಿಗೆ ಡಿ.ಬಿ.ಚಂದ್ರೇಗೌಡ ಸಂಚಾಲಕರಾಗಿ, ಎಂ.ಕೆ.ಭಟ್, ಬಿ.ವಿ.ಕಕ್ಕಿಲ್ಲಾಯ, ನಂಜೇಗೌಡ ಇವರುಗಳು ಸಹ ಸಂಚಾಲಕರಾಗಿ ಆಯ್ಕೆಯಾದರು. 33 ಜನರ ಸಮಿತಿಯು ಸಭೆ ಸೇರಿ ನರಗುಂದದಿಂದ

ಬೆಂಗಳೂರಿಗೆ ಪಾದಯಾತ್ರೆಯನ್ನು ನಡೆಸಲು ತೀರ್ಮಾನಿಸಿತು. ಗಾಂಧಿಯವರ ದಂಡಿಯಾತ್ರೆ ಮತ್ತು ಎ.ಕೆ. ಗೋಪಾಲನ್ ಅವರ ಕಾಸರಗೋಡಿನಿಂದ ತಿರುವನಂತಪುರದವರೆಗಿನ ಪಾದಯಾತ್ರೆಗಳನ್ನು ಮಾದರಿಗಳಾಗಿ ಪರಿಗಣಿಸಲಾಯಿತು. 1981 ಜನವರಿ 16 ರಂದು ನರಗುಂದದಿಂದ ಜಾಥಾ ಬೆಂಗಳೂರಿಗೆ ಹೊರಟಿತು. 12 ಬೇಡಿಕೆಗಳನ್ನು ಈ ರಂಗವು ಸರ್ಕಾರದ ಮುಂದಿಟ್ಟಿತು.

1. 89 ಜನರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಬೇಕು
2. ಹಳಿಯಾಳದಲ್ಲಿ ನಡೆದ ಪೊಲೀಸ್ ಗೋಲೀಬಾರ್‌ನಲ್ಲಿ ಒಬ್ಬ ರೈತ ಸತ್ತಿದ್ದು, 130 ಜನರ ಮೇಲೆ ಹಾಕಿರುವ ಕೇಸ್‌ಗಳನ್ನು ವಾಪಸ್ ಪಡೆಯಬೇಕು.
3. ಕೃಷಿಯನ್ನು ಉದ್ಯಮವೆಂದು ಪರಿಗಣಿಸಿ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡಬೇಕು.
4. ಲಾಭದಾಯಕ ಬೆಲೆ ನೀಡುವ ಯೋಜನೆಗೆ ಪೂರಕವಾಗುವಂತೆ ಕೃಷಿ ಸಾಲ ವ್ಯವಸ್ಥೆಯನ್ನು ಪುನರ್ರಚಿಸಬೇಕು.
5. ರೈತರ ಸಾಲ ಮನ್ನಾ ಮಾಡಬೇಕು.
6. ಭೂ ಹೀನ ಕೃಷಿ ಕಾರ್ಮಿಕರಿಗೆ 10 ರೂ ಕನಿಷ್ಟ ಕೂಲಿ ನಿಗದಿಪಡಿಸಬೇಕು. ಅವರ ಕಲ್ಯಾಣ ಸಾಧಿಸುವ ಸಮಗ್ರ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು.
7. ಭೂಸುಧಾರಣೆ ಮತ್ತು ಭೂ ಹಂಚಿಕೆ ಕಾರ್ಯಕ್ರಮಗಳನ್ನು ಕಾಲಮಿತಿಯೊಳಗೆ ನಿಗದಿಪಡಿಸಿ ತ್ವರಿತಗೊಳಿಸಬೇಕು. ಭುಮಿ ಕಳೆದುಕೊಂಡವರಿಗೆ ಸರಕಾರವೇ ನೇರವಾಗಿ ಪರಿಹಾರ ನೀಡಿ ಗೇಣಿದಾರರಿಂದ ಹಣ ಪಡೆಯದೆ ಭೂಮಿ ಹಕ್ಕು ನೀಡಬೇಕು.
8. ಆಹಾರ ಮತ್ತು ಅಗತ್ಯ ವಸ್ತುಗಳ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಂಡು ಬಳಕೆದಾರರ ಮಂಡಳಿಗಳನ್ನು ಸಂಘಟಿಸಬೇಕು.
9. ಪ್ರವಾಹ ಮತ್ತು ಬರಗಾಲವನ್ನು ಶಾಶ್ವತವಾಗಿ ನಿವಾರಿಸುವ ಬೃಹತ್ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಬರಗಾಲ ಪೀಡಿತ ಪ್ರದೇಶಗಳಲ್ಲಿ ರೈತ ಪಡೆದ ಸಾಲ ಮತ್ತು ಬಡ್ಡಿ ವಸೂಲಿ ಮಾಡಬಾರದು.
10. ಕುಟುಂಬದಲ್ಲಿ ಕನಿಷ್ಟಪಕ್ಷ ಒಬ್ಬರಿಗೆ ಕೆಲಸ ಅಥವಾ ಸ್ವಯಂ ಉದ್ಯೋಗದ ನೆರವು
11. ವಾರ್ಷಿಕ ಆದಾಯ 4800 ರೂಗಳಿಗೂ ಅನ್ವಯವಾಗುವ ರೀತಿಯಲ್ಲಿ ಋಣ ಪರಿಹಾರ ಕಾಯ್ದೆಯನ್ನು ಅನುಷ್ಠಾನಕ್ಕೆ ತರಬೇಕು.
12. ಪಶುಸಂಗೋಪನೆ, ತೋಟಗಾರಿಕೆ, ರೇಷ್ಮೆ ವ್ಯವಸಾಯಕ್ಕೆ ಉತ್ಪಾದನೆ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವ ಪರಿಣಾಮಕಾರಿ ಯೋಜನೆಗಳನ್ನು ಸ್ಥಾಪಿಸಬೇಕು (ಸೊಪ್ಪಿನ್ 2011: 22).

ಈ ಬೇಡಿಕೆಗಳಿಗಾಗಿ ನರಗುಂದದಿಂದ 'ರೈತ ಹುತಾತ್ಮ ಜ್ಯೋತಿ' ಜಾಥಾ ಹೊರಟಿತು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬಂತೆ ಬೆಂಗಳೂರು ತಲುಪುವುದರೊಳಗೆ ಜನಸಾಗರವಾಗಿ ರೂಪುಗೊಂಡಿತು. ಎನ್.ಕೆ.ಉಪಾಧ್ಯಾಯ ಮತ್ತು ಭೀಮಸಿ ಕಲಾದಗಿ ಅವರ ನೇತೃತ್ವದಲ್ಲಿ ಬಿಜಾಪುರದ ಜಾಥಾ ಸೇರಿಕೊಂಡಿತು. ಹುಬ್ಬಳ್ಳಿಯಲ್ಲಿ ಸಿಪಿಐನ ಮುಖಂಡರಾದ ಎ.ಜೆ.ಮುಧೋಳ್ ನೇತೃತ್ವದಲ್ಲಿ ಕಾರ್ಮಿಕರ ಬೃಹತ್ ಸ್ವಾಗತ ನಡೆಯಿತು. ಹೀಗೆ ದಾರಿಯುದ್ಧಕ್ಕೂ ಉಪಜಾಥಾಗಳು ಸೇರಿಕೊಂಡವು. ಜಾಥಾದಲ್ಲಿ ರೈತರು ಹಾಡುತ್ತಿದ್ದ ಹಾಡುಗಳು ಆ ಕಾಲಕ್ಕೆ ತುಂಬಾ ಜನಪ್ರಿಯವಾಗಿದ್ದವು.

'ಎಲ್ಲೆಲ್ಲಿ ಗುಂಡೂರಾವ್ ಅಲ್ಲಲ್ಲಿ ಗೋಲೀಬಾರ್
ಎಲ್ಲೆಲ್ಲಿ ಗೋಲೀಬಾರ್ ಅಲ್ಲಲ್ಲಿ ಗುಂಡೂರಾವ್'
ಮತ್ತು
'ನಡಿ ನಡಿ ಮುಂದಕ್ಕ ದಾರಿ ಬಿಡು...
ನೀರಿಲ್ಲದ ಕಾಲುವೆಯಲ್ಲಿ ಹೊಳೆ ಹರಿಯಿತ್ತಯ್ಯಾ
ಹಣದ ಹೊಳೆ ರೈತನ ಮನೆಗೆ ಹರಿಯುತ್ತಿದೆ ಎಂದು ಸಂತಸದಿಂದ

ಕಾಲುವೆಯ ಮುಂತಾದ ಘೋಷಣೆಗಳು ಹಾಡುಗಳಾಗಿ ಅಥವಾ ಹಾಡುಗಳೇ ಘೋಷಣೆಗಳಾಗಿ ಬಳಕೆಯಾದವು.

ಫೆಬ್ರವರಿ 5 ರಂದು ಜಾಥಾ ಬೆಂಗಳೂರು ತಲುಪಿದಾಗ ಅಲ್ಲಿ ಒಂದು ವಿಭಿನ್ನ ಸಂಸ್ಕೃತಿಯ ಪ್ರದರ್ಶನಕ್ಕೆ ಅವಕಾಶವಾಯಿತು. ಬೆಂಗಳೂರಿನ ಕೈಗಾರಿಕಾ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಜಾಥಾದಲ್ಲಿ ಬಂದ ರೈತರಿಗೆ ತಂತಮ್ಮ ಮನೆಗಳಿಂದ ಊಟದ ಪೊಟ್ಟಣಗಳನ್ನು ಮಾಡಿಸಿಕೊಂಡು ಬಂದು ರಾಶಿ ರಾಶಿ ಸುರಿದರು. ಕಬ್ಬನ್‌ಪಾರ್ಕಿನಲ್ಲಿ ದೊಡ್ಡ ಗುಡ್ಡದ ಹಾಗೆ ಊಟ ರಾಶಿ ನಿರ್ಮಾಣವಾಯಿತು. ಲಕ್ಷಾಂತರ ಜನ ತಮ್ಮ ಊಟಗಳನ್ನು ಮಾಡಿದ್ದಲ್ಲದೆ ತಮ್ಮ ಊರುಗಳಿಗೆ ಬುತ್ತಿಗಳನ್ನು ತೆಗೆದುಕೊಂಡು ಹೋಗುವಷ್ಟು ಊಟದ ರಾಶಿಯನ್ನು ಕಾರ್ಮಿಕರು ನಿರ್ಮಿಸಿದ್ದರು. ಇದು ರೈತ ಮತ್ತು ಕಾರ್ಮಿಕರ ಸಖ್ಯತೆಯ ಬೃಹತ್ ಪ್ರದರ್ಶನವಾಗಿತ್ತು ಮತ್ತು ಇಂತಹ ಒಂದು ವ್ಯವಸ್ಥೆಯನ್ನು ಮಾಡಿದ್ದು ಕಮ್ಯುನಿಸ್ಟರ ನೇತೃತ್ವದ ಕಾರ್ಮಿಕ ಸಂಘಟನೆಗಳು ಎಂಬುದು ಗಮನಿಸಬೇಕಾದ ಅಂಶ[93]. ಇದಲ್ಲದೆ ದಾರಿಯುದ್ದಕ್ಕೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಹಬ್ಬದ ರೀತಿಯಲ್ಲಿ **ಪಾದಯಾತ್ರೆಯಲ್ಲಿ ಸೇರಿಕೊಂಡರು. ಶಾಲೆಗಳ** ಗೋಡೆಗಳನ್ನು ಹತ್ತಿ ಶಾಲಾ ಮಕ್ಕಳು ಕೈಬೀಸಿ ಸಂಭ್ರಮಿಸುತ್ತಿದ್ದರು. ಜನಕ್ಕೆ ಜನವೇ ರೈತರ ಜೊತೆ ನಾವಿದ್ದೇವೆ ಎಂಬ ಪರಿಯಲ್ಲಿ ತಮ್ಮ ಕೈಗಳನ್ನು ಚಾಚಿ ಬೆಂಬಲಿಸಿದರು[94]. ಈ



ನರಗುಂದ ಜಾಥಾ ಬೆಂಗಳೂರು ತಲುಪಿದಾಗ
ಕಾರ್ಮಿಕರಿಂದ ಸ್ವಾಗತ

ರೀತಿಯಾಗಿ ಅಭೂತಪೂರ್ವ ಜನಬೆಂಬಲ ಪಡೆದು ಲಕ್ಷೋಪಾದಿಯಲ್ಲಿ ಬಂದ ರೈತರನ್ನು ಕರೆದು ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸುವ ಬದಲು ಗುಂಡಾರಾವ್ ಸರ್ಕಾರ, ಜಾಥಾದಲ್ಲಿ ಬಂದವರು ರೈತರೇ ಅಲ್ಲ, ಬಾಡಿಗೆ ರೈತರೆಂದು ಹೀಯಾಳಿಸುವ ಕೆಲಸವನ್ನು ಮಾಡಿದರು. ರೈತರು ವಿಧಾನಸೌಧಕ್ಕೆ ಮುತ್ತಿಗೆ ಹಾಕಿದರು. ಎಂ.ಕೆ.ಭಟ್, ಎನ್.ಕೆ.ಉಪಾಧ್ಯಾಯ, ಪಿ.ಜಗನ್ನಾಥ್ ಮುಂತಾದ 600 ಕ್ಕೂ ಹೆಚ್ಚು ಜನರನ್ನು ಸರ್ಕಾರ ಬಂಧಿಸಿತು. ಒತ್ತಡ ಹೆಚ್ಚುತ್ತಿದ್ದಂತೆ ನರಗುಂದದ ರೈತರ ಪೈಕಿ 70 ಜನರನ್ನು ಬಿಡುಗಡೆ ಮಾಡಿತು. ಉಳಿದವರು ಹೆಗಡೆ ಸರ್ಕಾರ ಬಂದ ಮೇಲೆ ಬಿಡುಗಡೆಯಾದರು. ನೆಪಮಾತ್ರಕ್ಕೆ ಒಂದು ವಿಚಾರಣಾ ಆಯೋಗವನ್ನು ಸರ್ಕಾರ ರಚಿಸಿತು. ಆದರೆ ಅದು ಮೂಲಭೂತವಾದ ಅಂಶಗಳ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಲಿಲ್ಲ. ಆದರೆ ನರಗುಂದ ಬಂಡಾಯದಿಂದ ಅಭಿವೃದ್ಧಿ ಶುಲ್ಕ ವಸೂಲಾತಿಯನ್ನು ಸ್ಥಗಿತಗೊಳಿಸಲು ಸಾಧ್ಯವಾಯಿತು (ಸೊಪ್ಪಿನ್ 2011: 56–66).

ನರಗುಂದ ರೈತ ಬಂಡಾಯವೆಂದು ಹೆಸರು ಮಾಡಿದ ಈ ಹೋರಾಟದ ಮೂಲ ಪಾತ್ರಧಾರಿಗಳು ಕಮ್ಯುನಿಸ್ಟರಾಗಿದ್ದರೆಂಬುದು ಗಮನಾರ್ಹವಾದ ವಿಚಾರ. ಇದನ್ನು ಆರಂಭಿಸಿದ ಸೊಪ್ಪಿನ್, ನಂತರ ನಾಯಕತ್ವ ಕೊಟ್ಟ ಹಳಕಟ್ಟಿ, ಕಪ್ಪಣ್ಣನವರ್ ಇವರಿಂದ ಹಿಡಿದು ಪಾದಯಾತ್ರೆಯನ್ನು ಬಹುತೇಕ ಸಂಘಟಿಸಿದ್ದು ಕಮ್ಯುನಿಸ್ಟರ ನಾಯಕತ್ವದ ರೈತ ಮತ್ತು ಕಾರ್ಮಿಕ ಸಂಘಟನೆಗಳು. ಆದರೆ ಇದರ ರಾಜಕೀಯ ಲಾಭವನ್ನು ಕಮ್ಯುನಿಸ್ಟರು ಪಡೆಯಲಾಗಲಿಲ್ಲ. ಮಲಪ್ರಭಾ ನೀರಾವರಿ ಪ್ರದೇಶದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳು ಇದ್ದವು. ಇವುಗಳಲ್ಲಿ ಸವದತ್ತಿ ಮತ್ತು ನವಲಗುಂದದಲ್ಲಿ ಕಾಂಗ್ರೆಸ್ ಗೆದ್ದರೆ, ನರಗುಂದದಲ್ಲಿ ಮಾತ್ರ ಹೋರಾಟ ಸಮಿತಿಯ ಭಾಗವಾಗಿದ್ದ ಒಬ್ಬರು ಗೆದ್ದರು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ಗೆದ್ದವರು ಭೂಮಾಲೀಕ ಹಿನ್ನೆಲೆಯವರೇ ಆಗಿದ್ದರು. ಇಡೀ ಹೋರಾಟದ ಪ್ರಮುಖ ರೂವಾರಿಯಾಗಿದ್ದ ಕಮ್ಯುನಿಸ್ಟ್ ಪಕ್ಷದ ವಿ.ಎನ್.ಹಳಕಟ್ಟಿ ತೀರಾ ಕಡಿಮೆ ಮತಗಳನ್ನು ಪಡೆದು ಸೋತರು. ಕಮ್ಯುನಿಸ್ಟ್ ಪಕ್ಷ ಇಷ್ಟಕ್ಕೂ 1983 ರ ಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನೇ ಹಾಕಲಿಲ್ಲ. ಹಳಕಟ್ಟಿಯವರು ಅಭ್ಯರ್ಥಿಯಾಗಿ ಈ ಭಾಗದ ಪರಸ್‌ಗಡ ಕ್ಷೇತ್ರದಿಂದ ಸ್ಪರ್ಧಿಸಿದ್ದು 1985 ರ ಚುನಾವಣೆಯಲ್ಲಿ. 1983 ರ ರಲ್ಲಿ ಕಮ್ಯುನಿಸ್ಟ್ ಪಕ್ಷಗಳು ಜನತಾ ಪಕ್ಷದೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡಿದ್ದವು. ಹಾಗಿದ್ದರೂ ಹೋರಾಟ ಮುನ್ನಡೆಸಿದ ಪ್ರದೇಶದಲ್ಲಿ ನಿಲ್ಲಲಿಲ್ಲ. ಹಳಕಟ್ಟಿಯವರು ಹೇಳುವ ಪ್ರಕಾರ ಅವರು ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರೆ ಬೇರೆಯವರು ಓಟುಗಳನ್ನು ಕೊಡುತ್ತಿರಲಿಲ್ಲ. ಯಾಕೆಂದರೆ ಸಾಮಾನ್ಯ ರೈತರಿಗೆ ಇವರು ಕಮ್ಯುನಿಸ್ಟರೆಂದು ಗೊತ್ತಿರಲಿಲ್ಲ. ಜೊತೆಗೆ ಇವರು ಆ ಕ್ಷೇತ್ರಗಳಲ್ಲಿ ಸ್ಪರ್ಧಿಸಬೇಕೆಂದು ಅವರಿದ್ದ ಸಿಪಿಐ(ಎಂ)ನ ರಾಜ್ಯ ಸಮಿತಿಯಲ್ಲೂ ಚರ್ಚಿಸಿರಲಿಲ್ಲ. ಇನ್ನು 1985 ರ ಚುನಾವಣೆಗಳಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವಾಗ ನರಗುಂದ ಅಥವಾ ನವಲಗುಂದ ಕ್ಷೇತ್ರಗಳನ್ನು ಬಿಟ್ಟು ಬೇರೊಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರೆಂದು ಅವರು ಅಭಿಪ್ರಾಯಪಡುತ್ತಾರೆ. ಹಳಕಟ್ಟಿಯವರ ಅಭಿಪ್ರಾಯದಲ್ಲಿ ಮೂರು ಅಂಶಗಳನ್ನು ಗುರುತಿಸಬಹುದು. ಮೊದಲನೆಯದಾಗಿ, ಇವರಿಗೆ ಕಮ್ಯುನಿಸ್ಟ್ ಅಭ್ಯರ್ಥಿ ಎಂದು ಚುನಾವಣೆಗೆ ನಿಲ್ಲಲು ಆಸಕ್ತಿಯಿರಲಿಲ್ಲ ಏಕೆಂದರೆ, ಇವರು ಕಮ್ಯುನಿಸ್ಟರೆಂದು ಜನರಿಗೆ ಗೊತ್ತಿರಲಿಲ್ಲ. ಎರಡನೆಯದು ಕ್ಷೇತ್ರವನ್ನು ಆಯ್ಕೆ ಮಾಡುವಾಗ ಅವರಿಗೆ ಹೆಚ್ಚು

ಅವಕಾಶಗಳಿದ್ದ ಕ್ಷೇತ್ರಗಳನ್ನು ಆರಿಸಿಕೊಳ್ಳುವ ಬದಲು ಬೇರೆಯದನ್ನು ನಾಯಕರು ಆಯ್ಕೆ ಮಾಡಿಕೊಂಡರು. ಮೂರನೆಯದಾಗಿ, ಸ್ಪರ್ಧೆ ಮಾಡಿದ್ದ ಪರಸಗಢ ಕ್ಷೇತ್ರದಲ್ಲಿ ಆ ಹೊತ್ತಿಗೆ ಕೇವಲ ಮೂರು ಶಾಖೆಗಳಿದ್ದವು. ಅಂದರೆ ಕಮ್ಯುನಿಸ್ಟ್ ಪಕ್ಷದ ಸಂಘಟನಾ ಜಾಲವೇ ಇರಲಿಲ್ಲ (ಹಳಕಟ್ಟಿಯವರೊಂದಿಗೆ ಸಂದರ್ಶನ). ಇವಲ್ಲದೆ ಇನ್ನೂ ಕೆಲವು ಕಾರಣಗಳಿರಬಹುದು. ಸವದತ್ತಿಯ ಕಪ್ಪಣ್ಣನವರ್ ಅವರು ಹೇಳುವ ಹಲವು ಕಾರಣಗಳಲ್ಲಿ, ಈ ಹೋರಾಟದ ನಂತರ ನಿರಂತರವಾಗಿ ರೈತರ ನಡುವೆಯೇ ಕೆಲಸ ಮಾಡುವ ಬದಲು ಕಾರ್ಮಿಕರ ನಡುವೆ ಕೆಲಸ ಮಾಡಲು ಹಳಕಟ್ಟಿಯವರನ್ನು ಕಮ್ಯುನಿಸ್ಟ್ ಪಕ್ಷ ಕಳುಹಿಸಿತು (ಸೊಪ್ಪಿನ್ 2011: 82). ಇದೇ ಮಾತನ್ನು ಹಳಕಟ್ಟಿಯವರೂ ಹೇಳುತ್ತಾರೆ. 'ನಾನು ಯಾವುದಾದರೂ ವಿಭಾಗದಲ್ಲಿ ಸಂಘಟನೆ ಮಾಡಿ ಅದು ಬೆಳೆಯುತ್ತಿದ್ದಂತೆ ಮತ್ತು ಆ ವಿಭಾಗದ ಬಗ್ಗೆ ನನಗೆ ಹೆಚ್ಚು ತಿಳುವಳಿಕೆ ಬರುತ್ತಿದ್ದಂತೆ ಮತ್ತೊಂದು ವಿಭಾಗದ ಸಂಘಟನೆ ಕಟ್ಟುವಂತೆ ನನಗೆ ಸೂಚಿಸುತ್ತಿದ್ದರು. ಇದು ವಿದ್ಯಾರ್ಥಿ ಸಂಘಟನೆ ಮತ್ತು ರೈತಸಂಘಟನೆ ಕಟ್ಟಿ ಯಶಸ್ವಿಯಾದಾಗಲೂ ಇದೇ ರೀತಿ ಅದರಿಂದ ನನ್ನನ್ನು ದೂರಮಾಡಿ ಮತ್ತೊಂದು ಸಂಘಟನೆ ಕಟ್ಟಲು ಜವಾಬ್ದಾರಿ ಕೊಡುತ್ತಿದ್ದರು. ಅಲ್ಲಿಗೆ ಆ ಹಿಂದಿನ ಸಂಘಟನೆಗಳ ಚಟುವಟಿಕೆ ಕ್ಷೀಣಿಸುತ್ತಿತ್ತು'[95]. ವ್ಯಾಪಕವಾದ ಚಳುವಳಿಗಳನ್ನು ನಡೆಸಿದರೂ ಅದರ ಪ್ರಯೋಜನ ಪಡೆದುಕೊಳ್ಳುವಲ್ಲಿ ಕಮ್ಯುನಿಸ್ಟ್ ಚಳುವಳಿಗಳ ವೈಫಲ್ಯಗಳಿಗೆ ಕೆಲವು ಅಂಶಗಳನ್ನು ಇಲ್ಲಿ ಗುರುತಿಸಬಹುದು.

ಈ ಅವಧಿಯಲ್ಲಿ ರಾಜ್ಯದ ವಿದ್ಯಾರ್ಥಿ ಚಳುವಳಿಯು ತೀವ್ರತೆಯನ್ನು ಪಡೆದಿತ್ತು. ಇದರಲ್ಲಿ ಮುಖ್ಯವಾಗಿ ಕಮ್ಯುನಿಸ್ಟ್ ಪಕ್ಷಗಳಿಗೆ ಸೇರಿದ ವಿದ್ಯಾರ್ಥಿ ಸಂಘಟನೆಗಳು ಮಿಲಿಟೆಂಟ್ ಹೋರಾಟಗಳನ್ನು ನಡೆಸಿದವು. ವಿದ್ಯಾರ್ಥಿ ಹೋರಾಟಗಳು ಪ್ರಧಾನವಾಗಿ ಎರಡು ವಿಚಾರಗಳ ಮೇಲೆ ಕೇಂದ್ರೀಕೃತವಾಗಿತ್ತು. ಒಂದು, ರೈತರ ಮೇಲಿನ ಗೋಲೀಬಾರ್ ವಿರುದ್ಧ, ಮತ್ತೊಂದು, ಹೋಟೆಲ್ ತಿಂಡಿಗಳ ಬೆಲೆ ಏರಿಕೆ ವಿರುದ್ಧ. ಇವು ಗುಂಡೂರಾವ್ ಸರ್ಕಾರದ ವಿರುದ್ಧ ಕಾಲೇಜು ವಿದ್ಯಾರ್ಥಿಗಳು ರಾಜ್ಯದೆಲ್ಲೆಡೆ ನಡೆಸಿದ ಆ ಕಾಲಘಟ್ಟದ ಪ್ರಮುಖವಾದ ವಿದ್ಯಾರ್ಥಿ ಹೋರಾಟಗಳಾಗಿದ್ದವು. ಎರಡೂ ಹೋರಾಟದ ಪ್ರಶ್ನೆಗಳು ನೇರವಾಗಿ ಶಿಕ್ಷಣದ ಪ್ರಶ್ನೆಗಳಾಗಿರಲಿಲ್ಲ ಎಂಬುದು ಗಮನಾರ್ಹ. ರೈತರ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ತಮ್ಮ ಪ್ರಶ್ನೆಯನ್ನಾಗಿ ಸ್ವೀಕರಿಸಿದ ತಾತ್ವಿಕ ಅಂಶ ಇಲ್ಲಿ ಮುಖ್ಯವಾದುದು. ಈ ಕಾಲಘಟ್ಟದ ಒಟ್ಟಾರೆ, ರೈತ, ಕಾರ್ಮಿಕ ಮತ್ತು ವಿದ್ಯಾರ್ಥಿ ಚಳುವಳಿಗಳನ್ನು ಗಮನಿಸಿದರೆ ಆ ಸಂದರ್ಭದ ಜನರ ಮನೋಭಾವವನ್ನು ಅದು ಪ್ರತಿನಿಧಿಸುತ್ತದೆ.

1970 ರ ಮಧ್ಯಭಾಗದಲ್ಲಿ ಹೇರಲಾಗಿದ್ದ ತುರ್ತುಪರಿಸ್ಥಿತಿಯ ವಿರುದ್ಧ ಜನರಲ್ಲಿ ಮಡುಗಟ್ಟಿದ್ದ ಆಕ್ರೋಶ, ಗುಂಡೂರಾವ್ ಆಡಳಿತದಲ್ಲಿ ನಡೆದ 135 ಕ್ಕೂ ಹೆಚ್ಚಿನ ರೈತರ ಮೇಲಿನ ಗೋಲೀಬಾರ್‌ಗಳು, ಕಾರ್ಮಿಕ ಚಳುವಳಿಗಳ ಮೇಲೆ ಗೋಲೀಬಾರ್, ಮೈಕೋ ಹೋರಾಟ, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ದೀರ್ಘ ಹೋರಾಟಗಳು, ಬೆಂಗಳೂರಿನಲ್ಲಿ ಅದಕ್ಕೂ ಮೊದಲೇ ನಡೆದಿದ್ದ ಕಾರ್ಮಿಕರ ನೂರಾರು ಹೋರಾಟಗಳು, ಹೀಗೆ ಒಂದರ ಹಿಂದೆ ಒಂದು ಹೋರಾಟಗಳು ನಡೆದು ರಾಜ್ಯದ ಜನರ ಭಾವನೆಗಳನ್ನು ಕಾಂಗ್ರೆಸ್(ಐ) ಸರ್ಕಾರದ ವಿರುದ್ಧ ರೂಪಿಸಿದ್ದವು. ಇವೆಲ್ಲವುಗಳ ಪರಿಣಾಮವಾಗಿ ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚನೆಗೆ ಕಾರಣವಾಯಿತು. ಇಲ್ಲಿ

ಗುರುತಿಸಲಾಗಿರುವ ಎಲ್ಲಾ ಹೋರಾಟಗಳಲ್ಲೂ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಮುಂಚೂಣಿಯಲ್ಲಿದ್ದವು ಎಂಬುದನ್ನು ಗುರುತಿಸಬಹುದು. ಅದರ ನಾಯಕರು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ಈ ಚಳುವಳಿಗಳನ್ನು ವಿಸ್ತಾರಗೊಳಿಸಲು ಶ್ರಮಿಸಿರುವುದನ್ನು ಕಾಣಬಹುದು. ಕಮ್ಯುನಿಸ್ಟರು ನಡೆಸಿರುವ ಈ ಹೋರಾಟಗಳು ಮೂಲತಃ ಕಾರ್ಮಿಕರಲ್ಲಿ ಅಲ್ಪ ಪ್ರಮಾಣದ ಆರ್ಥಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದವು.

ಸ್ವಾತಂತ್ರ್ಯಾನಂತರ ಸಮೂಹ ಸಂಘಟನೆಗಳ ನಿರ್ಮಾಣ ಮತ್ತು ಚಳುವಳಿಗಳು

ರಾಷ್ಟ್ರೀಯ ಹೋರಾಟದಲ್ಲಿ ವಿವಿಧ ಸಮೂಹ ಸಂಘಟನೆಗಳನ್ನು ಸ್ಥಾಪಿಸುವುದರಲ್ಲಿ ಮತ್ತು ಅವುಗಳ ಮೂಲಕ ವಿವಿಧ ಜನ ಸಮೂಹಗಳನ್ನು ಹೋರಾಟಕ್ಕೆ ಇಳಿಸುವುದರಲ್ಲಿ ಕಮ್ಯುನಿಸ್ಟ್ ಪಕ್ಷ ಮುತುವರ್ಜಿ ವಹಿಸಿದ್ದನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ರಾಜಕೀಯ ಪಕ್ಷಗಳಿಗೆ ಸಮೂಹ ಸಂಘಟನೆಗಳು ನೇರವಾದ ಊರುಗೋಲುಗಳಾಗಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಆದರೆ ಕಮ್ಯುನಿಸ್ಟ್ ಪಕ್ಷಗಳು ಇದನ್ನು ಭಿನ್ನವಾಗಿ ನೋಡುತ್ತವೆ. ಕಮ್ಯುನಿಸ್ಟರ ದೃಷ್ಟಿಯಲ್ಲಿ ಸಮೂಹ ಸಂಘಟನೆಗಳು, ಅದರ ಸ್ವರೂಪ ಮತ್ತು ಲಕ್ಷಣಗಳು ಕಮ್ಯುನಿಸ್ಟ್ ಪಕ್ಷಕ್ಕಿಂತ ಭಿನ್ನವಾಗಿರುವ ಬಗ್ಗೆ, ಸಮೂಹ ಸಂಘಟನೆಗಳಲ್ಲಿ ಕಮ್ಯುನಿಸ್ಟರ ಪಾತ್ರದ ಬಗ್ಗೆ, ಕರ್ನಾಟಕದಲ್ಲಿ ಸಮೂಹ ಸಂಘಟನೆಗಳ ಮೂಲಕ ಯಾವ ರೀತಿಯ ಚಟುವಟಿಕೆಗಳನ್ನು ಮತ್ತು ಹೋರಾಟಗಳನ್ನು ಸಂಘಟಿಸಿದರೆಂಬುದನ್ನು ಮುಂದೆ ಚರ್ಚಿಸಲಾಗಿದೆ.

> ಸಮೂಹ ಸಂಘಟನೆಗಳು ತಾವು ಸಂಘಟಿಸುವ ವಿಭಾಗಗಳ ಪ್ರಾಥಮಿಕ ಪ್ರಜ್ಞೆಯನ್ನು ಎತ್ತರಿಸುವ ಮತ್ತು ಅದರ ಮೂಲಕ ಹಿಂದುಳಿದ ಸಮೂಹಗಳು ಮತ್ತು ಪಕ್ಷದ ಚಟುವಟಿಕೆಗಳೊಂದಿಗೆ ಸಂಪರ್ಕ ಹೆಚ್ಚುತ್ತಿರುವಂತೆ ಮಾಡುವ ಪಾತ್ರವನ್ನು ಈಡೇರಿಸುತ್ತವೆ. ಹಿಂದುಳಿದ ವಿಭಾಗಗಳ ನಿರಂತರವಾದ ಒಳ ಹರಿವಿಗೆ ಸಂಘಟನೆಯನ್ನು ನಿರ್ಬಂಧಿಸದೆ ಸಂಬಂಧಿಸಿದ ವಿಭಾಗಗಳ ಪ್ರಜ್ಞೆಯನ್ನು ನಿರಂತರವಾಗಿ ಹೆಚ್ಚಿಸುವುದು ಪಕ್ಷದ ಮಾರ್ಗದರ್ಶಕ ಪಾತ್ರವಾಗಿದೆ. ಇಲ್ಲದಿದ್ದಲ್ಲಿ ಸಮೂಹ ಸಂಘಟನೆಯೆಂಬುದು ಪಕ್ಷಕ್ಕೆ ಹತ್ತಿರವಿರುವ ಮಿಲಿಟೆಂಟ್‌ಗಳ ಸಂಘಟನೆಯಾಗಿರುತ್ತದೆ ಮತ್ತು ಸಂಖ್ಯಾದೃಷ್ಟಿಯಿಂದ ಅದಕ್ಕೆ ಸಾಮರ್ಥ್ಯವಿದ್ದರೂ ಪ್ರಧಾನ ಸಮೂಹದಿಂದ ಅದು ಪ್ರತ್ಯೇಕಗೊಳ್ಳುತ್ತದೆ ಮತ್ತು ಅವರನ್ನು ಕ್ರಿಯಾಶೀಲಗೊಳಿಸಲು ವಿಫಲವಾಗುತ್ತದೆ.
>
> ಮೂಲಭೂತ ಬದಲಾವಣೆಗೆ ಸಂಬಂಧಿಸಿ ಪಕ್ಷದ ನೇರ ಬೇಡಿಕಗೆಳಾದ – ಕ್ರಾಂತಿ, ಅಧಿಕಾರ ಹಿಡಿಯುವುದು ಮುಂತಾದವು ಈ ಸಮೂಹಗಳನ್ನು ತಕ್ಷಣದಲ್ಲೇ ಪ್ರೇರೇಪಿಸಲು ಸಾಧ್ಯವಿಲ್ಲವಾದ್ದರಿಂದ ಸಮೂಹ ಸಂಘಟನೆಗಳು ಬೇಕಾಗಿವೆ. ಸಾಮಾಜಿಕ ವ್ಯವಸ್ಥೆಯ ಸಂಪೂರ್ಣ ಬದಲಾವಣೆಯಿಲ್ಲದೆಯೇ, ಸಾಧಿಸಲು ಸಾಧ್ಯವಿರುವ ಅಥವಾ ಸಾಧ್ಯವಿರುವಂತೆ ಕಾಣುವ ತಕ್ಷಣದ ಅಥವಾ ಅಂಶಿಕ ಬೇಡಿಕೆಗಳಿಗೆ ವಿಶಾಲ ಸಮೂಹಗಳು ಆಕರ್ಷಿತರಾಗುತ್ತಾರೆ. ಈ ಹೋರಾಟಗಳಲ್ಲಿ ಗಳಿಸುವ ತಿಳುವಳಿಕೆ ಮತ್ತು ಅನುಭವವನ್ನು ಪಕ್ಷದ ಮಾರ್ಗದರ್ಶನದ ಅಡಿಯಲ್ಲಿ ಸಮೂಹಗಳ ಪ್ರಜ್ಞೆಯನ್ನಾಗಿ ತರಬೇತಿಗೊಳಿಸಲಾಗುತ್ತದೆ ಮತ್ತು ಅದನ್ನು ಕ್ರಾಂತಿಕಾರಿ ವಿಧಾನದಲ್ಲಿ ನಿರ್ದೇಶಿಸಲಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷದ ಕೆಲಸವನ್ನು, ಸಮೂಹಗಳ ನಡುವಿನ ಸಮೂಹ ಸಂಘಟನೆಗಳ

ಕೆಲಸದ ಜೊತೆ ಗುರುತಿಸಬಾರದು, ಹಾಗಾದಲ್ಲಿ ಸಮೂಹಗಳ ನಡುವಿನ ಕೊಂಡಿ ಕಳಚಿ ಹೋಗುತ್ತದೆ. ಇದು ಸಮೂಹ ಸಂಘಟನೆಗಳ ಮಾರ್ಗದರ್ಶನದ ಪರಿಪೂರ್ಣ ನಿಯಮವಾಗಿದೆ[96].

ಸಮೂಹ ಸಂಘಟನೆಗಳ ಕುರಿತು 1981 ರಲ್ಲಿ ಸಿಪಿಐ(ಎಂ) ಪಕ್ಷ ತೆಗೆದುಕೊಂಡ ತೀರ್ಮಾನವಿದು. ಈ ನಿಲುವು ಸಿಪಿಐ(ಎಂ)ಗೆ ಪ್ರತ್ಯೇಕವಾದದ್ದಲ್ಲ. ಸಾಮಾನ್ಯವಾಗಿ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದವನ್ನು ಒಪ್ಪುವ ಎಲ್ಲ ಕಮ್ಯುನಿಸ್ಟ್ ಪಕ್ಷಗಳೂ ಇಂತಹ ನಿಲುವನ್ನು ಹೊಂದಿರುತ್ತವೆ. ಇದರಲ್ಲಿ ಸ್ಪಷ್ಟವಾಗುವ ಅಂಶವೇನೆಂದರೆ ಕಮ್ಯುನಿಸ್ಟ್ ಪಕ್ಷಗಳು ಸಮೂಹ ಸಂಘಟನೆಗಳನ್ನು ನೋಡುವ ರೀತಿ, ಇತರೆ ರಾಜಕೀಯ ಪಕ್ಷಗಳಿಗಿಂತ ಭಿನ್ನವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಸಮೂಹ ಸಂಘಟನೆಗಳಿಗೆ ಸಂಬಂಧಿಸಿ ಈ ಕಣ್ಣೋಟವನ್ನು ಸಿಪಿಐ ಜಾರಿ ಮಾಡಲು ಸಾಧ್ಯವಾಗಿತ್ತಾ? ಇಂತಹ ಒಂದು ಕಣ್ಣೋಟ ಅಂದಿಗೆ ಸ್ಪಷ್ಟವಾಗಿ ದಸ್ತಾವೇಜಿನ ರೂಪದಲ್ಲಿ ಇರಲಿಲ್ಲವೆನ್ನಬಹುದು. 1951 ರ ಸ್ಟೇಟ್‌ಮೆಂಟ್ ಆಫ್ ಪಾಲಿಸಿ ಜೊತೆ ಚರ್ಚಿಸದೆ ಹಾಗೇ ಇಡಲಾಗಿದ್ದ ಕಾರ್ಯತಂತ್ರದ (Tactical Line) ಅಂಶವು ಸಮೂಹ ಸಂಘಟನೆಗಳ ಬಗ್ಗೆ ಒಂದು ಧೋರಣೆಯನ್ನು ಅಂಗೀಕರಿಸುವುದೂ ಆಗಿತ್ತು. ಈ ಕೊರತೆ ಇದ್ದರೂ ಸಮೂಹ ಸಂಘಟನೆಗಳನ್ನು ಕಟ್ಟಿ ತಕ್ಷಣದ ಬೇಡಿಕೆಗಳಿಗಾಗಿ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಸಮೂಹಗಳನ್ನು ತೊಡಗಿಸುವಲ್ಲಿ ಕಮ್ಯುನಿಸ್ಟರು ಸಕ್ರಿಯವಾಗಿದ್ದರು. ಮುಂದಿನ ವಿಭಾಗದಲ್ಲಿ ಮುಖ್ಯವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಕಾರ್ಮಿಕ, ರೈತ, ವಿದ್ಯಾರ್ಥಿ, ಬರಹಗಾರರ ಮತ್ತು ಕಲಾವಿದರ ಸಂಘಟನೆಗಳಿಗೆ ಸಂಬಂಧಿಸಿ, ಅವುಗಳ ಸ್ವಾತಂತ್ರ್ಯಾ ನಂತರದ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಗಿದೆ. ಸ್ವಾತಂತ್ರ್ಯಾ ನಂತರದಲ್ಲಿ ಆರಂಭಿಸಲಾದ ಮಹಿಳಾ, ಯುವಜನ ಮತ್ತಿತರ ಸಂಘಟನೆಗಳ ಬಗ್ಗೆ ಸಾಂದರ್ಭಿಕವಾದ ಚರ್ಚೆಯನ್ನು ಮಾಡಲಾಗಿದೆ.

ಕಾರ್ಮಿಕ ರಂಗ: ಸ್ವಾತಂತ್ರ್ಯಾ ನಂತರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಕಾರ್ಮಿಕ ಹೋರಾಟಗಳನ್ನು ಕ್ರೋಢೀಕರಿಸುವ ದೃಷ್ಟಿಯಿಂದ ಎಐಟಿಯುಸಿಗೆ ಸೇರ್ಪಡೆ ಹೊಂದಿದ ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸ್ಥಾಪಿಸಲು ಕಮ್ಯುನಿಸ್ಟ್ ಪಾರ್ಟಿ ತೀರ್ಮಾನಿಸಿತು. ಬಹುತೇಕ ನಾಯಕರ ಜೈಲುವಾಸಗಳು ಇನ್ನೂ ಮುಗಿಯದಿದ್ದ ಕಾಲಘಟ್ಟವದು. ಆ ಸಂದರ್ಭವನ್ನು ಬಳಸಿ **ಕೆಪಿಟಿಯುಸಿ ಮೊದಲ ಸಮ್ಮೇಳನವನ್ನು** ಬೆಂಗಳೂರಿನ ಶ್ರೀರಾಮಪುರದ ಕಾಲೋನಿಯಲ್ಲಿ 1950 ರ ಏಪ್ರಿಲ್ 15 ಮತ್ತು 16 ರಂದು ನಡೆಸಲಾಯಿತು. ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಮಿಕ ಸಂಘಗಳನ್ನು ನಡೆಸುತ್ತಿದ್ದವರು ಮತ್ತು ಕಾರ್ಮಿಕರೂ ಸೇರಿದಂತೆ ಪ್ರತಿನಿಧಿಗಳು ಭಾಗವಹಿಸಿದ್ದರು. ಜೈಲುವಾಸಗಳ ಕಾರಣದಿಂದ ಅನೇಕ ಮುಖಂಡರು ಭಾಗವಹಿಸದಂತೆ ಕಾಂಗ್ರೆಸ್ ಸರ್ಕಾರ ತಡೆಯಿತು. 'ಮರ್ಧನದಿಂದ ಕೂಲಿಗಾರ ವರ್ಗವನ್ನು ಸದೆಬಡಿಯಬಹುದೆಂದು ಸರಕಾರ ಎಣಿಸಿದ್ದರೆ ಅದು ಅವರ ಬರೇ ಬಯಲು ಭ್ರಾಂತಿ ಎಂದು ತಿಳಿದುಕೊಳ್ಳಲಿ' ಎಂದು ಅರುಣ ಪತ್ರಿಕೆ ಟೀಕೆ ಮಾಡಿತು. ಈ ಸಮ್ಮೇಳನವನ್ನು ವಿಫಲಗೊಳಿಸಲು ಕೆ.ಸಿ.ರೆಡ್ಡಿ ಸರ್ಕಾರ ಹಲವು ರೀತಿಗಳಲ್ಲಿ ಪ್ರಯತ್ನಿಸಿತು[97]. ಎಐಟಿಯುಸಿ ಅಧ್ಯಕ್ಷ ವಿ.ಚೆಕ್ಕರೈ ಚೆಟ್ಟಿಯಾರ್ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನವನ್ನು ಮೈಸೂರು ಸಂಸ್ಥಾನದ ಕಾರ್ಮಿಕ

ಮುಖಂಡರಾದ ಎನ್.ಡಿ.ಶಂಕರರು ಉದ್ಘಾಟಿಸಿದರು. ಬಳಿಕ ಕರ್ನಾಟಕದ ಕಾರ್ಮಿಕರ ಆವರೆಗಿನ ಚಳವಳಿಯ ಬಗ್ಗೆ ಕರಡು ವರದಿ ಮಂಡಿಸಬೇಕಾಗಿದ್ದ ಎಂ.ಸಿ.ನರಸಿಂಹನ್‌ರವರ ಮೇಲೆ ರೆಡ್ಡಿ ಸರಕಾರವು ವಕ್ರದೃಷ್ಟಿ ಬೀರಿದ ಕಾರಣ ವರದಿಯನ್ನು ಪ್ರತಿನಿಧಿಯೊಬ್ಬರು ಓದಿದರು. ಭಾರತದ ನಾನಾ ಭಾಗಗಳ ಕಾರ್ಮಿಕರು ಸ್ವಾತಂತ್ರ್ಯಾ ನಂತರ ನಡೆಸಿದ ಹೋರಾಟಗಳ ಬಗ್ಗೆ ಒಂದು ಸ್ಥೂಲ ಚಿತ್ರಣವನ್ನು ನೀಡಿದ ವರದಿಯು, ಕರ್ನಾಟಕದಲ್ಲಿ ನಡೆದ ಹೋರಾಟಗಳ ಬಗ್ಗೆಯೂ ಮಂಡಿಸಿತು:

> 1935 ರಲ್ಲಿ ಕೋಲಾರ ಚಿನ್ನದ ಗಣಿಯ ಮಾಲಕರ ವಿರುದ್ಧವಾಗಿ ಕೂಲಿಗಾರರು ನಡೆಸಿದ ಪ್ರಥಮ ಮುಷ್ಕರ, ಮೊದಲ ಬಾರಿಗೆ ಮಂಗಳೂರಿನ ಬೀಡಿ ಮಜೂರರು ಕೆಂಬಾವುಟ ಹಾರಿಸಿದ್ದು, 1937–38ರಲ್ಲಿ ಕೆಂಬಾವುಟದ ಅಡಿಯಲ್ಲಿ ದ.ಕ. ಜಿಲ್ಲೆಯ ನೇಕಾರರ ಹೋರಾಟ, ಬೀಡಿ, ಮೋಟಾರು ಕೆಲಸಗಾರರ ಮುಷ್ಕರ, 1938 ರಲ್ಲಿ ಉತ್ತರ ಕರ್ನಾಟಕದ ಗೋಕಾಕದಲ್ಲಿಯ ಗಿರಣಿ ಕೆಲಸಗಾರರ ಮುಷ್ಕರ, 1939 ಮತ್ತು 1940 ರಲ್ಲಿ ಬಿಜಾಪುರ, ಮೈಸೂರು ಸಂಸ್ಥಾನದ ಬೆಂಗಳೂರು, ಭದ್ರಾವತಿ, ದಾವಣಗೆರೆಗಳಲ್ಲಿ ನಡೆದ ಮಜೂರರ ಹೋರಾಟಗಳು, ಅವುಗಳ ವಿರುದ್ಧವಾಗಿದ್ದ ಪೊಲೀಸರ ಅತ್ಯುಗ್ರ ದಬ್ಬಾಳಿಕೆಗಳು ಲಾಠಿಗುಂಡುಗಳ ಪ್ರಕರಣಗಳು 28 ದಿವಸಗಳ ತನಕ ನಡೆದ ಕೆ.ಜಿ.ಎಫ್. ಕೆಲಸಗಾರರ ಮುಷ್ಕರ, ಕೆಂಬಾವುಟದ ಕೆಳಗೆ ಮೈಸೂರಿನ ಬೀಡಿ ಮತ್ತು ಮುನಿಸಿಪಲ್ ಕೆಲಸಗಾರರ ಸಂಘದ ಸ್ಥಾಪನೆ, ಅಂತೆಯೇ 1940 ರಲ್ಲಿ ಮಂಗಳೂರಿನಲ್ಲಿ ಕೂಲಿ ಕಡಿತದ ವಿರುದ್ಧವಾಗಿ ನೇಕಾರರ ಹೋರಾಟ, ಅನೇಕ ಮಜೂರರ ಬಂಧನ, ಸ್ತ್ರೀಯರ ಮೇಲೆ ಅತ್ಯಾಚಾರದ ವಿರುದ್ಧ, ಮುಂತಾದ ಕರ್ನಾಟಕದ ಕೂಲಿಗಾರರ ಪ್ರಾರಂಭದ ಮಹತ್ತಾದ ಘಟನೆಗಳನ್ನು ವಿವರಿಸಿ ಆದ ನಂತರ 1943 ರಲ್ಲಿ ಡಾಂಗೆಯವರ ಅಧ್ಯಕ್ಷತೆಯಲ್ಲಿ ದ.ಕ. ಜಿಲ್ಲೆಯ ಕೂಲಿಗಾರರ ಪ್ರಥಮ ಸಮ್ಮೇಳನ ನಡೆದು ದ.ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲ್ ಸ್ಥಾಪಿಸಲ್ಪಟ್ಟಿದ್ದನ್ನು ಹೇಳಲಾಗಿದೆ[98].

ಇದರ ಜೊತೆಗೆ ರಾಜ್ಯದಲ್ಲಿ ನಡೆದ ಕಾರ್ಮಿಕರ ಮುಷ್ಕರಗಳಲ್ಲಿ ಪಾಲ್ಗೊಂಡ ಸಂಖ್ಯೆ, ನಷ್ಟವಾದ ಮಾನವ ದಿನಗಳು ಇತ್ಯಾದಿ ಅಂಶಗಳನ್ನೆಲ್ಲಾ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಅಂತಿಮವಾಗಿ, ಎನ್.ಡಿ.ಶಂಕರ್ ಕೆಪಿಟಿಯುಸಿ ಮೊದಲ ಅಧ್ಯಕ್ಷರಾಗಿ ಮತ್ತು ಎಂ.ಸಿ.ನರಸಿಂಹನ್ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ವಿವಿಧ ರೀತಿಯ ಕಾರ್ಮಿಕ ಸಂಘಗಳ ಬೆಳವಣಿಗೆ: ಮೈಸೂರಿನಲ್ಲಿ ಆರಂಭದ ಮೂರು ವರ್ಷಗಳು (1948–1951) ಉಗ್ರಪ್ಪ, ರಾಜಶೇಖರ್, ಎನ್.ಪಿ.ಶಂಕರನಾರಾಯಣ ರಾವ್, ರೈಲ್ವೆ ಕಾರ್ಮಿಕ ದೇವರಾಜೇ ಅರಸ್, ಮುಂತದವರೆಲ್ಲಾ ಜೈಲಿನಲ್ಲಿದ್ದರು. ಜೈಲಿನೊಳಗೆ ಸುಧಾರಣೆಗಳಿಗಾಗಿ ಹೋರಾಟ ಮಾಡಿದರೆಂದು ಇವರನ್ನು ಶಿವಮೊಗ್ಗ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಈ ಅವಧಿಯಲ್ಲಿ ಬೀಡಿ ಕಾರ್ಮಿಕರ ನಡುವೆ ಕಾಂಗ್ರೆಸ್ ಮುಖಂಡ ಅಜೀಜ್ ಸೇಠ್ ಮುಂತಾದವರು ಬೀಡಿ ಸಂಘಟನೆಯಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಂಡಿದ್ದರಿಂದ ಅದು ಐಎನ್‌ಟಿಯುಸಿ ಕೈವಶವಾಗಿತ್ತು (ಉಗ್ರಪ್ಪ 2008: 30). ಉಗ್ರಪ್ಪ ಜೈಲಿನಿಂದ ಬಿಡುಗಡೆಗೊಂಡ ನಂತರ ಮೈಸೂರಿನ ಮುನಿಸಿಪಲ್ ಕಾರ್ಮಿಕರ ನಡುವೆ ಚಟುವಟಿಕೆಗಳನ್ನು ಮುಂದುವರಿಸಿದರು. ಇವರ ಜೊತೆಯಲ್ಲಿ ಸೋಮಸುಂದರ

ಶರ್ಮ, ಬೆಳ್ಳಿಯಪ್ಪ, ಸಿ.ಕೆ.ಮೋನ್, ತಿಮ್ಮೇಗೌಡ, ಪುಟ್ಟಸ್ವಾಮಿ ಮುಂತಾದವರು ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾದರು. ಇವರೆಲ್ಲರ ಪರಿಶ್ರಮದಿಂದ ರೇಷ್ಮೆ ಕೆಲಸಗಾರರ ಸಂಘ, ಲಾರಿ ಕೆಲಸಗಾರರ ಸಂಘ, ಡಿಸ್ಟ್ರಿಕ್ಟ್ ಎಂಪ್ಲಾಯೀಸ್ ಯೂನಿಯನ್, ಹೋಟೆಲ್ ವರ್ಕರ್ಸ್ ಯೂನಿಯನ್‌ಗಳು ಆರಂಭಗೊಂಡವು. 1956 ರಲ್ಲಿ ಕೊಳ್ಳೇಗಾಲ ಕರ್ನಾಟಕಕ್ಕೆ ಸೇರ್ಪಡೆಯಾದ ಮೇಲೆ ಅಲ್ಲಿ ಹೋಟೆಲ್ ಕೆಲಸ ಮಾಡುತ್ತಿದ್ದ ಕೇರಳ ಮೂಲದ ಕೆ.ಎಸ್. ಅಚ್ಯುತನ್ ಎಂಬುವರು 1958 ರಲ್ಲಿ ರೇಷ್ಮೆ ಕೆಲಸಗಾರರ ಸಂಘ ಮಾಡಲು ಪ್ರಮುಖ ಪಾತ್ರ ವಹಿಸಿದರು. ದುಡಿಮೆಗೆ ತಕ್ಕ ಕೂಲಿ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ತುಟ್ಟಿ ಭತ್ಯೆ, ಪಿ.ಎಫ್. ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಅಲ್ಲಿನ ಫಿಲೇಚರ್ ಮತ್ತು ವೀವಿಂಗ್ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಕೊಳ್ಳೇಗಾಲದಿಂದ ಮೈಸೂರಿಗೆ ಕಾಲ್ನಡಿಗೆ ಜಾಥಾ ಮಾಡಿದರು. ಇದು ದಾರಿಯುದ್ದಕ್ಕೂ ಪ್ರಭಾವ ಬೀರಿ ರೈತ ಸಂಘಟನೆಯನ್ನು ಕಟ್ಟಲು ಸಹಾಯ ಮಾಡಿತು (ಉಗ್ರಪ್ಪ 2008: 51–53). ಭದ್ರಾವತಿಯಲ್ಲಿ ಕಾರ್ಮಿಕ ಚಳುವಳಿಯನ್ನು ಸ್ವಾತಂತ್ರ್ಯಾನಂತರ ಮುಂದುವರಿಸಿದ್ದು ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದ ಚಂದು ಕುಟ್ಟಿಯವರು. ಶಿವಮೊಗ್ಗದಲ್ಲಿ ಬಸ್ ಕಾರ್ಮಿಕರನ್ನು ಸಂಘಟಿಸಲು ಅವರು ಆಟೋಮೊಬೈಲ್ ಮೋಟಾರ್ ಯೂನಿಯನ್ ಹೆಸರಿನಲ್ಲಿ ಕಾರ್ಮಿಕ ಸಂಘವನ್ನು ನಡೆಸುತ್ತಿದ್ದರು[99].

1948 ಮತ್ತು 1960 ರ ನಡುವೆ ಬೆಳಗಾವಿ ಜಿಲ್ಲೆಯಲ್ಲಿ ಕಮ್ಯುನಿಸ್ಟರು ಹಲವಾರು ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸಿದರು[100]. ಇಂಜಿನಿಯರಿಂಗ್, ಮುನಿಸಿಪಲ್, ಚರ್ಮ, ಸರ್ಕಸ್, ಟೈಲರ್ಸ್, ಡೈರಿ, ಬ್ಯಾಂಕ್, ಗಣಿ, ರೈಲ್ವೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಇಲ್ಲಿ ಕಾರ್ಮಿಕ ಸಂಘಟನೆಗಳು ರಚನೆಯಾದವು. ಬೆಳಗಾಂ, ಬಾಂಬೆ, ರೇಣುಗುಂಟ ಮತ್ತು ಒರಿಸ್ಸಾಗಳಲ್ಲಿದ್ದ ಇಂಡಾಲ್ ಕಂಪನಿಯ ಎಲ್ಲಾ ಕಾರ್ಮಿಕರ ಸಂಘಗಳಿಗೂ ಕೃಷ್ಣ ಮೆಣಸಿ ಕಾರ್ಯದರ್ಶಿಯಾಗಿದ್ದರು. ಬೆಳಗಾವಿ ಸುತ್ತಮುತ್ತ ಇದ್ದ ಸುಮಾರು 30 ಗಣಿಗಳಲ್ಲಿ ಕಾರ್ಮಿಕರ ಸಂಘ ಸ್ಥಾಪಿಸಿದರು. ರೈಲ್ವೆ ವರ್ಕರ್ಸ್ ಯೂನಿಯನ್ ಬಲಿಷ್ಟ ಸಂಘಟನೆಯಾಗಿತ್ತು. ಅಖಿಲ ಭಾರತ ರೈಲ್ವೆ ಮುಷ್ಕರದಲ್ಲಿ ಇಲ್ಲಿನ ರೈಲ್ವೆ ನೌಕರರು ಪೂರ್ಣವಾಗಿ ಭಾಗವಹಿಸಿದ್ದರು. ಬೆಳಗಾಂ ಜಿಲ್ಲೆಯಲ್ಲಿ ಅಲ್ಯೂಮಿನಿಯಂ ಸಂಘಟನೆ ಮುಖ್ಯವಾದುದಾಗಿತ್ತು. ಬೆಳಗಾಂ ಸಮೀಪದ ಬೆಟ್ಟಗುಡ್ಡಗಳಲ್ಲಿ ಒಂದು ವಿಧದ ಪುಡಿ ಸಿಗುತ್ತದೆ. ಆ ಪುಡಿಯನ್ನು 900 ಡಿಗ್ರಿ ತಾಪಮಾನದಲ್ಲಿ ಕರಗಿಸಿ ಅಲ್ಯೂಮಿನಿಯಮ್ ತಯಾರಿಸಲಾಗುತ್ತದೆ. ಅಂತಹ ಬಿಸಿಯ ವಾತಾವರಣದಲ್ಲಿ ಕಾರ್ಮಿಕರು ನಿಂತು ಕೆಲಸ ಮಾಡಬೇಕಾಗಿತ್ತು. ಕಾರ್ಮಿಕರಿಗೆ ಕಡಿಮೆ ವೇತನ ಕೊಡಲಾಗುತ್ತಿತ್ತು. ನಿಯಮದಂತೆ ಸೌಲಭ್ಯಗಳಿರಲಿಲ್ಲ. ಅಲ್ಲಿ ಮುಷ್ಕರ ನಡೆದು ಕುಲುಮೆ ವಿಭಾಗವನ್ನೇ ಮರು ಪರಿವರ್ತಿಸಿ ಕಾರ್ಮಿಕರಿಗೆ ಕೆಲವು ಸುರಕ್ಷತಾ ಕ್ರಮಗಳನ್ನು ಕೈಗೊಂಡರು. ಕಾರ್ಮಿಕರಿಗೆ ದುಪ್ಪಟ್ಟು ವೇತನ ಹೆಚ್ಚಳ, ವಿಶ್ರಾಂತಿ ಕೊಠಡಿಗಳು, ಕ್ಯಾಂಟೀನ್ ವ್ಯವಸ್ಥೆ ಮುಂತಾದವುಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಬಾಂಬೆಯಲ್ಲಿ ಕಾರ್ಮಿಕ ಮುಖಂಡರಾಗಿದ್ದ ಜಿ.ಎಸ್.ಪಾಟ್ಕರ್ 1952 ರಲ್ಲಿ ಬೆಳಗಾವಿಯ ಮಾರುಕಟ್ಟೆ ಪ್ರದೇಶದಲ್ಲಿ ಮೇ ದಿನಾಚರಣೆ ಕೆಂಬಾವುಟವನ್ನು ಪ್ರಥಮವಾಗಿ ಹಾರಿಸಿದರು.

ರಾಜ್ಯದ ಹಲವು ಕಡೆಗಳಲ್ಲಿ ಪ್ರತ್ಯೇಕವಾಗಿ ಪ್ರಭಾವ ಬೀರಿದ ಮತ್ತೊಂದು ಸಂಘಟನೆ ಎಂದರೆ **ಮುನಿಸಿಪಲ್ ಕೆಲಸಗಾರರ ಸಂಘಗಳು**. ಕಡಿಮೆ ಸಂಬಳ, ಕೆಲಸದ ಭದ್ರತೆಯಿಲ್ಲ, ಸುರಕ್ಷಾ ಸಲಕರಣೆಗಳಿಲ್ಲ ಮುಂತಾದ ಸಮಸ್ಯೆಗಳ ಆಧಾರದಲ್ಲಿ ಬಿಜಾಪುರದಲ್ಲಿ 1945 ರಲ್ಲಿ ಮುನಿಸಿಪಲ್ ಕಾರ್ಮಿಕರ ಸಂಘ ಸ್ಥಾಪನೆಯಾಯಿತು. ಬೇರೆ ಬೇರೆ ಕಾರ್ಮಿಕರು ನಡೆಸುತ್ತಿದ್ದ ಹೋರಾಟಗಳಿಂದ ಸ್ಫೂರ್ತಿ ಪಡೆದ ಇವರು 1948 ಮಾರ್ಚ್‌ನಲ್ಲಿ ಹೋರಾಟ ನಡೆಸಿದಾಗ ಸರ್ಕಾರ ಸುಮಾರು 200 ಜನರನ್ನು ಬಂಧಿಸಿ 23 ದಿನ ಜೈಲಿನಲ್ಲಿಟ್ಟಿತು (ಉಪಾಧ್ಯಾಯ 1996: 29–30). ಸ್ವಾತಂತ್ರ್ಯ ಬಂದ ಕೆಲವೇ ದಿನಗಳಲ್ಲಿಮಂಗಳೂರಿನಲ್ಲಿ ಪೌರ ಕಾರ್ಮಿಕರ ಹೋರಾಟನಡೆಯಿತು. ಮಂಗಳೂರು ಪುರಸಭೆಯ ಜಾಡಮಾಲಿಗಳು, ಕಸಗುಡಿಸುವವರು, ರಸ್ತೆ ಮತ್ತು ಚರಂಡಿ ಕೆಲಸ ಮಾಡುವವರು, ಒಳ ರಸ್ತೆ, ಓಣಿ, ಕಾಲ್ದಾರಿಗಳಲ್ಲಿ ಸೀಮೆಎಣ್ಣೆಯ ದೀಪಗಳನ್ನು ಹಚ್ಚುವವರು, ಸೊಳ್ಳೆ ಔಷಧಿಗಳನ್ನು ಸಿಂಪಡಿಸುವವರು ಎಸ್‌ಕೆಟಿಯುಸಿ ನೇತೃತ್ವದಲ್ಲಿ ಸಂಘಟಿತರಾದರು. 1947 ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಇವರ ಬೇಡಿಕೆಗಳಿಗಾಗಿ ಹೋರಾಟ ನಡೆಯಿತು. ಕೈ ತೊಳೆಯಲು ಸಾಬೂನು, ವರ್ಷಕ್ಕೆ ಎರಡು ಜೊತೆ ಯೂನಿಫಾರ್ಮ್, ಪಾದರಕ್ಷೆಗಳು, ರೈನ್‌ಕೋಟ್ ಕೊಡಬೇಕೆಂಬುದು ಮುಖ್ಯ ಬೇಡಿಕೆಗಳಾಗಿದ್ದವು. ಬೆಳಗಾವಿಯಲ್ಲಿ ಪೌರ ಕಾರ್ಮಿಕರ ಸಂಘಟನೆ ಮಾಡಿ ಮಲ ಎತ್ತುವ ಪದ್ದತಿಗೆ ವಿರುದ್ದವಾಗಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವಂತೆ 1970 ರಲ್ಲಿ ಹೋರಾಟ ನಡೆಸಲಾಗಿತ್ತು. ಮತ್ತು ಯಾವುದೇ ಕಾರಣಕ್ಕೂ ಕೈಗಳಿಂದ ಮಲ ಎತ್ತುವ ಅಥವಾ ಹೊರುವ ಪದ್ಧತಿ ಮುಂದುವರಿಯಬಾರದು ಮತ್ತು ಯಂತ್ರಗಳನ್ನು ಬಳಸಬೇಕೆಂದು ಒತ್ತಾಯಿಸಲಾಗಿತ್ತು. ದೇವರಾಜು ಅರಸು ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದುಗೊಳಿಸುವ ಮಹತ್ವದ ಶಾಸನವನ್ನು ಜಾರಿಗೊಳಿಸುವುದಕ್ಕೆ ಕಮ್ಯುನಿಸ್ಟರು ಇದರ ವಿರುದ್ಧ ಹೋರಾಟವನ್ನು ರಾಜ್ಯದಲ್ಲಿ ಕಾಲು ಶತಮಾನದ ಮೊದಲೇ ಆರಂಭಿಸಿದ್ದರು ಎಂಬುದು ಗಮನಾರ್ಹ.

ವಿಭಜನೆಯ ವೈಷಮ್ಯ: ಕಮ್ಯುನಿಸ್ಟ್ ಪಕ್ಷದ ಇಬ್ಭಾಗದಿಂದ ಕಾರ್ಮಿಕ ಚಳುವಳಿಯಲ್ಲಿ ಉಂಟಾದ ವಿಭಜನೆ ಮತ್ತು ವೈಷಮ್ಯಕ್ಕೆ ಉತ್ತಮ ಉದಾಹರಣೆಯೆಂದರೆ ದಾವಣಗೆರೆ. 1967 ರಲ್ಲಿ ಸಿಪಿಐನ ಉಸ್ತುವಾರಿಯಾಗಿ ಸಿಂಪ್ಸನ್ ಸೋನ್ಸ್ ದಾವಣಗೆರೆಗೆ ಬಂದರು. ಗಣೇಶ ಟೆಕ್ಸ್‌ಟೈಲ್ ಮಿಲ್ ಯೂನಿಯನ್‌ನಲ್ಲಿ ಬಿಟ್ಟರೆ ಸಿಪಿಐ(ಎಂ) ನಾಯಕತ್ವ ಬೇರೆ ಕಡೆಗಳಲ್ಲಿರಲಿಲ್ಲ. ಉಳಿದಂತೆ ದಾವಣಗೆರೆ ಕಾಟನ್ ಮಿಲ್, ಸಿದ್ದೇಶ್ವರ ಮಿಲ್, ಎಲ್ಲಮ್ಮ ಕಾಟನ್ ಮಿಲ್, ಆಂಜನೇಯ ಮಿಲ್, ಚಂದ್ರೋದಯ ಮಿಲ್ ಮತ್ತು ಎಣ್ಣೆ ಮಿಲ್‌ಗಳ ಯೂನಿಯನ್‌ಗಳು ಸಿಪಿಐ ನಾಯಕತ್ವದಲ್ಲಿದ್ದವು. ಎರಡೂ ಗುಂಪುಗಳು ಚಟುವಟಿಕೆಗಳನ್ನು ಜೋರಾಗಿ ನಡೆಸುತ್ತಿದ್ದವು. ಆದರೆ ಪ್ರಭಾವ ಮತ್ತು ಸಾಮರ್ಥ್ಯ ಸಿಪಿಐಗೆ ಹೆಚ್ಚಾಗಿತ್ತು. ಈ ನಡುವೆ ಸಂಘದ ಹಕ್ಕುಗಳಿಗಾಗಿ ಡಿಸಿಎಂ ಮಿಲ್‌ನಲ್ಲಿ ಕಾರ್ಮಿಕರು **ಸ್ಟೇ–ಇನ್ ಮುಷ್ಕರ ಮಾಡಿದರು. ಒಂದು ವಾರಕ್ಕೂ ಹೆಚ್ಚು ಕಾಲ ಈ ಹೋರಾಟ ನಡೆಯಿತು. ಈ ಸಂದರ್ಭದಲ್ಲಿ** ರೇವಣಸಿದ್ದಪ್ಪ ಎಂಬ ಕಾರ್ಮಿಕನ ಕೊಲೆ ಕೇಸಿನಲ್ಲಿ ಸುರೇಶ್, ಆನಗೋಡು ರಾಮಚಂದ್ರಪ್ಪ, ಗೋಪಾಲಕೃಷ್ಣ, ಆವರಗೆರೆ ರಾಮಣ್ಣ, ಲಕ್ಷ್ಮಣ, ನಿಟುವಳ್ಳಿ ಪರಮೇಶ್ವರಪ್ಪ, ಚಂದ್ರಾಮಪ್ಪ ಇವರ ಮೇಲೆ ಮಾಲೀಕರು ಪ್ಲಾನ್ ಮಾಡಿ ಚಾರ್ಜ್‌ಶೀಟ್ ಹಾಕಿಸಿದ್ದರು. ದಾವಣಗೆರೆಯಲ್ಲಿ ತುಂಬಾ ಕುತೂಹಲ ಕೆರಳಿಸಿದ್ದ ಈ ಕೇಸ್‌ನಲ್ಲಿ ಇವರೆಲ್ಲಾ ಖುಲಾಸೆ ಆದದ್ದು ಕಾರ್ಮಿಕರಿಗೆ ತುಂಬಾ ಧೈರ್ಯವನ್ನು ಕೊಟ್ಟಿತು.

ಡಿಸಿಎಂ ಸಂಘದ ಮುಖಂಡರು ಮತ್ತು ಸಿಪಿಐನ ಮುಖಂಡರೂ ಆಗಿದ್ದ ಸುರೇಶ್ ಮತ್ತು ಶೇಖರಪ್ಪ ಅವರನ್ನು ಗಣೇಶ ಟೆಕ್ಸ್‌ಟೈಲ್ ಮಿಲ್‌ನ ಕೆಲವು ಕಾರ್ಮಿಕರು ಕೊಲೆ ಮಾಡಿದರೆಂಬ 1970 ರಲ್ಲಿ ನಡೆದ ಘಟನೆ ದಾವಣಗೆರೆಯಲ್ಲಿ ಕಮ್ಯುನಿಸ್ಟ್ ಪಕ್ಷಗಳ ದಾಯಾದಿ ಕಲಹವನ್ನು ತೀವ್ರ ಮಟ್ಟಕ್ಕೆ ತಲುಪಿಸಿತು. ಸಿಪಿಐ(ಎಂ)ನ ಮುಖಂಡ ಎಸ್.ಸೂರ್ಯನಾರಾಯಣರಾವ್ ಅವರ ಚಿತಾವಣೆಯಿಂದ ಕೊಲೆ ಮಾಡಲಾಗಿದೆ ಎಂದು ಸಿಪಿಐ ಆರೋಪಿಸಿತು (ಶಿರಿ 2003: 145–146). ಆದರೆ ವಿಚಾರಣೆಯಲ್ಲಿ ಅವರು ಖುಲಾಸೆಯಾದರು. ಈ ಪ್ರಕರಣದಿಂದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಸಿಪಿಐ(ಎಂ) ಸಂಘಟನಾತ್ಮಕವಾಗಿ ತುಂಬಾ ನಷ್ಟ ಅನುಭವಿಸಿತು. ಇದು ಏನೇ ಆದರೂ ದಾವಣಗೆರೆಯಲ್ಲಿ ಕಾರ್ಮಿಕರ ನಡುವೆ ಮಿಲಿಟೆನ್ಸಿ ತೀವ್ರವಾಗಿ ಬೆಳೆಯಿತು. ಇದರಿಂದ ಸಾಕಷ್ಟು ಕಾಲ ರಾಜಕೀಯವಾಗಿ ಸಿಪಿಐ ಪ್ರಬಲ ಶಕ್ತಿಯಾಗಿತ್ತು. ಕಾರ್ಮಿಕ ವರ್ಗದ ಪಡೆಯ ಆಧಾರದಲ್ಲಿ ರಾಜಕೀಯ ಶಕ್ತಿಯಾಗಿದ್ದ ಒಂದು ಸ್ಥಳವೆಂದರೆ ದಾವಣಗೆರೆ ಎಂದು ಬಾಬು ಮ್ಯಾಥ್ಯೂ ಅಭಿಪ್ರಾಯ ಪಡುತ್ತಾರೆ[101].

ವೇತನ ಸಂಬಂಧೀ ಹೋರಾಟಗಳು: ಬೆಳಗಾವಿಯಲ್ಲಿ ಕಾರ್ಮಿಕರ ಹೋರಾಟ 1928 ರಲ್ಲೇ ಆರಂಭವಾಗಿತ್ತು. ನಾರಾಯಣರಾವ್ ಸೋನಿ ಎಂಬುವರು ಮೊದಲ ಕಾರ್ಮಿಕ ಸಂಘವನ್ನು ಬ್ರಿಟಿಷರ ಒಡೆತನದ ಗೋಕಾಕ್ ಟೆಕ್ಸಟೈಲ್ ಮಿಲ್‌ನಲ್ಲಿ ಸ್ಥಾಪಿಸಿದ್ದರು. ವೇತನ ಹೆಚ್ಚಳ ಮತ್ತಿತರ ಬೇಡಿಕೆಗಳಿಗಾಗಿ ನಡೆದ ಜಿಲ್ಲೆಯ ಈ ಮೊದಲ ಕಾರ್ಮಿಕ ಹೋರಾಟದಲ್ಲಿ ಕಾರ್ಮಿಕರು ಗೋಕಾಕ್‌ನಿಂದ ಬೆಳಗಾವಿ ಜಿಲ್ಲಾಧಿಕಾರಿ ಕಛೇರಿವರೆಗೆ ಜಾತಾ ನಡೆಸಿದರು. ನಾರಾಯಣರಾವ್ ಅವರನ್ನು ಬಂಧಿಸಿ ಪೂನಾದ ಯರವಾಡ ಜೈಲಿನಲ್ಲಿ ಚಿತ್ರಹಿಂಸೆ ನೀಡಲಾಯಿತು. ಇವರು ಅನಾರೋಗ್ಯಕ್ಕೆ ತುತ್ತಾದ್ದರಿಂದ ಕಾರ್ಮಿಕ ಚಳುವಳಿಯ ಮೇಲೆ ಹೊಡೆತ ಬಿತ್ತು[102].

1954 ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಬೆಂಗಳೂರಿನ ಮೈಸೂರು ಮಿಲ್ಲಿನಲ್ಲಿ ಮುಷ್ಕರ ನಡೆಯಿತು. ಮತ್ತು ಎಲೆಕ್ಟ್ರಿಕಲ್ ವಿಭಾಗದ ಕಾರ್ಮಿಕರು 1954 ರ ಡಿಸೆಂಬರ್ 27 ರಿಂದ[103] ಜನವರಿ 15, 1955 ರವರೆಗೂ ಮುಷ್ಕರ ನಡೆಸಿದರು[104]. 1955 ರಲ್ಲಿ ಬೆಂಗಳೂರು ನಗರದ ಉತ್ತರ ಭಾಗದಲ್ಲಿ ಗಲಭೆಗಳು ಮತ್ತು ಅಕ್ರಮ ಕೂಟಗಳು ಹೆಚ್ಚಾದವೆಂದು, ಅದಕ್ಕೆ ಹಲವಾರು ಸಣ್ಣ ಕಾರ್ಖಾನೆಗಳಲ್ಲಿ ಹೆಚ್ಚಿದ ಕಾರ್ಮಿಕರ ಮುಷ್ಕರಗಳು ಕಾರಣವೆಂದು ಪೊಲೀಸ್ ವರದಿ ಹೇಳಿತು[105]. 1956 ರಲ್ಲಿ ಹೋರಾಟಗಳುತೀವ್ರಗೊಂಡು, ಅಕ್ಟೋಬರ್ 12 ರಂದು ಮೈಸೂರು ಕಿರ್ಲೋಸ್ಕರ್ ಫ್ಯಾಕ್ಟರಿಯ 1300 ಕಾರ್ಮಿಕರು 1957 ಜನವರಿ 12 ರವರೆಗೆ ಮುಷ್ಕರ ಮಾಡಿದರು. ಕಾರ್ಮಿಕರ ಬೇಡಿಕೆಗಳ ಇತ್ಯರ್ಥಕ್ಕೆ ಕೈಗಾರಿಕಾ ಟ್ರಿಬ್ಯುನಲ್‌ಗೆ ವರ್ಗಾವಣೆಯಾದವು. ಪೊಂಗಲ್ ಬೋನಸ್ ಕೊಡಲಿಲ್ಲವೆಂದು ಬೆಂಗಳೂರಿನ ಟ್ಯಾನರಿ ಕಾರ್ಮಿಕರು 1956 ರ ಜನವರಿ 5–6 ರಂದು ಮುಷ್ಕರ ಮಾಡಿದರು.

ಕೇಂದ್ರ ಸರ್ಕಾರದ ತುಟ್ಟಿ ಭತ್ಯೆಗೆ ಸಮನಾಗಿ ರಾಜ್ಯದ ಡಿಎ ಕೊಡಬೇಕೆಂದು ಒತ್ತಾಯಿಸಿ 1967 ಜನವರಿ 24 ಮತ್ತು 25 ರಂದು ಮೈಸೂರು ರಾಜ್ಯದ ಸರ್ಕಾರಿ ನೌಕರರು ಮುಷ್ಕರ ನಡೆಸಿದರು. ಬೇಡಿಕೆಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿತು (ಬರ್ದನ್: 1997: 57). 1950 ರ ದಶಕದಲ್ಲಿ ಆರಂಭವಾದ ಹೆಚ್‌ಎಎಲ್, ಬಿಇಎಲ್, ಹೆಚ್‌ಎಂಟಿ ಮುಂತಾದ ಸಾರ್ವಜನಿಕ ಕೈಗಾರಿಕೆಗಳಲ್ಲಿ ಎಂ.ಎಸ್.ಕೃಷ್ಣನ್ ಕಾರ್ಮಿಕರ ಸಂಘಗಳನ್ನು ರಚಿಸುವುದರಲ್ಲಿ ಮುಂಚೂಣಿ

ಪಾತ್ರ ವಹಿಸಿದರು. ಬೆಂಗಳೂರಿನ ಸಾರ್ವಜನಿಕ ಕೈಗಾರಿಕೆಗಳ ಜಂಟಿ ಹೋರಾಟ ಸಮಿತಿ ಮತ್ತು ಹೋರಾಟಗಳ ನಾಯಕತ್ವದಲ್ಲಿದ್ದು, ಎರಡು ದಶಕಗಳಿಗೂ ಹೆಚ್ಚು ಕಾಲ ಕೃಷ್ಣನ್ ಕೆಲಸ ಮಾಡಿದರು. ಇದರ ಜೊತೆಗೆ ಬೆಂಗಳೂರಿನ ಹಲವಾರು ಕೈಗಾರಿಕೆಗಳಲ್ಲಿ ಕೃಷ್ಣನ್ ಕಾರ್ಮಿಕರಿಗೆ ಮುಖಂಡತ್ವವನ್ನು ನೀಡಿದರು. ಇದೆಲ್ಲದರ ಪರಿಣಾಮ 1967 ರಲ್ಲಿ ಕೃಷ್ಣನ್ ವಿಧಾನಸಭೆಗೆ ಆಯ್ಕೆಯಾದರು[106].ಕೆಜಿಎಫ್‌ನ ಮೈಸೂರು ಮತ್ತು ಚಾಂಪಿಯನ್ ರೀಫ್ಸ್ ಗಣಿಗಳು ಮತ್ತು ಕೆಜಿಎಫ್ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್ ಕಾರ್ಮಿಕರು 1955 ಸೆ. 8 ರಿಂದ 14 ರವರೆಗೆ ಆಡಳಿತವರ್ಗ ಒಪ್ಪಂದವನ್ನು ಜಾರಿಗೊಳಿಸಬೇಕೆಂದು ಮುಷ್ಕರ ಮಾಡಿದರು[107].

ಭದ್ರಾವತಿಯಲ್ಲಿ ಕಾರ್ಮಿಕರ ಪರವಾಗಿ ತೀರ್ಪು ನೀಡಿದ ನ್ಯಾಯಾಧೀಶರನ್ನೇ ಎತ್ತಂಗಡಿಮಾಡಿದ ಮೈಸೂರು ಸರ್ಕಾರದ ಪ್ರಕರಣವೊಂದು ನಡೆಯಿತು. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ 5000 ಕ್ಕೂ ಹೆಚ್ಚಿನ ಕೆಲಸಗಾರರು 1941 ರ ಕೊನೆಯಲ್ಲಿ ಎನ್.ಡಿ.ಶಂಕರ್ ಅವರ ನೇತೃತ್ವದಲ್ಲಿ ಸಂಘವನ್ನು ಸ್ಥಾಪಿಸಿ ಹೋರಾಟದ ಅಧ್ಯಾಯವನ್ನು ಆರಂಭಿಸಿದ್ದರು. ಮೈಸೂರು ಸರಕಾರ ಶಂಕರ್ ಮತ್ತು ಕೆಲವರನ್ನು ಗಡೀಪಾರು ಮಾಡಿತ್ತು. ಅಂದಿನಿಂದಲೂ ಯಾರೆಲ್ಲಾ ಕಾರ್ಮಿಕರ ಹಿತಕ್ಕಾಗಿ ಹೋರಾಡುವರೋ ಅವರನ್ನೆಲ್ಲಾ ಗಡೀಪಾರು ಮಾಡುತ್ತಾ ಕಾರ್ಮಿಕರ ಸಂಘಟನೆಯನ್ನು ತಡೆಯುವ ಬೆದರಿಕೆಯನ್ನು ಸರ್ಕಾರ ಒಡ್ಡುತ್ತಿತ್ತು. ದಿನವೊಂದರ ಕನಿಷ್ಠ ವೇತನ 1 ರೂಪಾಯಿ, 4 ತಿಂಗಳ ಬೋನಸ್, ತುಟ್ಟಿಭತ್ಯೆ, ಹೀಟ್ ಅಲೋಯೆನ್ಸ್, ಗ್ರಾಜುಯಿಟಿ ಇತ್ಯಾದಿ ಬೇಡಿಕೆಗಳ ಪರಿಹಾರಕ್ಕೆ 1946 ರ ಅಕ್ಟೋಬರ್‌ನಲ್ಲಿ ಆರ್ಬಿಟ್ರೇಷನ್ ಕೋರ್ಟ್‌ನಲ್ಲಿ ಕೋರಲಾಗಿತ್ತು. ಅದು 14 ತಿಂಗಳ ನಂತರ ಕೊಟ್ಟ ತೀರ್ಪಿನಲ್ಲಿ ಕನಿಷ್ಟ ಕೂಲಿ ದಿನವೊಂದಕ್ಕೆ ಕೇವಲ 10 ಪೈಸೆ ಎಂದು ತೀರ್ಮಾನವಾಯಿತು. ಹೀಟ್ ಅಲೋವೆನ್ಸ್, ರಾತ್ರಿ ಪಾಳಿ ಭತ್ಯೆ ಸಿಗಲಿಲ್ಲ. ಸರ್ವೀಸ್ ವೈಟೇಜ್ ಕೊಡಬೇಕೆಂದು ಹೇಳಿದರೂ ಅದನ್ನು ಜಾರಿ ಮಾಡಲಿಲ್ಲ. ಮೈಸೂರು ಲೇಬರ್ ಕಾಯ್ದೆ ಭದ್ರಾವತಿಗೆ ಅನ್ವಯವಾಗುವುದಿಲ್ಲ ಎಂಬ ಆಡಳಿತ ವರ್ಗದ ತೀರ್ಮಾನದ ವಿರುದ್ಧ ಸಂಘ ಕೋರ್ಟಿಗೆ ಹೋಯಿತು. ಜಸ್ಟೀಸ್ ಪುಟ್ಟರಾಜ ಅರಸುರವರು ಸಂಘದ ಪರವಾಗಿ ತೀರ್ಪು ಕೊಟ್ಟರು. ಇದಕ್ಕೆ ಪ್ರತಿಫಲವಾಗಿ ನ್ಯಾಯಾಧೀಶರನ್ನೇ ಮೈಸೂರು ಸರ್ಕಾರ ಕೆಲಸದಿಂದ ವಜಾ ಮಾಡಿತು ಮತ್ತು ಅವರ ತೀರ್ಪಿಗೆ ತಡೆ ನೀಡಿತು! 'ವೈಟೇಜ್ ಸಿಗಲೇಬೇಕು' ಎಂದು 1950 ರ ಮೇ ದಿನದಂದು 3000 ಕ್ಕೂ ಹೆಚ್ಚಿನ ಕಾರ್ಮಿಕರು ಪ್ರದರ್ಶನ ನಡೆಸಿದರು. ಈ ವಿಚಾರವಾಗಿ ನಂತರ ಪ್ರಯತ್ನಗಳನ್ನು ಮುಂದುವರೆಸಿದರು. ಮೇ ಭಾಷಣದಲ್ಲಿ ಎನ್.ಡಿ.ಶಂಕರ್ ಸರಕಾರದ ಯುದ್ಧಕೋರ ನೀತಿ, ಕಾರ್ಮಿಕ ವರ್ಗದ ಮೇಲೆ ಮಾಡುತ್ತಿರುವ ದಬ್ಬಾಳಿಕೆ, ದಮನಕಾರಿ ಕಾಯಿದೆಗಳನ್ನು ಖಂಡಿಸಿದರು. ಕಮ್ಯುನಿಸ್ಟ್ ಪಾರ್ಟಿಯ ಕುರಿತು ಅಪಪ್ರಚಾರದ ರಾಯಿಸ್ಟರು ಹೊರಡಿಸಿದ ಕರಪತ್ರವೊಂದನ್ನು ಖಂಡಿಸಿದರು[108].

❖ ❖ ❖

ರೈತ ರಂಗ: ಕಮ್ಯುನಿಸ್ಟ್ ಪಕ್ಷವು 1948 ರಲ್ಲಿ ದಕ್ಷಿಣ ಕನ್ನಡಜಿಲ್ಲೆಯಲ್ಲಿ ರೈತ ಸಂಘವನ್ನು ಕಟ್ಟಲು ತೀರ್ಮಾನಿಸಿತು. ಎಂ.ಹೆಚ್.ಕೃಷ್ಣಪ್ಪ[109] ರೈತ ಚಳುವಳಿಯನ್ನು ಕಟ್ಟಲು ಮುಂಚೂಣಿ ಪಾತ್ರವನ್ನು ವಹಿಸಿದ್ದರು.

ಬಂಟ್ವಾಳ ತಾಲೂಕಿನಲ್ಲಿ ಮತ್ತು ಮಂಗಳೂರು ಗ್ರಾಮೀಣ ಪ್ರದೇಶಗಳಲ್ಲಿ ರೈತ ಸಂಘದ ಘಟಕಗಳನ್ನು ಸ್ಥಾಪನೆ ಮಾಡುವುದು ಮತ್ತು ಹೋರಾಟಗಳನ್ನು ನಡೆಸುವ ಮೂಲಕ 1948 ರಲ್ಲಿ ಪ್ರಥಮವಾಗಿ ಬಂಟ್ವಾಳ ತಾಲೂಕು ಸಮ್ಮೇಳನ ನಡೆಯಿತು. ಕೃಷ್ಣಶೆಟ್ಟಿ, ಎಸ್.ಎನ್.ಹೊಳ್ಳ, ಬಿ.ವಿ.ಕಕ್ಕಿಲ್ಲಾಯ, ಅಮ್ಮುಶೆಟ್ಟಿ, ಬಿ.ವೀರಪ್ಪ ಸಾಲ್ಯಾನ್, ಇರಾ ರಾಮ ಪೂಜಾರಿ ಮುಂತಾದವರು ಸಕ್ರಿಯ ಪಾತ್ರ ವಹಿಸಿದರು. ಸರಕಾರ ಮದ್ಯಪಾನ ನಿಷೇಧ ಮಾಡಿದ್ದರಿಂದ ಬಾಧಿತರಾದವರ ಜೀವನದ ಪ್ರಶ್ನೆಗಳನ್ನಿಟ್ಟುಕೊಂಡು ಕಮ್ಯುನಿಸ್ಟ್ ಪಕ್ಷ **ಮೂರ್ತೆದಾರರ ಹೋರಾಟ**ವನ್ನು ನಡೆಸಿತು. ಹೆಂಡ ಇಳಿಸುವುದನ್ನು ನಿಷೇಧಿಸುವ ಮೊದಲು ಮೂರ್ತೆದಾರರಿಗೆ ಬದಲಿ ಕೆಲಸ ಕೊಡಬೇಕು ಮತ್ತು ಭೂಸುಧಾರಣೆ ಜಾರಿಗೊಳಿಸಬೇಕೆಂಬ ಹೋರಾಟದಲ್ಲಿ ಬಿಲ್ಲವ ಜಾತಿಗೆ ಸೇರಿದ್ದ ಎಂ.ಹೆಚ್.ಕೃಷ್ಣಪ್ಪ ರೈತ ನಾಯಕರಾಗಿ ಬೆಳೆದು ಬಂದರು. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ರೈತ ಸಂಘಟನೆಯನ್ನು ವಿಸ್ತರಿಸುವುದಕ್ಕೆ ಇದರಿಂದ ಸಹಾಯವಾಯಿತು. ವಿಸ್ತರಣೆಯನ್ನು ಕ್ರೋಢೀಕರಿಸಲು 1954 ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ರೈತ ಸಮ್ಮೇಳನವನ್ನು ನಡೆಸಲಾಯಿತು[110]. ಗೇಣಿ ಸಮಸ್ಯೆ ಮತ್ತು ಜಮೀನ್ದಾರರ ದಬ್ಬಾಳಿಕೆಗಳನ್ನು ರೈತ ಪ್ರತಿನಿಧಿಗಳು ಚರ್ಚಿಸಿದರು. 'ಉಳುವವನೇ ಹೊಲದೊಡೆಯ' ಆಗಬೇಕು ಮತ್ತು ಸರ್ಕಾರ ಅದಕ್ಕಾಗಿ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತರಬೇಕೆಂದು ನಿರ್ಣಯಿಸಿದರು. ಹನ್ನೆರೆಡು ಸಾವಿರಕ್ಕೂ ಹೆಚ್ಚಿನ ರೈತರು ಮತ್ತು ಕಾರ್ಮಿಕರು ಭಾಗವಹಿಸಿದ್ದ ಬಹಿರಂಗ ಸಭೆಯಲ್ಲಿ ಲೋಕಸಭಾ ಸದಸ್ಯೆ ರೇಣು ಚಕ್ರವರ್ತಿ ಭಾಗವಹಿಸಿ ಹುಮ್ಮಸ್ಸಿನ ಭಾಷಣ ಮಾಡಿದರು. ಮಂಗಳೂರು ಮೂಲದ ತಮಿಳುನಾಡಿನ ರೈತ ಮುಖಂಡರಾಗಿದ್ದ ಬಿ.ಶ್ರೀನಿವಾಸರಾವ್ ಮತ್ತು ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಪರವಾಗಿ ಎನ್.ಎಲ್.ಉಪಾಧ್ಯಾಯರು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು (ಕಕ್ಕಿಲ್ಲಾಯ 2003: 190). ಕೊನೆಯಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾಗಿ ಎ.ಕೃಷ್ಣಶೆಟ್ಟಿ ಮತ್ತು ಕಾರ್ಯದರ್ಶಿಯಾಗಿ ಎಂ.ಹೆಚ್.ಕೃಷ್ಣಪ್ಪ ಆಯ್ಕೆಯಾದರು.

ಕೊಡಗಿನಲ್ಲಿ ವೈ.ಟಿ.ಅಯ್ಯಪ್ಪ, ಸಿ.ಬಿ.ಮೊಣ್ಣಯ್ಯ, ಕಾವೇರಿಯಪ್ಪ, ಬಿ.ಎನ್.ಕುಟ್ಟಪ್ಪ ಮುಂತಾದವರು 1952 ರಲ್ಲಿ ರೈತ ಸಂಘವನ್ನು ಕಟ್ಟಲು ಆರಂಭಿಸಿದರು. ಇದರ ಫಲವಾಗಿ ಕೊಡಗು ಜಿಲ್ಲಾ ರೈತ ಸಂಘ ರಚನೆಯಾಯಿತು. ವಾರಗಾರ ಟೆನೆನ್ಸಿ ಕಾಯ್ದೆ ಹೆಸರಿನಲ್ಲಿ ನಡೆಯುತ್ತಿದ್ದ ರೈತರ ಶೋಷಣೆ ವಿರುದ್ಧ ಪ್ರತಿಭಟನೆಗಳನ್ನು ನಡೆಸಿತು (ರಾಮಭದ್ರಯ್ಯ 1990: 18). ಮೂರ್ನಾಡಿನ ಬಳಿಯಿರುವ ಕಟ್ಟೆಮಾಡು ಗ್ರಾಮದ ಕಾದಿರಿಸಿದ 27 ಎಕರೆ ಪೈಸಾರಿ ಭೂಮಿಯನ್ನು ಸರ್ಕಾರದಿಂದ ದಕ್ಕಿಸಿಕೊಳ್ಳಲು ಕಾಂಗ್ರೆಸಿಗರು ಪ್ರಯತ್ನಿಸಿದಾಗ ಅದರ ವಿರುದ್ಧ ರೈತಸಂಘದ ನೇತೃತ್ವದಲ್ಲಿ ಪ್ರತಿಭಟಿಸಿದರು. ಕೊಡಗು ಜಿಲ್ಲೆಯಲ್ಲಿ ರೈತ ಸಂಘ ಸಮ್ಮೇಳನ 1958 ರ ಮಾರ್ಚ್ 3–4 ರಂದು ನಡೆಯಿತು. ಎ.ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ಪೈಸಾರಿ ಭೂಮಿಯ ಸಮಸ್ಯೆಯನ್ನು ಎತ್ತಿಕೊಂಡು ರೈತರಿಗೆ ಹಂಚುವ ತೀರ್ಮಾನ ಮಾಡಿತು. ಸಿಪಿಐ ವಿಭಜನೆ ಆಗುವವರೆಗೂ ರೈತ ಹೋರಾಟಗಳು ಜಿಲ್ಲೆಯಲ್ಲಿ ಚುರುಕಾಗಿ ನಡೆಯುತ್ತಿದ್ದವು. ವಿಭಜನೆಯ ನಂತರ ಬಹುತೇಕ ಚಟುವಟಿಕೆಗಳು ನಿಂತು ಹೋದವು. ಸಿ.ಬಿ.ಮೊಣ್ಣಯ್ಯನವರನ್ನು ಹೊರತುಪಡಿಸಿ ಉಳಿದವರೆಲ್ಲರೂ ಸಿಪಿಐ(ಎಂ) ಜೊತೆ ಹೋದರು. ಗಾಯದ ಮೇಲೆ ಬರೆ ಎಂಬಂತೆ ಎಡ–

ತಿವ್ರವಾದದ ಕಾರಣಗಳಿಗಾಗಿ 1978 ರಲ್ಲಿ ಬಿ.ಎನ್.ಕುಟ್ಟಪ್ಪ, ಬಿ.ಎನ್.ವೆಂಕಟರಮಣ ಇವರನ್ನೆಲ್ಲಾ ಸಿಪಿಐ(ಎಂ)ನಿಂದ ಹೊರಹಾಕಿದ ಮೇಲೆ ಜಿಲ್ಲೆಯಲ್ಲಿ ಚಟುವಟಿಕೆಗಳು ತುಂಬಾ ಕ್ಷೀಣಿಸಿದವು.

ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಕೆ.ವಿ.ಕೃಷ್ಣಸ್ವಾಮಿ ಮತ್ತು ಗಂಗಬೈರೇಗೌಡ ಕಾಂಗ್ರೆಸ್ ತ್ಯಜಿಸಿ ರೈತ ಸಂಘವನ್ನು ಕಟ್ಟಲು ಮುಂದೆ ಬಂದರು. 1957 ರ ನವೆಂಬರ್ 6–7 ರಂದು ತುಮಕೂರಿನ ಸಾವಿತ್ರಮ್ಮ ಛತ್ರದಲ್ಲಿ ಜಿಲ್ಲಾ ಪ್ರಥಮ ರೈತ ಸಮ್ಮೇಳನ ನಡೆಯಿತು. ಆರು ತಾಲೂಕುಗಳಿಂದ 36 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನಕ್ಕೆ ಪೂರ್ವಭಾವಿಯಾಗಿ 36 ಮೈಲಿಗಳ ಗ್ರಾಮೀಣ ಪಾದಯಾತ್ರೆಯನ್ನು ನಡೆಸಲಾಗಿತ್ತೆಂದು ಹೇಳಲಾಗಿದೆ. ನೂತನ ಜಿಲ್ಲಾ ಸಮಿತಿಗೆ ಕೆ.ವಿ.ಕೃಷ್ಣಸ್ವಾಮಿ ಅಧ್ಯಕ್ಷರಾಗಿ, ಹೆಚ್.ಸಿ.ಚೆನ್ನಪ್ಪ ಕಾರ್ಯದರ್ಶಿಯಾಗಿ ಮತ್ತು ಅಡವೀಶ್ ಖಜಾಂಚಿಯಾಗಿದ್ದರು.

ದೇಶಾದ್ಯಂತ ಅಖಿಲ ಭಾರತ ಕಿಸಾನ್ ಸಭಾ ಪ್ರಾಂತೀಯ ಕಿಸಾನ್ ಸಮಿತಿಗಳನ್ನು ಭಾಷಾವಾರು ಪ್ರದೇಶಗಳ ಆಧಾರದಲ್ಲಿ ರಚಿಸಬೇಕೆಂದು ಎಐಕೆಎಸ್ ತೀರ್ಮಾನಿಸಿತ್ತಾದರೂ ಅದು ಜಾರಿಯಾಗಿರಲಿಲ್ಲ. ಈ ಬಗ್ಗೆ ಎಐಕೆಎಸ್‌ನ 1954ರ ಮೋಗಾ ಅಧಿವೇಶನವು ಕರ್ನಾಟಕದಲ್ಲಿ ನಾಲ್ಕು ಜಿಲ್ಲಾ ಸಮಿತಿಗಳು ರಚನೆಯಾಗಿದ್ದ ಬಗ್ಗೆ ಪ್ರಸ್ತಾಪಿಸಿತು ಮತ್ತು ಪ್ರಾಂತ ಸಮಿತಿಗಳನ್ನು ರಚಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಸೂಚಿಸಿತ್ತು. ಈ ಅಧಿವೇಶನದಲ್ಲಿ ಮೈಸೂರು ಪ್ರದೇಶವನ್ನು ಪ್ರತಿನಿಧಿಸಿ ಕೋಲಾರದ ಪಿ.ವೆಂಕಟಗಿರಿಯಪ್ಪನವರು ಮಾತನಾಡಿದರು. ಬಿ.ವಿ.ಕಕ್ಕಿಲ್ಲಾಯರು ಎಐಕೆಸಿ ಸದಸ್ಯರಾಗಿದ್ದರು[111]. ಎಐಕೆಎಸ್‌ನ ತೀರ್ಮಾನ ಮತ್ತು ಕರ್ನಾಟಕದಲ್ಲಿ ಬೆಳವಣಿಗೆಯಾಗುತ್ತಿದ್ದ ರೈತರ ಮತ್ತು ಗೇಣಿದಾರರ ಚಳುವಳಿಗಳ ಕ್ರೋಢೀಕರಣದ ಅಗತ್ಯದ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತೀಯ ಕಿಸಾನ್ ಸಭಾವನ್ನು ಆರಂಭಿಸಲು ಕಮ್ಯುನಿಸ್ಟ್ ಪಕ್ಷವು ತೀರ್ಮಾನಿಸಿತು. ಅಷ್ಟೊತ್ತಿಗಾಗಲೇ ಮೈಸೂರು ಸರ್ಕಾರ ನೇಮಕ ಮಾಡಿದ್ದ ಜತ್ತಿ ಸಮಿತಿ ವರದಿಯನ್ನು ನೀಡಿತ್ತು. ಈ ಹಿನ್ನೆಲೆಯಲ್ಲಿ 1957 ರ ಜೂನ್ 9 ರಂದು ಬೆಂಗಳೂರಿನಲ್ಲಿ ಸೇರಿದ್ದ ಕಿಸಾನ್ ಸಭಾದ ವಿವಿಧ ಜಿಲ್ಲೆಗಳ ನಾಯಕರು, ರಾಜ್ಯದಲ್ಲಿ ರೈತ ಚಳುವಳಿಯಿಲ್ಲದೆ ಪ್ರಜಾಪ್ರಭುತ್ವ ಚಳುವಳಿ ಹಿಂದೆ ಬಿದ್ದಿದೆ. ಜತ್ತಿ ಸಮಿತಿಯ ವರದಿಯಲ್ಲಿ ದೋಷಗಳಿರುವುದರಿಂದ ಮುಂದೆ ಬರುವ ಶಾಸನ ರೈತರಿಗೆ ತೊಂದರೆ ತರುವುದು ಖಂಡಿತ. ಆದ್ದರಿಂದ ರೈತರ ರಾಜ್ಯ ಮಟ್ಟದ ಸಂಘಟನೆಯನ್ನು ರಚಿಸಿಕೊಂಡು ಚಳುವಳಿಯನ್ನು ಬೆಳೆಸಲು ಮುಂದಾಗಬೇಕೆಂದು, ಅದಕ್ಕಾಗಿ ಪ್ರಾಂತ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನಿಸಿದರು. ಈ ಪ್ರಕಾರವಾಗಿ ಬೆಂಗಳೂರಿನ ದೇವಾಂಗ ಸಂಘ ಛತ್ರದಲ್ಲಿ1957 ನವೆಂಬರ್ 16–17 ರಂದು ಆಲ್ ಇಂಡಿಯಾ **ಕಿಸಾನ್ ಸಭಾಗೆ ಸೇರ್ಪಡೆ ಹೊಂದಿದಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್)** ಪ್ರಥಮ ಸಮ್ಮೇಳನ ಜರುಗಿತು. ಹನ್ನೊಂದು ಜಿಲ್ಲಾ ಕಿಸಾನ್ ಸಂಘಗಳ ಪ್ರತಿನಿಧಿಗಳು ಮತ್ತು ಕೆಲವು ಸ್ಥಳೀಯ ಸಂಘಗಳ ಪ್ರತಿನಿಧಿಗಳು ಸೇರಿ ಒಟ್ಟು 256 ಪ್ರತಿನಿಧಿಗಳು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಎಐಕೆಎಸ್ ಕಾರ್ಯದರ್ಶಿ ನಂದೂರಿ ಪ್ರಸಾದ್‌ರಾವ್ ವಹಿಸಿದ್ದರು. ಎನ್.ಎಲ್.ಉಪಾಧ್ಯಾಯ ಸಮ್ಮೇಳನವನ್ನು ಉದ್ಘಾಟಿಸಿದ್ದರು. ಚಿಕ್ಕಲಾಲ್‌ಬಾಗಿನಲ್ಲಿ ಎಂ.ಸಿ.ನರಸಿಂಹನ್ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು.

ರಾಜ್ಯಕ್ಕೆ ವಿಶಾಲ ಮೈಸೂರು ಎಂಬ ಹೆಸರಿದ್ದರೂ ರಾಜ ಪ್ರಭುತ್ವದ ಹೆಸರಿನ ಜೊತೆ ಸಂಘಟನೆ ಹೆಸರಿರಬಾರದೆಂದು ಕರ್ನಾಟಕ ಪ್ರಾಂತ ರೈತ ಸಂಘ ಎಂದು ಹೆಸರಿಡಲಾಯಿತು. ಜತ್ತಿ ಸಮಿತಿ ವರದಿಯಲ್ಲಿ ಉತ್ತಮ ಅಂಶಗಳು ಇವೆಯಾದರೂ, ಹೆಚ್ಚಿನ ಅಂಶಗಳು ದೋಷದಿಂದ ಕೂಡಿವೆ. ಹಿಡುವಳಿ ಮಿತಿಯನ್ನು ಮೊದಲಿಗೆ ಸೂಚಿಸಿದ್ದರೂ ಸ್ವಂತ ಸಾಗುವಳಿ ಹೆಸರಿನ ಅರ್ಥ ವಿವರಣೆ, ಭೂಮಿಯ ಗರಿಷ್ಠ ಪರಿಮಿತಿ, ಗೇಣಿ ಒಕ್ಕಲುಗಳಿಂದ ಜಮೀನು ವಾಪಸ್ ಪಡೆಯುವಿಕೆ, ಗೇಣಿ ನಿರ್ಣಯ ಪರಿಹಾರ, ಮಾಲಕತ್ವದ ಷರತ್ತು ಅಪಾಯಕಾರಿಯೆಂದು ಸಮ್ಮೇಳನ ಅಭಿಪ್ರಾಯಪಟ್ಟಿತು. ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡಬೇಕೆಂದು, ಒಕ್ಕಲೆಬ್ಬಿಸುವುದಕ್ಕೆ ಯಾವ ಕಾರಣಕ್ಕೂ ಕಾನೂನಿನಲ್ಲಿ ಅವಕಾಶವಿರಬಾರದೆಂದು, ಗರಿಷ್ಠ ಗೇಣಿ 1/6 ಕ್ಕಿಂತ (ಬಾಂಬೆ ಟೆನೆನ್ಸಿ ಕಾಯ್ದೆ ನಿಗದಿಪಡಿಸಿದ್ದ ಮಿತಿ) ಹೆಚ್ಚಿರಬಾರದೆಂದು, ಜೋಡಿ ಗ್ರಾಮಗಳಲ್ಲಿ ಸರ್ವೆ ಸೆಟಲ್‌ಮೆಂಟ್ ಮಾಡಿ ರೈತರಿಗೆ ಭೂಮಿ ಖಾಯಂ ಮಾಡಬೇಕೆಂದು ಮತ್ತು ಇತರೆ ನಿರ್ಣಯಗಳನ್ನು ಅಂಗೀಕರಿಸಿತು[112].ಅಂತಿಮವಾಗಿ ಸಮ್ಮೇಳನವು ಕೆಪಿಆರ್‌ಎಸ್‌ನ ಮೊದಲ ಅಧ್ಯಕ್ಷರಾಗಿ ಪಿ.ವೆಂಕಟಗಿರಿಯಪ್ಪ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಬಿ.ವಿ.ಕಕ್ಕಿಲ್ಲಾಯರನ್ನು ಆಯ್ಕೆ ಮಾಡಿತು. 1958 ರ ಫೆಬ್ರವರಿಯಲ್ಲಿ ಪ್ರತಿಭಟನಾ ವಾರಾಚರಣೆಯನ್ನು ಆಚರಿಸಲು ಕೆಪಿಆರ್‌ಎಸ್ ಕರೆ ನೀಡಿತು. ರಾಜ್ಯದ ಬಹುತೇಕ ಕಡೆಗಳಲ್ಲಿ ಪ್ರತಿಭಟನೆಗಳು ನಡೆದವು.

ಗೇಣಿ ರೈತರ ಸಮಸ್ಯೆಗಳು, ಜೋಡಿ ಇನಾಂ ರೈತರ ಸಮಸ್ಯೆಗಳು, ಬಾಂಬೆ ಟೆನೆನ್ಸಿ ವ್ಯಾಪ್ತಿಯ ರೈತರ ಸಮಸ್ಯೆಗಳು ಹೀಗೆ ಇಡೀ ರಾಜ್ಯಾದ್ಯಂತ ತನ್ನ ಮಧ್ಯಪ್ರವೇಶವನ್ನು ಕರ್ನಾಟಕ ಪ್ರಾಂತ ರೈತ ಸಂಘವು ನಡೆಸಿತು. 1959–60 ರಲ್ಲಿ ರೈತ ಸಂಘವು ನೀರು, ತೆರಿಗೆ, ವಿದ್ಯುತ್ ದರಗಳು ಮುಂತಾದ ಪ್ರಶ್ನೆಗಳನ್ನು ಎತ್ತಿ ಹೋರಾಡಿತು. 1960 ರಲ್ಲಿ ರಾಜ್ಯದಲ್ಲಿ ಪ್ರಗತಿಪರ ಭೂಸುಧಾರಣೆ ತರಬೇಕೆಂದು ಬೆಂಗಳೂರಿನಲ್ಲಿ ಬೃಹತ್ ಪ್ರದರ್ಶನವನ್ನು ನಡೆಸಿತು. ರೈತರ ನಡುವೆ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು 1961 ರ ಮಾರ್ಚ್ 26–27 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಎರಡನೇ ರಾಜ್ಯ ಸಮ್ಮೇಳನ ಶ್ರೀರಂಗಪಟ್ಟಣದಲ್ಲಿ ನಡೆಯಿತು (ರಾಮಭದ್ರಯ್ಯ 1990: 37)[113]. ಮೈಸೂರು ರಾಜರ ಒಡೆತನದಲ್ಲಿದ್ದ 7 ಲಕ್ಷ ಎಕರೆ ಅಮೃತ್‌ಮಹಲ್ ಕಾವಲು ಭೂಮಿಯನ್ನು ರೈತರಿಗೆ ಹಂಚಬೇಕು ಮತ್ತು ಬೆಳಗಾವಿ ಜಿಲ್ಲೆಯ ಘಟಪ್ರಭ ಯೋಜನೆಯಿಂದ ಮುಳುಗಡೆಯಾಗುವ 50 ಗ್ರಾಮಗಳ ಸುಮಾರು 75,000 ಜನರ ಪುನರ್ವಸತಿ ಮತ್ತು ಪರಿಹಾರ ಸರಿಯಾಗಿ ಮಾಡಬೇಕು ಎಂಬ ಸಮ್ಮೇಳನದ ನಿರ್ಣಯಗಳ ಆಧಾರದಲ್ಲಿ ಹೋರಾಟಗಳು ಜರುಗಿದವು[114].

ತೀರ್ಥಹಳ್ಳಿ ತಾಲೂಕು ಕರ್ನಾಟಕ ಪ್ರಾಂತ ರೈತ ಸಂಘದ ಸಮ್ಮೇಳನ 1961 ರ ನವೆಂಬರ್ 17 ರಂದು ನಡೆಯಿತು. ತಾಲೂಕಿನ ವಿವಿಧ ಭಾಗಗಳಿಂದ 2000 ಕ್ಕೂ ಮಿಕ್ಕಿ ರೈತರು ಕೆಂಬಾವುಟಗಳನ್ನು ಕಟ್ಟಿಕೊಂಡು ಎತ್ತಿನ ಗಾಡಿಗಳಲ್ಲಿ ಮೆರವಣಿಗೆ ಬಂದಿದ್ದರು. ನ್ಯಾಯವಾದ ಭೂಸುಧಾರಣೆ ಜಾರಿಗಾಗಿ, ಒಕ್ಕಲೆಬ್ಬಿಸುವುದರ ವಿರುದ್ಧ, ಉಳುವವನೆ ಹೊಲದೊಡೆಯ ಮುಂತಾದ ವಿಚಾರಗಳನ್ನು ಚರ್ಚಿಸಲಾಯಿತು. ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾಗಿದ್ದ ಎ.ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಎಂ.ಹೆಚ್.ಕೃಷ್ಣಪ್ಪ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸ್ಥಳೀಯ ಮುಖಂಡರಾದ ಬಿ.ಎನ್.ಅಪ್ಪಣ್ಣ ಹೆಗಡೆ, ಕೆ.ಎಂ.ಶ್ರೀನಿವಾಸ್, ಟಿ.ವಾಮನ ಭಟ್[115], ರೆಹಮಾನ್ ಸಾಬ್, ಚಂದು ಕುಟ್ಟಿ, ಸಿ.ಕೆ.ಜಿ.ನಾಯ್ಡು, ಬಾಲನ್ ನಾಯರ್, ಕುರುಡುಮಲ್ಲಿಗೆ ಅಚ್ಚಣ್ಣ ಶೆಟ್ರು, ಸದಾಶಿವರಾವ್, ವೆಂಕಟಪ್ಪ, ಎಸ್.ಶ್ರೀನಿವಾಸರಾವ್, ಒಸುರಾಜ್ ಮುಂತಾದವರು ಸಕ್ರಿಯ ಪಾತ್ರ ವಹಿಸಿದರು[116]. ತೀರ್ಥಹಳ್ಳಿಯಲ್ಲಿ ತೀವ್ರಗೊಂಡ ಗೇಣಿದಾರರ ಹೋರಾಟಗಳನ್ನು ಗಟ್ಟಿಗೊಳಿಸಲು ಮತ್ತು ವಿಸ್ತರಿಸುವ ಉದ್ದೇಶದೊಂದಿಗೆ, ಜನಪರ ಭೂಸುಧಾರಣಾ ಕಾಯ್ದೆಯನ್ನು ಕೇಂದ್ರವಾಗಿಟ್ಟುಕೊಂಡು ಕೆಪಿಆರ್‌ಎಸ್‌ನ ಮೂರನೇ ರಾಜ್ಯ ಸಮ್ಮೇಳನ 1966 ರಲ್ಲಿ ತೀರ್ಥಹಳ್ಳಿಯಲ್ಲಿ ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಲೋಕಸಭೆಯ ವಿರೋಧಪಕ್ಷದ ನಾಯಕ ಎ.ಕೆ.ಗೋಪಾಲನ್ ಮಾಡಿದರು. 1969 ರ ಫೆಬ್ರವರಿಯಲ್ಲಿ ಕೋಲಾರದ ಚಿಂತಾಮಣಿಯಲ್ಲಿ ಕೆಪಿಆರ್‌ಎಸ್‌ನ ನಾಲ್ಕನೇ ರಾಜ್ಯ ಸಮ್ಮೇಳನ ನಡೆಯಿತು. ಹೀಗೆ ಸಮ್ಮೇಳನದಿಂದ ಸಮ್ಮೇಳನಕ್ಕೆ ರಾಜ್ಯದ ರೈತರ ಪ್ರಶ್ನೆಗಳ ಮೇಲೆ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಾ ಕೆಪಿಆರ್‌ಎಸ್ ಮುಂದುವರಿಯಿತು. ಗೇಣಿದಾರರ ಪ್ರಶ್ನೆಗಳು, ಭೂಮಿ ಪ್ರಶ್ನೆ ಮತ್ತು ಇತರೆ ಪ್ರಶ್ನೆಗಳನ್ನು ಕೇಂದ್ರೀಕರಿಸಿ ಚಳುವಳಿಯುನ್ನು ವಿಸ್ತರಿಸುತ್ತಾ ಬೆಳೆದ ಕೆಪಿಆರ್‌ಎಸ್ ಸಂಘಟನೆಯನ್ನು ಹೆಚ್ಚೆಚ್ಚು ಜಿಲ್ಲೆಗಳಿಗೆ ವಿಸ್ತರಿಸಿತು.

ಗೇಣಿದಾರರ ಹೋರಾಟಗಳು: ಕಮ್ಯುನಿಸ್ಟರ ನೇತೃತ್ವದ ಆರಂಭಿಕ ರೈತ ಹೋರಾಟಗಳು ಮುಖ್ಯವಾಗಿ ಗೇಣಿದಾರರ ಸಮಸ್ಯೆಗಳನ್ನು ಕೇಂದ್ರೀಕರಿಸಿತ್ತು. ದಕ್ಷಿಣ ಕನ್ನಡಜಿಲ್ಲೆಯಲ್ಲಿ ಚಾಲಗೇಣಿ ಒಕ್ಕಲುಗಳು ಭಾರಿ ಸಂಖ್ಯೆಯಲ್ಲಿದ್ದರು ಮತ್ತು ಭೂಮಾಲಕರ ಕಿರುಕುಳ, ದೌರ್ಜನ್ಯ ದಬ್ಬಾಳಿಕೆಗಳು ತೀವ್ರವಾಗಿದ್ದವು. ವಿಪರೀತ ಗೇಣಿ, ಬಲಾತ್ಕಾರದ ಒಕ್ಕಲೆಬ್ಬಿಸುವಿಕೆ ವಿರುದ್ಧ ಸ್ವಯಂ ಆಗಿ ಹಲವು ಕಡೆ ಪ್ರತಿರೋಧಗಳು ಬರುತ್ತಿದ್ದವು. ಇದೇ ಸಂದರ್ಭಕ್ಕೆ ಹೆಂಚು ಮತ್ತು ನೇಯ್ಗೆ ಕಾರ್ಮಿಕರ ಸಂಘಟನೆಗಳು ಆರಂಭವಾಗಿದ್ದವು. ಈ ಕಾರ್ಮಿಕರು ಪ್ರಧಾನವಾಗಿ ಗ್ರಾಮೀಣ ಬಡಜನರೇ ಆಗಿದ್ದರು. ಅವರು ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘವನ್ನು ಕಟ್ಟಲು ಕೊಂಡಿಗಳಾದರು ಮತ್ತು ಕಾರ್ಯಕರ್ತರಾದರು. ಮಂಗಳೂರಿನ ಜನ 1930 ರ ದಶಕದ ಆರಂಭದಿಂದಲೂ ಮಲಬಾರ್ ರೈತರು ಅಲ್ಲಿನ ಜನ್ಮಿಗಳ ಜಮೀನ್ದಾರಿಕೆ ಮತ್ತು ದಬ್ಬಾಳಿಕೆ ವಿರುದ್ಧ ಅಲ್ಲಿನ ರೈತರು ಹೋರಾಟಗಳನ್ನು ಆರಂಭಿಸಿದ್ದರು. ಆಗ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದರಿಂದ ಅಲ್ಲಿನ ರೈತರು ಜಿಲ್ಲಾಧಿಕಾರಿಗೆ ಮನವಿಗಳನ್ನು ಕೊಡಲು ಮಂಗಳೂರಿನಲ್ಲಿ ಕೆಂಬಾವುಟದ ಮೆರವಣಿಗೆಗಳನ್ನು ನಡೆಸುತ್ತಿದ್ದರು. ಗೇಣಿ ಕಾನೂನನ್ನು ತರಲು ಮದ್ರಾಸ್ ಸರ್ಕಾರವನ್ನು ಒತ್ತಾಯಿಸುತ್ತಿದ್ದರು. ಕೇರಳದ ಕಯ್ಯೂರಿನ ಹುತಾತ್ಮ ಹೋರಾಟದ ಪ್ರಭಾವ ಮಂಗಳೂರಿನಲ್ಲಿ ವ್ಯಾಪಕವಾಗಿತ್ತು. ಕಯ್ಯೂರು ಹೋರಾಟದ ಕೋರ್ಟ್ ವಿಚಾರಣೆ ಮಂಗಳೂರಿನಲ್ಲೇ ನಡೆದದ್ದರಿಂದ ಇಲ್ಲಿನ ರೈತರಿಗೆ ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟಕ್ಕಿಳಿಯಲು ಸ್ಫೂರ್ತಿಯನ್ನು ನೀಡಿತ್ತು (ಶ್ರೀಯಾನ್ 2017: 63–63).

ಭೂಸುಧಾರಣಾ ಕಾಯ್ದೆ ಜಾರಿಯಾಗಬೇಕು, ಗೇಣಿದಾರರನ್ನು ಒಕ್ಕಲೆಬ್ಬಿಸಬಾರದು, ನ್ಯಾಯಗೇಣಿ ನಿಗದಿಯಾಗಬೇಕು, ಕೊಟ್ಟ ಗೇಣಿಗೆ ರಷೀದಿ ಕೊಡಬೇಕು ಮುಂತಾದ ಬೇಡಿಕೆಗಳನ್ನು ದ.ಕ. ಕಿಸಾನ್ ಸಭಾ ರೂಪಿಸಿತು. ಗ್ರಾಮಗಳಲ್ಲಿ ಗೇಣಿದಾರರು ಮತ್ತು ಭೂಮಾಲೀಕರ ನಡುವೆ ಸಂಘರ್ಷಗಳು ತೀವ್ರಗೊಂಡವು. ರೈತರ

ಮೇಲೆ ದೌರ್ಜನ್ಯಗಳನ್ನು ನಡೆಸಲು ಭೂಮಾಲೀಕರು ಹಲವು ಕಡೆಗಳಲ್ಲಿ ಗೂಂಡಾ ಪಡೆಗಳನ್ನು ಕಟ್ಟಿದರು. ಹೀಗಿರುವಾಗ 1954 ರಲ್ಲಿ ಮುಲ್ಕಿಯಲ್ಲಿ ಗೇಣಿದಾರ ಚೆನ್ನ ಎಂಬುವರನ್ನು ಭೂಮಾಲೀಕರು ವಕ್ಕಲೆಬ್ಬಿಸಿದ ವಿಚಾರ ರೈತ ಸಂಘಕ್ಕೆ ಸವಾಲಿನ ಪ್ರಶ್ನೆಯಾಗಿತ್ತು. ಜಿಲ್ಲೆಯ ಹಲವು ಕಡೆಗಳಿಂದ ರೈತರು ಬಂದು ಮುಲ್ಕಿಯಲ್ಲೇ ಸತ್ಯಾಗ್ರಹ ನಡೆಸಿದರು. ಪೊಲೀಸರು ಎ.ಕೃಷ್ಣಶೆಟ್ಟಿ ಮತ್ತು ಇತರರನ್ನು ಬಂಧಿಸಿತು. ಸತ್ಯಾಗ್ರಹದ ಖೈದಿಗಳನ್ನು ತಲೆಬೋಳಿಸಿ ಹಿಂಸಿಸಲಾಯಿತು. ನೂರಾರು ರೈತರ ಮೇಲೆ ಟ್ರೆಸ್‌ಪಾಸ್ ಕೇಸುಗಳನ್ನು ಹಾಕಿ ಮೂರು ತಿಂಗಳ ಕಾಲ ಜೈಲಿಗೆ ಕಳುಹಿಸಲಾಯಿತು. ಗೂಂಡಾಗಳು ಕೆಡವಿ ಹಾಕಿದ್ದ ರೈತರ ಮನೆಗಳನ್ನು ರೈತಸಂಘದ ಕಾರ್ಯಕರ್ತರು ಕಟ್ಟಿಕೊಟ್ಟರು. ಭೂಮಾಲಕರ ಜೊತೆಯಲ್ಲಿ ಸರ್ಕಾರ ನಿಂತಿತು. **ಮುಲ್ಕಿ ಹೋರಾಟ** ಎಂದು ಇದು ಪ್ರಸಿದ್ದಿ ಪಡೆಯಿತು. ಈ ಹೋರಾಟ ಜಿಲ್ಲೆಯ ರೈತರ ನಡುವೆ ವ್ಯಾಪಕ ಚರ್ಚೆಯನ್ನು ಹುಟ್ಟು ಹಾಕಿತು[117].

ರೈತರಲ್ಲಿ ತಮ್ಮ ಸಮಸ್ಯೆಗಳಿಗೆ ರೈತ ಸಂಘದಿಂದ ಪರಿಹಾರ ಸಿಗುತ್ತದೆ ಎಂಬ ಭಾವನೆ ಹೆಚ್ಚಾಗಿ, ದಾಳಿ ದಬ್ಬಾಳಿಕೆಗಳ ವಿರುದ್ಧ ದೂರು ನೀಡುವುದು, ಗೇಣಿ ಸಮಸ್ಯೆಗಳಲ್ಲಿ ಮಧ್ಯಪ್ರವೇಶ ಮಾಡುವುದು, ಗ್ರಾಮಗಳಲ್ಲಿ ಸಭೆಗಳನ್ನು ನಡೆಸುವುದು, ಹೋರಾಟಗಳನ್ನು ನಡೆಸುವುದು ಹೆಚ್ಚಾದವು. ಬಿ.ಕೊರಗಪ್ಪ ರೈ, ಯು.ಜನಾರ್ಧನ್ ನಾಯಕ್, ಎಂ.ಎಸ್.ನಾರಾಯಣ, ಕೆ.ಚೆನ್ನ ಮುಲ್ಕಿ, ಸದಾನಂದ, ಅಚ್ಚಣ್ಣ, ಉಗ್ಗಪ್ಪ ಪೂಜಾರಿ, ಬಿ.ನಾರಾಯಣ, ಕೆ.ವಿ.ರಾವ್ ಎಳಚಿತ್ತಾಯ, ರಾಮ ನಾಯ್ಕ್, ಡೇವಿಡ್ ಕರ್ಕಡ, ಅಬ್ರಹಾಂ ಕರ್ಕಡ, ದಾಸ್ ಭಂಡಾರಿ, ದಾಸ ಶೇರಿಗಾರ, ಸಂಜೀವ ರೈ, ರಾಮಣ್ಣ ಪಡುಬಿದ್ರಿ, ಮುಂತಾದವರು ರೈತ ಮುಖಂಡರಾಗಿ ಜಿಲ್ಲೆಯಲ್ಲಿ ಬೆಳೆದು ಬಂದರು. 1957 ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘ ಸಭೆ ಸೇರಿ ನ್ಯಾಯಗೇಣಿ ಕೋರ್ಟುಗಳನ್ನು ರಚಿಸಬೇಕೆಂದು ತೀರ್ಮಾನಿಸಿ ಎ.ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಎಂ.ಹೆಚ್.ಕೃಷ್ಣಪ್ಪ, ಎನ್.ಎಲ್.ಉಪಾಧ್ಯಾಯ ಇವರ ನೇತೃತ್ವದಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಭೇಟಿ ಮಾಡಿ ಈ ನಿಟ್ಟಿನಲ್ಲಿ ಸುಗ್ರೀವಾಜ್ಞೆ ಹೊರಡಿಸಬೇಕೆಂದು ಒತ್ತಾಯಿಸಿತು.

ಉತ್ತರ ಕನ್ನಡಜಿಲ್ಲೆಯಲ್ಲಿಸ್ವಾತಂತ್ರ್ಯ ಪೂರ್ವದಲ್ಲಿ ಶುರುವಾಗಿದ್ದ ಗೇಣಿಹಕ್ಕಿನ ದಾಖಲಾತಿ ಚಳುವಳಿಯು 1948 ರವರೆಗೆ ಗೇಣಿಬಂಧಿ[118] ಚಳುವಳಿಯಾಗಿ ನಡೆಯಿತು. ಗೇಣಿ ವಸೂಲಿಗೆ ಗೇಣಿದಾರರ ಮನೆ ಬಾಗಿಲಿಗೆ ಬರುವ ಜಮೀನ್ದಾರರ ಏಜೆಂಟರು, ಲೇವಾದೇವಿಗಾರರು, ಒಮ್ಮೊಮ್ಮೆ ಪೊಲೀಸರಿಗೆ ಉತ್ತರ ಕೊಡಲೆಂದು ಕಿಸಾನ್ ಸಭಾ ಮುದ್ರಿಸಿ ಕೊಟ್ಟಿದ್ದ ಸಿದ್ದ ಕರಪತ್ರವನ್ನು ನೀಡುತ್ತಿದ್ದರು. ಅದರ ಒಕ್ಕಣಿಕೆ ಹೀಗಿತ್ತು:

> ಕಿಸಾನ್ ಸಭಾ, ಕಾರವಾರ
>
> ನನ್ನ ಉತ್ತರ
>
> (ಕುಡುಗೋಲು ಸುತ್ತಿಗೆ ಚಿಹ್ನೆ)
>
> ಸನ್ 1939 ನೇ ಇಸವಿಯ ಮುಂಬಯಿಯ ಟೆನೆನ್ಸಿ ಆಕ್ಟು ನಂಬರು 29 ನೆಯ ಸೆಕ್ಷನ್ 1, ಕ್ಲಾಸ್ ನಂ. (8) ನೆಯ ಪ್ರಕಾರ ನಾನು ಹೇಳುವುದೇನೆಂದರೆ, ನಾನು ಸಾಗುವಳಿ ಮಾಡುವ ಭೂಮಿಯ ಉತ್ಪತ್ತಿಯಿಂದ ಸಾಗುವಳಿದಾರನ ಕೂಲಿ ಹಿಡಿದು ಸಾಗುವಳಿ

ಖರ್ಚನ್ನು ಒಟ್ಟು ಉತ್ಪನ್ನದೊಳಗಿಂದ ವಜಾ ಮಾಡಿದ ಬಳಿಕ ಉಳಿದದ್ದರಿಂದ ಗೇಣಿ ಕೊಡಲು ತಯಾರಿದ್ದೇನೆ. ಖರ್ಚಿನ ತಪ್ಸೀಲು ಮಾಹಿತಿ ಕಿಸಾನ್ ಸಭೆಯ ಕಾರ್ಯಕರ್ತರ ಕಡೆಯಿಂದ ಪಡೆಯಬಹುದು.

ಇದೇ ನನ್ನ ಉತ್ತರ[119]

ಇಂತಹ ಚಳುವಳಿಯ ಪರಿಣಾಮವಾಗಿ 1948 ರಲ್ಲಿ ಗೇಣಿದಾರ ಹೆಸರನ್ನು ಗ್ರಾಮ ರೆಕಾರ್ಡಿನಲ್ಲಿ ಸಂ. ಕು. (ಸಂರಕ್ಷಿತ ಕುಳ) ಎಂದು ದಾಖಲಾಗಿದ್ದು ಮಾತ್ರವಲ್ಲದೆ, ಎಕರೆಗೆ 20 ರೂಗಳಿಗಿಂತ ಹೆಚ್ಚು ಗೇಣಿ ವಸೂಲಿ ಮಾಡಬಾರದೆಂದು ಕಾಯ್ದೆಗೆ ಬದಲಾವಣೆ ಬಂದಿತು. ಇವುಗಳಿಂದ ರೈತರಲ್ಲಿ ಕಿಸಾನ್ ಸಭಾ ಬಗ್ಗೆ ವಿಶ್ವಾಸ ಇಮ್ಮಡಿಯಾಯಿತು.

1948 ರಲ್ಲಿ ಕಿಸಾನ್ ಸಭಾದ ಬಹುತೇಕ ಮುಖಂಡರನ್ನು ಜಿಲ್ಲೆಯಿಂದ ಮತ್ತು ನಂತರ ಕೆಲವರನ್ನು ಮುಂಬೈ ಪ್ರಾಂತ್ಯದಿಂದಲೇ ಗಡೀಪಾರು ಮಾಡಲಾಯಿತು. ವಿಚಿತ್ರವೆಂದರೆ ಈ ಗಡೀಪಾರನ್ನು ಮಾಡಿದವರು ಬ್ರಿಟಿಷರಾಗಿರಲಿಲ್ಲ, ಬದಲಿಗೆ ಸ್ವತಂತ್ರ ಭಾರತದ ಕಾಂಗ್ರೆಸ್ ಸರ್ಕಾರವಾಗಿತ್ತು. ಮ್ಹಾಳ್ಸೇಕರ್, ಹೈದರ್ ಸಾಬ್, ಪುರ್ಸು ಜೋಗು ನಾಯ್ಕ ಅವರನ್ನು ಬೆಳಗಾವಿಗೆ, ಹೊನ್ನಪ್ಪ ರಾಮಚಂದ್ರ ನಾಯ್ಕರನ್ನು ಮಂಗಳೂರಿಗೆ ಮತ್ತು ಎನ್. ಎಲ್.ಉಪಾಧ್ಯಾಯರನ್ನು ಮುಂಬಯಿ ಪ್ರಾಂತದಿಂದಲೇ ಗಡೀಪಾರು ಮಾಡಿದರು. ಈ ಹಿನ್ನೆಲೆಯಲ್ಲಿ ಕಾರವಾರ ತಾಲೂಕಿನ ಎಐಕೆಎಸ್‌ನ ನಾಯಕರಾಗಿದ್ದ ಗಣು ಮಹಾಬಲ ನಾಯ್ಕ ಮತ್ತಿತರರನ್ನು 1948 ಜೂನ್‌ನಲ್ಲಿ ಬಂಧಿಸಿ ಕಾರವಾರ ಜೈಲಿಗೆ[120] ಹಾಕಿದರು. ಇವರಲ್ಲಿ ಬಹುತೇಕರನ್ನು ನಾಸಿಕ್ ಜೈಲಿಗೆ ವರ್ಗಾಯಿಸಿದರು. ಅಲ್ಲಿ ಆಗಾಗಲೇ ಎಸ್.ಎ.ಡಾಂಗೆ, ಅಮರ ಶೇಖ್ ಮೊದಲಾದ ಕಮ್ಯುನಿಸ್ಟ್ ನಾಯಕರುಗಳು ಬಂಧಿಗಳಾಗಿದ್ದರು. ಜೈಲಿನೊಳಗೆ ನಡೆದ ಗೋಲೀಬಾರಿನಲ್ಲಿ **ಗಣು ಮಹಾಬಲ ನಾಯ್ಕ** ಪೊಲೀಸರ ಗುಂಡೇಟಿಗೆ ಬಲಿಯಾಗುತ್ತಾರೆ (ವಿಠಲ ಭಂಡಾರಿ 2011: 11 ಮತ್ತು ಉಪಾಧ್ಯಾಯ 1996: 10). ಇವರನ್ನು ಕೊಲ್ಲಲು ಕಾರಣವೇನೆಂಬುದು ನಿಗೂಢವಾಗಿಯೇ ಉಳಿದಿದೆ. ರೈತ ಹೋರಾಟಗಳಿಂದ ಭೀತಗೊಂಡ ಜಮೀನ್ದಾರಿ ವರ್ಗಗಳು ಪಿತೂರಿ ಮಾಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವ ಹಾಗಿಲ್ಲ. ಇನ್ನೊಂದು ಅಭಿಪ್ರಾಯವೇನೆಂದರೆ ಅದೇ ಸಂದರ್ಭಕ್ಕೆ ನಾಸಿಕ್ ಜೈಲಿನಲ್ಲಿ ಬಂಧಿಯಾಗಿದ್ದ ಸಿಪಿಐನ ರಾಷ್ಟ್ರೀಯ ಮುಖಂಡರಾಗಿದ್ದ ಎಸ್.ಎ.ಡಾಂಗೆ ಅವರನ್ನು ಪೊಲೀಸರು ದಾಳಿಗೆ ಗುರಿ ಮಾಡಿದಾಗ ಅವರನ್ನು ರಕ್ಷಿಸಲು ಹೋಗಿ ಗಣು ಮಹಾಬಲ ನಾಯ್ಕ ಗುಂಡಿಗೆ ಬಲಿಯಾದರು ಎಂಬುದು. ಕಾರಣಗಳು ಏನೇ ಆದರೂ ಇದು ಕಮ್ಯುನಿಸ್ಟರ ನೇತೃತ್ವದಲ್ಲಿ ಬೆಳೆಯುತ್ತಿದ್ದ ರೈತ ಚಳುವಳಿಯನ್ನು ಹತ್ತಿಕ್ಕುವುದಕ್ಕೆ ಮಾಡಿದ **ಪ್ರಯತ್ನವೆಂದು ಅಂದಾಜಿಸಬಹುದು. ಗಣು ಮಹಾಬಲ ನಾಯ್ಕ ಸಾಹಿತಿ ನಿರಂಜನರ 'ಅಗಲಿದ ಬಾಂಧವ'ದ ಕಥಾ ನಾಯಕನೂ ಆಗಿದ್ದಾರೆ. ಸಾಮ್ರಾಜ್ಯಶಾಹಿ-ವಿರೋಧಿ ಮತ್ತು ಜಮೀನ್ದಾರಿ-ವಿರೋಧಿ** ತಿಳುವಳಿಕೆಯ ಎಐಕೆಎಸ್‌ನ ಸ್ಪಷ್ಟ ಕಣ್ಣೋಟದೊಂದಿಗೆ ಮಿಲಿಟೆಂಟ್ ಹೋರಾಟಗಳನ್ನು ಮುನ್ನಡೆಸುತ್ತಿದ್ದ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಕೊಲ್ಲುವ ನಿದರ್ಶನಗಳಿಗೆ ಇದು ಸಾಕ್ಷಿಯಾಗಿದೆ. ಕರ್ನಾಟಕದ ಎಐಕೆಎಸ್‌ನ ಚಳುವಳಿಯಲ್ಲಿ ಮೊದಲ ಹುತಾತ್ಮ ಗಣು ಮಹಾಬಲ ನಾಯ್ಕ ಎನ್ನಬಹುದು.

ಏಕೀಕರಣದ ಜೊತೆಯಲ್ಲೇ ಉತ್ತರ ಕನ್ನಡದ ರೈತರಿಗೆ ಸಮಸ್ಯೆಯೂ ಬಂತು. ಮುಂಬೈ ಪ್ರಾಂತ್ಯದಲ್ಲಿ ಇದ್ದ ಟೆನೆನ್ಸಿ ಕಾಯ್ದೆ ಮೈಸೂರಿನಲ್ಲಿ ಇದ್ದುದಕ್ಕಿಂತ ಉತ್ತಮವಾಗಿತ್ತು. ಹೀಗಾಗಿ ಕಿಸಾನ್ ಸಭಾ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಒಟ್ಟಿಗೆ ಮುಂಬೈ ಭಾಗದ ಟೆನೆನ್ಸಿ ಕಾನೂನನ್ನೇ ಅಮಲು ಮಾಡಲು ಒತ್ತಾಯಿಸಿತು. ಕಿಸಾನ್ ಸಭಾ ಮತ್ತು ಎಂಇಎಸ್‌ನ ಉದ್ದೇಶಗಳು ಮತ್ತು ದಾರಿಗಳು ಭಿನ್ನವಾಗಿದ್ದರೂ ಇಲ್ಲಿ ಒಟ್ಟಾಗಿ ಬೇಡಿಕೆಯನ್ನು ಎತ್ತಿದವು. ಉದ್ದೇಶ ಈಡೇರದಿದ್ದಾಗ, ಕಿಸಾನ್ ಸಭಾ ಈ ನ್ಯೂನತೆಯನ್ನು ತಕ್ಷಣವೇ ಸರಿಪಡಿಸಿಕೊಂಡು ಉಳುವವನೇ ಹೊಲದೊಡೆಯನಾಗಬೇಕು ಮತ್ತಿತರ ಬೇಡಿಕೆಗಳನ್ನು ಮುಂದುವರಿಸಿತು. ಇಡೀ ರಾಜ್ಯಾದ್ಯಂತ ಬಂದ ಇಂತಹ ಹೋರಾಟಗಳ ಭಾಗವಾಗಿ 1961 ಭೂಸುಧಾರಣಾ ಕಾಯ್ದೆ ಜಾರಿಗೆ ಬಂತು. ಆದರೆ ಈ ಕಾಯ್ದೆ ಬಾಂಬೆ ಕರ್ನಾಟಕದ ರೈತರು ಮತ್ತು ಗೇಣಿದಾರರ ಪಾಲಿಗೆ ಪೀಡನೆಯ ಶಾಸನವಾಯಿತು. ಮೊದಲಿಗಿಂತ ಹೆಚ್ಚಿನ ಗೇಣಿ ದರಗಳನ್ನು ಇದು ನಿಗದಿ ಮಾಡಿತು. ಬಾಂಬೆ ಕರ್ನಾಟಕದ ನಾಲ್ಕು ಜಿಲ್ಲೆಗಳ ಶಾಸಕರು 1956 ರ ನವೆಂಬರ್ 17 ರಂದು ಸೇರಿದ್ದ ಸಭೆಯಲ್ಲಿ ಕೆಲವರು ಬಾಂಬೆ ಟೆನೆನ್ಸಿ ಕಾಯ್ದೆ ಮುಂದುವರಿಯಬೇಕೆಂದು, ಕೆಲವರು ಬೇಡವೆಂದು ವಾದಿಸಿದರು. ಎನ್.ಕೆ.ಉಪಾಧ್ಯಾಯರು ಬಾಂಬೆ ಟೆನೆನ್ಸಿ ಕಾಯ್ದೆಯನ್ನು ರಾಜ್ಯಕ್ಕೆಲ್ಲಾ ಅನ್ವಯಿಸಬೇಕೆಂದು ವಾದಿಸಿದರು (ಉಪಾಧ್ಯಾಯ 1996).

ಹೆಚ್ಚಿನ ಗೇಣಿಗಳ ವಿರುದ್ಧ ಹೋರಾಟಗಳನ್ನು ನಡೆಸಿದ ಉತ್ತರ ಕನ್ನಡದ ಕಿಸಾನ್ ಸಭಾ, ನಂತರ ಸುಮಾರು ಒಂದು ದಶಕದ ಕಾಲ ತನ್ನ ಕ್ರಿಯಾಶೀಲತೆಯನ್ನು ಕಳೆದುಕೊಂಡಿತ್ತು. ಕಮ್ಯುನಿಸ್ಟ್ ಪಕ್ಷದ ವಿಭಜನೆಯ ಪರಿಣಾಮ ಮತ್ತು ಪೊಲೀಸ್ ದಬ್ಬಾಳಿಕೆಗಳಿಂದ ಸಣ್ಣ ಪ್ರಮಾಣದ ಚಟುವಟಿಕೆಗಳಿಗೆ ಸೀಮಿತವಾಯ್ತು ಎಂದು ಕಾಣುತ್ತದೆ. ಆದರೆ ದೇವರಾಜ ಅರಸು ಸರ್ಕಾರದ ಭೂಸುಧಾರಣಾ ಕಾಯ್ದೆ ಬಂದ ನಂತರ ಜಿಲ್ಲೆಯಲ್ಲಿ ಕಿಸಾನ್ ಸಭಾ ಚಟುವಟಿಕೆಗಳು ಪ್ರಾರಂಭಗೊಂಡಿವೆ. ಸರ್ಕಾರದಿಂದ ನೇಮಿಸಲ್ಪಟ್ಟ ಭೂಪಂಚಾಯ್ತಿಗಳಿಂದ (ಲ್ಯಾಂಡ್ ಟ್ರಿಬ್ಯುನಲ್) ರೈತರಿಗೆ ಆಗುತ್ತಿದ್ದ ಮೋಸ ಮತ್ತು ಅನ್ಯಾಯಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಕಾರವಾರ ತಾಲೂಕು ಕಿಸಾನ್ ಸಭಾ 20–7–1978 'ಜಾಹೀರು ವಿನಂತಿ'ಯನ್ನು ಹೊರಡಿಸಿತ್ತು. ಈ ಬಗ್ಗೆ ಚಳುವಳಿಯನ್ನು ಜಿಲ್ಲೆಯಾದ್ಯಂತ ವಿಸ್ತರಿಸಲು 'ಭೂ ನ್ಯಾಯಮಂಡಳಿ (ಟ್ರಿಬ್ಯುನಲ್) ಮತ್ತು ನಮ್ಮ ಅಭಿಪ್ರಾಯಗಳು' ಎನ್ನುವ ಕಿರುಹೊತ್ತಿಗೆಯನ್ನು ಪ್ರಕಟಿಸಿ ಪ್ರಚಾರ ಮಾಡಿತು[121].

ಮೈಸೂರು ಭೂ ಪರಿವರ್ತನೆ ಮಸೂದೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು ವಿಭಜಿಸಿರುವ ರೀತಿಗೆ ಸಂಬಂಧಿಸಿ ಮತ್ತು ಪ್ರತಿ ಎಕರೆಗೆ ಗೊತ್ತುಪಡಿಸಲಾದ ಉತ್ಪಾದನೆ ಮತ್ತು ಗುರಿಗೂ ಉತ್ಪಾದನೆಗೂ ಇರುವ ವ್ಯತ್ಯಾಸಗಳ ಬಗ್ಗೆ ಎಂ.ಎಸ್.ಕೃಷ್ಣನ್ ಅವರು ವಿಧಾನಸಭೆಯಲ್ಲಿ ಪ್ರಶ್ನಿಸಿದರು. ಪರಿಣಾಮವಾಗಿ ಸರಾಸರಿ ನಿವ್ವಳ ಉತ್ಪಾದನೆ (ಎಜಿಪಿ) ಹೆಚ್ಚಾಗಿರುವ ವಿಷಯದಲ್ಲಿ ಪುನರ್ ಪರಿಶೀಲಿಸುವ ಅಧಿಕಾರವನ್ನು ತಹಶೀಲ್ದಾರರಿಂದ ಜಿಲ್ಲಾಧಿಕಾರಿಗೆ ಕೊಡುವ ತೀರ್ಮಾನವನ್ನು ಸರ್ಕಾರ ಮಾಡಿತು (ಬಾಲಸೂರಿ 2005: 32).

ಇತರೆ ಹೋರಾಟಗಳು: 1954 ರಲ್ಲಿ ಬೆಳಗಾವಿಯ ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಒಂದು ಬುಡಕಟ್ಟು ಜನರ ಹೋರಾಟದ ಬಗ್ಗೆ ಕೃಷ್ಣ ಮೆಣಸೆಯವರು ತಮ್ಮ ನೆನಪುಗಳನ್ನು ಹೀಗೆ ವಿವರಿಸಿದ್ದಾರೆ:-

> ಬೆಳಗಾವಿ ಸಮೀಪ 60 ಮೈಲಿ ಉದ್ದದ ಬೆಟ್ಟ ಗುಡ್ಡದ ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಜನರು ವಾಸ ಮಾಡುತ್ತಿದ್ದು, ಅವರಲ್ಲಿ ಬಹಳಷ್ಟು ಮಂದಿ ಅಪರಾಧಿ ಮನೋಭಾವದವರು ಇದ್ದರು. ಆಗ ವಾರ್ಲಿ ಆದಿವಾಸಿ ಜನರ ಹೋರಾಟದ ಕೇಂದ್ರವಾಗಿದ್ದ ಥಾಣೆ ಜಿಲ್ಲೆಯಲ್ಲಿ ನಡೆದ ಎಐಕೆಎಸ್ ಸಮ್ಮೇಳನದಲ್ಲಿ ಕೃಷ್ಣ ಮೆಣಸಿಯವರು ಭಾಗವಹಿಸಿ ಬಂದಿದ್ದರು. ಬೆಳಗಾವಿಯಲ್ಲಿ ಆದಿವಾಸಿ ಬುಡಕಟ್ಟು ಜನರನ್ನು ಸಂಘಟಿಸಲು ತೀರ್ಮಾನಿಸಿದರು. ಅವರಿದ್ದ ಪ್ರದೇಶಗಳಲ್ಲೆಲ್ಲಾ ಸಂಚರಿಸಿದರು. ಅವರ ಬುಡಕಟ್ಟು ಭಾಷೆ ಇವರಿಗೆ ಬರುತ್ತಿರಲಿಲ್ಲ. ಇದಕ್ಕಾಗಿ ಆ ಭಾಷೆ ಕಲಿತಿದ್ದ ಯುವಕನನ್ನು ಕರೆದುಕೊಂಡಿದ್ದರು. ಅವರ ಜೀವನ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿದರು. ಅಲ್ಲಿ ಮೂರು ರೀತಿಯ ಜನರಿದ್ದರು. ಕೆಲವರು ಪ್ರಾಮಾಣಿವಾಗಿ ವ್ಯವಸಾಯ ಮಾಡಿ ಭತ್ತ, ತರಕಾರಿ ಬೆಳೆದು ಜೀವನ ನಡೆಸುತ್ತಿದ್ದರು. ಮತ್ತೊಂದು ಗುಂಪು ದರೋಡೆ ಮಾಡುವುದು, ರಸ್ತೆಗಳಲ್ಲಿ ಹೋಗುವ ಟ್ರಕ್ಕುಗಳನ್ನು ಅಡ್ಡಗಟ್ಟಿ ದರೋಡೆ ಮಾಡುವುದು, ಮೇಕೆ ಮತ್ತು ಕುರಿಗಳನ್ನು ಕದಿಯುವುದು ಇತ್ಯಾದಿ, ಮೂರನೇ ಗುಂಪು ಈ ಡಕಾಯಿತರ ಜೊತೆ ಹೋಗಿ ದಿನಗೂಲಿ ಪಡೆಯುವವರು.
>
> ಒಮ್ಮೆ ಬೆಳಗಾವಿ ಸಮೀಪದ ಉಲೇನೂರ್‌ನಲ್ಲಿ ಬುಡಕಟ್ಟು ಜನರ ಸಮ್ಮೇಳನ ನಡೆಸುವ ಮೂಲಕ ಅವರಿಗೆ ತಿಳುವಳಿಕೆ ಮೂಡಿಸಲು ಯತ್ನಿಸಿದರು. ಬುಡಕಟ್ಟು ಜನರು ವ್ಯವಸಾಯ ಮಾಡುತ್ತಿರುವ ಅರಣ್ಯ ಭೂಮಿಯ ಹಕ್ಕನ್ನು ಅವರಿಗೆ ಕೊಡಬೇಕು, ಅವರಿಗೆ ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂಬುದು ಬೇಡಿಕೆಗಳಾಗಿದ್ದವು. ಇಲ್ಲಿನ ಕೆಲವರು ಇದ್ದಿಲು ಮಾಡಿ ಪಟ್ಟಣದಲ್ಲಿ ಮಾರಾಟ ಮಾಡುತ್ತಿದ್ದರು. ಇದಕ್ಕೆ ಅವಕಾಶ ಮಾಡಿಕೊಡಬೇಕೆಂಬುದೂ ಒಂದು ಬೇಡಿಕೆಯಾಗಿತ್ತು. ಬೆಟ್ಟದ ತುದಿಯಲ್ಲಿ ಸಾಂಗ್ಲಿ ರಾಜ್ಯಕ್ಕೆ ಸೇರಿದ ಗ್ರಾಮವೊಂದಿತ್ತು. ಒಮ್ಮೆ ಅಲ್ಲಿ ಸಭೆ ಕರೆದಾಗ 2 ವ್ಯಾನು ಮತ್ತು ಜೀಪುಗಳಲ್ಲಿ ಪೊಲೀಸರು ಬರುತ್ತಿರುವುದನ್ನು ಕಂಡು ಆದಿವಾಸಿಗಳು ಓಡಿಹೋಗಿ ತಪ್ಪಿಸಿಕೊಂಡರು. ಕೊನೆಗೆ ಉಳಿದ ಹನ್ನೊಂದು ಜನ ಕಮ್ಯುನಿಸ್ಟ್ ಸಂಘಟಕರನ್ನು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿದರು. ಆಗ ಕೃಷ್ಣ ಮೆಣಸಿಯವರು ಕೆಂಬಾವುಟ ಹಿಡಿದು 'ಲಾಲ್ ಬಾವುಟ ಜಿಂದಾಬಾದ್' ಎಂದು ಘೋಷಣೆ ಕೂಗಿದರು. ಇವರನ್ನು ಡಕಾಯಿತರೆಂದು ತೀರ್ಮಾನಿಸಿದ ನ್ಯಾಯಾಧೀಶರು ಇವರೆಲ್ಲರಿಗೂ 6 ತಿಂಗಳು ಜೈಲು ಶಿಕ್ಷೆ ಮತ್ತು 500 ರೂ ದಂಡವಿಧಿಸಿದರು. ನ್ಯಾಯಾಧೀಶರ ದೃಷ್ಟಿಯಲ್ಲಿ ಕೃಷ್ಣ ಮೆಣಸಿ ಡಕಾಯಿತರ ಮುಖಂಡನಾಗಿದ್ದರು122.

ಶಿವಮೊಗ್ಗ ಜಿಲ್ಲೆಯ ಕಾಗೋಡು ಗೇಣಿ ರೈತರ ಹೋರಾಟ ಸಮಾಜವಾದಿಗಳ ನೇತೃತ್ವದಲ್ಲಿ ನಡೆದಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತಿತರ ಜಿಲ್ಲೆಗಳಲ್ಲಿ ಕಿಸಾನ್ ಸಭಾ ಹೋರಾಟಗಳು ರೈತರ ನಡುವೆ ವ್ಯಾಪಕವಾಗಿರುವಾಗಲೇ, ಶಿವಮೊಗ್ಗ ಜಿಲ್ಲೆಯ ಕಾಗೋಡಿನಲ್ಲಿ ಗೇಣಿ ಒಕ್ಕಲುಗಳ ಹೋರಾಟವು ಸಮಾಜವಾದಿಗಳ ನೇತೃತ್ವದಲ್ಲಿ ನಡೆಯಿತು. ಕಾಗೋಡು ಚಳುವಳಿಯು ತನ್ನ ಕಾವನ್ನು ಕಳೆದುಕೊಳ್ಳುವಷ್ಟರಲ್ಲಿ, ಇದೂ ಸೇರಿದಂತೆ ರಾಜ್ಯದ ಇತರೆಡೆಗಳಲ್ಲಿ ನಡೆಯುತ್ತಿದ್ದ ಒಟ್ಟಾರೆ ರೈತ ಹೋರಾಟಗಳ ಫಲವಾಗಿ ಮೈಸೂರು ಶಾಸನಸಭೆಯಲ್ಲಿ 1952 ರ 'ಮೈಸೂರು ಟೆನೆನ್ಸಿ

ಕಾಯ್ದೆ' ಗೇಣಿದಾರರ ರಕ್ಷಣೆಯ ಹೆಸರಿನಲ್ಲಿ ಜಾರಿಯಾಯಿತು. ಆದರೆ ವಾಸ್ತವದಲ್ಲಿ ಈ ಕಾಯ್ದೆ ಯಾರನ್ನು ರಕ್ಷಣೆ ಮಾಡಿತು ಎಂಬ ಬಗ್ಗೆ ಕಾಗೋಡು ಸತ್ಯಾಗ್ರಹವನ್ನು ಬರೆದಿರುವ ಜಿ.ರಾಜಶೇಖರ್ ಅವರು ಹೀಗೇಳುತ್ತಾರೆ:

> ಮೈಸೂರು ಗೇಣಿ ಒಕ್ಕಲುಗಳ ಹೊಟ್ಟೆಗೇ ಹೊಡೆದ ಕಾಯಿದೆ ಅದು. ಈ ಕಾಯಿದೆ ಗೇಣಿಯ ಫಸಲಿನ ಒಂದನೇ ಮೂರಕ್ಕಿಂತ ಜಾಸ್ತಿ ಇರಕೂಡದು ಎಂದು ಮಾಡಿತು; 12 ವರ್ಷಕ್ಕಿಂತ ಜಾಸ್ತಿ ಅವಧಿಯಲ್ಲಿ ಗೇಣಿ ಮಾಡಿಕೊಂಡಿದ್ದ ಒಕ್ಕಲುಗಳಿಗೆ ಖಾಯಂ ಹಕ್ಕುಗಳನ್ನು ಕೊಟ್ಟಿತು. ಆದರೆ ಕಾಯಿದೆ ಪ್ರಕಾರ ಭೂಮಾಲಕ ತನ್ನ ಸ್ವಂತ ಸಾಗುವಳಿಗೆಂದು ಒಕ್ಕಲುಗಳಿಂದ ಭೂಮಿ ಬಿಡಿಸಿಕೊಳ್ಳಬಹುದಾಗಿತ್ತು. ಜೊತೆಗೆ ಗೇಣಿ ಬಾಕಿ ಇದ್ದರೆ, ಗೇಣಿ ಜಮೀನಿನಲ್ಲಿ ಒಕ್ಕಲು ಕೃಷಿ ಮಾಡದೇ ಇದ್ದರೆ, ಜಮೀನು ಹಾಳುಗೆಡವಿದ್ದರೆ, ಭೂಮಾಲಕ ಒಕ್ಕಲೆಬ್ಬಿಸಬಹುದಾಗಿತ್ತು. ಇವು ವಾಸ್ತವದಲ್ಲಿ ಭೂಮಾಲಕರಿಗೆ ಒಕ್ಕಲೆಬ್ಬಿಸಲು ಸರಕಾರವೇ ತೋರಿಸಿಕೊಟ್ಟ ಉಪಾಯಗಳಾಗಿದ್ದವು. ಅದುವರೆಗೆ ಕಾನೂನಿನ ಚೌಕಟ್ಟಿನ ಹೊರಗೆ ನಡೆಯುತ್ತಿದ್ದ ಒಕ್ಕಲೆಬ್ಬಿಸುವಿಕೆಗೆ ಈಗ ಕಾಯಿದೆಯ ಅಧಿಕೃತ ಮುದ್ರೆಯೂ ಬಿದ್ದಿತು. ನಮ್ಮ ರಾಜ್ಯದ ಭೂಮಾಲಕರು ಇದರ ಪ್ರಯೋಜನ ಮಾಡಿಕೊಳ್ಳದೇ ಬಿಡಲಿಲ್ಲ (ರಾಜಶೇಖರ್ 1980:122).

ಹೀಗಾಗಿ ಗೇಣಿದಾರರ ಸಮಸ್ಯೆಗಳು ಪರಿಹಾರವಾಗದೇ ಹೆಚ್ಚುತ್ತಾ ಹೋದಂತೆ ತೀರ್ಥಹಳ್ಳಿ ತಾಲೂಕಿನಲ್ಲಿ ಕಮ್ಯುನಿಸ್ಟರ ನೇತೃತ್ವದ ಗೇಣಿದಾರರ ಚಳುವಳಿ ಆರಂಭವಾಯಿತು. 1956–57 ರ ಸುಮಾರಿಗೆ ವಕೀಲರುಗಳಾದ ಅಪ್ಪಣ್ಣ ಹೆಗಡೆ ನಂತರ ಕೆ.ಎಂ.ಶ್ರೀನಿವಾಸ ಕಮ್ಯುನಿಸ್ಟ್ ಪಕ್ಷಕ್ಕೆ ಬಂದ ನಂತರ ತೀರ್ಥಹಳ್ಳಿಯನ್ನು ಕೇಂದ್ರೀಕರಿಸಿ ಗೇಣಿ ರೈತರ ಹೋರಾಟಗಳನ್ನು ಆರಂಭಿಸಿದರು. ಅಷ್ಟೊತ್ತಿಗೆ ಶಾಂತವೇರಿ ಗೋಪಾಲಗೌಡರು 1957 ರ ಚುನಾವಣೆಯಲ್ಲಿ ಸೋತು ಸೋಷಿಯಲಿಸ್ಟ್ ಪಕ್ಷ ಬ್ರಾಹ್ಮಣರ ಕೈವಶವಾದ ನಂತರ ರೈತ ಹೋರಾಟದ ತೀವ್ರತೆ ಕಡಿಮೆಯಾಗಿತ್ತು[123]. ಅಪ್ಪಣ್ಣ ಹೆಗಡೆ ಮತ್ತು ಕೆ.ಎಂ.ಶ್ರೀನಿವಾಸ್ ಇವರುಗಳು ಗೇಣಿ ರೈತರನ್ನು ಒಕ್ಕಲೆಬ್ಬಿಸಬಾರದು ಮತ್ತು ಕಾನೂನು ಪ್ರಕಾರ ಗೇಣಿ ಪಡೆಯಬೇಕೆಂದು ಹೋರಾಟ ನಡೆಸುವುದರ ಜೊತೆಗೆ, ಗೇಣಿ ಕೋರ್ಟ್‌ಗಳಲ್ಲಿ ಇವರು ಗೇಣಿದಾರರ ಪರವಾಗಿ ಕೇಸುಗಳನ್ನು ನಡೆಸುತ್ತಿದ್ದರು. 1957 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರ ಬಂದು ಗೇಣಿದಾರರಿಗೆ ಸಂಪೂರ್ಣ ರಕ್ಷಣೆಯನ್ನು ನೀಡಿತ್ತು. ಅದರ ಪ್ರಭಾವವನ್ನು ಬಳಸಬೇಕೆಂದು ಪ್ರಾಂತ ರೈತ ಸಂಘವನ್ನು ಪ್ರಾರಂಭಿಸಿದರು. ಗೇಣಿ ಹೋರಾಟಗಳನ್ನು ನಡೆಸುವ ಮುಂಚೆ ಜನರಲ್ಲಿ ಪ್ರಭಾವ ಮತ್ತು ಪರಿಣಾಮಗಳನ್ನು ಬೀರಲು 'ಅಂಟಿಗೆ ಪೆಂಟಿಗೆ'[124] ವಿಧಾನಗಳನ್ನು ಬಳಸಿದರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಗೇಣಿ ಪ್ರಶ್ನೆಯ ಮೇಲೆ ಪ್ರಾಂತ ರೈತ ಸಂಘದ ಚಳುವಳಿ ಪ್ರಬಲವಾಗಿತ್ತು. ಅಲ್ಲಿ ಬಹಳಷ್ಟು ಭೂಮಾಲೀಕರಿದ್ದರು. ಅಲ್ಲಿ ಶಿವನಳ್ಳಿ ಕಾಶಿ ಕುಟುಂಬ ಬಹಳ ಪ್ರಬಲವಾಗಿತ್ತು. **ಹೊಸನಗರ, ತೀರ್ಥಹಳ್ಳಿ, ಕೊಪ್ಪ ಈ ತಾಲ್ಲೂಕುಗಳಲ್ಲಿ ಬಹಳಷ್ಟು ಜಮೀನನ್ನು ಅವರು ಹೊಂದಿದ್ದರು. ತೀರ್ಥಹಳ್ಳಿ** ತಾಲ್ಲೂಕಿನಲ್ಲೇ ನೂರಾರು ಎಕರೆ ಇತ್ತು. ಧರ್ಮಸ್ಥಳ ದೇವಸ್ಥಾನದ ಟ್ರಸ್ಟ್ ಹೆಸರಿನಲ್ಲೂ ಬಹಳಷ್ಟು ಜಮೀನಿತ್ತು. ಅವರನ್ನೆಲ್ಲಾ ಎದುರಿಸಿ ನಿಂತು ರೈತ ಸಂಘಟನೆ ಕಟ್ಟುವಾಗ ಹಲವು ಜಮೀನ್ದಾರರ ವಿರುದ್ಧ ಹೋರಾಟಗಳು ನಡೆದವು. ಧರ್ಮಸ್ಥಳದ ಹೆಗಡೆಯವರು, ಸರಿಯಾಗಿ ಗೇಣಿ ಕೊಡುತ್ತಿಲ್ಲವೆಂದೂ, ಬಾಕಿ ಗೇಣಿ ಕೊಡಬೇಕೆಂದೂ ದೇವರ ಹೆಸರಿನಲ್ಲಿ ಗೇಣಿದಾರರಿಗೆ ನೋಟೀಸ್ ಕೊಡುತ್ತಿದ್ದರು. 'ನೀವು ರೈತರಿಗೆ ಯಾವ ಆಧಾರದ ಮೇಲೆ

ನೋಟೀಸ್ ಕೊಡುತ್ತೀರಿ. ನೀವೇನು ನ್ಯಾಯಾಲಯವೇ, ನ್ಯಾಯಾಧೀಶರೇ ಅಥವಾ ಸರ್ಕಾರವೇ?' ಎಂದು ಪ್ರಶ್ನೆ ಮಾಡಿ ರೈತಸಂಘದಿಂದ ನೋಟಿಸ್ ಕೊಟ್ಟ ನಂತರ ತೆಪ್ಪಗಾದರಂತೆ[125].

ಆಗುಂಬೆ ಹೋಬಳಿಯಲ್ಲಿ 'ಮಾಲತಿ ಯೋಜನೆ' ನಿರಾಶ್ರಿತರಿಗೆ ಪರಿಹಾರ ಮತ್ತು ಪುನರ್ವಸತಿಗಾಗಿ ರೈತ ಸಂಘ ಮತ್ತು ಕಮ್ಯುನಿಸ್ಟ್ ಪಕ್ಷ 1970–71 ರಲ್ಲಿ ಯಶಸ್ವಿ ಹೋರಾಟವನ್ನು ನಡೆಸಿತು. ತಾವು ನಡೆಸುತ್ತಿರುವ ಚಳುವಳಿಗಳನ್ನು ರಾಜಕೀಯವಾಗಿ ಪರೀಕ್ಷೆಗೊಡ್ಡಲು ತೀರ್ಮಾನಿಸಿ 1972 ರ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ)ನಿಂದ ಅಪ್ಪಣ್ಣ ಹೆಗಡೆ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇವರ ಪರವಾಗಿ ಎ.ಕೆ.ಗೋಪಾಲನ್, ಇಎಂಎಸ್ ನಂಬೂದಿರಿಪಾದ್ ಮುಂತಾದವರು ಭಾಷಣಗಳನ್ನು ಮಾಡಿದ್ದರು. ಇನ್ನೇನು ಕಮ್ಯುನಿಸ್ಟರು ಇಲ್ಲಿ ಗದ್ದೇ ಬಿಡುತ್ತಾರೆ ಎಂಬ ವಾತಾವರಣವಿತ್ತು. ಅದರೆ ಅಂದಿಗೆ ಸ್ವಲ್ಪ ಹಿಂದೆ ನಗರ ಹೋಬಳಿಯಲ್ಲಿ ಗೇಣಿದಾರನಿಗೆ ಅನ್ಯಾಯ ಮಾಡಿದನೆಂಬ ಕಾರಣಕ್ಕೆ ಭೂಮಾಲಕನನ್ನು ಕಮ್ಯುನಿಸ್ಟರು ಥಳಿಸಿದ್ದರು ಎಂಬ ವಿಚಾರ ಒಂದು ನಿರ್ದಿಷ್ಟ ಜಾತಿಯ ಮತದಾರರು ಸಂಪೂರ್ಣವಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ವಿರುದ್ಧವಾದುದರಿಂದ ಚುನಾವಣೆಯಲ್ಲಿ ಅಪ್ಪಣ್ಣ ಹೆಗಡೆ ಸೋಲನ್ನಪ್ಪಿದರು.

ಭೂ ಹೋರಾಟಗಳು: ವಿಭಜನೆಯ ನಂತರ 1970 ರ ದಶಕದ ಆರಂಭದಲ್ಲಿ ಎಐಕೆಎಸ್ (ಎಕೆಜಿ ಭವನ್) ಅಖಿಲ ಭಾರತ ಮಟ್ಟದಲ್ಲಿ ಭೂ ಹೋರಾಟಗಳನ್ನು ತೀವ್ರಗೊಳಿಸಲು ತೀರ್ಮಾನಿಸಿತು. ಇದರ ಭಾಗವಾಗಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಭೂಮಿ ಸಂಬಂಧಿ ಹೋರಾಟಗಳು ಪ್ರಾರಂಭವಾದವು. ಎಐಕೆಎಸ್‌ನ ಮುಖಂಡರಾಗಿದ್ದ ಎ.ಕೆ.ಗೋಪಾಲನ್ ಅವರು ರಾಜ್ಯದ ಹಲವಾರು ಜಿಲ್ಲೆಗಳಿಗೆ ಪ್ರವಾಸ ಮಾಡಿ ನೇರವಾಗಿ ಭೂ ಚಳುವಳಿಗಳಲ್ಲಿ ಭಾಗವಹಿಸಿದ್ದರಿಂದ ರಾಜ್ಯದ ಕಿಸಾನ್ ಸಭಾ ಮುಖಂಡರನ್ನು ಅದು ಹುರಿದುಂಬಿಸಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹೋರಾಟಗಳು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ವಿಸ್ತಾರವಾಯಿತು. ಮುಂಬೈ ಟೆನೆನ್ಸಿ ಕಾಯ್ದೆ ಜಾರಿ ಹಾಗೂ ಜಮೀನ್ದಾರಿ ಪದ್ಧತಿ ನಿರ್ಮೂಲನೆಯ ಬೇಡಿಕೆಗಳು ಕ್ರಮೇಣ ಸರ್ಕಾರಿ ಬಂಜರು ಭೂಮಿಯನ್ನು ಭೂಹೀನ ಬಡವರಿಗೆ ವಿತರಣೆ ಮಾಡಬೇಕೆಂಬ ಬೇಡಿಕೆಗಳಾಗಿಯೂ ಬೆಳೆಯಿತು. ಕಾರವಾರ ಭಾಗದಲ್ಲಿ ತೀವ್ರವಾಗಿದ್ದ ಚಳುವಳಿಯು ಅಂಕೋಲದಲ್ಲಿ ಎಸ್.ವಿ.ಪಿಕಳೆ, ಹೊನ್ನಾವರದಲ್ಲಿ ಮಂಜುನಾಥ ಪುಲ್ಕರ್, ಹಳಿಯಾಳದಲ್ಲಿ ಡಿ.ವಿ.ಸಿಂಗ್, ಶಿರಸಿಯಲ್ಲಿ ಎಂ.ಎಸ್.ಧಾರೇಶ್ವರ ಮತ್ತು ಪರಶುರಾಮ ಮಶಾಲ್ಡಿ ಮುಂತಾದವರ ನೇತೃತ್ವದಲ್ಲಿ ಈ ಹೋರಾಟಗಳು ತೀವ್ರಗೊಂಡವು. ಈ ಹಿನ್ನೆಲೆಯಲ್ಲಿ 1979 ರ ಹಳಿಯಾಳ ಭೂ ಸ್ವಾಧೀನ **ಹೋರಾಟ ಮಹತ್ತರವಾದುದು. ಹಳಿಯಾಳ ತಾಲೂಕಿನ ಬಡ ಮತ್ತು ಕೃಷಿ ಕೂಲಿಕಾರ ರೈತರು ಕೃಷಿಯೋಗ್ಯ** ಅರಣ್ಯ ಭೂಮಿಯನ್ನು ತಮಗೆ ವಿತರಣೆ ಮಾಡಬೇಕೆಂದು ಹಲವು ವರ್ಷಗಳಿಂದ ಮನವಿಗಳನ್ನು ಸಲ್ಲಿಸುತ್ತಿದ್ದರು. ಹೋರಾಟವನ್ನು ತೀವ್ರಗೊಳಿಸುವ ಉದ್ದೇಶದಿಂದ 1979 ರ ಮೇ 28 ರಂದು ಹಳಿಯಾಳದಲ್ಲಿ ರೈತರ ಬೃಹತ್ ಪ್ರದರ್ಶನದಲ್ಲಿ ಸುಮಾರು 17 ಹಳ್ಳಿಗಳಿಂದ[126] 2000 ಸಾವಿರಕ್ಕೂ ಹೆಚ್ಚು ರೈತರು ಆಗಮಿಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. 1979 ಜೂನ್ 5 ರಿಂದ ಈ ಗ್ರಾಮಗಳ ವ್ಯಾಪ್ತಿಯಲ್ಲಿ ಮೊದಲಿಗೆ 400 ಎಕರೆ

ಭೂಮಿಯನ್ನು ಹಿಡಿಯುವ ತೀರ್ಮಾನವನ್ನೂ ಮಾಡಿದರು. ಆ ಪ್ರಕಾರವಾಗಿ ಅಂದು ಅರಣ್ಯ ಕಡಿದು ಗಿಡಗಳನ್ನು ನೆಡುವ ಮತ್ತು ಉತ್ತುವ ಕೆಲಸಕ್ಕೆ ಮುಂದಾದ ರೈತರ ಮೇಲೆ ಪೋಲೀಸ್ ದೌರ್ಜನ್ಯಗಳು ನಡೆದು ಜಿಲ್ಲಾ ಕಾರ್ಮಿಕ ಮುಖಂಡರಾಗಿದ್ದ ಅರ್.ಜಿ.ಸ್ಥಳೇಕರ್ ಅವರನ್ನು ಒಳಗೊಂಡು 73 ರೈತರನ್ನು ಬಂಧಿಸಿ ಕಾರವಾರ ಜೈಲಿಗೆ ಹಾಕಿದರು. ಮರುದಿನ ಹೋರಾಟ ಮುಂದುವರಿಯಿತು. ಬಂಧಿತರನ್ನು ಬಿಡುಗಡೆ ಮಾಡಲಿಲ್ಲ. ಜೂನ್ 7 ರಂದು ಹಳಿಯಾಳ ಬಂದ್ ನಡೆದು, ಪ್ರದರ್ಶನಕಾರರ ಮೇಲೆ ಪೊಲೀಸರು ಗುಂಡು ಹಾರಿಸಿದ್ದರಿಂದ, ಜಿ.ವಿ.ಪವಾರ್[127] ಸ್ಥಳದಲ್ಲೇ ಸಾವನ್ನಪ್ಪಿದರು. ಉತ್ತರ ಕನ್ನಡ ಜಿಲ್ಲೆಯ ಕಿಸಾನ್ ಸಭಾ ಹೋರಾಟದಲ್ಲಿ ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಎರಡನೆಯವರು ಪವಾರ್. ನಂತರ ಹಳಿಯಾಳದ ಹಳ್ಳಿಗಳಲ್ಲಿ ರೈತರ ಮೇಲೆ ಪೊಲೀಸ್ ದೌರ್ಜನ್ಯ ತೀವ್ರಗೊಂಡಿತು.

1943 ರಲ್ಲಿ ಧಾರವಾಡದಿಂದ ಗಡೀಪಾರಾಗಿದ್ದ ಎನ್.ಕೆ.ಉಪಾಧ್ಯಾಯರು ಬಿಜಾಪುರ ಜಿಲ್ಲೆಯಲ್ಲಿ ರೈತ ಸಂಘಟನೆಯನ್ನು ಆರಂಭಿಸಿದ್ದರು ಎಂಬುದನ್ನು ಕಳೆದ ಅಧ್ಯಾಯದಲ್ಲಿ ಚರ್ಚಿಸಿದ್ದೇವೆ. ಭೂಮಾಲೀಕರ ವಿರುದ್ಧ ನಡೆದ ಹೋರಾಟಗಳಲ್ಲಿ ರಾಜೇಸಾಬ್ ಎಂಬ 60 ವರ್ಷದ ರೈತ ಮುಖಂಡರು ಕೊಲೆಯಾದರು. ಈ ಚಳುವಳಿ ಬೆಳಗಾವಿ, ಖಾನಾಪುರ, ರಾಯಭಾಗ, ಗೋಕಾಕಗಳಿಗೂ ಹಬ್ಬಿತ್ತು. ಕಿಸಾನ್ ಸಭಾ ಮುಖಂಡ ಮಾರುತಿ ಪವಾರ್ ಜಮೀನ್ದಾರಿಗಳ ಗೂಂಡಾಗಳಿಂದ ಕೊಲ್ಲಲ್ಪಟ್ಟರು (ರಾಮಭದ್ರಯ್ಯ 1990: 19). 1950 ರ ಆರಂಭದಲ್ಲಿ ಬಿಜಾಪುರ ತಾಲೂಕಿನ ಪಡಗಾನೂರು, ಅಂಕರಗಿ ಮತ್ತು ಇಂಡಿ ತಾಲೂಕಿನ 10–15 ಹಳ್ಳಿಗಳಲ್ಲಿ ಜಾಗೀರ್‌ದಾರ್ ಭೂಮಿಗಳ ಸ್ವಾಧೀನಕ್ಕಾಗಿ ರೈತರು ಹೋರಾಟ ನಡೆಸಿದರು. ಅದೇ ರೀತಿ ಶೃಂಗೇರಿ ಮಠಕ್ಕೆ ಸೇರಿದ ಬಾಗೇವಾಡಿ ತಾಲೂಕಿನ ಎಂಭತ್ತನಹಾಳ ಗ್ರಾಮದ ನೂರಾರು ಎಕರೆ ಜಮೀನಿನ ಸ್ವಾಧೀನಕ್ಕಾಗಿ ರೈತರು ಹೋರಾಟ ನಡೆಸಿ ಯಶಸ್ವಿಯಾದರು[128].

ಶಿವಮೊಗ್ಗ ಜಿಲ್ಲೆ ವರಾಹಿ ಸಂತ್ರಸ್ತರ ಹೋರಾಟವನ್ನು ನಡೆಸಿದ ಕಮ್ಯುನಿಸ್ಟ್ ಪಕ್ಷವು ಆ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ಮಾತ್ರವಲ್ಲದೆ, ಕುಟುಂಬಕ್ಕೊಂದು ಉದ್ಯೋಗ ಕೊಡಿಸುವ ವಿಚಾರದಲ್ಲಿ ಯಶಸ್ವಿಯಾಯಿತು. ವರಾಹಿ, ಜೋಗ, ಮಾಸ್ತಿಕಟ್ಟೆ ಮುಂತಾದ ಕಡೆಗಳಲ್ಲಿ ಸುಮಾರು 600 ಕ್ಕೂ ಹೆಚ್ಚು ಸಂತ್ರಸ್ತರು ವಿವಿಧ ಹಂತಗಳ ಉದ್ಯೋಗಗಳನ್ನು ಪಡೆದರು[129]. ಮೈಸೂರು ರಾಜರು ಅಮೃತ್‌ಮಹಲ್ ತಳಿ ದನಗಳಿಗಾಗಿ ಮೀಸಲಿಟ್ಟ 7 ಲಕ್ಷ ಎಕರೆ ಭೂಮಿಯನ್ನು, ಅಮೃತ್ ಮಹಲ್ ತಳಿ ಉಳಿದಿಲ್ಲವಾದ್ದರಿಂದ, ಭೂರಹಿತರಿಗೆ ಹಂಚಬೇಕೆಂದು ಪ್ರಾಂತ ರೈತ ಸಂಘ ಚಳುವಳಿಯನ್ನು ನಡೆಸಿತು[130]. ಬೆಂಗಳೂರುಜಿಲ್ಲೆ ದೊಡ್ಡಬಳ್ಳಾಪುರದ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಮುಗವಾಳಪ್ಪನವರು 1958 ರಲ್ಲಿ ಕಾಂಗ್ರೆಸ್ ತೊರೆದು ಕಮ್ಯುನಿಸ್ಟ್ ಪಕ್ಷಕ್ಕೆ ಬಂದರು ಮತ್ತು ತಾಲೂಕಿನಲ್ಲಿ ಜೋಡಿದಾರರ ದಬ್ಬಾಳಿಕೆಗಳ ವಿರುದ್ಧ ಹೋರಾಟಗಳನ್ನು ರೂಪಿಸಿದರು. ಅಷ್ಟರಲ್ಲಾಗಲೇ ಅರದೇಶಹಳ್ಳಿ, ಸುರದೇನಪುರ, ಸುತ್ತಹಳ್ಳಿ, ನೆಲಗದರನಹಳ್ಳಿ, ವಡ್ಡರಹಳ್ಳಿ ಮುಂತಾದ ಜೋಡಿಗಳಲ್ಲಿ ಎಂ.ಎಸ್.ಕೃಷ್ಣನ್, ಸಿ.ರಾಮಭದ್ರಯ್ಯ, ಬಿ.ಟಿ.ವಿ.ರಾಜು ಸಭೆಗಳನ್ನು ನಡೆಸಿ ರೈತರಿಗೆ ರಕ್ಷಣೆ ಕೊಟ್ಟಿದ್ದರು. ಅದೇ ವರ್ಷದ ಏಪ್ರಿಲ್ 11 ರಂದು ಆರೂಡಿ, ಬನುಮತಿ, ಗುಂಡಪ್ಪ ನಾಯಕನಹಳ್ಳಿ, ಗರುಕೇನಹಳ್ಳಿ, ಗುನ್ನಾನಹಳ್ಳಿ ರೈತರ

ಸಭೆಯನ್ನು ಆರೂಡಿ ಜೋಡಿ ಗ್ರಾಮದಲ್ಲಿ ಕರೆಯಲಾಗಿತ್ತು. ಜೋಡಿದಾರನ ರೌಡಿಗಳು ರಾತ್ರಿ ಓಡಾಡುತ್ತಾ ರೈತರನ್ನು ಹೆದರಿಸುತ್ತಿದ್ದರು. ಆದರೆ ರೈತಸಂಘದವರು ರೈತರಿಂದ ನೇಗಿಲು ಹೂಡಿಸಿ ರೌಡಿಗಳನ್ನು ಹೊಡೆದು ಓಡಿಸಿದರು. ಕಾರ್ಮಿಕ ಮುಖಂಡರಾಗಿದ್ದ ಸೂರ್ಯನಾರಾಯಣ ರಾವ್ ಸ್ಥಳದಲ್ಲಿ ಮೊಕ್ಕಾಂ ಹೂಡಿ ಹೋರಾಟಗಾರರಿಗೆ ಧೈರ್ಯ ತುಂಬಿದ್ದರು. ಇಂತಹ ಹೋರಾಟಗಳು ಎಲ್ಲಾ ಕಡೆಗಳಲ್ಲಿ ಹೆಚ್ಚುತ್ತಾ ಬಂತು ರೈತರಿಗೆ ಸಂಘದಲ್ಲಿ ವಿಶ್ವಾಸ ಹೆಚ್ಚಾಯಿತು.

ಆಂಧ್ರ ಪ್ರದೇಶದ ಗಡಿಗೆ ಹೊಂದಿಕೊಂಡಿರುವ ಕೋಲಾರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ 600 ಕ್ಕೂ ಜೋಡಿ ಇನಾಂ ಗ್ರಾಮಗಳಿದ್ದವು (ರಾಮಭದ್ರಯ್ಯ 1990: 14). ತೆಲಂಗಾಣ ಹೋರಾಟದ ಪ್ರಭಾವ ಈ ಜಿಲ್ಲೆಯ ಮೇಲೆ ಮೊದಲಿನಿಂದಲೂ ಇತ್ತು. ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಕೆ.ಗಂಗಿರೆಡ್ಡಿ, ಅಪ್ಪಸ್ವಾಮಿರೆಡ್ಡಿ, ಬೈರಾರೆಡ್ಡಿ, ಪಿ.ವೆಂಕಟಗಿರಿಯಪ್ಪ, ಆರ್.ವೆಂಕಟರಾಮಯ್ಯ, ಸುಬ್ಬಾರೆಡ್ಡಿ, ನಂಜುಂಡೇಗೌಡ ಮುಂತಾದವರು ಆರಂಭದಲ್ಲಿ ರೈತ ಸಂಘವನ್ನು ಕಟ್ಟಲು ತೊಡಗಿದರು. ಈ ನಿಟ್ಟಿನಲ್ಲಿ 1951 ರಲ್ಲಿ ಚಿಂತಾಮಣಿಯಲ್ಲಿ ಜಿಲ್ಲಾ ಮಟ್ಟದ ರೈತಸಂಘದ ಸಮ್ಮೇಳನ ನಡೆಯಿತು. ಆಂಧ್ರ ಪ್ರದೇಶದ ರೈತ ಸಂಘದ ನಾಯಕ ಚಲ್ಲಿಸ್ವಾಮಿ ವಾಸುದೇವ ರಾವ್ ಅಧ್ಯಕ್ಷತೆ ವಹಿಸಿದ್ದರು. ಜೋಡಿ ಇನಾಂ ಪದ್ಧತಿಯನ್ನು ರದ್ದುಗೊಳಿಸುವ ಕಾನೂನನ್ನು ತರಬೇಕೆಂದು ಮೈಸೂರು ಸರ್ಕಾರವನ್ನು ಒತ್ತಾಯಿಸಿ ನಿರ್ಣಯವನ್ನು ಮಾಡಿದರು. ಅದೇ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಬರಗಾಲ ಹೆಚ್ಚಾಗಿ ಗಂಜಿ ಕೇಂದ್ರಗಳನ್ನು ತೆರೆದು ರೈತರಿಗೆ ಸಹಾಯ ಮಾಡಿದರು. ಚಿನ್ನದ ಗಣಿ ಕಾರ್ಮಿಕರು ಇದಕ್ಕಾಗಿ ಹಣ ಸಂಗ್ರಹ ಮಾಡಿಕೊಟ್ಟರು. ಮೈಸೂರು ಸರ್ಕಾರ ಇನಾಂ ರದ್ಧತಿ ಕಾನೂನನ್ನು ತರುವುದರ ಹಿಂದೆ ರೈತ ಸಂಘದ ಪ್ರಯತ್ನಗಳೂ ಇದ್ದವು. 1953–54 ರ ಅವಧಿಯಲ್ಲಿ ಜಿಲ್ಲೆಯ ತಾಲೂಕುಗಳಲ್ಲಿ ರೈತ ಸಂಘದ ಸಮಿತಿಗಳು ರೂಪುಗೊಂಡವು. ಜಿಲ್ಲೆಯಲ್ಲಿ ರೈತ ಸಂಘವನ್ನು ಕಟ್ಟಲು ಕೆಜಿಎಫ್‌ನ ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆ ತನ್ನ ಕಾರ್ಯಕರ್ತರಾದ ಎಸ್.ಎಂ.ಅಂತೋಣಿಕ್ರೂಜ್, ಎನ್.ಸಿಂಧೂರಾಜ್, ಎಸ್.ರಾಮದಾಸ್, ಎಸ್.ಇಗ್ನೇಷಿಯಸ್, ಎಸ್.ಸವರಿದಾಸ್ ಮುಂತಾದವರನ್ನು ಕಳುಹಿಸಿ ಸಹಾಯ ಮಾಡಿತು (ಅಚ್ಯುತ: 1989: 26). ಇನಾಂದಾರರು ಉತ್ಕೃಷ್ಟವಾದ ಭೂಮಿಯನ್ನು ತಾವಿಟ್ಟುಕೊಂಡು ರೈತರಿಗೆ ಬಂಜರು ಭೂಮಿಗಳನ್ನು ಕೊಡುತ್ತಿರುವ ಬಗ್ಗೆ, ಹೆಚ್ಚು ಪರಿಹಾರಗಳನ್ನು ವಸೂಲಿ ಮಾಡುತ್ತಿರುವ ಬಗ್ಗೆ, ಗೋಮಾಳಗಳನ್ನು ಭೂಮಾಲೀಕರೇ ನುಂಗುತ್ತಿರುವ ಬಗ್ಗೆ 1956 ರ ಅಕ್ಟೋಬರ್ 21 ರಂದು ಕೋಲಾರದಲ್ಲಿ ನಂಜುಂಡಗೌಡ, ಕೆ.ಎಂ.ವೆಂಕಟಪ್ಪ, ಮುನಿಸ್ವಾಮಿಗೌಡ ಮತ್ತು ಪಿ.ವೆಂಕಟಗಿರಿಯಪ್ಪನವರ ಪ್ರತಿಭಟನೆ ನಡೆಸಿದರು. ಜೋಡಿ ಇನಾಂ ಗ್ರಾಮಗಳಲ್ಲಿ ರೈತರ ಹೋರಾಟಗಳು ಹೆಚ್ಚುತ್ತಿದ್ದವು. 1957 ರ ಅಕ್ಟೋಬರ್ 16 ರಂದು ಬಾಗೇಪಲ್ಲಿಯ ಜಿಲಿಬಿಲಿಗಾರಿಪಲ್ಲಿ ಮತ್ತು ರಾಮೋಜುಲುಪಲ್ಲಿಗಳಲ್ಲಿ ರೈತ ಸಂಘದ ಸಭೆಗಳಾದವು. ಅಪ್ಪಸ್ವಾಮಿರೆಡ್ಡಿ, ಡಿ.ಎನ್.ವೆಂಕಟರೆಡ್ಡಿ, ಹೆಚ್.ಎಸ್.ರಾಮರಾವ್ ಸಭೆಗಳನ್ನು ನಡೆಸಿ ರೈತರಿಗೆ ರಕ್ಷಣೆ ನೀಡಿದರು. 1958 ರಲ್ಲಿ ಬಾಗೇಪಲ್ಲಿಯ ಜೋಡಿ ಮುದ್ದಲಪಲ್ಲಿಯಲ್ಲಿ ಆಂಧ್ರದ ಜೋಡಿದಾರರು ಗ್ರಾಮದ 1000 ಸಾವಿರಕ್ಕೂ ಹೆಚ್ಚು ಮರಗಳನ್ನು ಕಡಿದು ಮಾರಾಟ ಮಾಡುವಾಗ ಅದನ್ನು ತಡೆದು ಮಂತ್ರಿಗಳಿಗೆ

ಅರ್ಜಿ ನೀಡಿದರು. ಚಿಕ್ಕಬಳ್ಳಾಪುರದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ಜನಿಸಿದ ಮುದ್ದೇನಹಳ್ಳಿ ಮತ್ತು ನಸುಗೊಂಟ ಕೊತ್ತನೂರು ಜೋಡಿ ಇನಾಂ ಗ್ರಾಮಗಳಾಗಿದ್ದವು. ಇಲ್ಲಿ ಎಸ್.ಲಕ್ಷ್ಮಯ್ಯ, ಹೆಚ್.ಎಸ್.ರಾಮರಾವ್ ಮತ್ತು ಯೂಸುಫ್ ಇವರು ಜೋಡಿ ವಿರುದ್ಧ ರೈತರನ್ನು ಸಂಘಟಿಸಿದರು. ರೈತ ಮುಖಂಡರನ್ನು ಕೊಲ್ಲುವ ಸಂಚನ್ನು ಜೋಡಿದಾರನು ಹಾಕಿರುವುದನ್ನು ತಿಳಿದು ರೈತರೇ ಇವರನ್ನು ರಕ್ಷಿಸಿದರು. ಚಿಕ್ಕಬಳ್ಳಾಪುರದಲ್ಲಿ ತೀವ್ರ ಬರಗಾಲ ಬಂದಾಗ 'ಆಕಲಿ ಯಾತ್ರಾ'ಗಳನ್ನು (ಹಸಿವಿನ ಜಾಥಾ) ನಡೆಸಿದರು. ಇದರಲ್ಲಿ ಟಿ.ಕೆ.ಗಂಗಿರೆಡ್ಡಿ, ಐ.ಮರಿದಾಸ್, ವೈ.ಸತ್ಯನಾರಾಯಣ, ಆಂಧ್ರದ ರೈತ ಮುಖಂಡ ವಾಸುದೇವ ಮೂರ್ತಿ ಕೂಡಾ ಭಾಗವಹಿಸಿದ್ದರು. ಇದರಿಂದಾಗಿ ಹಲವಾರು ಕಡೆಗಳಲ್ಲಿ ಗಂಜಿ ಕೇಂದ್ರಗಳನ್ನು ತೆರೆಸಲು ಸಾಧ್ಯವಾಯಿತು. 1958 ಸೆಪ್ಟೆಂಬರ್ 6 ರಂದು ಚಿಂತಾಮಣಿಯಲ್ಲಿ ಬಿ.ವಿ.ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜೋಡಿ ಇನಾಂ ಗ್ರಾಮಗಳ ರೈತರ ಸಮ್ಮೇಳನವನ್ನು ನಡೆಸಲಾಗಿತ್ತು. ಇದರ ನಿರ್ಣಯಗಳ ಆಧಾರದಲ್ಲಿ ಪಿ.ವೆಂಕಟಗಿರಿಯಪ್ಪ, ಶಾಸಕ ಗಂಗಿರೆಡ್ಡಿ, ಶಾಸಕ ಜೆ.ವೆಂಕಟಪ್ಪ, ಮಳ್ಳೂರು ಪಾಪಣ್ಣ, ಅಪ್ಪಸ್ವಾಮಿರೆಡ್ಡಿ, ಕೃಷ್ಣಸ್ವಾಮಿ, ನಾರಾಯಣ ರೆಡ್ಡಿ, ಕಕ್ಕಿಲ್ಲಾಯ ಇವರುಗಳು ಜೋಡಿ ಇನಾಂ ರೈತರು ತಮ್ಮ ಭೂಮಿಗಳನ್ನು ಹೊಂದುವಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಹೋರಾಟಗಳನ್ನು ರೂಪಿಸಿದರು. 1964 ರಲ್ಲಿ ಎ.ಕೆ.ಗೋಪಾಲನ್ ಅವರು ಕೋಲಾರ ಜಿಲ್ಲೆಗೆ ಭೇಟಿ ನೀಡಿ ಜೋಡಿ ಗ್ರಾಮಗಳ ರೈತರ ಹೋರಾಟಕ್ಕೆ ಬೆಂಬಲ ನೀಡಿದರು. ಈ ಹೋರಾಟಗಳಲ್ಲಿ ಅಪ್ಪಸ್ವಾಮಿರೆಡ್ಡಿ, ಹೆಚ್.ಎಸ್.ರಾಮರಾವ್ ಮತ್ತು ಸವರಿದಾಸ್ ಅವರನ್ನು ಸರ್ಕಾರ ಬಂಧಿಸಿತ್ತು. ಇದರ ವಿರುದ್ಧ ಚಿಕ್ಕಬಳ್ಳಾಪುರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಎ.ಕೆ.ಗೋಪಾಲನ್ ಭಾಷಣ ಮಾಡಿ ಬಂಧಿತರನ್ನು ಬಿಡುಗಡೆ ಮಾಡಲು ಒತ್ತಾಯಿಸಿದರು.

ಭೂ ಕಂದಾಯ ಮನ್ನಾಮಾಡಲು ಒತ್ತಾಯಿಸಿ 1967–68 ರಲ್ಲಿ ಕೋಲಾರ ಜಿಲ್ಲೆಯಾದ್ಯಂತ ಮಳ್ಳೂರು ಪಾಪಣ್ಣನವರ ನೇತೃತ್ವದಲ್ಲಿ 60 ದಿನಗಳ ಪಾದಯಾತ್ರೆ ನಡೆಯಿತು. ಅಮಾನುಲ್ಲಾ ಷರೀಫ್, ಆದಿನಾರಾಯಣ ರೆಡ್ಡಿ, ಲಕ್ಷ್ಮಣರೆಡ್ಡಿ, ಶ್ರೀನಿವಾಸರೆಡ್ಡಿ, ಅಶ್ವಥನಾರಾಯಣ ರೆಡ್ಡಿ, ಲಕ್ಷ್ಮಯ್ಯ, ಮಣಿ, ದೊರೆಸ್ವಾಮಿ ಮುಂತಾದವರು ಪ್ರಮುಖವಾಗಿ ಇದರಲ್ಲಿ ಭಾಗವಹಿಸಿದ್ದರು. ಎ.ಕೆ.ಗೋಪಾಲನ್ ಸತತವಾಗಿ ಕೋಲಾರ ಜಿಲ್ಲೆಯ ಭೂ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರಿಂದ ರೈತರಲ್ಲಿ ಹೆಚ್ಚಿನ ಪ್ರಭಾವ ಬೀರಿತು. 1972 ರಲ್ಲಿ ಚಿಕ್ಕಬಳ್ಳಾಪುರದ ತಿಮ್ಮನಹಳ್ಳಿ ಭೂ ಗ್ರಹಣ ಚಳುವಳಿಯಲ್ಲಿ ಅನರೋಗ್ಯವಿದ್ದರೂ ಬಂಧನಕ್ಕೊಳಗಾಗಿದ್ದರು ಎಂಬ ವಿಚಾರ ಕಾರ್ಯಕರ್ತರಲ್ಲಿ ಉತ್ಸಾಹವನ್ನು ಮೂಡಿಸಿತ್ತು. ಈ ಹೋರಾಟದಿಂದ 100 ಎಕರೆಗೂ ಹೆಚ್ಚು ಭೂಮಿ ರೈತರಿಗೆ ದೊರಕಿತು. ನಂತರ ತಾಲೂಕಿನ ವಿವಿಧೆಡೆಗಳಲ್ಲಿ ನಡೆದ ಭೂಗ್ರಹಣ ಚಳುವಳಿಗಳಿಂದ 3000 ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನು ಹಿಡಿಯಲು ಸಾಧ್ಯವಾಗಿತ್ತು (ಸೋಮಶೇಖರ್ 2002: 35). ಈ ಹೋರಾಟದಲ್ಲಿ ವೇಮಗಲ್‌ನ ಕಮ್ಯುನಿಸ್ಟ್ ಶಾಸಕರಾಗಿದ್ದ ಸಿ.ಬೈರೇಗೌಡ ಭಾಗವಹಿಸಿದ್ದರು (ಸೋಮಶೇಖರ್ 2002: 41). ಜಿಲ್ಲೆಯಲ್ಲಿ ನಡೆದ ಭೂ ಹೋರಾಟಗಳಲ್ಲಿ ಶಿಡ್ಲಘಟ್ಟದ **ಈಗಲೇಟಿ ತಿಮ್ಮಸಂದ್ರದ ಭೂಗ್ರಹಣ ಚಳುವಳಿಯು** ಮುಖ್ಯವಾದುದು. 2000 ಎಕರೆ ಅರಣ್ಯ ಭೂಮಿಯನ್ನು ಹಿಡಿಯುವ ಹೋರಾಟ ನಡೆದು 400 ಜನರ ಬಂಧನವಾಗಿ 15 ದಿನ ಜೈಲುವಾಸ ಅನುಭವಿಸಿದರು. ಈ ಚಳುವಳಿ

ಚಿಂತಾಮಣಿ ಮತ್ತು ಇತರ ಕಡೆಗಳಿಗೂ ವಿಸ್ತರಣೆ ಆಗಿ ಒಟ್ಟಾರೆ 15,000 ಜನರು ಬಂಧನಕ್ಕೊಳಗಾಗಿದ್ದರು. ಕೋಲಾರ ಜಿಲ್ಲೆಯ ಜೈಲುಗಳೆಲ್ಲಾ ತುಂಬಿದ್ದವು. ಈ ಭೂಮಿ ಹೋರಾಟಗಳಿಂದ ಕೋಲಾರ ಜಿಲ್ಲೆಯಲ್ಲಿ ಸುಮಾರು 10,000 ಎಕರೆ ಭೂಮಿ ಭೂರಹಿತರಿಗೆ ಸಿಕ್ಕಿತು ಎನ್ನಲಾಗಿದೆ[131]. ಇದರಿಂದ ಸಿಟ್ಟಿಗೆದ್ದ ಸರ್ಕಾರ 28 ಜನ ರೈತ ನಾಯಕರನ್ನು ಜಿಲ್ಲೆಯಿಂದ ಗಡೀಪಾರು ಮಾಡಿತು. ನ್ಯಾಯಾಲಯದಲ್ಲಿ ಈ ಪ್ರಕರಣ ನಡೆದು 1976 ರಲ್ಲಿ ಸರ್ಕಾರದ ಆದೇಶ ರದ್ದಾಯಿತು (ರಾಮಭದ್ರಯ್ಯ 1990: 42). ಈ ಹೋರಾಟದಲ್ಲಿ ಮಳ್ಳೂರು ಜಿ.ಪಾಪಣ್ಣ, ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್) ರಾಜ್ಯ ಕಾರ್ಯದರ್ಶಿಯಾಗಿದ್ದ ಹೆಚ್.ಎಸ್.ರಾಮರಾವ್, ಎಸ್.ಲಕ್ಷ್ಮಯ್ಯ, ಲಕ್ಷ್ಮಣರೆಡ್ಡಿ, ಕೆ.ಎಂ.ವೆಂಕಟೇಶ್, ಅಶ್ವಥನಾರಾಯಣರೆಡ್ಡಿ, ಜಿ.ವಿ.ಶ್ರೀರಾಮರೆಡ್ಡಿ ಮುಂತಾದವರು ಮುಂಚೂಣಿ ಪಾತ್ರ ವಹಿಸಿದರು (ಸೋಮಶೇಖರ್ 2002: 36).

ಕೋಲಾರ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಇದ್ದ ಜೋಡಿದಾರರಿಂದ ಭೂಮಿಯನ್ನು ಕಿತ್ತುಕೊಳ್ಳಬೇಕೆಂಬ ಹೋರಾಟ ಮತ್ತು ಅದರ ಪರಿಣಾಮವಾಗಿ ಬಂದ ಕಾನೂನು ರೈತರು ಮತ್ತು ಬಡವರ ಮೇಲೆ ತುಂಬಾ ಪ್ರಭಾವ ಬೀರಿತು. ಸಹಜವಾಗಿಯೇ ಸಣ್ಣ ಪುಟ್ಟ ಭೂಮಿ ಹೊಂದಿದವರು ಮತ್ತು ಬಡ ಭೂರಹಿತರು ರೈತ ಸಂಘವನ್ನು ತಮ್ಮ ಪರವಾಗಿರುವ ಪಕ್ಷ ಎಂದು ಭಾವಿಸಿದರು. ಜೋಡಿದಾರ ಪದ್ಧತಿ ರದ್ದಾಗಬೇಕೆಂಬ ಹೋರಾಟದ ನಾಯಕತ್ವದಲ್ಲಿದ್ದವರು ಮಧ್ಯಮ ವರ್ಗದ ರೈತ ಕುಟುಂಬಗಳಿಂದ ಬಂದವರಾದ್ದರಿಂದ ಈ ಹೋರಾಟದಲ್ಲಿ ಕೆಲವು ಕಡೆ ದಾಳಿಗಳು ನಡೆದರೂ ಸಹ ಅದು ಅಷ್ಟೊಂದು ವ್ಯಾಪಕತೆಯನ್ನು ಹೊಂದಿರಲಿಲ್ಲ[132].

ತುಮಕೂರು ಜಿಲ್ಲೆಯಲ್ಲಿ 1960 ರಲ್ಲಿ ಭೂ ಸುಧಾರಣಾ ಶಾಸನ ಮತ್ತು ಇತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ತುಮಕೂರು ಜಿಲ್ಲೆ, ಬೆಂಗಳೂರು ಉತ್ತರ ಮತ್ತು ದೊಡ್ಡಬಳ್ಳಾಪುರದ ಅನೇಕ ಹಳ್ಳಿಗಳಲ್ಲಿ 500 ಮೈಲಿಗಳ ಜಾಥಾ ನಡೆಯಿತು. ಎಐಕೆಎಸ್ ಅಧ್ಯಕ್ಷರಾಗಿದ್ದ ಎ.ಕೆ.ಗೋಪಾಲನ್ ಇದನ್ನು ಉದ್ಘಾಟಿಸಿದ್ದರು (ರಾಮಭದ್ರಯ್ಯ 1990: 38). 1979–81 ರ ಅವಧಿಯಲ್ಲಿ ನಡೆದ ಕೊಡಗು ಜಿಲ್ಲೆಯ ತಿತಿಮತಿ ಅರಣ್ಯ ಭೂಮಿ ಹೋರಾಟವು ಗಮನಾರ್ಹವಾದುದು. ಈ ಹೋರಾಟದಿಂದ 140 ರೈತ ಕುಟುಂಬಗಳಿಗೆ ಪ್ರತಿಯೊಬ್ಬರಿಗೆ ತಲಾ 2 ಎಕರೆ ಭೂಮಿ ಸಿಕ್ಕಿತು. ರಾಜ್ಯದ ಹಲವಾರು ಮುಖಂಡರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ಬೆಂಗಳೂರಿನ ಪಿ.ಜಗನ್ನಾಥ್ ಹೋರಾಟದಲ್ಲಿ ಭಾಗವಹಿಸಿ ಸ್ಫೂರ್ತಿ ತುಂಬಿದ್ದರು. ತಿತಿಮತಿ ಹೋರಾಟವು ಮಾಧ್ಯಮಗಳಲ್ಲೂ ಸಾಕಷ್ಟು ಸುದ್ದಿಯಾಗಿತ್ತು. ಕನ್ನಡಪ್ರಭದಲ್ಲಿ ವಿಶೇಷ ಲೇಖನವಾಗಿ ಎಸ್.ಮಾಲತಿ ಇದನ್ನು ಬರೆದಿದ್ದರು[133].

ಭೂಸುಧಾರಣಾ ಕಾಯ್ದೆಗಳು: ತೆಲಂಗಾಣ ಹೋರಾಟದ ಫಲವಾಗಿ ಜಾರಿಗೆ ಬಂದಿದ್ದ ಭೂಸುಧಾರಣಾ ಕಾಯ್ದೆಯು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಪರಿಣಾಮವನ್ನು ಬೀರಿತ್ತು. ಆದರೆ ಅಲ್ಲಿನ ರಾಜಕೀಯ ಉತ್ಕ್ರಾಂತಿ ಸ್ಥಿತಿ ಮತ್ತು ಪ್ರತ್ಯೇಕ ರಾಜ್ಯದ ಹೋರಾಟಗಳ ಹಿನ್ನೆಲೆಯಲ್ಲಿ ಅದನ್ನು ಜಾರಿಗೊಳಿಸುವ ಪರಿಸ್ಥಿತಿ ಇರಲಿಲ್ಲ. ಹೀಗಾಗಿ ಕರ್ನಾಟಕದ ಈಶಾನ್ಯ ಜಿಲ್ಲೆಗಳು ಅರೆ–ಪಾಳೇಗಾರಿ ಭೂಸಂಬಂಧಗಳನ್ನು ಗಟ್ಟಿಯಾಗಿಟ್ಟುಕೊಂಡೇ

ಕರ್ನಾಟಕಕ್ಕೆ ಸೇರ್ಪಡೆಯಾದವು. ಇನ್ನು ಬಾಂಬೆ ಕರ್ನಾಟಕದಲ್ಲಿ 1940ರ ದಶಕದಲ್ಲೇ ಬಾಂಬೆ ಟೆನೆನ್ಸಿ ಕಾಯ್ದೆ ಜಾರಿಗೆ ಬಂದಿತ್ತು. ಕರ್ನಾಟಕದ ಇತರೆ ಪ್ರದೇಶಗಳಿಗೆ ಹೋಲಿಸಿದರೆ ಇದು ಹೆಚ್ಚು ಪ್ರಗತಿಪರವಾಗಿತ್ತು. ವಿಭಿನ್ನ ಪ್ರದೇಶಗಳಲ್ಲಿ ಅಸ್ಥಿತ್ವದಲ್ಲಿದ್ದ ಭೂ ಕಾಯ್ದೆಗಳು ಮತ್ತು ಕಾರ್ಷಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಏಕೀಕೃತವಾದ ಇಡೀ ರಾಜ್ಯಕ್ಕೆ ಅನ್ವಯವಾಗುವ ಭೂ ಸುಧಾರಣಾ ಕಾಯ್ದೆ ಅಗತ್ಯವಾಗಿ ಕಂಡಿತು. ಇಂತಹುದೊಂದು ಅಗತ್ಯಕ್ಕೆ ವಿವಿಧ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದ ರೈತ ಹೋರಾಟಗಳು ಕಾರಣವಾಗಿದ್ದವು. ಇದರಲ್ಲಿ ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದ ಹೋರಾಟಗಳು ಮುಂಚೂಣಿಯಲ್ಲಿದ್ದವು. ಸ್ವಾತಂತ್ರ್ಯ ಪೂರ್ವದಲ್ಲಿ ನ್ಯಾಯವಾದ ಗೇಣಿ ಹಕ್ಕುಗಳಿಗಾಗಿ ಮತ್ತು ದೌರ್ಜನ್ಯಗಳ ವಿರುದ್ಧ ಮುಖ್ಯವಾಗಿ ಹೋರಾಟಗಳು ನಡೆದರೆ, ಸ್ವಾತಂತ್ರ್ಯಾ ನಂತರದಲ್ಲಿ ಮುಖ್ಯವಾಗಿ ಏಕೀಕರಣದ ನಂತರದಲ್ಲಿ ಈ ಪ್ರಶ್ನೆಗಳ ಜೊತೆಯಲ್ಲೇ ಸರಿಯಾದ ಭೂ ಸುಧಾರಣಾ ಕಾಯ್ದೆಗಾಗಿಯೂ ಹೋರಾಟಗಳು ನಡೆದವು.

ರೈತರು ಗೇಣಿ ಭದ್ರತೆ ಇಲ್ಲದೇ ಭೂಮಿಗಳನ್ನು ಕಳೆದುಕೊಳ್ಳುವ ಸಮಯದಲ್ಲಿ ರಕ್ಷಣೆಗೆ ಧಾವಿಸದ ಸರ್ಕಾರ ಇಡೀ ರಾಜ್ಯಕ್ಕೆ ಸಮಗ್ರ ಶಾಸನವನ್ನು ಜಾರಿಗೆ ತರಲು ತೀರ್ಮಾನಿಸಿ 1957 ರ ಮೇ 10 ರಂದು ಬಿ.ಡಿ.ಜತ್ತಿ ಸಮಿತಿಯನ್ನು ನೇಮಿಸಿತು. ಜತ್ತಿ ಸಮಿತಿಯ ಪ್ರಶ್ನಾವಳಿಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕಮ್ಯುನಿಸ್ಟ್ ಪಕ್ಷವು ಉತ್ತರವನ್ನು ಕಳುಹಿಸಿದವು. ಜತ್ತಿ ಸಮಿತಿಯಲ್ಲಿ ಜಮೀನ್ದಾರರೇ ತುಂಬಿಕೊಂಡಿದ್ದಾರೆ ಎಂದು ರೈತ ಸಂಘ ಟೀಕಿಸಿತು. ಬಾಂಬೆ ಪ್ರಾಂತದ ಅಸೆಂಬ್ಲಿ ಸದಸ್ಯರಾಗಿದ್ದ ಸಂದರ್ಭದಲ್ಲಿ ಅಲ್ಲಿನ ಟೆನೆನ್ಸಿ ಕಾಯ್ದೆಯನ್ನು ವಿರೋಧಿಸಿದ್ದ ಪಾಟೀಲರು ಈಗ ಮೈಸೂರು ರಾಜ್ಯದ ಕಂದಾಯ ಮಂತ್ರಿಗಳಾಗಿದ್ದರು. ಇಂತಹವರಿದ್ದುಕೊಂಡು ಎಂತಹ ಭೂಸುಧಾರಣಾ ಕಾಯ್ದೆ ಬರಬಹುದೆಂಬ ಅನುಮಾನವನ್ನು ರೈತ ಸಂಘವು ವ್ಯಕ್ತಪಡಿಸಿತ್ತು. ಬಿ.ಡಿ.ಜತ್ತಿ ಭೂಸುಧಾರಣಾ ಸಮಿತಿ 1957 ರಲ್ಲಿ ನೀಡಿದ ವರದಿಯ ಆಧಾರದಲ್ಲಿ 1961 ರ ಭೂಸುಧಾರಣಾ ಮಸೂದೆ ರೂಪುಗೊಂಡಿತು. (1974 ರ ಭೂಸುಧಾರಣಾ ಕಾಯ್ದೆಗಳಿಗೆ ಬೇಕಾದ ತಿರುಳನ್ನು ಒದಗಿಸಿದ ವರದಿಯೆಂದೂ ಇದನ್ನು ಪರಿಗಣಿಸಲಾಗಿದೆ.). ಈ ವರದಿಯು, ಭೂ ಮಾಲೀಕರು ಗೇಣಿ ಭೂಮಿಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಮಾಲೀಕರಿಂದ ಗೇಣಿದಾರರಿಗೆ ಭೂ ಒಡೆತನ ವರ್ಗಾವಣೆಯ ಉಸ್ತುವಾರಿಯನ್ನೂ ಒಳಗೊಂಡು, ಭೂ ಗೇಣಿಗಳನ್ನು ನಿಯಂತ್ರಿಸುವ ಮತ್ತು ನಿರ್ವಹಿಸುವ, ಮತ್ತು ಭೂ ಹಿಡುವಳಿಗೆ ಮಿತಿಯನ್ನು ಹೇರುವುದಕ್ಕೆ ಮತ್ತು ಹೆಚ್ಚುವರಿ ಭೂಮಿಯನ್ನು ಅರ್ಹರಿಗೆ ವಿತರಣೆ ಮಾಡುವುದಕ್ಕೆ ಮಾರ್ಗದರ್ಶನಗಳನ್ನು ಮತ್ತು ಚೌಕಟ್ಟನ್ನು ಕೂಡಾ ಒದಗಿಸಿತು (ರಾಜನ್ 1979).

ರೈತ ಸಂಘವು ಮೊದಲೇ ತನ್ನ ಅನುಮಾನಗಳನ್ನು ವ್ಯಕ್ತಪಡಿಸಿದ ಹಾಗೆ ಜತ್ತಿ ಸಮಿತಿ ವರದಿಯು ಪರಿಹಾರದ ಬದಲಿಗೆ ಸಮಸ್ಯೆಗಳನ್ನು ಬಿಗಡಾಯಿಸಿತು. ಜತ್ತಿ ಸಮಿತಿಯು ಕರ್ನಾಟಕದ ಎಲ್ಲಾ ಪ್ರಾಂತ್ಯಗಳ ರೈತರಿಗೆ ಏಕರೂಪದ ಗುತ್ತಿಗೆ ಪದ್ಧತಿಯನ್ನು ಜಾರಿಗೆ ತಂದಿತು. ಈ ಮಸೂದೆ ಜಾರಿಗೆ ಮೊದಲು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಗೇಣಿ ಕಾಯ್ದೆಗಳಿದ್ದವು. ಬಾಂಬೆ ಪ್ರಾಂತ್ಯದ ಜಿಲ್ಲೆಗಳಲ್ಲಿ 'ಬಾಂಬೆ ಟೆನೆನ್ಸಿ ಅಂಡ್ ಅಗ್ರಿಕಲ್ಚರಲ್ ಲ್ಯಾಂಡ್ ಆಕ್ಟ್ 1948' ಗೇಣಿಯನ್ನು ಉತ್ಪನ್ನದ ಶೇ.16.6 ರಷ್ಟು ನಿಗದಿಗೊಳಿಸಿತ್ತು. ಆದರೆ ಜತ್ತಿ ಸಮಿತಿಯು ಗರಿಷ್ಟ ಗೇಣಿಯನ್ನು ಒಣ

ಪ್ರದೇಶದಲ್ಲಿ ಶೇ.20 ಮತ್ತು ನೀರಾವರಿ ಪ್ರದೇಶದಲ್ಲಿ ಶೇ.25 ಎಂದು ನಿಗದಿಗೊಳಿಸಿತ್ತು. ಇದರಿಂದಾಗಿ ಬಾಂಬೆ ಕರ್ನಾಟಕ ಭಾಗದ ಗೇಣಿದಾರರು ಮೊದಲಿಗಿಂತ ಹೆಚ್ಚಿನ ಗೇಣಿ ಕೊಡುವಂತಾಯಿತು. ಕರ್ನಾಟಕದ ಎಲ್ಲಾ ಭಾಗದ ಗೇಣಿದಾರರಿಗೆ ನ್ಯಾಯ ಒದಗಿಸುವ ಉದ್ದೇಶ ಜತ್ತಿ ಸಮಿತಿಗೆ ಇದ್ದಿದ್ದರೆ ಉತ್ಪನ್ನದ 1/6 ರಷ್ಟನ್ನೇ ನಿಗದಿಪಡಿಸಬಹುದಿತ್ತು (ಚಂದ್ರ ಪೂಜಾರಿ 2010: 37).

ಮೈಸೂರು ಭೂಸುಧಾರಣಾ ಕಾಯ್ದೆಯಿಂದ ಹಿಂದಿನ ಬಾಂಬೆ ಭಾಗದ ರೈತರಿಗೆ ಗೇಣಿ ಹೆಚ್ಚಳ, ಕೋರ್ಟು ಕಛೇರಿ ತಿರುಗಾಟ ಇತ್ಯಾದಿ ಸಮಸ್ಯೆಗಳ ಹೆಚ್ಚಾಗಿವೆಯೆಂದು ಎಐಕೆಎಸ್‌ನ ಕಾರವಾರ ತಾಲೂಕು ಸಮಿತಿ ರೈತರ ಸಮಾವೇಶವನ್ನು ನಡೆಸಿತು[134]. ಮೈಸೂರು ಭೂಸುಧಾರಣಾ ಕಾಯ್ದೆಯ ಪರಿಣಾಮವಾಗಿ ಉತ್ತರ ಕನ್ನಡ ಜಿಲ್ಲೆಯ ಗೇಣಿ ರೈತರು ಬಾಂಬೆ ಗೇಣಿ ಕಾಯ್ದೆಯ ಪ್ರಕಾರ ಒಂದು ಗುಂಟೆಗೆ 8 ಆಣೆಯಂತೆ ಕೊಡಬೇಕಿದ್ದ ಗೇಣಿ ದರ ಈಗ ಗುಂಟೆಗೆ 2 ರಿಂದ 3 ರೂಪಾಯಿವರೆಗೆ ಕೊಡಬೇಕಾದ ಪ್ರಸಂಗ ಬಂದಿತು. ಇದನ್ನು ವಿರೋಧಿಸುವುದರ ಜೊತೆಗೆ, ಪರಿಹಾರ ಕೊಡದೆಯೇ ಉಳುವವನು ಭೂಮಿಯ ಮಾಲಿಕನಾಗುವ ಬಗ್ಗೆ ಮತ್ತು ಇತರ ಬೇಡಿಕೆಗಳಿಗೆ ಒತ್ತಾಯಿಸಿ ಕೆಪಿಆರ್‌ಎಸ್ ನೇತೃತ್ವದಲ್ಲಿ ಉತ್ತರ ಕನ್ನಡ ಜಿಲ್ಲಾ ರೈತರ 5 ನೇ ಪರಿಷತ್ತು 1968 ರ ಮಾರ್ಚ್ 29–30 ರಂದು ಕಾರವಾರದ ಉತ್ತರಕ್ಕಿರುವ ಹೊಟೆಗಾಳಿಯಲ್ಲಿ ನಡೆಯಿತು[135]. ಹೀಗೆ ಮೈಸೂರು ಗೇಣಿ ಕಾಯ್ದೆಯ ವಿರುದ್ಧ ಪ್ರಚಾರಗಳನ್ನು ನಡೆಸಿದ ಕಮ್ಯುನಿಸ್ಟರ ನೇತೃತ್ವದ ಪ್ರಾಂತ ರೈತ ಸಂಘವು, ಗೇಣಿ ದರವು ಒಂದು ಎಕರೆಗೆ 20 ರೂಗಳಿಗಿಂತ ಹೆಚ್ಚಿಲ್ಲದಂತೆ ನಿಗದಿಗೊಳಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆಯನ್ನು ನಡೆಸಿತು[136]. ಇದು ಮುಂದುವರಿದು 2–10–1969 ರಂದು ಕಾರವಾರದ ಬಳಿಯ ಹಳಗಾದಲ್ಲಿ ರೈತರ ಬೃಹತ್ ಬಹಿರಂಗ ಸಭೆಯನ್ನು ನಡೆಸಲಾಯಿತು[137]. ಈ ರೀತಿಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಗೇಣಿ ದರಗಳ ವಿರುದ್ಧ ಮತ್ತು ಉಳುವವನಿಗೇ ಭೂಮಿ ನೀಡಲು ಒತ್ತಾಯಿಸಿ ಸತತವಾಗಿ ಹೋರಾಟಗಳನ್ನು ಕಿಸಾನ್ ಸಭಾ ನಡೆಸಿತು. ಬೆಳಗಾಂ ಜಿಲ್ಲೆಯ ಖಾನಾಪುರ ಮತ್ತು ಸುತ್ತಲ ಪ್ರದೇಶದಲ್ಲಿ ಉಳುವವರಿಗೇ ಭೂಮಿ ಮತ್ತು ಇತರೆ ಕೆಲವು ಬೇಡಿಕೆಗಳಿಗಾಗಿ, ಕಾರವಾರದಿಂದ ಗಡೀಪಾರಾಗಿದ್ದ ಮ್ಹಾಳ್ಸೇಕರ್ ಮುಂತಾದ ಕಮ್ಯುನಿಸ್ಟರ ಸಹಾಯದಿಂದ ರೈತರನ್ನು ಸಂಘಟಿಸಲು ಪ್ರಯತ್ನಿಸಿತು.

ಭೂಮಾಲೀಕರು ಹೊಂದಬಹುದಾಗಿದ್ದ ಗರಿಷ್ಟ ಭೂಮಿಯ ವಿಚಾರದಲ್ಲಿ ಜತ್ತಿ ಸಮಿತಿ ಗೇಣಿದಾರರಿಗೆ ವಿರೋಧವಾಗಿ ಮತ್ತು ಜಮೀನ್ದಾರರಿಗೆ ಪೂರಕವಾಗಿ ಶಿಫಾರಸ್ಸುಗಳನ್ನು ಮಾಡಿತ್ತು. ನೀರಾವರಿ ಪ್ರದೇಶದಲ್ಲಿ ಐದು ಜನರ ಕುಟುಂಬವೊಂದು ಗರಿಷ್ಟ 27 ಎಕರೆ ಭೂಮಿಯನ್ನು, ಐದಕ್ಕಿಂತ ಹೆಚ್ಚಿದ್ದಲ್ಲಿ ತಲಾ 5 ಎಕರೆಯಂತೆ, ಒಟ್ಟು ಹತ್ತು ಜನರ ಕುಟುಂಬವೊಂದು ಗರಿಷ್ಟ 54 ಎಕರೆ ಭೂಮಿಯನ್ನು ಹೊಂದಬಹುದಾಗಿತ್ತು. ಒಣಭೂಮಿ ಪ್ರದೇಶಗಳಲ್ಲಿ ಐದು ಜನರ ಕುಟುಂಬ ಗರಿಷ್ಟ 216 ಎಕರೆಯಂತೆ, ಹತ್ತು ಜನರ ಕುಟುಂಬವೊಂದು ಗರಿಷ್ಟ 432 ಎಕರೆ ಭೂಮಿಯನ್ನು ಹೊಂದಲು ಅವಕಾಶ ಮಾಡಿಕೊಟ್ಟಿತು. ಕರ್ನಾಟಕದ 2/3 ಭಾಗ ಒಣ ಭೂಮಿ ವ್ಯಾಪ್ತಿಯಲ್ಲಿ ಮತ್ತು 1/3 ಭಾಗ ನೀರಾವರಿ ವ್ಯಾಪ್ತಿಯಲ್ಲಿ ಬರುತ್ತಿತ್ತು. ಹೆಚ್ಚು ಮಳೆ ಬೀಳುವ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ಮತ್ತು ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ

ಕಾಫಿ, ಟೀ, ಮುಂತಾದ ಪ್ಲಾಂಟೇಷನ್ ಬೆಳೆಗಳ ಭೂಮಿಗಳನ್ನು ಮತ್ತು ಸಕ್ಕರೆ ಫ್ಯಾಕ್ಟರಿಗಳ ಭೂಮಿಯನ್ನು ಭೂಮಿತಿ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಇಂತಹ ನೀತಿಯಿಂದಾಗಿ ಗೇಣಿ ಪದ್ಧತಿಯನ್ನು ರದ್ದು ಮಾಡಲು ಆಗಲಿಲ್ಲ (ಚಂದ್ರ ಪೂಜಾರಿ 2010: 39). ಇವುಗಳ ವಿರುದ್ಧವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮುಂತಾದ ಜಿಲ್ಲೆಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ತೀವ್ರವಾದ ಹೋರಾಟಗಳು ನಡೆದವು.

ಕರ್ನಾಟಕದ 1961 ರ ಭೂಸುಧಾರಣಾ ಕಾಯ್ದೆಯಿಂದ ಗೇಣಿದಾರರಿಗೆ ಆದ ಪ್ರಯೋಜನಗಳು ಏನು ಎಂಬುದನ್ನು ಪರಿಶೀಲಿಸುವುದು ಅಗತ್ಯ. 1961 ರ ಜನಗಣತಿ ಪ್ರಕಾರ (1957 ರಲ್ಲಿದ್ದಂತೆ) ಕರ್ನಾಟಕದಲ್ಲಿ 18,13,154 ಗೇಣಿದಾರರಿದ್ದರು. 1971 ರಲ್ಲಿ ಈ ಸಂಖ್ಯೆ 3,97,402 ಕ್ಕೆ ಇಳಿದಿತ್ತು. ಅಂದರೆ 14,15,752 ಗೇಣಿದಾರರ ಸಂಖ್ಯೆ ಕಡಿಮೆಯಾಗಿತ್ತು. ಇದರಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾಂ, ಧಾರವಾಡ, ಬಿಜಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುಸಿತವಾಗಿದೆ. ದಕ್ಷಿಣ ಕನ್ನಡದಲ್ಲಿ 1961 ರಲ್ಲಿ 4,90,571 ಗೇಣಿದಾರರು ಇದ್ದರು, 1971 ರಲ್ಲಿ ಇವರ ಸಂಖ್ಯೆ 70,591 ಕ್ಕೆ ಕುಸಿದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 1,81,239 ರಿಂದ ಅದು 72,456 ಕ್ಕೆ ಇಳಿದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ 1,11,780 ರಿಂದ 31,688 ಕ್ಕೆ, ಬಿಜಾಪುರ ಜಿಲ್ಲೆಯಲ್ಲಿ 1,00,009 ರಿಂದ 24,353 ಕ್ಕೆ, ಬೆಳಗಾಂ ಜಿಲ್ಲೆಯಲ್ಲಿ 2,27,845 ರಿಂದ 47,511 ಕ್ಕೆ, ಕೋಲಾರ ಜಿಲ್ಲೆಯಲ್ಲಿ 38,590 ರಿಂದ 13,078 ಕ್ಕೆ, ಬೆಂಗಳೂರು ಜಿಲ್ಲೆಯಲ್ಲಿ 69,302 ರಿಂದ 12,184 ಕ್ಕೆ, ಮೈಸೂರಿನಲ್ಲಿ 75,646 ರಿಂದ 9,720 ಕ್ಕೆ, 86,989 ರಿಂದ 22,952 ಕ್ಕೆ ಕುಸಿದಿರುವುದನ್ನು ಕಾಣಬಹುದು138. ಈ ರೀತಿಯಲ್ಲಿ ಗೇಣಿದಾರರ ಸಂಖ್ಯೆಯಲ್ಲಿ ಕುಸಿತವಾಗಿರುವುದನ್ನು ಕೃಷಿಕರ ಅಥವಾ ಹಿಡುವಳಿದಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ಭಾವಿಸುವಂತಿಲ್ಲ. ಏಕೆಂದರೆ 1961 ರಲ್ಲಿ ಕರ್ನಾಟಕದಲ್ಲಿ ಒಟ್ಟು 58,06,664 ಕೃಷಿಕರಿದ್ದರು. ಸರ್ಕಾರದ ಭೂಸುಧಾರಣಾ ಕಾಯ್ದೆಯ ಪರಿಣಾಮ ಇವರ ಸಂಖ್ಯೆಯಲ್ಲಿ ಹೆಚ್ಚಳವಾಗಬೇಕಿತ್ತು. ಆದರೆ ಹಾಗಾಗುವ ಬದಲು 1971 ರಲ್ಲಿ ಕೃಷಿಕರ ಸಂಖ್ಯೆ 40,72,829 ಕ್ಕೆ ಇಳಿದಿದೆ. ಅದೇ ರೀತಿ ಕೃಷಿ ಕಾರ್ಮಿಕರ ಅಥವಾ ಭೂರಹಿತರ ಸಂಖ್ಯೆ 1961 ರಲ್ಲಿ 17,61,110 ಇದ್ದದ್ದು 1971 ರಲ್ಲಿ 27,17,537 ಕ್ಕೆ ಹೆಚ್ಚಾಗಿದೆ. ಅಂದರೆ ಕೃಷಿಕರ ಸಂಖ್ಯೆಯಲ್ಲಿ ಶೇ.30 ರಷ್ಟು ಕಡಿಮೆಯಾದರೆ, ಭೂರಹಿತರ ಸಂಖ್ಯೆಯಲ್ಲಿ ಶೇ.55 ಏರಿಕೆಯಾಗಿದೆ. ಇದರಲ್ಲಿ ಗೊತ್ತಾಗುವುದು ಏನೆಂದರೆ ಭೂಮಿ ಕಳೆದುಕೊಂಡ ಗೇಣಿದಾರರು ಹೆಚ್ಚಾಗಿ ಭೂರಹಿತ ಕೂಲಿಕಾರರಾಗಿದ್ದಾರೆ ಎಂಬುದು. ಹೀಗಾಗಿ ಈ ಕಾಯ್ದೆಯು ಗೇಣಿದಾರರ ಬದುಕನ್ನು ಉತ್ತಮಪಡಿಸುವ ಬದಲು, ಭೂಮಾಲೀಕರು ಭೂಮಿಯನ್ನು ರಕ್ಷಿಸಿಕೊಳ್ಳಲು ಹೆಚ್ಚು ಸಹಕಾರಿಯಾಗಿ ಕೆಲಸ ಮಾಡಿದೆ. ಆದರೆ ಇದನ್ನು ಜಿಲ್ಲಾ ಮಟ್ಟದಲ್ಲಿ ನೋಡುವಾಗ ಕನಿಷ್ಟ ಮೂರು ಜಿಲ್ಲೆಗಳಲ್ಲಿ 1961 ಮತ್ತು 1971 ರ ನಡುವೆ ಹಿಡುವಳಿದಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದನ್ನು ಕಾಣಬಹುದು. ದಕ್ಷಿಣ ಕನ್ನಡದಲ್ಲಿ 1961 ರಲ್ಲಿ ಶೇ.22.3 ರಷ್ಟಿದ್ದ ಒಟ್ಟು ಹಿಡುವಳಿದಾರರ ಸಂಖ್ಯೆ 1971 ರಲ್ಲಿ ಶೇ.45.6 ಕ್ಕೆ ಹೆಚ್ಚಳವಾಗಿದೆ. ಶಿವಮೊಗ್ಗದಲ್ಲಿ ಶೇ.49.5 ರಿಂದ ಶೇ.78.5 ಕ್ಕೆ, ಉತ್ತರ ಕನ್ನಡದಲ್ಲಿ ಶೇ.25.9 ರಿಂದ ಶೇ.31.8 ಕ್ಕೆ ಹೆಚ್ಚಳವಾಗಿದೆ (ರಾಜ್‌ಪುರೋಹಿತ್1980:8).

ಚಂದ್ರ ಪೂಜಾರಿಯವರು ಹೇಳಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡೂ ಗಮನಿಸಿದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರ ಹೋರಾಟವನ್ನು ಕೆಪಿಆರ್‌ಎಸ್ ಅತ್ಯಂತ ವ್ಯಾಪಕವಾಗಿ ನಡೆಸಿದ್ದರ ಪರಿಣಾಮ

ಸಾಕಷ್ಟು ಸಕಾರಾತ್ಮಕ ಪರಿಣಾಮವನ್ನು ಕಾಣಬಹುದು. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಂದು ಕಡೆ ಕೆಪಿಆರ್‌ಎಸ್ ಮತ್ತೊಂದು ಕಡೆ ಸಮಾಜವಾದಿಗಳ ಹೋರಾಟ ಎರಡೂ ಸೇರಿ ಪರಿಣಾಮವನ್ನು ಬೀರಿವೆ. ಆದರೆ ಭೂಸುಧಾರಣಾ ಕಾನೂನುಗಳು ರಾಜ್ಯದಲ್ಲಿ ಜಾರಿಗೆ ಬಂದು, ಗೇಣಿದಾರರಿಗೆ ಭೂಮಿಯನ್ನು ಮಂಜೂರು ಮಾಡುವ ಕಾಲಕ್ಕೆ ಕಮ್ಯುನಿಸ್ಟರನ್ನು ಮೂಲೆಗುಂಪು ಮಾಡುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಪಕ್ಷ ಅನುಸರಿಸಿದ್ದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಭೂ ಮಂಜೂರಾತಿ ಸಮಿತಿಗಳಲ್ಲಿ ಪೂರ್ತಿಯಾಗಿ ಕಾಂಗ್ರೆಸ್‌ನವರೇ ತುಂಬಿಕೊಂಡು ಅವರೇ ಭೂಮಿಗಳನ್ನು ಕೊಡಲು ಕಾರಣಕರ್ತರೆಂಬಂತೆ ಬಿಂಬಿಸಲಾಯಿತು. ಗೇಣಿದಾರರ ಹೋರಾಟವನ್ನು ತೀವ್ರವಾಗಿ ನಡೆಸಿದ ಕಮ್ಯುನಿಸ್ಟರನ್ನು ಕಡೆಗಣಿಸಲಾಯಿತು. ಇದರಿಂದ ಕಮ್ಯುನಿಸ್ಟ್ ಚಳುವಳಿಗೂ ಸಹ ಹೊಡೆತ ಬಿದ್ದಿತು[139].

❖ ❖ ❖

ವಿದ್ಯಾರ್ಥಿ ಚಳುವಳಿ: ಸ್ವಾತಂತ್ರ್ಯ ನಂತರದ ಸಮೀಪದ ವರ್ಷಗಳಲ್ಲಿ ಎಐಎಸ್‌ಎಫ್ ಚಟುವಟಿಕೆಗಳು ಕ್ಷೀಣಿಸಿದ್ದವು. ಸಿಪಿಐ ನಿಷೇಧಕ್ಕೊಳಪಟ್ಟದ್ದರಿಂದ ಅದರ ಪರಿಣಾಮ ವಿದ್ಯಾರ್ಥಿ ಚಳುವಳಿಯ ಮೇಲೆ ಬೀರಿತು, ಆದರೂ ಸೀಮಿತ ರೀತಿಯಲ್ಲಿ ಚಟುವಟಿಕೆಗಳು ನಡೆಯುತ್ತಿದ್ದವು. 1949 ರಲ್ಲಿ ಬೆಂಗಳೂರಿನಲ್ಲಿ ಎನ್.ಡಿ.ಶಂಕರ್ ಅವರ ಸೋದರ ಎನ್.ಡಿ.ಕೃಷ್ಣಮೂರ್ತಿ ಇವರುಗಳು ಜನಶಕ್ತಿ, ಪೀಪಲ್ಸ್ ಏಜ್ ಪತ್ರಿಕೆಗಳನ್ನು ತಂದು ವಿದ್ಯಾರ್ಥಿಗಳಿಗೆ ಓದಿಸುತ್ತಿದ್ದರು. ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳಾದ ಸಿ.ಆರ್.ಕೃಷ್ಣರಾವ್ ಮತ್ತು ಗೋಪಾಲಕೃಷ್ಣ ಇವರು ಪತ್ರಿಕೆಗಳನ್ನು ಮಾರುತ್ತಿದ್ದರು. ಇವರೊಂದಿಗೆ ಆಗ ಕಮ್ಯುನಿಸ್ಟ್ ಪಕ್ಷದ ವಿದ್ಯಾರ್ಥಿ ಸೆಲ್‌ನಲ್ಲಿ ಆದಿನಾರಾಯಣ ಆಚಾರ್, ರಾಮಾಮೃತಮ್, ವಿಜಯಸಿಂಗ್, ಬಿ.ಕೆ.ನರಸಿಂಹಮೂರ್ತಿ, ಎಸ್.ವಿ.ಶಾಸ್ತ್ರಿ ಇವರಿದ್ದರು. ಭೂಗತರಾಗಿದ್ದ ಎಸ್.ಸೂರ್ಯನಾರಾಯಣರಾವ್ ಮತ್ತು ವೈ.ಆರ್.ಸತ್ಯನಾರಾಯಣ ಇವರು ಸೆಲ್ ಸಭೆಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡುತ್ತಿದ್ದರು. ಆಗ ಎಂ.ಎಸ್.ಕೃಷ್ಣನ್ ಸಿಪಿಐನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯಾಗಿದ್ದರು. ಇವರೂ ನಿರಂತರ ಮಾರ್ಗದರ್ಶನ ನೀಡುತ್ತಿದ್ದರು. ಇದೇ ಅವಧಿಯಲ್ಲಿ (1949) ಮಹಾರಾಣಿ ಕಾಲೇಜಿನ ಎಐಎಸ್‌ಎಫ್ ಸದಸ್ಯರಾಗಿ ಕೆ.ಸರೋಜ ಮತ್ತು ವೆಂಕಟಲಕ್ಷ್ಮಿ ಇದ್ದರು. ಈ ವೆಂಕಟಲಕ್ಷ್ಮಿಯವರೇ ಮುಂದೆ ಅನುಪಮಾ ಆಗಿ ನಿರಂಜನರನ್ನು ಮದುವೆ ಆದದ್ದು. ಇವರ ಮುಂದಾಳತ್ವದಲ್ಲಿ ಮಹಿಳಾ ಘಟಕವನ್ನು ಸ್ಥಾಪಿಸಲಾಗಿತ್ತು. ಹಣ ಸಂಗ್ರಹಕ್ಕೆ ಸಿನಿಮಾ ಪ್ರದರ್ಶನ ಮಾಡಲಾಗಿತ್ತು. ಆದರೆ ಹೆಚ್ಚು ಕಾಲ ಮುಂದುವರಿಯಲಿಲ್ಲ. (ಕೃಷ್ಣರಾವ್ 2012: 15–16). ಎಐಎಸ್‌ಎಫ್ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಕ್ರಿಯಾಶೀಲತೆಯೊಂದಿಗೆ ಜೋಡಿಸಿಕೊಂಡಿದ್ದರಿಂದ, ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳು ಮತ್ತು ಏರುಪೇರುಗಳು ಎಐಎಸ್‌ಎಫ್‌ನಲ್ಲೂ ಪ್ರತಿಫಲಿಸುತ್ತಿತ್ತು. 1949 ರ ಜುಲೈನಲ್ಲಿ ಕಲ್ಕತ್ತಾದಲ್ಲಿ ನಡೆದ ಎಐಎಸ್‌ಎಫ್‌ನ 12 ನೇ ರಾಷ್ಟ್ರ ಸಮ್ಮೇಳನದಲ್ಲಿ ಎಡ–ತೀವ್ರವಾದದ ಲೈನನ್ನು ಅಳವಡಿಸಿಕೊಂಡಿತು. ಈ ಸಮ್ಮೇಳನಕ್ಕೆ ಕರ್ನಾಟಕದಿಂದ ಕೃಷ್ಣರಾವ್, ಗೋಪಾಲಕೃಷ್ಣ ಮತ್ತು ಎಸ್.ವಿ.ಶಾಸ್ತ್ರಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದಿಲ್ಲ, ನೆಹರೂ ಸರ್ಕಾರವನ್ನು

ಕಿತ್ತು ಹಾಕಲು ಮತ್ತು ಸಮಾಜವಾದ ಸ್ಥಾಪಿಸಲು ಸಶಸ್ತ್ರ ಕ್ರಾಂತಿಯತ್ತ ವಿದ್ಯಾರ್ಥಿಗಳನ್ನು ಸಂಘಟಿಸಬೇಕೆಂಬ ತೀರ್ಮಾನಕ್ಕೆ ಸಮ್ಮೇಳನ ಬಂದಿತು. ಇದು ಸಿಪಿಐನ ಎಡ ತೀವ್ರವಾದಿ ಲೈನಿನ ಮುಂದುವರಿಕೆಯಾಗಿತ್ತು. ಈ ಅವಾಸ್ತವಿಕ ತೀರ್ಮಾನವು ಎಐಎಸ್‌ಎಫ್‌ನ್ನು ವಿದ್ಯಾರ್ಥಿಗಳಿಂದ ದೂರ ಮಾಡಿತು.

ಕಮ್ಯುನಿಸ್ಟ್ ಪಾರ್ಟಿಯು ಸಿ.ಬಿ.ಮೊಣ್ಣಯ್ಯನವರ ಸಹೋದರ ಸಿ.ಬಿ.ಮೋಟಯ್ಯನವರಿಗೆ ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಯನ್ನು ಕಟ್ಟಲು ಜವಾಬ್ದಾರಿಯನ್ನು ನೀಡಿತ್ತು. ಅವರು ಭೂಗತರಾಗಿದ್ದುಕೊಂಡೇ ಕೆಲಸ ಮಾಡುತ್ತಿದ್ದರು. ಬೆಂಗಳೂರು, ಮಂಗಳೂರು, ಬಳ್ಳಾರಿ, ತುಮಕೂರು, ದಾವಣಗೆರೆ, ಹುಬ್ಬಳ್ಳಿ, ಬಿಜಾಪುರ ಮುಂತಾದ ಕಡೆಗಳಲ್ಲಿ ಎಐಎಸ್‌ಎಫ್‌ನ ಶಾಖೆಗಳಿದ್ದವು. ರಾಜ್ಯ ಮಟ್ಟದಲ್ಲಿ ಅದಕ್ಕೊಂದು ಸ್ವರೂಪ ನೀಡಲು 1950 ರ ಆರಂಭದಲ್ಲಿ (ಕೃಷ್ಣ ಮೆಣಸಿಯವರು ಸಮ್ಮೇಳನ 1949 ರಲ್ಲಿ ನಡೆಯಿತೆಂದು ಹೇಳಿದ್ದಾರೆ.) ಬಿಜಾಪುರದಲ್ಲಿ **ಎಐಎಸ್‌ಎಫ್‌ನ ಮೊದಲ ಕರ್ನಾಟಕ ರಾಜ್ಯ ಸಮ್ಮೇಳನ** ನಡೆಯಿತು. ಕರ್ನಾಟಕದ ವಿವಿದ ಜಿಲ್ಲೆಗಳಿಂದ ವಿಧ್ಯಾರ್ಥಿಗಳು ಭಾಗವಹಿಸಿದ್ದರು. ಆ ಸಭೆಯಲ್ಲಿ ಎಐಎಸ್‌ಎಫ್‌ನ ಕರ್ನಾಟಕ ಘಟಕ ಸ್ಥಾಪಿಸಲಾಯ್ತು. ಇದರ ಮೊದಲ ಕಾರ್ಯದರ್ಶಿಯಾಗಿ ಗೋಪಾಲಕೃಷ್ಣ ಆಯ್ಕೆಯಾದರು (ಕೃಷ್ಣರಾವ್ 2012: 19).

ಕರ್ನಾಟಕ ಏಕೀಕರಣ ಚಳುವಳಿ ಮತ್ತು ಗೋವಾ ವಿಮೋಚನಾ ಹೋರಾಟಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಲು ಎಐಎಸ್‌ಎಫ್ ಪ್ರಯತ್ನಿಸಿತು. ಈ ಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಎಡ–ತೀವ್ರವಾದದ ಧೋರಣೆಯಿಂದ ಅದು ಆಚೆ ಬರಲು ಸಹಾಯವಾಯಿತು. ಎಐಎಸ್‌ಎಫ್‌ನ ಚಟುವಟಿಕೆಗಳು ಸಮಕಾಲೀನ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳು ಮತ್ತು ಏರುಪೇರುಗಳೊಂದಿಗೆ ಮತ್ತು ರಾಜಕೀಯ ಮತ್ತು ಸಾಮಾಜಿಕ ಕ್ರಿಯಾಶೀಲತೆಯೊಂದಿಗೆ ಜೋಡಿಸಿಕೊಂಡಿದ್ದರಿಂದ ಎಐಎಸ್‌ಎಫ್‌ನಲ್ಲೂ ಅದು ಪ್ರತಿಫಲಿಸುತ್ತಿತ್ತು. ಸಿಪಿಐ ಒಳಗಿನ ಸೈದ್ಧಾಂತಿಕ ಭಿನ್ನತೆಯ ಬೀಜಗಳು, 1962 ರ ಚೀನಾ–ಭಾರತ ಯುದ್ಧದ ಘಟನೆ ವಿದ್ಯಾರ್ಥಿ ಚಳುವಳಿಯನ್ನೂ ವಿಭಜನೆಯತ್ತ ಕೊಂಡೊಯ್ಯಿತು. ಈ ಪ್ರಕ್ರಿಯೆ ಮುಂದುವರಿದು 1970 ರಲ್ಲಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಆರಂಭವಾಗುವುದರೊಂದಿಗೆ ಭಾರತದ ಎಡ–ವಿದ್ಯಾರ್ಥಿ ಚಳುವಳಿ ವಿಭಜನೆಯಾಯಿತು.

1970 ರಲ್ಲಿ ತ್ರಿವೇಂಡ್ರಮ್‌ನಲ್ಲಿ ನಡೆದ ಎಸ್‌ಎಫ್‌ಐ ಅಖಿಲ ಭಾರತ ಸ್ಥಾಪನಾ ಸಮ್ಮೇಳನಕ್ಕೆ ಕರ್ನಾಟಕದಿಂದ ಕೊಡಗಿನ ಡಾ.ದುರ್ಗಾಪ್ರಸಾದ್, ಸುಳ್ಯದ ಸೂರ್ಯನಾರಾಯಣ ಭಟ್, ಮಂಗಳೂರಿನ ವಿಷ್ಣಮೂರ್ತಿ, ಚಿಂತಾಮಣಿಯ ಜಿ.ವಿ.ಶ್ರೀರಾಮರೆಡ್ಡಿ ಮುಂತಾದವರು ಭಾಗವಹಿಸಿದ್ದರು. ಇವರು ಕರ್ನಾಟಕದಲ್ಲಿ ಎಸ್‌ಎಫ್‌ಐನ್ನು ಕಟ್ಟಲು ನಡೆಸಿದ ಪ್ರಯತ್ನದ ಭಾಗವಾಗಿ 1971 ರಲ್ಲಿ ಚಿಂತಾಮಣಿಯ ಕೋನಕುಂಟ್ಲುವಿನಲ್ಲಿ ರಾಜ್ಯ ಮಟ್ಟದ ಸಂಘಟನಾ ಶಿಬಿರ ನಡೆಯಿತು. ಇದರ ಆಧಾರದಲ್ಲಿ ಎಸ್‌ಎಫ್‌ಐ ಪ್ರಥಮ ರಾಜ್ಯ ಸಮ್ಮೇಳನ 1973 ರಲ್ಲಿ ತುಮಕೂರಿನಲ್ಲಿ ನಡೆದು ವಿ.ಗೋಪಾಲಗೌಡ ಅಧ್ಯಕ್ಷರಾಗಿ, ಎಂ.ಕೆ.ಭಟ್ ಕಾರ್ಯದರ್ಶಿಯಾಗಿಆಯ್ಕೆಯಾದರು. ತುಮಕೂರು, ತಿಪಟೂರು, ಮೈಸೂರು, ಧಾರವಾಡ, ಗುಲ್ಬರ್ಗ, ಬೆಂಗಳೂರು, ಕೋಲಾರ, ಮಂಗಳೂರು ಮುಂತಾದ ಜಿಲ್ಲೆಗಳಿಂದ ಇನ್ನೂರು

ಪ್ರತಿನಿಧಿಗಳು ಭಾಗವಹಿಸಿದ್ದರು. ಎಸ್‌ಎಫ್‌ಐ ಎರಡನೇ ರಾಜ್ಯ ಸಮ್ಮೇಳನ ತೀರ್ಥಹಳ್ಳಿಯಲ್ಲಿ ನಡೆಯಿತು. ಈ ನಡುವೆ ಅಧ್ಯಕ್ಷರಾಗಿದ್ದ ವಿ.ಗೋಪಾಲಗೌಡರು ತಮ್ಮ ವೃತ್ತಿ ನಿಮಿತ್ತ ರಾಜೀನಾಮೆ ಕೊಟ್ಟಿದ್ದರು. ಆ ಅವಧಿಗೆ ವಿ.ಎಸ್. ಹಳಕಟ್ಟಿ ಅಧ್ಯಕ್ಷರಾಗಿದ್ದರು[140].

ತುರ್ತುಪರಿಸ್ಥಿತಿ ಮತ್ತು ನಂತರದ ದಿನಗಳಲ್ಲಿ ವಿದ್ಯಾರ್ಥಿ ಚಳುವಳಿ ರಾಜ್ಯದಲ್ಲಿ ತನ್ನ ವ್ಯಾಪಕತೆಯನ್ನು ಪಡೆದುಕೊಂಡಿತು. ಗುಂಡೂರಾವ್ ಸರ್ಕಾರದ ಬೆಲೆ ಏರಿಕೆ ಮತ್ತು ರೈತರ ಮೇಲಿನ ಗೋಲೀಬಾರ್‌ಗಳ ವಿರುದ್ಧ ವಿದ್ಯಾರ್ಥಿಗಳು ಸಿಡಿದೆದ್ದರು. ಇದರಲ್ಲಿ ಎಸ್‌ಎಫ್‌ಐ ರಾಜ್ಯದ ಎಡ ವಿದ್ಯಾರ್ಥಿ ಸಂಘಟನೆಗಳ ಪೈಕಿ ಮುಂಚೂಣಿಗೆ ಬಂದಿತು. ತುರ್ತು ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಿದ ಎಐಎಸ್‌ಎಫ್ ವಿದ್ಯಾರ್ಥಿಗಳಿಂದ ದೂರವಾಯಿತು. ನಂತರ ತನ್ನ ನಿಲುವನ್ನು ಬದಲಾಯಿಸಿಕೊಂಡಿತು. 1986 ರಲ್ಲಿ ರಾಜೀವ್‌ಗಾಂಧಿ ಜಾರಿಗೊಳಿಸಿದ ನೂತನ ಶಿಕ್ಷಣ ನೀತಿಯ ವಿರುದ್ಧ ಮತ್ತು 1990 ರ ನಂತರ ಜಾರಿಗೊಳ್ಳುತ್ತಿರುವ ಎಲ್‌ಪಿಜಿ ನೀತಿಗಳ ವಿರುದ್ಧ ಎಸ್‌ಎಫ್‌ಐ ಮತ್ತು ಎಐಎಸ್‌ಎಫ್ ಎರಡೂ ಸಂಘಟನೆಗಳು ವಿದ್ಯಾರ್ಥಿಗಳ ನಡುವೆ ಸಕ್ರಿಯವಾಗಿವೆ.

ಚುನಾವಣೆಗಳು ಮತ್ತು ಕಮ್ಯುನಿಸ್ಟರು

ಕಮ್ಯುನಿಸ್ಟ್ ಪಕ್ಷಗಳ ತಂತ್ರಾತ್ಮಕ ಧೋರಣೆಯಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಥವಾ ಸ್ಪರ್ಧಿಸದಿರುವ ವಿಚಾರ ಚರ್ಚಾರ್ಹವಾದುದು. ರಷ್ಯನ್ ಕ್ರಾಂತಿಯ ಸ್ಥಿತ್ಯಂತರ ಘಟ್ಟದಲ್ಲಿ ಅಲ್ಲಿನ ಸಂಸತ್ತು 'ಡ್ಯೂಮಾ'ವನ್ನು ಬಹಿಷ್ಕರಿಸುವ ಅಥವಾ ಅದರಲ್ಲಿ ಭಾಗವಹಿಸುವ ವಿಚಾರದಲ್ಲಿ ಲೆನಿನ್ ನಾಯಕತ್ವದಲ್ಲಿ ಇಂತಹ ಚರ್ಚೆಗಳು ನಡೆದಿದ್ದವು[141]. ಕಾರ್ಮಿಕ ವರ್ಗದ ಶಕ್ತಿ, ಪ್ರಜ್ಞೆಯ ಮಟ್ಟ, ಕ್ರಾಂತಿಗೆ ಪೂರಕವಾಗಿ ಅದನ್ನು ಬಳಸುವ ಸಾಮರ್ಥ್ಯಗಳ ಆಧಾರದಲ್ಲಿ ಒಂದು ತಂತ್ರಗಾರಿಕೆಯಾಗಿ ಅದನ್ನು ತೀರ್ಮಾನಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಜಾಗತಿಕ ಬಲಾಬಲಗಳು, ರಾಷ್ಟ್ರೀಯ ಪರಿಸ್ಥಿತಿಗಳು, ಕ್ರಾಂತಿಯ ವರ್ಗಗಳ ಪ್ರಜ್ಞೆ ಮತ್ತು ಸಂಘಟನೆಯ ಮಟ್ಟ ಇವೆಲ್ಲವನ್ನೂ ಆಧರಿಸಿ ಯಾವುದೇ ಕಮ್ಯುನಿಸ್ಟ್ ಪಕ್ಷ ಚುನಾವಣೆಗಳಲ್ಲಿ ಭಾಗವಹಿಸುವ ಅಥವಾ ಭಾಗವಹಿಸದಿರುವ ತೀರ್ಮಾನವನ್ನು ಮಾಡುತ್ತದೆ. ಭಾರತದಲ್ಲಿ ಸಿಪಿಐ ಒಳಗೆ ಇಂತಹ ಚರ್ಚೆಗಳು ಆರಂಭದಿಂದಲೂ ನಡೆದು, ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ರಚಿಸಿದ್ದು ಇದರ ಭಾಗವಾಗಿಯೇ. ಭಾರತದ ಪ್ರಧಾನ ಕಮ್ಯುನಿಸ್ಟ್ ಪಕ್ಷಗಳು, ಚುನಾವಣೆಗಳು ತಮ್ಮ ಗುರಿ ಸಾಧನೆಗೆ ಒಂದು ಸಾಧನವೇ ಹೊರತು, ಅದೇ ಗುರಿಯಲ್ಲ ಎಂದು ತೀರ್ಮಾನಿಸಿವೆ. ಭಾರತದಲ್ಲಿ ನಕ್ಸಲೈಟ್ ಎನ್ನಲಾಗುವ ಮಾವೋವಾದಿ ಗುಂಪುಗಳು ಚುನಾವಣೆಗಳನ್ನು ಆರಂಭದಿಂದಲೂ ಬಹಿಷ್ಕರಿಸುತ್ತಾ ಬಂದಿವೆ. ಕಾಲಾನಂತರದಲ್ಲಿ 'ಸಿಪಿಐ(ಎಂ–ಎಲ್) ಲಿಬರೇಷನ್'ನಂತಹ ಕೆಲವು ಗುಂಪುಗಳು, ಈ ನಿಲುವಿನಿಂದ ಹೊರಬಂದು, ಚುನಾವಣೆಗಳಲ್ಲಿ ಭಾಗವಹಿಸುತ್ತಿವೆ. ಇಲ್ಲಿನ ಚರ್ಚೆಯಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ಒಂದು ಸಾಧನವಾಗಿಯಾದರೂ ಕಮ್ಯುನಿಸ್ಟ್ ಪಕ್ಷಗಳು ಕರ್ನಾಟಕದಲ್ಲಿ ಎಂತಹ ಸಾಧನೆ ಮಾಡಿವೆ ಎಂಬುದನ್ನು ಗುರುತಿಸುವುದಾಗಿದೆ.

ಕರ್ನಾಟಕದಲ್ಲಿ 1952 ರಿಂದ 1964 ರವರೆಗೆ ಅವಿಭಜಿತ ಸಿಪಿಐ, ನಂತರದಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಪ್ರತ್ಯೇಕವಾಗಿ ಚುನಾವಣೆಗಳಲ್ಲಿ[142] ಸ್ಪರ್ಧಿಸುತ್ತಿವೆ. 1977 ರವರೆಗೆ ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆಯಲ್ಲಿದ್ದ ಸಿಪಿಐ ನಂತರ ಆ ಸಖ್ಯವನ್ನು ತೊರೆಯಿತು. ಅಲ್ಲಿಂದ ಮುಂದೆ ಎರಡೂ ಕಮ್ಯುನಿಸ್ಟ್ ಪಕ್ಷಗಳು ಜನತಾ, ಜನತಾದಳ ಪಕ್ಷದೊಂದಿಗೆ ಮತ್ತು ಕೆಲವೊಮ್ಮೆ ಸ್ವತಂತ್ರವಾಗಿ ಚುನಾವಣೆಗೆ ಸ್ಪರ್ಧಿಸಿವೆ. 1983 ಮತ್ತು 1985 ರ ವಿಧಾನಸಭಾ ಚುನಾವಣೆಗಳು ಎಡಪಕ್ಷಗಳ ಪಾಲಿಗೆ ಅತ್ಯುತ್ತಮವಾದ ಅವಧಿಯಾಗಿದೆ. ಕರ್ನಾಟಕ ವಿಧಾನಸಭೆಯಲ್ಲಿ ಎರಡೂ ಅವಧಿಯಲ್ಲಿ 6 ಶಾಸಕರು ಎಡಪಕ್ಷಗಳಿಂದ ಆಯ್ಕೆಯಾಗಿದ್ದರು. ಮೇ 1 ರಂದು ಕಾರ್ಮಿಕರ ದಿನಾಚರಣೆಯನ್ನುಸರ್ಕಾರಿ ರಜೆ ದಿನವನ್ನಾಗಿ ಘೋಷಿಸಲು ಎಡ ಪಕ್ಷಗಳು ಕಾರಣವಾಗಿದ್ದವು. ವಿಶೇಷವಾದ ಸಂಗತಿಯೆಂದರೆ, ಕಾರ್ಲ್ ಮಾರ್ಕ್ಸ್‌ರವರ ಜನ್ಮ ಶತಮಾನೋತ್ಸವದಪ್ರಯುಕ್ತ 1983 ರ ಮಾರ್ಚ್‌ನಲ್ಲಿ ವಿಧಾನಸಭೆಯಲ್ಲಿ ಸರ್ಕಾರ ನಿರ್ಣಯವನ್ನು ಮಂಡಿಸಿತ್ತು. ಇದನ್ನು ಬೆಂಬಲಿಸಿ ಕಮ್ಯುನಿಸ್ಟ್ ಶಾಸಕರೂ ಸೇರಿದಂತೆ ಹಲವಾರು ಶಾಸಕರು ಮತ್ತು ಮಂತ್ರಿಗಳು ಮಾತನಾಡಿದ್ದರು (ಬಾಲಸೂರಿ 2005: 189–190). ಈ ಎರಡು ಅವಧಿಗಳ ನಂತರ ಎಡಪಕ್ಷಗಳ ಪ್ರಾತಿನಿಧ್ಯ ಶಾಸನಸಭೆಯಲ್ಲಿ ಕುಸಿಯುತ್ತಾ ಬಂದಿದೆ. ಕಮ್ಯುನಿಸ್ಟ್ ರಾಜಕೀಯ ಪ್ರಜ್ಞೆಯನ್ನು ಮತ್ತು ಎಡ–ಪರ್ಯಾಯ ರಾಜಕೀಯದ ಸಾಧ್ಯತೆಗಳನ್ನು ದುಡಿಯುವ ಜನರಲ್ಲಿ ಮೂಡಿಸುವ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳು ವಿಫಲವಾಗಿರುವುದು ಏಕೆಂಬುದನ್ನು ತಿಳಿಯುವುದು ಅಗತ್ಯ.

1952[143] ರಿಂದ 1991 ರವರೆಗಿನ 10 ಲೋಕಸಭಾ ಚುನಾವಣೆಗಳಲ್ಲಿ ಎರಡೂ ಕಮ್ಯುನಿಸ್ಟ್ ಪಕ್ಷಗಳು ಸೇರಿ ಸ್ಪರ್ಧಿಸಿದ ಕ್ಷೇತ್ರಗಳೆಂದರೆ ಮಂಗಳೂರು (7 ಬಾರಿ), ಕೋಲಾರ (3 ಬಾರಿ), ಬೆಂಗಳೂರು ದಕ್ಷಿಣ (3 ಬಾರಿ), ಚಿಕ್ಕಮಗಳೂರು (3 ಬಾರಿ), ದಾವಣಗೆರೆ (2 ಬಾರಿ), ಗುಲ್ಬರ್ಗಾ (1 ಬಾರಿ), ಉಡುಪಿ (1 ಬಾರಿ) ಮತ್ತು ಕೆನರಾ (1 ಬಾರಿ). ಕರ್ನಾಟಕದಲ್ಲಿ ಅಸ್ಥಿತ್ವದಲ್ಲಿರುವ 28 ಕ್ಷೇತ್ರಗಳ ಪೈಕಿ 8 ಕ್ಷೇತ್ರಗಳಲ್ಲಿ ಮಾತ್ರ ಕಮ್ಯುನಿಸ್ಟ್ ಪಕ್ಷಗಳು ಇದುವರೆಗೆ ಸ್ಪರ್ಧೆ ಮಾಡಿವೆ. ಉಳಿದ 20 ಕ್ಷೇತ್ರಗಳಲ್ಲಿ ಇದುವರೆಗೂ ಸ್ಪರ್ಧೆ ಮಾಡಿಲ್ಲ.

ಕಮ್ಯುನಿಸ್ಟ್ ಪಕ್ಷಗಳ ಸ್ಪರ್ಧೆಯನ್ನು ಗಮನಿಸಿದಾಗ ಸ್ವಲ್ಪ ಮಟ್ಟಿಗೆ ಮಂಗಳೂರು ಕ್ಷೇತ್ರವನ್ನು ಹೊರತುಪಡಿಸಿದರೆ ಯಾವ ಕ್ಷೇತ್ರದಲ್ಲೂ ನಿರಂತರವಾದ ಸ್ಪರ್ಧೆ ಕಾಣುವುದಿಲ್ಲ. ಮಂಗಳೂರು ಕ್ಷೇತ್ರದಲ್ಲೂ ಸಹ ಆರಂಭದ ಐದು ಚುನಾವಣೆಗಳಲ್ಲಿ ಸತತವಾಗಿ ಸ್ಪರ್ಧಿಸಿದ ನಂತರ ಆ ಪ್ರಕ್ರಿಯೆ ಇಲ್ಲವಾಗಿದೆ. ಜೊತೆಗೆ ಮಂಗಳೂರು ಕ್ಷೇತ್ರದಲ್ಲಿ ದೊರೆಯುತ್ತಿದ್ದ ಮತಗಳು ನಿರಂತರವಾಗಿ ಕುಸಿತವಾಗಿವೆ[144]. 1952 ಮತ್ತು 1957 ರ ಚುನಾವಣೆಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದ ಕಮ್ಯುನಿಸ್ಟ್ ಪಾರ್ಟಿ ಕ್ರಮೇಣ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಾ ಬಂದಿದೆ. ಸಿಪಿಐ ಕುಸಿಯುತ್ತಾ ಹೋದಂತೆ ಅದರ ಜಾಗದಲ್ಲಿ ಬಲಪಂಥೀಯ ಬಿಜೆಪಿ ಬೆಳೆಯುತ್ತಾ ಬಂದಿರುವುದನ್ನು ಕಾಣಬಹುದು. ದಕ್ಷಿಣ ಕನ್ನಡದ ಕಮ್ಯುನಿಸ್ಟ್ ಪಕ್ಷಕ್ಕೆ ನೆಲೆಯಾಗಿದ್ದ ಕಾರ್ಮಿಕರು ಮತ್ತು ರೈತರ ಕುಟುಂಬಗಳಲ್ಲಿ ನಂತರದ ತಲೆಮಾರಿನ ಯುವಜನ ಬಹುತೇಕ ಬಿಜೆಪಿ/ಸಂಘಪರಿವಾರಕ್ಕೆ ಹೊರಳಿದ್ದಾರೆ. ಇಂದು ಕರಾವಳಿಯಲ್ಲಿ ಕೋಮುವಾದದ ಅಸ್ತ್ರಗಳಾಗಿ ಬಳಕೆ ಆಗುತ್ತಿರುವವರು ಬಹುತೇಕ ಇವರೇ ಆಗಿದ್ದಾರೆ. ಈ ಶಿಫ್ಟ್ ಜಿಲ್ಲೆಯ ಮತ್ತು ಕರಾವಳಿಯ ರಾಜಕೀಯದಲ್ಲಿ ಪ್ರಮುಖವಾದ ಬೆಳವಣಿಗೆಯಾಗಿದೆ.

ಸಿಪಿಐ ದೃಷ್ಟಿಯಿಂದ ಅತಿ ಹೆಚ್ಚು ಬಾರಿ ಸ್ಪರ್ಧಿಸಿದ ಕ್ಷೇತ್ರವೆಂದರೆ ಚಿಕ್ಕಮಗಳೂರು. ಸಿಪಿಐ ಇಲ್ಲಿ 1984 ರಿಂದ ಸತತವಾಗಿ ಸ್ಪರ್ಧಿಸುತ್ತಿದ್ದು, ಮತಗಳಿಕೆಯಲ್ಲಿ ಸತತವಾದ ಇಳಿಮುಖವನ್ನು ಕಾಣುತ್ತಿದೆ[145]. ಇಲ್ಲಿಯೂ ಸಹ ಬಿಜೆಪಿ ತನ್ನ ಮತಗಳಿಕೆಯಲ್ಲಿ ನಿರಂತರ ಹೆಚ್ಚಳವನ್ನು ಕಂಡಿದೆ. ಚಿಕ್ಕಮಗಳೂರು ಕ್ಷೇತ್ರದಲ್ಲಿ ತೋಟ ಕಾರ್ಮಿಕರ ಚಳುವಳಿಯ ಪ್ರಬಲ ನೆಲೆ ಜೊತೆಗೆ ಅಲ್ಲಿನ ಅಭ್ಯರ್ಥಿಯಾಗಿದ್ದ ಬಿ.ಕೆ.ಸುಂದರೇಶ್ ಅವರ ಸಾಮಾಜಿಕ ಹಿನ್ನೆಲೆಯ ಪ್ರಭಾವವೂ ಆರಂಭಿಕ ಮತಗಳಿಕೆಯಲ್ಲಿ ಕೊಡುಗೆ ಕೊಟ್ಟಿತ್ತು.

ಕೋಲಾರ ಕ್ಷೇತ್ರದಲ್ಲಿ 1962, 1967, 1971 ರ ಚುನಾವಣೆಗಳಲ್ಲಿ ಸ್ಪರ್ಧಿಸಿದ ನಂತರ 1991 ರವರೆಗೆ ಸ್ಪರ್ಧೆ ಇಲ್ಲ. ಅದೇ ರೀತಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ 1971, 1977, 1980 ರ ನಂತರ ಸ್ಪರ್ಧೆ ಮಾಡಿಲ್ಲ. ಕೆನರಾ 1962 ರಲ್ಲಿ, ಗುಲ್ಬರ್ಗ 1977 ರಲ್ಲಿ ಉಡುಪಿ 1984 ರಲ್ಲಿ ಒಮ್ಮೊಮ್ಮೆ ಸ್ಪರ್ಧೆ ಮಾಡಲಾಗಿದೆ. ಸ್ಪರ್ಧೆಯಲ್ಲಿ ನಿರಂತರತೆಯಿಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ.

ಕರ್ನಾಟಕದಿಂದ ಸಂಸತ್ತಿಗೆ ಪ್ರಾತಿನಿಧ್ಯದ ವಿಚಾರದಲ್ಲಿ ಹೇಳುವುದಾದರೆ, ಸ್ವಾತಂತ್ರ್ಯ ನಂತರದಲ್ಲಿ ಇದುವರೆಗೂ ಕಮ್ಯುನಿಸ್ಟ್ ಪಕ್ಷದ ಒಬ್ಬ ಪ್ರತಿನಿಧಿಯೂ ಆಯ್ಕೆಯಾಗಿಲ್ಲ. ಇದಕ್ಕೆ ಅಪವಾದವೆಂದರೆ, ಏಕೀಕರಣಪೂರ್ವ 1952 ರ ಚುನಾವಣೆ ಸಂದರ್ಭದಲ್ಲಿ, ಕನ್ನಡದ ಒಬ್ಬ ಪ್ರತಿನಿಧಿ ರಾಜ್ಯಸಭೆಗೆ ಆಯ್ಕೆಯಾಗಿದ್ದು. ಮದ್ರಾಸ್ ವಿಧಾನಸಭೆಗೆ ನಡೆದ ಮೊದಲ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಿಪಿಐನ ಯಾರೂ ಗೆದ್ದಿರಲಿಲ್ಲ. ಆದರೆ ಮದ್ರಾಸ್ ವಿಧಾನಸಭೆಯಲ್ಲಿ ಕಮ್ಯುನಿಸ್ಟ್ ಪಕ್ಷ ಎರಡನೇ ಸ್ಥಾನದಲ್ಲಿತ್ತು. ತೆಲುಗು, ಮಲಯಾಳ ಮತ್ತು ತಮಿಳು ಭಾಷಾ ವಿಭಾಗಗಳಿಂದ ಹೆಚ್ಚಿನ ಸಂಖ್ಯೆಯ ಕಮ್ಯುನಿಸ್ಟ್ ಶಾಸಕರು ಗೆದ್ದಿದ್ದರು. ಕನ್ನಡ ಭಾಷಾ ಪ್ರದೇಶದಿಂದ ಯಾರೂ ಆಯ್ಕೆ ಆಗಿರಲಿಲ್ಲ. ಸಿಪಿಐ ಕೇಂದ್ರ ಸಮಿತಿ ತೀರ್ಮಾನ ಮಾಡಿ[146] ಮದ್ರಾಸ್ ಅಸೆಂಬ್ಲಿಯಿಂದ ರಾಜ್ಯ ಸಭೆಗೆ ಕನ್ನಡ ಪ್ರದೇಶಗಳ ಭಾಗವಾಗಿ ಬಿ.ವಿ.ಕಕ್ಕಿಲ್ಲಾಯರನ್ನುರಾಜ್ಯಸಭೆಗೆ ಆಯ್ಕೆ ಮಾಡಿತು. ಕರ್ನಾಟಕದಿಂದ ರಾಜ್ಯಸಭೆಗೆ ಇದುವರೆಗೆ ಆಯ್ಕೆಯಾದ ಮೊದಲ ಮತ್ತು ಕೊನೆಯ ಕಮ್ಯುನಿಸ್ಟರು ಇವರೇ ಆಗಿದ್ದಾರೆ.

1952 ರಿಂದ 1989 ರವರೆಗಿನ 9 ವಿಧಾನಸಭಾ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಸ್ಪರ್ಧೆ ಗಮನಿಸಿದರೆ[147], 1952 ರ ಚುನಾವಣೆಯಲ್ಲಿ ವಿಧಾನಸಭೆಯ ಸಂಖ್ಯೆ 99 (ಮದ್ರಾಸ್ ಅಸೆಂಬ್ಲಿಯ ಮಂಗಳೂರು ಭಾಗ ಸೇರಿ) ಇದ್ದಾಗ 6 ಕ್ಷೇತ್ರಗಳಲ್ಲಿ, 1957 ಮತ್ತು 1962 ರಲ್ಲಿ ವಿಧಾನಸಭೆಯ ಸಂಖ್ಯೆ 208 ಇದ್ದಾಗ ಕ್ರಮವಾಗಿ 20 ಮತ್ತು 31 ಕ್ಷೇತ್ರಗಳಲ್ಲಿ, 1967 ಮತ್ತು 1972 ರಲ್ಲಿ ವಿಧಾನಸಭೆಯ ಸಂಖ್ಯೆ 216 ಇದ್ದಾಗ ಕ್ರಮವಾಗಿ 16 ಮತ್ತು 21 ಕ್ಷೇತ್ರಗಳಲ್ಲಿ, ಇನ್ನು 1978, 1983, 1985, 1989 ರಲ್ಲಿ ವಿಧಾನಸಭೆಯ ಸಂಖ್ಯೆ 224 ಇದ್ದಾಗ, ಕ್ರಮವಾಗಿ 16, 11, 15, 25 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ. ಕರ್ನಾಟಕದ ವಿಧಾನಸಭಾ ಚುನಾವಣೆಯ ಇತಿಹಾಸದಲ್ಲಿ ಕಮ್ಯುನಿಸ್ಟ್ ಪಕ್ಷವು ಅತಿ ಹೆಚ್ಚು ಅಂದರೆ 31 ಸ್ಥಾನಗಳಲ್ಲಿ ಸ್ಪರ್ಧೆ ಮಾಡಿದ್ದು 1962 ರಲ್ಲಿ. ವಿಧಾನಸಭೆಯ ಒಟ್ಟು ಕ್ಷೇತ್ರಗಳ ಸಂಖ್ಯೆಯನ್ನು ಗಮನಿಸಿದರೆ ಇದು ಶೇ. 15 ರಷ್ಟಾಗುತ್ತದೆ. ಇದುವರೆಗಿನ 9 ಚುನಾವಣೆಗಳ ಒಟ್ಟು ಸರಾಸರಿ ತೆಗೆದುಕೊಂಡರೆ ಎರಡೂ ಪಕ್ಷಗಳು ಶೇ. 9 ರಷ್ಟು ಸ್ಥಾನಗಳಿಗೆ ಸ್ಪರ್ಧೆ ಮಾಡಿವೆ. 224 ಕ್ಷೇತ್ರಗಳ ಪೈಕಿ ಒಮ್ಮೆಯಾದರೂ ಸ್ಪರ್ಧೆ

ಮಾಡಿರುವ ಆಧಾರದಲ್ಲಿ 75 ಕ್ಷೇತ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸ್ಪರ್ಧಿಸಿವೆ. ಅಂದರೆ ಇದುವರೆಗೂ 149 ಕ್ಷೇತ್ರಗಳಲ್ಲಿ ಸ್ಪರ್ಧೆಯನ್ನೇ ಮಾಡಿಲ್ಲ.

ಪ್ರತ್ಯೇಕ ರಾಜ್ಯವಾಗಿದ್ದ ಕಾರಣಕ್ಕೆ ಕೊಡಗು ವಿಧಾನಸಭೆಗೆ 1952 ರ ಜನವರಿಯಲ್ಲಿ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಮೂವರು ಅಭ್ಯರ್ಥಿಗಳು[148] ಸ್ಪರ್ಧಿಸಿದ್ದರು. 1989 ರವರೆಗಿನ ಸ್ಪರ್ಧೆಯನ್ನು ಗಮನಿಸಿದರೆ ಇದುವರೆಗೂ 44 ಕ್ಷೇತ್ರಗಳಲ್ಲಿ 1 ಬಾರಿ, 11 ಕ್ಷೇತ್ರಗಳಲ್ಲಿ 2 ಬಾರಿ, 6 ಕ್ಷೇತ್ರಗಳಲ್ಲಿ 3 ಬಾರಿ, 5 ಕ್ಷೇತ್ರಗಳಲ್ಲಿ 4 ಬಾರಿ, 9 ಕ್ಷೇತ್ರಗಳಲ್ಲಿ ಮಾತ್ರ 5 ಮತ್ತು ಅದಕ್ಕಿಂತ ಹೆಚ್ಚು ಬಾರಿ ಸ್ಪರ್ಧಿಸಲಾಗಿದೆ. ಗೆದ್ದಿರುವ ಕ್ಷೇತ್ರಗಳ ಪೈಕಿ ಕೆಜಿಎಫ್‌ನಲ್ಲಿ ನಾಲ್ಕು ಬಾರಿ, ಶಹಾಬಾದ್ ಮತ್ತು ದಾವಣಗೆರೆಯಲ್ಲಿ ತಲಾ 3 ಬಾರಿ, ಮಲ್ಲೇಶ್ವರಂ, ರಾಜಾಜಿನಗರ, ಮಂಗಳೂರು–2 (ನಂತರ ಉಳ್ಳಾಲ) ಮತ್ತು ಹುಮನಾಬಾದ್‌ಗಳಲ್ಲಿ ತಲಾ 2 ಬಾರಿ, ಗುಲ್ಬರ್ಗ, ಬಂಟ್ವಾಳ, ವಿಟ್ಲ, ಬಾಗೇಪಲ್ಲಿ, ಮುಳಬಾಗಿಲು ಮತ್ತು ವರ್ತೂರಲ್ಲಿ ತಲಾ 1 ಬಾರಿ ಕಮ್ಯುನಿಸ್ಟ್ ಪಕ್ಷಗಳು ಗೆದ್ದಿವೆ. ವಿಭಜನೆಯ ನಂತರ 1967 ರಿಂದ 1978 ರವರೆಗೆ ಸಿಪಿಐ(ಎಂ) ಯಾವ ಕ್ಷೇತ್ರದಲ್ಲೂ ಗೆಲುವನ್ನು ಕಾಣಲಿಲ್ಲ. 1962 ರಲ್ಲಿ ಎಂ.ಸಿ.ನರಸಿಂಹನ್ ಕಾಂಗ್ರೆಸ್ ಮತ್ತು ಪಿಎಸ್‌ಪಿ ಬೆಂಬಲದೊಂದಿಗೆ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರೆಂದು ಬಿ.ವಿ.ಕಕ್ಕಿಲ್ಲಾಯರು ತಮ್ಮ ಆತ್ಮಕಥನದಲ್ಲಿ ಹೇಳಿದ್ದಾರೆ (ಕಕ್ಕಿಲ್ಲಾಯ 2003: 260)[149].

ಹೆಚ್ಚಿನ ಸಂದರ್ಭಗಳಲ್ಲಿ ಸ್ಪರ್ಧಿಸಿದ ಕ್ಷೇತ್ರಗಳಲ್ಲಿ ಮತ್ತು ಕೆಲವೊಮ್ಮೆ ಗೆದ್ದ ಕ್ಷೇತ್ರಗಳಲ್ಲೂ ಪುನಃ ಸ್ಪರ್ಧೆ ಮಾಡದಿರುವ ಅಂಶವನ್ನು ಕಾಣಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1978 ರವರೆಗೂ 3 ರಿಂದ 6 ಕ್ಷೇತ್ರಗಳವರೆಗೂ ಸ್ಪರ್ಧಿಸುತ್ತಿದ್ದ ಪರಿಸ್ಥಿತಿ ನಂತರ ಅದು 2 ಕ್ಷೇತ್ರಗಳಿಗಿಂತ ಹೆಚ್ಚಾಗಿಲ್ಲ. ಗುಲ್ಬರ್ಗದಲ್ಲಿ 3–4 ಕ್ಷೇತ್ರಗಳಲ್ಲಿ ನಿಲ್ಲುತ್ತಿದ್ದ ಪರಿಸ್ಥಿತಿ ಕೊನೆಗೆ 1 ಕ್ಷೇತ್ರಕ್ಕಿಂತ ಹೆಚ್ಚಾಗಿಲ್ಲ. ಕೆಲವು ಜಿಲ್ಲೆಗಳಲ್ಲಿ ಆರಂಭಿಕ ನಾಲ್ಕೈದು ಚುನಾವಣೆಗಳವರೆಗೂ ನಿಲ್ಲುತ್ತಿದ್ದ ಪರಿಸ್ಥಿತಿ 1989 ರ ವೇಳೆಗೆ ಇಲ್ಲವಾಗಿದೆ. ಉತ್ತರ ಕನ್ನಡ, ತುಮಕೂರು, ಬೀದರ್, ಬಿಜಾಪುರ, ಮೈಸೂರು, ಕೊಡಗು ಜಿಲ್ಲೆಗಳು ಇದಕ್ಕೆ ಉದಾಹರಣೆಯಾಗಿವೆ. ಚುನಾವಣಾ ಕ್ಷೇತ್ರಗಳನ್ನು ಕಟ್ಟಿ ಬೆಳೆಸುವ ವಿಧಾನದಲ್ಲಿ ಗಂಭೀರ ಸಮಸ್ಯೆ ಇರುವುದನ್ನು ಇಲ್ಲಿ ಗಮನಿಸಬಹುದು. 1957 ರ ಚುನಾವಣೆಯಲ್ಲಿ ಗುಲ್ಬರ್ಗ ಜಿಲ್ಲೆಯ ಕಾಳಗಿಯಲ್ಲಿ ಶೇ. 28.05 ಮತಗಳು ಮತ್ತು ಚಿತ್ತಾಪುರದಲ್ಲಿ ಶೇ. 28.52 ಮತಗಳು ಬಂದವು. ಇಷ್ಟೊಂದು ಗಣನೀಯ ಮತಗಳು ಬಂದ ನಂತರ ಅವುಗಳನ್ನು ಬೆಳಸದೇ ಕ್ರಮೇಣ ಕೈಬಿಟ್ಟಿರುವುದನ್ನು ಕಾಣಬಹುದು. ಅದೇ ರೀತಿಯಲ್ಲಿ ಮಡಿಕೇರಿ ಕ್ಷೇತ್ರದಲ್ಲಿ 1957 ರಲ್ಲಿ ಶೇ. 38.56 ಮತಗಳೊಂದಿಗೆ 2ನೇ ಸ್ಥಾನ ಗಳಿಸಿದ್ದರೂ ನಂತರ ಅದನ್ನು ಅಭಿವೃದ್ಧಿಪಡಿಸಲು ಆಗಿಲ್ಲ. ಹಳಿಯಾಳ ಕ್ಷೇತ್ರದಲ್ಲಿ 1972 ಮತ್ತು 1978 ರ ಸ್ಪರ್ಧೆಗಳಲ್ಲಿ ಮತಗಳು ಗಣನೀಯವಾಗಿ ಹೆಚ್ಚಳವಾದರೂ ಸಹ ಕ್ಷೇತ್ರವನ್ನು ಮುಂದುವರೆಸಲಿಲ್ಲ.

ಕೆಲವು ಕ್ಷೇತ್ರಗಳಲ್ಲಿ ಒಮ್ಮೆ ಮಾತ್ರ ಸ್ಪರ್ಧಿಸಿ ಗಣನೀಯ ಮತಗಳನ್ನು ಪಡೆದುಕೊಂಡು ನಂತರ ಸ್ಪರ್ಧೆಯೇ ಮಾಡದಿರುವುದನ್ನು ಉದಾಹರಣೆಗಳನ್ನೂ ಕಾಣಬಹುದು. 1967 ರ ಚುನಾವಣೆಯಲ್ಲಿ ಹಾವೇರಿಯಲ್ಲಿ ಶೇ. 34.49 ಮತಗಳೊಂದಿಗೆ 2ನೇ ಸ್ಥಾನವನ್ನು, 1972 ರ ಚುನಾವಣೆಯಲ್ಲಿ ಸಿಂಧನೂರು ಕ್ಷೇತ್ರದಲ್ಲಿ ಶೇ. 41.46

ಮತಗಳೊಂದಿಗೆ 2ನೇ ಸ್ಥಾನವನ್ನು, ತೀರ್ಥಹಳ್ಳಿ ಕ್ಷೇತ್ರದಲ್ಲಿ[150] ಶೇ.29.14 ಮತಗಳೊಂದಿಗೆ 3ನೇ ಸ್ಥಾನವನ್ನು ಪಡೆದುಕೊಂಡರೂ, ಮುಂದಿನ ಚುನಾವಣೆಯಲ್ಲಿ ಅಲ್ಲಿ ಸ್ಪರ್ಧೆಯೇ ಮಾಡಿಲ್ಲ.

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾಲಿಗೆ ಚುನಾವಣಾ ಹೊಂದಾಣಿಕೆ ಅಥವಾ ಮೈತ್ರಿ ರಾಜಕೀಯವು ಜನತಾ ಪಕ್ಷದ ಪ್ರಯೋಗದ ನಂತರ ಬಂದದ್ದಲ್ಲ. ಇದುವರೆಗೆ ಕಮ್ಯುನಿಸ್ಟ್ ಪಕ್ಷಗಳು ಗೆದ್ದಿರುವ ಕ್ಷೇತ್ರಗಳನ್ನು ತೆಗೆದುಕೊಂಡರೆ ಅದರಲ್ಲಿ ಮೂರು ಹಂತಗಳನ್ನು ಕಾಣಬಹುದು. ವಿಭಜನಾ ಪೂರ್ವ ಘಟ್ಟದಲ್ಲಿ ಬಹುತೇಕ ಸ್ವತಂತ್ರ ಶಕ್ತಿ, ಹೋರಾಟಗಳು ಇತ್ಯಾದಿಗಳ ಪ್ರಭಾವದಿಂದ ಮಂಗಳೂರು ಮತ್ತು ಕೆಜಿಎಫ್‌ನಲ್ಲಿ ಗೆಲುವು ಕಂಡಿವೆ[151]. ವಿಭಜನೆಯ ನಂತರ ಸಿಪಿಐ ಕಾಂಗ್ರೆಸ್ ಜೊತೆಗಿನ ಹೊಂದಾಣಿಕೆ ಅಥವಾ ಮೈತ್ರಿಯ ಕಾರಣಕ್ಕಾಗಿ ಕೆಲವು ಕ್ಷೇತ್ರಗಳಲ್ಲಿ ಜಯಶಾಲಿಯಾಗಿದೆ. ದಾವಣಗೆರೆಯಲ್ಲಿ ಬಹುತೇಕ ಸ್ವತಂತ್ರ ಶಕ್ತಿ ಮತ್ತು ಪ್ರಭಾವಗಳಿಂದ ಗೆಲುವು ದೊರೆತಿದೆ. 1978 ರ ನಂತರದಲ್ಲಿ ಎರಡೂ ಪಕ್ಷಗಳು ಕಾಂಗ್ರೆಸ್ ಮತ್ತು ಬಿಜೆಪಿ ವಿರೋಧಿ ನೆಲೆಗಟ್ಟಿನಲ್ಲಿ ಜನತಾ/ದಳ ಪಕ್ಷದೊಂದಿಗೆ ಬಹುತೇಕ ಸಂದರ್ಭಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಗೆಲುವನ್ನು ಪಡೆದಿವೆ. ಉದಾರೀಕರಣೋತ್ತರ ಕಾಲಘಟ್ಟದಲ್ಲೂ ಇದೇ ಪರಿಸ್ಥಿತಿ ಮುಂದುವರೆದಿದೆ. ಹೊಂದಾಣಿಕೆ ರಾಜಕಾರಣದಿಂದಾಗಿ ಗೆದ್ದ ಕ್ಷೇತ್ರಗಳನ್ನು ಬಿಟ್ಟುಕೊಡುವ ಪ್ರಸಂಗಗಳೂ ಸಹ ಕಮ್ಯುನಿಸ್ಟ್ ಪಕ್ಷಗಳು ನಿರ್ದಿಷ್ಟ ಕ್ಷೇತ್ರಗಳನ್ನು ಮುಂದುವರೆಸಲು ಆಗದಿರುವುದಕ್ಕೆ ಕಾರಣವಾಗಿವೆ. 1994 ಮತ್ತು 2004 ರಲ್ಲಿ ಬಾಗೇಪಲ್ಲಿಯಲ್ಲಿ ಸ್ಥಾನ ಹೊಂದಾಣಿಕೆಯಿಂದ ಗೆದ್ದಿರುವುದನ್ನು ಬಿಟ್ಟರೆ ಬೇರೆಲ್ಲೂ ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳು ಗೆಲ್ಲಲಾಗಿಲ್ಲ.

ಉದಾರೀಕರಣೋತ್ತರ ಚುನಾವಣೆಗಳು ಬಂಡವಾಳದ ಮತ್ತು ಅಸ್ಮಿತೆಗಳ ಪ್ರಭಾವಕ್ಕೆ ಹೆಚ್ಚೆಚ್ಚು ಒಳಗಾಗುತ್ತಾ ಆಳುವ ವರ್ಗಗಳ ಹೆಜಿಮನಿಯ ಬಲಿಷ್ಟ ಸಂಕೇತಗಳಾಗಿವೆ. ಜನ ಚಳುವಳಿಗಳನ್ನು ನಡೆಸುವ ಪ್ರಗತಿಪರ ಶಕ್ತಿಗಳು ಚುನಾವಣೆಗಳಲ್ಲಿ ಯಶಸ್ಸು ಸಾಧಿಸುವುದು ಅಸಾಧ್ಯ ಎಂಬಂತಾಗಿದೆ. ಕಮ್ಯುನಿಸ್ಟ್ ಪಕ್ಷಗಳಿಗೆ ಬಂಡವಾಳದ ಬೆಂಬಲ ಅನಪೇಕ್ಷಿತವೂ ಮತ್ತು ಅಸ್ಮಿತೆಗಳ ಅಂಗೀಕಾರ ಕಷ್ಟಕರವೂ ಆದ ಸನ್ನಿವೇಶ ಸೃಷ್ಟಿಯಾಗಿದೆ. ಚುನಾವಣಾ ರಾಜಕೀಯದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಶಕ್ತಿ ಮತ್ತು ಸಾಮರ್ಥ್ಯ ಹೆಚ್ಚಾಗದಿರಲು ಇದು ಪ್ರಬಲವಾದ ತೊಡಕಾಗಿದೆ. ಈ ಸಂಕ್ಲಿಷ್ಟತೆಯಿಂದ ಹೊರಬರಲು ಕಮ್ಯುನಿಸ್ಟ್ ಪಕ್ಷಗಳು ಈಗಿರುವ 'ಹೆಚ್ಚು ಮತ ಪಡೆದವರು ಗೆಲ್ಲುತ್ತಾರೆ' (First fast the post system) ಎಂಬುದಕ್ಕೆ ಬದಲಾಗಿ 'ಪ್ರಮಾಣಾತ್ಮಕ ಪ್ರಾತಿನಿಧ್ಯ' (Proportional Representation (with Partial Listing System)) ಪದ್ಧತಿ ಬರಬೇಕೆಂದು ಹೇಳುತ್ತವೆ. ಇದು ತಾತ್ವಿಕ ಮತ್ತು ರಾಜಕೀಯ ಬದಲಾವಣೆಯ ಅಂಶವನ್ನು ಪ್ರತಿಪಾದಿಸುತ್ತದೆ.

ಇದಕ್ಕೂ ಮುಖ್ಯವಾಗಿ ಇದು, ಕಮ್ಯುನಿಸ್ಟ್ ಪಕ್ಷಗಳ ರಾಜಕೀಯ–ಸಂಘಟನಾ ಸಾಮರ್ಥ್ಯದ ಪ್ರಶ್ನೆಯಾಗಿದೆ. ದುಡಿಯುವ ಜನರ ಪ್ರಶ್ನೆಗಳ ಆಧಾರದಲ್ಲಿ ನಿರಂತರವಾಗಿ ಶ್ರಮಿಸುವ ಕಮ್ಯುನಿಸ್ಟ್ ಪಕ್ಷ ಮತ್ತು ಸಮೂಹ ಸಂಘಟನಾ ವಿಧಾನಗಳಲ್ಲಿರುವ ದೋಷದ ಪ್ರಶ್ನೆಯಾಗಿದೆ. ಕಮ್ಯುನಿಸ್ಟ್ ಪಕ್ಷಗಳು ತಾವೇ ನಿವೇದಿಸಿಕೊಂಡ

ರೀತಿಯಲ್ಲಿ ಸಮೂಹಗಳ ಪ್ರಜ್ಞೆಯನ್ನು ಬಲಿಷ್ಠವಾದ ರಾಜಕೀಯ, ಸಾಮಾಜಿಕ ಪ್ರಜ್ಞೆಯನ್ನಾಗಿ ರೂಪಿಸುವಲ್ಲಿನ ದೋಷದ ಪ್ರಶ್ನೆಯಾಗಿದೆ. ಪ್ರೊ. ಬಾಬು ಮ್ಯಾಥ್ಯೂರವರು ಡಾ.ಜಾನಕಿ ನಾಯರ್ ಅವರೊಂದಿಗೆ ಚರ್ಚಿಸಿದ ಹಾಗೆ, 'ಕೈಗಾರಿಕಾ ಕಾಮಿಕರಲ್ಲಿ ಲಾಯಲ್ಟಿ ಎಂಬುದು ಕಾರ್ಮಿಕ ಸಂಘಕ್ಕಿರುತ್ತದೆ. ಅದು ಕಾರ್ಮಿಕ ಸಂಘದ ಪ್ರಜ್ಞೆಯಷ್ಟೆ. ಅಂದರೆ ಆರ್ಥಿಕವಾದ. ಇದರಲ್ಲಿ ಸೈದ್ಧಾಂತಿಕ ಆಧಾರದ ಕಮಿಟ್‌ಮೆಂಟ್‌ನ ವಿಚಾರ ಕಾಣುವುದಿಲ್ಲ. ರಾಜಕೀಯ ಪ್ರಜ್ಞೆಯಾಗಿ ಅದು ಎಂದಿಗೂ ಪರಿವರ್ತನೆ ಆಗಿಲ್ಲ. ಹೀಗಾಗಿ ಎಲ್ಲೋ ಕೆಲವೊಮ್ಮೆ ಬಿಟ್ಟರೆ ಕಮ್ಯುನಿಸ್ಟ್ ಪಕ್ಷಗಳು ಚುನಾವಣಾ ಹೊಂದಾಣಿಕೆಯಿಂದ ಮಾತ್ರ ಗೆದ್ದಿದ್ದಾವೆಯೇ ಹೊರತು ಸ್ವತಂತ್ರವಾಗಿ ಗೆಲ್ಲಲು ಆಗಿಲ್ಲ . . . ಕಾರ್ಮಿಕ ಸಂಘಗಳ (ಆರ್ಥಿಕ) ಪ್ರಜ್ಞೆಯನ್ನು ರಾಜಕೀಯ ಪ್ರಜ್ಞೆಯಾಗಿ ಪರಿವರ್ತಿಸುವ ತರಬೇತಿಗಳನ್ನು ನೀಡುವ ವಿಚಾರದಲ್ಲಿ ದೋಷವಿದೆ. ಕೆಲವೊಮ್ಮೆ ಇಂತಹ ತರಬೇತಿಗಳಲ್ಲಿ ಕಾರ್ಮಿಕರು ಕೇವಲ ಕಾರ್ಮಿಕ ಸಂಘದ ಕಮಿಟ್‌ಮೆಂಟ್‌ನ ಕಾರಣಕ್ಕೆ ಬರುತ್ತಾರೆ ಮತ್ತು ವಾಪಸ್ ಹೋಗಿ ಅಲ್ಲೇ ನಿಲ್ಲುತ್ತಾರೆ. ಇಲ್ಲಿ ಮುಂದುವರಿಸುವ ಕೊಂಡಿಯ ಸ್ಪಷ್ಟತೆ ಇರುವುದಿಲ್ಲ[152].ಸಾಮಾಜಿಕ ಬದಲಾವಣೆಯ ಆಬ್ಜೆಕ್ಟೀವ್ ಪರಿಸ್ಥಿತಿ ಅನುಕೂಲಕರವಾಗಿದ್ದರೂ ಸಬ್ಜೆಕ್ಟೀವ್ (ಸಂಘಟನಾ) ಪರಿಸ್ಥಿತಿ ಸಿದ್ಧವಾಗಿಲ್ಲವೆಂದರೆ ಚುನಾವಣೆಗಳನ್ನೂ ಸಹ ಗೆಲ್ಲಲಾಗದು ಮತ್ತು ಸಬ್ಜೆಕ್ಟೀವ್ ಪರಿಸ್ಥಿತಿಗಳು ದುಃಸ್ಥಿತಿಯಲ್ಲಿರುವುದಕ್ಕೆ ಸೂಕ್ತ ಕಾರ್ಯತಂತ್ರದ ಕೊರತೆಗಳೂ ಕಾರಣವಾಗಿವೆ ಎಂಬುದನ್ನು ಕಮ್ಯುನಿಸ್ಟ್ ಪಕ್ಷಗಳ ಚುನಾವಣಾ ಅನುಭಗಳಿಂದ ಗುರುತಿಸಬಹುದು.

ಜಾತಿ, ವರ್ಗ ಮತ್ತು ಕಮ್ಯುನಿಸ್ಟರು

ಭಾರತದ ಜಾತಿ ಮತ್ತು ವರ್ಗದ ಸಂಕಥನವು ತುಂಬಾ ವಿಶಾಲವಾದುದು. ಸಾಮಾಜಿಕ ಬದಲಾವಣೆಯು ಜಾತಿ ನೆಲೆಯದ್ದಾಗಿರಬೇಕೋ ಅಥವಾ ವರ್ಗ ನೆಲೆಯದ್ದಾಗಿರಬೇಕೋ ಎಂಬ ಚರ್ಚೆಗಳು ವ್ಯಾಪಕವಾಗಿವೆ. ಈ ಹಿನ್ನೆಲೆಯಲ್ಲಿ ಭಾರತದ ಕಮ್ಯುನಿಸ್ಟರು ಜಾತಿಯನ್ನು ಒಪ್ಪುವುದಿಲ್ಲ, ವರ್ಗವನ್ನು ಮಾತ್ರ ಪರಿಗಣಿಸಿದ್ದಾರೆ, ಅವರು ಸೃಜನಶೀಲ ಮಾರ್ಕ್ಸ್‌ವಾದಿಗಳಲ್ಲ ಎಂಬ ಆರೋಪಗಳನ್ನು ಅವರ ಮೇಲೆ ಹೊರಿಸಲಾಗಿದೆ. ಇದೇ ರೀತಿ ನಗರ ಕಾರ್ಮಿಕರು ಮತ್ತು ಗ್ರಾಮೀಣ ರೈತ–ಕಾರ್ಮಿಕರ ನಡುವಿನ ಪ್ರಶ್ನೆಗಳನ್ನು ತಪ್ಪಾಗಿ ನಿರ್ವಹಿಸಿದ್ದಾರೆ, ಆದ್ದರಿಂದ ಕಮ್ಯುನಿಸಂ ಭಾರತದ ಸನ್ನಿವೇಶಕ್ಕೆ ಒಗ್ಗುವುದಿಲ್ಲ ಎಂಬ ಅಭಿಪ್ರಾಯಗಳನ್ನೂ ಕಮ್ಯುನಿಸ್ಟರ ಮೇಲೆ ಆರೋಪಿಸಲಾಗಿದೆ. ಇವುಗಳಲ್ಲಿ ಎರಡು ವಿಧಗಳಿವೆ. ಒಂದು, ಕಮ್ಯುನಿಸ್ಟ್ ವಿರೋಧಿ ನೆಲೆಯಿಂದ ಬಂದರೆ, ಮತ್ತೊಂದು ಕಮ್ಯುನಿಸ್ಟರು ತಮ್ಮನ್ನು ರಿ–ಇನ್ವೆಂಟ್ ಮಾಡಿಕೊಳ್ಳಬೇಕು ಎಂಬ ಕಾಳಜಿಯಿಂದ ಬಂದಿವೆ.

ಕಮ್ಯುನಿಸ್ಟ್ ಪಕ್ಷವು ಆರಂಭದಿಂದಲೂ ಜಾತಿ ಅಸ್ಪೃಶ್ಯತೆ ಕುರಿತು ತನ್ನ ಅಭಿಪ್ರಾಯಗಳನ್ನು ಸೂತ್ರೀಕರಿಸುತ್ತಾ ಬಂದಿದೆ. ಆದರೆ ಕಾರ್ಯಾಚರಣೆಯಲ್ಲಿನ ಆದ್ಯತೆಗಳ ಕೊರತೆ ಎದ್ದು ಕಾಣುತ್ತದೆ. ಸಿಪಿಐ ಆರಂಭವಾದ ನಂತರ ಅದಕ್ಕೊಂದು ಕಾರ್ಯಕ್ರಮ ಎಂಬುದಾಗಿ ಮೊದಲು ರೂಪುಗೊಂಡ 1930 ರ 'ಕಾರ್ಯಾಚರಣೆಯ ವೇದಿಕೆ'ಯು, ಭಾರತ ಕಮ್ಯುನಿಸ್ಟ್ ಪಕ್ಷವು ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಜಾತಿ

ತಾರತಮ್ಯಗಳ ಸಂಪೂರ್ಣ ನಿಷೇಧಕ್ಕಾಗಿ ಹೋರಾಡುವುದಾಗಿ ಪ್ರಕಟಿಸಿತ್ತು. ಇಎಂಎಸ್‌ರವರು, ಆರ್ಥಿಕ ಶೋಷಣೆ ಮತ್ತು ಜಾತಿ ದಮನದ ವಿರುದ್ಧದ ಸಂಘರ್ಷಗಳ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸುತ್ತಾ:

> ಭಾರತವನ್ನು ಆಧುನಿಕ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಕಣ್ಣೋಟದಲ್ಲಿ ನಿರ್ಮಿಸಬೇಕಾದರೆ ಜಾತಿ ಆಧಾರಿತ ಹಿಂದೂ ಸಮಾಜ ಮತ್ತು ಅದರ ಸಂಸ್ಕೃತಿಯ ವಿರುದ್ಧ ಹೊಂದಾಣಿಕೆಯಿಲ್ಲದ ಹೋರಾಟವನ್ನು ನಡೆಸಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಭಾರತದ 'ಪ್ರಾಚೀನ' ನಾಗರೀಕತೆ ಮತ್ತು ಸಂಸ್ಕೃತಿಯ ಕೋಟೆಯಾಗಿರುವ ಜಾತಿಗಳ ಶ್ರೇಣೀಕೃತ ಸಮಾಜದ ವಿಭಜನೆಯನ್ನು ನಾಶ ಮಾಡದೆ, ಜಾತ್ಯಾತೀತ ಪ್ರಜಾಪ್ರಭುತ್ವದ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಇನ್ನು ಸಮಾಜವಾದ ದೂರದ ಮಾತು. ಅಂದರೆ, ಕ್ರಾಂತಿಕಾರಿ ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿನ ಹೋರಾಟವನ್ನು ಜಾತಿ ಸಮಾಜದ ವಿರುದ್ಧದ ಹೋರಾಟದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ(ಬಂಡೋಪಾಧ್ಯಾಯ 2002: 347)

ಎಂದು ಹೇಳಿದರು. ಬಿ.ಟಿ.ರಣದಿವೆಯವರು ತಮ್ಮ ಕ್ಲಾಸ್, ಕ್ಯಾಸ್ಟ್ ಅಂಡ್ ಪ್ರಾಪರ್ಟಿ ರಿಲೇಷನ್ಸ್ ಕೃತಿಯಲ್ಲಿ, ಶ್ರಮಜೀವಿ ವಿಭಾಗಗಳಲ್ಲಿ ಬಲಿಷ್ಠವಾದ ಜಾತಿ–ವಿರೋಧಿ ಭಾವನೆಯನ್ನು ಬಿತ್ತುವ ಮೂಲಕ ಜಾತಿ ಮತ್ತು ಅಸ್ಪೃಶ್ಯತೆಯ ಸವಾಲನ್ನು ಎದುರಿಸಬೇಕೆಂದು ಮತ್ತು ಆಗ ಮಾತ್ರ ಸಂಘಟಿತ ಬೃಹತ್ ಶ್ರಮಜೀವಿ ಶಕ್ತಿಯು, ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಜೀತಗಾರಿಕೆಯನ್ನು ತೊಡೆದು ಹಾಕುವ ಕಾರ್ಷಿಕ ಕ್ರಾಂತಿಯನ್ನು[153] ಸಾಧಿಸಲು ಸಾಧ್ಯವಾಗುತ್ತದೆ ಎಂದಿದ್ದರು (ರಣದಿವೆ, ಇಪಿಡಬ್ಲ್ಯು: 1979 ಫೆಬ್ರವರಿ).

ಡಾ.ಬಿ.ಆರ್.ಅಂಬೇಡ್ಕರ್ ಅವರ ಜೊತೆಗಾರರಾಗಿದ್ದ ಆರ್.ಬಿ.ಮೋರೆ[154]ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದರು. 1945 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಸಭೆಯಲ್ಲಿ, ಭಾರತದ ಕೈಗಾರಿಕೆಗಳಲ್ಲಿ, ಮುಖ್ಯವಾಗಿ ಜವಳಿ ಕೈಗಾರಿಕೆಗಳಲ್ಲಿ, ದಲಿತ ಕಾರ್ಮಿಕರಿಗೆ ಅಗುತ್ತಿರುವ ಜಾತಿ ತಾರತಮ್ಯಗಳು ಮತ್ತು ಕೀಳಾಗಿ ಕಾಣುತ್ತಿರುವ ಬಗ್ಗೆ ಮೊದಲ ಬಾರಿಗೆ ಧ್ವನಿಯೆತ್ತಿದ್ದರು. ಈ ಕಾರಣಕ್ಕಾಗಿ ಮೋರೆಯವರನ್ನು ಸಿಪಿಐ ಮತ್ತು ಅಂಬೇಡ್ಕರ್ ಅವರ ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ ಬಾಂಬೆಯಲ್ಲಿ ಸನ್ಮಾನ ಮಾಡಿದ್ದವು. 1953 ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನಕ್ಕೆ ಪೂರ್ವದಲ್ಲಿ, ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಒಂದು ಟಿಪ್ಪಣಿಯನ್ನು ಸಿಪಿಐ ನಾಯಕತ್ವಕ್ಕೆ ಕಳುಹಿಸಿದ್ದರು. ಈ ಟಿಪ್ಪಣಿಯನ್ನು ಸಿಪಿಐನ ಎಲ್ಲಾ ರಾಜ್ಯ ಸಮಿತಿಗಳಿಗೆ ಕಳುಹಿಸಿ ಅಭಿಪ್ರಾಯಗಳನ್ನು ಕೇಳಿತ್ತು. ನಂತರ ಇದನ್ನು 1957 ಮತ್ತು 1964 ರಲ್ಲಿ ಪರಿಷ್ಕರಿಸಿ ಕೊಟ್ಟರು. ಜಾತಿ ಮತ್ತು ಸಾಮಾಜಿಕ ದಮನದ ಪ್ರಶ್ನೆಗಳನ್ನು ವರ್ಗ ಹೋರಾಟದ ಭಾಗವಾಗಿ ತೆಗೆದುಕೊಳ್ಳಬೇಕಾದ ಅಗತ್ಯದ ಬಗ್ಗೆ ಒತ್ತನ್ನು ನೀಡಿದರು ಮತ್ತು ಈ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಸಕಾರಾತ್ಮಕ ಕೊಡುಗೆಗಳ ಬಗ್ಗೆ ಸಮತೋಲಿತವಾದ ಅಂದಾಜು ಮಾಡಿದರು. ಮೋರೆಯವರ ಪ್ರಾಮಾಣಿಕವಾದ, ಸಿದ್ಧಾಂತ ಮತ್ತು ಆಚರಣೆಗಳ ಸಮ್ಮಿಲನದ ನಿಲುವುಗಳಿಂದಾಗಿ ಮಹಾರಾಷ್ಟ್ರದ ಹಲವಾರು ಪ್ರಮುಖ ದಲಿತ ಮುಖಂಡರು ಸಿಪಿಐ ಸೇರಿದರು[155].

ಈ ರೀತಿಯಾಗಿ, ಕಮ್ಯುನಿಸ್ಟರು ಆರಂಭದಿಂದಲೂ ಜಾತಿ ಪ್ರಶ್ನೆಯನ್ನು ಭಾರತದ ವಿಶಿಷ್ಟ ಸಾಮಾಜಿಕ ಬೆಳವಣಿಗೆಯಾಗಿ ಪರಿಗಣಿಸಿರುವುದನ್ನು, ಜಾತಿ ಮತ್ತು ವರ್ಗದ ಸಮಸ್ಯೆಯನ್ನು ಸಮಗ್ರೀಕರಿಸಿ ನೋಡುತ್ತಾ ಬಂದಿರುವುದನ್ನು ಇವುಗಳಿಂದ ತಿಳಿಯಬಹುದು. ಆದರೆ ಈ ತಿಳುವಳಿಕೆಯನ್ನು ಭಾರತದ ಸಮಕಾಲೀನ ಸಂದರ್ಭಕ್ಕೆ ಅನ್ವಯ ಮಾಡುವುದರಲ್ಲಿ ಮತ್ತು ಆರ್ಥಿಕ ಹೋರಾಟಗಳಿಗೆ ಅನುರೂಪವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟಗಳ ಚರಿತ್ರೆಯಲ್ಲಿ ಇದು ಪ್ರತಿಬಿಂಬಿಸುವುದಿಲ್ಲ. ಕೇರಳದಲ್ಲಿ ನಡೆದ ವೈಕೊಂ ಸತ್ಯಾಗ್ರಹ, ಗುರುವಾಯೂರು ದೇವಸ್ಥಾನ ಪ್ರವೇಶ, ಪಳಿಯಂ ಸತ್ಯಾಗ್ರಹ, ಸಾಮಾಜಿಕ ಸುಧಾರಕ ನಾರಾಯಣ ಗುರುಗಳ ಚಿಂತನೆಗಳಿಗೆ ಪೂರಕವಾದ ಚಟುವಟಿಕೆಗಳು, ಹಿಂದುಳಿದ ಈಳವ ಜಾತಿಗಳ ಮೇಲಾಗುತ್ತಿದ್ದ ದಬ್ಬಾಳಿಕೆಗಳ ವಿರುದ್ಧ ಚಳುವಳಿಗಳು ಮತ್ತು ಇಂತಹ ಇನ್ನೂ ಹಲವು ಹೋರಾಟಗಳು, ಆರ್ಥಿಕ ಹೋರಾಟಗಳ ಜೊತೆಯಲ್ಲೇ ನಡೆದಿರುವುದನ್ನು ಕಾಣಬಹುದು. ಮಲಬಾರ್ ಪ್ರದೇಶದಲ್ಲಿ ಅಯ್ಯಂಕಾಳಿ ನೇತೃತ್ವದ ಜಾತಿ–ವಿರೋಧಿ ಚಳುವಳಿಗಳು, ಇಂತಹ ಸಾಮಾಜಿಕ ಸುಧಾರಣಾ ಚಳುವಳಿಗಳ ಪ್ರಭಾವದಿಂದ ಕಮ್ಯುನಿಸ್ಟ್ ಚಳುವಳಿ ಬೆಳವಣಿಗೆಯಾಗಲು ಸಹಾಯವಾಯಿತು[156].ಕರ್ನಾಟಕದಲ್ಲಿ ದೇವರಾಜ ಅರಸರ ಸರ್ಕಾರ ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡುವುದಕ್ಕೆ ಕೆಲವು ದಶಕಗಳ ಹಿಂದಿನಿಂದಲೇ ಕಮ್ಯುನಿಸ್ಟರು ಮಲ ಹೊರುವುದನ್ನು ನಿಷೇಧಿಸಬೇಕೆಂದು ಮಂಗಳೂರು, ಬೆಳಗಾಂ, ಬಿಜಾಪುರ ಮುಂತಾದ ಕಡೆಗಳಲ್ಲಿ ಹೋರಾಟ ನಡೆಸಿದ್ದರೂ, ಇದು ವ್ಯವಸ್ಥಿತ ಮತ್ತು ಸಂಘಟಿತ ಪ್ರಯತ್ನವಾಗಿ ಕಾಣುವುದಿಲ್ಲ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಜಾತಿ ದಮನದ ವಿರುದ್ಧ ಸ್ಪಷ್ಟ ತಿಳುವಳಿಕೆಯಿದ್ದರೂ, ಅವುಗಳನ್ನು ದೇಶವ್ಯಾಪಿ ಪ್ರಾಯೋಗಿಕವಾಗಿ ಜಾರಿಗೊಳಿಸುವ ಮತ್ತು ಪ್ರಸಕ್ತ ಬಂಡವಾಳಶಾಹಿ ಬೆಳವಣಿಗೆಯ ಸಂದರ್ಭಕ್ಕೆ ಸಮಕಾಲೀನಗೊಳಿಸುವ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳಿಗೆ 1990 ರ ದಶಕದವರೆಗೂ ಕ್ರಿಯಾಶೀಲತೆ ಇರಲಿಲ್ಲ. ಅಖಿಲ ಭಾರತ ಮಟ್ಟದಲ್ಲಿ ಜಾತಿ ದಮನದ ವಿಚಾರದಲ್ಲಿ ಚಳುವಳಿಗಳನ್ನು ನಡೆಸಲಿಲ್ಲ ಮತ್ತು ಜಾತಿ ಅಸ್ತಿತ್ವದ ಆರ್ಥಿಕ ಬೆನ್ನೆಲುಬೆಂದು ಹೇಳಲಾಗುವ ಊಳಿಗಮಾನ್ಯ ಭೂ ಸಂಬಂಧಗಳ ನಾಶದ ಬಗ್ಗೆಯೂ ದೇಶವ್ಯಾಪಿ ಚಳುವಳಿಗಳನ್ನು ಸಂಘಟಿಸಲು ಸಾಧ್ಯವಾಗಲಿಲ್ಲ[157].ಮತ್ತೊಂದು ವಿಚಾರವೆಂದರೆ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಭಾರತದಲ್ಲಿ ಕ್ರಾಂತಿ ಹತ್ತಿರದಲ್ಲೇ ಸಂಭವಿಸಲಿದೆ, ಆಗ ಶ್ರಮಜೀವಿಗಳ ಪ್ರಭುತ್ವ ಜಾತಿ ವ್ಯವಸ್ಥೆಯನ್ನು ಕಿತ್ತು ಹಾಕಲು ಸುಲಭವಾಗುತ್ತದೆ ಎಂಬ ನಂಬಿಕೆಯೂ ಹೆಚ್ಚಿನ ಕಮ್ಯುನಿಸ್ಟರಲ್ಲಿ ಇತ್ತು. ಜಾತಿ ದಮನದ ವಿರುದ್ಧದ ಸಮತಳಿಯ ಹೋರಾಟವನ್ನು ಇದು ಮಸುಕುಗೊಳಿಸಿತ್ತು. ಜಾತಿ ತಾರತಮ್ಯದ ವಿರುದ್ಧ ಬಿಡಿ ಬಿಡಿ ಪ್ರತಿಕ್ರಿಯೆಗಳನ್ನು ನೀಡಲಾಗುತ್ತಿತ್ತೇ ವಿನಹ ಸಮಗ್ರವಾದ ಪರಿಹಾರದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು ರೂಪುಗೊಳ್ಳಲಿಲ್ಲ.

ಎಲ್‌ಪಿಜಿ ಕಾಲಘಟ್ಟದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ಜಾತಿ ವ್ಯವಸ್ಥೆಯನ್ನು 'ವರ್ಗ'ದಿಂದ ಪ್ರತ್ಯೇಕಿಸಿ 'ಆಧುನಿಕೋತ್ತರವಾದ'ದ 'ಐಡೆಂಟಿಟಿ ರಾಜಕಾರಣ'ವನ್ನಾಗಿಸಿದೆ. ಅಸ್ಮಿತೆಯ ಪ್ರಶ್ನೆಯು ಜಾತಿ, ಸಂಸ್ಕೃತಿ, ಭಾಷೆ ಆಧಾರಿತ ಪ್ರತ್ಯೇಕತೆಯನ್ನು ಸೃಷ್ಟಿಸುತ್ತಿದೆ. ಕಮ್ಯುನಿಸ್ಟ್ ಚಳುವಳಿಗೆ ತೊಡರುಗಾಲಾಗಿರುವ ಈ ಬೆಳವಣಿಗೆಯು,

ಜಾತಿ ರಾಜಕಾರಣದ 'ಹೆಜಮನಿ'ಯಾಗುತ್ತಿದ್ದು, ಜಾತಿ ದಮನಿತರನ್ನು ಶೋಷಿಸುವ ಅಸ್ತ್ರವಾಗುತ್ತಿದೆ. ಜಾತಿ ದಮನ, ಅಸ್ಪೃಶ್ಯತೆಯ ವಿರುದ್ಧ ಜನ ಸಮೂಹಗಳನ್ನು ಅಣಿನೆರೆಸುವ ಮತ್ತು ವರ್ಗ ಪ್ರಶ್ನೆಗಳ ಜೊತೆಯಲ್ಲಿ ಅದನ್ನು ಸಮತೋಲಿಸಿ ಬಹಿರಂಗ ಮತ್ತು ವ್ಯಾಪಕ ಚಳುವಳಿಗಳನ್ನು ಸಂಘಟಿಸುವ 'ಸಬ್ಜೆಕ್ಟೀವ್' ಸವಾಲು ಕಮ್ಯುನಿಸ್ಟ್ ಪಕ್ಷಗಳ ಮುಂದಿದೆ. ಹಾಗೆ ಮಾಡುವಾಗ ಪ್ರಭಾತ್ ಪಟ್ನಾಯಕ್ ಅವರು ಹೇಳಿರುವ:

> ಜಾತಿ ದಮನದ ವಾಸ್ತವವು ಅಸ್ಥಿತ್ವದಲ್ಲಿರುವ ವಿದ್ಯಮಾನವಾಗಿದೆ. ಈಗಿರುವ ವ್ಯವಸ್ಥೆಯೊಳಗೇ ಅದನ್ನು ಬದಲಾಯಿಸಿ, ವರ್ಗ ಶೋಷಣೆ ಮಾತ್ರ ಹಾಗೇ ಇದ್ದು ಜಾತಿ ದಮನ ಪೂರ್ತಿ ಕಣ್ಮರೆಯಾದ ಒಂದು ಪರ್ಯಾಯ ವಾಸ್ತವವನ್ನು ತರುವುದು ಕಷ್ಟದ ವಿಚಾರ. ಜಾತಿ ದಮನವನ್ನು ಕೊನೆಗೊಳಿಸಬೇಕೆಂದು ಹೋರಾಡುತ್ತಿರುವವರು, ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿ ಮುಂದೋಗದಿದ್ದರೆ (transcendence of capitalist system) ಗೆಲುವನ್ನು ಸಾಧಿಸಲು ಸಾಧ್ಯವಿಲ್ಲ. ಇಂತಹ ಒಂದು ಬದಲಾವಣೆ ಜಾತಿ ದಮನವನ್ನು ಕೊನೆಗೊಳಿಸಲು ಸಾಕಾಗುವ ಅಂಶವಲ್ಲ ಎಂಬುದು ನಿಜ, ಆದರೆ ಅದೊಂದು ಅನಿವಾರ್ಯ ಅಂಶ . . . ಹೀಗಾಗಿ ಯಾರೇ ಆಗಲೀ ಸಂಪೂರ್ಣವಾಗಿ ಜಾತಿ ಕಣ್ಣೋಟದ ಚೌಕಟ್ಟಿನೊಳಗೇ ಉಳಿದರೆ, ಅವರು ಜಾತಿ ದಮನದಿಂದ ಯಶಸ್ವಿಯಾಗಿ ಹೊರಬರಲು ಎಂದಿಗೂ ಸಾಧ್ಯವಿಲ್ಲ . . . ಅಂದರೆ ಈಗಿನ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸುವ ಸಮಗ್ರ ಚೌಕಟ್ಟಿನೊಳಗೆ ವರ್ಗದ ಪ್ರಶ್ನೆಯನ್ನೂ ಮತ್ತು ಜಾತಿ ದಮನದ ಪ್ರಶ್ನೆಯನ್ನೂ ತರಬೇಕು (ಪ್ರಭಾತ್ ಪಟ್ನಾಯಕ್ 2017 ಮಾರ್ಕ್ಸಿಸ್ಟ್)

ಎಂಬುದನ್ನು ಗಮನಿಸಬೇಕು.

ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷಗಳ **ನಾಯಕತ್ವ ಮೇಲ್ಜಾತಿ ಸ್ವರೂಪ**ದ್ದಾಗಿದೆ ಮತ್ತು ಅದರಿಂದಾಗಿ ಜಾತಿ ದಮನದ ವಿರುದ್ಧ ಹೋರಾಟಗಳನ್ನು ಸಂಘಟಿಸುವ ಅಂಶವು ದುರ್ಬಲವಾಗಿದೆ ಎಂಬ ಅಭಿಪ್ರಾಯವಿದೆ. ರಾಜಕೀಯ ಪಕ್ಷಗಳ ನಾಯಕತ್ವದಲ್ಲಿ ವೈವಿಧ್ಯತೆಯ ಕೊರತೆಯ ಕುರಿತು ರುಕ್ಮಿಣಿಯವರ ಅಧ್ಯಯನವು, ಸಿಪಿಐ ಮತ್ತು ಸಿಪಿಐ(ಎಂ) ಕಮ್ಯುನಿಸ್ಟ್ ಪಕ್ಷಗಳ ಅಖಿಲ ಭಾರತ ನಾಯಕತ್ವಕ್ಕೆ ಸಂಬಂಧಿಸಿ ಧರ್ಮ, ಜಾತಿ ಮತ್ತು ಮಹಿಳಾ ಪ್ರಾತಿನಿಧ್ಯದ ಕುರಿತು ಈ ರೀತಿ ಹೇಳಿದೆ:

> ಧಾರ್ಮಿಕ ಹಿನ್ನೆಲೆಗೆ ಸಂಬಂಧಿಸಿ, ಸಿಪಿಐ(ಎಂ)ನಲ್ಲಿ ಹಿಂದುಗಳು ಶೇ. 81, ಮುಸ್ಲಿಮರು ಶೇ. 13, ಕ್ರಿಶ್ಚಿಯನ್ನರು ಶೇ. 6 ರಷ್ಟಿದ್ದರೆ, ಸಿಪಿಐನಲ್ಲಿ ಹಿಂದುಗಳು ಶೇ. 78, ಮುಸ್ಲಿಮರು ಶೇ. 13, ಕ್ರಿಶ್ಚಿಯನ್ನರು ಶೇ. 3 ಮತ್ತು ಇತರರು ಶೇ. 6 ರಷ್ಟಿದ್ದಾರೆ.
>
> ಜಾತಿ ಹಿನ್ನೆಲೆಗೆ ಸಂಬಂಧಿಸಿ,ಸಿಪಿಐ(ಎಂ)ನಲ್ಲಿ ಮೇಲ್ಜಾತಿಗಳು ಶೇ. 85, ಓಬಿಸಿ ಶೇ. 15, **ಎಸ್‌ಸಿ ಶೇ. 0, ಮತ್ತು ಎಸ್‌ಟಿ ಶೇ. 0 ಯಷ್ಟಿದ್ದಾರೆ. ಸಿಪಿಐನಲ್ಲಿ ಮೇಲ್ಜಾತಿಗಳು ಶೇ.** 76, ಓಬಿಸಿ ಶೇ. 20, ಎಸ್‌ಸಿ ಶೇ. 4 ಮತ್ತು ಎಸ್‌ಟಿ ಶೇ. 0 ರಷ್ಟಿದ್ದಾರೆ.
>
> ಮಹಿಳೆಯರ ಪ್ರಾತಿನಿಧ್ಯಕ್ಕೆಸಂಬಂಧಿಸಿ,ಸಿಪಿಐ(ಎಂ)ನಲ್ಲಿ ಶೇ. 6 ರಷ್ಟು ಮಹಿಳೆಯರಿದ್ದರೆ, ಸಿಪಿಐನಲ್ಲೂ ಶೇ. 6 ರಷ್ಟು ಮಹಿಳೆಯರಿದ್ದಾರೆ[158].

ಮೇಲ್ನೋಟದಲ್ಲೇ ಸ್ಪಷ್ಟವಾಗಿ ಎರಡು ಕಮ್ಯುನಿಸ್ಟ್ ಪಕ್ಷಗಳಲ್ಲೂ ಹಿಂದೂ, ಮೇಲ್ಜಾತಿ ಮತ್ತು ಪುರುಷರ ಪ್ರಾತಿನಿಧ್ಯ ಅತಿ ಹೆಚ್ಚಾಗಿದೆ ಎಂಬುದನ್ನು ಇದು ತಿಳಿಸುತ್ತದೆ. ರಾಜ್ಯಗಳ ಮಟ್ಟದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಅಖಿಲ ಭಾರತ ಮಟ್ಟಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಸಂಪೂರ್ಣವಾಗಿ ಭಿನ್ನವಾದ ಪರಿಸ್ಥಿತಿಗಳಿವೆ. ರಾಷ್ಟ್ರೀಯ ಮಟ್ಟದಲ್ಲಿ ಸುಧಾರಣೆಯಾಗಬೇಕಾದ ಅಗತ್ಯವನ್ನು ಇದು ಹೇಳುತ್ತದೆ. ಭಾರತದಲ್ಲಿ ವಸಾಹತು ವಿರೋಧಿ ಹೋರಾಟಗಳು, ಸಾಮಾಜಿಕ ಸುಧಾರಣಾ ಹೋರಾಟಗಳು ಇತ್ಯಾದಿಗಳಲ್ಲಿ ಪ್ರಧಾನವಾಗಿ ಇಂಗ್ಲಿಷ್ ಶಿಕ್ಷಣ ಪಡೆದ ಮೊದಲ ತಲೆಮಾರಿನ ಮೇಲ್ಜಾತಿ ಜನರೇ ಮುಂಚೂಣಿಯಲ್ಲಿದ್ದರು. ಕಮ್ಯುನಿಸ್ಟ್ ಚಳುವಳಿಯು ಇದಕ್ಕೆ ಹೊರತಾಗಿರಲಿಲ್ಲ. ಆದರೆ ಸ್ವಾತಂತ್ರ್ಯ-ಪೂರ್ವ ಭಾರತದಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಮರು ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು. ದೇಶ ವಿಭಜನೆಯ ನಂತರದಲ್ಲಿ ಈ ಸಂಖ್ಯೆಯಲ್ಲಿ ಇಳಿಕೆಯಾಯಿತು.

ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಆರಂಭಿಕ ಹೋರಾಟಗಳು, ಕಯ್ಯೂರು ಬಂಡಾಯ, ವಾರ್ಲಿ ಆದಿವಾಸಿಗಳ ಹೋರಾಟ, ತೆಲಂಗಾಣ ಸಶಸ್ತ್ರ ರೈತರ ಹೋರಾಟ, ತೇಭಾಗ ಚಳುವಳಿ, ತ್ರಿಪುರ ಬುಡಕಟ್ಟು ಜನರ ಹೋರಾಟ ಮುಂತಾದ ಎಲ್ಲಾ ಹೋರಾಟಗಳೂ ದಲಿತ-ಹಿಂದುಳಿದ ಜಾತಿಗಳ, ಆದಿವಾಸಿ ಬುಡಕಟ್ಟುಗಳ, ಮುಸ್ಲಿಂ ರೈತರನ್ನು ಮತ್ತು ಭೂಹೀನರನ್ನು ಒಳಗೊಂಡ ಹೋರಾಟಗಳೇ ಆಗಿದ್ದವು. ಕಮ್ಯುನಿಸ್ಟರ ಯಾವುದೇ ಹೋರಾಟಗಳೂ ಒಂದು ಧಾರ್ಮಿಕ ಪಂಥಕ್ಕೆ ಅಥವಾ ಹಿಂದೂ ಮೇಲ್ಜಾತಿಗಳಿಗೆ ವಿಶೇಷವಾಗಿ ಅನುಕೂಲವಾಗುವ ಹೋರಾಟಗಳಾಗಿರಲಿಲ್ಲ. ಕರ್ನಾಟಕದಲ್ಲಿ ಉದಾಹರಣೆಗೆ, ತೀರ್ಥಹಳ್ಳಿಯಲ್ಲಿ 60 ಮತ್ತು 70 ರ ದಶಕದಲ್ಲಿ ಕಮ್ಯುನಿಸ್ಟ್ ಚಳುವಳಿ ಏರುಮುಖದಲ್ಲಿತ್ತು. ಗೇಣಿದಾರರ ಪ್ರಶ್ನೆಗಳು ಮತ್ತಿತರ ಪ್ರಶ್ನೆಗಳಲ್ಲಿ ಹೆಚ್ಚಾಗಿ ಭಾದಿತರಾಗಿದ್ದವರು ಹಿಂದುಳಿದ ಜಾತಿಯ ದೀವರು. ಆದರೆ ಅಲ್ಲಿನ ನಾಯಕತ್ವದಲ್ಲಿ ಇದ್ದವರು ಒಕ್ಕಲಿಗರು. ಪ್ರಜ್ಞಾಪೂರ್ವಕವಾಗಿ ಈ ರೀತಿಯಾಗಿದೆ ಎಂದು ಹೇಳಲಾಗದು. ಆದರೆ ಚಳುವಳಿಯ ಪರಿಣಾಮವನ್ನು ದೀರ್ಘಕಾಲ ಹಿಡಿದಿಟ್ಟುಕೊಳ್ಳಲು ಇದೂ ಒಂದು ಕೊರತೆಯಾಗಿರಬಹುದು[159].ಈ ಪ್ರಕ್ರಿಯೆಯಲ್ಲಿ ಇನ್ನೊಂದು ವೈರುಧ್ಯವನ್ನೂ ಸಹ ಗಮನಿಸಬಹುದು. ನಿರ್ದಿಷ್ಟ ವರ್ಗದ ಪ್ರಶ್ನೆಗಳಿಗಾಗಿ ಚಳುವಳಿಗಳನ್ನು ನಡೆಸುವಾಗ ನಾಯಕತ್ವವನ್ನು ಮೇಲ್ಜಾತಿ ಮತ್ತು ಮೇಲ್‌ವರ್ಗಗಳು ಹೊಂದಿದ್ದಾಗ ಅಣಿನೆರೆಸುವಿಕೆಯ ಸ್ವರೂಪ ಭಿನ್ನವಾಗಿದೆ. ಉದಾಹರಣೆಗೆ, ಕೊಡಗು ಜಿಲ್ಲೆಯಲ್ಲಿ ಆರಂಭಿಕ ನಾಯಕರು ಬಹುತೇಕ (ಸಣ್ಣ-ಮಧ್ಯಮ) ಪ್ಲಾಂಟರ್‌ಗಳಾಗಿದ್ದರು. ಆಗ ಅಣಿನೆರೆಸುವಿಕೆ ಹೆಚ್ಚಾಗಿರುತ್ತಿತ್ತು. ಈಗಿನ ನಾಯಕರು ಬಹುತೇಕ ತೀರಾ ಕೆಳವರ್ಗದವರು. ಈಗ ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಅಣಿನೆರೆಸಲು ಕಮ್ಯುನಿಸ್ಟ್ ಪಕ್ಷಗಳಿಗೆ ಆಗುತ್ತಿಲ್ಲ[160].ಇಲ್ಲಿ ಕೆಳ ಜಾತಿ ಮತ್ತು ಕೆಳ ವರ್ಗದ ನಾಯಕತ್ವವನ್ನು ಅಂಗೀಕರಿಸದ, ಕೆಳ ಮಟ್ಟದ ಪ್ರಜ್ಞೆ ಅಧಿಪತ್ಯ ಹೊಂದಿರುವುದನ್ನು ಕಾಣಬಹುದು. ಇಂತಹುದೇ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿಯೂ ಕಾಣಬಹುದು. ಆರಂಭಿಕ ಬಹುತೇಕ ಕಮ್ಯುನಿಸ್ಟ್ ನಾಯಕರು (ಕೆಜಿಎಫ್ ಹೊರತುಪಡಿಸಿ) ಸಾಮಾಜಿಕವಾಗಿ ಜಮೀನ್ದಾರಿ ವರ್ಗ ಮತ್ತು ಜಾತಿ ಹಿನ್ನೆಲೆಯಲ್ಲಿ ಬ್ರಾಹ್ಮಣ ಮತ್ತು ಒಕ್ಕಲಿಗ/ರೆಡ್ಡಿಗಳಾಗಿದ್ದರು. ಅವರಲ್ಲಿ ಹೆಚ್ಚಿನವರು ಗಾಂಧಿಯ ಸರಳ ಜೀವನ ವಿಧಾನಗಳಿಂದ ಪ್ರಭಾವಿತರಾದವರು. ಚಿಂತಾಮಣಿಯಿಂದ ಎರಡು ಬಾರಿ ಶಾಸಕರಾಗಿದ್ದ ಗಂಗಿರೆಡ್ಡಿ ಮತ್ತು

ಬಾಗೇಪಲ್ಲಿಯಿಂದ ಶಾಸಕರಾಗಿದ್ದ ಅಪ್ಪಸ್ವಾಮಿರೆಡ್ಡಿ ಕೊನೆಯವರೆಗೂ ಬಸ್ಸಿನಲ್ಲಿ ಓಡಾಡುತ್ತಿದ್ದರು. ಉಳಿದ ಆರಂಭಿಕ ನಾಯಕರೂ ಸಹ ಸರಳ ಮಾದರಿಗಳನ್ನು ಜನರ ಮುಂದಿಟ್ಟಿದ್ದರು. ಅದೇ ರೀತಿ ಅವರು ಪ್ರಜ್ಞಾಪೂರ್ವಕವಾಗಿ ಜಾತಿ ಆಯಾಮದಿಂದ ನೋಡುವ ಸಾಧ್ಯತೆ ಇರಲಿಲ್ಲ. ಹೀಗಾಗಿ ದಲಿತ ಜಾತಿಗಳು ಹೆಚ್ಚಾಗಿರುವ ಕೋಲಾರ ಜಿಲ್ಲೆಯಲ್ಲಿ ಇತ್ತೀಚಿನವರೆಗೂ ಆ ಜಾತಿಗಳಿಂದ ನಾಯಕತ್ವ ಬೆಳೆದು ಬಂದಿರಲಿಲ್ಲ. ಇದು ಜಾತಿ ಪ್ರಶ್ನೆ ಹೇಗೋ ಹಾಗೇ ವರ್ಗದ ಪ್ರಶ್ನೆಯೂ ಆಗಿದೆ[161].ಕಮ್ಯುನಿಸ್ಟ್ ಪಕ್ಷದೊಳಗೆ ಸಂಖ್ಯಾ ದೃಷ್ಟಿಯಿಂದಲಾದರೂ ಮೇಲ್ಜಾತಿಗಳ ಸಂಖ್ಯೆ ಮತ್ತು ಮಹತ್ವ ಕಡಿಮೆಯಾಗಬೇಕೆಂದು ಯಾರಾದರೂ ಪ್ರಶ್ನಿಸಿದ್ದಾರೆಯೇ ಎಂಬುದಕ್ಕೆ ಸಾಕಷ್ಟು ಆಧಾರಗಳು ಸಿಗುವುದಿಲ್ಲ. ಆದರೆ ಮಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹಿಂದುಳಿದ ಜಾತಿಯ ಬಿಲ್ಲವ ಸಮುದಾಯದವರಾಗಿದ್ದ ಎಂ.ಹೆಚ್. ಕೃಷ್ಣಪ್ಪನವರಿಗೆ 'ಸ್ವಯಂ ಜಾತಿ ಪ್ರಜ್ಞೆ ಜಾಸ್ತಿ ಇತ್ತು. ಆ ಕಾರಣಕ್ಕೆ ಅವರು ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲೂ ಬ್ರಾಹ್ಮಣರ ಪೆಡಂಭೂತಗಳನ್ನು ಕಾಣುತ್ತಿದ್ದರೆಂದು ಅವರ ಮಾತು ಹಾಗೂ ಕೃತಿಗಳು ತೋರುತ್ತಿದ್ದವು' ಎನ್ನುವ ಬಿ.ವಿ.ಕಕ್ಕಿಲ್ಲಾಯರ ಅಭಿಪ್ರಾಯವು (ಬಿ.ವಿ.ಕಕ್ಕಿಲ್ಲಾಯ 2003: 132), ಸಿಪಿಐನೊಳಗೆ ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವೆ ಹೊಗೆಯಾಡುತ್ತಿದ್ದ ಅನುಮಾನಗಳ ಬಗ್ಗೆ ಸಣ್ಣ ಬೆಳಕನ್ನು ಚೆಲ್ಲುತ್ತದೆ. ಸಿಪಿಐನ ಮುಖಂಡರಾದ ಡಿ.ರಾಜ ಅವರು ಜಾತಿಯಿಂದ ದಲಿತರು. ಕಮ್ಯುನಿಸ್ಟ್ ಪಕ್ಷಗಳಲ್ಲಿ ಅಪರೂಪಕ್ಕೆ ಎನ್ನುವಂತೆ ಅವರು ರಾಷ್ಟ್ರ ಮಟ್ಟದ ಸಮಿತಿಯಲ್ಲಿದ್ದಾರೆ. ಅವರನ್ನು ಆದ್ಯತೆಯ ಮೂಲಕ ನಾಯಕತ್ವಕ್ಕೆ ತರಲಾಯಿತೆಂಬುದನ್ನು ಅವರೇ ಒಪ್ಪುವುದಿಲ್ಲ. ತಮ್ಮ ಅರ್ಹತೆ, ಪರಿಶ್ರಮ ಮತ್ತು ಮಾರ್ಕ್ಸ್‌ವಾದಿ ತಿಳುವಳಿಕೆಯ ಆಧಾರದಲ್ಲಿ ಮೇಲಕ್ಕೆ ಬಂದದ್ದಾಗಿ ಅವರು ಸ್ಪಷ್ಟಪಡಿಸುತ್ತಾರೆ. ಇದನ್ನೊಂದು ಅಪರೂಪದ ಪ್ರಸಂಗವಾಗಿಯಷ್ಟೆ ಗಮನಿಸಬಹುದು.

ಬಂಡವಾಳಶಾಹಿ ಪಕ್ಷಗಳಲ್ಲಿ ಜಾತಿ ಆಧಾರಿತ ನಾಯಕತ್ವವು ಚುನಾವಣೆಯಲ್ಲಿ ಮತಗಳಿಕೆಗಾಗಿ ನೇಮಿಸಿಕೊಳ್ಳುವ ಶ್ರೀಮಂತ ವರ್ಗಗಳ ಸಂರಚನೆಯಾಗಿದೆ ಎಂಬುದನ್ನು ನಿರಾಕರಿಸಲಾಗದು. ಬಹುತೇಕ ಸಂದರ್ಭಗಳಲ್ಲಿ ಜಾತಿ ಪ್ರಾತಿನಿಧ್ಯವು ಆಯಾ ಜಾತಿಗಳಲ್ಲಿರುವ ಶ್ರೀಮಂತ ವರ್ಗಗಳ ಪ್ರಾತಿನಿಧ್ಯವೇ ಆಗಿರುತ್ತದೆ. ಹೀಗಾಗಿ ಕೆಳ ಜಾತಿಗಳು ಅನುಭವಿಸುವ ಜಾತಿ ದಮನ ಮತ್ತು ವರ್ಗ ಶೋಷಣೆಯ ವಿರುದ್ಧ ಚಳುವಳಿಗಳನ್ನು ಸಂಘಟಿಸುವುದರಲ್ಲಿ ಅವರ ಪಾತ್ರ ನಗಣ್ಯವಾಗಿರುವುದನ್ನು ಗಮನಿಸಬಹುದು. ಈ ಪಕ್ಷಗಳಲ್ಲಿನ ದಮನಿತ ಜಾತಿಗಳಿಗೆ ಸೇರಿದ ನಾಯಕತ್ವವು ಹೆಚ್ಚೆಂದರೆ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸುತ್ತದೆಯೇ ವಿನಃ ಊಳಿಗಮಾನ್ಯ ಭೂ ಸಂಬಂಧಗಳು ಮತ್ತುಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಚಳುವಳಿಗಳನ್ನು ನಡೆಸುವುದನ್ನು ಕಾಣಲಾಗದು.

ಇತ್ತೀಚೆಗೆ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನಗಳಲ್ಲಿ ಭಾಗವಹಿಸುವ ಪ್ರತಿನಿಧಿಗಳ ಪರಿಚಯ ಪತ್ರಗಳನ್ನು ಸಂಗ್ರಹಿಸುವ ಪದ್ಧತಿಯಿದ್ದು, ಅದರಲ್ಲಿ ಸಾಮಾಜಿಕ ಹಿನ್ನೆಲೆಯ ಮಾಹಿತಿಗಳನ್ನು ಕೇಳಲಾಗುತ್ತಿದೆ. ಹಾಗೆ ನೋಡಿದರೆ ಕಮ್ಯುನಿಸ್ಟ್ ಪಕ್ಷಗಳ ಸದಸ್ಯತ್ವದಲ್ಲಿ ಬಹಳ ದೊಡ್ಡ ಪ್ರಮಾಣದ ದಲಿತ ಮತ್ತು ಹಿಂದುಳಿದ ಜಾತಿಗಳ ಸದಸ್ಯತ್ವವಿದೆ. ಇವರನ್ನು ನಾಯಕತ್ವದ ಭಾಗವಾಗಿಸುವ ಪ್ರಜ್ಞಾಪೂರ್ವಕ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಕಮ್ಯುನಿಸ್ಟ್ ಪಕ್ಷಗಳು ಮಾಡುತ್ತವೆಯಾ ಎಂಬುದನ್ನು ಕಾದು ನೋಡಬೇಕು.

ಲೆನಿನ್ ಹೇಳುವ ಪ್ರಕಾರ, ಸಮೂಹಗಳು ಇರುವಲ್ಲಿ ರಾಜಕೀಯವು ಆರಂಭವಾಗುತ್ತದೆ, ಸಾವಿರಾರು ಇರುವಲ್ಲಲ್ಲ, ಬದಲಿಗೆ ಮಿಲಿಯಗಟ್ಟಲೆ ಇರುವಲ್ಲಿ, ಗಂಭೀರವಾದ ರಾಜಕೀಯವು ಆರಂಭವಾಗುವುದೇ ಅಲ್ಲಿ. ಭಾರತ ಅಥವಾ ಕರ್ನಾಟಕದ ಮಿಲಿಯಗಟ್ಟಲೆ ಸಮೂಹಗಳ ರಾಜಕೀಯ ಪ್ರಜ್ಞೆಯಾಗಿ ಕಮ್ಯುನಿಸ್ಟ್ ಪಕ್ಷಗಳು ಇಲ್ಲವೆಂಬ ಹಿನ್ನೆಲೆಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬಹುದು. ಇಲ್ಲಿ ಎರಡು ಅಂಶಗಳನ್ನು ಸ್ಪಷ್ಟ ಮಾಡಿಕೊಳ್ಳುವುದು ಅಗತ್ಯ. ಮಿಲಿಯಗಟ್ಟಲೆ ಸಮೂಹಗಳನ್ನು ಆರ್ಥಿಕ ಬೇಡಿಕೆಗಳ ಆಧಾರದಲ್ಲಿ ಸಂಘಟಿಸುವುದು ಮೊದಲನೆ ಅಂಶ. ಭಾರತದಂತಹ 130 ಕೋಟಿ ಜನಸಂಖ್ಯೆಯ ದೇಶದಲ್ಲಿ ಸಮೂಹಗಳೆಂದರೆ ಅದು ಮಿಲಿಯಗಳಲ್ಲ, ಕೋಟಿಗಳು ಎಂದರ್ಥ. ಸ್ವಾತಂತ್ರ್ಯ ಪೂರ್ವದಲ್ಲೂ ಮತ್ತು ನಂತರದಲ್ಲೂ ಕಮ್ಯುನಿಸ್ಟ್ ಪಕ್ಷಗಳು ಇತರೆ ಬೂರ್ಜ್ವಾ ರಾಜಕೀಯ ಪಕ್ಷಗಳಿಗಿಂತ ಹೆಚ್ಚಾಗಿ ಸಮೂಹಗಳನ್ನು ಹಲವು ಬಾರಿ ಹೋರಾಟಗಳಿಗೆ ಇಳಿಸಿರುವುದನ್ನು ಕಾಣಬಹುದು. ಇದರಿಂದ ಸಮೂಹಗಳಲ್ಲಿ 'ಪ್ರಾಥಮಿಕ ಪ್ರಜ್ಞೆ' ಅಥವಾ 'ಆರ್ಥಿಕ ಪ್ರಜ್ಞೆ' ಮಾತ್ರ ಬರುತ್ತದೆ. ಕೇವಲ ಇಷ್ಟು ಮಾತ್ರದಿಂದ 'ರಾಜಕೀಯ ಪ್ರಜ್ಞೆ' ಬರುವುದಿಲ್ಲ. ಹೀಗಾಗಿ ಸಮೂಹಗಳ ರಾಜಕೀಯವೆಂಬುದು ಕಮ್ಯುನಿಸ್ಟ್ ಪಕ್ಷಗಳಿಗೆ ಇತರೆ ಪಕ್ಷಗಳ ಹಾಗಲ್ಲ.

ಎರಡನೆ ಅಂಶವೇನೆಂದರೆ, 'ರಾಜಕೀಯ ಪ್ರಜ್ಞೆ'ಯನ್ನು ಹೊರಗಿನಿಂದ ಕಮ್ಯುನಿಸ್ಟ್ ಪಕ್ಷಗಳು ನೀಡಬೇಕಾಗುತ್ತದೆ. ಮಾರ್ಕ್ಸ್ ಹೇಳಿದ ಹಾಗೆ, 'ಕ್ಲಾಸ್ ಇನ್ ಇಟ್ಸೆಲ್ಫ್' ನಿಂದ 'ಕ್ಲಾಸ್ ಫಾರ್ ಇಟ್ಸೆಲ್ಫ್' ('class in itself' to 'class for itself') ಆದಾಗ ಈ ಸಮೂಹಗಳ ರಾಜಕೀಯ ನಾಯಕನಾಗಿ ಕಮ್ಯುನಿಸ್ಟ್ ಪಕ್ಷ ಪರಿವರ್ತನೆಯಾಗುತ್ತದೆ. ಅಂದರೆ ಆಧುನಿಕ ಕಾರ್ಮಿಕ ವರ್ಗವು 'ತನ್ನಷ್ಟಕ್ಕೇ ಒಂದು ವರ್ಗ'ವಾಗಿರುತ್ತದೆ ಮತ್ತು ಆ ಕಾರಣಕ್ಕಾಗಿ ಅದು ಆರ್ಥಿಕ ಬೇಡಿಕೆಗಳಿಗೆ ಒಂದಾಗುತ್ತದೆ. 'ತನ್ನ ವರ್ಗಕ್ಕಾಗಿ ತಾನು' ಎಂಬ ಪ್ರಜ್ಞೆ ಬಂದಾಗ ಅದು ರಾಜಕೀಯ ಶಕ್ತಿಯಾಗುತ್ತದೆ. ಇಲ್ಲಿ ಪ್ರಸ್ತಾಪಿಸಿದ ಎರಡೂ ಅಂಶಗಳು 'ಸಬ್ಜೆಕ್ಟೀವ್'ನ ಸಾಮರ್ಥ್ಯವನ್ನು ಅವಲಂಬಿಸಿದೆ. ಕಮ್ಯುನ್ಯಿಸ್ಟ್ ಪಕ್ಷಗಳಿಗೆ ಕರ್ನಾಟಕದಲ್ಲಿ ಈ ಸಾಮರ್ಥ್ಯ ಯಾವ ರೀತಿ ಇತ್ತು ಮತ್ತು ಇದೆ ಎಂಬುದನ್ನು ಪ್ರಸಕ್ತ ಅಧ್ಯಯನದ ಎರಡು, ಮೂರು ಮತ್ತು ನಾಲ್ಕನೇ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಇಷ್ಟೊಂದು ದೀರ್ಘ ಅವಧಿಯ ಬೆಳವಣಿಗೆಯಲ್ಲಿ ಸಮೂಹಗಳ ರಾಜಕೀಯವಾಗಿ ಯಶಸ್ವಿಯಾಗದಿರುವುದಕ್ಕೆ ಈ 'ಸಬ್ಜೆಕ್ಟೀವ್' ಅಂಶವೇ ಪ್ರಧಾನ ಕಾರಣವಾಗಿದೆ.

ಕಮ್ಯುನಿಸ್ಟ್ ಪಕ್ಷಗಳ ಬೆಳವಣಿಗೆಗೆ ಅಡ್ಡಿಯಾಗಿರುವ ಮತ್ತೊಂದು ಪ್ರಮುಖ ಸಬ್ಜೆಕ್ಟೀವ್ ಅಂಶವೆಂದರೆ, 'ಗ್ರಾಮೀಣ ಕೃಷಿಕೂಲಿಕಾರ/ರೈತ ವರ್ಗ ಮತ್ತು ನಗರ ಕಾರ್ಮಿಕ ವರ್ಗದ ನಡುವಿನ ಸಂಬಂಧ'ದ್ದು. ಪ್ರಭುತ್ವದ ನಾಯಕತ್ವವನ್ನು ದೊಡ್ಡ ಬಂಡವಾಳಶಾಹಿ ವಹಿಸಿರುವುದರಿಂದ, ಅದಕ್ಕೆ ಪ್ರತಿಯಾಗಿ ಸಾಮಾಜಿಕ ಕ್ರಾಂತಿಯ ನಾಯಕತ್ವವನ್ನು ಕಾರ್ಮಿಕ ವರ್ಗ ವಹಿಸುತ್ತದೆ ಎಂಬುದು ಕಮ್ಯುನಿಸ್ಟ್ ಪಕ್ಷಗಳ ಅಂದಾಜು. ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸಲು ಉಳಿದ ಗ್ರಾಮೀಣ ಕಾರ್ಮಿಕರು, ಸಣ್ಣ ಮತ್ತು ಬಡ ರೈತರು ಮತ್ತು ಇತರೆ ಜನವಿಭಾಗಗಳನ್ನು ಸಂಘಟಿಸುವುದು ಕಾರ್ಮಿಕ ವರ್ಗದ ಕರ್ತವ್ಯವಾಗಿದೆ[162].

ನಗರ ಭಾರತದ ಕಾರ್ಮಿಕರು ಗ್ರಾಮೀಣ ಭಾರತದ ಕೃಷಿ ಸಂಬಂಧಿ ರೈತರೋ ಅಥವಾ ಕಾರ್ಮಿಕರೋ ಆಗಿರುತ್ತಾರೆ. ನಗರ ಕಾರ್ಮಿಕ ವರ್ಗವನ್ನು ಬಳಸಿ ಗ್ರಾಮೀಣ ಬಡವರನ್ನು ಸಂಘಟಿಸುವ ಕೆಲಸವನ್ನು ಕಮ್ಯುನಿಸ್ಟ್ ಪಕ್ಷ ಮಾಡಬೇಕೆನ್ನುವ ಪ್ರಶ್ನೆಯೇ ಈ ಚರ್ಚೆಯ ಕೇಂದ್ರಬಿಂದು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಆರಂಭಿಕ ಕಾಲಘಟ್ಟದ ಕೆಲಸವು ಸ್ವಲ್ಪ ಮಟ್ಟಿಗೆ ಈ ವಿಧಾನದಲ್ಲಿ ನಡೆಯುತ್ತಿತ್ತು. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇಕಾರ, ಹೆಂಚು, ಗೋಡಂಬಿ ಮುಂತಾದ ಕಾರ್ಮಿಕರು ಬಹುತೇಕ ಗ್ರಾಮೀಣ ರೈತ–ಕೂಲಿಕಾರ–ಗೇಣಿದಾರರೇ ಆಗಿದ್ದರು. ಅವರನ್ನು ಬಳಸಿಯೇ ಗ್ರಾಮೀಣ ಭಾಗದಲ್ಲಿ ರೈತರ ಸಂಘಟನೆಯನ್ನು ಕಟ್ಟಲಾಗಿತ್ತು. ಗೇಣಿದಾರರ ಹೋರಾಟಗಳ ಸಂದರ್ಭದಲ್ಲಿ ಜಮೀನ್ದಾರರ ದಬ್ಬಾಳಿಕೆ ವಿರುದ್ಧ ಕಾರ್ಮಿಕರು ರಕ್ಷಣೆಯನ್ನು ಕೊಡುತ್ತಿದ್ದರು. ರೈತ–ಕಾರ್ಮಿಕ ಸಖ್ಯತೆ ಆಚರಣೆಯಲ್ಲಿ ಕಾಣುತ್ತಿತ್ತು. ಅದೇ ರೀತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕೆಜಿಎಫ್‌ನ ಕಾರ್ಮಿಕ ವರ್ಗ ಕೋಲಾರ ಜಿಲ್ಲೆಯಲ್ಲಿ ರೈತ ಸಂಘವನ್ನು ಕಟ್ಟಲು ಸಹಾಯ ಮಾಡಿದ್ದನ್ನು ಗಮನಿಸಿದ್ದೇವೆ. ಇಂತಹ ಸಹಕಾರ ಮತ್ತು ಮೈತ್ರಿ ರಾಜ್ಯದ ಬಿಜಾಪುರ, ಬೆಳಗಾವಿ, ಕೊಡಗು, ಮೈಸೂರು ಮುಂತಾದ ಜಿಲ್ಲೆಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಆರಂಭಿಕ ಘಟ್ಟದಲ್ಲಿ ಕಾಣಬಹುದು. ಆದರೆ ಕಾಲಕ್ರಮೇಣ ರೈತ–ಕಾರ್ಮಿಕ ಸಖ್ಯತೆಯ ಅಂಶ ಬಹುತೇಕ ಸವೆದು ಹೋಗಿದೆ. ಸೈದ್ಧಾಂತಿಕವಾಗಿ ಅನಿವಾರ್ಯವಾದ ಈ ರಾಜಕೀಯ–ಸಂಘಟನಾತ್ಮಕ ಕಾರ್ಯಾಚರಣೆಯನ್ನು ಕಮ್ಯುನಿಸ್ಟ್ ಪಕ್ಷವು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಕಾರಣಕ್ಕೆ (ಇನ್ನೂ ಹಲವು ಕಾರಣಗಳಿಗಾಗಿ) ತೆಲಂಗಾಣ ಹೋರಾಟದ ನಾಯಕ ಪಿ.ಸುಂದರಯ್ಯ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಪೊಲಿಟ್‌ಬ್ಯೂರೊ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರುಎಂಬ ಅಂಶ ಇದರ ಮಹತ್ವವನ್ನು ಸಾರುತ್ತದೆ (ಸುಂದರಯ್ಯ 1991: 5). ಕಾರ್ಮಿಕ ಸಂಘಗಳು ಬಹುತೇಕ ಆರ್ಥಿಕ ಹೋರಾಟಗಳಿಗೆ ಸೀಮಿತವಾಗಿರುವುದು, ಕಾರ್ಮಿಕರನ್ನು ಒಂದು ವರ್ಗವಾಗಿ ರೂಪಿಸಿ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಲು ಆಗದಿರುವುದು ಮತ್ತು ಕಾರ್ಮಿಕ ವರ್ಗವು ಕ್ರಾಂತಿಯ ನೇತೃತ್ವವನ್ನು ವಹಿಸಬೇಕಾದ ಚಾರಿತ್ರಿಕ ಹೊಣೆಗಾರಿಕೆಯನ್ನು ಅದಕ್ಕೆ ಮನವರಿಕೆ ಮಾಡುವುದರಲ್ಲಿನ ವೈಫಲ್ಯತೆ, ಪರಿಣಾಮವಾಗಿ ರೈತ–ಕಾರ್ಮಿಕ ಸಖ್ಯತೆ ಸಾಧಿಸಲು ಯಶಸ್ಸು ಕಾಣದಿರುವುದು, ಇವೆಲ್ಲವೂ ಕಮ್ಯುನಿಸ್ಟ್ ಪಕ್ಷಗಳ ಬೆಳವಣಿಗೆಯ ಸವಾಲುಗಳಾಗಿವೆ.

ಕಮ್ಯುನಿಸ್ಟ್ ಪತ್ರಿಕೆಗಳು

ಕಮ್ಯುನಿಸ್ಟ್ ಪತ್ರಿಕೆಗಳು ಕೇವಲ ಸಾಮೂಹಿಕ ಪ್ರಚಾರಕ ಮತ್ತು ಸಾಮೂಹಿಕ ಹೋರಾಟಗಾರ ಮಾತ್ರವಲ್ಲ, ಸಮೂಹಗಳ ಸಾಮೂಹಿಕ ಸಂಘಟಕ ಕೂಡಾ ಎಂದು ಲೆನಿನ್ ಕರೆದರು. ಪತ್ರಿಕೆಗಳು ಕಮ್ಯುನಿಸ್ಟ್ ಚಳುವಳಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುವುದನ್ನು ಇದು ಸೂಚಿಸುತ್ತದೆ. ಬಂಡವಾಳಶಾಹಿ ಸಾಲ ಸಂಸ್ಥೆಗಳಿಂದ ಮುಕ್ತವಾದ, ಬೃಹತ್ ಜಾಹೀರಾತುದಾರರ ಮೇಲೆ ಅವಲಂಬಿತವಾಗದೆ, ಭಾವೋದ್ರಕದ ಭಾವನೆಗಳನ್ನು ಬಿಂಬಿಸದೆ, ದಮನಿತರ ಮತ್ತು ಹೋರಾಟದ ಕಾರ್ಮಿಕರ ಹಿತಾಸಕ್ತಿಗಳ ಬಗ್ಗೆ ಗಮನಹರಿಸುವ ಕೆಲಸವನ್ನು ಕಮ್ಯುನಿಸ್ಟ್ ಪತ್ರಿಕೆ ಮಾಡಬೇಕು. ಪತ್ರಿಕೆಗಳು ಕ್ರಾಂತಿಕಾರಿ ಕೆಲಸದ ಉತ್ತಮ ಸಂಘಟಕರಾಗಿವೆ. ಒಬ್ಬ ಕಮ್ಯುನಿಸ್ಟ್ ಪತ್ರಿಕೆಯೊಂದಿಗೆ ಹತ್ತಿರದ

ಸಂಬಂಧವನ್ನು ಹೊಂದಿರಬೇಕು ಮತ್ತು ಅದಕ್ಕಾಗಿ ತ್ಯಾಗಗಳನ್ನು ಮಾಡಬೇಕು. ಇದು ಕಮ್ಯುನಿಸ್ಟನ ಪ್ರತಿದಿನದ ಆಯುಧ, ಇದನ್ನು ದಿನನಿತ್ಯವೂ ಸಾಣೆ ಹಿಡಿದು ಗಟ್ಟಿಗೊಳಿಸಬೇಕು. ಬಂಡವಾಳಶಾಹಿ ಪತ್ರಿಕೆಗಳು ಕಾರ್ಮಿಕ ವರ್ಗದ ವಿರುದ್ಧ ಮತ್ತು ಕಮ್ಯುನಿಸ್ಟ್ ಪಕ್ಷದ ವಿರುದ್ಧ ನಡೆಸುವ ಸೈದ್ಧಾಂತಿಕ ದಾಳಿಗಳನ್ನು ಎದುರಿಸಲು ಪತ್ರಿಕೆ ಆಯುಧವಾಗಿರಬೇಕು, ಹೀಗೆ ಕಮ್ಯುನಿಸ್ಟ್ ಪತ್ರಿಕೆಯ ಹಲವು ಆಯಾಮಗಳನ್ನು ಕಮಿನ್‌ಟರ್ನ್ ಪ್ರತಿಪಾದನೆ ಮಾಡಿತ್ತು (ಡಾಕ್ಯುಮೆಂಟ್ಸ್ 2015: 34–38). ಈ ದಾರಿಯಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯಲ್ಲಿ ಪತ್ರಿಕೆಗಳ ಪಾತ್ರ ಮಹತ್ತರವಾಗಿರುವುದನ್ನು ಪ್ರಾರಂಭದ ಅಧ್ಯಾಯಗಳಲ್ಲಿ ಗಮನಿಸಿದ್ದೇವೆ.

ಕರ್ನಾಟಕದಲ್ಲಿ ಸ್ವಲ್ಪ ತಡವಾಗಿ ಕಮ್ಯುನಿಸ್ಟ್ ಪತ್ರಿಕೆಗಳು ಆರಂಭವಾಗಿ ಹಲವಾರು ಏಳುಬೀಳುಗಳನ್ನು ಕಂಡರೂ ನಿರಂತರವಾಗಿ ಪ್ರಕಟವಾಗುತ್ತಾ ಬಂದಿವೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರಥಮ ವಾರಪತ್ರಿಕೆ ಎಂದರೆ ಜನಶಕ್ತಿ. ಇದು ಮೊದಲಿಗೆ ಹುಬ್ಬಳ್ಳಿಯಿಂದ ಪ್ರಕಟವಾಯಿತು. 1947 ಮೇ 1 ರಂದು ಆರಂಭವಾದ ಇದರ ಪ್ರಥಮ ಸಂಪಾದಕರು ಕುಳಕುಂದ ಶಿವರಾಯರು (ಮುಂದೆ ಕನ್ನಡದ ಹೆಸರಾಂತ ಸಾಹಿತಿಯಾಗಿ ಪ್ರಸಿದ್ಧ ಪಡೆದ ನಿರಂಜನರು). ಸದಾಶಿವ ಅವರು ಪತ್ರಿಕೆಯ ಆಡಳಿತಗಾರರಾಗಿದ್ದರು. ಕುಳಕುಂದ ಶಿವರಾಯರ ಮೇಲೆ ಮಾನನಷ್ಟ ಮೊಕದ್ದಮೆಯೊಂದು ಕಾರವಾರದಲ್ಲಿ ದಾಖಲಾಗಿತ್ತು. ಅವರು ಸಿಪಿಐನ ಪ್ರಾಂತ ಸಮಿತಿ ಸದಸ್ಯರೂ ಆಗಿದ್ದರು. ಆ ಸಂದರ್ಭದಲ್ಲಿ ಅವರು ಭೂಗತರಾಗಿದ್ದಾಗ ಕೆಲಕಾಲ ಕೆ.ಸದಾಶಿವ ಅವರು ಸಂಪಾದಕರಾಗಿ ಕೆಲಸ ಮಾಡಿದರು. 1948–51 ರ ಕಮ್ಯುನಿಸ್ಟ್ ಪಕ್ಷದ ಮೇಲಿನ ದಬ್ಬಾಳಿಕೆಯ ಕಾಲದಲ್ಲಿ ಜನಶಕ್ತಿ ಪತ್ರಿಕೆಯನ್ನು ನಿಲ್ಲಿಸಲಾಗಿತ್ತು. 1952 ರಲ್ಲಿ ಅದನ್ನು ಪುನಃ ಬೆಂಗಳೂರಿನಿಂದ[163] ಆರಂಭಿಸಲಾಯಿತು. ಆಗ ಎಂ.ಸಿ.ನರಸಿಂಹನ್ ಅದರ ಸಂಪಾದಕರಾಗಿದ್ದರು. ಎಂ.ಎಸ್.ಕೃಷ್ಣನ್ ಮುದ್ರಕ–ಪ್ರಕಾಶಕರಾಗಿದ್ದರು.

ಇದೇ ಸಂದರ್ಭದಲ್ಲಿ ಎಂ.ಎಸ್.ಕೃಷ್ಣನ್ ಅವರು ತಮ್ಮ ಪಾಲಿನ ಆಸ್ತಿ ಮಾರಾಟದಿಂದ ಬಂದ ಹಣದಿಂದ ಪಕ್ಷಕ್ಕಾಗಿ ಒಂದು ಮುದ್ರಣಾಲಯವನ್ನು ಖರೀದಿಸಿದರು. ಇದರಲ್ಲಿ ಜನಶಕ್ತಿ ಮುದ್ರಣವಾಗುತ್ತಿತ್ತು. ನ್ಯೂ ಏಜ್‌ನಲ್ಲಿ ಬರುತ್ತಿದ್ದ ಲೇಖನಗಳನ್ನು ಅನುವಾದಿಸಿ ಪ್ರಕಟಿಸಲಾಗುತ್ತಿತ್ತು. ಎನ್.ಎಲ್.ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ ಮತ್ತು ಕಕ್ಕಿಲ್ಲಾಯ ಇವರುಗಳು ನಿರಂತರವಾಗಿ ಲೇಖನಗಳನ್ನು ಬರೆಯುತ್ತಿದ್ದರು. ನಿರಂಜನ, ಬಸವರಾಜ ಕಟ್ಟೀಮನಿ, ಅಕ್ಬರ್ ಅಲಿ, ಗೌರೀಶ ಕಾಯ್ಕಿಣಿ, ಎಸ್.ಆರ್.ಎಕ್ಕುಂಡಿ, ಕೆ.ವಾಸುದೇವ, ವೀಚಿ, ದಿನಕರ ದೇಸಾಯಿ ಮುಂತಾದವರು ಆಗಾಗ ಲೇಖನಗಳನ್ನು ಬರೆಯುತ್ತಿದ್ದರು. ಎನ್.ಎಲ್.ಉಪಾಧ್ಯಾಯ, ಎಂ.ಎಸ್.ಕೃಷ್ಣನ್, ಎಂ.ಸಿ.ನರಸಿಂಹನ್, **ಸಿ.ಆರ್.ಕೃಷ್ಣರಾವ್, ಮರಿದಾಸ್ ಮುಂತಾದವರು ಪತ್ರಿಕೆಯನ್ನು ಬಳೇಪೇಟೆಯ ಬೀದಿಗಳಲ್ಲಿ ಸಂಜೆ ಹೊತ್ತು** ನಿಂತು ಮಾರಾಟ ಮಾಡುತ್ತಿದ್ದರು (ಕೃಷ್ಣರಾವ್ 2012: 29–30). ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಭಾನುವಾರ ಪತ್ರಿಕೆಯ ಮಾರಾಟಕ್ಕೆ ಪಕ್ಷದ ಸದಸ್ಯರು ಮನೆ ಮನೆಗೆ ಹೋಗುತ್ತಿದ್ದರು. ಅದೇ ರೀತಿ ಪತ್ರಿಕೆಗೆ ಹಣ ಸಂಗ್ರಹವನ್ನು ಮಾಡಿ ಕೊಡುತ್ತಿದ್ದರು. ಆದರೆ ಹಣದ ಮುಗ್ಗಟ್ಟಿನಿಂದ ಪತ್ರಿಕೆ ಹೆಚ್ಚು ಕಾಲ ನಡೆಯಲಿಲ್ಲ. 1954 ರ ನಡುವೆ ಜನಶಕ್ತಿ ಪ್ರಕಟಣೆ ಮತ್ತೆ ಸ್ಥಗಿತವಾಗಿತ್ತು.

ಕರ್ನಾಟಕ ಏಕೀಕರಣವಾದ ದಿನ 1956 ರ ನವೆಂಬರ್ 1 ರಂದು ಜನಶಕ್ತಿಯನ್ನು ಮತ್ತೆ ಆರಂಭಿಸಲಾಯಿತು. ಆಗ ಸಿ.ಆರ್.ಕೃಷ್ಣರಾವ್ ಅದರ ಸಂಪಾದಕರಾಗಿ ಕೆಲಸ ಮಾಡಿದರು. ಪತ್ರಿಕೆ ಅಂದು ಸುಮಾರು 2000 ಪ್ರತಿಗಳು ಮಾರಾಟವಾಗುತ್ತಿತ್ತು. ಹಿಂದಿನ ರೀತಿಯಲ್ಲೇ ಮುಖಂಡರೂ ಒಳಗೊಂಡಂತೆ ಬೀದಿಗಳಲ್ಲಿ ನಿಂತು ಸಾಮೂಹಿಕ ಮಾರಾಟ ಮಾಡುತ್ತಿದ್ದರು. ಆದರೆ ಈ ಪದ್ಧತಿ ಎರಡು ವರ್ಷಗಳ ನಂತರ ನಿಂತು ಹೋಯಿತು. ಜಾಹಿರಾತುಗಳ ಬೆಂಬಲವಿಲ್ಲದೆ ಪತ್ರಿಕೆ ನಷ್ಟದಲ್ಲಿ ನಡೆಯುತ್ತಿದ್ದಾಗ, ನಂಜನಗೂಡಿನ ಸದ್ವೈದ್ಯ ಶಾಲೆಯ ಬಿ.ವಿ.ರಾಮಸ್ವಾಮಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಯಾಗಿದ್ದುಕೊಂಡು ಅವರ ಕಂಪನಿಯ ಜಾಹೀರಾತನ್ನು ನಿರಂತರವಾಗಿ ನೀಡುತ್ತಿದ್ದರು. ಈ ನಡುವೆ ಕಮ್ಯುನಿಸ್ಟ್ ಪಕ್ಷದೊಳಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹೆಚ್ಚಾಗಿ ವಿಭಜನೆಯಾದಾಗ 1964 ರಲ್ಲಿ ಜನಶಕ್ತಿ ನಿಂತುಹೋಯಿತು (ಕೃಷ್ಣರಾವ್ 2012: 60–62).

1948 ರ ಜುಲೈ 17 ರಂದು ಅರುಣ ಪ್ರಗತಿಶೀಲ ಕನ್ನಡ ವಾರಪತ್ರಿಕೆಯು ಮಂಗಳೂರಿನಿಂದ ಪ್ರಕಟವಾಗುತ್ತಿತ್ತು. ಯು.ಎನ್.ಶ್ರೀನಿವಾಸ ಭಟ್ ಇದರ ಸಂಪಾದಕರಾಗಿದ್ದರು. ಮೂರು ದಶಕಗಳ ಕಾಲ ಈ ಪತ್ರಿಕೆಯು ಕಮ್ಯುನಿಸ್ಟ್ ಚಳುವಳಿ ಮತ್ತು ಪ್ರಗತಿಪರ ವಿಷಯಗಳನ್ನು ದುಡಿಯುವ ಜನರ ನಡುವೆ ಪ್ರಸರಿಸಲು ಕೆಲಸ ಮಾಡಿತು. ಅರುಣ ಪತ್ರಿಕೆ ಮೇಲೆ ಮದ್ರಾಸ್ ಸರ್ಕಾರ ನಿಷೇಧ ಹೇರಿದ್ದ ಸಂದರ್ಭದಲ್ಲಿ ಕರ್ನಾಟಕದ ಕಮ್ಯುನಿಸ್ಟ್ ಪಕ್ಷಕ್ಕೆ ಯಾವುದೇ ಮುಖವಾಣಿ ಇರಲಿಲ್ಲ. ನಿಷೇಧದ ವಿರುದ್ಧ ಶಾಂತಾರಾಂ ಪೈ ಅವರು ಮೋಹನ ಕುಮಾರಮಂಗಲಂ ಅವರ ಮೂಲಕ ಮದ್ರಾಸ್ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಿದ್ದರು. ಆಗ ಮುಂಬೈನಿಂದ ಸಮದರ್ಶಿ ಎಂಬ ಕನ್ನಡ ಪತ್ರಿಕೆ ಬರುತ್ತಿತ್ತು. ಇದನ್ನು ಕೆ.ವಿ.ರಾವ್ ಮತ್ತು ಟಿ.ಎಸ್.ಹೆಗ್ಡೆ ಇವರು ತರುತ್ತಿದ್ದರು. ನಂತರ ಸಮದರ್ಶಿ ಕನ್ನಡ ದಿನ ಪತ್ರಿಕೆಯಾಗಿ ಎಸ್.ಬಿ.ಧಾರವಾಡಕರ್ ಇವರ ಸಂಪಾದಕತ್ವದಲ್ಲಿ ಗೋಕಾಕ್ ಮತ್ತು ಬೆಳಗಾವಿಯಿಂದ ಪ್ರಕಟವಾಗುತ್ತಿತ್ತು[164]. ಹಲವು ಜಿಲ್ಲೆಗಳಲ್ಲಿ ಕೆಲವು ಕಮ್ಯುನಿಸ್ಟರು ಮುತುವರ್ಜಿ ವಹಿಸಿ ಸ್ಥಳೀಯವಾಗಿ ಪತ್ರಿಕೆಗಳನ್ನು ಪ್ರಕಟಿಸಿದ್ದರು. ಯುಗದೀಪಕನ್ನಡ ವಾರ ಪತ್ರಿಕೆಯನ್ನು ಬಿ.ಎನ್.ಧಾರವಾಡಕರ್‌ರು ಕಾರವಾರದಿಂದ ಪ್ರಕಟಿಸುತ್ತಿದ್ದರು. ಛಡಿ ಪತ್ರಿಕೆಯನ್ನು ಹೆಚ್,ಎಸ್,ರಾಮರಾವ್ ಅವರು 1950 ರ ದಶಕದಲ್ಲಿ ಚಿಕ್ಕಬಳ್ಳಾಪುರ ಗೌರಿಬಿದನೂರು ಭಾಗದಲ್ಲಿ ಪ್ರಕಟಿಸಿದ್ದರು[165]. ಕಮ್ಯುನಿಸ್ಟ್ ಪಕ್ಷ ವಿಭಜನೆಯಾದ ನಂತರ ಸಿಪಿಐ ಕೆಂಬಾವುಟ ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ ಮತ್ತು ಸಿಪಿಐ(ಎಂ) ಮೊದಲಿಗೆ ಐಕ್ಯರಂಗಮತ್ತು ನಂತರ ಜನಶಕ್ತಿವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ. ಆದರೆ ಪ್ರಸಾರದ ಸಂಖ್ಯೆಯನ್ನು ವ್ಯಾಪಕವಾಗಿ ಹೆಚ್ಚಿಸುವಲ್ಲಿ ಮತ್ತು ಜನಸಮೂಹಗಳನ್ನು ತಲುಪುವಲ್ಲಿ ಇವೆರಡೂ ಪತ್ರಿಕೆಗಳು ಅತ್ಯಂತ ಸೀಮಿತ ಯಶಸ್ಸನ್ನು ಮಾತ್ರ ಕಂಡಿವೆ.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾದ ಅಂಶಗಳನ್ನು ಕೆಳಕಂಡಂತೆ ಗುರುತಿಸಬಹುದು. ಬ್ರಿಟಿಷರಿಂದ ಹಸ್ತಾಂತರಗೊಂಡ ಸ್ವಾತಂತ್ರ್ಯವು ಭಾರತದಲ್ಲಿರುವ ಅವರ ಏಜೆಂಟರಿಗೆ ವರ್ಗಾವಣೆಗೊಂಡ ರಾಜಕೀಯ ಸ್ವಾತಂತ್ರ್ಯವೆಂದು ಸಿಪಿಐ ಮಾಡಿದ ಅಂದಾಜು, ಮತ್ತೆ ಅದನ್ನು ಬಿಕ್ಕಟ್ಟಿಗೆ ನೂಕುವುದರೊಂದಿಗೆ ಸ್ವಾತಂತ್ರ್ಯೋತ್ತರ ಕಾಲಘಟ್ಟವು ಆರಂಭವಾಯಿತು. ತೆಲಂಗಾಣದಲ್ಲಿ ಪೊಲೀಸ್ ಕಾರ್ಯಾಚರಣೆ ಹೆಸರಿನಲ್ಲಿ ಕಮ್ಯುನಿಸ್ಟರ ಮೇಲೆ

ನೆಹರೂ ಸರ್ಕಾರ ನಡೆಸಿದ ಮಾರಣ ಹೋಮವು, ಸಿಪಿಐ ದುಸ್ಸಾಹಸವಾದಿ ನಿಲುವನ್ನು ತಳೆಯಲು ಕಾರಣವಾಯಿತು. ಸಶಸ್ತ್ರ ಕ್ರಾಂತಿಯ ದಾರಿಯನ್ನು ಅದು ಪ್ರತಿಪಾದಿಸಿತು. ಆಗ ಸಂಘಟನೆಯೊಳಗೆ ಉದ್ಭವಿಸಿದ ಬಿಕ್ಕಟ್ಟಿನಿಂದಾಗಿ ಸಿಪಿಐ ನಿಯೋಗವೊಂದು ಸ್ಟಾಲಿನ್‌ರೊಂದಿಗೆ ಚರ್ಚಿಸಿತು. ಭಾರತಕ್ಕೆ ರಷ್ಯಾ ಮಾದರಿಯೋ ಅಥವಾ ಚೀನಾ ಮಾದರಿಯೋ ಎಂಬ ವಿಚಾರಕ್ಕೆ ಸಂಬಂಧಿಸಿ, ಭಾರತಕ್ಕೆ ಭಾರತದ್ದೇ ದಾರಿ ಎಂಬ ಸಲಹೆಯನ್ನು ಅವರು ನೀಡಿದರು. ಇದನ್ನು ಅನುಸರಿಸಿ ಸಿದ್ಧಪಡಿಸಿದ 1951 ರ ಧೋರಣೆಯ ಕುರಿತ ಹೇಳಿಕೆಯು ಸ್ವಲ್ಪ ಕಾಲ ಸಿಪಿಐ ಐಕ್ಯತೆಯಿಂದ ಕೆಲಸ ಮಾಡಲು ಸಹಾಯ ಮಾಡಿತು. ಇದೇ ಕಾಲಕ್ಕೆ ಸಿಪಿಐ ಭಾಷಾವಾರು ರಾಜ್ಯಗಳ ರಚನೆ ಹೋರಾಟದಲ್ಲಿ ಸಕ್ರಿಯವಾಗಿ ಮತ್ತು ತತ್ವಬದ್ಧವಾಗಿ ಹೋರಾಡಿತು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅಕರಾನಿ ಪರಿಷತ್ತಿನ ಮೂಲಕ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಲು ಪ್ರಯತ್ನಿಸಿತು. ತನ್ನ ಸಾಮ್ರಾಜ್ಯಶಾಹಿ ವಿರೋಧಿ ನಿಲುವಿನ ಸ್ಪಷ್ಟತೆಯೊಂದಿಗೆ ಗೋವಾ ವಿಮೋಚನೆ ಹೋರಾಟದಲ್ಲಿ ತೊಡಗಿಸಿಕೊಂಡಿತು. ಇದರ ಜೊತೆಯಲ್ಲಿ ವಿವಿಧ ಪ್ರಾಂತಗಳ ಮತ್ತು ಸಂಸ್ಥಾನಗಳಲ್ಲಿ ಗೇಣಿದಾರರ ಪ್ರಶ್ನೆಗಳು ಮತ್ತು ಭೂಮಿಯ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಸಂಘಟಿಸಿತು.

ಭಾರತದ ಕ್ರಾಂತಿಯ ದಾರಿಯ ಕುರಿತು ಚರ್ಚೆಗಳು ನಡೆಯುತ್ತಿದ್ದ ಕಾಲಕ್ಕೆ ಭಾರತ – ಚೀನಾ ಯುದ್ಧವು ಸಿಪಿಐನೊಳಗೆ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿತು. ಇದು ಅಂತಿಮವಾಗಿ 1964 ರಲ್ಲಿ ಸಿಪಿಐ ವಿಭಜನೆಯಲ್ಲಿ ಪರ್ಯವಸಾನವಾಗಿ ಸಿಪಿಐ(ಎಂ) ರಚನೆಗೆ ಕಾರಣವಾಯಿತು. ಸೈದ್ಧಾಂತಿಕ ನೆಲೆಯಲ್ಲಿ ವಿಭಜನೆಯಾದರೂ, ಕರ್ನಾಟಕದಲ್ಲಿ ಎಲ್ಲ ಕಡೆಗಳಲ್ಲೂ ಅದೇ ಕಾರಣಕ್ಕಾಗಿ ಆಯಿತೆಂದು ಹೇಳಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಇದರ ಪರಿಣಾಮವು ತೀವ್ರವಾಗಿ ಆಯಿತು. ಇದರ ಹೊಡೆತವನ್ನು ತಾಳಿಕೊಳ್ಳುತ್ತಿರುವಾಗಲೇ ದೇಶ ಮಟ್ಟದಲ್ಲಿ ಮತ್ತೊಂದ ಎಡ–ತೀವ್ರವಾದಿ ವಿಭಜನೆ ಸಂಭವಿಸಿತು. ಇದು ಕರ್ನಾಟಕದಲ್ಲಿ ಒಂದು ದಶಕ ತಡವಾಗಿ 1978 ರಲ್ಲಿ ಸಂಭವಿಸಿತು. ಈ ನಡುವೆ ಕಾಂಗ್ರೆಸಿನ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲೂ ಕಮ್ಯುನಿಸ್ಟ್ ಪಕ್ಷಗಳು ಭಿನ್ನ ನಿಲುವುಗಳನ್ನು ತೆಗೆದುಕೊಂಡವು. ನಕ್ಸಲ್ ಚಳುವಳಿಯೆಂದು ಕರೆಯಲಾಗುವ ದುಸ್ಸಾಹಸವಾದಿ ತತ್ವವು ಕರ್ನಾಟಕದಲ್ಲಿ 1980 ರ ಮಧ್ಯಭಾಗದಿಂದ ಆರಂಭವಾಯಿತು. ಇವೆಲ್ಲವೂ ಒಂದು ಕ್ರೋಢೀಕೃತ ಮತ್ತು ಸಂಘಟಿತ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಲು ತಡೆಯೊಡ್ಡಿತು. ಕರ್ನಾಟಕದಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಎರಡು ಭಿನ್ನ ಧೃವಗಳಾಗಿಯೇ ಬೆಳೆದರೂ, ತುರ್ತು ಪರಿಸ್ಥಿತಿಯ ನಂತರದ ಕಾಲಘಟ್ಟದಲ್ಲಿ ಕಾಂಗ್ರೆಸ್ ವಿರೋಧಿ ನೆಲೆಯ ಮೂಲಕ ಒಟ್ಟಿಗೆ ಕೆಲಸ ಮಾಡಲು ಆರಂಭಿಸಿವೆ.

ಅಪಾರವಾದ ಏರುಪೇರುಗಳನ್ನು ಕಂಡ ಕಮ್ಯುನಿಸ್ಟ್ ಪಕ್ಷಗಳು ಬಹಳ ದೀರ್ಘ ಕಾಲ ಭಾರತದ ಕ್ರಾಂತಿಯ ಕುರಿತು ಸ್ಪಷ್ಟತೆಯನ್ನು ಹೊಂದಿರಲಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಇದಾಗಿಯೂ, ಕಮ್ಯುನಿಸ್ಟ್ ಪಕ್ಷಗಳು ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ನಡುವೆ ಸಮೂಹ ಸಂಘಟನೆಗಳ ಮೂಲಕ ಕ್ರಿಯಾಶೀಲವಾಗಿದ್ದುದನ್ನು ಕಾಣಬಹುದಾಗಿದೆ. ಮೈಕೋ ಹೋರಾಟ, ಸಾರ್ವಜನಿಕ ಉದ್ದಿಮೆಗಳ ಹೋರಾಟ, ನರಗುಂದ ರೈತರ ಹೋರಾಟ ಮುಂತಾದ ಹೋರಾಟಗಳನ್ನು ನಡೆಸುವ ಮೂಲಕ ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಬರುವುದರಲ್ಲಿ

ಕಮ್ಯುನಿಸ್ಟ್ ಪಕ್ಷಗಳು ಪ್ರಮುಖ ಪಾತ್ರ ವಹಿಸಿವೆ. ಸಿಪಿಐ ವಿಭಜನೆಯ ನಂತರದಲ್ಲಿ ಸಮೂಹ ಸಂಘಟನೆಗಳೂ ವಿಭಜನೆಯಾದ್ದರಿಂದ ಸುಮಾರು ಎರಡು ದಶಕಗಳ ಕಾಲ ಅವುಗಳ ಹೋರಾಟಗಳಲ್ಲಿ ಮೊನಚು ಕಡಿಮೆಯಾಗಿದ್ದನ್ನು ಗುರುತಿಸಬಹುದು. ತುರ್ತು ಪರಿಸ್ಥಿತಿ ನಂತರದಲ್ಲಿ ಕರ್ನಾಟಕದಲ್ಲಿ ಎದ್ದು ಬಂದ ಬಂಡಾಯ, ದಲಿತ ಚಳುವಳಿಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸಕ್ರಿಯವಾದ ಪಾತ್ರ ವಹಿಸಿದವು. ಸಮುದಾಯ ಸಾಂಸ್ಕೃತಿಕ ಚಳುವಳಿಯನ್ನು ಆರಂಭಿಸಿತು. ಇದರಿಂದಾಗಿ ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಹೊಸ ಚೈತನ್ಯವನ್ನು ಸೃಷ್ಟಿಸಿತು.

ಜಾಗತಿಕವಾಗಿ ಸಮಾಜವಾದಕ್ಕೆ ಹಿನ್ನಡೆಯಾದ ಹಿನ್ನೆಲೆಯಲ್ಲಿ 1990 ರ ನಂತರದಲ್ಲಿ ಕರ್ನಾಟಕದಲ್ಲೂ ಕಮ್ಯುನಿಸ್ಟ್ ಚಳುವಳಿಯು ಸವಾಲುಗಳನ್ನು ಎದುರಿಸುತ್ತಿದೆ. ವಿವಿಧ ಸಮೂಹ ಸಂಘಟನೆಗಳ ಮೂಲಕ ಏನೆಲ್ಲಾ ಪ್ರಯತ್ನಗಳನ್ನು ಕಮ್ಯುನಿಸ್ಟ್ ಪಕ್ಷಗಳು ಮಾಡುತ್ತಿದ್ದರೂ, ಬೆಳವಣಿಗೆಯ ಸಮಸ್ಯೆಯನ್ನು ಅವು ಎದುರಿಸುತ್ತಿವೆ. ಈ ಸಮಸ್ಯೆ ಹೇಗಿದೆಯೆಂಬುದು ಚುನಾವಣೆಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಚುನಾವಣೆಗಳು ಕಮ್ಯುನಿಸ್ಟ್ ಪಕ್ಷಗಳ ಸ್ಪಷ್ಟವಾದ ಅಳತೆಗೋಲಲ್ಲದಿದ್ದರೂ, ಚುನಾವಣಾ ರಾಜಕಾರಣದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪ್ರಭಾವ ಅತ್ಯಂತ ಸೀಮಿತವಾಗಿರುವುದರಿಂದ, ಅವುಗಳ ಅಸ್ಥಿತ್ವವೇ ಇಲ್ಲವೇನೋ ಎಂಬಂತಹ ಪರಿಸ್ಥಿತಿಯಿದೆ.

ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳು, ತಾವು ಪ್ರತಿಪಾದಿಸುವ ಸಾಮಾಜಿಕ ಕ್ರಾಂತಿಯನ್ನು ಸಾಧಿಸುವಲ್ಲಿ ಯಶಸ್ವಿಯಾಗದಿದ್ದರೂ, ಕರ್ನಾಟಕದ ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯವನ್ನು ಕಾಪಾಡುವುದರಲ್ಲಿ ಮತ್ತು ಜನತೆಯ ಹಕ್ಕುಗಳನ್ನು ರಕ್ಷಿಸುವುದರಲ್ಲಿ ಮಹತ್ವದ ಕಾಣಿಕೆಯನ್ನು ನೀಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಗಮನಿಸಬಹುದಾಗಿದೆ.

❖ ❖ ❖

ಟಿಪ್ಪಣಿಗಳು

1. ನಾಯರ್ ವಿ.ಜೆ.ಕೆ., ದಿ ಪಾರ್ಟಿ ಆಫ್ ದಿ ವರ್ಕಿಂಗ್ ಕ್ಲಾಸ್, ಅಪ್ರಕಟಿತ ಲೇಖನ, ಪು. 21–22.
2. ಈ ಅಂಶಗಳನ್ನು ಸ್ಪಷ್ಟವಾಗಿ ವಿಶ್ಲೇಷಿಸಿ ನಿಗದಿಪಡಿಸಿಕೊಳ್ಳುವುದನ್ನು 'ಕಾರ್ಯಕ್ರಮ' ಎಂದು ಕಮ್ಯುನಿಸ್ಟ್ ಪಕ್ಷ ಕರೆಯುತ್ತದೆ.
3. ಭಾರತ ಕಮ್ಯುನಿಸ್ಟ್ ಪಕ್ಷದ ಮಾಸ್ಕೋ ಭೇಟಿ ನಿಯೋಗದಲ್ಲಿ ಅಜಯ್ ಘೋಷ್, ಎಸ್.ಎ.ಡಾಂಗೆ, ಎಂ.ಬಸವಪುನ್ನಯ್ಯ ಮತ್ತು ಸಿ.ರಾಜೇಶ್ವರ್‌ರಾವ್ ಇದ್ದರು. ಸೋವಿಯತ್ ಕಮ್ಯುನಿಸ್ಟ್ ಪಕ್ಷದ ತಂಡದಲ್ಲಿ ಜೋಸೆಫ್ ಸ್ಟಾಲಿನ್, ವಿ.ಎಂ.ಮೊಲೊಟೊವ್, ಎಂ.ಎ.ಸುಸ್ಲೋವ್, ಜಾರ್ಜಿ ಮಾಲೆಂಕೊವ್ ಇದ್ದರು.
4. ಈ ಬಗ್ಗೆ ಸಿಪಿಐನೊಳಗೆ ನಡೆದ ಚರ್ಚೆಗಳ ದಸ್ತಾವೇಜುಗಳಿಗೆ ನೋಡಿ: ಮೊಹಿತ್ ಸೇನ್, 1977, ಡಾಕ್ಯುಮೆಂಟ್ಸ್ ಆಫ್ ದಿ ಹಿಸ್ಟರಿ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ, ಸಂಪುಟ VII 1948–1950, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.
5. ಜಾನಕಿ ನಾಯರ್ – ಕೃಷ್ಣನ್ ಸಂದರ್ಶನ, ಪು. 6.
6. ಇದರಲ್ಲಿ ಎಂ.ಎಸ್.ಕೃಷ್ಣನ್, ಎನ್.ಆರ್.ಶ್ರೀನಿವಾಸನ್, ಸಿಂಪ್ಸನ್ ಸೋನ್ಸ್, ಗಂಭೀರಂ ಮತ್ತು ಮೊಣ್ಣಯ್ಯ ಸದಸ್ಯರಾಗಿದ್ದರು ಮತ್ತು ಈ ತಾತ್ಕಾಲಿಕ ಸಮಿತಿಗೆ ಸಿ.ಬಿ.ಮೊಣ್ಣಯ್ಯ ಕಾರ್ಯದರ್ಶಿಯಾಗಿದ್ದರೆಂದು ಶಂಕರನಾರಾಯಣರಾವ್ ಹೇಳಿದರೆ (ಶಂಕರನಾರಾಯಣ ರಾವ್ 1989: 65), ತಾತ್ಕಾಲಿಕ ಸಮಿತಿ ಸದಸ್ಯರಲ್ಲಿ ಸಿ.ಬಿ.ಮೊಣ್ಣಯ್ಯ, ಸಿಂಪ್ಸನ್ ಸೋನ್ಸ್, ಎಂ.ಎಸ್.ಕೃಷ್ಣನ್, ಐ.ಮರಿದಾಸ್, ಎಂ.ಎಸ್. ರಾಮರಾವ್ ಇವರುಗಳಿದ್ದರೆಂದು ಕಕ್ಕಿಲ್ಲಾಯರು ಹೇಳಿದ್ದಾರೆ (ಕಕ್ಕಿಲ್ಲಾಯ 2003: 178–179). ಇವರಿಬ್ಬರು ಪ್ರಸ್ತಾಪಿಸಿರುವ ಹೆಸರುಗಳಲ್ಲಿ ಕೆಲವು ಭಿನ್ನವಾಗಿವೆ.
7. ಉಳ್ಳಾಲದಲ್ಲಿ ಮೂರು ದಿನಗಳ ಕಾಲ ನಡೆದ ಪ್ರತಿನಿಧಿಗಳ ಸಭೆಯಲ್ಲಿ ಮಂಗಳೂರು, ಬೆಂಗಳೂರು, ಮೈಸೂರು, ಭದ್ರಾವತಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಾರವಾರ, ಗುಲ್ಬರ್ಗಾ, ಕೆ.ಜಿ.ಎಫ್. ಮೊದಲಾದ ಕಡೆಗಳಿಂದ ಸುಮಾರು 100 ಜನ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಎ.ಕೃಷ್ಣಶೆಟ್ಟಿ ಮತ್ತು ಕಾರ್ಯದರ್ಶಿಯಾಗಿ ಬಿ.ವಿ.ಕಕಿಲ್ಲಾಯರು ಕೆಲಸ ಮಾಡಿದರು.
8. ಜಾನಕಿ ನಾಯರ್ – ಕೃಷ್ಣನ್ ಸಂದರ್ಶನ, ಪು. 7.
9. ಎಸ್.ಎನ್.ಹೊಳ್ಳ ಅವರು ಮಂಗಳೂರಿನಿಂದ ತಪ್ಪಿಸಿಕೊಂಡು ಭೂಗತ ವಾಸದ ಕಾರಣಕ್ಕಾಗಿ ಗುಲ್ಬರ್ಗಕ್ಕೆ ಹೋದರು. ಅಲ್ಲಿ ಕಾದಂಬರಿ ಜಾಗೀರ್‌ದಾರ್ ಎಂಬ ರಾಯಲ್ ಕುಟುಂಬದ ಮಹಿಳೆಯ ಆಶ್ರಯದಲ್ಲಿ ಇದ್ದರೆಂದು ವಿಜೆಕೆ ನಾಯರ್‌ರನ್ನು ಸಂದರ್ಶನ ಮಾಡುವಾಗ ಈ ಬಗ್ಗೆ ಪ್ರಸ್ತಾಪಿಸಿದ್ದರು. ಎನ್.ಕೆ.ಉಪಾಧ್ಯಾಯರು ತಮ್ಮ ಪುಸ್ತಕದಲ್ಲಿ ಇವರು ತುಂಬಾ ಪ್ರಭಾವಶಾಲಿ ಮಹಿಳೆ ಎಂದಿದ್ದಾರೆ. ಮಂಗಳೂರಿನ ಯಶವಂತ ಮರೋಳಿಯವರು ಸ್ಪಷ್ಟಪಡಿಸಿದ ರೀತಿಯಲ್ಲಿ ಈಕೆಯನ್ನು ಎಸ್.ಎನ್. ಹೊಳ್ಳ ಮದುವೆಯಾಗಿದ್ದರು. ಇವರು 1952 ರಲ್ಲಿ ವಾಪಸ್ ಮಂಗಳೂರಿಗೆ ಬಂದರು. ಆಗ ಇವರು

ಪುನರ್‌ವಿವಾಹ ಆಗಿದ್ದರೆಂಬ ಕಾರಣಕ್ಕೆ ಅವರಿಗೆ ಹೆಚ್ಚಿನ ಸ್ವಾಗತ ಸಿಗಲಿಲ್ಲ. ಪಕ್ಷದ ಆದೇಶವನ್ನು ಉಲ್ಲಂಘಿಸಿ ಬಂಧನದಿಂದ ತಪ್ಪಿಸಿಕೊಂಡಿದ್ದ ಕೇಸನ್ನು ಎದುರಿಸಿದ್ದರೆಂಬ ಕಾರಣವೂ ಇತ್ತು. ಕೊನೆಗೆ ಇವರು ಕಾಂಗ್ರೆಸ್ ಪಕ್ಷವನ್ನು ಸೇರಿದರು.

10. ಅದರಲ್ಲಿ ಎಂ.ಹೆಚ್.ಕೃಷ್ಣಪ್ಪ, ಎ.ಕೃಷ್ಣಶೆಟ್ಟಿ, ಪಿ.ರಾಮಚಂದ್ರರಾವ್, ರಾಮಪ್ಪ ಮಾಸ್ಟರ್, ಶಿವಶಂಕರರಾವ್, ನಾರಾಯಣ ಮೂರ್ತಿ, ಶಾಂತಾರಾಂ ಪೈ, ಎಂ.ಎಸ್.ಶಾಸ್ತ್ರಿ ಮೊದಲಾದವರು ಇದರಲ್ಲಿದ್ದರು.

11. ಮೊದಲ ಜಿಲ್ಲಾ ಸಮಿತಿಯಲ್ಲಿ ಆರ್.ವೆಂಕಟರಾಮಯ್ಯ (ಮುಳಬಾಗಲು), ಪಿ.ವೆಂಕಟಗಿರಿಯಪ್ಪ (ಕೋಲಾರ), ಅಬ್ದುಲ್ ಮಜೀದ್ (ಕೋಲಾರ) ಟಿ.ಕೆ.ಗಂಗಿರೆಡ್ಡಿ (ಚಿಂತಾಮಣಿ), ಅಬ್ದುಲ್ ಸುಬಾನ್ (ಚಿಂತಾಮಣಿ), ಹೆಚ್.ಎಸ್.ರಾಮರಾವ್ (ಗೌರಿಬಿದನೂರು), ಎಸ್.ಲಕ್ಷ್ಮಯ್ಯ (ಚಿಕ್ಕಬಳ್ಳಾಪುರ), ಎ.ವಿ.ಅಪ್ಪಸ್ವಾಮಿರೆಡ್ಡಿ ಮತ್ತು ಡಿ.ಎನ್.ವೆಂಕಟರೆಡ್ಡಿ (ಇಬ್ಬರೂ ಬಾಗೇಪಲ್ಲಿ), ಸವರಿದಾಸ್ ಮತ್ತು ವಿ.ಎಂ.ಗೋವಿಂದನ್ (ಇಬ್ಬರೂ ಕೆ.ಜಿ.ಎಫ್.). ಆರ್.ವೆಂಕಟರಾಮಯ್ಯ ನಂತರ ಸವರಿದಾಸ್ ಸಿಪಿಐ ಕಾರ್ಯದರ್ಶಿಯಾಗಿದ್ದರು. ಇವರ ನಂತರ ಹೆಚ್.ಎಸ್.ರಾಮರಾವ್ ಕಾರ್ಯದರ್ಶಿಯಾಗಿದ್ದರು.

12. ಸಾಧ್ವಿ ಪತ್ರಿಕೆ, ಸಂಪುಟ 8, ಸಂಚಿಕೆ 298, ಮೈಸೂರು, 15–6–1950, ಮೈಕ್ರೋಫಿಲ್ಮ್ ರೋಲ್ ನಂ. 79(6), ಕೆಎಸ್ಎ, ಬೆಂಗಳೂರು.

13. ಸ್ವಾತಂತ್ರ್ಯ ನಂತರದಲ್ಲಿ ಕೆಜಿಎಫ್ ಗಣಿ ಕಂಪನಿಗಳ ವಿದೇಶೀ ಅಧಿಕಾರಿಗಳ ವಿರುದ್ಧ ತೀವ್ರಗೊಳ್ಳುವ ಅತೃಪ್ತಿ, ಇದರಲ್ಲಿ ಕಮ್ಯುನಿಸ್ಟರು ಸಕ್ರಿಯವಾಗಿರುವ ವಿಚಾರದ ಬಗ್ಗೆ ಮತ್ತು ಅಧಿಕಾರಿ ವರ್ಗದ ಭಾರತೀಕರಣದ ಬಗ್ಗೆ ಮಾಹಿತಿ ಕೋರಿ ಕೇಂದ್ರ ಗೃಹ ಸಚಿವಾಲಯದಿಂದ ಮೈಸೂರು ಸರ್ಕಾರಕ್ಕೆ ಬಂದ ಪತ್ರಕ್ಕೆ, ಮೈಸೂರು ಸರ್ಕಾರದ ಪರವಾಗಿ ಸಿ.ಎಸ್.ವೆಂಕಟಾಚಾರ್ ಅವರು 27.11.1951 ರಂದು ಬರೆದ ಉತ್ತರವಿದು. ವಿದೇಶೀ ಬಂಡವಾಳದಾರರು ದೇಶೀ ಕಾರ್ಮಿಕರು ಮಾತ್ರವಲ್ಲ ಅಧಿಕಾರಿಗಳ ವಿಶ್ವಾಸ ಹೊಂದದೆ ಕೆಲಸ ಮಾಡಲು ಆಗುವುದಿಲ್ಲ, ಈಗಾಗಲೇ ಬರ್ಮಾ ಷೆಲ್, ಇಂಪೀರಿಯಲ್ ಟೊಬ್ಯಾಕೊ, ಐ.ಸಿ.ಐ. ಮುಂತಾದ ಬಂಡವಾಳದಾರ ಕಂಪನಿಗಳು ಭಾರತೀಕರಣದ ಕ್ರಮಗಳಿಗೆ ಮುಂದಾಗಿದ್ದಾರೆ ಎಂದೂ ಇದರಲ್ಲಿ ವಿವರಿಸಿದರು. – ನೋಟ್ ಪ್ರಿಪೇರ್ಡ್ ಬೈ ಇಂಟೆಲಿಜೆನ್ಸ್ ಬ್ಯೂರೊ ರಿಗಾರ್ಡಿಂಗ್ ದಿ ಕಮ್ಯುನಿಸ್ಟ್ ಸಿಚ್ಯುವೇಷನ್ ಅಂಡ್ ಲೇಬರ್ ಎಜಿಟೇಷನ್ ಇನ್ ಕೆಜಿಎಫ್, ಮೈಸೂರು, ಫೈಲ್ ನಂ.18(11)– PA/51, ಪೊಲಿಟಿಕಲ್ ಬ್ರಾಂಚ್, ಮಿನಿಸ್ಟ್ರಿ ಆಫ್ ಸ್ಟೇಟ್ಸ್, ಆರ್ಕೈವ್ಸ್ ಆಫ್ ಇಂಡಿಯಾ, ನ್ಯೂ ಡೆಲ್ಲಿ.

14. ನವಭಾರತ ಕನ್ನಡ ದಿನಪತ್ರಿಕೆ, ಟಿ.ಬಿ.ಕೇಶವರಾವ್ (ಸಂ.), 24–3–1952, ಬಳ್ಳಾರಿ, ಮೈಕ್ರೋಫಿಲ್ಮ್ ರೋಲ್ ನಂ.125, ಸಂಪುಟ 5, ಕೆಎಸ್ಎ, ಬೆಂಗಳೂರು.

15. ಭದ್ರಾವತಿಯ ಮೈಸೂರು ಪೇಪರ್ ಮಿಲ್ಲಿನ ಕಾರ್ಮಿಕರಾಗಿದ್ದ ಇವರು ಮುಷ್ಕರದ ಸಂದರ್ಭದಲ್ಲಿ ವಜಾಗೊಂಡು ಕಮ್ಯುನಿಸ್ಟ್ ಪಕ್ಷದ ಪೂರ್ಣಾವಧಿ ಮುಖಂಡರಾಗಿ ಕೆಲಸ ಮಾಡಿದರು. ಸ್ವಾತಂತ್ರ ಹೋರಾಟದಲ್ಲಿ ಬಂಧಿತರಾಗಿ ಸೇಲಂ ಜೈಲಿನಿಂದ ತಪ್ಪಿಸಿಕೊಂಡು ಬಂದಿದ್ದರು. ತೀರ್ಥಹಳ್ಳಿಯಲ್ಲಿ ಗೇಣಿದಾರರ ಹೋರಾಟಗಳನ್ನು ಆರಂಭಿಕವಾಗಿ ಸಂಘಟಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಟೋಮೊಬೈಲ್ ಕಾರ್ಮಿಕರ ಸಂಘ, ಹೋಟೆಲ್ ಕಾರ್ಮಿಕರ ಸಂಘ ಮುಂತಾದ ಸಂಘಟನೆಗಳನ್ನು ಆರಂಭಿಸಿದರು. (ಶಿವಮೊಗ್ಗದ ಕೆ.ಎಂ.ಶ್ರೀನಿವಾಸ್, ಸಿಐಟಿಯು ಮುಖಂಡ ಶಿವಶಂಕರ್ ಮತ್ತು ಸಮುದಾಯ ಸಂಘಟನೆಯ ಪ್ರಭಾಕರನ್ ಅವರು ನೀಡಿದ ಮಾಹಿತಿ) 1958 ರಲ್ಲಿ ಸಿಪಿಐನ ಜಿಲ್ಲಾ ಸಮಿತಿ ರಚನೆಯಾಗಿ ಚಂದು ಕುಟ್ಟಿ ಕಾರ್ಯದರ್ಶಿಯಾಗಿದ್ದರು. ಪಕ್ಷ ವಿಭಜನೆ ಆದ ನಂತರದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ 1987 ರಲ್ಲಿ ಅವರು ನಿಧನರಾಗುವವರೆಗೂ ಆ ಸ್ಥಾನದಲ್ಲಿದ್ದರು (ಜಿ.ಎಸ್.ನಾಗರಾಜ್ ಸಂದರ್ಶನ).

16. ಶಿವಮೊಗ್ಗದ ವಕೀಲರಾದ ಜಿ.ಎಸ್.ನಾಗರಾಜ್ ಅವರು ವಿದ್ಯಾರ್ಥಿ ದೆಸೆಯಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿ ನಾಯಕರಾಗಿ ಕೆಲಸ ಮಾಡಿದರು. 1965 ರಲ್ಲಿ ಬೆಂಗಳೂರಿನ ಗ್ಲಾಸ್ ಹೌಸಿನಲ್ಲಿ ಎಐಸಿಸಿ ಅಧಿವೇಶನ ನಡೆದಿದ್ದಾಗ ಲಾಲ್‌ಬಹದ್ದೂರ್ ಶಾಸ್ತ್ರಿ ಬಂದಿದ್ದರು. ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿದರೆಂದು ಜಿ.ಎಸ್.ನಾಗರಾಜ್, ಸೂರಿ, ಎಲ್.ಆರ್.ಭೂತೆ, ಹೊಸನಗರ ರಾಮಕೃಷ್ಣ ಇವರನ್ನು ಬಂಧಿಸಿ ಹತ್ತು ತಿಂಗಳು ಜೈಲಿಗೆ ಹಾಕಲಾಗಿತ್ತು. ನಂತರ ಸಿಪಿಐ(ಎಂ) ತೀರ್ಮಾನ ಮಾಡಿ ತೀರ್ಥಹಳ್ಳಿಯಲ್ಲಿ ರೈತ ಸಂಘವನ್ನು ಕಟ್ಟಲು ಪೂರ್ಣಾವಧಿ ಕಾರ್ಯಕರ್ತನನ್ನಾಗಿ ಕಳುಹಿಸಿತು. ಭೂಸುಧಾರಣಾ ಕಾನೂನಿನನ್ವಯ ಗೇಣಿದಾರರ ಪರವಾಗಿ ಹೋರಾಟಗಳನ್ನು ನಡೆಸಿದರು. 1978 ರಲ್ಲಿ ಕುಟ್ಟಪ್ಪ ಮತ್ತು ಎಂ.ಹೆಚ್.ಕೃಷ್ಣಪ್ಪನವರ ಮೇಲಿನ ಆಕರ್ಷಣೆಯಿಂದ ಸಿಪಿಐ(ಎಂ) ತೊರೆದು ಹೋಗಿ 2000 ದಲ್ಲಿ ಪುನಃ ವಾಪಸ್ ಬಂದರು.

17. ಕೆ.ಎಂ.ಶ್ರೀನಿವಾಸ ಅವರೊಂದಿಗೆ ಸಂದರ್ಶನ.

18. ಮಹಮ್ಮದ್ ದಸ್ತಗೀರ್‌ರೊಂದಿಗೆ ಸಂದರ್ಶನ.

19. ಇವರು ಮಿಲಿಟರಿ ರಾಡಾರ್ ತಂತ್ರಜ್ಞಾನಿಗಳಾಗಿದ್ದು, ಬಾಂಬೆ ಜವಳಿ ಕಾರ್ಮಿಕರ ಹೋರಾಟವನ್ನು ಹತ್ತಿರದಿಂದ ಬಲ್ಲವರಾಗಿದ್ದರು ಮತ್ತು ಮಾರ್ಕ್ಸ್‌ವಾದವನ್ನು ಓದಿಕೊಂಡಿದ್ದರು.

20. ಕಮ್ಯುನಿಸ್ಟ್ ಪಕ್ಷದ ಮೈಸೂರು ಸಮಿತಿ ರಚನೆಯಾದಾಗ ಅದರ ಕಾರ್ಯದರ್ಶಿಯಾಗಿದ್ದರು.

21. ವಿದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋದಾಗ ಅಲ್ಲಿ ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದರು ಮತ್ತು ಮೈಸೂರಿನಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ಈ ವಿಚಾರಗಳನ್ನು ಹರಡಲು ಪ್ರಯತ್ನಿಸಿದರು.

22. ಮೈಸೂರಿನ ಆರಂಭಿಕ ಉದ್ದಿಮೆ ಬೀಡಿ. ಇದರಲ್ಲಿ ಕೇರಳದ ಮಾದರಿಯಲ್ಲಿ ಸಂಘವನ್ನು ಕಟ್ಟಲು ಕೇರಳದಿಂದ ಬಂದಿದ್ದ ಕಾರ್ಮಿಕರು ಪ್ರಯತ್ನಿಸುತ್ತಿದ್ದರು, ಆಗ ಮಂಗಳೂರು ಗಣೇಶ ಬೀಡಿ ತುಂಬಾ ಪ್ರಸಿದ್ದವಾಗಿತ್ತು. ಅದು ಕುಟುಂಬ ಪಾಲುದಾರರ ಕಂಪನಿಯಾಗಿತ್ತು. ಅವರಲ್ಲಿ ಹಿರಿಯರಾದ ರಘುರಾಮ ಪ್ರಭು ಎಂಬುವರು ಸಮಾಜವಾದದ ಬಗ್ಗೆ ಅಭಿಮಾನ ಬೆಳೆಸಿಕೊಂಡಿದ್ದರು. ಬೀಡಿ ಕಾರ್ಮಿಕರ ನಡುವೆ ಮತೀಯ ನೆಲೆಯಲ್ಲಿ ವಿಭಜನೆ ಮಾಡುವುದನ್ನು ಅವರು ವಿರೋಧಿಸುತ್ತಿದ್ದರು. ವಿನೋಬಾ ರಸ್ತೆಯಲ್ಲಿದ್ದ ಕೇಂದ್ರ ಕಛೇರಿಯ ಅವರ ಕೊಠಡಿಯ ಪ್ರವೇಶ ದ್ವಾರದಲ್ಲಿ ಕುಡುಗೋಲು ಸುತ್ತಿಗೆ ಚಿತ್ರವನ್ನು ಬಿಡಿಸಿದ್ದರು. ಅವರು ಹಲವಾರು ಸಂದರ್ಭಗಳಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಸಹಾಯ ಮಾಡಿದ್ದರು ಮತ್ತು ಅದರ ಅಭಿಮಾನಿಯಾಗಿದ್ದರು (ಉಗ್ರಪ್ಪ 2008: 44–46).

23. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡ ಟಿ.ಪಿ.ರಮೇಶ್ ಅವರೊಂದಿಗೆ ಸಂದರ್ಶನ. ಕಮ್ಯುನಿಸ್ಟರ ವಿರುದ್ಧ ನಡೆದ ಈ ಪ್ರತಿಭಟನೆಗೆ ನೇತೃತ್ವ ಕೊಟ್ಟಿದ್ದವರು ಆಗಿನ ಜನಸಂಘದ ನಾಯಕರಾಗಿದ್ದ ಎ.ಕೆ.ಸುಬ್ಬಯ್ಯನವರು. ನಂತರದ ದಿನಗಳಲ್ಲಿ ಸುಬ್ಬಯ್ಯನವರು ಆರ್‌ಎಸ್‌ಎಸ್‌ನ ಕಡು ವಿರೋಧಿಗಳಾದರು. ಮತ್ತು ಅರ್‌ಎಸ್‌ಎಸ್ ಅಂತರಂಗ ಎಂಬ ಪುಸ್ತಕವನ್ನು ಬರೆದು ಸಂಘಪರಿವಾರದ ಕಟು ಟೀಕಾಕಾರರೆನ್ನಿಸಿಕೊಂಡರು.

24. ಕರ್ನಾಟಕದ ಮೊದಲ ಕಮ್ಯುನಿಸ್ಟರಲ್ಲಿ ಒಬ್ಬರಾದ ಸಿ.ಬಿ.ಮೊಣ್ಣಯ್ಯನವರು ಕಮ್ಯುನಿಸ್ಟ್ ಪಕ್ಷ ವಿಭಜನೆಯಾದ ಹತ್ತು ವರ್ಷಗಳ ನಂತರ ಬರೆದ 'ಮಾರ್ಕ್ಸಿಸ್ಟ್ ಪಕ್ಷದ ಅನುಯಾಯಿಗಳಲ್ಲಿ ಒಂದು ವಿನಂತಿ' ಎಂಬ ಒಂದು ಪತ್ರವನ್ನು ಕೆಂಬಾವುಟದಲ್ಲಿ ಪ್ರಕಟಿಸಲಾಯಿತು. ಅದರಲ್ಲಿ ಅವರು ಮಾರ್ಕ್ಸಿಸ್ಟ್ ಪಕ್ಷದ ಅನುಯಾಯಿಗಳಿಗೆ ಮಾತೃ ಪಕ್ಷಕ್ಕೆ ಮರಳುವಂತೆ ವಿನಂತಿ ಮಾಡಿದರು. ಆ ಪತ್ರದ ಸಾರಾಂಶವೇನೆಂದರೆ, ಕಮ್ಯುನಿಸ್ಟ್ ಪಕ್ಷದ ಸಂಘಟನಾ ನಿಯಮವಾದ 'ಪ್ರಜಾಸತ್ತಾತ್ಮಕ ಕೇಂದ್ರವಾದ'ವನ್ನು ಉಲ್ಲಂಘಿಸಿ ಕೆಲವು ಮುಖಂಡರು ಸಿಪಿಐನ್ನು ವಿಭಜನೆ ಮಾಡಿದರು. ಆ ರೀತಿ ವಿಭಜನೆ ಮಾಡಿದ ಅವರು ಮೂರ್‍ನಾಲ್ಕು ವರ್ಷಗಳ ಕಾಲ, ತಾವು ಮಾತೃಪಕ್ಷದಿಂದ ಹೊರಬರಲು ಕಾರಣಗಳೇನು ಎಂಬುದನ್ನಾಗಲೀ, ಚರ್ಚಾಸ್ಪದ ಪ್ರಶ್ನೆಗಳ ಕುರಿತು ತಮ್ಮ ಸ್ವಂತ ನಿಲುಮೆಗಳನ್ನಾಗಲೀ ತಮ್ಮ ಹಿಂಬಾಲಕರಿಂದ ಬಚ್ಚಿಟ್ಟರು. ಬರೇ ಟೊಳ್ಳು ಕ್ರಾಂತಿಕಾರಿ ಮಾತುಗಳಿಂದ ಅವರನ್ನು ಮೋಸಗೊಳಿಸಿದರು. 1969 ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಇಂದಿರಾ ಕಾಂಗ್ರೆಸಿಗೆ ಬೆಂಬಲಿಸಿದರು. ಮಾತು ಮತ್ತು ಕೃತಿಗಳ ನಡುವಿನ ಅಂತರದಿಂದ ಮಾರ್ಕ್ಸಿಸ್ಟ್ ಪಾರ್ಟಿಯಲ್ಲಿ ಗುಂಪುಗಾರಿಕೆ ಬೆಳೆದು, ಒಂದು ದೊಡ್ಡ ವಿಭಾಗ ಸಿಡಿದು ಸಿಪಿಐ(ಎಂ-ಎಲ್) ಪಕ್ಷ ಸ್ಥಾಪನೆಯಾಗಿದೆ. ಪಕ್ಷ ಒಡೆದರೆ ಸಿಪಿಐನ್ನು ಕಬಳಿಸಬಹುದೆಂಬ ಮಾರ್ಕ್ಸಿಸ್ಟರ ನಿರೀಕ್ಷೆ ಹುಸಿಯಾಗಿದೆ. ಅಂತರರಾಷ್ಟ್ರೀಯವಾಗಿ ಅವರಿಗೆ ಮನ್ನಣೆ ಇಲ್ಲವಾಗಿದೆ. ಚೀನೀ ಕಮ್ಯುನಿಸ್ಟ್ ಪಕ್ಷವೂ ಅವರನ್ನು ಕೈಬಿಟ್ಟಿದೆ. ಆದರೆ ಸಿಪಿಐ ದೇಶದ ಎರಡನೇ ದೊಡ್ಡ ಪಕ್ಷವಾಗಿ ಬೆಳೆದಿದೆ. ಆದರೆ ಕರ್ನಾಟಕದ ಮಾರ್ಕ್ಸಿಸ್ಟ್ ಪಾರ್ಟಿಯಲ್ಲಿ ಇಂದು ಅನಾಯಕತ್ವ ತಾಂಡವವಾಡುತ್ತಿದೆ. 'ತಾವು ಹಿಡಿದ ಮಾರ್ಗವೇ ಸರಿ' ಎಂದು ಛಲ ಹಿಡಿದು ನಡೆದಲ್ಲಿ ಒಂದು ತಪ್ಪನ್ನು 'ಸರಿ' ಎಂದು ಸಮರ್ಥಿಸಲು ಹತ್ತಾರು ಹೆಚ್ಚಿನ ತಪ್ಪುಗಳಾಗಿ, ಅಂತಹ ವ್ಯಕ್ತಿಗಳೂ ಪಕ್ಷಗಳೂ ಛಿದ್ರಛಿದ್ರವಾಗಿ ನಿರ್ನಾಮವಾಗುವುದು ಖಚಿತ. ಈ ಎಲ್ಲಾ ಹಿನ್ನೆಲೆಯಲ್ಲಿ ವಿಮರ್ಶೆ ಮಾಡಿಕೊಂಡು ಮುಂದಾಳುಗಳನ್ನು ಬಿಟ್ಟು ಮಾತೃಪಕ್ಷಕ್ಕೆ ವಾಪಸ್ ಆಗಬೇಕೆಂದು ಮನವಿ ಮಾಡಿದ್ದರು (ಕೆಂಬಾವುಟ9-3-1975: 5).

25. ಕೃಷ್ಣ ಮೆಣಸಿಯವರು ಮರಾಠಿ ಭಾಷೆಯಲ್ಲಿ 28 ಪುಸ್ತಕಗಳನ್ನು ಬರೆದಿದ್ದಾರೆ. 'ಕಿತ್ತೂರು ಚೆನ್ನಮ್ಮ' ಬಗ್ಗೆ ಸಂಶೋಧನಾ ಪುಸ್ತಕ, 'ವೂ ವಾಸ್ ಅಂಬೇಡ್ಕರ್', ಜ್ಞಾನೇಶ್ವರ್ ಮತ್ತು ಬಸವೇಶ್ವರ್ ಎಂಬ ಮರಾಠಿ ಪುಸ್ತಕ, 'ಪರಿಕ್ರಮ', ಹೋಚಿಮಿನ್ಹ್, ಪುಸ್ತಕಗಳನ್ನು, ನಿರಂಜನರ ಚಿರಸ್ಮರಣೆ ಮರಾಠಿ ಭಾಷಾಂತರ 'ಅವಿಸ್ಮರಣೀಯ ವೀರಗಾಥಾ' ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ. ತಮ್ಮ ಜೀವನಾವಧಿಯಲ್ಲಿ ಇವರು ಬೆಳಗಾಂ, ಇಂಡಲಗಾ, ನಾಸಿಕ್, ದೆಹಲಿ, ಯರವಾಡ ಮುಂತಾದ ಏಳು ಜೈಲುಗಳಲ್ಲಿ ಬಂಧಿಯಾಗಿದ್ದರು.

26. ಕೃಷ್ಣ ಮೇಣಸೆ ಅವರೊಂದಿಗೆ ಸಂದರ್ಶನ.

27. ಬೆಳಗಾವಿಯ ಜಿಎಸ್‌ಎಸ್ ಕಾಲೇಜಿನ ಪ್ರಾಚಾರ್ಯರಾದ ಆನಂದ ಮೇಣಸಿ ಅವರೊಂದಿಗೆ ಸಂದರ್ಶನ.

28. ಬೆಳಗಾವಿಯಲ್ಲಿದ್ದ ಹೆಚ್ಚಿನ ಕಮ್ಯುನಿಸ್ಟ್ ಮುಖಂಡರು ಮರಾಠಿಯನ್ನು ಮಾತನಾಡುತ್ತಿದ್ದರು. ದೇಶಮಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷ ಗಡಿ ರೇಖೆಗಳನ್ನು ತೀರ್ಮಾನಿಸುವಾಗ ಹಳ್ಳಿಯನ್ನು ಘಟಕವನ್ನಾಗಿ ಪರಿಗಣಿಸಬೇಕೆಂದು ಹೇಳಿತ್ತು. ಆದರೆ ಕೇಂದ್ರದ ಆಗಿನ ಕಾಂಗ್ರೆಸ್ ಸರ್ಕಾರ ಅದಕ್ಕೆ ಮಾನ್ಯತೆ ನೀಡಿರಲಿಲ್ಲ. ಹೀಗಾಗಿ ಕನ್ನಡ ಹೆಚ್ಚು ಮಾತನಾಡುವ ಗ್ರಾಮಗಳು ಮಹಾರಾಷ್ಟ್ರದಲ್ಲೂ, ಮರಾಠಿ ಹೆಚ್ಚು ಮಾತನಾಡುವ ಗ್ರಾಮಗಳು ಕರ್ನಾಟಕದಲ್ಲೂ ಉಳಿದುಕೊಂಡವು. ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸಬೇಕೆಂಬ ಹೋರಾಟದಲ್ಲಿ ಕರ್ನಾಟಕದಲ್ಲೂ ಮತ್ತು ಮಹಾರಾಷ್ಟ್ರದಲ್ಲೂ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು. ಆಗಿನ ಮುಂಬೈ ಪ್ರಾಂತ್ಯದ ಮೊರಾರ್ಜಿ ದೇಸಾಯಿ ಸರ್ಕಾರ ಕಮ್ಯುನಿಸ್ಟರನ್ನು ಬಂಧಿಸಿ ಜೈಲಿನಲ್ಲಿಟ್ಟಿತ್ತು. ಈ ಸಮಸ್ಯೆಯ ಕಾರಣದಿಂದ ಬೆಳಗಾವಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಅಡ್ಡಿಯಾಯಿತು ಎಂದು ಹಿರಿಯ ಕಮ್ಯುನಿಸ್ಟ್ ಮುಖಂಡ ಕೃಷ್ಣ ಮೇಣಸಿ ಮತ್ತು ಅವರ ಮಗ ಪ್ರೊ.ಆನಂದ ಮೇಣಸಿ ಅವರ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

29. ಯೂರೋಪಿಯನ್ ಮಾದರಿ ಊಳಿಗಮಾನ್ಯ ವ್ಯವಸ್ಥೆ ಭಾರತದಲ್ಲಿ ಇತ್ತೇ ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ಬಂದಿವೆ. ಭಾರತದ ಇತಿಹಾಸಕಾರರಾದ ಡಿ.ಡಿ.ಕೋಸಾಂಬಿ, ಆರ್.ಎಸ್.ಶರ್ಮ, ರೋಮಿಲಾ ಥಾಪರ್ ಮುಂತಾದವರು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯ ಕುರಿತು ಬರೆದಿದ್ದಾರೆ. ಯೂರೋಪಿಯನ್ ಮಾದರಿಯ ಊಳಿಗಮಾನ್ಯ ಪದ್ಧತಿಗಿಂತ ಭಿನ್ನವಾದ ವ್ಯವಸ್ಥೆಯು ಭಾರತ ಉಪಖಂಡದಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ಅಭಿಪ್ರಾಯಗಳನ್ನು ಚರಿತ್ರಕಾರರು ವ್ಯಕ್ತಪಡಿಸಿದ್ದಾರೆ: – ಪ್ರಕಾಶ್ ಕೆ., ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ವಿಭಜನಾ ವಾದಗಳು, ಐಕ್ಯರಂಗ ವಿಶೇಷ ಸಂಚಿಕೆ, ನವೆಂಬರ್, 2001, ಪು. 6 ರಲ್ಲಿ ಜಿ.ಎನ್.ನಾಗರಾಜ್ ಅವರ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದ್ದು, ಅದನ್ನು ಇಲ್ಲಿ ಬಳಸಲಾಗಿದೆ.

30. ರಸೂಲ್ 1989: 93 ರಲ್ಲಿ ಉದ್ಧೃತ, 1942 ರ ಮೇ 29–31 ರವರೆಗೆ ನಡೆದ ಬಿಹ್ತಾ ಎಐಕೆಎಸ್ ಅಧಿವೇಶನದ ನಿರ್ಣಯ 3.

31. ಸ್ವಾತಂತ್ರ್ಯ ನಂತರ ಮೊದಲ ಚುನಾವಣೆಯಲ್ಲಿ ಕಾಂಗ್ರೆಸ್ ಎಲ್ಲ ಕಡೆಗಳಲ್ಲಿ ಅಧಿಕಾರಕ್ಕೆ ಬಂದ ಮೇಲೆ ಭಾಷಾವಾರು ರಾಜ್ಯ ರಚನೆಗೆ ಕಾಂಗ್ರೆಸ್ ಹಿಂದೇಟು ಹಾಕಿದಾಗ, ಸಂಸತ್ತಿನಲ್ಲಿ ಕಮ್ಯುನಿಸ್ಟರು ಪದೇ ಪದೇ ಈ ಬಗ್ಗೆ ನಿರ್ಣಯಗಳನ್ನು ಮಂಡಿಸಿದರು. ಆಂಧ್ರ, ಕೇರಳ ಮತ್ತು ಕರ್ನಾಟಕ ಪ್ರಾಂತಗಳಲ್ಲಿ ಕಮ್ಯುನಿಸ್ಟರು ಚಳುವಳಿಗಳ ಮೂಲಕ ಕೇಂದ್ರದ ಮೇಲೆ ಒತ್ತಡ ತಂದರು. ಕರ್ನಾಟಕದಲ್ಲಿ ಎಸ್.ವಿ.ಘಾಟೆ ಮತ್ತು ಎನ್.ಎಲ್.ಉಪಾಧ್ಯಾಯ ಇವರ ನೇತೃತ್ವದಲ್ಲಿ 'ಕರ್ನಾಟಕ ಸಂಘಟನಾ ಸಮಿತಿ'ಯನ್ನು ರಚಿಸಿ ಚಳುವಳಿಯನ್ನು ಸಂಘಟಿಸಲು ತೀರ್ಮಾನಿಸಿದರು. ಎಲ್ಲಾ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾವಾರು ಪ್ರತಿನಿಧಿಗಳನ್ನು ನೇಮಿಸಿ ಸಂಘಟನಾ ಕಾರ್ಯವನ್ನು ವಹಿಸಲಾಯಿತು. ಕನ್ನಡ ಪ್ರದೇಶಗಳನ್ನೆಲ್ಲಾ ಸಂಚರಿಸಿ ಏಕೀಕರಣ ಪರ ಪ್ರಚಾರ ಕೈಗೊಂಡರು ಎಂದು ಎಸ್.ಚಂದ್ರಶೇಖರ್ ಅವರು ಪ್ರಸ್ತಾಪಿಸಿದ್ದಾರೆ (ಎಸ್.ಚಂದ್ರಶೇಖರ್, ಏಕೀಕರಣ ಕಥನ, ಸಮಕಾಲೀನ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ 6, ಪುಟ. 55).

32. ಅರುಣ ವಾರಪತ್ರಿಕೆ 22–5–1955: 5.

33. ಅದೇ, 19–6–1955: 5.

34. ರೆಸಲ್ಯೂಶನ್ ಆಫ್ ದಿ ಸೆಂಟ್ರಲ್ ಕಮಿಟಿ ಅಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಆನ್ ಸ್ಟೇಟ್ಸ್ ರಿ–ಆರ್ಗನೈಸೇಷನ್, 10–18 ಏಪ್ರಿಲ್ 1954, ಪಬ್ಲಿಷ್ಡ್ ಇನ್ ಡಾಕ್ಯುಮೆಂಟ್ಸ್ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ, ಪು. 398.

35. ಅದೇ., ಪು. 399.

36. ಅದೇ., ಪು. 401–402.

37. ಮೆಮೊರಂಡಮ್ ಆಫ್ ದಿ ಸೆಂಟ್ರಲ್ ಕಮಿಟಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಟು ದಿ ಸ್ಟೇಟ್ಸ್ ರಿಆರ್ಗನೈಸೇಷನ್ ಕಮಿಷನ್ ಎಂಬ ಮನವಿಯನ್ನು 1954 ಜೂನ್‌ನಲ್ಲಿ ರಾಜ್ಯಗಳ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಿತು ಮತ್ತು ಇದನ್ನು ಕಿರುಹೊತ್ತಿಗೆಯಾಗಿ ಪ್ರಕಟಿಸಿತು.

38. ಅದೇ., ಪು. 413.

39. ರೆಸಲ್ಯೂಷನ್ ಆಫ್ ದಿಸೆಂಟ್ರಲ್ ಕಮಿಟಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಆಪೋಸಿಂಗ್ ದಿ ಪ್ರೊಪೋಸಲ್ ಫಾರ್ ಮರ್ಜರ್ ಆಫ್ ಸ್ಟೇಟ್ಸ್, 1956 ಜನವರಿ 28 ರಿಂದ ಫೆಬ್ರವರಿ 4 ರವರಗೆ ನಡೆದ ಸಭೆಯಲ್ಲಿ ಅಂಗೀಕರಿಸಿದ್ದು, ಪು. 474.

40. ಕೃಷ್ಣ ಮೆಣಸೆ ಅವರೊಂದಿಗೆ ಸಂದರ್ಶನ – ಇವರು ಬೆಳಗಾವಿಯ ಸಿಪಿಐನ ಹಿರಿಯ ಮುಖಂಡರು, ಭಾಷಾವಾರು ರಾಜ್ಯ ರಚನೆಯ ಹೋರಾಟದಲ್ಲಿ ಸಕ್ರಿಯವಾಗಿದ್ದವರು ಮತ್ತು ಗೋವಾ ವಿಮೋಚನಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇವರು ತಿಳಿಸಿದ ರೀತಿಯಲ್ಲಿ, ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ್ ಈ ಮೂರೂ ರಾಜ್ಯಗಳಲ್ಲಿಯೂ ಕಮ್ಯೂನಿಸ್ಟರು ಭಾಷಾವಾರು ಹೋರಾಟಕ್ಕೆ ಪೂರ್ಣ ಬೆಂಬಲ ನೀಡಿದ್ದರು ಮತ್ತು ನಾಯಕತ್ವವನ್ನು ವಹಿಸಿದ್ದರು. ಬೆಳಗಾಂನಲ್ಲಿ ಭಾಷಾವಾರು ರಾಜ್ಯಗಳ ಹೋರಾಟದ ಮುಂಚೂಣಿಯಲ್ಲಿ ಇದ್ದ ಕಮ್ಯುನಿಸ್ಟರು ಮರಾಠಿ ಮಾತನಾಡುತ್ತಿದ್ದರು. ಕೃಷ್ಣ ಮೆಣಸೆ ಮತ್ತಿತರರು ಕರ್ನಾಟಕ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು ಮತ್ತು ಅದೇ ಸಂದರ್ಭದಲ್ಲಿ ಮರಾಠಿ ಜನರ ಹೋರಾಟಗಳಿಗೆ ನಾಯಕತ್ವ ನೀಡಬೇಕಾದ ಅನಿವಾರ್ಯತೆಗೆ ಒಳಗಾದರು. ಕಮ್ಯುನಿಸ್ಟ್ ಪಕ್ಷವು ಪ್ರತಿಪಾದಿಸಿದ ರೀತಿಯಲ್ಲಿ ಗ್ರಾಮವನ್ನು ಘಟಕವಾಗಿ ಪರಿಗಣಿಸಿ, ಅದರ ಆಧಾರದಲ್ಲಿ ಮಹಾರಾಷ್ಟ್ರದಲ್ಲಿರುವ ಶೇ. 55ಕ್ಕಿಂತ ಹೆಚ್ಚು ಕನ್ನಡಿಗರಿರುವ ಗ್ರಾಮಗಳು ಕರ್ನಾಟಕಕ್ಕೆ ಸೇರಬೇಕು, ಅದೇ **ರೀತಿ ಕರ್ನಾಟಕದಲ್ಲಿರುವ ಶೇ. 55ಕ್ಕಿಂತ ಹೆಚ್ಚು ಮರಾಠಿ ಮಾತನಾಡುವ ಗ್ರಾಮಗಳು ಮಹಾರಾಷ್ಟ್ರಕ್ಕೆ** ಸೇರಬೇಕು ಎಂಬ ನಿಲುವಿನ ಆಧಾರದಲ್ಲಿ ಕೆಲಸ ಮಾಡಬೇಕಾಯಿತು. ಕಾಸರಗೋಡು ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವಿನ ಗಡಿ ಸಮಸ್ಯೆಯಾಗಿದೆ. ಅದರೂ ಬೆಳಗಾಂನಷ್ಟು ಅದು ಗಂಭೀರ ಸಮಸ್ಯೆಯನ್ನು ಎದುರಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬೆಳಗಾಂನ ಕಮ್ಯುನಿಸ್ಟ್ ಮುಖಂಡರು ಮತ್ತು ಮಹಾರಾಷ್ಟ್ರದ ಕೆಲವು ಮುಖಂಡರು ಕೇರಳದ ಇ.ಎಂ.ಎಸ್. ನಂಬೂದಿರಿಪಾದ್‌ರವರನ್ನು ಭೇಟಿಯಾಗಿ

ಗಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಅದಕ್ಕೆ ಇ.ಎಂ.ಎಸ್.ರವರು, ಯಾವ ಭಾಷೆಯಲ್ಲಿ ಹೆಚ್ಚು ಮಾತನಾಡುವ ಜನರಿರುತ್ತಾರೋ ಅಂತಹ ಗ್ರಾಮಗಳಲ್ಲಿ ಆಯಾ ಭಾಷೆಯಲ್ಲಿ ಶಿಕ್ಷಣ ನೀಡುವ ಶಿಕ್ಷಕರನ್ನು ನೇಮಿಸಿ, ಮತ್ತು ಅವರವರ ಸಂಸ್ಕೃತಿ ಆಚರಣೆಗೆ ಮುಕ್ತ ಅವಕಾಶ ಕೊಡಿ, ಇತರರ ಭಾಷೆ ಮತ್ತು ಹೊರಗಿನ ಸಂಸ್ಕೃತಿಯನ್ನು ಮತ್ತೊಬ್ಬರ ಮೇಲೆ ಏರದಂತೆ ನೋಡಿಕೊಳ್ಳಿ, ಅಲ್ಲಿಗೆ ಸಮಸ್ಯೆ ಬಗೆಹರಿಯುತ್ತದೆ ಎಂದು ಸಲಹೆ ನೀಡಿದರಂತೆ. ಆದರೆ ಅದನ್ನು ಮಾಡಲು ಇಂದಿಗೂ ಸಾಧ್ಯವಾಗಿಲ್ಲ. ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸಿದ ರೀತಿಯಲ್ಲಿ ಗಡಿ ರೇಖೆಗಳನ್ನು ಗುರುತಿಸಲಾಗದಿದ್ದರಿಂದ ಉಂಟಾದ ಸಂಕೀರ್ಣ ಪರಿಸ್ಥಿತಿಯಿಂದ ಹೊರಬರಲಾಗದಿದ್ದರಿಂದ ಬೆಳಗಾಂನಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳವಣಿಗೆಯನ್ನು ಕಾಣಲಿಲ್ಲ ಎಂದು ಕೃಷ್ಣ ಮೆಣಸೆ ಅಭಿಪ್ರಾಯಪಟ್ಟಿದ್ದಾರೆ.

41. ನಾರಾಯಣ ಪಾಲೇಕರ ಗೋವಾ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದರು. ಗೋವಾ ವಿಮೋಚನೆಗೆ ಸಶಸ್ತ್ರ ದಂಗೆಯ ಸಾಧ್ಯತೆಯನ್ನು ಪರಿಶೀಲಿಸಲು ಇವರನ್ನು ಜಾಂಬೋಟಿ ಮಾರ್ಗದಿಂದ ಗೋವೆಗೆ ಕಳುಹಿಸಲಾಯಿತು. ಇವರು 15 ದಿನಗಳ ಕಾಲ ಗೋವಾದ ಹಲವು ಹಳ್ಳಿಗಳನ್ನು ತಿರುಗಾಡಿ ಅಧ್ಯಯನ ಮಾಡಿ ಖಾನಾಪುರಕ್ಕೆ ಬಂದು ವರದಿಯನ್ನು ನೀಡಿದರು. ಇವರು ನೀಡಿದ ವರದಿಯ ಶಿಫಾರಸಿನ ಅನ್ವಯ ಗೋವಾದಲ್ಲಿ ಸಶಸ್ತ್ರ ಹೋರಾಟಕ್ಕೆ ಪರಿಸ್ಥಿತಿ ಪೂರಕವಾಗಿದೆ ಎಂದಾಗಿತ್ತು. ಇದರ ಆಧಾರದಲ್ಲಿ ಶಸ್ತ್ರಾಸ್ತ್ರಗಳನ್ನು ತರಲು ಇವರನ್ನು ತೆಲಂಗಾಣದ ಕಮ್ಯುನಿಸ್ಟರ ಬಳಿಗೆ ಕಳುಹಿಸಲಾಗಿತ್ತು.

42. ಇದರಲ್ಲಿ ಎ.ಕೆ.ನಾರಾಯಣ, ಟೈಲರ್ ರಂಗಪ್ಪ, ಡಿ.ಗೋಪಾಲ ಹಾಗೂ ಇತರ ಹನ್ನೆರಡು ಸ್ವಯಂಸೇವಕರು ಭಾಗವಹಿಸಿದರೆಂದು ಬಿ.ವಿ.ಕಕ್ಕಿಲ್ಲಾಯ ಹೇಳಿದ್ದಾರೆ. ಆನಂದ ಮೆಣಸಿಯವರು ಐದು ಜನರ ತಂಡವೆಂದು ಹೇಳಿದ್ದಾರೆ.

43. ಇದರಲ್ಲಿ ಊರ್ವದ ಬಂಟಪ್ಪ, ಬೋಳಾರದ ರಾಧಾಕೃಷ್ಣ, ಅತ್ತಾವರದ ಹರಿಶ್ಚಂದ್ರ ಶೆಟ್ಟಿ, ಬೆಳ್ತಂಗಡಿಯ ನೀಲಯ ಬಂಗೇರ, ಬಜಾಲಿನ ಜಾರಪ್ಪ, ಮಂಗಳಾದೇವಿಯ ನಾರಾಯಣ ಉಪಾಧ್ಯಾಯ ಹಾಗೂ ಕಾಸರಗೋಡಿನ ಸೋಮಪ್ಪ ಶೆಟ್ಟಿ ಮತ್ತಿತರರು ಇದ್ದರು.

44. ಎರಡನೆಯ ತಂಡಕ್ಕೆ ಕುಂಟೋಜಿಯವರ ನೇತೃತ್ವ, ಮೂರನೆಯದಕ್ಕೆ ಇಂಚಗೇರಿ ಮಠದ ಮಹದೇವಪ್ಪ ಮುರಗೋಡು ಸ್ವಾಮಿಗಳ ನೇತೃತ್ವ. ಮುರಗೋಡು ಸ್ವಾಮಿಗಳ ತಂಡ ಕಾರವಾರದ ಮಾಜಾಳಿ ಮೂಲಕ ಗೋವೆಯನ್ನು ಪ್ರವೇಶಿಸಿತು.

45. ಆನಂದ ಮೆಣಸಿಯವರು ಬಿಜಾಪುರದಿಂದ ಹೊರಟ ಸತ್ಯಾಗ್ರಹಿಗಳ ಸಂಖ್ಯೆಯನ್ನು 30 ಎಂದು ಪ್ರಸ್ತಾಪಿಸಿದ್ದಾರೆ. ಮತ್ತು ಬೆಂಗಳೂರಿನಿಂದ 50 ಜನ ಭಾಗವಹಿಸಿದ್ದರೆಂದು ಹೇಳಿದ್ದಾರೆ. ಆದರೆ ಬೆಂಗಳೂರಿನಿಂದ ಹೊರಟ ಕಮ್ಯುನಿಸ್ಟರ ಗುಂಪು ಯಾರ ನೇತೃತ್ವದಲ್ಲಿ ಹೊರಟಿತೆಂಬುದರ ಬಗ್ಗೆ ಮಾಹಿತಿಯಿಲ್ಲ.

46. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, 1955, ಪು.2, ಸಿಬಿ, ಕೆಎಸ್ಎ.

47. 1957 ರಲ್ಲಿ ಕೇರಳದಲ್ಲಿ ಅಧಿಕಾರಕ್ಕೆ ಬಂದ ಇಎಂಎಸ್ ನೇತೃತ್ವದ ಸರ್ಕಾರವು ಜಗತ್ತಿನ ಎರಡನೆ ಚುನಾಯಿತ ಸರ್ಕಾರವಾಗಿದೆ. ಉತ್ತರ-ಪೂರ್ವ ಇಟಲಿಯ ಒಂದು ಸಣ್ಣ ಪ್ರಾಂತ್ಯ 'ಸ್ಯಾನ್ ಮರಿನೋ'ವಲ್ಲಿ

ಜಗತ್ತಿನ ಮೊಟ್ಟ ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರ ಅಧಿಕಾರದಲ್ಲಿತ್ತು ಎಂದು ಅಜಯ್‌ಕುಮಾರ್ ಅವರು ಪ್ರಸ್ತಾಪಿಸಿದ್ದಾರೆ (ಅಜಯ್ ಕುಮಾರ್ 1998: 2). 1945 ಮತ್ತು 1957 ರ ನಡುವೆ ಅಲ್ಲಿನ ಕಮ್ಯುನಿಸ್ಟ್ ಪಕ್ಷ ಮತ್ತು ಸೋಷಲಿಸ್ಟ್ ಪಕ್ಷಗಳ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿತ್ತು.

48. ಭಾರತದ ಖ್ಯಾತ ಚರಿತ್ರಕಾರರಾಗಿದ್ದ ಬಿಪನ್ ಚಂದ್ರ ಅವರು ಕಾಂಗ್ರೆಸ್‌ನ್ನು ನೋಡಿದ ರೀತಿ ಭಿನ್ನವಾದುದು. ಕಾಂಗ್ರೆಸ್ ಒಂದು ಪಕ್ಷವಾಗಿ ಸಮಾಜವಾದಿ ದಿಕ್ಕಿನಲ್ಲಿ ಬದಲಾವಣೆ ಮಾಡಲು ಅವಕಾಶವಿರುವ ಒಂದು ತೆರೆದ ಸಂಘಟನೆಯಾಗಿದೆ ಮತ್ತು ಅದರ ನೀತಿಗಳು ಎಡ ದಿಕ್ಕಿನಲ್ಲಿ ಸಾಗಿವೆ. ಭಾರತದ ರಾಷ್ಟ್ರೀಯ ಚಳುವಳಿಯು, ಪ್ರತಿಯೊಂದು ವರ್ಗವೂ ಸಾಮ್ರಾಜ್ಯಶಾಹಿಯ ಜೊತೆ ನಿರ್ದಿಷ್ಟವಾದ ವೈರುಧ್ಯಗಳನ್ನು ಹೊಂದಿರುವ ವಿವಿಧ ವರ್ಗಗಳ ಭಿನ್ನತೆಯಿರುವ ಚಳುವಳಿಯಲ್ಲ, ಬದಲಿಗೆ ವಿವಿಧ ವರ್ಗಗಳ ನಡುವೆ ಹೊಂದಿಕೊಳ್ಳಬಹುದಾದ ಸಾಧ್ಯತೆಯನ್ನು ಉಳಿಸಿಕೊಂಡೇ ಅವು ಸಾಮ್ರಾಜ್ಯವಾದದ ಜೊತೆ ವೈರುಧ್ಯವನ್ನು ಹೊಂದಿರುವ ಇಡೀ ರಾಷ್ಟ್ರದ ಚಳುವಳಿಯಾಗಿದೆ ಎಂದು ಅವರು ಪ್ರತಿಪಾದಿಸಿದರು. ಅಂದರೆ ಕಾಂಗ್ರೆಸ್ ಎಂಬುದು ಕೇವಲ ಬಂಡವಾಳಶಾಹಿ ವರ್ಗದ ಪಕ್ಷವಲ್ಲ ಎಂಬುದು ಅದರ ತಾತ್ಪರ್ಯವಾಗಿತ್ತು.

49. ಪಿ.ಸಿ.ಜೋಷಿ ಮಂಡಿಸಿದ ವರದಿಯ ಸಾರಾಂಶವೇನೆಂದರೆ, ಬಲಪಂಥೀಯ ಪಕ್ಷಗಳ ಕೈಯಲ್ಲಿ ಕಾಂಗ್ರೆಸ್‌ಗೆ ಸೋಲಾಗಿರುವುದರಿಂದ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ನಾಯಕರು ಹಾಗೂ ಕಾರ್ಯಕರ್ತರ ಮಧ್ಯೆ ಸಂಬಂಧವನ್ನು ಉತ್ತಮಪಡಿಸಲು ವಾತಾವರಣ ನಿರ್ಮಾಣವಾಗಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಅದಾಗಿಯೇ ಮುಂದೆ ಬಾರದು. ಸಿಪಿಐ ಪಕ್ಷವೇ ಮುಂದು ಹೆಜ್ಜೆಯಿಡಬೇಕು. ಸಿಪಿಐ ತನ್ನ ಅಸ್ತಿತ್ವಕ್ಕಾಗಿ ಹೀಗೆ ಮಾಡಲೇಬೇಕು. ಹಾಗೆ ಮಾಡಿದರೆ ಸಿಪಿಐ ಬಲಗೊಳ್ಳುತ್ತದೆ (ಸುರ್ಜಿತ್ 1996: 54).

50. ಭೂಪೇಶ್ ಗುಪ್ತ ಮಂಡಿಸಿದ ವರದಿಯ ಸಾರಾಂಶವೇನೆಂದರೆ, ರಾಷ್ಟ್ರೀಯ ಮಂಡಳಿಯ (ಕಾಂಗ್ರೆಸ್‌ನ ಏಕಸ್ವಾಮ್ಯವನ್ನು ಮುರಿಯಬೇಕೆಂಬ) ಧೋರಣೆ ಸರಿಯೆಂಬುದನ್ನು ಚುನಾವಣಾ ಫಲಿತಾಂಶ ತೋರಿಸಿಕೊಟ್ಟಿದೆ. ಕೋಮುವಾದಿ ಮತ್ತು ಬಲಪಂಥಿಯ ಪ್ರತಿಗಾಮಿ ಶಕ್ತಿಗಳ ಬಲವನ್ನು ಕಡೆಗಣಿಸಬಾರದು. ಅದೇ ಹೊತ್ತಿಗೆ ಅದನ್ನು ಅತಿಶಯಗೊಳಿಸಬಾರದು, ಕಡೆಗಣಿಸಿದರೆ ಬಲಪ್ರತಿಗಾಮಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಎಲ್ಲಾ ಜಾತ್ಯಾತೀತ ಮತ್ತು ಪ್ರಗತಿಪರ ಶಕ್ತಿಗಳನ್ನು ಸೆಳೆಯುವ ಕಾರ್ಯ ವಿಫಲವಾಗಬಹುದು. ಅತಿಶಯಗೊಳಿಸಿದರೆ ಕಾಂಗ್ರೆಸ್ ಮತ್ತು ಬಂಡವಾಳಶಾಹಿ ನಾಯಕರ ಬಾಲಬಡುಕರಾಗುವ ಅಪಾಯ ಎದುರಾಗುತ್ತದೆ ಎಂಬುದಾಗಿತ್ತು (ಸುರ್ಜಿತ್ 1996: 54–55).

51. ಡಾಂಗೆ ನಾಯಕತ್ವ ನಡೆದುಕೊಂಡ ಬಗ್ಗೆ ಸುರ್ಜಿತ್ ಅವರು ಈ ಅಭಿಪ್ರಾಯವನ್ನು ನೀಡಿದ್ದಾರೆ. 'ಬಲಪಂಥೀಯರು, ಕಾಂಗ್ರೆಸ್‌ನ ಬಹುಪಾಲು ಬೆಂಬಲ ಮತ್ತು ಸಿಪಿಐನ ಡಾಂಗೆಯವರ ಬೆಂಬಲವೂ ಸಿಕ್ಕಿದ್ದರಿಂದ ಉತ್ತೇಜಿತರಾದ ನೆಹರೂ ಸರ್ಕಾರ 1962 ರ ನವೆಂಬರ್ 21 ರಂದು ರಾಷ್ಟ್ರವ್ಯಾಪಿ ದಾಳಿಯನ್ನು ಆರಂಭಿಸಿತು. ಸರ್ಕಾರದ ಈ ನೀತಿಯನ್ನು ಸಿಪಿಐ ಖಂಡಿಸಲಿಲ್ಲ. ಆದರೆ ಜಾಗತಿಕವಾಗಿ ಹಲವಾರು ಕಮ್ಯುನಿಸ್ಟ್ ಪಕ್ಷಗಳು ಇದನ್ನು ಖಂಡಿಸಿದವು. ಸರ್ಕಾರದ ದಾಳಿಗಳ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಲು ಸಿಪಿಐ ಹಿಂದೇಟು ಹಾಕಿತು. 1963 ರಲ್ಲಿ ಹೈದರಾಬಾದಿನಲ್ಲಿ ಎಐಟಿಯುಸಿ ಸಮ್ಮೇಳನಕ್ಕೆ ಡಾಂಗೆ ಬಂದಿದ್ದಾಗ ಕಾರ್ಮಿಕರು, ಜೈಲುಗಳಲ್ಲಿರುವ ನಾಯಕರ ಬಿಡುಗಡೆಗೆ ಕ್ರಮ ವಹಿಸಬೇಕೆಂದು ಒತ್ತಾಯಿಸಿದಾಗ, 'ಈ ಮಹಾತ್ಮರು ಜೈಲಿನಲ್ಲಿದ್ದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ' ಎಂದು

ಡಾಂಗೆಯವರು ಕೂಗಾಡಿದರು. ಬಿ.ಟಿ.ರಣದಿವೆ ಪರವಾಗಿ ಘೋಷಣೆ ಹಾಕಿದರೆಂಬ ಕಾರಣಕ್ಕೆ ಕೆಲವು ಕಮ್ಯುನಿಸ್ಟರನ್ನು ಮುಂಬಯಿ ಸಮಿತಿ ಉಚ್ಚಾಟನೆ ಮಾಡಿತು (ಸುರ್ಜಿತ್ 1996: 56).

52. ಒಂದು, 'ನೆಹರೂ ಸಿದ್ಧಾಂತದ ಬಗ್ಗೆ' ಮತ್ತೊಂದು, 'ನೆಹರೂ ಸಿದ್ಧಾಂತದ ಬಗ್ಗೆ ಮತ್ತಷ್ಟು ಮಾಹಿತಿ' ಎಂಬ ಎರಡು ಲೇಖನಗಳನ್ನು ಚೀನಾ ಕಮ್ಯುನಿಸ್ಟ್ ಪಕ್ಷ ಪ್ರಕಟಿಸಿತು.

53. 1961 ರ ಬೇ ಆಫ್ ಪಿಗ್ಸ್ ಹೋರಾಟದಲ್ಲಿ ಕ್ಯೂಬನ್ನರಿಂದ ಅವಮಾನಕರ ಸೋಲನ್ನು ಅನುಭವಿಸಿದ ಸಂ.ರಾ.ಅಮೇರಿಕ, ಅದಾದ ಹತ್ತು ತಿಂಗಳ ನಂತರ ಕ್ಯೂಬಾವನ್ನು ನೇರವಾಗಿ ವಶಪಡಿಸಿಕೊಳ್ಳಲು ಯೋಜಿಸಿತ್ತು. ವಿಯೆನ್ನಾದಲ್ಲಿ ಕೆನಡಿ ಮತ್ತು ಕ್ರುಶ್ಚೋವ್ ಪರಸ್ಪರ ಭೇಟಿಯಾದಾಗ ಈ ವಿಷಯ ಗೊತ್ತಾಗಿತ್ತು. ಈ ಬಗ್ಗೆ ಸೋವಿಯತ್ ಮುಖಂಡರನ್ನು ಕ್ಯೂಬಾಕ್ಕೆ ಕಳುಹಿಸಿ ಅಲ್ಲಿ ಸೋವಿಯತ್ ಕ್ಷಿಪಣಿಗಳನ್ನು ಸ್ಥಾಪಿಸುವ ಪ್ರಸ್ತಾಪವಿಟ್ಟರು. ಇನ್ನೊಂದು ದೇಶದ ಸೈನಿಕ ನೆಲೆಯಾಗಿ ಕ್ಯೂಬಾ ಆಗುವುದನ್ನು ಫಿಡೆಲ್ ಇಷ್ಟಪಟ್ಟಿರಲಿಲ್ಲ. ಆದರೂ, ನ್ಯಾಷನಲ್ ಡೈರೊಕ್ಟೆರೇಟ್ ಆಫ್ ದಿ ರೆವಲ್ಯೂಷನ್‌ನಲ್ಲಿ ಚರ್ಚಿಸಿ ಒಪ್ಪಿಗೆ ನೀಡಿದರು. ಆ ಹಿನ್ನೆಲೆಯಲ್ಲಿ ಸೋವಿಯತ್ ಕ್ಷಿಪಣಿಗಳು ಕ್ಯೂಬಾದಲ್ಲಿ ಸ್ಥಾಪಿಸಲ್ಪಟ್ಟವು. ಈ ವಿಚಾರವನ್ನು ಸೋವಿಯತ್‌ನ ಕೆಲವು ಗುಪ್ತಚರರೇ ಅಮೇರಿಕಕ್ಕೆ ಮಾಹಿತಿ ನೀಡಿದ್ದರು. ಆಗ ಶುರುವಾದ ಜಾಗತಿಕ ಚರ್ಚೆಗಳಲ್ಲಿ ಕ್ರುಶ್ಚೇವ್ ಅವರ ಪಾತ್ರವನ್ನು ಫಿಡೆಲ್ ಕಟುವಾಗಿ ಟೀಕಿಸುತ್ತಾರೆ. ಕ್ಯೂಬಾವನ್ನು ಕತ್ತಲಲ್ಲಿಟ್ಟು ಕ್ರುಶ್ಚೇವ್ ನಡೆಸಿದ ಮಾತುಕತೆಗಳು ಮತ್ತು ಕ್ಯೂಬಾದ ತೀರ್ಮಾನವನ್ನು ಕೇಳದಯೇ ಕ್ಷಿಪಣಿಗಳನ್ನು ಹಿಂಪಡೆದದ್ದು ಇವೆಲ್ಲವೂ ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿರಲಿಲ್ಲ ಎಂದು ಹೇಳುತ್ತಾರೆ (ಪಕ್ರಾಶ್ 2017: 162–166) ಈ ಕಾರಣಕ್ಕೇ ಸೋವಿಯತ್ ಮತ್ತು ಕ್ಯೂಬಾದ ನಡುವಣ ಸಂಬಂಧಗಳು ದೀರ್ಘ ಕಾಲ ಹಳಸಿತ್ತು. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಈ ಕ್ಷಿಪಣಿ ಬಿಕ್ಕಟ್ಟಿನ ಸಂದರ್ಭವನ್ನು ಬಳಸಿ ಚೀನಾ ಭಾರತವನ್ನು ಆಕ್ರಮಿಸಲು ಪ್ರಯತ್ನಿಸಿತು ಎಂಬ ಡಾಂಗೆಯವರ ಅಭಿಪ್ರಾಯ ವಾಸ್ತವಗಳಿಗೆ ಹತ್ತಿರವಾಗಿಲ್ಲದ ಅಂದಾಜಾಗಿತ್ತು.

54. ದಿ ಸ್ಟೇಟ್ಸ್‌ಮನ್, 1962 ಅಕ್ಟೋಬರ್ 31 ರಲ್ಲಿ ಉದೃತ, https://www.quora.com/Why-did-some-of-the-Indian-Communists-back-China-during-the-Sino-Indian war.

55. ಮೊಹಿತ್ ಸೇನ್, 2003, ಎ ಟ್ರಾವೆಲರ್ ಅಂಡ್ ದಿ ರೋಡ್ – ದಿ ಜರ್ನಿ ಆಫ್ ಎನ್ ಇಂಡಿಯನ್ ಕಮ್ಯುನಿಸ್ಟ್, ರೂಪಾ ಅಂಡ್ ಕಂ., ಬೆಂಗಳೂರು.

56. ಹರ್ಕಿಷನ್‌ಸಿಂಗ್ ಸುರ್ಜಿತ್, ಎನ್ ಐಕಾನ್ ಆಫ್ ಮಿಲಿಯನ್ಸ್, ಏಪ್ರಿಲ್ 17, 1998 ಫ್ರಂಟ್‌ಲೈನ್ ಪಾಕ್ಷಿಕ.

57. ಕಮ್ಯುನಿಸ್ಟ್ ಪಕ್ಷಕ್ಕೆ ಕಾರ್ಯಕ್ರಮ ಎಂಬುದು ಮಾರ್ಗದರ್ಶಕ ದಸ್ತಾವೇಜು. ಯಾವುದೇ ಕಮ್ಯುನಿಸ್ಟ್ ಪಕ್ಷಕ್ಕೆ ಕಾರ್ಯಕ್ರಮ ಇರಲೇಬೇಕು. ಕಾರ್ಯಕ್ರಮವಿಲ್ಲದ ಪಕ್ಷವನ್ನು ಕಮ್ಯುನಿಸ್ಟ್ ಪಕ್ಷವೆಂದು ಕರೆಯಲಾಗುವುದಿಲ್ಲ. ಆಯಾ ದೇಶದ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾರ್ಯಕ್ರಮವನ್ನು ರೂಪಿಸುವುದು ಆ ಕಮ್ಯುನಿಸ್ಟ್ ಪಕ್ಷದ ಕರ್ತವ್ಯ. ಕಮ್ಯುನಿಸ್ಟ್ ಪಕ್ಷಗಳು ಆಯಾ ದೇಶದ ಪರಿಸ್ಥಿತಿಯನ್ನು ಅನುಸರಿಸಿ ಮಾಡಬೇಕಾದ ಕ್ರಾಂತಿಯ ಸ್ವರೂಪವನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ. ಮಾರ್ಕ್ಸ್‌ವಾದಿ ತಿಳುವಳಿಕೆಯಾದ 'ನಿರ್ದಿಷ್ಟ

ಪರಿಸ್ಥಿತಿಯ ನಿರ್ದಿಷ್ಟ ವಿಶ್ಲೇಷಣೆ'ಯ ಆಧಾರದಲ್ಲಿ ಭಾರತದ ಸಮಾಜವನ್ನು ವಿಶ್ಲೇಷಿಸಿ, ಕ್ರಾಂತಿಯ ಘಟ್ಟ, ಪ್ರಭುತ್ವದ ಸ್ವರೂಪ, ಕ್ರಾಂತಿಯ ವ್ಯೂಹಗಳನ್ನು ತೀರ್ಮಾನಿಸಬೇಕು. ಇವೆಲ್ಲವನ್ನೂ ಒಳಗೊಂಡಿರುವುದೇ ಕಾರ್ಯಕ್ರಮ.

58. ಸಿಪಿಐನ 1964 ರ ಕಾರ್ಯಕ್ರಮ, ಪ್ಯಾರಾ 32.

59. ಸ್ಟಾಂಡ್ ಆನ್ ಐಡಿಯಾಲಾಜಿಕಲ್ ಇಶ್ಯೂಸ್, 1969, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್), ಕಲ್ಕತ್ತಾ, ಪು. 14–15 ರಲ್ಲಿ ಉದ್ಧೃತ, ಆಸ್ಪೆಕ್ಟ್ಸ್ ಆಫ್ ಸಿಪಿಐ ಪ್ರೋಗ್ರಾಂ, ಪು. 8–10.

60. ಸಿಪಿಐ ತನ್ನ ಮೊದಲ ಕಾರ್ಯಕ್ರಮವನ್ನು 1964 ರಲ್ಲಿ ಬಾಂಬೆಯಲ್ಲಿ ನಡೆದ ಅಧಿವೇಶನದಲ್ಲಿ ಅಂಗೀಕರಿಸಿತು. 1968 ರಲ್ಲಿ ಮೊದಲ ತಿದ್ದುಪಡಿಯನ್ನು ಮಾಡಿತು. ನಂತರ ಪ್ರಭುತ್ವದ ಕುರಿತು ಪುನರ್‌ಪರಿಶೀಲನೆಗಳ ಬಗ್ಗೆ ಚರ್ಚೆಗಳು ನಡೆದು 1989 ರಲ್ಲಿ ನಡೆದ ಸಿಪಿಐನ 14 ನೇ ಮಹಾಧಿವೇಶನದಲ್ಲಿ ಒಂದು ಕಾರ್ಯಕ್ರಮವನ್ನು ಮಂಡಿಸಲಾಯಿತು. ಅದರ ಕರಡು ರಚನಾ ಸಮಿತಿಯ ಸದಸ್ಯರಲ್ಲಿ ಪ್ರಭುತ್ವದ ಕುರಿತು ಮತ್ತು ದೊಡ್ಡ ಬಂಡವಾಳಶಾಹಿಯ ಕುರಿತು ಒಂದಾಭಿಪ್ರಾಯಕ್ಕೆ ಬರಲಾಗದ ಕಾರಣದಿಂದ ಅದನ್ನು ಅಂಗೀಕರಿಸಲಾಗಲಿಲ್ಲ. 2015 ರಲ್ಲಿ ತನ್ನ 22 ನೇ ಮಹಾಧಿವೇಶನದಲ್ಲಿ ಸಿಪಿಐ ನೂತನವಾಗಿ ಕಾರ್ಯಕ್ರಮವನ್ನು ಅಂಗೀಕರಿಸಿದೆ. ಪ್ರಮುಖವಾದ ಎಲ್ಲಾ ವಿಚಾರಗಳನ್ನೂ ಮುಂದೆ ಪರಿಶೀಲನೆಗೊಳಪಡಿಸುವ ತೀರ್ಮಾನವನ್ನು ಮಾಡಿದೆ. (ನೂತನ ಕಾರ್ಯಕ್ರಮವನ್ನು ಸಮಕಾಲೀನಗೊಳಿಸಲು ಹಾಗೂ ಪರಿಷ್ಕರಿಸಲು ಎ.ಬಿ.ಬರ್ಧನ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಗವನ್ನು ರಚಿಸಲಾಗಿತ್ತು. ಆದರೆ ಅವರು ಈ ನಡುವೆ ನಿಧನರಾದ್ದರಿಂದ, ಮುಂದೆ ಹೊಸ ತೀರ್ಮಾನವನ್ನು ಸಿಪಿಐ ಮಾಡಬಹುದು). – ಪ್ರಕಾಶ್ ಕಾರಟ್, 2016, ಮಾರ್ಕ್ಸಿಸ್ಟ್

61. ರಾಜ್ಯ ಮಂಡಳಿಯಿಂದ ಹೊರ ನಡೆದ 9 ಸದಸ್ಯರೆಂದರೆ, ಬಿ.ವಿ.ಕಕ್ಕಿಲ್ಲಾಯ, ಸಿಂಪ್ಸನ್ ಸೋನ್ಸ್, ವೈ. ಆರ್.ಸತ್ಯನಾರಾಯಣ, ಎಂ.ಎಸ್.ಕೃಷ್ಣನ್, ಪಿ.ರಾಮನ್, ಎಂ.ಎಸ್.ರಾಮರಾವ್, ಎ.ಶಾಂತಾರಾಂ ಪೈ, ಮೋನಪ್ಪ ಶೆಟ್ಟಿ, ಯು.ಎನ್.ಶ್ರೀನಿವಾಸ ಭಟ್. (ಶಿರಿ 2003: 110) ಕಕ್ಕಿಲ್ಲಾಯರು ತಮ್ಮ ಜೀವನ ಚರಿತ್ರೆಯಲ್ಲಿ ಹಲವು ಬೇರೆ ಹೆಸರುಗಳನ್ನು ನೀಡಿದ್ದಾರೆ. ಅದರಲ್ಲಿ ಸಿ.ಬಿ.ಮೊಣ್ಣಯ್ಯ, ಶ್ರೀನಿವಾಸಗುಡಿ, ಎ.ಜೆ.ಮುಧೋಳ್, ಪಂಪಾಪತಿ, ಮುಂತಾದವರ ಹೆಸರುಗಳಿವೆ (ಕಕ್ಕಿಲ್ಲಾಯ 2003: 288).

62. ಪ್ರಜಾವಾಣಿ 12–8–1964 (50 ವರ್ಷಗಳ ಹಿಂದೆ) http://www.prajavani.net/article.

63. ಕೊಡಗಿನ ಪತ್ರಕರ್ತರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡ ಟಿ.ಪಿ.ರಮೇಶ್ ಅವರೊಂದಿಗೆ ಸಂದರ್ಶನ.

64. ಸಂಶೋಧಕರು ನಡೆಸಿದ ಮುಖಂಡರ ಸಂದರ್ಶನಗಳ ಸಂದರ್ಭದಲ್ಲಿ ಎರಡೂ ಪಕ್ಷಗಳ ಬಹುತೇಕರು ಈ ಅಭಿಪ್ರಾಯ ಹೊಂದಿರುವುದನ್ನು ಕಾಣಲಾಗಿದೆ.

65. ಕೆಂಬಾವುಟ 1974 ರ ಡಿಸೆಂಬರ್ 22 ರ ಸಂಚಿಕೆ ಪು. 2.

66. ವಿ.ಎನ್.ಹಳಕಟ್ಟಿ ಅವರೊಂದಿಗೆ ನಡೆಸಿದ ಸಂದರ್ಶನ.

67. ದಲ್ಲಾಳಿ ಎಂದರೆ, ಸಾಮ್ರಾಜ್ಯಶಾಹಿ ಶೋಷಣೆಯನ್ನು ಮುಂದುವರಿಸಿಕೊಂಡು ಹೋಗುವ ಹಿತಾಸಕ್ತಿ ಹೊಂದಿರುವ ಆ ಸಾಮ್ರಾಜ್ಯಶಾಹಿ ದೇಶಗಳ ಜೊತೆ ವ್ಯಾಪಾರದಲ್ಲಿ ತೊಡಗಿರುವ ವರ್ತಕರು. ಅವರು

ವಸಾಹತು ದೇಶಗಳಲ್ಲಿ ಜನರನ್ನು ಶೋಷಣೆ ಮಾಡುವ ಸಲುವಾಗಿ ಏಜೆಂಟರಂತೆ ವರ್ತಿಸುತ್ತಾರೆ. ವಸಾಹತು, ಆಶ್ರಿತ ಅಥವಾ ಹಿಂದುಳಿದ ದೇಶದಲ್ಲಿ ದಲ್ಲಾಳಿ ಬಂಡವಾಳಶಾಹಿಯೆಂದರೆ ದೇಶೀಯ ಕಚ್ಚಾ ವಸ್ತುಗಳನ್ನು ಸಾಮ್ರಾಜ್ಯಶಾಹಿ ದೇಶಗಳಿಗೆ ರಫ್ತು ಮಾಡುವುದು ಮತ್ತು ಸಾಮ್ರಾಜ್ಯಶಾಹಿ ದೇಶಗಳಿಂದ ತಯಾರಾದ ಸಿದ್ಧ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟ ವ್ಯಾಪಾರಿ ವ್ಯವಹಾರಗಳಲ್ಲಿ ಪ್ರಮುಖವಾಗಿ ತೊಡಗಿಕೊಂಡಿರುವ ವಿದೇಶೀ ಸಾಮ್ರಾಜ್ಯಶಾಹಿಯ ಸೇವಕ ಎಂದು ದಲ್ಲಾಳಿ ಬಂಡವಾಳದಾರರ ಗುಣವನ್ನು ವಿವರಿಸಲಾಗಿದೆ.

68. ಈ ರೀತಿಯಾಗಿ ಆಗ ದಲ್ಲಾಳಿಯಾಗಿದ್ದ ಬಂಡವಾಳಶಾಹಿ ವರ್ಗವು ಈಗಲೂ ದಲ್ಲಾಳಿ ಗುಣಗಳನ್ನೇ ಇಟ್ಟುಕೊಂಡಿದೆ ಮತ್ತು ಯಾವುದೇ ಬದಲಾವಣೆಯಾಗಿಲ್ಲ ಮಾತ್ರವಲ್ಲ ಅದಕ್ಕೆ ಯಾವುದೇ ಸಾಮಾಜಿಕ ಮತ್ತು ರಾಜಕೀಯ ನೆಲೆಯಿಲ್ಲ ಎಂಬುದು ಮಾವೋವಾದಿಗಳ ವಾದವಾಗಿದೆ. ತಮ್ಮದೇ ಸ್ವಂತ ಸಾಮಾಜಿಕ ನೆಲೆಯಿಲ್ಲದ ಆಳುವ ವರ್ಗವನ್ನು ಬುಡಮೇಲು ಮಾಡಲು ಅವರ ವಿರುದ್ಧ ನಿಲುವು ತಳೆದಿರುವ ಜನರ ಕೈಗೆ ಶಸ್ತ್ರಾಸ್ತ್ರಗಳನ್ನು ನೀಡಿದರೆ ವರ್ಗಶತ್ರುಗಳು ನಿರ್ಮೂಲನೆ ಆಗುತ್ತಾರೆ ಎಂದು ತೀರ್ಮಾನಿಸಿದ ಮಾವೋವಾದಿಗಳು ಅದನ್ನೇ 'ಜನತೆಯ ಯುದ್ಧ' (ಪೀಪಲ್ಸ್ ವಾರ್) ಎಂದು ಕರೆದರು. ವಸಾಹತೋತ್ತರ ಭಾರತೀಯ ಸಂದರ್ಭದಲ್ಲಿ ಭಾರತದ ಬಂಡವಾಳದಾರರು ಬೆಳೆದಿರುವ ಬಗ್ಗೆ ಮತ್ತು ಅವರ ಪ್ರಮಾಣವನ್ನು ಗಮನಿಸಿದರೆ ಮಾವೋವಾದಿಗಳ ದಲ್ಲಾಳಿ ಪರಿಕಲ್ಪನೆಯು ಸರಿಯಾದುದಲ್ಲ ಎಂಬುದು ತಿಳಿಯುತ್ತದೆ. ಭಾರತೀಯ ದೊಡ್ಡ ಬಂಡವಾಳದಾರರು ಹೊಂದಿರುವ ಉತ್ಪಾದನಾ ಸಾಧನಗಳ ಮೇಲಿನ ಒಡೆತನ ಗಮನಿಸಿದಾಗ ಅವರು ಕೇವಲ ವ್ಯಾಪಾರೀ ಬಂಡವಾಳದಾರರ ಗುಣವನ್ನು ಮಾತ್ರ ಹೊಂದಿದ್ದಾರೆಂದು ಹೇಳಲು ಆಗುವುದಿಲ್ಲ. ಮೂಲ ಕೈಗಾರಿಕೆಗಳಾದ ಉಕ್ಕು, ಗಣಿ, ಸಿಮೆಂಟ್, ವಿದ್ಯುತ್, ದೂರಸಂಪರ್ಕ ಇತ್ಯಾದಿಗಳನ್ನು ಒಳಗೊಂಡು ಟೆಕ್ಸ್‌ಟೈಲ್ಸ್, ಆಟೋಮೊಬೈಲ್ಸ್, ಸಾರಿಗೆ ತೈಲ, ಅನಿಲ, ಯಂತ್ರೋಪಕರಣಗಳು ಐಟಿ–ಬಿಟಿ, ವಿಜ್ಞಾನ–ತಂತ್ರಜ್ಞಾನ, ಔಷಧ, ಆರೋಗ್ಯ, ಶಿಕ್ಷಣ, ಮಾಧ್ಯಮ ಮುಂತಾದ ಸಮಾಜದ ಎಲ್ಲಾ ರಂಗಗಳಲ್ಲಿಯೂ ದೊಡ್ಡ ಬಂಡವಾಳದಾರರು ಹೊಂದಿರುವ ಹಿಡಿತವನ್ನು ಕೇವಲ ದಲ್ಲಾಳಿ ವ್ಯಾಪಾರಸ್ತರ ಮಟ್ಟಕ್ಕೆ ತಂದು ವಿಶ್ಲೇಷಿಸುವುದು ಪರಿಸ್ಥಿತಿಯನ್ನು ತಪ್ಪಂದಾಜು ಮಾಡುವುದೇ ಆಗಿದೆ.

69. ಕಡಿದಾಳ್ ದಯಾನಂದ ಅವರೊಂದಿಗೆ 29–10–2014 ರಂದು ತೀರ್ಥಹಳ್ಳಿಯ 'ವಿಹಂಗಮ'ದಲ್ಲಿ ನಡೆಸಿದ ಸಂದರ್ಶನ.

70. ಜಿ.ಎಸ್.ನಾಗರಾಜ್ ಅವರು ತಮ್ಮ ಸಂದರ್ಶನದಲ್ಲಿ ಹೇಳಿದ ವಿಷಯ. ಈ ಘಟನೆ ನಡೆದ ನಿರ್ದಿಷ್ಟ ವರ್ಷದ ಕುರಿತು 1969 ಅಥವಾ 1970 ಇರಬಹುದು ಎಂದು ಅನುಮಾನದಲ್ಲಿ ಹೇಳಿದರು.

71. ಕರ್ನಾಟಕದಲ್ಲಿ ನಕ್ಸಲ್ ಚಳುವಳಿಯು ಸೃಷ್ಟಿಸಿದ ಭೂಗತವಲ್ಲದ ಸಂಘಟನೆಗಳ ಹುಟ್ಟು ಮತ್ತು ಅವಸಾನದ ಚರಿತ್ರೆ ವಿಶಿಷ್ಟವಾದುದು. ಸೀಮಿತ ನೆಲೆಯನ್ನು ಹೊಂದಿದ್ದ ಬೇರಾವ ಚಳುವಳಿಯೂ ಇದರಷ್ಟು ಸಂಘಟನೆಗಳನ್ನು ಸ್ಥಾಪಿಸಿರಲಿಕ್ಕಿಲ್ಲ. ಇದೊಂದು ಆರಂಭಿಕ ಸಂಘಟನಾ ತಂತ್ರಗಾರಿಕೆಯಾಗಿಯೂ ಆಗಿರಬಹುದು.

72. ಇತ್ತೀಚೆಗೆ ಸಿರಿಮನೆ ನಾಗರಾಜ್, ನೂರ್ ಶ್ರೀಧರ್ ಮತ್ತು ಇತರ ಕೆಲವರು ಶಸ್ತ್ರಾಸ್ತ್ರ ಹೋರಾಟದ ಮಾರ್ಗ ಮತ್ತು ಸಿಪಿಐ(ಮಾವೋವಾದಿ) ಪಕ್ಷವನ್ನು ತ್ಯಜಿಸಿ ಹೊರಬಂದಿದ್ದಾರೆ.

73. ನೆಹರೂ ಸಮಾಜವಾದವನ್ನು ಕಾಂಗ್ರೆಸ್ ಪ್ರಾರಂಭಿಸಿದ ಪಂಚವಾರ್ಷಿಕ ಯೋಜನೆಗಳ ಹಿನ್ನೆಲೆಯಲ್ಲಿ ನೋಡಲಾಗುತ್ತದೆ. ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆ ಮತ್ತು ಪ್ರಭುತ್ವದ ಅಧಿಪತ್ಯವನ್ನು ಸಮಾಜವಾದಕ್ಕೆ ಹೋಲಿಸಿರುವುದನ್ನೂ ಸಹ ಕಾಣಬಹುದು. ಈ ಬಗ್ಗೆ 1944 ರ ಬಾಂಬೆ ಪ್ಲಾನಿಂಗ್ ಅಥವಾ ಟಾಟಾ–ಬಿರ್ಲಾ ಪ್ಲಾನಿಂಗ್‌ನ ರಾಜಕೀಯ ಅರ್ಥಶಾಸ್ತ್ರವನ್ನು ಪರಿಶೀಲಿಸಿದರೆ ಕಾಂಗ್ರೆಸ್ ಸಮಾಜವಾದದ ಮೂಲ ಬಂಡವಾಳಶಾಹಿ ಹಿತಾಸಕ್ತಿಯಲ್ಲಿರುವುದು ಗೊತ್ತಾಗುತ್ತದೆ.

74. ಡೇವಿಡ್ ಲಾಕ್‌ಹುಡ್, 2016, ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಅಂಡ್ ದಿ ಇಂಡಿಯನ್ ಎಮರ್ಜೆನ್ಸಿ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ಕೃತಿ ಕುರಿತು ವಿಕ್ರಮ್ ಗೋಪಾಲ್ ಮಾಡಿರುವ ಪುಸ್ತಕ ವಿಮರ್ಶೆಯಲ್ಲಿ ಉದ್ಧೃತ, http://www.business-standard.com/article/beyond-business/the-cpi-s-emergency-stumble-116033101257_1.html.

75. ತುರ್ತುಪರಿಸ್ಥಿತಿಯ ಕುರಿತು ಸಿಪಿಐ(ಎಂ) ನಿಲುವನ್ನು ಪ್ರತಿಪಾದಿಸುತ್ತಾ ಎ.ಕೆ.ಗೋಪಾಲನ್ ಅವರು 1975 ರ ಜುಲೈ 21 ರಂದು ಲೋಕಸಭೆಯಲ್ಲಿ ಮಾಡಿದ ಭಾಷಣ: http://indianexpress.com/article/opinion/columns/for-the-record-on-behalf-of-the-cpm-i-totally-oppose-the-new-declaration-of-emergency/

76. 'ಆನ್ ದಿ ಮಿಸ್‌ಯೂಸ್ ಆಫ್ ಎಮರ್ಜೆನ್ಸಿ' ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಕೇಂದ್ರ ಕಾರ್ಯಕಾರಿ ಸಮಿತಿ ನಿರ್ಣಯ, ಅಕ್ಟೋಬರ್ 27, 1976 ನ್ಯೂ ಡೆಲ್ಲಿ.

77. ಸಿಪಿಐ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಆಲ್ ಇಂಡಿಯಾ ಕಿಸಾನ್ ಸಭಾ, ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಆಲ್ ಇಂಡಿಯಾ ಯೂತ್ ಫೆಡರೇಷನ್, ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ ಪ್ರತಿನಿಧಿಗಳು ನೀಡಿದ ಜಂಟಿ ಪತ್ರಿಕಾ ಹೇಳಿಕೆ, ಡಿಸೆಂಬರ್ 6, 1976.

78. ಪ್ರತಿಗಾಮಿ ಸವಾಲನ್ನು ಎದುರಿಸಲು ವಿಶಾಲವಾದ ದೇಶಪ್ರೇಮಿ ಮತ್ತು ಪ್ರಜಾಪ್ರಭುತ್ವ ಐಕ್ಯತೆಗಾಗಿ, ಸಿಪಿಐನ ಕರೆ. ಬೆಂಗಳೂರಿನಲ್ಲಿ 1977 ರ ಜನವರಿಯಲ್ಲಿ ನಡೆದ ಸಿಪಿಐನ ನಾಲ್ಕು ದಿನಗಳ ಕೇಂದ್ರ ಕಾರ್ಯಕಾರಿ ಸಮಿತಿ ಅಂಗೀಕರಿಸಿ ಜನವರಿ 16, 1977 ರಂದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ನಿರ್ಣಯ.

79. 'ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬಲ ಕಮ್ಯುನಿಸ್ಟ್ ಪಕ್ಷದ ಪಾತ್ರ'ದ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯೂರೊ ನೀಡಿದ ಹೇಳಿಕೆ, 1977 ರ ಡಿಸೆಂಬರ್ 31. ಇದರಲ್ಲಿ ಮೂಲಭೂತವಾಗಿ ವರ್ಗ ಹೊಂದಾಣಿಕೆಯ ಧೋರಣೆಯ ಕುರಿತು ಸಿಪಿಐ ವಿಮರ್ಶೆ ಮಾಡಿಕೊಳ್ಳದಿರುವ ಕುರಿತು ಸಿಪಿಐ(ಎಂ)ನ ವಿಶ್ಲೇಷಣೆ ಇದೆ. ಈ ವರ್ಗ ಹೊಂದಾಣಿಕೆಯನ್ನು ಬದಲಾಯಿಸಿಕೊಳ್ಳದೆ, ತುರ್ತುಪರಿಸ್ಥಿತಿಗೆ ಬೆಂಬಲ ನೀಡಿದ್ದನ್ನು ಕೇವಲ ತಪ್ಪು ಎಂದು ಹೇಳುವದರಿಂದ ಮೂಲ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದಿದೆ.

80. ಸಿದ್ಧಯ್ಯ, 2002, 1979 ರ ಮೈಕೋ ಹೋರಾಟ, ಕ್ರಿಯಾ ಪ್ರಕಾಶನ, ಬೆಂಗಳೂರು. ಇಲ್ಲಿನ ಮಾಹಿತಿಯನ್ನು ಬಹುತೇಕ ಈ ಕಿರುಹೊತ್ತಿಗೆಯಿಂದಲೇ ಪಡೆಯಲಾಗಿದೆ.

81. ದಿಲೀಪ್ ಸುಬ್ರಮಣಿಯನ್, ದಿ ಮೈಕೋ ಸ್ಟ್ರೈಕ್: ಎ ರೆಟ್ರೋಸ್ಪೆಕ್ಟೀವ್, ಎಕನಾಮಿಕ್ ಅಂಡ್ ಪೊಲಿಟಿಕಲ್‌ವೀಕ್ಲಿ, ಸಂ. 15(22), ಮೇ 31, 1980, ಪು. 59.

82. ಜಾನಕಿ ನಾಯರ್ ಅವರು ಬಾಬು ಮ್ಯಾಥ್ಯೂ ಅವರೊಂದಿಗೆ 1999 ರ ಅಕ್ಟೋಬರ್ 8 ರಂದು ನಡೆಸಿದ ಸಂದರ್ಶನ, ಪು. 15.

83. ಹೈದರಾಬಾದಿನ ಮೂರು, ಕೆಜಿಎಫ್, ಕಲಮಶ್ಶೇರಿ, ಪಾಲ್ಘಾಟ್, ಮದ್ರಾಸ್, ಕೋರಾಪುಟ್, ಕಲ್ಕತ್ತಾ, ಬಾರಕ್‌ಪುರ, ಅಲಹಾಬಾದ್, ರಾಯ್‌ಬರೇಲಿ, ಲಕ್ನೋ, ಕಾನ್ಪುರ್, ಗಾಜಿಯಾಬಾದ್, ಬಾಂಬೆ, ನಾಸಿಕ್ ಮತ್ತು ನ್ಯೂ ಡೆಲ್ಲಿಗಳಲ್ಲಿದ್ದ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡರು.

84. ಡೆಕ್ಕನ್ ಹೆರಾಲ್ಡ್ 23–12–1980.

85. ಅದೇ, 21–1–1981.

86. ಮೈಕೆಲ್ ಬಿ. ಫರ್ನಾಂಡೀಸ್, ದಿ ಪಬ್ಲಿಕ್ ಸೆಕ್ಟರ್ ಸ್ಟ್ರೈಕ್: ಫ್ಯಾಕ್ಟ್ಸ್ ಅಂಡ್ ಲೆಸನ್ಸ್, ದಿ ಅದರ್‌ಸೈಡ್, (ಸಂ) ಜಾರ್ಜ್ ಫರ್ನಾಂಡಿಸ್, ನ್ಯೂ ಡೆಲ್ಲಿ, ಪು. 1–8.

87. ಡೆಕ್ಕನ್ ಹೆರಾಲ್ಡ್ 4 ಮತ್ತು 5, ಮೇ 1981.

88. ಜಾನಕಿ ನಾಯರ್ – ಬಾಬು ಮ್ಯಾಥ್ಯು ಸಂದರ್ಶನ, ಪು. 17.

89. ಧಾರವಾಡ ಜಿಲ್ಲೆಯ ನವಲಗುಂದ, ನರಗುಂದ, ಹುಬ್ಬಳ್ಳಿ, ಗದಗ, ರೋಣ, ಬೆಳಗಾವಿ ಜಿಲ್ಲೆಯ ಸವದತ್ತಿ, ಬೈಲಹೊಂಗಲ, ರಾಮದುರ್ಗ ಮತ್ತು ಬಾಗಲಕೋಟೆ ಜಿಲ್ಲೆಯ ಬಾದಾಮಿ.

90. ಅದರಲ್ಲಿ ಪಾಠ ಮಾಡಲು ಪಿ.ರಮಚಂದ್ರರಾವ್, ಎಂ.ಕೆ.ಭಟ್ ಮತ್ತು ಎನ್.ಕೆ.ಉಪಾಧ್ಯಾಯ ಇವರು ಬಂದಿದ್ದರು. ಮಧ್ಯಮ ವರ್ಗದ ರೈತರನ್ನು ಆಧಾರವಾಗಿಟ್ಟುಕೊಂಡು, ಶ್ರೀಮಂತ ರೈತರ ಪ್ರಶ್ನೆಗಳನ್ನು ಎತ್ತಿಕೊಂಡು, ಹೋರಾಟ ರೂಪಿಸಬೇಕೆಂದು ಹಳಕಟ್ಟಿ ವಾದಿಸುತ್ತಿದ್ದರು. ಅದಕ್ಕೆ ಮುಖಂಡರು ಆ ರೀತಿ ಮಾಡಿದರೆ ಕ್ರಾಂತಿಕಾರಿ ಸಂಘಟನೆಯಾಗುವುದಿಲ್ಲ, ಸಣ್ಣ ರೈತರು ಮತ್ತು ಕೃಷಿಕೂಲಿಕಾರರನ್ನು ಆಧರಿಸಿ ಹೋರಾಟ ರೂಪಿಸಬೇಕು ಎಂದಿದ್ದರು. (ವಿ.ಎನ್.ಹಳಕಟ್ಟಿ ಸಂದರ್ಶನದಿಂದ).

91. ಬಿ.ಎಸ್.ಸೊಪ್ಪಿನ್ ಅವರು ನರಗುಂದ ಹೋರಾಟದ ಮೂಲ ಬೀಜ ಎನ್ನಬಹುದು. ನವಲಗುಂದ ತಾಲೂಕಿನ ಅಗಳವಾಡಿಯವರಾದ ಇವರು ಶಾಲಾ ಶಿಕ್ಷಕರಾಗಿ ಕೆಲಸ ಮಾಡಿಕೊಂಡೇ ರೈತರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ನರಗುಂದ ರೈತ ಬಂಡಾಯಕ್ಕೆ ಕಾರಣವಾದ ಮೊದಲ ಸಭೆಯನ್ನು ಏರ್ಪಡಿಸಿದ್ದರು.

92. ಕಪ್ಪಣ್ಣನವರ್ ಅವರು ಸ್ವಾತಂತ್ರ್ಯ ಯೋಧರು, ರಜಾಕಾರರ ವಿರೋಧಿ ಹೋರಾಟದಲ್ಲಿದ್ದರು ಮತ್ತು ಕಮ್ಯುನಿಸ್ಟ್ ಪಾರ್ಟಿಯ ಮುಖಂಡರಾಗಿದ್ದರು. 2017 ರಲ್ಲಿ ತಮ್ಮ ಹಿರಿ ವಯಸ್ಸಿನಲ್ಲಿ ನಿಧನರಾದರು.

93. ಇದು ಮಹತ್ವವಾದದ್ದು ಎಂದು ಹೇಳುವುದು ಏಕೆಂದರೆ, ರಾಜ್ಯ ರೈತ ಸಂಘವು ಹಳ್ಳಿಯ ರೈತರನ್ನು ಮತ್ತು ನಗರದ ಕಾರ್ಮಿಕರನ್ನು ಪರಸ್ಪರ ಎತ್ತಿಕಟ್ಟುವ ವಾದವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಈ ಕಾರ್ಯಾಚರಣೆ ಗಮನಾರ್ಹವಾದದ್ದು. ನಗರ ವರ್ಸಸ್ ಹಳ್ಳಿ ಎಂಬ ನೆಪದಲ್ಲಿ ಗ್ರಾಮೀಣ ಜಮೀನ್ದಾರರನ್ನು ಮತ್ತು ಶ್ರೀಮಂತ ವರ್ಗಗಳನ್ನು ರಕ್ಷಿಸುವ ಮತ್ತು ನಗರ ಎನ್ನುವ ಹೆಸರಿನಲ್ಲಿ ಕಾರ್ಮಿಕರನ್ನೂ ವಿರೋಧಿಸುವ ಸೈದ್ಧಾಂತಿಕ ದಿವಾಳಿತನದ ಲಕ್ಷಣಗಳನ್ನು ಅದರಲ್ಲಿ ಕಾಣಬಹುದು.

94. ಜಾನಕಿ ನಾಯರ್ – ಬಾಬು ಮ್ಯಾಥ್ಯೂ ಸಂದರ್ಶನ, ಪು. 19.

95. ಹಳಕಟ್ಟಿ ಅವರೊಂದಿಗೆ ಸಂದರ್ಶನದಿಂದ.

96. ಆನ್ ಅಪ್ರೋಚ್ ಟು ಮಾಸ್ ಆರ್ಗನೈಸೇಷನ್ಸ್, ಡಾಕ್ಯುಮೆಂಟ್ಸ್ ಆನ್ ಪಾರ್ಟಿ ಆರ್ಗನೈಸೇಷನ್, 2015, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ, ಪು. 725–726.

97. ಬೆಂಗಳೂರಿನ ರಾಜಾಮಿಲ್, ಟ್ಯಾನರಿ, ಕೃಷ್ಣಾಮಿಲ್ ಮತ್ತು ಕೆ.ಜಿ.ಎಫ್. ಮುಂತಾದೆಡೆಗಳಿಗೆ ನಿಧಿ ಸಂಗ್ರಹಕ್ಕಾಗಿ ಹೋಗಿದ್ದ ಸ್ವಯಂಸೇವಕರನ್ನು ಬಂಧಿಸಿ ಸಂಗ್ರಹಿಸಿದ ನಿಧಿಯನ್ನು ಪೋಲೀಸರು ಕಿತ್ತುಕೊಂಡರು. ಬಂಧಿತರಾದವರನ್ನು ಹಿಂಸಿಸಿದ್ದರು. ಸಮ್ಮೇಳನದ ಪ್ರಚಾರ ಕಾರ್ಯಗಳಿಗೆ ತಡೆ ಹಾಕಿದ್ದರು. 14 ನೇ ತಾರೀಖಿನಂದು ಭದ್ರಾವತಿಯಿಂದ ಬರುತ್ತಿದ್ದ ಪ್ರತಿನಿಧಿಗಳನ್ನು ದಾರಿಯಲ್ಲೇ ತಡೆದು ಬಂಧಿಸುವ ಯತ್ನ ಮಾಡಿದರು. ಮಂಗಳೂರಿನಿಂದ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಇಬ್ಬರನ್ನು ಬಂಧಿಸಿ 15 ದಿವಸಗಳ ರಿಮಾಂಡ್ ಕೊಡಲಾಗಿತ್ತು. ಇನ್ನು ಕೆಲವರ ಮೇಲೆ ವಾರೆಂಟ್ ಹೊರಡಿಸಲಾಗಿತ್ತು. ಇದರ ನಡುವೆಯೂ 75 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಬಸವಯ್ಯನವರು ಸಮ್ಮೇಳನದ ಸ್ವಾಗತ ಭಾಷಣವನ್ನು ಮಾಡಿದರು. – ಅರುಣ ವಾರಪತ್ರಿಕೆ, 21–5–1950, ಸಂಪುಟ 3, ಸಂಚಿಕೆ 30, ಪು. 5.

98. 1948 ರ ಜುಲೈ–ಡಿಸೆಂಬರ್‌ವರೆಗೆ 648 ಮುಷ್ಕರಗಳು ನಡೆದು ಅದರಲ್ಲಿ 4,69,870 ಕಾರ್ಮಿಕರು ಪಾಲ್ಗೊಂಡಿದ್ದರು ಮತ್ತು ಒಟ್ಟಾರೆ 21,08,989 ದಿನಗಳು ನಷ್ಟವಾದವು. 1949 ರ ಜನವರಿ – ಜೂನ್‌ವರೆಗೆ 644 ಮುಷ್ಕರಗಳು ನಡೆದು 4,59,375 ಕಾರ್ಮಿಕರು ಪಾಲ್ಗೊಂಡಿದ್ದರು ಮತ್ತು ಒಟ್ಟಾರೆ 36,77,207 ದಿನಗಳು ನಷ್ಟವಾದವು. – ಅರುಣ ವಾರಪತ್ರಿಕೆ, 21–5–1950, ಸಂಪುಟ 3, ಸಂಚಿಕೆ 30, ಪು. 5.

99. ಜಿ.ಎಸ್.ನಾಗರಾಜ್ ಅವರೊಂದಿಗೆ ಸಂದರ್ಶನ.

100. ಮೆಕಾನಿಕಲ್ ವರ್ಕರ್ಸ್ ಯೂನಿಯನ್, ವೆಮ್ಕೋ ಕಾರ್ಮಿಕರ ಸಂಘ, ಇಂಡಸ್ಟ್ರಿಯಲ್ ಎಸ್ಟೇಟ್ ವರ್ಕರ್ಸ್ ಯೂನಿಯನ್, ಮುನಿಸಿಪಲ್ ವರ್ಕರ್ಸ್ ಯೂನಿಯನ್, ಪಿಡಬ್ಲ್ಯೂಡಿ ಕಾರ್ಮಿಕರ ಸಂಘ, ಲೇತ್ ವರ್ಕರ್ಸ್ ಯೂನಿಯನ್, ಚರ್ಮ ಕೈಗಾರಿಕೆ ಕಾರ್ಮಿಕರ ಸಂಘ ಮಾಡಿದೆವು. ಆ ಸಮಯದಲ್ಲಿ ಬಹಳಷ್ಟು ಸರ್ಕಸ್ ಕಂಪನಿಗಳು ಬೆಳಗಾವಿಗೆ ಬರುತ್ತಿದ್ದವು. ಅವರ ನಡುವೆ ಸರ್ಕಸ್ ವರ್ಕರ್ಸ್ ಯೂನಿಯನ್, ಟೈಲರಿಂಗ್ ವರ್ಕರ್ಸ್ ಯೂನಿಯನ್, ಬೆಳಗಾವಿ ಮಿಲಿಟರಿ ಕ್ಯಾಂಪ್‌ನಲ್ಲಿದ್ದ ಡೈರಿ ಕಾರ್ಮಿಕರ ಸಂಘ, ಬೆಳಗಾಂ ಬೀಡಿ ವರ್ಕರ್ಸ್ ಯೂನಿಯನ್, ನಿಪ್ಪಾಣಿ ಬೀಡಿ ವರ್ಕರ್ಸ್ ಯೂನಿಯನ್, ಇಂಡಾಲ್ ಅಲ್ಯೂಮಿನಿಯಂ ವರ್ಕರ್ಸ್ ಯೂನಿಯನ್, ಮಹಾರಾಷ್ಟ್ರ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ,

ಮರಾಠಾ ಬ್ಯಾಂಕ್, ಮೈಸೂರು ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್‌ಗಳ ನೌಕರರ ಸಂಘಗಳು, ಹೀಗೆ ವಿಭಿನ್ನ ನೆಲೆಗಟ್ಟಿನ ವಿಸ್ತಾರವಾದ ಸಂಘಗಳನ್ನು ಸ್ಥಾಪಿಸಿದರು. ಕೃಷ್ಣ ಮೆಣಸಿಯವರು ತಮ್ಮ ಸಂದರ್ಶನ ಸಮಯದಲ್ಲಿ ನೀಡಿದ ಪಟ್ಟಿ.

101. ಜಾನಕಿ ನಾಯರ್‌ರವರು ಬಾಬು ಮ್ಯಾಥ್ಯೂ ಅವರೊಂದಿಗೆ ನಡೆಸಿದ ಸಂದರ್ಶನದಿಂದ.

102. ಕೃಷ್ಣ ಮೆಣಸಿ ಅವರೊಂದಿಗಿನ ಸಂದರ್ಶನದಿಂದ.

103. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, 1954, ಪು.2, ಸಿಬಿ, ಕೆಎಸ್ಎ.

104. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, 1955, ಪು.2, ಸಿಬಿ, ಕೆಎಸ್ಎ.

105. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಪೊಲೀಸ್ ಡಿಪಾರ್ಟ್‌ಮೆಂಟ್ ಫಾರ್ ದಿ ಇಯರ್ 1955(ಬಿ) 8449, ಪು 7, ಕೆಎಸ್ಎ.

106. ಜಾನಕಿ ನಾಯರ್ ಅವರು ಬಾಬು ಮ್ಯಾಥ್ಯು ಅವರೊಂದಿಗೆ ನಡೆಸಿದ ಸಂದರ್ಶನ.

107. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, 1955, ಪು. 2, ಸಿಬಿ, ಕೆಎಸ್ಎ.

108. ಅರುಣ ವಾರಪತ್ರಿಕೆ, 4–6–1950, ಸಂಪುಟ 3, ಸಂಚಿಕೆ 32, ಪು. 4.

109. ನೌಕಾದಳದಲ್ಲಿ ಎಮರ್ಜೆನ್ಸಿ ಕಮಿಷನ್ಡ್ ಅಧಿಕಾರಿಯಾಗಿದ್ದ ಎಂ.ಹೆಚ್.ಕೃಷ್ಣಪ್ಪನವರು ರಾಯಲ್ ಇಂಡಿಯನ್ ನೇವಿ ವಲಂಟಿಯರ್ಸ್ ರಿಜರ್ವ್‌ನಲ್ಲಿ ಯುದ್ಧ ತರಬೇತಿ ಹೊಂದಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರ ಪ್ರಶ್ನೆಗಳಿಗಾಗಿ ಚಳುವಳಿಯ ಮುಂಚೂಣಿಯಲ್ಲಿದ್ದರು ಮತ್ತು ರೈತ ಚಳುವಳಿಯನ್ನು ಕಟ್ಟಲು ಮುಂಚೂಣಿ ಪಾತ್ರ ವಹಿಸಿದರು.

110. ಜಿಲ್ಲಾ ಸಮ್ಮೇಳನದ ವರ್ಷವನ್ನು 1952 ಎಂಬುದಾಗಿ ಬಿ.ವಿ.ಕಕ್ಕಿಲ್ಲಾಯರು ತಮ್ಮ ಪುಸ್ತಕದಲ್ಲಿ (ಕಕ್ಕಿಲ್ಲಾಯ 2003: 189) ಹೇಳಿದ್ದಾರೆ. ಸಮ್ಮೇಳನವು ಮಂಗಳೂರಿನ ಕುದ್ರೋಳಿ ದೇವಸ್ಥಾನದ ಬಳಿಯಿರುವ ಗೀತಾ ಮಂದಿರದಲ್ಲಿ ನಡೆಯಿತೆಂದು ಕೆ.ಆರ್.ಶ್ರೀಯಾನರು ಸಮ್ಮೇಳನ ನಡೆದ ಸ್ಥಳವನ್ನು ನಮೂದಿಸಿರುವುದರಿಂದ 1954 ನ್ನು ತೆಗೆದುಕೊಂಡಿದ್ದೇನೆ.

111. ಟ್ವೆಲ್ತ್ ಸೆಷನ್ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ, ಪ್ರೊಸೀಡಿಂಗ್ಸ್ ಅಂಡ್ ರೆಸಲ್ಯೂಷನ್ಸ್, ಮೋಗಾ, ಸೆಪ್ಟೆಂಬರ್ 13–19, 1954, ಪು. 39 ಮತ್ತು 61.

112. ಸಮ್ಮೇಳನದ ಸಿದ್ದತಾ ಸಮಿತಿಯಲ್ಲಿ ಎಐಕೆಎಸ್ ಕೌನ್ಸಿಲ್ ಸದಸ್ಯ ಎ.ಕೃಷ್ಣಶೆಟ್ಟಿ, ಶರಣಪ್ಪ ಭೈರಿ, ಆರ್. ವೆಂಕಟರಾಮಯ್ಯ, ವೈ.ಟಿ.ಅಯ್ಯಪ್ಪ ಮತ್ತು ಸಂಚಾಲಕರಾಗಿ ಬಿ.ವಿ.ಕಕ್ಕಿಲ್ಲಾಯ ಇದ್ದರು. ಸಮ್ಮೇಳನ ಅಂತಿಮಗೊಂಡು ರಾಜ್ಯ ಸಮಿತಿ ಅಧ್ಯಕ್ಷರಾಗಿ ಪಿ.ವೆಂಕಟಗಿರಿಯಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಬಿ.ವಿ.ಕಕ್ಕಿಲ್ಲಾಯ, ಉಳಿದ ಪದಾಧಿಕಾರಿಗಳಲ್ಲಿ ಉಪಾಧ್ಯಕ್ಷರಾಗಿ ಎ.ಕೃಷ್ಣಶೆಟ್ಟಿ, ಶರಣಪ್ಪ ಭೈರಿ, ಜಂಟಿ

ಕಾರ್ಯದರ್ಶಿಗಳಾಗಿ ಎಂ.ಎನ್.ಉಗ್ರಪ್ಪ, ಸಿ.ರಾಮಭದ್ರಯ್ಯ, ಖಜಾಂಚಿಯಾಗಿ ಕೆ.ವಿ.ಕೃಷ್ಣಸ್ವಾಮಿ ಮತ್ತು ಸದಸ್ಯರಾಗಿ ನಂಜುಂಡೇಗೌಡ, ಅಪ್ಪಸ್ವಾಮಿರೆಡ್ಡಿ, ಕೊರಗಪ್ಪ ರೈ, ಸಂಜೀವ ರೈ, ವೈ.ಟಿ.ಅಯ್ಯಪ್ಪ, ನಾರಾಯಣ ರೆಡ್ಡಿ, ಪಿ.ನಾರಾಯಣ ಆಯ್ಕೆಯಾದರು.

113. ಕಾವೇರಿ ತಟದಲ್ಲಿದ್ದ ದಿವಾನ್ ಬಂಗಲೆಯಲ್ಲಿ ಸಮ್ಮೇಳನ ನಡೆಯಿತು. ಮಹದೇವಪ್ಪ ಮುರುಗೋಡು ಧ್ವಜಾರೋಹಣ ಮಾಡಿದರು. ಎನ್.ಎಲ್.ಉಪಾಧ್ಯಾಯ ಉದ್ಘಾಟಿಸಿದರು. ಎ.ಕೃಷ್ಣಶೆಟ್ಟರು ಅಧ್ಯಕ್ಷರಾಗಿ ಮತ್ತು ಬಿ.ವಿ.ಕಕ್ಕಿಲ್ಲಾಯ ಕಾರ್ಯದರ್ಶಿಯಾಗಿ, ಹೆಚ್.ಮುಗವಾಳಪ್ಪನವರು ಉಪಾಧ್ಯಕ್ಷರಾಗಿ ಆಯ್ಕೆಯಾದರು. ಮಾರನೇ ದಿನ ಬಹಿರಂಗ ಸಭೆಯಲ್ಲಿ ಎಐಕೆಎಸ್‌ನ ಕಾರ್ಯದರ್ಶಿ ಜಗಜೀತ್ ಸಿಂಗ್ ಲ್ಯಾಲ್‌ಪುರಿ ಭಾಷಣ ಮಾಡಿದರು. ನಾಟ್ಯಾಚಾರ್ಯ ಕೆ.ಬಿ.ಮಾಧವರಾವ್ ನೃತ್ಯ ಕಾರ್ಯಕ್ರಮ ಮತ್ತು ಗಾನಕೋಗಿಲೆ ಪಿ.ಕಾಳಿಂಗರಾವ್ ಜಾನಪದ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

114. 18ನೇ ಎಐಕೆಎಸ್ ತ್ರಿಶೂರ್ ಅಧಿವೇಶನ – ಮಾರ್ಚ–ಏಪ್ರಿಲ್ 1961, ಎಂ.ಎ.ರಸೂಲ್, 1989, ಎ ಹಿಸ್ಟರಿ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

115. 1924 ರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಜೈಲಿಗೆ ಹೋಗಿದ್ದ ವಾಮನಭಟ್ಟರು ತೀರ್ಥಹಳ್ಳಿ ತಾಲೂಕಿನ ತ್ರಿವಳಿ ಕಮ್ಯುನಿಸ್ಟ್ ಮುಖಂಡರಲ್ಲಿ ಒಬ್ಬರು. ಮುದ್ರಣ ಪ್ರೆಸ್ ಮತ್ತು ಶ್ರೀ ಸ್ಟುಡಿಯೋ ನಡೆಸುತ್ತಿದ್ದ ಇವರ ಕಛೇರಿಯೇ ಕಮ್ಯುನಿಸ್ಟ್ ಪಕ್ಷದ ಕೇಂದ್ರವಾಗಿತ್ತು. ಕರಪತ್ರಗಳನ್ನು ಬರೆಯುವುದು, ಮುದ್ರಿಸಿಕೊಡುವುದು, ಮಾಹಿತಿ ನೀಡುವುದು, ಒಂದು ರೀತಿ ಪರದೆ ಹಿಂದಿನ ಮುಖಂಡರಾಗಿದ್ದರು. ತೀರ್ಥಹಳ್ಳಿ ಪೊಲೀಸ್ ಸ್ಟೇಷನ್ ಮೇಲೆ ಕಮ್ಯುನಿಸ್ಟ್ ಬಾವುಟವನ್ನು ಹಾರಿಸುವ ದುಸ್ಸಾಹಸದಲ್ಲಿ ಇವರೂ ಇದ್ದರು. 2017 ರಲ್ಲಿ ನಿಧನರಾದರು.

116. ಅರುಣ ವಾರಪತ್ರಿಕೆ, 26–11–1961 ಸಂಪುಟ 15, ಸಂಚಿಕೆ 4, ಪು. 1.

117. ಶ್ರೀಯಾನ್ 2017: 69–70 ಮತ್ತು ರಾಮಭದ್ರಯ್ಯ 1990: 11.

118. ಗೇಣಿದಾರರ ಹೆಸರನ್ನು ಗ್ರಾಮ ರೆಕಾರ್ಡಿನಲ್ಲಿ ದಾಖಲು ಪಡಿಸಲು ಮತ್ತು ಅಕ್ರಮವಾಗಿ ಮನಸ್ಸಿಗೆ ಬಂದಂತೆ ಗೇಣಿಯನ್ನು ಜಮೀನ್ದಾರರು ವಸೂಲಿ ಮಾಡಬಾರದೆಂದು ಮತ್ತು ಗೇಣಿ ವಸೂಲಿಯಲ್ಲಿ ನಿರ್ದಿಷ್ಟ ಪರಿಮಿತಿ ತರಬೇಕೆಂದು ನಡೆದ ಚಳುವಳಿ. ಇದರ ನೇತೃತ್ವವನ್ನು ಕ್ಯಾತಾನ್ ಮನವೆಲ್ ಡಿಸೋಜಾ, ಹೈದರ್‌ಸಾಬ್, ಯೂಸುಫ್‌ಸಾಬ್, ಪುರ್ಸು ಜೋಗು ನಾಯ್ಕ, ಎನ್.ಜಿ.ಮ್ಹಾಳ್ಸೇಕರ, ಹೊನ್ನಪ್ಪ ರಾಮಚಂದ್ರ ನಾಯ್ಕ, ಎನ್.ಎಲ್.ಉಪಾಧ್ಯಾಯ, ಗೋವಿಂದ ಬಾಂದೇಕರ ಮುಂತಾದವರು ವಹಿಸಿದ್ದರು – ವಿಠಲ ಭಂಡಾರಿ ಸ್ಮರಣ ಸಂಚಿಕೆ: 5–8.

119. ಕಿಸಾನ್ ಸಭಾ, ಕಾರವಾರ, ಇವರು ಹೊರಡಿಸಿದ ಕರಪತ್ರ.

120. ಸೋಯರು ಪಡ್ತಿ, ದಾಡು ಹೊನ್ನಾ ತಳೇಕರ, ಓಂಕೋ ತಿಪು ತಳೇಕರ, ವೈಕುಂಠ ಬಾಂದೇಕರ, ಮುಕುಂದ ಬಾಂದೇಕರ, ಮ್ಹಾಳ್ಸೇಕರ್, ತೂಡೋ ಪಕೀರ ಪಡ್ತಿ, ವಿಷ್ಣು ಗಾವಡಿ, ಶಿವಾನಂದ ಮಾಂಜ್ರೇಕರ, ಕಾಯ್ತಾನ್ ಡಿಸೋಜಾ, ಹಳದೀಪುರ ಹೊನ್ನಪ್ಪ ನಾಯ್ಕ, ಗುಬ್ಬು ನಾಯ್ಕ, ಅಮೀರುದ್ದೀನ್, ಹೈದರ್ ಸಾಬ್ ಮುಂತಾದವರು. ಇವರಲ್ಲಿ ಮ್ಹಾಳ್ಸೇಕರ ಮತ್ತು ಚೂಡೋ ಜೈಲಿನಿಂದ ತಪ್ಪಿಸಿಕೊಂಡರು.

121. ಸರಕಾರದ ಭೂ ನ್ಯಾಯ ಮಂಡಳಿ (ಟ್ರಿಬ್ಯುನಲ್) ಮತ್ತು ನಮ್ಮ ಅಭಿಪ್ರಾಯಗಳು, 1979, ಉತ್ತರ ಕನ್ನಡ ಜಿಲ್ಲಾ ಕಾರ್ಯಕಾರಿ ಕಮಿಟಿ, ಕಿಸಾನ್ ಸಭಾ (ಎಐಕೆಎಸ್), ಕಾರವಾರ.

122. ಕೃಷ್ಣ ಮೆಣಸೆ ಅವರೊಂದಿಗೆ ಸಂದರ್ಶನ.

123. ಜಿ.ಎಸ್.ನಾಗರಾಜ್ ಅವರೊಂದಿಗೆ ಸಂದರ್ಶನ.

124. ಮಲೆನಾಡಿನಲ್ಲಿ ದೀಪಾವಳಿ ಸಂದರ್ಭದಲ್ಲಿ ದೀಪಗಳನ್ನು ತೆಗೆದುಕೊಂಡು ಮನೆ ಮನೆಗೆ ಹೋಗುವುದು ವಾಡಿಕೆ. ಆ ಮನೆಗಳಲ್ಲಿ ಅಕ್ಕಿ, ದವಸ ಧಾನ್ಯ ಪಡೆದು ಅಲ್ಲಿ ದೀಪ ಹಚ್ಚುವ ಪದ್ಧತಿಯಿದು. ಈ ವಿಧಾನವನ್ನೇ ಇಲ್ಲಿ ಹೋರಾಟ ಪ್ರಾರಂಭಕ್ಕೂ ಮುನ್ನ ರೈತ ಸಂಘದವರು ಮಾಡಿದರು. ಇದರಿಂದ ಭತ್ತ, ಅಕ್ಕಿ ಮತ್ತು ಹಣ ಸಂಗ್ರಹವೂ ಆಯಿತು ಮತ್ತು ಪ್ರಚಾರವೂ ಆಯಿತು. ಜನರ ಮನಸನ್ನು ಗೆಲ್ಲಲು ಇದರಿಂದ ಸಾಧ್ಯವಾಯಿತೆಂದು ಜಿ.ಎಸ್.ನಾಗರಾಜ್ ತಮ್ಮ ಸಂದರ್ಶನದಲ್ಲಿ ತಿಳಿಸಿದ್ದಾರೆ.

125. ಕೆ.ಎಂ.ಶ್ರೀನಿವಾಸ್ ಅವರೊಂದಿಗೆ ಸಂದರ್ಶನ.

126. ಸಾತ್ಮಣಿ, ಜಾವಳ್ಳಿ, ಯಾಡೋಗಾ, ಮೊದಿಲಗೇರಿ, ಅಜಗಾಂವ್, ಅಸಕಲಕಟ್ಟಾ, ಆಲೂರಾ, ತಾಟಗೇರಾ, ರಾಮಾಪುರ, ಡೋಮಗೇರಾ, ಕೇರವಾಡ, ಕಂಚನಹಳ್ಳಿ, ಹವಗಿ ಮುಂತಾದವು.

127. ಇವರು ಸಿಪಿಐ(ಎಂ)ನ ಮುಖಂಡರು ಮತ್ತು ದಾಂಡೇಲಿ ಪುರಸಭಾ ಸದಸ್ಯರೂ ಆಗಿದ್ದರು. ಜೂನ್ 7 ರಂದು ಜಿ.ವಿ.ಪವಾರ್ ಮತ್ತು ಮ್ಹಾಳ್ಶೇಕರ್ ಅವರನ್ನು ಬಂಧಿಸಲು ಪೊಲೀಸರು ತೀರ್ಮಾನಿಸಿದ್ದರು. ಆದರೆ ರೈತರು ಸುತ್ತುವರಿದು ಅವರಿಗೆ ರಕ್ಷಣೆ ನೀಡುತ್ತಿದ್ದರಿಂದ, ಲಾಠಿ ಚಾರ್ಜ್ ಮಾಡಿದರು, ಅಶ್ರುವಾಯು ಸಿಡಿಸಿದರು, ಗೋಲೀಬಾರ್ ಮಾಡಿದರು.

128. ಪ್ರಕಾಶ್ ಹಿಟ್ನಳ್ಳಿ ಅವರೊಂದಿಗೆ ಸಂದರ್ಶನ.

129. ಕೇಳನರಸಿ ದೇವಪ್ಪಗೌಡ, 23–5–2015 ರಂದು ತೀರ್ಥಹಳ್ಳಿಯ ಗೋಪಾಲಗೌಡ ರಂಗಮಂದಿರದಲ್ಲಿ ನಡೆದ 'ಕಾಮ್ರೇಡ್ ಕೆ.ಎಂ.ಶ್ರೀನಿವಾಸ್' ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಹೇಳಿದ್ದು.

130. 18ನೇ ಎಐಕೆಎಸ್ ತ್ರಿಶೂರ್ ಅಧಿವೇಶನ – ಮಾರ್ಚ–ಏಪ್ರಿಲ್ 1961, ಎಂ.ಎ.ರಸೂಲ್, 1989, ಎ ಹಿಸ್ಟರಿ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

131. ಕಮ್ಯುನಿಸ್ಟರು ನಡೆಸಿದ ಭೂಗ್ರಹಣ ಹೋರಾಟಗಳಿಂದ ಖಚಿತವಾಗಿ ಎಷ್ಟು ಭೂಮಿ ರೈತರಿಗೆ ಸಿಕ್ಕಿತು ಎಂಬ ಬಗ್ಗೆ ಖಚಿತವಾದ ಮಾಹಿತಿಯಿಲ್ಲ. ರಾಮಭದ್ರಯ್ಯನವರು ಸುಮಾರು 10 ಸಾವಿರ ಎಕರೆ ಇರಬಹುದೆಂದು ಅಂದಾಜು ಮಾಡಿದ್ದಾರೆ. ಜಿ.ವಿ.ಶ್ರೀರಾಮರೆಡ್ಡಿ ಬರೆದಿರುವ ಅವಿಭಜಿತ ಕೋಲಾರ ಜಿಲ್ಲೆಯ ಕಮ್ಯುನಿಸ್ಟ್ ಚಳುವಳಿ ಪುಸ್ತಕದಲ್ಲಿ ಕಮ್ಯುನಿಸ್ಟರ ಹೋರಾಟದಿಂದ 1 ಲಕ್ಷ ಎಕರೆ ಭೂಮಿ ರೈತರಿಗೆ ಸಿಕ್ಕಿದೆ ಎಂದಿದ್ದಾರೆ. ಆದರೆ ಅಷ್ಟೊಂದು ಭೂಮಿಯನ್ನು ರೈತರು ಹಿಡಿದಿರುವ ಬಗ್ಗೆ ಯಾವುದೇ ಅಧಿಕೃತ ಮಾಹಿತಿಗಳು ದೊರೆತಿಲ್ಲ.

132. ಜಿ.ಸಿ.ಬಯ್ಯಾರೆಡ್ಡಿ ಅವರೊಂದಿಗೆ ನಡೆಸಿದ ಸಂದರ್ಶನದಿಂದ.

133. ಅಬ್ದುಲ್ ಲತೀಫ್ ಅವರೊಂದಿಗೆ ನಡೆಸಿದ ಸಂದರ್ಶನದಿಂದ.

134. ಕಾರವಾರ ತಾಲೂಕು ಕಿಸಾನ್ ಪರಿಷದ್ ಶೇಷಗಿರಿ ವಿ. ಪಿಕಳೆ ಅವರ ಅಧ್ಯಕ್ಷತೆಯಲ್ಲಿ 26–10–1966 ರಂದು ಕಾರವಾರದ ಚಂಡಿ ಮಹಾ ದೇವಸ್ಥಾನದ ಬಳಿ ನಡೆಯುವ ಬಗ್ಗೆ ಕರಪತ್ರದಲ್ಲಿ ಇದನ್ನು ವಿವರಿಸಲಾಗಿದೆ.

135. ಸಮ್ಮೇಳನದ ಪ್ರಚಾರ ಕಮಿಟಿಯು ರೈತರು ಮತ್ತು ಗೇಣಿದಾರರ ನಡುವೆ ಪ್ರಚಾರ ಮಾಡಲು ಹೊರಡಿಸಿದ್ದ ಕರಪತ್ರದಲ್ಲಿ ಈ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

136. 1969 ರ ಜನವರಿ 25 ರಂದು ಕಾರವಾರ ಜಿಲ್ಲಾಧಿಕಾರಿ ಕಛೇರಿ ಮುಂದೆ ನಡೆದ ಪ್ರತಿಭಟನೆಯ ನೇತೃತ್ವವನ್ನು ಕಾರವಾರ ತಾಲೂಕು ಅಧ್ಯಕ್ಷರಾದ ಸೈಯದ್ ಅಬ್ದುಲ್ ಹಮೀದ್ ಕಿನ್ನರ ಮತ್ತು ಉಪಾಧ್ಯಕ್ಷರಾಗಿದ್ದ ಎನ್.ಜಿ.ಮ್ಹಾಳ್ಸೇಕರ್ ಇವರು ವಹಿಸಿದ್ದರು. ತಾಲೂಕಾ ಕಿಸಾನ್ ಸಭಾದ ಅಧ್ಯಕ್ಷರಾದ ಸೈಯದ್ ಅಬ್ದುಲ್ ಹಮೀದ್ ಕಿನ್ನರ ಮತ್ತು ಉಪಾಧ್ಯಕ್ಷರಾದ ಎನ್.ಜಿ.ಮ್ಹಾಳ್ಸೇಕರ್, ಕೋಡಿಭಾಗ ಇವರ ಹೆಸರಿನಲ್ಲಿ ಹೊರಡಿಸಿಲಾದ ಕರಪತ್ರ.

137. ಮೆರವಣಿಗೆ ಮತ್ತು ಬಹಿರಂಗ ಸಭೆ 2–10–1969 ಹಳಗಾ. ಕಾರವಾರ. ಖೈತಾನ್ ಮನವೇಲ ಡಿಸೋಜಾ, ತಾಲೂಕು ಕಿಸಾನ್ ಸಭಾ ಅಧ್ಯಕ್ಷ ಇವರ ಹೆಸರಿನಲ್ಲಿ ಹೊರಡಿಸಲಾದ ಕರಪತ್ರ.

138. ಚಂದ್ರ ಪೂಜಾರಿ, 2010, ಪು. 55 ಮತ್ತು 125. ಚಂದ್ರ ಪೂಜಾರಿಯವರು ಅಂಕಿ–ಸಂಖ್ಯೆಗಳನ್ನು ಚಂದ್ರಶೇಖರ್ ದಾಮ್ಲೆ ಅವರ 'ಲ್ಯಾಂಡ್ ರಿಫಾರ್ಮ್ಸ್ ಲೆಜಿಸ್ಲೇಷನ್ ಇನ್ ಕರ್ನಾಟಕ: ಮಿಥ್ ಅಂಡ್ ರಿಯಾಲಿಟಿ', ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, 24 (33), ಆಗಸ್ಟ್ 1989 ರ ಸಂಚಿಕೆಯಿಂದ ಪಡೆದಿದ್ದು, ಅಲ್ಲಿನ ಕೋಷ್ಟಕಗಳಿಂದ ಈ ಅಂಕಿಗಳನ್ನು ತೆಗೆದುಕೊಳ್ಳಲಾಗಿದೆ.

139. ಬಯ್ಯಾರೆಡ್ಡಿ ಅವರೊಂದಿಗೆ ಸಂದರ್ಶನದಿಂದ.

140. ವಿ.ಎನ್.ಹಳಕಟ್ಟಿ ಅವರೊಂದಿಗೆ ಸಂದರ್ಶನದಿಂದ.

141. 1905 ರಲ್ಲಿ ನಡೆದ ರಷ್ಯನ್ ಸೋಷಿಯಲ್ ಡೆಮಾಕ್ರಟಿಕ್ ಲೇಬರ್ ಪಾರ್ಟಿ (ಆರ್.ಎಸ್.ಡಿ.ಎಲ್.ಪಿ.) ಮೊದಲ ಸಮ್ಮೇಳನದಲ್ಲಿ ಅಂಗೀಕರಿಸಲಾದ 'ಆನ್ ದಿ ಸ್ಟೇಟ್ ಡ್ಯೂಮಾ' ನಿರ್ಣಯವನ್ನು ಬೆಂಬಲಿಸಿ ಬರೆದ ಲೇಖನ 'ದಿ ಸ್ಟೇಟ್ ಡ್ಯೂಮಾ ಅಂಡ್ ಸೋಷಿಯಲ್–ಡೆಮಾಕ್ರಟಿಕ್ ಟ್ಯಾಕ್ಟಿಕ್ಸ್'ನಲ್ಲಿ ಲೆನಿನ್ ಡ್ಯೂಮಾವನ್ನು ಬಹಿಷ್ಕರಿಸುವ ಕುರಿತು ವಿವರಿಸುತ್ತಾರೆ (ಲೆನಿನ್ ಕಲೆಕ್ಟೆಡ್ ವರ್ಕ್ಸ್, 1965, ಪ್ರೋಗ್ರೆಸ್ ಪಬ್ಲಿಷರ್ಸ್, ಸಂಪುಟ 10, ಪು. 101–111). ನಂತರ ಪರಿಸ್ಥಿತಿ ಬದಲಾದಾಗ ಅದೇ ಡ್ಯೂಮಾದಲ್ಲಿ ಭಾಗವಹಿಸಬೇಕೆಂದು ತೀರ್ಮಾನಿಸುತ್ತಾರೆ.

142. ಚುನಾವಣೆಗೆ ಸಂಬಂಧಿಸಿದ ಬಹುತೇಕ ಅಂಕಿ–ಸಂಖ್ಯೆಗಳನ್ನು, ಡೇವಿಡ್ ಬಟ್ಲರ್, ಅಶೋಕ್ ಮೆಹ್ತಾ, ಪ್ರಣಯ್ ರಾಯ್, 1992, ಇಂಡಿಯಾ ಡಿಸೈಡ್ಸ್; ಎಲೆಕ್ಷನ್ಸ್ 1952 ಟು 1992, ಲಿವಿಂಗ್ ಮೀಡಿಯಾ ಲಿ., ನ್ಯೂ ಡೆಲ್ಲಿ, ಈ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.

143. 1952 ರ ಮೊದಲ ಚುನಾವಣೆಯ ಸಂದರ್ಭಕ್ಕೆ ಮೈಸೂರು ರಾಜ್ಯ ರಚನೆಯಾಗಿರಲಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಗಿನ ಸ್ಪರ್ಧೆಯನ್ನು ರಾಜ್ಯದ ಭಾಗವಾಗಿಯೇ ಪರಿಗಣಿಸಲಾಗಿದೆ.

144. ಮಂಗಳೂರು ಲೋಕಸಭಾ ಕ್ಷೇತ್ರ 1957 ರಿಂದ 1991 ರವರೆಗಿನ ಚುನಾವಣೆಗಳಲ್ಲಿ ಮತಗಳಿಕೆ ವಿವರ: 1957 – 34.1 %, 1962 – 21.3 %, 1967 – 19 %, 1971 – 7.1 %, 1980 – 5.3 %, 1991 – 5.1 %.

145. ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ 1984 ರಿಂದ 1991 ರವರೆಗಿನ ಚುನಾವಣೆಗಳಲ್ಲಿ ಮತಗಳಿಕೆ ವಿವರ: 1984 – 29.6 %, 1989 – 22.2 %, 1991 – 19.2 %.

146. ಮದ್ರಾಸ್ ವಿಧಾನಸಭೆಯಲ್ಲಿ ಸಿಪಿಐ ಪಕ್ಷ ಎರಡನೇ ಸ್ಥಾನವನ್ನು ಪಡೆದು ಪ್ರಭಾವಶಾಲಿಯಾಗಿತ್ತು. 375 ಸ್ಥಾನಗಳ ವಿಧಾನಸಭೆಯಲ್ಲಿ ಐಎನ್‌ಸಿ ಪಕ್ಷವು 152 (367 ಸ್ಪರ್ಧೆ) ರಲ್ಲಿ ಗೆಲುವು ಸಾಧಿಸಿತು. 69,88,701 ಮತಗಳೊಂದಿಗೆ ಶೇ. 34.88 ಪಾಲು ಪಡೆಯಿತು. ಆದರೆ ಬಹುಮತ ಪಡೆಯಲು ವಿಫಲವಾಯಿತು. ಸಿಪಿಐ ಪಕ್ಷವು 131 ಸ್ಥಾನಗಳಲ್ಲಿ ಸ್ಪರ್ಧೆ ಮಾಡಿ 62 ಸ್ಥಾನಗಳಲ್ಲಿ ಗೆಲುವು ಪಡೆಯಿತು. ಎರಡನೇ ದೊಡ್ಡ ಪಕ್ಷವಾಯಿತು. 26,40,337 ಮತಗಳೊಂದಿಗೆ ಶೇ. 13.18 ಪಾಲು ಪಡೆಯಿತು (ಕಕ್ಕಿಲ್ಲಾಯ 2003: 187).

147. ಇದನ್ನು ಕ್ರಮವಾಗಿ ವರ್ಷ, ಒಟ್ಟು ಸ್ಥಾನಗಳು, ಸಿಪಿಐ–ಗೆಲುವು/ಸ್ಪರ್ಧೆ, ಸಿಪಿಐ(ಎಂ)–ಗೆಲುವು/ಸ್ಪರ್ಧೆ ಎಂದು ಓದಿಕೊಳ್ಳುವುದು: 1952: 99, 1/5, ––, 1957 : 208, 1/20, ––, 1962: 208, 3/31, ––, 1967: 216, 1/6, 1/10, 1972: 216, 3/4, 0/17, 1978: 224, 3/6, 0/10, 1983: 224, 3/7, 3/4, 1989: 224, 4/8, 2/7, 1991: 224, 0/18, 0/7

148. ಸಿದ್ದಾಪುರ ಕ್ಷೇತ್ರದಿಂದ ಬಿ.ಎನ್.ಕುಟ್ಟಪ್ಪ, ಹುದಿಕೇರಿ ಕ್ಷೇತ್ರದಿಂದ ಸಿ.ಬಿ.ಮೊಣ್ಣಯ್ಯ ಮತ್ತು ಪೊನ್ನಂಪೇಟೆ ಕ್ಷೇತ್ರದಿಂದ ಎಂ.ಎಂ.ಮುತ್ತಣ್ಣ ಇವರುಗಳು ಜೋಳ ಕದಿರು ಮತ್ತು ಕುಡುಗೋಲು ಚಿಹ್ನೆಯಲ್ಲಿ ಸ್ಪರ್ಧಿಸಿದ್ದರು. ಕೊಡಗು ಪತ್ರಿಕೆ 21–12–1951, ಸಂಪುಟ 30, ಸಂಚಿಕೆ 28, ಪು. 3, ರೋಲ್ ನಂ 166, ಸಂಪುಟ 1, ಕೆಎಸ್ಎ.

149. ಕರ್ನಾಟಕದ ವಿಧಾನ ಪರಿಷತ್ತಿಗೆ 1962 ರಲ್ಲಿ ಎಂ.ಸಿ.ನರಸಿಂಹನ್ ಅವರು ಸಿಪಿಐನಿಂದ ಸ್ಪರ್ಧಿಸಿ, ಕಾಂಗ್ರೆಸ್, ಪ್ರಜಾ ಸೋಷಿಯಲಿಸ್ಟ್ ಮತ್ತು ಇತರ ಕೆಲವರ 2 ಮತ್ತು 3 ನೇ ಪ್ರಾಶಸ್ತ್ಯದ ಮತಗಳನ್ನು ಪಡೆದು ಗೆದ್ದಿದ್ದರೆಂದು ಬಿ.ವಿ.ಕಕ್ಕಿಲ್ಲಾಯರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ. ಇದು ನಿಜವಾಗಿದ್ದಲ್ಲಿ, ಬಹುಶಃ ಇದನ್ನು ಹೊರತುಪಡಿಸಿ ಇದುವರೆಗೂ ಯಾವುದೇ ಕಮ್ಯುನಿಸ್ಟ್ ಪಕ್ಷ ಕರ್ನಾಟಕದಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಯಾದ ಉದಾಹರಣೆ ಇಲ್ಲ.

150. ತೀರ್ಥಹಳ್ಳಿ ಕ್ಷೇತ್ರದಲ್ಲಿ ಸಿಪಿಐ(ಎಂ) ಪ್ರಬಲ ಸ್ಪರ್ಧೆಯನ್ನು ಒಡ್ಡಿದ್ದ ಈ ಚುನಾವಣೆಯಲ್ಲಿ ಪೂರ್ಣಚಂದ್ರ ತೇಜಸ್ವಿ ಮತ್ತು ಪ್ರೊ. ನಂಜುಂಡಸ್ವಾಮಿ ಮತ್ತು ಕಡಿದಾಳ್ ಶಾಮಣ್ಣನವರೂ ಸೇರಿ ಕಮ್ಯುನಿಸ್ಟ್ ಅಭ್ಯರ್ಥಿ ಅಪ್ಪಣ್ಣ ಹೆಗಡೆ ವಿರುದ್ಧ ಸಮಾಜವಾದಿ ಪಾರ್ಟಿ ಅಭ್ಯರ್ಥಿ ಕೋಣಂದೂರು ಲಿಂಗಪ್ಪ ಅವರಿಗೆ ಬೆಂಬಲ ನೀಡಿ ಬಹಿರಂಗ ಭಾಷಣಗಳನ್ನು ಮಾಡಿದ್ದರು. ಕಮ್ಯುನಿಸ್ಟ್ ಅಭ್ಯರ್ಥಿ ಗೆದ್ದು ಬಿಡಬಹುದೆಂಬ ಆತಂಕ ಮತ್ತು ಕೇರಳದಲ್ಲಿ ಬಂದಿರುವ ಕಮ್ಯುನಿಸಂ ನಮ್ಮ ರಾಜ್ಯದಲ್ಲೂ ಹರಡುವ ಆತಂಕ ಹೊಂದಿದ್ದರೆಂದು ರಾಜೇಶ್ವರಿ ತೇಜಸ್ವಿಯವರು 'ನನ್ನ ತೇಜಸ್ವಿ'ಯಲ್ಲಿ ಹೇಳಿದ್ದಾರೆ (ರಾಜೇಶ್ವರಿ ತೇಜಸ್ವಿ 2011: 223–224).

151. ಕೆಜಿಎಫ್‌ನಲ್ಲಿ ಷೆಡ್ಯುಲ್ಡ್ ಕಾಸ್ಟ್ ಫೆಡರೇಷನ್ ಜೊತೆ ಸ್ವಾತಂತ್ರ್ಯಪೂರ್ವ ಹೊಂದಾಣಿಕೆ ಮಾಡಿಕೊಂಡದ್ದರ ಪರಿಣಾಮವಾಗಿ 1952 ರಲ್ಲಿ ಜನರಲ್ ಕ್ಷೇತ್ರದಲ್ಲಿ ಸಿಪಿಐನಿಂದ ಕೆ.ಎಸ್.ವಾಸನ್ ಗೆದ್ದರೆಂದು, 1957 ರಲ್ಲೂ ಇದೇ ರೀತಿ ಹೊಂದಾಣಿಕೆಯಿತ್ತೆಂದು ಎನ್.ಎಲ್.ಉಪಾಧ್ಯಾಯರು ಹೇಳಿದ್ದಾರೆ. (ಆದರೆ ಚುನಾವಣಾ ಆಯೋಗದ ದಾಖಲೆಗಳು 1952 ಚುನಾವಣೆಗೆ ಸಂಬಂಧಿಸಿ ಇದನ್ನು ಸಮರ್ಥಿಸುವುದಿಲ್ಲ.) – ಜಾನಕಿ

ನಾಯರ್ ಅವರು ಎನ್.ಎಲ್.ಉಪಾಧ್ಯಾಯ ಅವರೊಂದಿಗೆ 17-7-1987 ರಂದು ನಡೆಸಿದ ಸಂದರ್ಶನ, ಪು. 14.

152. ಪ್ರೊ.ಬಾಬು ಮ್ಯಾಥ್ಯೂ ಅವರೊಂದಿಗೆ ಡಾ.ಜಾನಕಿ ನಾಯರ್ ಅವರು ನಡೆಸಿದ ಸಂದರ್ಶನ, ಪು. 26.

153. ಆಧುನಿಕ-ಪೂರ್ವ ಕೃಷಿ ಸಂಬಂಧಗಳನ್ನು ಅಥವ ಊಳಿಗಮಾನ್ಯ ಭೂಸಂಬಂಧಗಳನ್ನು ನಾಶಪಡಿಸುವುದು ಮತ್ತು ಸಮಗ್ರವಾದ ಭೂಸುಧಾರಣೆಗಳನ್ನು ತರುವುದು. ಗ್ರಾಮೀಣ ಉತ್ಪಾದನಾ ಸಾಧನಗಳ ಒಡೆತನವನ್ನು ಜಾತಿ ದಮನಿತರು ಮತ್ತು ಅಸ್ಪೃಶ್ಯರ ಕೈಗೆ ನೀಡುವುದು. ಇದಕ್ಕಾಗಿ ಇಡೀ ಶ್ರಮಜೀವಿ ಶಕ್ತಿಗಳ ನಡುವಿನ ಐಕ್ಯತೆಯನ್ನು ಸಾಧಿಸುವುದು. ಇವರ ನಡುವೆ ಬಲಿಷ್ಟವಾದ ಜಾತಿ-ವಿರೋಧಿ ಪ್ರಜ್ಞೆಯನ್ನು ಮೂಡಿಸುವುದು - ಇವೆಲ್ಲವನ್ನೂ ಒಳಗೊಂಡು ಕಾರ್ಷಿಕ ಕ್ರಾಂತಿ ಎಂಬ ಪರಿಕಲ್ಪನೆ.

154. ಆರ್.ಬಿ.ಮೋರೆ ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದರು. ಸಿಪಿಐನ ಜಾತಿ ವಿರೋಧಿ ಹೋರಾಟಗಳನ್ನು ಅವರ ಅನುಭವದ ಹಿನ್ನೆಲೆಯಲ್ಲಿ ಗಮನಿಸಬಹುದು. ಎಐಕೆಎಸ್‌ನ ಉದ್ಘಾಟನಾ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೋರೆಯವರು, 1938 ರಲ್ಲಿ ಶಾಮರಾವ್ ಪರುಳೇಕರ್ ಅವರು 'ಕೋಟಿ' ಪದ್ಧತಿಯ ವಿರುದ್ಧ ಅಂಬೇಡ್ಕರ್ ಅವರ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ಐಎಲ್‌ಪಿ) ನೇತೃತ್ವದಲ್ಲಿ ನಡೆಸಿದ ರೈತರ ಬೃಹತ್ ಸಭೆಯಲ್ಲಿ, ಕಮ್ಯುನಿಸ್ಟ್ ಪಕ್ಷದ ಮುಖಂಡರು ಭಾಗವಹಿಸುವಂತೆ ಮಾಡಿದರು. (ಶಾಮರಾವ್ ಮತ್ತು ಗೋದಾವರಿ ಪರುಳೇಕರ್ ದಂಪತಿಗಳು ಕಮ್ಯುನಿಸ್ಟ್ ಪಕ್ಷವನ್ನು ಸೇರಿದ್ದು 1939 ರಲ್ಲಿ). ಬಾಂಬೆ ಸರ್ಕಾರ ಕಾರ್ಮಿಕ ವಿರೋಧಿ ಶಾಸನವನ್ನು ಜಾರಿಗೆ ತಂದಾಗ ಅದರ ವಿರುದ್ಧ ಮೊದಲ ಬಾರಿಗೆ ಸಿಪಿಐ ಮತ್ತು ಐಎಲ್‌ಪಿ ಜಂಟಿಯಾಗಿ 1938 ನವೆಂಬರ್ 7 ರಂದು ಮುಷ್ಕರದ ಸಂಘಟನೆಯ ಹಿಂದೆ ಮೋರೆಯವರ ಪ್ರಯತ್ನವಿತ್ತು. ಸ್ವಲ್ಪ ಕಾಲ ಜಿ.ಐ.ಪಿ. ರೈಲ್ವೆ ಕಾರ್ಮಿಕರ ಸಂಘದ (ಈಗ ಅದನ್ನು ಎನ್‌ಆರ್‌ಎಂಯು ಎಂದು ಕರೆಯಲಾಗುತ್ತಿದೆ) ನಾಯಕರಾಗಿದ್ದ ಮೋರೆಯವರು, ಅಲ್ಲಿನ ಸಫಾಯಿ ಕರ್ಮಚಾರಿಗಳು ಮತ್ತು ಡಿ ದರ್ಜೆ ಕಾರ್ಮಿಕರಿಗಾಗಿ ಸಂಘವನ್ನು ಕಟ್ಟಿದರು. ಈ ಕಾರ್ಮಿಕರ ಸಮ್ಮೇಳನದ ಸಲುವಾಗಿ ಬಿಜಾಪುರಕ್ಕೆ ಬಂದು ಹೋಗಿದ್ದರು. ಅಲ್ಲಿ ಜಾತಿ ತಾರತಮ್ಯದ ವಿರುದ್ಧ ಹೋರಾಡಲು ನಿರ್ಣಯಗಳನ್ನು ಮಂಡಿಸುತ್ತಿದ್ದರು. ಭಾರತದ ಸಂವಿಧಾನದಲ್ಲಿ ದಲಿತರಿಗೆ ಉದ್ಯೋಗ ಮೀಸಲಾತಿ ಜಾರಿಗೆ ಬಂದ ಐದು ವರ್ಷಗಳ ಹಿಂದೆಯೇ ಮೋರೆಯವರು ಇದನ್ನು 1945 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಓ) ಸಭೆಯಲ್ಲಿ ಪ್ರಸ್ತಾಪಿಸಿದ್ದರು. ಭಾರತ ಕೈಗಾರಿಕೆಗಳಲ್ಲಿ, ಮುಖ್ಯವಾಗಿ ಜವಳಿ ಕೈಗಾರಿಕೆಗಳಲ್ಲಿ, ದಲಿತ ಕಾರ್ಮಿಕರಿಗೆ ಅಗುತ್ತಿರುವ ಜಾತಿ ತಾರತಮ್ಯಗಳು ಮತ್ತು ಕೀಳಾಗಿ ಕಾಣುತ್ತಿರುವ ಬಗ್ಗೆ ಮೊದಲ ಬಾರಿಗೆ ಐಎಲ್‌ಓ ಸಭೆಯಲ್ಲಿ ಧ್ವನಿಯೆತ್ತಿದ್ದರು. ಈ ಕಾರಣಕ್ಕಾಗಿ ಮೋರೆಯವರನ್ನು ಸಿಪಿಐ ಮತ್ತು ಅಂಬೇಡ್ಕರ್ ಅವರ ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ ಬಾಂಬೆಯಲ್ಲಿ ಸನ್ಮಾನ ಮಾಡಿದ್ದವು. ಸ್ವತಃ ದಲಿತರಾಗಿದ್ದ ಮೋರೆಯವರು ಅಪ್ರತಿಮ ಕಮ್ಯುನಿಸ್ಟ್ ಆಗಿದ್ದರು. ಅವರ ಕುಟುಂಬದ ಎಲ್ಲರೂ ಕಮ್ಯುನಿಸ್ಟ್ ಪಕ್ಷದ ಸದ್ಯರಾಗಿದ್ದರು ಎಂಬ ಕಾರಣಕ್ಕೆ 1943 ರಲ್ಲಿ ಬಾಂಬೆಯಲ್ಲಿ ನಡೆದ ಸಿಪಿಐನ ಮೊದಲ ಸಮ್ಮೇಳನದಲ್ಲಿ 'ಕಮ್ಯುನಿಸ್ಟ್ ಕುಟುಂಬ' ಎಂದು ಇವರನ್ನು ಸನ್ಮಾನಿಸಲಾಗಿತ್ತು.

155. ನಾಸಿಕ್ ದೇವಸ್ಥಾನ ಪ್ರವೇಶದ ಮುಖ್ಯ ಸಂಘಟಕರಾಗಿದ್ದ ಕೆ.ಎಂ.ಸಾಳ್ವಿ, ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್‌ನ

ಮುಂಬೈ ಕಾರ್ಯದರ್ಶಿ ಎಸ್.ಬಿ.ಜಾಧವ್, ಸಮತಾ ಸೈನಿಕ ದಳದ ಸಾಸಲೇಕರ್ ಮುಂತಾದವರು ತಮ್ಮ ಕೊನೆಯವರೆಗೂ ಕಮ್ಯುನಿಸ್ಟ್ ಪಕ್ಷದ ಜೊತೆ ಉಳಿದರು. ಕೆ.ಎಂ.ಸಾಳ್ವಿ ಮತ್ತು ಆರ್.ಬಿ.ಮೋರೆ ಇವರ ಪ್ರಯತ್ನಗಳಿಂದಾಗಿ ದೊಡ್ಡ ಸಂಖ್ಯೆಯ ಸಾಹಿತ್ಯ ಮತ್ತು ಕಲೆ ಕ್ಷೇತ್ರದ ದಿಗ್ಗಜರು ಸಿಪಿಐ ಸೇರಿದರು. ಇದಕ್ಕೆ ಭಿನ್ನವಾಗಿ ಅಂಬೇಡ್ಕರ್ ಅವರ ಅನುಯಾಯಿಗಳೆಂದು ಕರೆಸಿಕೊಂಡ ಸಾಕಷ್ಟು ಜನ, ಅವರ ಸಾವಿನ ನಂತರ ಆರ್‌ಪಿಐಯನ್ನು ತೊರೆದು ಕಾಂಗ್ರೆಸ್ ಸೇರಿದರು:– ಜಾತಿ ವಿನಾಶದ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ ಮತ್ತು ನಿಲುವುಗಳ ಕಾಲಾನುಕ್ರಮಣಿಕೆ, http://www.anticaste.in/tag/anti-caste-struggles/feed/

156. ಕೇರಳ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಅಂಗೀಕರಿಸಿದ ದಸ್ತಾವೇಜು, 'ಕ್ಯಾಸ್ಟಿಸ್ಟ್ ಆರ್ಗನೈಸೇಷನ್ಸ್ ಅಂಡ್ ದಿ ಪಾರ್ಟಿ' ಎಂಬ ಲೇಖನವಾಗಿ ಮಾರ್ಕ್ಸಿಸ್ಟ್, ಅಕ್ಟೋಬರ್–ಡಿಸೆಂಬರ್ 2003 ರಲ್ಲಿ ಪ್ರಕಟವಾಯಿತು.

157. ಆಧುನಿಕ–ಪೂರ್ವ ಭೂಸಂಬಂಧಗಳನ್ನು ನಾಶ ಮಾಡುವುದು, ಜಾತಿ ವಿನಾಶವೂ ಒಳಗೊಂಡಂತೆ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸುವುದಕ್ಕೆ ಪೂರ್ವ–ಷರತ್ತು ಎಂದು ಅಂದಾಜು ಮಾಡಿದ ಕಮ್ಯುನಿಸ್ಟ್ ಪಕ್ಷವು 1970 ರ ದಶಕದವರೆಗೂ ಕೆಲವು ರಾಜ್ಯಗಳ ಕೆಲವು ಪ್ರದೇಶಗಳಲ್ಲಿ ಭೂ ಸಂಬಂಧಿ ಹೋರಾಟಗಳನ್ನು ನಡೆಸಿದ್ದನ್ನು ಗಮನಿಸಬಹುದು. ನಂತರದ ದಶಕಗಳಲ್ಲಿ ಇಡೀ ದೇಶದ ಗಮನವನ್ನು ಸೆಳೆಯಬಹುದಾದ ನಿರ್ಣಾಯಕ ಹೋರಾಟಗಳನ್ನಾಗಲೀ ಅಥವಾ ದೇಶವ್ಯಾಪಿಯಾದ ಹೋರಾಟಗಳನ್ನಾಗಲೀ ನಡೆಸಲಿಲ್ಲ.

158. ರುಕ್ಮಿಣಿ ಎಸ್, ಡೈವರ್ಸಿಟಿ ಡೆಫಿಸಿಟ್ ಅಕ್ರಾಸ್ ಅಪೆಕ್ಸ್ ಬಾಡೀಸ್ ಆಫ್ ಪಾರ್ಟೀಸ್, ದಿ ಹಿಂದೂ, ಏಪ್ರಿಲ್ 27, 2015, ನವದೆಹಲಿ.

159. ಕಡಿದಾಳ್ ದಯಾನಂದ ಅವರೊಂದಿಗೆ ಸಂದರ್ಶನ.

160. ಟಿ.ಪಿ.ರಮೇಶ್ ಅವರೊಂದಿಗೆ ಸಂದರ್ಶನ.

161. ಜಿ.ಸಿ.ಬಯ್ಯಾರೆಡ್ಡಿ ಅವರೊಂದಿಗೆ ಸಂದರ್ಶನ.

162. ಕೆಲವು ಕಮ್ಯುನಿಸ್ಟ್ ಗುಂಪುಗಳು ಭಾರತದಲ್ಲಿ ಊಳಿಗಮಾನ್ಯ ಭೂ ಮತ್ತು ಸಾಮಾಜಿಕ ಸಂಬಂಧಗಳನ್ನು ಪರಿಗಣಿಸುವುದಿಲ್ಲ. ಹಾಗಾಗಿ ಪ್ರಜಾಪ್ರಭುತ್ವ ಕ್ರಾಂತಿಯ ಘಟ್ಟವನ್ನು ಅವು ಉಪೇಕ್ಷಿಸುತ್ತವೆ ಮತ್ತು ನೇರವಾಗಿ ಸಮಾಜವಾದಿ ಕ್ರಾಂತಿಯನ್ನು ಮಾಡುವ ಕುರಿತು ಹೇಳುತ್ತವೆ. ಮಾವೋವಾದಿ ಗುಂಪುಗಳು ಕಾರ್ಮಿಕ ವರ್ಗದ ಈ ಪಾತ್ರದ ಬಗ್ಗೆ ಬೇರೆಯದೇ ನಿಲುವನ್ನು ಹೊಂದಿವೆ.

163. 37/39, ಕಾಶಿ ವಿಶ್ವೇಶ್ವರ ಗುಡಿ ಬೀದಿ, ಸುಲ್ತಾನ್‌ಪೇಟೆ, ಬೆಂಗಳೂರಿನ ಈ ವಿಳಾಸದಿಂದ ಇದು ಪ್ರಕಟವಾಯಿತು.

164. 10–3–1981 ರ ಸಂಚಿಕೆಯಲ್ಲಿ 'ಪ್ರಕಟಣೆಯ 31 ನೇ ವರ್ಷ' ಎಂದು ನಮೂದಾಗಿದೆ. ಇದು ಸಂಪುಟ 24, ಸಂಚಿಕೆ 91, 4 ಪುಟಗಳು, ಬೆಲೆ 15 ಪೈಸೆ.

165. ಲಕ್ಷ್ಮಯ್ಯ ಎಸ್. ಅವರೊಂದಿಗೆ ಸಂದರ್ಶನ.

❖ ❖ ❖

ಅಧ್ಯಾಯ 5

ಸಮಾರೋಪ

‘ತತ್ವಜ್ಞಾನಿಗಳು ಜಗತ್ತನ್ನು ಹಲವು ರೀತಿಯಲ್ಲಿ ಕೇವಲ ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಶ್ನೆಯಿರುವುದು ಅದನ್ನು ಬದಲಾವಣೆ ಮಾಡುವ ಬಗ್ಗೆ’ ಎಂಬ ಪ್ರಶ್ನೆಗೆ ಉತ್ತರಿಸಿಕೊಳ್ಳುತ್ತಾ ಮಾರ್ಕ್ಸ್ ವಿಜ್ಞಾನ, ಚರಿತ್ರೆ, ರಾಜಕೀಯ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ನ್ಯಾಯಶಾಸ್ತ್ರ ಹೀಗೆ ಎಲ್ಲವುಗಳನ್ನು ಸಮೀಕರಿಸಿದ ಬದಲಾವಣೆಯ ದಾರಿಯನ್ನು ಜಗತ್ತಿನ ಮುಂದಿಟ್ಟರು. ಹದಿನೇಳರಿಂದ ಹತ್ತೊಂಬತ್ತನೇ ಶತಮಾನಗಳ ಅವಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ವೇಗವಾದ ಬೆಳವಣಿಗೆಯ ಫಲವಾಗಿ ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿ, ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳು ಹುಟ್ಟಿಕೊಂಡವು. ಇದರೊಂದಿಗೆ ಜ್ಞಾನೋದಯ ಪರಂಪರೆಯೂ ಸೇರಿಕೊಂಡು ಸಮಾನತೆ, ಸ್ವಾತಂತ್ರ್ಯ, ಶೋಷಣಾ ರಹಿತ ಸಮಾಜ ಮುಂತಾದ ಹೊಸ ಚಿಂತನೆಗಳು ಹುಟ್ಟಿಕೊಂಡವು. ನೂತನ ಚಿಂತನೆಗಳ ಸರಮಾಲೆಯನ್ನು ಪೋಣಿಸಿದ ಮಾರ್ಕ್ಸ್, ತಮ್ಮ ಆಳವಾದ ಅಧ್ಯಯನ ಮತ್ತು ಪ್ರಾಯೋಗಿಕ ಅನುಭವಗಳ ಮೂಲಕ ಆಧಾರದಲ್ಲಿ ಮಾನವ ಸಮಾಜದ ಬದಲಾವಣೆ ಮತ್ತು ಬೆಳವಣಿಗೆಯ ಹಾದಿಯನ್ನು ನಿರೂಪಿಸಿದರು. ಮಾನವ ಸಮಾಜದ ಸ್ವರೂಪ, ಅದರ ವಿಕಾಸ ಮತ್ತು ಬೆಳವಣಿಗೆ, ಪ್ರಕೃತಿಯೊಂದಿಗೆ ಅದರ ಸಂಬಂಧಗಳನ್ನು ವಿವರಿಸುತ್ತಾ, ಸಮಾಜದಲ್ಲಿರುವ ಅಸಮಾನತೆ, ಶೋಷಣೆಗೆ ಕಾರಣವನ್ನು ಮತ್ತು ಅದನ್ನು ಬದಲಾಯಿಸಬೇಕಾದ ಅವಶ್ಯಕತೆಯನ್ನು ಕಮ್ಯುನಿಸ್ಟ್ ಮ್ಯಾನಿಫೆಸ್ಟೋದಲ್ಲಿ ಪ್ರತಿಪಾದಿಸಿದರು.

ಮಾರ್ಕ್ಸ್ ಮತ್ತು ಏಂಗೆಲ್ಸ್‌ರವರು ಪ್ರತಿಪಾದಿಸಿದ ಚಿಂತನೆಗಳು ಮುಂದೆ ಮಾರ್ಕ್ಸ್‌ವಾದವಾಗಿ ಚಾಲ್ತಿಗೆ ಬಂದವು. ಈ ಚಿಂತನೆಗಳುಪ್ರಾಯೋಗಿಕವಾಗಿ 1871 ರಲ್ಲಿ ಸಂಭವಿಸಿದ ‘ಪ್ಯಾರಿಸ್ ಕಮ್ಯೂನ್’ನಲ್ಲಿ ಪ್ರಭಾವ ಬೀರಿದವು. ಆದರೆ ತೀವ್ರವಾದ ಆಂತರಿಕ ವೈರುಧ್ಯಗಳನ್ನು ಹೊಂದಿದ್ದ ಅದು 62 ದಿನಗಳ ನಂತರ ವಿಫಲವಾಯಿತು. ಇದರ ಅನುಭವವನ್ನೂ ಹಿಂದಿಟ್ಟುಕೊಂಡು 1917 ರಲ್ಲಿ ರಷ್ಯಾದಲ್ಲಿ ಕ್ರಾಂತಿ ಸಂಭವಿಸಿತು. ಇದರ ನಂತರ ಮಾರ್ಕ್ಸ್‌ವಾದಿ ಚಿಂತನೆಗಳು ಜಗತ್ತಿನಾದ್ಯಂತ ಹರಡಲು ಆರಂಭವಾದವು. ಹಾಗೆ ನೋಡಿದರೆ, ಮಾನವ ಸಮಾನತೆಯನ್ನು ಬಯಸುವ ಚಿಂತನೆಗಳು ಭಾರತದಲ್ಲಿ ಬುದ್ಧನಿಂದಲೇ ಆರಂಭವಾಗಿವೆ. ಕರ್ನಾಟಕದಲ್ಲಿ ವಚನ ಚಳುವಳಿಯಿಂದ ಆರಂಭಗೊಂಡು, ಭಕ್ತಿ ಚಳುವಳಿ ಮುಂತಾದವುಗಳಲ್ಲಿ ಇದು ಪ್ರತಿಫಲಿತವಾಗಿವೆ. ಇದರ ಮುಂದುವರಿಕೆಯಾಗಿ ಮಾರ್ಕ್ಸ್‌ವಾದವು, ಈ ಆಶಯಗಳ ಆರ್ಥಿಕ ತಳಹದಿಯನ್ನು ಮತ್ತು ಅದನ್ನು ಈಡೇರಿಸಿಕೊಳ್ಳಲು ಬೇಕಾದ ಪರ್ಯಾಯ ರಾಜಕೀಯ-ಸಂಘಟನಾ ಚೌಕಟ್ಟನ್ನು ಮುಂದಿಟ್ಟಿತು. ಭಾರತದಲ್ಲಿ ಮಾರ್ಕ್ಸ್‌ವಾದಿ ನೆಲೆಗಟ್ಟಿನ ಸಮಾಜವಾದಿ ಚಿಂತನೆಗಳು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಿಂದಲೇ ಆರಂಭಗೊಂಡಿವೆ. ಕರ್ನಾಟಕದಲ್ಲಿ ಈ ಪ್ರಭಾವ ಇಪ್ಪತ್ತನೇ ಶತಮಾನದ 2–3 ನೇ ದಶಕದಿಂದ ಶುರುವಾಗಿದೆ.

ಇಪ್ಪತ್ತನೇ ಶತಮಾನದ ಮೊದಲಾರ್ಧವು ಭಾರತೀಯ ಸಮಾಜವು ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಹೊತ್ತು ಊಳಿಗಮಾನ್ಯ ಮತ್ತು ವಸಾಹತು ವ್ಯವಸ್ಥೆಯ ವಿರುದ್ಧ ಸೆಣೆಸಾಟ ನಡೆಸಿದ ಕಾಲಾವಧಿಯಾಗಿತ್ತು. ಈ ಸಂದರ್ಭವು ಜಾಗತಿಕವಾಗಿ ರಾಷ್ಟ್ರೀಯ ವಿಮೋಚನಾ ಹೋರಾಟಗಳ ಕಾಲಾವಧಿಯೂ ಆಗಿತ್ತು. ಯೂರೋಪಿನ ಕೈಗಾರಿಕಾ ಕ್ರಾಂತಿಯ ಫಲವಾಗಿ ಬ್ರಿಟಿಷ್ ಬಂಡವಾಳದಾರರು ಭಾರತವನ್ನು ವಸಾಹತನ್ನಾಗಿ ಮಾಡಿಕೊಂಡರು ಮತ್ತು ಇಲ್ಲಿನ ನೈಸರ್ಗಿಕ ಸಂಪತ್ತು ಮತ್ತು ಮಾನವ ಸಂಪತ್ತು ಎರಡನ್ನೂ ಶತಮಾನಗಳ ಕಾಲ ಲೂಟಿ ಮಾಡಿದರು. ಇದರ ವಿರುದ್ಧ ಭಾರತದಲ್ಲಿನ ವಿಮೋಚನಾ ಹೋರಾಟಕ್ಕೆ ಕ್ರಾಂತಿಕಾರಿ ಪ್ರೇರಣೆಯನ್ನು ನೀಡಿದ ಒಂದು ಸೆಲೆಯೆಂದರೆ ರಷ್ಯಾದ ಸಮಾಜವಾದಿ ಕ್ರಾಂತಿ.ರಾಷ್ಟ್ರೀಯ ವಿಮೋಚನಾ ಹೋರಾಟವು ಕೇವಲ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಮಾತ್ರವಲ್ಲದೆ, ಬ್ರಿಟಿಷರಿಗೆ ದೇಶೀಯ ಏಜೆಂಟರಾಗಿದ್ದ ಊಳಿಗಮಾನ್ಯ ಶಕ್ತಿಗಳ ವಿರುದ್ಧವೂ ನಡೆಯಬೇಕೆಂದು 1920 ರಲ್ಲಿ ಆರಂಭವಾದ ಭಾರತ ಕಮ್ಯುನಿಸ್ಟ್ ಪಕ್ಷವು ಪ್ರತಿಪಾದಿಸಿದ್ದರಿಂದ, ಸ್ವಾತಂತ್ರ್ಯ ಹೋರಾಟದ ದಿಕ್ಸೂಚಿ ನಿರ್ಣಾಯಕವಾಗಿ ಬದಲಾಯಿತು.

ಸ್ವಾತಂತ್ರ್ಯಪೂರ್ವ ಕರ್ನಾಟಕದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳು ಏಕರೂಪದ್ದಾಗಿರಲಿಲ್ಲ. ಈ ಅವಧಿಯಲ್ಲಿ ಕನ್ನಡ ಭಾಷಿಕ ಪ್ರದೇಶಗಳು ಪ್ರಧಾನವಾಗಿ ಐದು ವಿಭಿನ್ನ ಆಡಳಿತ ಪ್ರದೇಶಗಳಿಗೆ ಒಳಪಟ್ಟಿತ್ತು. ಏಕೀಕರಣ ಪೂರ್ವದ ಈ ಪ್ರದೇಶಗಳ ರಾಜಕೀಯ ಆಡಳಿತ ಮತ್ತು ಆರ್ಥಿಕ-ಸಾಮಾಜಿಕ ಸಂಸ್ಕೃತಿಗಳು ಇಲ್ಲಿನ ಸಮುದಾಯಗಳ ಮೇಲೆ ಪ್ರಭಾವ ಬೀರಿವೆ. ಈ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿದ್ದ ಭೂ ಗೇಣಿ, ಹಿಡುವಳಿ ಪ್ರಮಾಣ, ತೆರಿಗೆ ಪದ್ಧತಿಗಳು, ಕೃಷಿ ವಿಧಾನಗಳು ಮತ್ತು ಕೈಗಾರಿಕೆಗಳು, ಅದರಲ್ಲಿ ದುಡಿಯುವ ಕಾರ್ಮಿಕರಿಗೆ ಸಂಬಂಧಿಸಿದ ಕಾಯ್ದೆಗಳು, ಹೀಗೆ ಇಡಿಯಾಗಿ ಅಲ್ಲಲ್ಲಿನ ಉತ್ಪಾದನಾ ವ್ಯವಸ್ಥೆಯು ಅಲ್ಲಲ್ಲಿನ ಸಾಮಾಜಿಕ ಚರಿತ್ರೆಯನ್ನು ರೂಪಿಸಿದೆ. ಬ್ರಿಟಿಷ್ ವಸಾಹತುಶಾಹಿಯು ಪಶ್ಚಿಮದ ಆಧುನಿಕತೆಯನ್ನು ಯೂರೋಪಿಗಿಂತ ಭಿನ್ನವಾಗಿ ಭಾರತದಲ್ಲಿ ಜಾರಿಗೊಳಿಸಿದ್ದರಿಂದ, ಭಾರತದಲ್ಲಿನ ಊಳಿಗಮಾನ್ಯ ಅಥವಾ ಪಾಳೇಗಾರಿ ವಿಧಾನಗಳೊಂದಿಗೆ ರಾಜಿ ಮಾಡಿಕೊಂಡ ಆಧುನಿಕತೆಯ ಸಂಬಂಧಗಳಾಗಿ ಅದು ಜಾರಿಯಾಗಿದೆ. ಊಳಿಗಮಾನ್ಯ ಅಥವಾ ಪಾಳೇಗಾರಿ ರಾಜ ಪ್ರಭುತ್ವಗಳು ಜನತೆಯ ಮೇಲೆ ಹೊಂದಿದ್ದ ರಾಜಕೀಯ-ಆರ್ಥಿಕ-ಸಾಮಾಜಿಕ ಹಿಡಿತ ಒಂದು ಕಡೆ ಮತ್ತು ರಾಜಪ್ರಭುತ್ವಗಳ ವಿರುದ್ಧ ಹೋರಾಟವನ್ನು ನಿರಾಕರಿಸಿದ ಕಾಂಗ್ರೆಸ್ ಧೋರಣೆ ಮತ್ತೊಂದು ಕಡೆ, ಎರಡೂ ಸೇರಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರತೆಯನ್ನು ಪಡೆಯಲಿಲ್ಲ. ಆದರೆ ಸಣ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಪಕ್ಷ ಈ ಚೌಕಟ್ಟನ್ನು ಮುರಿಯಲು ಪ್ರಯತ್ನಿಸಿತು. ಬೆಂಗಳೂರು ಮತ್ತು ಕೆಜಿಎಫ್ ಕೇಂದ್ರಿತವಾಗಿ ನಡೆಸಿದ ಕಾರ್ಮಿಕ ಮತ್ತು ಇತರ ಹೋರಾಟಗಳು, ಒಟ್ಟೊಟ್ಟಿಗೇ ವರ್ಗ ಹೋರಾಟ ಮತ್ತು ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಪಡೆದಿತ್ತು. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ತೀವ್ರತೆ ಪಡೆಯದಿರುವುದಕ್ಕೂ ರಾಜಪ್ರಭುತ್ವ ಮತ್ತು ಕಾಂಗ್ರೆಸ್‌ನ ಧೋರಣೆಗಳಿಗೂ ಸಂಬಂಧವಿದೆ. ನಿಜಾಂಶಾಹಿ ಆಡಳಿತದ ದಮನಕಾರಿ ನೀತಿಗಳು ಮತ್ತು ಅದಕ್ಕೆ ಬೆಂಬಲವಾಗಿದ್ದ ಪಾಳೇಗಾರಿ ಶಕ್ತಿಗಳು ಕರ್ನಾಟಕದ ಬೇರಾವುದೇ

ಪ್ರದೇಶಗಳಿಗಿಂತ ಬಲಿಷ್ಟವಾಗಿದ್ದುದರಿಂದ, ಸ್ವಾತಂತ್ರ್ಯ ಹೋರಾಟ ಪ್ರಭಾವಶಾಲಿಯಾಗಿ ಬೆಳೆಯಲಿಲ್ಲ. ಸ್ವಾತಂತ್ರ್ಯ ಹೋರಾಟದ ಒಂದು ಕೇಂದ್ರ ಬಿಂದುವಾಗಿ ಬಾಂಬೆ ಇದ್ದುದರಿಂದ ಬಾಂಬೆ ಕರ್ನಾಟಕ ಭಾಗದಲ್ಲಿ ಅದರ ಪ್ರಭಾವ ತೀವ್ರವಾಗಿ ಬೀರಿದೆ. ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ, ರೈತ ಹೋರಾಟಗಳು ಮತ್ತು ಕರ್ನಾಟಕ ಏಕೀಕರಣ ಹೋರಾಟಗಳು ಪ್ರಬಲವಾಗಿ ನಡೆದ ಪ್ರದೇಶವಿದು. ಅದೇ ರೀತಿಯಲ್ಲಿ ಮದ್ರಾಸ್‌ನ ಭಾಗವಾಗಿ ದಕ್ಷಿಣ ಕನ್ನಡದಲ್ಲಿ ವ್ಯಾಪಕವಾದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಮಲಬಾರಿನ ಕಮ್ಯುನಿಸ್ಟ್ ಚಳುವಳಿಗಳೂ ಮೇಳೈಸಿಕೊಂಡು ಪರಿಣಾಮವನ್ನು ಬೀರಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನೇರವಾದ ಹೋರಾಟ ಒಂದು ನೆಲೆಯದ್ದಾದರೆ, ಬ್ರಿಟಿಷ್ ಅಧೀನದ ರಾಜ ಸಂಸ್ಥಾನಗಳಲ್ಲಿ ಇನ್ನೊಂದು ನೆಲೆಯದು, ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ವಿರುದ್ಧದ ಹೋರಾಟ ಮತ್ತೊಂದು ಬಗೆಯದು. ಹೀಗಾಗಿ ಸ್ವಾತಂತ್ರ್ಯ ಪೂರ್ವ ಕರ್ನಾಟಕದ ಹೋರಾಟಗಳು ಬಹುಮುಖೀ ನೆಲೆಗಟ್ಟನ್ನು ಹೊಂದಿವೆ. ಇವುಗಳಿಗೆ ಸ್ಥಳೀಯ ಸ್ವರೂಪ ಇದ್ದಾಗಲೂ, ಪ್ರಧಾನವಾಗಿ ಅವು ಅಖಿಲ ಭಾರತ ವಿದ್ಯಮಾನಗಳ ಭಾಗವಾಗಿಯೂ ನಡೆದಿರುವುದನ್ನು ಕಾಣಬಹುದು.

ಊಳಿಗಮಾನ್ಯ ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ತಳಹದಿಯ ಜವಾಬ್ದಾರಿ ಸರ್ಕಾರ ಬರುವುದಕ್ಕೂ ಮತ್ತು ಕಾರ್ಮಿಕರ ಬೇಡಿಕೆಗಳು ಈಡೇರುವುದಕ್ಕೂ ನೇರವಾದ ಸಂಬಂಧವಿದೆ ಎಂಬುದನ್ನು ಕಮ್ಯುನಿಸ್ಟರು ತಮ್ಮ ಹೋರಾಟಗಳಲ್ಲಿ ಪ್ರಚಾರ ಮಾಡಿದ್ದರು. ವೇತನ, ಬೋನಸ್, ಕೆಲಸದ ಸಮಯ, ಕಿರುಕುಳ ಮುಂತಾದ ಕಾರ್ಮಿಕರ ಸಮಸ್ಯೆಗಳಿಗೆ ಅವರ ಶೋಷಣೆಗೆ ಸ್ಥಾಪಿತ ಹಿತಾಸಕ್ತಿಗಳ, ವ್ಯಾಪಾರಿ ವರ್ಗಗಳ, ಬಂಡವಾಳಶಾಹಿ ವ್ಯವಸ್ಥೆಯ ಶೋಷಣಾ ಸ್ವರೂಪವೇ ಕಾರಣವಾಗಿರುವುದರಿಂದ ಅದನ್ನು ಕಿತ್ತು ಹಾಕಬೇಕು. ಆದರೆ ಅದಕ್ಕೂ ಮುಂಚೆ ವಸಾಹತು ಆಳ್ವಿಕೆಯನ್ನು ಕಿತ್ತೊಗೆಯಬೇಕು ಎಂಬುದಾಗಿ, ಕಾರ್ಮಿಕ ಹೋರಾಟಗಳನ್ನು ಮತ್ತು ರಾಷ್ಟ್ರೀಯ ಹೋರಾಟಗಳನ್ನು ಸಮೀಕರಿಸುವ ಕಣ್ಣೋಟದೊಂದಿಗೆ ಕಮ್ಯುನಿಸ್ಟರು ಕೆಲಸ ಮಾಡಿರುವುದನ್ನು ಇಲ್ಲಿ ಕಾಣಬಹುದು. ಅದೇ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ರೈತ ಹೋರಾಟಗಳು ಸಮ್ಮಿಳಿತವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು. ಗ್ರಾಮೀಣ ಭಾರತದಲ್ಲಿ ಬ್ರಿಟಿಷರ ಏಜೆಂಟರಾಗಿದ್ದ ಸ್ಥಳೀಯ ಜಮೀನ್ದಾರಿ ಶಕ್ತಿಗಳಿಗೂ ಮತ್ತು ರೈತರು-ಕೃಷಿ ಕಾರ್ಮಿಕರಿಗೂ ವೈರುಧ್ಯಗಳು ಇದ್ದವು. ಹೀಗಾಗಿ ಕಮ್ಯುನಿಸ್ಟರು ಪಾತ್ರ ವಹಿಸಿದ ರೈತ ಹೋರಾಟಗಳು ಕೇವಲ ವಸಾಹತು ವಿರೋಧಿ ಹೋರಾಟವಾಗಿರದೇ ಸ್ಥಳೀಯ ಜಮೀನ್ದಾರಿ ವರ್ಗಗಳ ವಿರೋಧವಾದ ಹೋರಾಟವೂ ಆಗಿತ್ತು. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸದಂತೆ ತಡೆಯುವುದು, ಉಳುವವನಿಗೆ ಭೂಮಿ ಕೊಡಿಸುವುದು, ಗೇಣಿ ಪದ್ಧತಿಯನ್ನು ರದ್ದುಗೊಳಿಸುವುದು ಅಥವಾ ಕಡಿತಗೊಳಿಸುವುದು, ಹೆಚ್ಚುವರಿ ಭೂಮಿ ಹಂಚಿಕೆ ಮಾಡುವುದು, ರೈತರನ್ನು ಋಣಮುಕ್ತರನ್ನಾಗಿ ಮಾಡುವುದು, ಜಮೀನ್ದಾರರ ದಬ್ಬಾಳಿಕೆಗಳನ್ನು ಎದುರಿಸುವುದು, ಮುಂತಾದ ಹೋರಾಟಗಳನ್ನು, ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಜೋಡಿಸುವ ಕೆಲಸವನ್ನು ಎಐಕೆಎಸ್ ಮಾಡಿತು.ಹೀಗಾಗಿ ಕಮ್ಯುನಿಸ್ಟರು ಸಂಘಟಿಸಿದ ವಸಾಹತು ವಿರೋಧಿ ರಾಷ್ಟ್ರೀಯ ಹೋರಾಟವು ಒಮ್ಮೆಗೇ ಪಾಳೇಗಾರಿ ವಿರೋಧಿ ಹೋರಾಟವೂ ಆಗಿತ್ತು.

ಕಮ್ಯುನಿಸ್ಟರು ಸವೆಸಿದ ಸ್ವಾತಂತ್ರ್ಯಪೂರ್ವದ ಈ ಹಾದಿ ಸುಲಭದ್ದಾಗಿರಲಿಲ್ಲ. ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿದವರ ಪೈಕಿ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು. ನೂರಾರು ಜನ ಕಮ್ಯುನಿಸ್ಟರು ಅಂಡಮಾನ್ ಮುಂತಾದ ಜೈಲುಗಳಲ್ಲಿ ಮತ್ತು ಹೊರಗೆ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನರ್ಪಿಸಿದರು. ದೀರ್ಘಾವಧಿ ಜೈಲುವಾಸಗಳನ್ನು, ಭೂಗತ ಜೀವನಗಳನ್ನು ಅನುಭವಿಸಿದರು. ಐಎನ್‌ಸಿಗಿಂತಲೂ ಮೊದಲು ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಎತ್ತಿದರು. ಬ್ರಿಟಿಷರು ಕಮ್ಯುನಿಸ್ಟರನ್ನು ಸದೆ ಬಡಿಯಲು ಹಲವಾರು ಪಿತೂರಿ ಮೊಕದ್ದಮೆಗಳನ್ನು ಹೂಡಿದರು. ಕಮ್ಯುನಿಸ್ಟ್ ಪಕ್ಷವು ಬೇರಾವುದೇ ಪಕ್ಷಗಳಿಗಿಂತ ಅತ್ಯಂತ ದೀರ್ಘಕಾಲ ನಿಷೇಧಕ್ಕೊಳಗಾಗಿದ್ದ ಪಕ್ಷವಾಗಿತ್ತು. 'ನಿರ್ದಿಷ್ಟ ಪರಿಸ್ಥಿತಿಯ ನಿರ್ದಿಷ್ಟ ವಿಶ್ಲೇಷಣೆ'ಯ ಆಧಾರದಲ್ಲಿ ಸಿಪಿಐ ಭಾರತದ ಕ್ರಾಂತಿಯ ದಾರಿಯನ್ನು (ಕಾರ್ಯಕ್ರಮ) ತೀರ್ಮಾನಿಸಲು ಪ್ರಯತ್ನಿಸಿತಾದರೂ, ಆಗಿರಲಿಲ್ಲ. ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಾಧಾನ್ಯತೆಯನ್ನು ಹೊಂದಿದ್ದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಮಾರ್ಗದರ್ಶನವು ಸಿಪಿಐನ ದಾರಿಯನ್ನು ಬಹುತೇಕ ರೂಪಿಸಿತು. ಹೀಗಾಗಿ 1930 ರ ದಶಕದಲ್ಲಿ ಐಎನ್‌ಸಿ ಭಾಗವಾಗಿ, ಕಾಂಗ್ರೆಸ್ ಸಮಾಜವಾದಿ ಪಕ್ಷದಲ್ಲಿದ್ದು ಹೋರಾಟಗಳನ್ನು ನಡೆಸುವ ತಂತ್ರಗಳನ್ನು ಅನುಸರಿಸಿತು. ಅದೇ ರೀತಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಿಪಿಐ ಅನುಸರಿಸಿದ ದಾರಿಯು ತಾತ್ವಿಕವಾಗಿ ಸರಿ ಇದ್ದರೂ ಅದನ್ನು ಭಾರತಕ್ಕೆ ಅನ್ವಯಿಸುವ ವಿಚಾರದಲ್ಲಿ ಎಡವಿದ್ದನ್ನು ಕಾಣಬಹುದು. ಅದರಿಂದ ಸಿಪಿಐ ಸಾಕಷ್ಟು ನಷ್ಟವನ್ನು ಅನುಭವಿಸಿದ್ದನ್ನು ಕಾಣಬಹುದು.

ಕರ್ನಾಟಕದ ವಿಭಿನ್ನ ಪ್ರಾಂತಗಳು ಮತ್ತು ಸಂಸ್ಥಾನಗಳಲ್ಲಿ ಪ್ರತ್ಯೇಕವಾಗಿ ಸ್ವತಂತ್ರವಾದ ಕಮ್ಯುನಿಸ್ಟ್ ಚಟುವಟಿಕೆಗಳು ನಡೆದವು. ಈ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಪ್ರಭಾವಗಳೂ ಸಹ ಭಿನ್ನ ಭಿನ್ನವಾಗಿದ್ದವು. ಮೈಸೂರು ಪ್ರಾಂತ್ಯದಲ್ಲಿ ಮೊದಲಿಗೆ ಜನ ಜಾಗೃತಿ ಸಂಘ ಮತ್ತು ನ್ಯಾಷನಲ್ ಯೂತ್ ಲೀಗ್‌ಗಳ ಮೂಲಕ ಕಮ್ಯುನಿಸ್ಟರು ಕ್ರಿಯಾಶೀಲವಾಗಿದ್ದರು. 1938 ರಲ್ಲಿ ಇವನ್ನು ನಿಷೇಧಿಸಿದ ನಂತರ ಕಾಂಗ್ರೆಸ್ ಸಮಾಜವಾದಿ ಪಕ್ಷದ ಭಾಗವಾಗಿದ್ದರು. 1942 ರಲ್ಲಿ ಎನ್.ಎಲ್.ಉಪಾಧ್ಯಾಯರನ್ನು ಸಿಪಿಐ ಕೇಂದ್ರ ಸಮಿತಿ ಕಳುಹಿಸಿದ ನಂತರ ಸಿಪಿಐ ಹೆಸರಿನಲ್ಲಿ ಚಟುವಟಿಕೆ ಆರಂಭಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲಬಾರಿನ ಪ್ರಭಾವದ ಕಾರಣದಿಂದ ನೇರವಾಗಿ ಸಿಪಿಐನ ಚಟುವಟಿಕೆಗಳನ್ನು ಕಾಣಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಾಂಬೆ ಪ್ರಭಾವಿತ ಪ್ರಬಲವಾದ ಸ್ವಾತಂತ್ರ್ಯ ಪೂರ್ವ ಹೋರಾಟಗಳನ್ನು ಗಮನಿಸಬಹುದು. ಸಮೂಹ ಸಂಘಟನೆಗಳ ವಿಚಾರದಲ್ಲಿ ಸ್ವಾತಂತ್ರ್ಯ ಪೂರ್ವ ಕಮ್ಯುನಿಸ್ಟರು ಮುಖ್ಯವಾಗಿ ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ರೈತರ ನಡುವೆ ಪ್ರಧಾನವಾಗಿ ಚಟುವಟಿಕೆಗಳನ್ನು ನಡೆಸಿರುವುದನ್ನು, ಅದಕ್ಕಾಗಿ, 1940 ರ ದಶಕದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಎಐಟಿಯುಸಿ, ಎಐಕೆಎಸ್ ಮತ್ತು ಎಐಎಸ್‌ಎಫ್ ಸಂಘಟನೆಗಳನ್ನು ಸ್ಥಾಪಿಸಿದ್ದನ್ನು ಗುರುತಿಸಬಹುದು. ಈ ಅವಧಿಯಲ್ಲಿ ಸಿಪಿಐನ್ನು ಮುನ್ನಡೆಸಿದ ತತ್ವವೆಂದರೆ 'ಎಲ್ಲರೂ ಒಳಗೊಂಡ ಸಂಯುಕ್ತ ರಂಗದ' (all-in-united front) ಕಾರ್ಯಾಚರಣೆ.

ಸ್ವಾತಂತ್ರ್ಯಾ ನಂತರ ಸಿಪಿಐ ಎದುರಿಸಿದ ಬಹುದೊಡ್ಡ ಸವಾಲೆಂದರೆ, ಇನ್ನೂ ತೀರ್ಮಾನ ಮಾಡಿರದಿದ್ದ ಭಾರತದ ಕ್ರಾಂತಿಯ ದಾರಿಗೆ ಸಂಬಂಧಿಸಿದ್ದು. ರಷ್ಯಾ ಮಾದರಿ ಮತ್ತು ಚೀನಾ ಮಾದರಿ ಚರ್ಚೆಗಳ ಪ್ರಭಾವ

ಅಂತಿಮವಾಗಿ ಎಡ ತೀವ್ರವಾದಿ ಸಶಸ್ತ್ರ ಕ್ರಾಂತಿಯ ದಾರಿಗೆ ಸಿಪಿಐನ್ನು ನೂಕಿತು. ಇದರಿಂದಾಗಿ ಅತ್ಯಂತ ಪ್ರಭಾವಶಾಲಿಯಾಗಿದ್ದ ತೆಲಂಗಾಣ ಹೋರಾಟವನ್ನು ಕಮ್ಯುನಿಸ್ಟ್ ಚಳುವಳಿಯ ನೆಲೆಯನ್ನಾಗಿ ಉಳಿಸಿಕೊಳ್ಳಲಾಗಲಿಲ್ಲ. ಪರಿಣಾಮವಾಗಿ ಕರ್ನಾಟಕದಲ್ಲೂ ಬಹುತೇಕ ಮುಖಂಡರು ಜೈಲುವಾಸವನ್ನು ಅನುಭವಿಸುವಂತಾಯಿತು. ಕೊನೆಗೆ ಸಿಪಿಐ 1951 ರಲ್ಲಿ 'ಸ್ಟೇಟ್‌ಮೆಂಟ್ ಆಫ್ ಪಾಲಿಸಿ'ಯನ್ನು ರೂಪಿಸಲು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ನೆರವನ್ನು ಪಡೆಯಿತು. ಆದರೂ ಸ್ವಾತಂತ್ರ್ಯಾ ನಂತರ ಭಾರತದ ಕ್ರಾಂತಿಯ ಘಟ್ಟ ಯಾವುದು, ಕ್ರಾಂತಿಯ ವರ್ಗಗಳು ಯಾವುವು, ಕ್ರಾಂತಿಯ ನಾಯಕತ್ವ ಯಾರದು ಎಂಬ ವಿಚಾರಗಳಲ್ಲಿ ಸಿಪಿಐ ಒಳಗಿನ ಭಿನ್ನಾಭಿಪ್ರಾಯಗಳು ಬಗೆ ಹರಿಯಲಿಲ್ಲ. ಅದು ಅಂತಿಮವಾಗಿ ಸಿಪಿಐ ವಿಭಜನೆಯಾಗಿ ಅದರೊಳಗಿಂದ ಸಿಪಿಐ(ಎಂ) ರಚನೆಯಾಯಿತು. ಇದೇ ಕಾರಣಗಳಿಗಾಗಿ ಮತ್ತು ಚೀನಾ ಕ್ರಾಂತಿಯ ಬಗೆಗಿನ ತಪ್ಪು ತಿಳುವಳಿಕೆಗಳಿಂದಾಗಿ ಸಿಪಿಐ(ಎಂ)ನೊಳಗಿಂದ ನಕ್ಸಲ್ ಎನ್ನಲಾಗುವ ಎಡ–ತೀವ್ರವಾದಿ ಪಕ್ಷಗಳು ಹೊರಹೊಮ್ಮಿದವು. ಇದರಲ್ಲಿ ಗಮನಿಸಬೇಕಾದ ಅಂಶವೇನೆಂದರೆ, 1920 ರಲ್ಲೇ ಆರಂಭವಾದರೂ, ಸಿಪಿಐಗೆ 1964 ರವರೆಗೂ 'ಕಾರ್ಯಕ್ರಮ' ಸ್ಪಷ್ಟವಾಗಿ ರೂಪುಗೊಂಡಿರಲಿಲ್ಲ. ಅಂದರೆ 'ಆಬ್ಜೆಕ್ಟೀವ್' ಪರಿಸ್ಥಿತಿಯನ್ನು ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ವಿಶ್ಲೇಷಣೆ ಮಾಡುವುದರಲ್ಲಿ ಗೊಂದಲಗಳಿದ್ದವು. ಹೀಗಿದ್ದರೂ, ಸಿಪಿಐ ಮತ್ತು ಸಮೂಹ ಸಂಘಟನೆಗಳು ಕ್ರಿಯಾಶೀಲತೆಯಿಂದಿದ್ದವು ಮತ್ತು ಭಾರತದ ರಾಜಕೀಯದಲ್ಲಿ ಐಎನ್‌ಸಿ ನಂತರದ ಸ್ಥಾನವನ್ನು ಈ ಪಕ್ಷವೇ ಹೊಂದಿತ್ತು. ಕರ್ನಾಟಕದಲ್ಲಿ 1960 ಮತ್ತು 70 ರ ದಶಕಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಎರಡು ವಿಭಜನೆಗಳನ್ನು ಕಂಡಿತು. ಇದು ಆಗಷ್ಟೇ ಕೇಂದ್ರೀಕೃತವಾಗಿ ರೂಪುಗೊಂಡು ವಿಸ್ತರಣೆ ಆಗುತ್ತಿದ್ದ ಸಂದರ್ಭವಾಗಿತ್ತು. ಆದರೆ ಚಳುವಳಿಯ ಪ್ರಭಾವವಿದ್ದ ಆರೇಳು ಜಿಲ್ಲೆಗಳಲ್ಲಿ ವಿಭಜನೆ ಕಾರಣಕ್ಕೆ ಅಪಾರ ನಷ್ಟವನ್ನು ಅನುಭವಿಸಿತು. ದೇಶ ಮಟ್ಟದಲ್ಲಿ ವಿಭಜನೆಗೆ ಕಾರಣವಾದ ಸೈದ್ಧಾಂತಿಕ ಚರ್ಚೆಗಳು ಕರ್ನಾಟಕದಲ್ಲಿ ಆ ಪ್ರಮಾಣದಲ್ಲಾಗಲೀ ಅಥವಾ ವ್ಯಾಪ್ತಿಯಲ್ಲಾಗಲೀ ಇರಲಿಲ್ಲ. ಅದರೆ ರಾಜ್ಯ ಮಟ್ಟದಿಂದ ಹಿಡಿದು ಕೆಳಹಂತದವರೆಗೆ ಸಿಪಿಐನ ಸಮಿತಿಗಳು, ಮತ್ತು ಅದೇ ರೀತಿಯಲ್ಲಿ ಸಮೂಹ ಸಂಘಟನೆಗಳೂ ಸಹ ವಿಭಜನೆಯಾದವು. 1978 ರವರೆಗೂ ಸಿಪಿಐ(ಎಂ) ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವೇ ಆಗಲಿಲ್ಲ. ಸಿಪಿಐ ಕಾಂಗ್ರೆಸ್‌ನ ಜೊತೆ ಹೊಂದಾಣಿಕೆ ಇದ್ದ ಕಾರಣದಿಂದ ಒಂದೆರೆಡು ಸ್ಥಾನಗಳನ್ನು ಗೆಲ್ಲುತ್ತಿತ್ತು. ವಿಭಜನೆಗೆ ಒಂದು ಕಾರಣವಾದ ಕಾಂಗ್ರೆಸ್ ಕುರಿತ ಧೋರಣೆಯಿಂದಾಗಿ ತುರ್ತು ಪರಿಸ್ಥಿತಿಗೆ ಬೆಂಬಲ ನೀಡಿದ್ದ ಸಿಪಿಐ, ನಂತರದಲ್ಲಿ ಕಾಂಗ್ರೆಸ್ ಜೊತೆ ಸಖ್ಯತೆಯನ್ನು ತೊರೆಯಿತು. 1978 ರ ನಂತರ ಕರ್ನಾಟಕದಲ್ಲಿ ಬಹುತೇಕ ಸಿಪಿಐ ಮತ್ತು ಸಿಪಿಐ(ಎಂ) ಒಟ್ಟೊಟ್ಟಿಗೆ ಕೆಲಸವನ್ನು ಮಾಡುತ್ತಿವೆ. ಎಮರ್ಜೆನ್ಸಿ ನಂತರದ ಕರ್ನಾಟಕದ ರಾಜಕಾರಣದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಹೆಚ್ಚು ಕ್ರಿಯಾಶೀಲವಾಗಿ ಕಾರ್ಮಿಕರ, ರೈತರ ಮತ್ತು ವಿದ್ಯಾರ್ಥಿಗಳ ಚಳುವಳಿಗಳನ್ನು ನಡೆಸಿವೆ. ಪರಿಣಾಮವಾಗಿ ಕಮ್ಯುನಿಸ್ಟ್ ಪಕ್ಷಗಳು ಚುನಾವಣೆಗಳಲ್ಲಿ ಅತಿ ಹೆಚ್ಚಿನ ಸ್ಥಾನಗಳನ್ನು ಗಳಿಸಿದ ಅವಧಿಯೂ ಅದೇ ಆಗಿದೆ. ಈ ಪ್ರಕ್ರಿಯೆಯು ಎಲ್‌ಪಿಜಿ ನಂತರದ ಕಾಲದಲ್ಲಿ ಹಿಮ್ಮುಖವಾಗಿದೆ. ಹೀಗೆ 1964 ರವರೆಗೆ ಸಿಪಿಐ, ನಂತರ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು, ಒಟ್ಟೊಟ್ಟಿಗೇ, ನಿರಂತರವಾದ ಕ್ರಿಯಾಶೀಲತೆಯನ್ನು ಮತ್ತು ನಿರಂತರವಾದ ಏರುಪೇರುಗಳನ್ನು ಅನುಭವಿಸುತ್ತಾ ಬಂದಿರುವುದನ್ನು ಕಾಣಬಹುದು.

ಈ ಬೆಳವಣಿಗೆ ಮತ್ತು ಬದಲಾವಣೆಯ ಹಾದಿಯಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷಗಳೊಳಗೆ – ಸಿಪಿಐ, ಸಿಪಿಐ(ಎಂ) ಮತ್ತು ಎಡ–ತೀವ್ರವಾದಿ – ಮೂರು ಪ್ರಧಾನ ಧಾರೆಗಳು ನಿರ್ಮಾಣವಾಗಿವೆ. ಸಿಪಿಐ(ಎಂ) ದೇಶದಲ್ಲಿ ಅತಿ ದೊಡ್ಡ ಕಮ್ಯುನಿಸ್ಟ್ ಪಕ್ಷವಾಗಿದೆ. ಸಿಪಿಐ ನಂತರದ ಸ್ಥಾನದಲ್ಲಿದೆ. ಕರ್ನಾಟಕದಲ್ಲೂ ಬಹುತೇಕ ಇದೇ ಪರಿಸ್ಥಿತಿಯಿದೆ. ಪ್ರಸ್ತುತ ಅಧ್ಯಯನದಲ್ಲಿ ಈ ಮೂರೂ ಧಾರೆಗಳ ನಡುವಿನ ಸೈದ್ಧಾಂತಿಕ ಭಿನ್ನತೆಯನ್ನು ಚರ್ಚಿಸಲಾಗಿದೆ. ಭಾರತವು ಪೂರ್ಣ ಬಂಡವಾಳಶಾಹಿ ಸಮಾಜವಾಗಿ ಪರಿವರ್ತನೆಯಾಗಿಲ್ಲ, ಬದಲಿಗೆ ಊಳಿಗಮಾನ್ಯ ಸಾಮಾಜಿಕ ಸಂಬಂಧಗಳು ಇನ್ನೂ ಪ್ರಧಾನವಾಗಿವೆ ಎಂಬ ನೆಲೆಯಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಎರಡೂ ಪಕ್ಷಗಳು ಹೇಳುತ್ತವೆ. ಆದರೆ ಪ್ರಸಕ್ತ ಘಟ್ಟದಲ್ಲಿ ಸಾಮಾಜಿಕ ಕ್ರಾಂತಿಯ ನಾಯಕತ್ವ ಮತ್ತು ದೊಡ್ಡ ಬಂಡವಾಳಶಾಹಿಯ ಪಾತ್ರ ಇಂತಹ ಅಂಶಗಳಲ್ಲಿನ ಭಿನ್ನಾಭಿಪ್ರಾಯಗಳು ಅವುಗಳ ಪ್ರತ್ಯೇಕ ಅಸ್ಥಿತ್ವವನ್ನು ಮುಂದುವರಿಸಲು ಕಾರಣವಾಗಿವೆ. ಸಿಪಿಐ ತನ್ನ ಕಾರ್ಯಕ್ರಮವನ್ನು ಸಮಕಾಲೀನಗೊಳಿಸುವ ಕೆಲಸಕ್ಕೆ ಮುಂದಾಗಿದ್ದು, ಇವೆರೆಡೂ ಪಕ್ಷಗಳ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಿವೆ. ಎಡ–ತೀವ್ರವಾದಿ ಪಕ್ಷಗಳು ಈ ಅವಧಿಯಲ್ಲಿ ಹತ್ತಾರು ವಿಭಜನೆಗಳನ್ನು ಕಂಡಿವೆ. ಇವುಗಳ ಪೈಕಿ ಪ್ರಧಾನವಾಗಿ ಸಿಪಿಐ(ಎಂ–ಎಲ್) ಪಕ್ಷವು ಚುನಾವಣಾ ರಾಜಕೀಯದಲ್ಲಿ ಭಾಗವಹಿಸುತ್ತಿದೆ. ಭಾರತೀಯ ಸಮಾಜದ ವಿಶ್ಲೇಷಣೆಯಲ್ಲಿ ಇದು ಇನ್ನೂ ಮೂಲಭೂತ ಬದಲಾವಣೆಗಳಿಗೆ ತನ್ನನ್ನು ತೆರೆದುಕೊಂಡಿಲ್ಲ. ಇನ್ನುಸಿಪಿಐ (ಮಾವೋವಾದಿ) ಪಕ್ಷವು ಈ ಸದ್ಯಚಾಲ್ತಿಯಲ್ಲಿರುವ ಪ್ರಮುಖ ನಕ್ಸಲ್‌ವಾದಿ ಪಕ್ಷವಾಗಿದೆ. ಭಾರತೀಯ ಸಮಾಜವು ಪ್ರಧಾನವಾಗಿ ಊಳಿಗಮಾನ್ಯವಾಗಿದ್ದು, ಇಲ್ಲಿ ಸ್ವತಂತ್ರ ಬಂಡವಾಳಶಾಹಿ ಬೆಳವಣಿಗೆ ಆಗಿಲ್ಲ ಎಂಬ ನಿಲುವನ್ನುಅದು ಹೊಂದಿದೆ. ಇಲ್ಲಿರುವ ಬಂಡವಾಳಶಾಹಿ ವರ್ಗವು 'ದಲ್ಲಾಳಿ'ಯಾಗಿರುವುದರಿಂದ ಅದು ಪ್ರಭುತ್ವದ ನಾಯಕತ್ವ ಸ್ಥಾನದಲ್ಲಿಲ್ಲ ಎನ್ನುತ್ತದೆ. ('ದಲ್ಲಾಳಿ' ಬಂಡವಾಳವರ್ಗ ಎಂಬುದರ ಕುರಿತು ಅಧ್ಯಾಯ ನಾಲ್ಕರ ಪುಟ 196 ಮತ್ತು ಅದೇ ಅಧ್ಯಾಯದ ಅಡಿಟಿಪ್ಪಣಿ 67 ರಲ್ಲಿ ಚರ್ಚಿಸಲಾಗಿದೆ). ಸಮೂಹ ಸಂಘಟನೆಗಳನ್ನು ಕಟ್ಟಿ ಚಳುವಳಿಗಳನ್ನು ನಡೆಸುವುದರ ಮೂಲಕ ಜನತೆಯ ಊಳಿಗಮಾನ್ಯ ತಿಳುವಳಿಕೆಯನ್ನು ಬದಲಾಯಿಸುವ ಮತ್ತು ಮುಂದಿನ ಸಮಾಜವಾದಿ ಕ್ರಾಂತಿಗೆ ಅವರನ್ನು ಸಿದ್ಧಪಡಿಸುವ ಪ್ರಜಾಪ್ರಭುತ್ವ ಕೆಲಸವನ್ನು 'ಸುಧಾರಣಾವಾದಿ' ಕೆಲಸಗಳೆಂದು ಎಂ–ಎಲ್ ಗುಂಪುಗಳು ಸಿಪಿಐ ಮತ್ತು ಸಿಪಿಐ(ಎಂ)ಗಳನ್ನು ಟೀಕಿಸುತ್ತವೆ. ಜನತೆಯ ನಡುವೆ ಸಮೂಹ ಸಂಘಟನೆಗಳನ್ನು ರಚಿಸಿ ಸಂಘಟಿಸುವ ಕೆಲಸಗಳನ್ನು 'ಸುಧಾರಣಾವಾದಿ' ಎನ್ನುವ ಈ ಪಕ್ಷಗಳು, ಅದಕ್ಕೆ ಪರ್ಯಾಯವಾಗಿ 'ಸಶಸ್ತ್ರಕ್ರಾಂತಿ'ಯನ್ನು ಪ್ರತಿಪಾದಿಸುತ್ತವೆ. ಈ ತಿಳುವಳಿಕೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೆಲವು ತೀವ್ರವಾದಿ ಎಡ–ಪಂಥೀಯ ಸಂಘಟನೆಗಳಲ್ಲಿ ಬದಲಾವಣೆಗಳು ಬಂದಿವೆ. ಇಂತಹ ಬದಲಾವಣೆಗೆ ಮೂಲಭೂತವಾಗಿ ಸಿದ್ಧಾಂತ ಮತ್ತು ಕಾರ್ಯಾಚರಣೆ ನಡುವಿನ ವೈರುಧ್ಯಗಳು ಕಾರಣವಾಗಿದ್ದವು.

ಈ ಪ್ರಧಾನ ಧಾರೆಗಳಿಗೆ ಭಿನ್ನವಾದ ಇನ್ನೆರೆಡು ಪಕ್ಷಗಳನ್ನು ಇಲ್ಲಿ ಗುರುತಿಸಬಹುದು. ಒಂದು ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ (ಆರ್‌ಎಸ್‌ಪಿ) ಮತ್ತು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) (ಎಸ್‌ಯುಸಿಐ(ಸಿ)). ಇವೆರೆಡೂ ಪಕ್ಷಗಳು ಭಾರತದಲ್ಲಿ ನೇರವಾಗಿ ಸಮಾಜವಾದಿ ಕ್ರಾಂತಿಯನ್ನು

ಪ್ರತಿಪಾದನೆ ಮಾಡುತ್ತವೆ. ಅಂದರೆ, ಭಾರತೀಯ ಸಮಾಜವು ಸಂಪೂರ್ಣವಾಗಿ ಬಂಡವಾಳಶಾಹಿಯಾಗಿದ್ದು, ಇಲ್ಲಿ ಊಳಿಗಮಾನ್ಯ ಸಾಮಾಜಿಕ ಸಂಬಂಧಗಳು ಇರುವುದನ್ನೇ ಇವು ನಿರಾಕರಿಸುತ್ತವೆ. ಅಂದರೆ ಭಾರತದ ಜನಸಮೂಹಗಳ ತಿಳುವಳಿಕೆಯು ವರ್ಗ ಹೋರಾಟಕ್ಕೆ ಬೇಕಾದ ತಿಳುವಳಿಕೆಯನ್ನು ಹೊಂದಿರುವುದರಿಂದ, ಪ್ರಜಾಪ್ರಭುತ್ವ ಕ್ರಾಂತಿಯ ಅಗತ್ಯವಿಲ್ಲವೆಂದು ಮತ್ತು ನೇರವಾಗಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಸಮಾಜವಾದಿ ಕ್ರಾಂತಿ ಮಾಡಬಹುದೆಂದು ಹೇಳುತ್ತವೆ. ಈ ರೀತಿಯಾಗಿ ಭಾರತೀಯ ಸಮಾಜವನ್ನು ವಿಶ್ಲೇಷಿಸುವಲ್ಲಿನ ವಿಭಿನ್ನತೆಗಳೇ ಕಮ್ಯುನಿಸ್ಟ್ ಪಕ್ಷಗಳು ಸತತವಾಗಿ ಒಟ್ಟಾಗಿ ಕೆಲಸ ಮಾಡುವುದಕ್ಕೆ ಪ್ರಾಯೋಗಿಕ ಅಡಚಣೆಗಳಾಗಿವೆ. ಸೈದ್ಧಾಂತಿಕ ಭೇದಗಳು ಹೀಗಿದ್ದರೂ, ಪ್ರಸಕ್ತ ಕಾಲಘಟ್ಟದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೆಲವು ಸಾಮಾನ್ಯ ಬೇಡಿಕೆಗಳ ಆಧಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಒಂದುಗೂಡಿ ಕೆಲಸ ಮಾಡುವ ಬೆಳವಣಿಗೆಗಳನ್ನೂ ಗಮನಿಸಬಹುದಾಗಿದೆ.

❖ ❖ ❖

ಕಮ್ಯುನಿಸ್ಟ್ ಪಕ್ಷಗಳಲ್ಲಿನ ವಿಚಾರಧಾರೆಗಳು ಮತ್ತು ಭಾರತೀಯ ಸಮಾಜವನ್ನು ವಿಶ್ಲೇಷಣೆ ಮಾಡುವ ವಿಧಾನದಲ್ಲಿ ಇಷ್ಟೊಂದು ವೈವಿಧ್ಯತೆಗಳಿರುವಾಗ, ಕಮ್ಯುನಿಸ್ಟ್ ಪಕ್ಷಗಳನ್ನು ಇತರರು ನೋಡುವ ರೀತಿ ಕುತೂಹಲಕಾರಿಯಾಗಿದೆ. ಈ ವಿಭಿನ್ನ ಧಾರೆಗಳನ್ನು ಏಕೀಭರ್ವಿಸಿ, ಸಾರಾಸಗಟಾಗಿ, ಕಮ್ಯುನಿಸ್ಟ್ ಎಂದರೆ ಒಂದೇ ಪಕ್ಷ ಎಂಬಂತೆ ಬಿಂಬಿಸಿರುವುದನ್ನು ಕಾಣಬಹುದು. ಈ ರೀತಿ ಬಿಂಬಿಸಿರುವುದರ ಹಿಂದೆ ಎರಡು ಅಂಶಗಳಿವೆ – ಒಂದು, ಕಮ್ಯುನಿಸ್ಟ್ ಪಕ್ಷಗಳು ಅಥವಾ ಚಳುವಳಿಗಳ ಬಗ್ಗೆ ಇರುವ ಅರಿವಿನ ಕೊರತೆ, ಎರಡನೆಯದು, ಕಮ್ಯುನಿಸ್ಟ್ ವಿರೋಧದ ಉದ್ದೇಶಪೂರ್ವಕ ಬಿಂಬಿಸುವಿಕೆ. ಕಮ್ಯುನಿಸಂ ಎಂಬುದು ಬಹುಸಂಖ್ಯಾತ ಭಾರತೀಯರ ಚಿಂತನೆಯ ಭಾಗವಾಗಿಲ್ಲದಿರುವುದರಿಂದ, ಕಮ್ಯುನಿಸ್ಟ್ ಪಕ್ಷಗಳಲ್ಲಿನ ಭಿನ್ನತೆಗಳು ಅವರ ಅರಿವಿನ ಪರಿಧಿಯೊಳಗೆ ಬಂದಿಲ್ಲ. ಹೀಗಾಗಿ ಅಂತಹವರು ಕಮ್ಯುನಿಸ್ಟ್ ಪಕ್ಷ ಅಥವಾ ಕಮ್ಯುನಿಸ್ಟ್ ಬಾವುಟ ಒಂದೇ ಎಂಬುದಾಗಿ ಭಾವಿಸುತ್ತಾರೆ. ಆರ್‌ಎಸ್‌ಎಸ್‌ನಂತಹ ಬಲಪಂಥೀಯ ಸಂಘಟನೆಗಳು/ಪಕ್ಷಗಳು ಮತ್ತು ನಡುಪಂಥೀಯ ಎನ್ನುವ ಕಾಂಗ್ರೆಸ್ ಸೇರಿದಂತೆ ಪ್ರಾದೇಶಿಕ ಬಂಡವಾಳಶಾಹಿ ಸಮಾಜವಾದಿ ಪಕ್ಷಗಳು ಮತ್ತು ಗುಂಪುಗಳು ಉದ್ದೇಶಪೂರ್ವಕ ಪ್ರಚಾರ ಮಾಡುವುದನ್ನು ಗುರುತಿಸಬಹುದು. ಕಮ್ಯುನಿಸ್ಟ್ ಪಕ್ಷಗಳ ಕುರಿತು ಮಾಡಲಾಗುವ ಪ್ರಚಾರಗಳಲ್ಲಿ ಸಾಮಾನ್ಯವಾದ ಅಂಶಗಳೆಂದರೆ, ಕಮ್ಯುನಿಸಂ ಒಂದು ವಿದೇಶೀ ವಿಚಾರಧಾರೆ, ಕಮ್ಯುನಿಸ್ಟ್ ಪಕ್ಷಗಳು ಹಿಂಸೆಯನ್ನು ಪ್ರತಿಪಾದಿಸುತ್ತವೆ, (ಕಾರ್ಮಿಕವರ್ಗದ) ಸರ್ವಾಧಿಕಾರವನ್ನು ಬೆಂಬಲಿಸುತ್ತವೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ, ದೇವರು ಮತ್ತು ಧರ್ಮದ ವಿರೋಧಿಗಳು, ಇತ್ಯಾದಿ.

ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಿದಂತೆ, ಭಾರತದಲ್ಲಿ ಸಾಮಾಜಿಕ ಕ್ರಾಂತಿಯ ಸ್ವರೂಪ ಮತ್ತು ದಾರಿಗೆ ಸಂಬಂಧಿಸಿದಂತೆ, ಕಮ್ಯುನಿಸ್ಟ್ ಪಕ್ಷಗಳಲ್ಲಿ ದೀರ್ಘವಾದ ಸೈದ್ಧಾಂತಿಕ ಸಂಘರ್ಷ ಮತ್ತು ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ಹಲವಾರು ಕಮ್ಯುನಿಸ್ಟ್ ಪಕ್ಷಗಳು ರಚನೆಯಾಗಿವೆ. ಇವೆಲ್ಲವೂ ಒಂದೇ ಸ್ವರೂಪ ಮತ್ತು ದಾರಿಯನ್ನು ಹೊಂದಿಲ್ಲ. ಹಾಗಿರುವಾಗ, ಗೆರಿಲ್ಲಾ ಮಾದರಿಯ ಸಶಸ್ತ್ರ ಕ್ರಾಂತಿಯನ್ನು ಪ್ರತಿಪಾದಿಸುವ ಗುಂಪುಗಳೊಂದಿಗೆ

ಎಲ್ಲಾ ಕಮ್ಯುನಿಸ್ಟ್ ಗುಂಪುಗಳನ್ನು ಸಮೀಕರಿಸುವ ಪ್ರಯತ್ನವು, ಜನರ ನಡುವೆ ಭಯ ಮತ್ತು ಭೀತಿಯನ್ನು ಹುಟ್ಟಿಸುವುದಾಗಿದೆ. ಆ ಮುಖಾಂತರವಾಗಿ ಕಮ್ಯುನಿಸ್ಟ್ ಪಕ್ಷಗಳನ್ನು 'ಹಿಂಸೆ'ಯ ಹೆಸರಿನಲ್ಲಿ ಜನರಿಂದ ದೂರ ಮಾಡುವ ಉದ್ದೇಶವನ್ನು ಕಾಣಬಹುದು. ದೇಶದ ಪ್ರಮುಖ ಕಮ್ಯುನಿಸ್ಟ್ ಪಕ್ಷಗಳಾದ ಸಿಪಿಐ ಮತ್ತು ಸಿಪಿಐ(ಎಂ) ಮತ್ತು ಇನ್ನೂ ಕೆಲವು ಪಕ್ಷಗಳು ಭಾರತದ ಸಂವಿಧಾನದ ಚೌಕಟ್ಟಿನಲ್ಲೇ ಕೆಲಸ ಮಾಡುವ ಪಕ್ಷಗಳಾಗಿವೆ. ಅವು 'ಗೆರಿಲ್ಲಾ ಮಾದರಿ'ಯನ್ನು ಪ್ರತಿಪಾದಿಸುವುದಿಲ್ಲ. ನಕ್ಸಲರು ನಡೆಸುವ ಹಿಂಸೆಯನ್ನು ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಿಗೂ ಅಂಟಿಸುವುದು ಉದ್ದೇಶಪೂರ್ವಕ ರಾಜಕೀಯ ಕಾರ್ಯತಂತ್ರವಾಗಿದೆ.

ಕಮ್ಯುನಿಸಂ ಒಂದು ವಿದೇಶೀ ತಾತ್ವಿಕತೆಯಾಗಿದ್ದು, ಭಾರತದ ಸಂದರ್ಭಕ್ಕೆ ಅದು ಸರಿಹೊಂದುವುದಿಲ್ಲ ಎಂಬುದು ಇನ್ನೊಂದು ಪ್ರಚಾರವಾಗಿದೆ. ಕಮ್ಯುನಿಸಂ ಒಂದು ತಾತ್ವಿಕತೆಯಾಗಿ ಬೆಳೆದದ್ದು ಯೂರೋಪಿನಲ್ಲಿ ಎಂಬುದು ನಿಜವಾದರೂ, ಅದೊಂದು ಸಾಮಾಜಿಕ ವಿಜ್ಞಾನವಾಗಿದೆ. ವೈಜ್ಞಾನಿಕ ತಳಹದಿಯ ತಾತ್ವಿಕತೆಗಳಿಗೆ ದೇಶ–ವಿದೇಶಗಳ ಚೌಕಟ್ಟು ಇರುವುದಿಲ್ಲ. ಅವು ಜಾಗತಿಕವಾಗಿರುತ್ತವೆ. ಪ್ರಜಾಪ್ರಭುತ್ವವೂ ಯೂರೋಪಿನ ಕೈಗಾರಿಕಾ ಕ್ರಾಂತಿಯ ಫಲಶ್ರುತಿಯೇ ಆಗಿದೆ ಮತ್ತು ಒಂದು ಜಾಗತಿಕ ತಾತ್ವಿಕತೆಯಾಗಿದೆ. ಅದನ್ನು ಭಾರತವು ತನ್ನ ಸ್ವರೂಪಕ್ಕೆ ಅಳವಡಿಸಿಕೊಂಡಿದೆ. ಜಾಗತಿಕ ತಾತ್ವಿಕತೆಗಳನ್ನು ಸ್ಥಳೀಯವಾಗಿ ಅನ್ವಯಿಸುವ ಪ್ರಯತ್ನದ ಭಾಗವಾಗಿಯೇ ಕಮ್ಯುನಿಸಂ ಆಗಲೀ ಪ್ರಜಾಪ್ರಭುತ್ವವಾಗಲೀ ಇವೆ ಎಂಬುದನ್ನು ಗಮನಿಸಬೇಕಾಗಿದೆ. ಮಾರ್ಕ್ಸ್‌ವಾದವು ಒಂದು ಕರ್ಮಠ ಜ್ಞಾನವಲ್ಲ ಬದಲಿಗೆ, 'ನಿರ್ದಿಷ್ಟ ಪರಿಸ್ಥಿತಿಯ ನಿರ್ದಿಷ್ಟ ಅಧ್ಯಯನ'ವನ್ನು ಪ್ರತಿಪಾದಿಸುವ ವೈಜ್ಞಾನಿಕ ವಿಧಾನವಾಗಿದೆ. ಹಾಗಾಗಿ ಸಾರ್ವತ್ರಿಕ ಸ್ವರೂಪದ ವಿಚಾರಗಳನ್ನು ಸಂಕುಚಿತ ನೆಲೆಗಟ್ಟಿನಲ್ಲಿ ನೋಡುವುದು ಸಮಂಜಸವಾಗಲಾರದು.

ಕಮ್ಯುನಿಸಂ ನಾಸ್ತಿಕತೆಯನ್ನು ಪ್ರತಿಪಾದಿಸುತ್ತದೆ, ಆದ್ದರಿಂದ ದೇವರು ಮತ್ತು ಮತದ (ರಿಲಿಜನ್) ವಿರೋಧಿಯಾಗಿದೆ ಎಂಬ ವಾದವನ್ನು ಈ ನಿಟ್ಟಿನಲ್ಲೇ ಗಮನಿಸಬಹುದು. ಇಂತಹ ಆರೋಪಕ್ಕೆ ಪದೇ ಪದೇ ಬಳಸಲಾಗುವ ಆಧಾರವೆಂದರೆ, ಮಾರ್ಕ್ಸ್ ಅವರು 'ಧರ್ಮ ಎಂಬುದು ಅಫೀಮು' ಎಂದಿದ್ದಾರೆ ಎಂಬುದು. ಮಾರ್ಕ್ಸ್ ಹಾಗೆ ಹೇಳಿದ್ದಾರೆಯೇ ಎಂಬುದನ್ನು ಪರಿಶೀಲಿಸಿದಾಗ, 'ಎ ಕಾಂಟ್ರಿಬ್ಯೂಷನ್ ಟು ದಿ ಕ್ರಿಟಿಕ್ ಆಫ್ ಹೆಗೆಲ್ಸ್ ಫಿಲಾಸಫಿ ಆಫ್ ರೈಟ್' ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಅವರು, 'ಮತವು ತುಳಿತಕ್ಕೊಳಗಾದವರ ನಿಟ್ಟುಸಿರು, ಹೃದಯಹೀನ ಜಗತ್ತಿನ ಹೃದಯ, ಮತ್ತು ಆತ್ಮವಿಲ್ಲದ ಪರಿಸ್ಥಿತಿಗಳ ಆತ್ಮ. ಇದು ಜನರ ಅಫೀಮು' ಎಂಬುದಾಗಿ ಹೇಳಿದ್ದಾರೆ. ಇದನ್ನು ಗಮನಿಸಿದರೆ ಮತಧರ್ಮಗಳ ಸ್ವರೂಪದ ಚಿತ್ರಣ ಸಿಗುತ್ತದೆ. ಇಲ್ಲಿ ಆರೋಪವಿಲ್ಲ. ಬದಲಿಗೆ ವಿಶ್ಲೇಷಣೆ ಇದೆ. ಒಟ್ಟಾರೆ ಸಂದರ್ಭದಿಂದ ಒಂದು ಹೇಳಿಕೆಯನ್ನು ಹೊರತೆಗೆದು ನೋಡಿದಾಗ ಅಪಾರ್ಥಕ್ಕೆ ಅವಕಾಶವಾಗುತ್ತದೆ. ಅಸಲಿಗೆ ಮಾರ್ಕ್ಸ್‌ವಾದವು ಎಲ್ಲಿಯೂ ದೇವರನ್ನು ಅಥವಾ ಮತವನ್ನು ನಂಬಬೇಡಿ ಎಂಬ ಕರೆಯನ್ನು ಕೊಟ್ಟಿಲ್ಲ. ಆದರೆ ಮತಗಳ ಸಾಮಾಜಿಕ ತಳಹದಿಯನ್ನು ಮತ್ತು ಅದರ ಸಾಮಾಜಿಕ ಪಾತ್ರವನ್ನು ವಿಶ್ಲೇಷಿಸಿದೆ. ಕಮ್ಯುನಿಸಂ ಎಂಬುದು ಒಂದು ವೈಜ್ಞಾನಿಕ ಚಿಂತನಾ ವಿಧಾನವಾದ್ದರಿಂದ, ಜನರನ್ನು ಶೋಷಿಸುವ ಯಾವುದೇ ವಿಚಾರಗಳನ್ನು ತೀವ್ರವಾದ ನಿಷ್ಕರ್ಷೆಗೆ ಒಳಪಡಿಸುತ್ತದೆ. ದೇವರು ಮತ್ತು ಮತಗಳನ್ನು ಶೋಷಣೆಯ ಅಸ್ತ್ರಗಳಾಗಿ ಬಳಸುವ ಪಕ್ಷಗಳು, ಕಮ್ಯುನಿಸಂ ದೈವ ಮತ್ತು ಮತದ ವಿರೋಧಿ ಎಂಬುದಾಗಿ ಅದನ್ನು ನಂಬಿರುವ

ಜನರ ನಡುವೆ ಪ್ರಚಾರ ಮಾಡುತ್ತವೆ. ಕಮ್ಯುನಿಸ್ಟ್ ಪಕ್ಷಗಳೂ ಸಹ ಈ ಅಂಶಗಳನ್ನು ನಿಭಾಯಿಸುವಲ್ಲಿ ಒಂದು ಸ್ಪಷ್ಟ ಧೋರಣೆಯನ್ನು ಹೊಂದಿಲ್ಲವೆಂಬುದೂ ವಾಸ್ತವವಾಗಿದೆ.

ಕಮ್ಯುನಿಸ್ಟ್ ಪಕ್ಷಗಳು ಕಾರ್ಮಿಕವರ್ಗದ ಅಧಿಪತ್ಯವನ್ನು ಪ್ರತಿಪಾದಿಸುವುದರಿಂದ, ಅವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಹೊಂದಿಲ್ಲ ಎಂಬುದು ಮತ್ತೊಂದು ವಾದವಾಗಿದೆ. ಇದುವರೆಗಿನ ಸಾಮಾಜಿಕ ವ್ಯವಸ್ಥೆಗಳಲ್ಲಿ ಒಂದು ನಿರ್ದಿಷ್ಟ ಆಳುವ ವರ್ಗದ ಸರ್ವಾಧಿಕಾರವೇ ಅಸ್ತಿತ್ವದಲ್ಲಿದ್ದ ಕಾರಣದಿಂದ, ಸಮಾನತೆಯ ಸಮಾಜವೊಂದು ಅಸ್ತಿತ್ವಕ್ಕೆ ಬರುವಾಗ ಅದು ಕಾರ್ಮಿಕ ವರ್ಗದ ಸರ್ವಾಧಿಕಾರವೇ ಆಗಿರುತ್ತದೆ ಎಂಬುದು ಮಾರ್ಕ್ಸ್‌ವಾದಿ ವಿಶ್ಲೇಷಣೆಯ ತಿರುಳಾಗಿದೆ. ಇದನ್ನು ಮಾರ್ಕ್ಸ್‌ವಾದಿ ಚಿಂತನಾ ಕ್ರಮದ ಸಮಗ್ರತೆಯ ಹಿನ್ನೆಲೆಯಲ್ಲಿ ಗ್ರಹಿಸುವ ಅವಶ್ಯಕತೆಯಿದೆ. ಒಟ್ಟು ಸಂದರ್ಭದಿಂದ ಒಂದು ಹೇಳಿಕೆಯನ್ನು ಪ್ರತ್ಯೇಕಿಸಿ ನೋಡುವ ಸಮಸ್ಯೆಗಳು ಇಲ್ಲಿ ಹೆಚ್ಚಾಗಿವೆ. ಹಾಗೆಯೇ ಪ್ರಜಾಪ್ರಭುತ್ವವನ್ನು ಗ್ರಹಿಸುವ ಪರಿಯಲ್ಲೂ ಸಮಸ್ಯೆಯಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಧ್ಯವಿರುವುದು ಬಂಡವಾಳಶಾಹಿ ಪ್ರಜಾಪ್ರಭುತ್ವವೇ ಹೊರತು, ಸಾಮಾನ್ಯ ಜನರ ಪ್ರಭುತ್ವವಲ್ಲ. ಹೀಗಾಗಿ ಪ್ರಜಾಪ್ರಭುತ್ವವನ್ನು ಶ್ರೀಮಂತರ, ಬಂಡವಾಳದಾರರ ಪ್ರಭುತ್ವವಾಗಿ ಬಳಸಿದಾಗ ಅದು ಬಂಡವಾಳಶಾಹಿ ಸರ್ವಾಧಿಕಾರ, ಕಾರ್ಮಿಕವರ್ಗದ ಪ್ರಭುತ್ವವಾಗಿ ಬಳಸಿದಾಗ ಅದು ಕಾರ್ಮಿಕವರ್ಗದ ಸರ್ವಾಧಿಕಾರವಾಗಿರುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಕರ್ನಾಟಕದಲ್ಲಾಗಲೀ ಅಥವಾ ಭಾರತದಲ್ಲಾಗಲೀ, ಜನರ ನಡುವೆ ಈ ವಾದಗಳು ಸೃಷ್ಟಿಸಿರುವ ಅಭಿಪ್ರಾಯಗಳನ್ನು ಸರಿಪಡಿಸಲು ಕಮ್ಯುನಿಸ್ಟ್ ಪಕ್ಷಗಳು ಕೈಗೊಂಡಿರುವ ವಿಸ್ತೃತವಾದ ಕ್ರಮಗಳು ಅವಶ್ಯಕತೆಗೆ ಅನುಗುಣವಾಗಿ ಕಾಣುವುದಿಲ್ಲ.

❖ ❖ ❖

ಕಮ್ಯುನಿಸ್ಟ್ ಚಳುವಳಿಯು ದಲಿತ ಪ್ರಶ್ನೆಗಳನ್ನು ಎತ್ತಿರುವ ಕುರಿತು ದೀರ್ಘಕಾಲದ ಚರ್ಚೆಗಳು ಅಸ್ತಿತ್ವದಲ್ಲಿವೆ. ಭಾರತದ ಕಮ್ಯುನಿಸ್ಟ್ ಪಕ್ಷಗಳು ವರ್ಗ ಪ್ರಧಾನ ಚಳುವಳಿಗಳಾಗಿದ್ದು, ಜಾತಿ ಪ್ರಶ್ನೆಯನ್ನು ಕಡೆಗಣಿಸಿವೆ ಎಂಬುದಾಗಿ ದಲಿತ ಚಳುವಳಿಗಳು ಮತ್ತು ಸೋಷಿಯಲಿಸ್ಟರು ಆರೋಪಿಸುವುದನ್ನು ಕಾಣಬಹುದು. ಭಾರತದ ಕಮ್ಯುನಿಸ್ಟರು ಜಾತಿಯನ್ನು ಒಪ್ಪುವುದಿಲ್ಲ, ವರ್ಗವನ್ನು ಮಾತ್ರ ಪರಿಗಣಿಸಿದ್ದಾರೆ, ಅವರು ಸೃಜನಶೀಲ ಮಾರ್ಕ್ಸ್‌ವಾದಿಗಳಲ್ಲ ಎಂಬ ಆರೋಪಗಳನ್ನು ಅವರ ಮೇಲೆ ಹೊರಿಸಲಾಗಿದೆ. ಕಮ್ಯುನಿಸ್ಟರ ಕುರಿತ ವಿರೋಧ ಮತ್ತು ಕಾಳಜಿಯ ಎರಡು ನೆಲೆಗಳಿಂದ ಇಂತಹ ವಾದಗಳನ್ನು ಗಮನಿಸಬಹುದು.

'ಕಮ್ಯುನಿಸಂ–ವಿರೋಧ'ದ ನೆಲೆಯು ಬಹುತೇಕ ಅದರ ವರ್ಗ ಪಕ್ಷಪಾತಿ ಲಕ್ಷಣಗಳ ಕಾರಣದಿಂದ ಹುಟ್ಟಿಕೊಂಡಿದೆ. ಅದರ ಬಗೆಗಿನ ಚರ್ಚೆಯನ್ನು ಇಲ್ಲಿ ವಿಸ್ತರಿಸದೆ, ಕಮ್ಯುನಿಸ್ಟ್ ಪಕ್ಷಗಳು ತಮ್ಮನ್ನು 'ರಿ–ಇನ್ವೆಂಟ್' ಮಾಡಿಕೊಳ್ಳಬೇಕೆಂಬ ಉದ್ದೇಶದ ವಿರೋಧಗಳನ್ನು ಗಮನಿಸಬಹುದು. ಕಮ್ಯುನಿಸ್ಟ್ ಪಕ್ಷವು ಆರಂಭದಿಂದಲೂ ಜಾತಿ ಅಸ್ಪೃಶ್ಯತೆ ಕುರಿತು ತನ್ನ ಅಭಿಪ್ರಾಯಗಳನ್ನು ಸೂತ್ರೀಕರಿಸುತ್ತಾ ಬಂದಿದೆ. ಸಿಪಿಐ ಆರಂಭವಾದ ನಂತರ

ಅದಕ್ಕೊಂದು ಕಾರ್ಯಕ್ರಮ ಎಂಬುದಾಗಿ ಮೊದಲು ರೂಪುಗೊಂಡ 1930 ರ 'ಕಾರ್ಯಾಚರಣೆಯ ವೇದಿಕೆ'ಯು, ಭಾರತ ಕಮ್ಯುನಿಸ್ಟ್ ಪಕ್ಷವು ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಜಾತಿ ತಾರತಮ್ಯಗಳ ಸಂಪೂರ್ಣ ನಿಷೇಧಕ್ಕಾಗಿ ಹೋರಾಡುವುದಾಗಿ ಪ್ರಕಟಿಸಿತ್ತು. ಭಾರತವನ್ನು ಆಧುನಿಕ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಕಣ್ಣೋಟದಲ್ಲಿ ನಿರ್ಮಿಸಲು, 'ಜಾತಿ ಆಧಾರಿತ' ಹಿಂದೂ ಸಾಮಾಜ ಮತ್ತು ಆದರ ಸಂಸ್ಕೃತಿಯ ವಿರುದ್ಧ ಹೊಂದಾಣಿಕೆಯಿಲ್ಲದ ಹೋರಾಟವನ್ನು ನಡೆಸಿದಾಗ ಮಾತ್ರ ಸಾಧ್ಯ. ಆಗ ಮಾತ್ರ ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಅರ್ಥ ಬರುತ್ತದೆ. ಇಲ್ಲದಿದ್ದಲ್ಲಿ ಸಮಾಜವಾದ ಎಂಬುದು ದೂರದ ಮಾತು. ಕ್ರಾಂತಿಕಾರಿ ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿನ ಹೋರಾಟವನ್ನು ಜಾತಿ ಸಮಾಜದ ವಿರುದ್ಧದ ಹೋರಾಟದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಶ್ರಮಜೀವಿ ವಿಭಾಗಗಳಲ್ಲಿ ಬಲಿಷ್ಟವಾದ ಜಾತಿ–ವಿರೋಧಿ ಭಾವನೆಯನ್ನು ಬಿತ್ತುವ ಮೂಲಕ ಜಾತಿ ಮತ್ತು ಅಸ್ಪೃಶ್ಯತೆಯ ಸವಾಲನ್ನು ಎದುರಿಸಬೇಕೆಂದು ಮತ್ತು ಆಗ ಮಾತ್ರ ಸಂಘಟಿತ ಬೃಹತ್ ಶ್ರಮಜೀವಿ ಶಕ್ತಿಯು, ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಜೀತಗಾರಿಕೆಯನ್ನು ತೊಡೆದು ಹಾಕುವ ಕಾರ್ಷಿಕ ಕ್ರಾಂತಿಯನ್ನುಸಾಧಿಸಲು ಸಾಧ್ಯವಾಗುತ್ತದೆ ಎಂಬುದಾಗಿ ಹಲವು ಕಮ್ಯುನಿಸ್ಟ್ ನಾಯಕರು ಪ್ರತಿಪಾದಿಸಿದರು.

ಡಾ.ಬಿ.ಆರ್.ಅಂಬೇಡ್ಕರ್‌ರನ್ನು ಕಮ್ಯುನಿಸ್ಟ್ ವಿರೋಧಿಯಾಗಿ ಬಿಂಬಿಸಿ ವಿಶ್ಲೇಷಿಸುವವರು, ಮಹಾರಾಷ್ಟ್ರದ ಕಮ್ಯುನಿಸ್ಟ್ ಪಕ್ಷದ ಮುಖಂಡರು ಮತ್ತುಅಂಬೇಡ್ಕರ್ ಅವರ ಜೊತೆಗಾರರಾಗಿದ್ದ ಆರ್.ಬಿ.ಮೋರೆಯವರ ಮುತುವರ್ಜಿಯಲ್ಲಿ, ಬಾಂಬೆ ಸರ್ಕಾರ ಜಾರಿಗೊಳಿಸಿದ ಕಾರ್ಮಿಕ ವಿರೋಧಿ ಶಾಸನದ ವಿರುದ್ಧ ಸಿಪಿಐ ಮತ್ತು ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಜಂಟಿಯಾಗಿ 1938 ರ ನವೆಂಬರ್ 7 ರಂದು ನಡೆಸಿದ ಜಂಟಿ ಮುಷ್ಕರವನ್ನು ಮರೆಯುತ್ತಾರೆ. ಸಂವಿಧಾನದಲ್ಲಿ ದಲಿತರಿಗೆ ಉದ್ಯೋಗ ಮೀಸಲಾತಿ ಜಾರಿಗೆ ಬಂದ ಐದು ವರ್ಷಗಳ ಹಿಂದೆಯೇ ಮೋರೆಯವರು 1945 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದರು. ಭಾರತದ ಕೈಗಾರಿಕೆಗಳಲ್ಲಿ, ಮುಖ್ಯವಾಗಿ ಜವಳಿ ಕೈಗಾರಿಕೆಗಳಲ್ಲಿ, ದಲಿತ ಕಾರ್ಮಿಕರಿಗೆ ಅಗುತ್ತಿರುವ ಜಾತಿ ತಾರತಮ್ಯಗಳು ಮತ್ತು ಕೀಳಾಗಿ ಕಾಣುತ್ತಿರುವ ಬಗ್ಗೆ ಅಲ್ಲಿ ಧ್ವನಿಯೆತ್ತಿದ್ದರು. ಈ ಕಾರಣಕ್ಕಾಗಿ ಮೋರೆಯವರನ್ನು ಸಿಪಿಐ ಮತ್ತು ಅಂಬೇಡ್ಕರ್ ಅವರ ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ ಬಾಂಬೆಯಲ್ಲಿ ಸನ್ಮಾನ ಮಾಡಿದ್ದವು. 1953 ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನಕ್ಕೆ ಪೂರ್ವದಲ್ಲಿ, ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಒಂದು ಟಿಪ್ಪಣಿಯನ್ನು ಸಿಪಿಐ ನಾಯಕತ್ವಕ್ಕೆ ಕಳುಹಿಸಿದ್ದರು. ಸಿಪಿಐ ಈ ಟಿಪ್ಪಣಿಯನ್ನು ತನ್ನ ಎಲ್ಲಾ ರಾಜ್ಯ ಸಮಿತಿಗಳಿಗೆ ಕಳುಹಿಸಿ ಅಭಿಪ್ರಾಯಗಳನ್ನು ಪಡೆದುದರ ಆಧಾರದಲ್ಲಿ, 1957 ಮತ್ತು 1964 ರಲ್ಲಿ **ಟಿಪ್ಪಣಿಯನ್ನು ಪರಿಷ್ಕರಿಸಿದ ಮೋರೆಯವರು, ಜಾತಿ ಮತ್ತು ಸಾಮಾಜಿಕ ದಮನದ ಪ್ರಶ್ನೆಗಳನ್ನು ವರ್ಗ ಹೋರಾಟದ** ಭಾಗವಾಗಿ ತೆಗೆದುಕೊಳ್ಳಬೇಕಾದ ಅಗತ್ಯದ ಬಗ್ಗೆ ಒತ್ತನ್ನು ನೀಡಿದರು ಮತ್ತು ಈ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಸಕಾರಾತ್ಮಕ ಕೊಡುಗೆಗಳ ಬಗ್ಗೆ ಸಮತೋಲಿತವಾದ ಅಂದಾಜು ಮಾಡಿದರು. ಈ ರೀತಿಯಾಗಿ, ಕಮ್ಯುನಿಸ್ಟರು ಆರಂಭದಿಂದಲೂ ಜಾತಿ ಪ್ರಶ್ನೆಯನ್ನು ಭಾರತದ ವಿಶಿಷ್ಟ ಸಾಮಾಜಿಕ ಬೆಳವಣಿಗೆಯಾಗಿ ಪರಿಗಣಿಸಿರುವುದನ್ನು, ಜಾತಿ ಮತ್ತು ವರ್ಗದ ಸಮಸ್ಯೆಯನ್ನು ಸಮಗ್ರೀಕರಿಸಿ ನೋಡುತ್ತಾ ಬಂದಿರುವುದನ್ನು ಇವುಗಳಿಂದ ತಿಳಿಯಬಹುದು.

ಆದರೆ ಕಮ್ಯುನಿಸ್ಟರು, ಈ ತಿಳುವಳಿಕೆಯನ್ನು ಭಾರತದ ಸಮಕಾಲೀನ ಸಂದರ್ಭಕ್ಕೆ ಅನ್ವಯ ಮಾಡುವುದರಲ್ಲಿ ಮತ್ತು ಆರ್ಥಿಕ ಹೋರಾಟಗಳಿಗೆ ಅನುರೂಪವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟಗಳನ್ನು ಕಟ್ಟುವುದರಲ್ಲಿ, ದೇಶವ್ಯಾಪಿಯಾಗಿ ಆಗಲೀ ಅಥವಾ ರಾಜ್ಯವ್ಯಾಪಿಯಾಗಿ ಆಗಲೀ, ಏಕರೂಪದಲ್ಲಿ ಇದು ಕಾಣುವುದಿಲ್ಲ. ಕೇರಳ, ತ್ರಿಪುರ, ತಮಿಳುನಾಡು, ಆಂಧ್ರ, ಮುಂತಾದ ಕೆಲವು ರಾಜ್ಯಗಳಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಹೋರಾಟಗಳನ್ನು ಕಮ್ಯುನಿಸ್ಟ್ ಚಳುವಳಿಯು ತನ್ನ ಅವಿಭಾಜ್ಯ ಚಟುವಟಿಕೆಯಾಗಿ ನಡೆಸಿರುವ ಉದಾಹರಣೆಗಳನ್ನು ಕಾಣಬಹುದು. ಇಂತಹ ಸಾಮಾಜಿಕ ಸುಧಾರಣಾ ಚಳುವಳಿಗಳ ಪ್ರಭಾವದಿಂದ ಅಲ್ಲೆಲ್ಲಾ ಕಮ್ಯುನಿಸ್ಟ್ ಚಳುವಳಿ ಬೆಳವಣಿಗೆಯಾಗಲು ಸಹಾಯವಾಗಿದೆ. ಕರ್ನಾಟಕದಲ್ಲಿ ದೇವರಾಜ ಅರಸರ ಸರ್ಕಾರ ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡುವುದಕ್ಕೆ ಕೆಲವು ದಶಕಗಳ ಹಿಂದಿನಿಂದಲೇ ಕಮ್ಯುನಿಸ್ಟರು ಮಲ ಹೊರುವುದನ್ನು ನಿಷೇಧಿಸಬೇಕೆಂದು ಮಂಗಳೂರು, ಬೆಳಗಾಂ, ಬಿಜಾಪುರ ಮುಂತಾದ ಕಡೆಗಳಲ್ಲಿ ಹೋರಾಟ ನಡೆಸಿದ್ದರೂ, ಇದು ವ್ಯವಸ್ಥಿತ ಮತ್ತು ಸಂಘಟಿತ ಪ್ರಯತ್ನವಾಗಿ ಕಾಣುವುದಿಲ್ಲ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಜಾತಿ ದಮನದ ವಿರುದ್ಧ ಸ್ಪಷ್ಟ ತಿಳುವಳಿಕೆಯಿದ್ದರೂ, ಅವುಗಳನ್ನು ಪ್ರಾಯೋಗಿಕವಾಗಿ ಜಾರಿಗೊಳಿಸುವ ಮತ್ತು ಪ್ರಸಕ್ತ ಬಂಡವಾಳಶಾಹಿ ಬೆಳವಣಿಗೆಯ ಸಂದರ್ಭಕ್ಕೆ ಸಮಕಾಲೀನಗೊಳಿಸುವ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳಿಗೆ 1990 ರ ದಶಕದವರೆಗೂ ಕ್ರಿಯಾಶೀಲತೆ ಇರಲಿಲ್ಲ. ಅಖಿಲ ಭಾರತ ಮಟ್ಟದಲ್ಲಿ ಜಾತಿ ದಮನದ ವಿಚಾರದಲ್ಲಿ ಚಳುವಳಿಗಳನ್ನು ನಡೆಸಲಿಲ್ಲ ಮತ್ತು ಜಾತಿ ಅಸ್ತಿತ್ವದ ಆರ್ಥಿಕ ಬೆನ್ನೆಲುಬೆಂದು ಹೇಳಲಾಗುವ ಊಳಿಗಮಾನ್ಯ ಭೂ ಸಂಬಂಧಗಳ ನಾಶದ ಬಗ್ಗೆಯೂ ದೇಶವ್ಯಾಪಿ ಚಳುವಳಿಗಳನ್ನು ಸಂಘಟಿಸಲು ಸಾಧ್ಯವಾಗಲಿಲ್ಲ. ಇಂತಹ ಪರಿಸ್ಥಿತಿಗೆ ಮತ್ತೊಂದು ಕಾರಣವೆಂದರೆ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಭಾರತದಲ್ಲಿ ಕ್ರಾಂತಿ ಹತ್ತಿರದಲ್ಲೇ ಸಂಭವಿಸಲಿದೆ, ಆಗ ಶ್ರಮಜೀವಿಗಳ ಪ್ರಭುತ್ವ ಜಾತಿ ವ್ಯವಸ್ಥೆಯನ್ನು ಕಿತ್ತು ಹಾಕಲು ಸುಲಭವಾಗುತ್ತದೆ ಎಂಬ ನಂಬಿಕೆಯೂ ಹೆಚ್ಚಿನ ಕಮ್ಯುನಿಸ್ಟರಲ್ಲಿ ಇತ್ತು. ಜಾತಿ ದಮನದ ವಿರುದ್ಧದ ಸಮತಳಿಯ ಹೋರಾಟವನ್ನು ಇದು ಮಸುಕುಗೊಳಿಸಿತ್ತು. ಜಾತಿ ತಾರತಮ್ಯದ ವಿರುದ್ಧ ಬಿಡಿ ಬಿಡಿ ಪ್ರತಿಕ್ರಿಯೆಗಳನ್ನು ನೀಡಲಾಗುತ್ತಿತ್ತೇ ವಿನಹ ಸಮಗ್ರವಾದ ಪರಿಹಾರದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು ರೂಪುಗೊಳ್ಳಲಿಲ್ಲ. ಈ ಪ್ರಕ್ರಿಯೆ ಕರ್ನಾಟಕದ ಮಟ್ಟಿಗೂ ಬಹುತೇಕ ಇದೇ ರೀತಿಯಿತ್ತು.

ಎಲ್‌ಪಿಜಿ ಕಾಲಘಟ್ಟದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ಜಾತಿ ವ್ಯವಸ್ಥೆಯನ್ನು 'ವರ್ಗ'ದಿಂದ ಪ್ರತ್ಯೇಕಿಸಿ 'ಐಡೆಂಟಿಟಿ ರಾಜಕಾರಣ'ವನ್ನಾಗಿಸುತ್ತಿದೆ. ಅಸ್ಮಿತೆಯ ಪ್ರಶ್ನೆಯು ಜಾತಿ, ಸಂಸ್ಕೃತಿ, ಭಾಷೆ ಆಧಾರಿತ ಪ್ರತ್ಯೇಕತೆಯನ್ನು ಸೃಷ್ಟಿಸುತ್ತಿದೆ. ಕಮ್ಯುನಿಸ್ಟ್ ಚಳುವಳಿಗೆ ತೊಡರುಗಾಲಾಗಿರುವ ಈ ಬೆಳವಣಿಗೆಯು, ಜಾತಿ ರಾಜಕಾರಣದ 'ಹೆಜಮನಿ'ಯಾಗುತ್ತಿದ್ದು, ಜಾತಿ ದಮನಕ್ಕೊಳಗಾದವರನ್ನೇ ಶೋಷಿಸುವ ಅಸ್ತ್ರವಾಗುತ್ತಿದೆ. 'ಶೋಷಣೆ' ಎಂಬುದನ್ನು ಹಾಗೇ ಉಳಿಸಿಕೊಂಡು, 'ಜಾತಿ ದಮನ'ವೆಂಬುದೇ ಇಲ್ಲದಿರುವ ಪರ್ಯಾಯ ವ್ಯವಸ್ಥೆಯನ್ನು ಈಗಿರುವ ವ್ಯವಸ್ಥೆಯೊಳಗೇ ತರಲು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿದ ಮತ್ತೊಂದು

ವ್ಯವಸ್ಥೆಯನ್ನು ಯೋಚಿಸದಿದ್ದರೆ ಜಾತಿ ದಮನದ ವಿರುದ್ಧ ಹೋರಾಡುವವರು ಗೆಲ್ಲಲು ಸಾಧ್ಯವಿಲ್ಲ. ಯಾರೇ ಆಗಲೀ ಸಂಪೂರ್ಣವಾಗಿ ಜಾತಿ ಕಣ್ಣೋಟದ ಚೌಕಟ್ಟಿನೊಳಗೇ ಉಳಿದರೆ, ಅವರು ಜಾತಿ ದಮನದಿಂದ ಯಶಸ್ವಿಯಾಗಿ ಹೊರಬರಲು ಸಾಧ್ಯವೇ ಇಲ್ಲ. ಹೀಗಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸುವ ಸಮಗ್ರ ಚೌಕಟ್ಟಿನೊಳಗೆ ವರ್ಗದ ಪ್ರಶ್ನೆಯನ್ನೂ ಮತ್ತು ಜಾತಿ ದಮನದ ಪ್ರಶ್ನೆಯನ್ನೂ ತರಬೇಕು ಎಂಬುದನ್ನು ಗಮನಿಸಬೇಕು.

ದಲಿತ ಚಳುವಳಿಗಳು ಮತ್ತು ಸೋಷಿಯಲಿಸ್ಟರು ಆರೋಪಿಸುವ ಮತ್ತೊಂದು ಅಂಶವೆಂದರೆ, ಕಮ್ಯುನಿಸ್ಟ್ ಪಕ್ಷಗಳಲ್ಲಿ ನಾಯಕತ್ವವು ಮೇಲ್ಜಾತಿ ಜನರಿಂದ ಕೂಡಿರುವುದರಿಂದ, ಜಾತಿ ದಮನದ ವಿರುದ್ಧ ಹೋರಾಟಗಳನ್ನು ಸಂಘಟಿಸುವ ಅಂಶವು ದುರ್ಬಲವಾಗಿದೆ ಎಂಬುದು. ಸ್ವಾತಂತ್ರ್ಯ–ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾ–ನಂತರದ ಸುಮಾರು 3–4 ದಶಕಗಳ ಕಾಲ, ಸಂಪೂರ್ಣವಾಗಿ ಅಲ್ಲದಿದ್ದರೂ, ಇಂತಹುದೊಂದು ಪರಿಸ್ಥಿತಿ ಇದ್ದದ್ದನ್ನು ಒಪ್ಪಬೇಕಾಗುತ್ತದೆ. ಇದು ಬಹುತೇಕ ರಾಜ್ಯಗಳ ಮತ್ತು ಅಖಿಲ ಭಾರತ ಮಟ್ಟದ ನಾಯಕತ್ವದ ವಿಚಾರದಲ್ಲಿ ವಾಸ್ತವಾಂಶವಾಗಿತ್ತು. ಭಾರತದಲ್ಲಿ ವಸಾಹತು ವಿರೋಧಿ ಹೋರಾಟಗಳು, ಸಾಮಾಜಿಕ ಸುಧಾರಣಾ ಹೋರಾಟಗಳು ಇತ್ಯಾದಿಗಳಲ್ಲಿ ಪ್ರಧಾನವಾಗಿ ಇಂಗ್ಲಿಷ್ ಶಿಕ್ಷಣ ಪಡೆದ ಮೊದಲ ತಲೆಮಾರಿನ ಮೇಲ್ಜಾತಿ ಜನರೇ ಮುಂಚೂಣಿಯಲ್ಲಿದ್ದರು. ಕಮ್ಯುನಿಸ್ಟ್ ಚಳುವಳಿಯು ಇದಕ್ಕೆ ಹೊರತಾಗಿರಲಿಲ್ಲ. ಆದರೆ ಸ್ವಾತಂತ್ರ್ಯ–ಪೂರ್ವ ಭಾರತದಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಮರು ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು. ದೇಶ ವಿಭಜನೆಯ ನಂತರದಲ್ಲಿ ಈ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಅಖಿಲ ಭಾರತ ನಾಯಕತ್ವವನ್ನು ಹೊರತುಪಡಿಸಿ, ಬಹುಶಃ ಕಳೆದ 2–3 ದಶಕಗಳಿಂದೀಚೆಗೆ ಈ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಗುರುತಿಸಬಹುದು. ಕರ್ನಾಟಕದ ಸಿಪಿಐ ಮತ್ತು ಸಿಪಿಐ(ಎಂ)ಗಳಲ್ಲಂತೂ ಈ ಬದಲಾವಣೆ ಸ್ಪಷ್ಟವಾಗಿ ಕಾಣುತ್ತದೆ.

ದೇಶದಲ್ಲೂ ಮತ್ತು ರಾಜ್ಯದಲ್ಲೂ ಕಮ್ಯುನಿಸ್ಟರು ನಡೆಸಿರುವ ಚಾರಿತ್ರಿಕ ಹೋರಾಟಗಳನ್ನು ಗಮನಿಸಿದರೆ, ಎಲ್ಲಾ ಹೋರಾಟಗಳೂ ದಲಿತ–ಹಿಂದುಳಿದ ಜಾತಿಗಳ, ಆದಿವಾಸಿ ಬುಡಕಟ್ಟುಗಳ, ಮುಸ್ಲಿಂ ರೈತರನ್ನು ಮತ್ತು ಭೂಹೀನರನ್ನು ಒಳಗೊಂಡ ಹೋರಾಟಗಳೇ ಆಗಿದ್ದವು. ಕಮ್ಯುನಿಸ್ಟರ ಯಾವುದೇ ಹೋರಾಟಗಳೂ ಒಂದು ಧಾರ್ಮಿಕ ಪಂಥಕ್ಕೆ ಅಥವಾ ಹಿಂದೂ ಮೇಲ್ಜಾತಿಗಳಿಗೆ ವಿಶೇಷವಾಗಿ ಅನುಕೂಲವಾಗುವ ಹೋರಾಟಗಳಾಗಿರಲಿಲ್ಲ. ಆದರೆ ಬಹುತೇಕ ಹೋರಾಟಗಳ ನಾಯಕತ್ವ ಮೇಲ್ಜಾತಿಗಳಾಗಿದ್ದುದನ್ನು ಗಮನಿಸಬಹುದು. ಪ್ರಜ್ಞಾಪೂರ್ವಕವಾಗಿ ಈ ರೀತಿಯಾಗಿದೆ ಎಂದು ಹೇಳಲಾಗದಿದ್ದರೂ, ಇಂತಹ ವೈರುಧ್ಯಗಳು ಚಳುವಳಿಯ ಪರಿಣಾಮವನ್ನು ದೀರ್ಘಕಾಲ ಹಿಡಿದಿಟ್ಟುಕೊಳ್ಳಲು ಒಂದು ಕೊರತೆಯಾಗಿರಬಹುದು. ಜೊತೆಗೆ ಕೆಳ ಜಾತಿ ಮತ್ತು ಕೆಳ ವರ್ಗದ ನಾಯಕತ್ವವನ್ನು ಅಂಗೀಕರಿಸದ ಮತ್ತು ಕೆಳ ಮಟ್ಟದ ಪ್ರಜ್ಞೆ ಅಧಿಪತ್ಯ ಹೊಂದಿರುವುದನ್ನೂ ಇದರಲ್ಲಿ ಕಾಣಬಹುದು. ಇಂತಹ ವೈರುಧ್ಯಗಳನ್ನು ಗಮನಿಸುವಾಗಲೇ ಮೇಲ್ಜಾತಿಗೆ ಸೇರಿದ ನಾಯಕತ್ವದಲ್ಲಿದ್ದ ಬಹುತೇಕರು 'ಡಿ–ಕ್ಲಾಸಿಫೈ' ಆದವರಾಗಿದ್ದರು. ಅಂತಹ ನಾಯಕರ ಸರಳತೆ ಮತ್ತು ಪ್ರಾಮಾಣಿಕ ಜೀವನ ಮಾದರಿಗಳು ಸಾಕಷ್ಟು ಪ್ರಭಾವ ಬೀರಿದ್ದವು. ಅವರನ್ನು ಪ್ರಜ್ಞಾಪೂರ್ವಕವಾಗಿ ಜಾತಿ ಆಯಾಮದಿಂದ ನೋಡುವ ಸಾಧ್ಯತೆಗಳು ಕಡಿಮೆಯಿದ್ದವು.

ಆದರೆ, ಉದಾರೀಕರಣೋತ್ತರ ಸಮಾಜದ ಸಂದರ್ಭದಲ್ಲಿ ಈ ಅಂಶದಲ್ಲಿ ವಿಭಿನ್ನ ಬೆಳವಣಿಗೆಗಳಾಗಿರುವುದನ್ನು ಕಾಣಬಹುದು.

ಬಂಡವಾಳಶಾಹಿ ಪಕ್ಷಗಳಲ್ಲಿ ಜಾತಿ ಆಧಾರಿತ ನಾಯಕತ್ವವು ಚುನಾವಣೆಯಲ್ಲಿ ಮತಗಳಿಕೆಗಾಗಿ ನೇಮಿಸಿಕೊಳ್ಳುವ ಶ್ರೀಮಂತ ವರ್ಗಗಳ ಸಂರಚನೆಯಾಗಿದೆ ಎಂಬುದನ್ನು ನಿರಾಕರಿಸಲಾಗದು. ಬಹುತೇಕ ಸಂದರ್ಭಗಳಲ್ಲಿ ಜಾತಿ ಪ್ರಾತಿನಿಧ್ಯವು ಆಯಾ ಜಾತಿಗಳಲ್ಲಿರುವ ಶ್ರೀಮಂತ ವರ್ಗಗಳ ಪ್ರಾತಿನಿಧ್ಯವೇ ಆಗಿರುತ್ತದೆ. ಹೀಗಾಗಿ ಕೆಳ ಜಾತಿಗಳು ಅನುಭವಿಸುವ ಜಾತಿ ದಮನ ಮತ್ತು ವರ್ಗ ಶೋಷಣೆಯ ವಿರುದ್ಧ ಚಳುವಳಿಗಳನ್ನು ಸಂಘಟಿಸುವುದರಲ್ಲಿ ಅವರ ಪಾತ್ರ ನಗಣ್ಯವಾಗಿರುವುದನ್ನು ಗಮನಿಸಬಹುದು. ಈ ಪಕ್ಷಗಳಲ್ಲಿನ ದಮನಿತ ಜಾತಿಗಳಿಗೆ ಸೇರಿದ ನಾಯಕತ್ವವು ಹೆಚ್ಚೆಂದರೆ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸುತ್ತದೆಯೇ ವಿನಃ ಊಳಿಗಮಾನ್ಯ ಭೂ ಸಂಬಂಧಗಳು ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಚಳುವಳಿಗಳನ್ನು ನಡೆಸುವುದನ್ನು ಕಾಣಲಾಗದು. ಇತ್ತೀಚೆಗೆ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನಗಳಲ್ಲಿ ಭಾಗವಹಿಸುವ ಪ್ರತಿನಿಧಿಗಳ ಪರಿಚಯ ಪತ್ರಗಳನ್ನು ಸಂಗ್ರಹಿಸುವ ಪದ್ಧತಿಯಿದ್ದು, ಅದರಲ್ಲಿ ಸಾಮಾಜಿಕ ಹಿನ್ನೆಲೆಯ ಮಾಹಿತಿಗಳನ್ನು ಕೇಳಲಾಗುತ್ತಿದೆ. ಹಾಗೆ ನೋಡಿದರೆ ಕಮ್ಯುನಿಸ್ಟ್ ಪಕ್ಷಗಳ ಸದಸ್ಯತ್ವದಲ್ಲಿ ಬಹಳ ದೊಡ್ಡ ಪ್ರಮಾಣದ ದಲಿತ ಮತ್ತು ಹಿಂದುಳಿದ ಜಾತಿಗಳ ಸದಸ್ಯತ್ವವಿದೆ. ಇವರನ್ನು ನಾಯಕತ್ವದ ಭಾಗವಾಗಿಸುವ ಪ್ರಜ್ಞಾಪೂರ್ವಕ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಕಮ್ಯುನಿಸ್ಟ್ ಪಕ್ಷಗಳು ಮಾಡುತ್ತವೆಯಾ ಎಂಬುದನ್ನು ಕಾದು ನೋಡಬೇಕು.

ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯನ್ನು ಸಬಾಲ್ಟರ್ನ್ ಚರಿತ್ರೆಕಾರರು ಬರೆದಿರುವ ಅಥವಾ ವಿಮರ್ಶಿಸಿರುವ ಪ್ರಸಂಗಗಳು ಬಹು ವಿರಳವಾಗಿದೆ. ಆದರೂ ಮಾರ್ಕ್ಸ್‌ವಾದಿ ತಾತ್ವಿಕತೆಯಾಗಿ ವರ್ಗ ಮತ್ತು ಸಂಸ್ಕೃತಿಯ ಪ್ರಶ್ನೆಯನ್ನು ಕನ್ನಡದ ಬರಹಗಾರರು ಚರ್ಚಿಸಿದ್ದಾರೆ. ಡಿ.ಆರ್.ನಾಗರಾಜ್, ಆರ್.ಶಶಿಧರ್, ರಾಜೇಂದ್ರ ಚೆನ್ನಿ, ಓ.ಎಲ್.ನಾಗಭೂಷಣ ಸ್ವಾಮಿ, ಸಿ.ಎನ್.ರಾಮಚಂದ್ರನ್ ಇವರುಗಳು ಆಧುನಿಕೋತ್ತರ–ಸಬಾಲ್ಟರ್ನ್ ಸಂಕಥನದ ಬಗ್ಗೆ ಪರಿಣಾಮಕಾರಿ ಚರ್ಚೆಗಳನ್ನು ಮಾಡಿರುವ ಬಗ್ಗೆ, ಮತ್ತು ಆಧುನಿಕೋತ್ತರ ಪರಂಪರೆ, ಆಧುನಿಕತೆಯ ವಿಮರ್ಶೆ ಮತ್ತು ಧರ್ಮ–ಜಾತಿಗಳ ಬಗ್ಗೆ ಎಸ್.ಎನ್.ಬಾಲಗಂಗಾಧರ್, ರಾಜಾರಾಮ ಹೆಗಡೆ, ಜಿ.ಎಸ್.ಸದಾನಂದ, ಎ.ಷಣ್ಮುಖ, ಡಂಕಿನ್ ಜಳಕಿ ಮುಂತಾದವರು ತಂದಿರುವ ಕೃತಿಗಳು ಕುತೂಹಲ ಮೂಡಿಸಿರುವುದಾಗಿ ವಿಜಯ್ ಪೂಣಚ್ಚರವರು ಚರ್ಚಿಸಿದ್ದಾರೆ (ವಿಜಯ್ 2017: 138). ಆಧುನಿಕೋತ್ತರವಾದಿ ಪರಂಪರೆಯ ಬಗ್ಗೆ ಬರೆಯುತ್ತಾ, ಆಧುನಿಕತೆಯನ್ನು ಕಟುವಾಗಿ ಟೀಕಿಸುವ ಬಾಲಗಂಗಾಧರ್, ರಾಜಾರಾಮ್ ಹೆಗಡೆ ಮುಂತಾದವರು ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯನ್ನು ಅನ್ವಯಿಸಿ ಬರೆದಿರುವುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಮಾರ್ಕ್ಸ್‌ವಾದಿ ಸಂಕಥನದ ಸಾರ್ವತ್ರಿಕ ಸೂತ್ರಗಳನ್ನು ಅಂತಿಮವಾಗಿ ತಿರಸ್ಕರಿಸುವ ಆಯಾಮಗಳನ್ನು ಕಾಣಬಹುದು. ಇದೇನೇ ಆದರೂ, ಜಾಗತಿಕ ಬಂಡವಾಳಶಾಹಿ ಬೆಳವಣಿಗೆ ಮತ್ತು ಭಾರತೀಯ ಸಮಾಜದ ಆಂತರಿಕ ಡೈನಮಿಕ್ಸ್‌ನ ಹಿನ್ನೆಲೆಯಲ್ಲಿ, ಸಬಾಲ್ಟರ್ನ್ ನೆಲೆಯ ಚಾರಿತ್ರಿಕ ಬರಹಗಳು ಮತ್ತು ಸಂಕಥನಗಳು, ಜಾತಿ, ಬುಡಕಟ್ಟು,

ಸಂಸ್ಕೃತಿಯಂತಹ ಅಸ್ಮಿತೆಗಳ ವಿಷಯದಲ್ಲಿ ಕಮ್ಯುನಿಸ್ಟ್ ಚಳುವಳಿಗಳು ಭಿನ್ನವಾದ ನಿಲುವುಗಳನ್ನು ತೆಗೆದುಕೊಳ್ಳಲು ಸ್ವಲ್ಪ ಮಟ್ಟಿಗೆ ಕಾರಣವಾಗಿರುವುದನ್ನು ನಿರಾಕರಿಸುವಂತಿಲ್ಲ. ವರ್ಗ ಪ್ರಧಾನವಾದ ಚಳುವಳಿಗಳನ್ನು ನಡೆಸುವಾಗಲೂ ಜಾತಿ, ಸಂಸ್ಕೃತಿ, ರೈತರು, ಕೂಲಿಕಾರರು, ಮಹಿಳೆಯರು, ಭಾಷೆ ಮುಂತಾದ ವಿಚಾರಗಳ ಕುರಿತು ಕಮ್ಯುನಿಸ್ಟ್ ಪಕ್ಷಗಳು ನಡೆಸಿರುವ ಚಳುವಳಿಗಳನ್ನು ಕಡೆಗಣಿಸದೇ ಈ ಅಂಶವನ್ನು ಗಮನಿಸಬೇಕಾಗಿದೆ.

❖ ❖ ❖

ಕಮ್ಯುನಿಸ್ಟ್ ಪಕ್ಷಗಳಲ್ಲಿರುವುದು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಐಕ್ಯತೆಯನ್ನು ಬೆಸೆದಿರುವ ಕೇಂದ್ರೀಕೃತ ನಾಯಕತ್ವ. ಕಮ್ಯುನಿಸ್ಟ್ ಪಕ್ಷಗಳ ನಾಯಕತ್ವವು ಸಾಮಾನ್ಯ ಬಂಡವಾಳಶಾಹಿ ಪಕ್ಷಗಳ ನಾಯಕತ್ವದ ಉದ್ದೇಶಕ್ಕಿಂತ ಭಿನ್ನವಾದ ಉದ್ದೇಶವನ್ನು ಈಡೇರಿಸುವ ಗುರಿಯನ್ನು ಹೊಂದಿರುತ್ತದೆ ಎಂಬುದು ಇದರ ಅರ್ಥ. ಇಂತಹ ಉದ್ದೇಶದ ಕಾರಣಕ್ಕೇ ನಾಯಕತ್ವವನ್ನು ಒಂದುಗೂಡಿಸುವ ಪ್ರಜಾಸತ್ತಾತ್ಮಕ ಕೇಂದ್ರವಾದ[2] ಎಂಬ ಸಂಘಟನಾ ತತ್ವವನ್ನು ಆಚರಣೆಯಲ್ಲಿ ಇಟ್ಟುಕೊಳ್ಳಲಾಗಿದೆ. ಇವೆಲ್ಲವನ್ನೂ ಒಟ್ಟುಗೂಡಿಸಿ ಹೇಳುವುದಾದರೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ನಾಯಕತ್ವವೆಂಬುದು ಕೇವಲ ವ್ಯಕ್ತಿಗಳ ನಡುವಿನ ಐಕ್ಯತೆಯಲ್ಲ, ಬದಲಿಗೆ ವ್ಯಕ್ತಿಗಳ ನಡುವಿನ ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ ತತ್ವಗಳ ಐಕ್ಯತೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಬೆಳವಣಿಗೆಯನ್ನು ಮತ್ತು ಅದರಲ್ಲಿ ನಾಯಕತ್ವದ ಪಾತ್ರವನ್ನು ಈ ತತ್ವಗಳ ಐಕ್ಯತೆಯ ಪ್ರಮಾಣದಲ್ಲಿ ಅಂದಾಜು ಮಾಡಬೇಕಾಗುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿರುವ ಹಾಗೆ, ರಾಷ್ಟ್ರ ಮಟ್ಟದಲ್ಲಿ ಕಮ್ಯುನಿಸ್ಟ್ ಚಳುವಳಿಯೊಳಗೆ ನಡೆದ ತಾತ್ವಿಕ ಚರ್ಚೆಗಳು ಅದೇ ಪ್ರಮಾಣದಲ್ಲಿ ಕರ್ನಾಟಕದಲ್ಲಿ ನಡೆದಿಲ್ಲ. ಇಲ್ಲೇನಿದ್ದರೂ ಅದರ ಪರಿಣಾಮಗಳು ವ್ಯಾಪಕವಾಗಿ ಆಗಿರುವುದನ್ನು ಮಾತ್ರ ಕಾಣಬಹುದು. ಹೀಗಾಗಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ರಚನೆಯಾದ ನಂತರದಲ್ಲಿ 1964 ರವರೆಗೆ ಬಹುತೇಕ ಐಕ್ಯತೆಯ ನಾಯಕತ್ವವನ್ನೇ ಕಾಣಬಹುದು. ಐಕ್ಯತೆ ಎಂದಾಗ ಮೇಲೆ ಹೇಳಿದ ಸಂಘಟನಾ ತತ್ವದ ಪ್ರತಿರೂಪವಾಗಿತ್ತು ಎಂದೇನಲ್ಲ. ಅದು ವಿಸ್ತರಣೆ ಮತ್ತು ಕ್ರೋಢೀಕರಣದ ಪ್ರಕ್ರಿಯೆಗೆ ಸಹಾಯಕವಾಗಿತ್ತು. 1964 ರಲ್ಲಿ ವಿಭಜನೆ ಮತ್ತು 1978 ರಲ್ಲಿ ಮತ್ತೊಂದು ವಿಭಜನೆಯಾದ ನಂತರದಲ್ಲಿ, ಮತ್ತು ಇತರೆ ಕಾರಣಗಳೂ ಸೇರಿ ಯಾವುದೇ ಕಮ್ಯುನಿಸ್ಟ್ ಪಕ್ಷದಲ್ಲೂ, ಕಾರ್ಮಿಕ ವರ್ಗದ ಕ್ರಾಂತಿಯನ್ನು ಸಂಘಟಿಸುವ ಸ್ಪಷ್ಟ ಕಣ್ಣೋಟ ರೂಪುಗೊಂಡಿದೆ ಎಂದು ಕಾಣುವುದಿಲ್ಲ. ಕಮ್ಯುನಿಸ್ಟ್ ಪಕ್ಷಗಳು ಮತ್ತು ಅದರ ಅಂಗ ಸಂಘಟನೆಗಳ ಚಟುವಟಿಕೆಗಳು ಕೆಲವೊಮ್ಮೆ ಹೆಚ್ಚಾಗಿರುವುದನ್ನು ಕಾಣಬಹುದು. ಬಹಳ ಸಂದರ್ಭಗಳಲ್ಲಿ ಈ ಹೆಚ್ಚಳ ಅಥವಾ ಕಡಿತ ಎಂಬುದು ವ್ಯಕ್ತಿಗಳ ಆಸಕ್ತಿ ಮತ್ತು ಉತ್ಸಾಹವನ್ನು ಅವಲಂಬಿಸಿರುವ ಸಾಧ್ಯತೆಗಳಿವೆ.

ಭಾರತದ ಸಾಮಾಜಿಕ ಬೆಳವಣಿಗೆಯ ಪ್ರಸಕ್ತ ಹಂತದಲ್ಲಿ, ಊಳಿಗಮಾನ್ಯ ಭೂಸಂಬಂಧಗಳನ್ನು ಮತ್ತು ಅದರ ಅನುರೂಪವಾದ ಸಾಮಾಜಿಕ–ಸಾಂಸ್ಕೃತಿಕ ಚೌಕಟ್ಟುಗಳನ್ನು ಬದಲಾಯಿಸಲು ಶ್ರಮಜೀವಿ ವರ್ಗದ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸಬೇಕೆಂದು ಪ್ರಧಾನವಾದ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳೂ ಹೇಳುತ್ತವೆ.

ಈ ಪ್ರಜಾಪ್ರಭುತ್ವ ಕ್ರಾಂತಿಯ ಅನಿವಾರ್ಯ ಸಂಗತಿಯಾಗಿ ಗ್ರಾಮೀಣ ರೈತರನ್ನು, ಅದರಲ್ಲೂ ಮುಖ್ಯವಾಗಿ ಬಡ-ಕೂಲಿಕಾರ ರೈತರನ್ನು, ಸಂಘಟಿಸುವ ಬೃಹತ್ ಕೆಲಸಕ್ಕೆ ಸಿಪಿಐ ಅಥವಾ ಸಿಪಿಐ(ಎಂ) ಸಮಗ್ರ ಕಾರ್ಯಾಚರಣೆ ಮಾಡಿರುವುದು ಕಾಣುವುದಿಲ್ಲ. ಈ ಕೆಲಸದಲ್ಲಿ ಕಾರ್ಮಿಕ ವರ್ಗವನ್ನು ತೊಡಗಿಸಿರುವ ಉದಾಹರಣೆಗಳು ಅಪರೂಪ. ಕಮ್ಯುನಿಸ್ಟ್ ಪಕ್ಷದ ನಾಯಕತ್ವಕ್ಕೆ ಸಮರ್ಥವಾಗಿ ಈ ಕಣ್ಣೋಟ ಇದ್ದಿತ್ತಾ ಎಂಬುದು ಅನುಭವದಲ್ಲಿ ಕಾಣುವುದಿಲ್ಲ. ಸ್ವಾತಂತ್ರ್ಯಾ ನಂತರದಲ್ಲಿ ಕರ್ನಾಟಕ ರಾಜ್ಯದಲ್ಲಿ ಹಲವು ಸಂದರ್ಭಗಳಲ್ಲಿ ಹಲವು ಜಿಲ್ಲೆಗಳಲ್ಲಿ ಪ್ರಭಾವಶಾಲಿಯಾದ ರೈತ ಹೋರಾಟಗಳು ಮತ್ತು ಕಾರ್ಮಿಕ ಹೋರಾಟಗಳು ನಡೆದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಗೇಣಿದಾರ ಹೋರಾಟಗಳ ಮುಂಚೂಣಿ ನಾಯಕತ್ವ ಕಮ್ಯುನಿಸ್ಟ್ ಪಕ್ಷದ್ದೇ ಆಗಿತ್ತು. ಆದರೆ ಅದನ್ನು ರಾಜಕೀಯವಾಗಿ ಒಂದು ಶಾಶ್ವತ ನೆಲೆಯನ್ನಾಗಿ ಮಾಡಿದ ಅನುಭವ ಕಾಣುವುದಿಲ್ಲ. ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಗೇಣಿದಾರರ ಚಳುವಳಿ, ಕೋಲಾರ ಜಿಲ್ಲೆಯ ಇನಾಂ ಭೂಮಿ ಮತ್ತು ಜೋಡಿದಾರರ ವಿರುದ್ಧದ ಚಳುವಳಿ, ತೀರ್ಥಹಳ್ಳಿಯ ಗೇಣಿದಾರರ ಚಳುವಳಿ, ಅಥವಾ ಮಲಪ್ರಭಾ ರೈತರ ಹೋರಾಟ (ನರಗುಂದ ರೈತ ಬಂಡಾಯ), ಮುಂತಾದ ರೈತ ಚಳುವಳಿಗಳನ್ನು, ಚಿಕ್ಕಮಗಳೂರಿನ ತೋಟ ಕಾರ್ಮಿಕರು, ಕೆಜಿಎಫ್, ದಾವಣಗೆರೆ, ಬೆಂಗಳೂರು ಮುಂತಾದ ನಗರಗಳಲ್ಲಿ ನಡೆದ ಕಾರ್ಮಿಕ ಚಳುವಳಿಗಳನ್ನು, ಕಮ್ಯುನಿಸ್ಟ್ ಚಳುವಳಿಯ ನೆಲೆಗಳನ್ನಾಗಿ ಮುಂದುವರಿಸಲು ಆಗಲಿಲ್ಲ. ಕಮ್ಯುನಿಸ್ಟ್ ಪಕ್ಷಗಳು ಇದುವರೆಗೆ ಹಲವು ವಿಧಾನಸಭಾ ಚುನಾವಣೆಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಗೆಲುವನ್ನು ಸಾಧಿಸಿವೆ. ಗೆದ್ದಿದ್ದ ಕ್ಷೇತ್ರಗಳನ್ನು ನಿರಂತರವಾಗಿ ಉಳಿಸಿಕೊಂಡಿರುವ ಅಥವಾ ನಿರ್ದಿಷ್ಟ ಕ್ಷೇತ್ರಗಳಲ್ಲಿ ವರ್ಗ ನೆಲೆಗಳನ್ನು ನಿರ್ಮಿಸಿರುವ ಉದಾಹರಣೆಗಳು ಹೆಚ್ಚಾಗಿ ಕಾಣುವುದಿಲ್ಲ. ಇವೆಲ್ಲವೂ ಸಂಘಟಿತ ನಾಯಕತ್ವದ (ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ) ಐಕ್ಯತೆಯ ಕೊರತೆಗಳೇ ಆಗಿವೆ.

ಕೋಲಾರ ಜಿಲ್ಲೆಯಲ್ಲಿ ಆರಂಭಿಕ ಕಾಲದಲ್ಲೇ ರೈತಸಂಘ ಮತ್ತು ಕಮ್ಯುನಿಸ್ಟ್ ಪಕ್ಷ ಎಂದು ನೆಟ್‌ವರ್ಕಿಂಗ್ ಮಾಡಿ ಸಂಯುಕ್ತ ರಂಗವನ್ನು ನಡೆಸಿರುವುದು ಗಮನಾರ್ಹ ವಿಚಾರ. ಪ್ರಧಾನಿ ನೆಹರೂ ಮತ್ತು ಇಂದಿರಾಗಾಂಧಿಯಂತಹ ಪ್ರಭಾವಿ ನಾಯಕರ ಹೆಸರಿನಲ್ಲಿ ಚುನಾವಣೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಸಡ್ಡು ಹೊಡೆದು ಮೂರ್‍ನಾಲ್ಕು ಜನ ಕಮ್ಯುನಿಸ್ಟರು ಸಂಯುಕ್ತ ರಂಗದಿಂದ ಗೆಲ್ಲುತ್ತಿದ್ದ ಅಂಶವನ್ನು ಕಮ್ಯುನಿಸ್ಟ್ ಪಕ್ಷದ ರಾಜ್ಯ ಮಟ್ಟದ ಸಮಿತಿ ಸರಿಯಾಗಿ ಅಂದಾಜು ಮಾಡಿದ ಹಾಗೆ ಕಾಣುವುದಿಲ್ಲ. ಇದೊಂದು ರಾಜ್ಯಕ್ಕೇ ಒಂದು ಮಾದರಿಯಾಗಿ ಬೆಳಸಬಹುದಾಗಿದ್ದ ಮತ್ತು ಕೇರಳದಲ್ಲಿ ಇಎಂಎಸ್ ನಂಬೂದಿರಿಪಾದರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಇಡಿಯಾಗಿ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತಿಸಿದ ಅನುಭವಗಳನ್ನು ಇಲ್ಲಿ ಅನ್ವಯಿಸುವ ಸಾಧ್ಯತೆಗಳ ಬಗ್ಗೆ ಇದುವರೆಗೂ ವಿಮರ್ಶೆ ಮಾಡಿರುವ ಬಗ್ಗೆ ಕಾಣುವುದಿಲ್ಲ. ಅದರಲ್ಲಿ ಮುಂಚೂಣಿಯಲ್ಲಿದ್ದ ಹೆಚ್.ಎಸ್. ರಾಮರಾವ್‌ರಂತಹವರನ್ನು ಸಿಪಿಐ(ಎಂ) ಪಕ್ಷ ಎಡ-ತೀವ್ರವಾದಿ ಲೈನಿನ ಕಾರಣಕ್ಕೆ ಹೊರಹಾಕಿದ್ದರಿಂದ ಈ ಸಾಧ್ಯತೆಗಳು ಇಲ್ಲವಾಗಿರಬಹುದು. ಏಕೆಂದರೆ ಅವರನ್ನು ಕೋಲಾರ ಜಿಲ್ಲೆಯ ಸಂಯುಕ್ತ ರಂಗದ ವ್ಯೂಹಾಕಾರರೆಂದು ಭಾವಿಸಲಾಗಿತ್ತು.

ಸಾಮಾಜಿಕ ಕ್ರಾಂತಿಯನ್ನು ಸಂಘಟಿಸುವ ಹೊಣೆಗಾರಿಕೆಯ ಭಾಗವಾಗಿರುವ ಕಮ್ಯುನಿಸ್ಟ್ ಪಕ್ಷಗಳ ನಾಯಕತ್ವವು ಹೆಚ್ಚಿನ ಸಂದರ್ಭಗಳಲ್ಲಿ ಸಮೂಹ ಸಂಘಟನೆಗಳ ನಾಯಕತ್ವಕ್ಕಿಂತ ಮೇಲೇರದ ಪರಿಸ್ಥಿತಿಗಳನ್ನೂ ಕಾಣಬಹುದು. ಕಾರ್ಮಿಕ ಸಂಘಗಳ ನಾಯಕತ್ವದಲ್ಲೇ ದೀರ್ಘ ಕಾಲ ಉಳಿಯುವುದು, ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಜವಾಬ್ದಾರಿಯನ್ನು ಮರೆಯುವುದು ಈ ದೌರ್ಬಲ್ಯಗಳಲ್ಲಿ ಒಂದಾಗಿದೆ. ಇದರಿಂದಾಗಿ ಹೊಸಬರನ್ನು ನಾಯಕತ್ವದಲ್ಲಿ ತರಬೇತಿಗೊಳಿಸಲು ನಿರಾಕರಿಸುವ ಮತ್ತು ಆ ಮೂಲಕ ಮೂಲ ಉದ್ದೇಶಗಳನ್ನು ಮರೆಯುವ ಉದಾಹರಣೆಗಳು ನಾಯಕತ್ವ ಪಾತ್ರವನ್ನು ನಿರ್ವಹಿಸುವಲ್ಲಿನ ಕೊರತೆಯನ್ನು ತೋರಿಸುತ್ತದೆ. ಎಂ.ಎನ್.ಉಗ್ರಪ್ಪನವರು ಹೇಳುವ ಹಾಗೆ 1948–1951 ರ ಅವಧಿಯಲ್ಲಿ ಜೈಲುವಾಸವನ್ನು ಅನುಭವಿಸಿ ವಾಪಸ್ ಬಂದ ಹಲವಾರು ಹಿರಿಯ ಕಮ್ಯುನಿಸ್ಟರು ತಮ್ಮ ಜೀವನ ನಿರ್ವಹಣೆ ಸಮಸ್ಯೆಗಳ ಕಾರಣದಿಂದ ಕಮ್ಯುನಿಸ್ಟ್ ಪಕ್ಷದಿಂದ ದೂರ ಸರಿದರು. ಇದಕ್ಕೆ ಕಾರಣ ಹಣಕಾಸಿನ ಕೊರತೆ. ಇದರಿಂದಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ಕಾರ್ಯಕರ್ತರ ಕೊರತೆ ಕಾಡುತ್ತಿತ್ತು. ಕಾರ್ಯಕರ್ತರು ಬರುವಾಗ ಅವರ ಸಾಮರ್ಥ್ಯವನ್ನು ಅಂದಾಜು ಮಾಡುವ ಮತ್ತು ನಿಭಾಯಿಸುವ ಸಾಮರ್ಥ್ಯ ಪಕ್ಷಕ್ಕೆ ಮತ್ತು ನಾಯಕತ್ವಕ್ಕೆ ಇಲ್ಲದಿದ್ದರಿಂದ ಕಮ್ಯುನಿಸ್ಟ್ ಪಕ್ಷದ ಕ್ರಮಬದ್ಧ ಬೆಳವಣಿಗೆ ಆಗಲಿಲ್ಲ.

ಕಾಂಗ್ರೆಸ್‌ಗೆ ಪರ್ಯಾಯವಾದ ಮತ್ತೊಂದು ಬಂಡವಾಳಶಾಹಿ ಪಕ್ಷವಾಗಿ 1978ರಲ್ಲಿ ಜನತಾ ಪಾರ್ಟಿ ಬರುವವರೆಗೂ, ಕೋಲಾರ ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾದ ಪಕ್ಷವೆಂದರೆ ಕಮ್ಯುನಿಸ್ಟ್ ಪಕ್ಷವಾಗಿತ್ತು. ಆದರೆ ಜನರಲ್ಲಿದ್ದ ಕಮ್ಯುನಿಸ್ಟ್ ಪಕ್ಷದ ಪರವಾದ ಒಲವನ್ನು ಸಂಘಟನಾತ್ಮಕವಾಗಿ ಕ್ರೋಢೀಕರಿಸಿಕೊಳ್ಳದೇ ಹೋದದ್ದು ಕಮ್ಯುನಿಸ್ಟ್ ಪಕ್ಷದ ಗಂಭೀರವಾದ ಬಲಹೀನತೆಯಾಗಿದೆ.ಈ ಬಲಹೀನತೆ ಕಮ್ಯುನಿಸ್ಟ್ ಪಕ್ಷಗಳ ಜಿಲ್ಲಾ ನಾಯಕತ್ವದಲ್ಲಿ ಮಾತ್ರವಲ್ಲದೆ, ಪ್ರಧಾನವಾಗಿ ರಾಜ್ಯ ನಾಯಕತ್ವಕ್ಕೆ ಸಂಬಂಧಪಟ್ಟದ್ದಾಗಿದೆ. ಕಮ್ಯುನಿಸ್ಟ್ ಪಕ್ಷಗಳ ಜೊತೆಗಿದ್ದ ಕಾಂಗ್ರೆಸ್ ವಿರೋಧಿ ರಾಜಕೀಯ ಶಕ್ತಿಯಾಗಿದ್ದ ಜನಸಮೂಹ ಮತ್ತು ನಾಯಕರೂ ಸೇರಿದಂತೆ, ಜನತಾ ಪಾರ್ಟಿ ಎಂಬ ಪರ್ಯಾಯ ರಾಜಕೀಯ ಶಕ್ತಿ ಬೆಳೆದು ಬಂದಾಗ, ಕಮ್ಯುನಿಸ್ಟ್ ಪಕ್ಷ ಬಿಟ್ಟು ಹೋಗಿರುವುದನ್ನು ಕಾಣಬಹುದು. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ವಿರೋಧಿ ರಾಜಕೀಯ ಧೃವೀಕರಣವನ್ನು ಮಾಡುವ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಭೂಮಾಲಕ ಬಂಡವಾಳಶಾಹಿ ರಾಜಕೀಯ ಪಕ್ಷಗಳೊಂದಿಗೆ ಸಂಬಂಧ ಹೇಗಿರಬೇಕು, ಚಟುವಟಿಕೆಗಳಲ್ಲಿ ಯಾವ ರೀತಿಯ ಅಂತರವನ್ನು ಕಾಯ್ದುಕೊಳ್ಳಬೇಕೆಂಬ ಬಗ್ಗೆ ನಾಯಕತ್ವಕ್ಕೂ ಸೇರಿದಂತೆ ಸರಿಯಾದ ಅಂದಾಜು ಇರಲಿಲ್ಲ. ಈ ರೀತಿಯ ಅಸ್ಪಷ್ಟತೆ ಇದ್ದದ್ದರಿಂದ 1979ರ ಲೋಕಸಭಾ ಚುನಾವಣೆ, 1983, 1985 ಮತ್ತು 1989ರ ವಿಧಾನಸಭಾ ಚುನಾವಣೆಗಳು ಮುಗಿಯುವಷ್ಟರಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಂಬಲಿಗರಾಗಿ ಹಳ್ಳಿಗಳಲ್ಲಿದ್ದ ಬಹುತೇಕ ಜನ ಮತ್ತು ಹೆಚ್ಚಿನ ಸಂಖ್ಯೆಯ ಮುಖಂಡರು ಕಮ್ಯುನಿಸ್ಟ್ ಪಕ್ಷ ತೊರೆದು ಜನತಾ ಪಕ್ಷಕ್ಕೆ ಹೋದರು. ಈ ಪ್ರಕ್ರಿಯೆಯಲ್ಲಿ ಹಲವಾರು ಮುಖಂಡರು ಕಾಂಗ್ರೆಸ್‌ಗೂ ಸೇರ್ಪಡೆಯಾದರು. ಇದು ಕಮ್ಯುನಿಸ್ಟ್ ಪಕ್ಷಗಳ ರಾಜಕೀಯ ಮತ್ತು ಸಂಘಟನಾತ್ಮಕ ಬಲಹೀನತೆಯಿಂದ ಸಂಭವಿಸಿದ್ದು ಎಂಬುದನ್ನು ಗಮನಿಸಬೇಕು.

ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಗೆ ಇಂತಹ ಮಿತಿಗಳಿದ್ದಾಗಲೂ ಅದೊಂದು ಅಪಾರ ತ್ಯಾಗ ಮತ್ತು ಬಲಿದಾನಗಳನ್ನು ಒಳಗೊಂಡಿರುವ ಚಳುವಳಿಯಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಿರುವ ಹಾಗೆ ವಸ್ತುನಿಷ್ಠ

ಪರಿಸ್ಥಿತಿಯನ್ನು ಅಂದಾಜು ಮಾಡುವುದರಲ್ಲೇ ಕಮ್ಯುನಿಸ್ಟ್ ಪಕ್ಷಗಳು ಬಹಳ ಕಾಲ ಕಳೆದುಬಿಟ್ಟಿವೆ. ಹಾಗೆಂದು ಈಗಲೂ ಅದು ಸಂಪೂರ್ಣವಾಗಿ ನಿವಾರಣೆಯಾಗಿದೆ ಎನ್ನುವಂತಿಲ್ಲ. ಆದರೆ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳ ನಡುವಿನ ಕಾರ್ಯಕ್ರಮದ ನಡುವಿನ ಅಂತರ ಬಹುತೇಕ ಕಡಿಮೆಯಾಗಿದೆ. ಇದರ ಜೊತೆಯಲ್ಲಿ ಅಸ್ತಿತ್ವದಲ್ಲಿರುವ ಸನ್ನಿವೇಶಕ್ಕೆ ಪೂರಕವಾದ ಸಂಘಟನಾ (ಸಬ್ಜೆಕ್ಟೀವ್) ಸಿದ್ಧತೆಯನ್ನು ಕಮ್ಯುನಿಸ್ಟ್ ಪಕ್ಷಗಳು ಹೊಂದಿಲ್ಲ ಎಂಬುದು ಒಟ್ಟು ಅಧ್ಯಯನದಲ್ಲಿ ಎದ್ದು ಕಾಣುವ ಅಂಶವಾಗಿದೆ. ಇವುಗಳನ್ನು ಪರಿಹರಿಸಿಕೊಳ್ಳುವ ಸಾಧ್ಯತೆ ಹೇಗೆಂಬುದು ಕಮ್ಯುನಿಸ್ಟ್ ಪಕ್ಷಗಳ ಮುಂದಿರುವ ಪ್ರಶ್ನೆಯಾಗಿದೆ.

ಕಮ್ಯುನಿಸ್ಟ್ ಚಳುವಳಿಯು ರಾಜಕೀಯವಾಗಿ ಕರ್ನಾಟಕದ ಜನತೆಯ ಚಿಂತನೆಯ ಭಾಗವಾಗಿ ಬೆಳೆಯಲಿಲ್ಲ, ಅಂದರೆ, ಗ್ರಾಂಷಿ ಹೇಳುವ ಹಾಗೆ ಕಮ್ಯುನಿಸ್ಟ್ ಪಕ್ಷಗಳು ಜನರ 'ಕಾಮನ್‌ಸೆನ್ಸ್' ಆಗಲಿಲ್ಲ ಎಂಬುದನ್ನು ಗುರುತಿಸುವಾಗಲೇ, ಅದು ಕರ್ನಾಟಕದ ಸಮಾಜದ ಮೇಲೆ ಉಂಟು ಮಾಡಿರುವ ಪ್ರಬಲವಾದ ಕೆಲವು ಪರಿಣಾಮಗಳನ್ನು ಕಡೆಗಣಿಸುವಂತಿಲ್ಲ. ಉದಾಹರಣೆಗೆ, ಕಾರ್ಮಿಕ ಹೋರಾಟಗಳು: ರಾಜ್ಯದಲ್ಲಿ ವಿವಿಧ ವಿಭಾಗದ ಕಾರ್ಮಿಕ ಹೋರಾಟಗಳನ್ನು ವಿವಿಧ ರಾಜಕೀಯ ಗುಂಪುಗಳು ನಡೆಸುತ್ತವೆ. ಅವು ಕೇವಲ ಕಮ್ಯುನಿಸ್ಟರ ಹೋರಾಟಗಳಾಗದೇ, ಕಮ್ಯುನಿಸ್ಟೇತರರೂ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಅಂಶವನ್ನು ಇದರಲ್ಲಿ ಕಾಣಬಹುದು. ಇತ್ತೀಚೆಗೆ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಇದಕ್ಕೊಂದು ನಿದರ್ಶನ. ಕಾರ್ಮಿಕ ಹೋರಾಟಗಳಿಗೆ ಒಂದು ಸಾಮಾಜಿಕ ಸ್ಥಾನಮಾನ ಬರಲು ಕಮ್ಯುನಿಸ್ಟರೇ ಕಾರಣರಾಗಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಅದೇ ರೀತಿ 'ಜಾತ್ಯತೀತತೆ'ಯೆಂಬ ತಾತ್ವಿಕತೆಯು ಸಂವಿಧಾನದ ಪ್ರಬಲ ಅಸ್ತ್ರವಾಗಿ ಇಂದು ಬಳಕೆಯಾಗುತ್ತಿದ್ದರೆ ಅದರಲ್ಲಿ ಕಮ್ಯುನಿಸ್ಟರ ಪ್ರಮುಖ ಪಾತ್ರವಿದೆ. 'ರಾಜಕಾರಣದಲ್ಲಿ ಮತಧರ್ಮಗಳನ್ನು ಮಿಶ್ರಣ ಮಾಡಬಾರದು' ಎಂಬುದನ್ನು ಜಾತ್ಯತೀತತೆಯ ತಾತ್ವಿಕತೆಯಾಗಿ ಕಮ್ಯುನಿಸ್ಟ್ ಪಕ್ಷಗಳು ಪ್ರತಿಪಾದಿಸಿದರೆ, ಬಲಪಂಥೀಯ ಪಕ್ಷಗಳನ್ನು ಹೊರತುಪಡಿಸಿ, ಉಳಿದ ಪಕ್ಷಗಳು 'ಸರ್ವಧರ್ಮ ಸಮಭಾವ'ವೇ ಜಾತ್ಯತೀತತೆಯೆಂದು ಪ್ರತಿಪಾದಿಸುತ್ತವೆ. ಕಮ್ಯುನಿಸ್ಟ್ ಪಕ್ಷಗಳು ಜನರ 'ಕಾಮನ್‌ಸೆನ್ಸ್' ಆಗಿಲ್ಲದಿದ್ದರೂ, ಈ ರೀತಿಯಾಗಿ ಅವು ಸೃಷ್ಟಿಸಿರುವ ತಾತ್ವಿಕತೆಗಳು ಭಾರತದ ಮತ್ತು ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ನಿರಾಕರಿಸಲಾಗದ ತಾತ್ವಿಕತೆಗಳಾಗಿ ನಿಂತಿವೆ. ಮಾನವ ಘನತೆ, ಗೌರವ, ಸಮಾನತೆ, ಸಹಬಾಳ್ವೆ, ಸಂಪನ್ಮೂಲಗಳ ಹಂಚಿಕೆ ಮುಂತಾದ ಎಲ್ಲಾ ವಿಚಾರಗಳಲ್ಲಿ ಕಮ್ಯುನಿಸಂ ಅಥವಾ ಕಮ್ಯುನಿಸ್ಟ್ ಪಕ್ಷಗಳು ಸೃಷ್ಟಿಸಿರುವ ನುಡಿ–ವಿಚಾರಗಳು, ಮಾದರಿಗಳು, ತಾತ್ವಿಕ ಚೌಕಟ್ಟುಗಳು ಕರ್ನಾಟಕ ಮತ್ತು ಭಾರತದ ಭವಿಷ್ಯದ ದೃಷ್ಟಿಯಲ್ಲಿ ಒಳ್ಳೆಯದೆಂದು ಕಮ್ಯುನಿಸ್ಟರು ಭಾವಿಸಿದ್ದಾರೆ. ಆದರೆ ವಾಸ್ತವ ಜಗತ್ತಿನ ರಾಜಕೀಯ ಮೇಲಾಟಗಳು ಹಾಗೂ ಸೈದ್ಧಾಂತಿಕ ನಿಲುವುಗಳಲ್ಲಾಗುತ್ತಿರುವ ಸಂಘರ್ಷಗಳ ಹಿನ್ನೆಲೆಯಲ್ಲಿ ಮೇಲ್ಕಂಡ ತಾತ್ವಿಕ ಚೌಕಟ್ಟುಗಳನ್ನು ಕಮ್ಯುನಿಸ್ಟರು ಅನುಷ್ಠಾನಕ್ಕೆ ತರುವ ಸಾಧ್ಯತೆಗಳು ಪ್ರಶ್ನಾರ್ಹವಾಗಿಯೇ ಉಳಿಯುವ ಸಂದರ್ಭಗಳನ್ನು ತಳ್ಳಿಹಾಕುವಂತಿಲ್ಲ.

❖ ❖ ❖

ಟಿಪ್ಪಣಿಗಳು

1. ತೀವ್ರವಾದ ಕ್ರಾಂತಿಕಾರಿಗಳಾಗಿದ್ದ ಪ್ಯಾರಿಸಿನ ಕಾರ್ಮಿಕ ವರ್ಗ 1871 ಮಾರ್ಚ್ 28 ರಿಂದ ಮೇ 28 ರವರೆಗೆ ಪ್ಯಾರಿಸ್ ನಗರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ನಡೆಸಿದ ಸರ್ಕಾರವನ್ನು 'ಪ್ಯಾರಿಸ್ ಕಮ್ಯೂನ್' ಎನ್ನಲಾಗಿದೆ. 17 ಮತ್ತು 18 ನೇ ಶತಮಾನಗಳ ಫ್ರೆಂಚ್ ಕ್ರಾಂತಿಗಳ ಸಾಲಿನಲ್ಲಿ ಇದು ಸೈದ್ಧಾಂತಿಕವಾಗಿ ಮಹತ್ವವನ್ನು ಪಡೆದ ಕಾರ್ಮಿಕ ವರ್ಗದ ಕ್ರಾಂತಿಯಾಗಿತ್ತು. ಮಾರ್ಕ್ಸ್ ಮತ್ತು ಏಂಗೆಲ್ಸ್‌ರವರು ಇದರ ಅನುಭವವನ್ನು ಕಾರ್ಮಿಕ ವರ್ಗದ ಪ್ರಭುತ್ವಗಳ ಕುರಿತ ಬರವಣಿಗೆಗಳಲ್ಲಿ ಉಪಯೋಗಿಸಿದರು.

2. ಪ್ರಜಾಸತ್ತಾತ್ಮಕ ಕೇಂದ್ರವಾದವೆಂದರೆ, ಪ್ರಜಾಪ್ರಭುತ್ವ ಕಾರ್ಯಾಚರಣೆ ವ್ಯಾಪಕವಾಗಿರುವ ಅದೇ ಸಂದರ್ಭದಲ್ಲಿ ಕೇಂದ್ರೀಯ ನಾಯಕತ್ವವಿರುವ ಒಂದು ವಿಧಾನ. ತೀರ್ಮಾನಗಳು ಬಹುಮತ/ಸರ್ವಾನುಮತ ಆಧಾರದಲ್ಲಿ ಆಗುವ ಮುಂಚೆ ಚರ್ಚೆಗಳನ್ನು ವ್ಯಾಪಕವಾಗಿ ಸಂಘಟಿಸುವ ಮತ್ತು ತೀರ್ಮಾನದ ನಂತರ ಎಲ್ಲರೂ ಅದಕ್ಕೆ ಬದ್ಧರಾಗಿರಬೇಕಾದ ಸಂಘಟನಾ ವಿಧಾನ. ಸದಸ್ಯರ ಅಭಿಪ್ರಾಯಗಳ ಆಧಾರದಲ್ಲಿ ಮಾಡಿದ ತೀರ್ಮಾನಗಳನ್ನು ಮೇಲಿನಿಂದ ಕೆಳಗಿನವರೆಗೆ ವರದಿ ಮಾಡುವ ಮತ್ತು ಸದಸ್ಯರ ಅಭಿಪ್ರಾಯ ಮತ್ತು ಅನುಭಗಳನ್ನು ಕೆಳಗಿನಿಂದ ಮೇಲಕ್ಕೆ ವರದಿ ಮಾಡುವ ಪದ್ಧತಿ.

❖ ❖ ❖

ಪರಾಮರ್ಶನ

ಪ್ರಾಥಮಿಕ ಆಕರಗಳು

ಅ) ಪತ್ರಾಗಾರ ಸಂಗ್ರಹ

1. ಪೊಲಿಟಿಕಲ್ ಫೈಲ್ಸ್ 1942–44, 1951, ಎನ್ಎಐ, ನವದೆಹಲಿ
2. ಕನ್ಫಿಡೆನ್ಶಿಯಲ್ ಫೈಲ್ಸ್, 1937–1939, 1940–1941, 1942, ಕೆಎಸ್ಎ, ಬೆಂಗಳೂರು
3. ಸ್ಪೆಷಲ್ ಬ್ರಾಂಚ್ ಫೈಲ್ಸ್, 1941–42, ಕೆಎಸ್ಎ, ಬೆಂಗಳೂರು
4. ಎನ್.ಡಿ.ಶಂಕರ್ ಪ್ರೈವೇಟ್ ಪೇಪರ್ಸ್, ಕೆಎಸ್ಎ, ಬೆಂಗಳೂರು
5. ಫೋರ್ಟ್‌ನೈಟ್‌ಲೀ ರಿಪೋರ್ಟ್ಸ್ 1939, 1944, 1945, ಸಿಆರ್ಆರ್, ಕೆಎಸ್ಎ, ಬೆಂಗಳೂರು
6. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಫಾರ್ ದಿ ಇಯರ್ಸ್ 1935–36, 1941–42, 1954, 1955,ಕೆಎಸ್ಎ, ಬೆಂಗಳೂರು
7. ಮೈಕ್ರೋಫಿಲ್ಮ್ ರೋಲ್ ನಂ. 79(6), 1950, ಕೆಎಸ್ಎ, ಬೆಂಗಳೂರು: ಮೈಕ್ರೋಫಿಲ್ಮ್ ರೋಲ್ ನಂ.125, ಸಂಪುಟ 5, 1952, ಕೆಎಸ್ಎ, ಬೆಂಗಳೂರು.
8. ಆಲ್ ಇಂಡಿಯಾ ಕಿಸಾನ್ ಸಭಾ ಡಾಕ್ಯುಮೆಂಟ್ಸ್, 1942–44, 1945, 1954, 1956.

ಆ) ಸುದ್ದಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು

ಕನ್ನಡ ಪತ್ರಿಕೆಗಳು

1. ಕೊಡಗು ಸಮಾಚಾರ, ಕೊಡಗು
2. ಪ್ರಜಾವಾಣಿ, ದಿ ಪ್ರಿಂಟರ್ಸ್ (ಮೈ) ಲಿ., ಬೆಂಗಳೂರು
3. ಸಂಯುಕ್ತ ಕರ್ನಾಟಕ, ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ
4. ಅರುಣ ವಾರಪತ್ರಿಕೆ, ಸಿಪಿಐ ಪ್ರಕಟಣೆ, ಮಂಗಳೂರು
5. ಕೆಂಬಾವುಟ ವಾರಪತ್ರಿಕೆ, ಸಿಪಿಐ ವಾರಪತ್ರಿಕೆ, ಬೆಂಗಳೂರು
6. ಜನಶಕ್ತಿ ವಾರಪತ್ರಿಕೆ, ಸಿಪಿಐ(ಎಂ) ಪ್ರಕಟಣೆ, ಬೆಂಗಳೂರು
7. ಸಾಧ್ವಿ ದಿನ ಪತ್ರಿಕೆ, ಮೈಸೂರು
8. ಕಾನಡಾ ವೃತ್ತ, ಕಾರವಾರ

ಇಂಗ್ಲಿಷ್ ಪತ್ರಿಕೆಗಳು

1. ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಮೀಕ್ಷಾ ಟ್ರಸ್ಟ್, ಬಾಂಬೆ.
2. ಸೋಷಿಯಲ್ ಸೈಂಟಿಸ್ಟ್, ಇಂಡಿಯನ್ ಸ್ಕೂಲ್ ಆಫ್ ಸೋಷಿಯಲ್ ಸೈನ್ಸಸ್ ಮತ್ತು ತುಲಿಕಾ ಬುಕ್ಸ್, ನ್ಯೂಡೆಲ್ಲಿ.
3. ಪೀಪಲ್ಸ್ ಏಜ್ ವೀಕ್ಲಿ, ಅವಿಭಜಿತ ಸಿಪಿಐ ಆಂಗ್ಲ ವಾರಪತ್ರಿಕೆ, ನವದೆಹಲಿ.
4. ಪೀಪಲ್ಸ್ ವಾರ್ ವೀಕ್ಲಿ, ಅವಿಭಜಿತ ಸಿಪಿಐ ಆಂಗ್ಲ ವಾರಪತ್ರಿಕೆ, ನವದೆಹಲಿ.
5. ನ್ಯೂ ಏಜ್ ವೀಕ್ಲಿ, ಸಿಪಿಐ ಆಂಗ್ಲ ವಾರಪತ್ರಿಕೆ, ನವದೆಹಲಿ.
6. ಪೀಪಲ್ಸ್ ಡೆಮಾಕ್ರಸಿ, ಸಿಪಿಐ(ಎಂ) ಆಂಗ್ಲ ವಾರಪತ್ರಿಕೆ, ನವದೆಹಲಿ.
7. ಮೈನ್‌ಸ್ಟ್ರೀಮ್, ಪರ್‌ಸ್ಪೆಕ್ಟಿವ್ ಪಬ್ಲಿಕೇಷನ್ಸ್, ನವದೆಹಲಿ.
8. ಮಾರ್ಕ್ಸಿಸ್ಟ್ ತ್ರೈಮಾಸಿಕ, ಸಿಪಿಐ(ಎಂ) ಪ್ರಕಟಣೆ, ನವದೆಹಲಿ.
9. ದಿ ಹಿಂದೂ ಡೈಲಿ, ದಿ ಕಸ್ತೂರಿ ಅಂಡ್ ಸನ್ಸ್ (ಪ್ರೈ) ಲಿ., ಚೆನ್ನೈ.
10. ಡೆಕ್ಕನ್ ಹೆರಾಲ್ಡ್, ದಿ ಪ್ರಿಂಟರ್ಸ್ (ಮೈ) ಲಿ., ಬೆಂಗಳೂರು.

ಇ) ರಾಜಕೀಯ ಕಾರ್ಯಕರ್ತರು ಮತ್ತು ಪಕ್ಷಗಳ ಮುಖಂಡರ ಸಂದರ್ಶನಗಳು

1. ಕೆ.ಆರ್.ಶ್ರೀಯಾನ್, 5–5–2014 ರಂದು ಮಂಗಳೂರಿನ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.
2. ಚಂದ್ರನ್, ಸೆಲ್ವಪಿಳ್ಳೆ, ಆನಂದನ್– 26–6–2014 ರಂದು ಕೆಜಿಎಫ್‌ನ ಇವರ ಮನೆಗಳಲ್ಲಿ ನಡೆಸಿದ ಸಂದರ್ಶನ.
3. ಜಿ.ಎಸ್.ನಾಗರಾಜ, 28–9–2014 ರಂದು ಅವರ ಶಿವಮೊಗ್ಗದ ಮನೆಯಲ್ಲಿ ನಡೆಸಿದ ಸಂದರ್ಶನ.
4. ಕೆ.ಎಂ.ಶ್ರೀನಿವಾಸ್, 29–9–2014 ರಂದು ಅವರ ಶಿವಮೊಗ್ಗದ ಮನೆಯಲ್ಲಿ ನಡೆಸಿದ ಸಂದರ್ಶನ.
5. ವಾಮನ ಭಟ್, 29–9–2014 ರಂದು ಅವರ ಶಿವಮೊಗ್ಗದ ಮನೆಯಲ್ಲಿ ನಡೆಸಿದ ಸಂದರ್ಶನ.
6. ಕಡಿದಾಳ್ ದಯಾನಂದ, 29–10–2014 ರಂದು ತೀರ್ಥಹಳ್ಳಿಯಲ್ಲಿ ನಡೆಸಿದ ಸಂದರ್ಶನ.
7. ಮಹಮದ್ ದಸ್ತಗೀರ್, 26–11–2014 ರಂದು ಅವರ ತುಮಕೂರಿನ ಮನೆಯಲ್ಲಿ ನಡೆಸಿದ ಸಂದರ್ಶನ.
8. ಡಾ.ರಾಮಚಂದ್ರಗೌಡ, 11–1–2015 ರಂದು ಬೆಂಗಳೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.
9. ಜಿ.ಸಿ.ಬಯ್ಯಾರೆಡ್ಡಿ, 27–2–2015 ರಂದು ಬೆಂಗಳೂರಿನ ಸಿಪಿಐ(ಎಂ) ಕಛೇರಿಯಲ್ಲಿ ನಡೆಸಿದ ಸಂದರ್ಶನ.
10. ಎಸ್.ಲಕ್ಷ್ಮಯ್ಯ, 20–4–2015 ರಂದು ಚಿಕ್ಕಬಳ್ಳಾಪುರದ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.
11. ಟಿ.ಪಿ.ರಮೇಶ್, 2–5–2015 ರಂದು ಮಡಿಕೇರಿಯ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.
12. ಎಂ.ಎ.ಇಬ್ರಾಹಿಂ, 2–5–2015 ರಂದು ವಿರಾಜಪೇಟೆಯ ಕಮ್ಯುನಿಸ್ಟ್ ಪಕ್ಷದ ಕಛೇರಿಯಲ್ಲಿ ನಡೆಸಿದ ಸಂದರ್ಶನ.

13. ಪಿ.ಶ್ರೀಧರನ್, 2–5–2015 ರಂದು ವಿರಾಜಪೇಟೆಯ ಕಮ್ಯುನಿಸ್ಟ್ ಪಕ್ಷದ ಕಛೇರಿಯಲ್ಲಿ ನಡೆಸಿದ ಸಂದರ್ಶನ.

14. ಸಿ.ನಾರಾಯಣ, 24–5–2015 ರಂದು ಕುಂದಾಪುರದ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

15. ಟಿ.ಎಸ್.ಕೋಟ್ಯಾನ್, 24–5–2015 ರಂದು ಕುಂದಾಪುರದ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

16. ಅಬ್ದುಲ್ ಲತೀಫ್, 1–6–2015 ರಂದು ವಿರಾಜಪೇಟೆಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

17. ನಂಜುಂಡಸ್ವಾಮಿ, 2–6–2015 ರಂದು ಮೈಸೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

18. ತಿರುಮಲಾಚಾರ್, 2–6–2015 ರಂದು ಮೈಸೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

19. ಸನತ್‌ಕುಮಾರ್ ಬೆಳಗಲಿ, 10–7–2015 ರಂದು ಬೆಂಗಳೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

20. ಇಕೆಎನ್ ರಾಜನ್, 10–12–2015 ರಂದು ಬೆಂಗಳೂರಿನ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.

21. ಕಪ್ಪಣ್ಣನವರ್, 22–10–2015 ರಂದು ಸವದತ್ತಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

22. ಕೃಷ್ಣ ಮೆಣಸೆ, 22–10–2015 ರಂದು ಬೆಳಗಾವಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

23. ವಿ.ಪಿ.ಕುಲಕರ್ಣಿ, 23–10–2015 ರಂದು ರಾಮದುರ್ಗದ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

24. ಭೀಮಸಿ ಕಲಾದಗಿ, 23–10–2015 ರಂದು ಬಿಜಾಪುರದ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.

25. ಪ್ರಕಾಶ್ ಹಿಟ್ನಳ್ಳಿ, 23–10–2015 ರಂದು ಬಿಜಾಪುರದಲ್ಲಿ ನಡೆಸಿದ ಸಂದರ್ಶನ.

26. ವಿ.ಜೆ.ಕೆ.ನಾಯರ್, 4–11–2015 ರಂದು ಬೆಂಗಳೂರಿನ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.

27. ಆರ್.ಕೋದಂಡರಾಮ್, 4–3–2016 ರಂದು ಬೆಂಗಳೂರಿನ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.

28. ಎಸ್.ವೈ.ಗುರುಶಾಂತ್, 15–7–2016 ರಂದು ಬೆಂಗಳೂರಿನ ಅವರ ಕಛೇರಿಯಲ್ಲಿ ನಡೆಸಿದ ಸಂದರ್ಶನ.

29. ಲಕ್ಷ್ಮಣ ರೆಡ್ಡಿ, 7–3–2017 ರಂದು ಚಿಂತಾಮಣಿಯ ಶ್ರೀನಿವಾಸರೆಡ್ಡಿಯವರ ಮನೆಯಲ್ಲಿ ನಡೆಸಿದ ಸಂದರ್ಶನ.

30. ಶ್ರೀನಿವಾಸ ರೆಡ್ಡಿ, 7–3–2017 ರಂದು ಚಿಂತಾಮಣಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

31. ಕೆ.ಎಂ.ವೆಂಕಟೇಶ್, 7–3–2017 ರಂದು ಶಿಡ್ಲಘಟ್ಟದ ಕುಂದಲಗುರ್ಕಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

32. ಕೆಂಪಣ್ಣ, 7–3–2017 ರಂದು ಶಿಡ್ಲಘಟ್ಟದ ಮಳ್ಳೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

33. ವಿ.ಎನ್.ಹಳಕಟ್ಟಿ, 9–2–2017 ರಂದು ಬೆಂಗಳೂರಿನ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

34. ನಾಗಿರೆಡ್ಡಿ, 8–4–2017 ರಂದು ಮುಳಬಾಗಿಲು ಅಬ್ಬಣಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ.

ಅನುಷಂಗಿಕ ಆಕರಗಳು

ಅ) ಪುಸ್ತಕಗಳು

1. ಅಧಿಕಾರಿ ಜಿ., (ಸಂ), 1982 (1974), *ಡಾಕ್ಯುಮೆಂಟ್ಸ್ ಆಫ್ ದಿ ಹಿಸ್ಟರಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ*, ಸಂಪುಟ 1 ಮತ್ತು 2, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.
2. ಐಜಾಸ್ ಅಹಮದ್, 2014, *ಆಧುನಿಕೋತ್ತರವಾದ ನಿಮಗೆ ತಿಳಿದಿರಲಿ*, (ಅನು: ಪ್ರಕಾಶ್ ಕೆ.), ಚಿಂತನ ಪ್ರಕಾಶನ, ಬೆಂಗಳೂರು.
3. ಆನಂದ ಮೆಣಸೆ, 2012, *ಗೋವಾ ಮುಕ್ತಿ ಸಂಗ್ರಾಮದಲ್ಲಿ ಕಮ್ಯುನಿಸ್ಟರ ಯೋಗದಾನ*, ಪೂಜಾ ಪಬ್ಲಿಷರ್, ಬೆಳಗಾವಿ
4. ಬರ್ಧನ್ ಎ.ಬಿ., 1997, *ಔಟ್‌ಲೈನ್ ಹಿಸ್ಟರಿ ಆಫ್ ಅಲ್ ಇಂಡಿಯ ಟ್ರೇಡ್ ಯೂನಿಯನ್ ಕಾಂಗ್ರೆಸ್*, ಎಐಟಿಯುಸಿ, ನ್ಯೂಡೆಲ್ಲಿ.
5. ಬಾಲಕೃಷ್ಣ ಆರ್., 1940, *ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಇನ್ ಮೈಸೂರು*, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಬಾಂಬೆ.
6. ಬಾಲಸೂರಿ ಹೆಚ್.ಕೆ., 2005, *ಎಂ.ಎಸ್.ಕೃಷ್ಣನ್*, ಕರ್ನಾಟಕ ವಿಧಾನ ಮಂಡಳದ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು.
7. ಬಿಪನ್ ಚಂದ್ರ, 1974, *ಮಾರ್ಕ್ಸಿಸಂ ಇನ್ ಇಂಡಿಯಾ: ನೀಡ್ ಫಾರ್ ಟೋಟಲ್ ರೆಕ್ಟಿಫಿಕೇಷನ್, ಐಡಿಯಾಲಜಿ ಅಂಡ್ ಪೊಲಿಟಿಕ್ಸ್* ಇನ್ ಮಾಡರ್ನ್ ಇಂಡಿಯಾ, ಹರ್ ಆನಂದ್ ಪಬ್ಲಿಕೇಷನ್, ನ್ಯೂ ಡೆಲ್ಲಿ.
8. ಭೀಮಯ್ಯ ಎ.ಟಿ., 2009, *ಹುಬ್ಬಳ್ಳಿ ಹುಲಿ ಚಕ್ಕೆರ ಬಿ.ಮೊಣ್ಣಯ್ಯ*, ತೂಕ್‌ಬೊಳಕ್ ಪ್ರಕಾಶನ, ವಿರಾಜಪೇಟೆ.
9. ಚಂದ್ರ ಪೂಜಾರಿ ಎಂ., 2010, *ಯಾಕೀಗ ಭೂಮಿ ಪ್ರಶ್ನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
10. ಚಂದ್ರಶೇಖರ್ ಎಸ್., 1985, *ಡೈಮೆನ್ಷನ್ಸ್ ಆಫ್ ಸೋಷಿಯೋ–ಪೊಲಿಟಿಕಲ್ ಚೇಂಜ್* ಇನ್ ಮೈಸೂರು *1918–1940*. ಅಶಿಷ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ
11. ಗೌತಮ್ ಚಟ್ಟೋಪಾಧ್ಯಾಯ, 1970, *ಕಮ್ಯುನಿಸಂ ಅಂಡ್ ಬೆಂಗಾಲ್ಸ್ ಫ್ರೀಡಂ ಮೂವ್‌ಮೆಂಟ್*, ಸಂಪುಟ 1, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನವದೆಹಲಿ.
12. ಸಿಪಿಐ(ಎಂ), 1969, *ಸ್ಟಾಂಡ್ ಆನ್ ಐಡಿಯಾಲಾಜಿಕಲ್ ಇಶ್ಯೂಸ್*, ಕಲ್ಕತ್ತಾ.
13. ಡೇವಿಡ್ ಬಟ್ಲರ್, ಅಶೋಕ್ ಮೆಹ್ತಾ, ಪ್ರಣಯ್ ರಾಯ್, 1992, *ಇಂಡಿಯಾ ಡಿಸೈಡ್ಸ್; ಎಲೆಕ್ಷನ್ಸ್ 1952 ಟು 1992*, ಲಿವಿಂಗ್ ಮೀಡಿಯಾ ಲಿ., ನ್ಯೂ ಡೆಲ್ಲಿ.
14. ಧನಗೆರೆ ಡಿ.ಎನ್., 2012, *ಭಾರತದಲ್ಲಿ ರೈತ ಚಳುವಳಿಗಳು 1920–1950*, (ಅನು.: ರಾಮಚಂದ್ರ ಉಡುಪ, ಅನಂತಕೃಷ್ಣ ಹೆಬ್ಬಾರ, ಪ್ರದೀಪ್ ಶೆಟ್ಟಿ ಕೆ.), ಕ್ರಿಯಾ ಪ್ರಕಾಶನ, ಬೆಂಗಳೂರು.

15. *ಡಾಕ್ಯುಮೆಂಟ್ಸ್ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ 1917 ರಿಂದ 1996*, ಸಂ. I – XXV, 1998, ಪ್ರಧಾನ ಜ್ಯೋತಿಬಸು (ಪ್ರಧಾನ ಸಂಪಾದಕರು), ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

16. ಡಾಕ್ಯುಮೆಂಟ್ಸ್ ಆನ್ ಪಾರ್ಟಿ ಆರ್ಗನೈಸೇಷನ್ 1964–2009: ಎ ಕಲೆಕ್ಷನ್, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್), 2015, ನ್ಯಾಷನಲ್ ಬುಕ್ ಏಜೆನ್ಸಿ, ಕೊಲ್ಕತ್ತಾ.

17. ರಜನಿ ಪಾಮೆ ದತ್, ಕಾಂಗ್ರೆಸ್ ಸೋಷಿಯಲಿಸಂ: ಎ ಕಾಂಟ್ರಡಿಕ್ಷನ್ ಇನ್ ಟರ್ಮ್ಸ್, ಇನ್ ಡಾಕ್ಯುಮೆಂಟ್ಸ್ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ, 1997, ಸಂಪುಟ ಖಖಖ, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತ

18. ಟೆರಿ ಈಗಲ್‌ಟನ್, 2011, ವೈ ಮಾರ್ಕ್ಸ್ ವಾಸ್ ರೈಟ್, ಯಾಲೆ ಯೂನಿವರ್ಸಿಟಿ, ಲಂಡನ್.

19. ಇ.ಎಂ.ಎಸ್. ನಂಬೂದಿರಿಪ್ಪಾಡ್, 1993 (1986), ಹಿಸ್ಟರಿ ಆಫ್ ದಿ ಇಂಡಿಯನ್ ಫ್ರೀಡಂ ಸ್ಟ್ರಗಲ್, ಸೋಷಿಯಲ್ ಸೈಂಟಿಸ್ಟ್ ಪ್ರೆಸ್, ತ್ರಿವೇಂಡ್ರಮ್.

20. ಗಂಗಾಧರ್ ಕುಷ್ಟಗಿ, 2011, ಪ್ರಜಾಪ್ರಭುತ್ವದ ತಲ್ಲಣಗಳು, ಪ್ರೆಸ್ ಕ್ಲಬ್, ಬೆಂಗಳೂರು.

21. ಗೋಪಾಲರಾವ್ ಹೆಚ್.ಎಸ್., 1996, ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

22. ಗೋವಿಂದರಾಜು ಸಿ.ಆರ್., 2009, ಮೂವ್‌ಮೆಂಟ್ ಫಾರ್ ಯುನೈಟೆಡ್ ಕರ್ನಾಟಕ, ಕಲ್ಚರಲ್ ಡೈಮೆನ್ಶನ್ಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

23. ಪ್ರೇಮ್ ಸಾಗರ್ ಗುಪ್ತ, 1980, ಎ ಶಾರ್ಟ್ ಹಿಸ್ಟರಿ ಆಫ್ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ 1920–47, ಎಐಟಿಯುಸಿ, ನ್ಯೂ ಡೆಲ್ಲಿ.

24. ಹಿಸ್ಟರಿ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ, 2005, ಸಂಪುಟ 1, ಸಿಪಿಐ(ಎಂ)– ಲೆಫ್ಟ್‌ವರ್ಡ್ ಪಬ್ಲಿಕೇಷನ್ಸ್, ನವದೆಹಲಿ.

25. ಸೋಹನ್ ಸಿಂಗ್ ಜೋಷ್, 1978, ಹಿಂದೂಸ್ತಾನ್ ಗದರ್ ಪಾರ್ಟಿ: ಎ ಶಾರ್ಟ್ ಹಿಸ್ಟರಿ, ಸಂಪುಟ 2, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.

26. ಜಾನಕಿ ನಾಯರ್, 2016 (1998), ಮೈನರ್ಸ್ ಅಂಡ್ ಮಿಲ್ ಹ್ಯಾಂಡ್ಸ್, ವರ್ಕ್, ಕಲ್ಚರ್ ಅಂಡ್ ಪೊಲಿಟಿಕ್ಸ್ ಇನ್ ಪ್ರಿನ್ಸ್‌ಲಿ ಮೈಸೂರು, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

27. ಜ್ಞಾ ಡಿ.ಎನ್., (ಸಂ), 2012 (2011), ದಿ ಮೆನಿ ಕರೀರ್ಸ್ ಆಫ್ ಡಿ.ಡಿ.ಕೊಸಾಂಬಿ, ಲೆಫ್ಟ್‌ವರ್ಡ್, ನ್ಯೂ ಡೆಲ್ಲಿ

28. ಕಕ್ಕಿಲ್ಲಾಯ ಬಿ.ವಿ., 2003, ಬರೆಯದ ದಿನಚರಿಯ ಮರೆಯದ ಪುಟಗಳು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

29. ಸೂರ್ಯನಾಥ ಯು ಕಾಮತ್, (ಪ್ರಧಾನ ಸಂಪಾದಕರು), ಕರ್ನಾಟಕ ಸ್ಟೇಟ್ ಗೆಜೆಟಿಯರ್, ಗವರ್ನಮೆಂಟ್ ಆಫ್ ಕರ್ನಾಟಕ, ಉತ್ತರ ಕನ್ನಡ ಡಿಸ್ಟ್ರಿಕ್ಟ್.

30. ಕೃಷ್ಣರಾವ್ ಸಿ.ಆರ್., 2012, ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ನಾನು ಕಂಡಂತೆ, ಭಾರತ ಕಮ್ಯುನಿಸ್ಟ್ ಪಕ್ಷ, ಬೆಂಗಳೂರು.

31. ಲೆನಿನ್ ವಿ.ಐ., 1977, *ದಿ ಪ್ರಾಲಟೇರಿಯಟ್ ಅಂಡ್ ದಿ ಪೆಸೆಂಟ್ರಿ*, ಕಲೆಕ್ಟೆಡ್ ವರ್ಕ್ಸ್, ಸಂ. 10, ಪ್ರೋಗ್ರೆಸ್ ಪಬ್ಲಿಷರ್, ಮಾಸ್ಕೋ.

32. ಲೆನಿನ್ ವಿ.ಐ., 1977, *ಥೀಸೆಸ್ ಆನ್ ದಿ ನ್ಯಾಷನಲ್ ಕ್ವೆಶ್ಚನ್*, ಲೆನಿನ್ ಕಲೆಕ್ಟೆಡ್ ವರ್ಕ್ಸ್, ಸಂಪುಟ 19, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೋ.

33. ಮಹೇಂದ್ರ ಕೆ.ಎಲ್., 2005, *ಎ ಶಾರ್ಟ್ ಹಿಸ್ಟರಿ ಆಫ್ ಎಐಟಿಯುಸಿ*, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ನ್ಯೂ ಡೆಲ್ಲಿ,

34. ಅಶೋಕ್ ಮಜುಂದಾರ್, 2011, *ದಿ ತೇಭಾಗ ಮೂವ್‌ಮೆಂಟ್, ಪೊಲಿಟಿಕ್ಸ್ ಆಫ್ ಪೆಸೆಂಟ್ ಪ್ರೊಟೆಸ್ಟ್ ಇನ್ ಬೆಂಗಾಲ್ 1946–1950*, ಆಕಾರ್ ಬುಕ್ಸ್, ನ್ಯೂಡೆಲ್ಲಿ.

35. ಮಂಗ್ಳೂರ ವಿಜಯ (ಸಂ), 2009, *ನಕ್ಸಲ್ ಚಳುವಳಿ*, ಸಂಬುದ್ಧ ಪ್ರಕಾಶನ, ಬೆಂಗಳೂರು.

36. ಕಾರ್ಲ್ ಮಾರ್ಕ್ಸ್, 1988 (1959), *ದಿ ರಿವೋಲ್ಟ್ ಇನ್ ಇಂಡಿಯಾ, ಮಾರ್ಕ್ಸ್–ಎಂಗೆಲ್ಸ್‌ರ ಇಂಡಿಯಾಸ್ ಫಸ್ಟ್ ವಾರ್ ಆಫ್ ಇಂಡಿಪೆಂಡೆನ್ಸ್*, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೋ.

37. ಮಾರ್ಕ್ಸ್, ಏಂಗೆಲ್ಸ್, 1988 (1959), *ದಿ ಫಸ್ಟ್ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್ 1857–1859*, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೊ.

38. ಮಿತ್ರ ಎನ್.ಎನ್., (ಸಂ), 1929, ಇಂಡಿಯನ್ ಆನ್ಯುಲ್ ರಿಜಿಸ್ಟರ್, ಸಂ. 2

39. ಮುರುಗೇಸನ್ ಕೆ. ಅಂಡ್ ಸಿ.ಎಸ್.ಸುಬ್ರಮಣ್ಯಂ, 1975, *ಸಿಂಗಾರವೇಲು – ಫಸ್ಟ್ ಕಮ್ಯುನಿಸ್ಟ್ ಇನ್ ಸೌತ್ ಇಂಡಿಯಾ*, ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.

40. ಮುಝಾಫರ್ ಅಹ್ಮದ್, 1970, *ಮೈಸೆಲ್ಫ್ ಅಂಡ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ, 1920–1929*, (ಅನು.) ಪ್ರಭಾಸ್ ಕುಮಾರ್, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

41. ನಾಡಕರ್ಣಿ ಎಂ.ವಿ., 1986, *ಕರ್ನಾಟಕದ ರೈತ ಹೋರಾಟಗಳು*, ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು

42. ಪಾರ್ಥ ಚಟರ್ಜಿ, 1997, *ದಿ ನೇಷನ್ ಅಂಡ್ ಇಟ್ಸ್ ಫ್ರಾಗ್ಮೆಂಟ್ಸ್ ಕಲೋನಿಯಲ್ ಅಂಡ್ ಪೋಸ್ಟ್ ಕಲೋನಿಯಲ್ ಹಿಸ್ಟರೀಸ್*, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

43. ಪ್ರಕಾಶ್ ಕೆ., 2017, *ಫಿಡೆಲ್ ಕ್ಯಾಸ್ಟ್ರೋ*, ಕ್ರಿಯಾ ಪ್ರಕಾಶನ, ಬೆಂಗಳೂರು.

44. ಪ್ರಕಾಶ್ ಕಾರಟ್ (ಸಂ), ಐಜಾಸ್ ಅಹಮದ್, ಇರ್ಫಾನ್ ಹಬೀಬ್, ಪ್ರಭಾತ್ ಪಟ್ನಾಯಕ್, 1999, *ಎ ವರ್ಲ್ಡ್ ಟು ವಿನ್, ಎಸ್ಸೇಸ್ ಆನ್ ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ*, ಲೆಫ್ಟ್‌ವರ್ಡ್, ನ್ಯೂಡೆಲ್ಲಿ.

45. ರಾಘವೇಂದ್ರ ರಾವ್ ಕೆ., 2010, *ಕರ್ನಾಟಕ ಯೂನಿಫಿಕೇಷನ್ ಎ ಪೊಲಿಟಿಕಲ್ ಇಂಟರ್‌ಪ್ರಿಟೇಷನ್*, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

46. ರಾಜನ್ ಎಂ.ಎ.ಎಸ್., 1979, *ದಿ ಲ್ಯಾಂಡ್ ರಿಫಾರ್ಮ್ ಲಾ ಇನ್ ಕರ್ನಾಟಕ*, ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

47. ರಾಜಶೇಖರ್ ಜಿ., 1980, *ಕಾಗೋಡು ಸತ್ಯಾಗ್ರಹ*, ಅಕ್ಷರ ಪ್ರಕಾಶನ, ಸಾಗರ.

48. ರಾಜೇಶ್ವರಿ ತೇಜಸ್ವಿ, 2011, *ನನ್ನ ತೇಜಸ್ವಿ*, ಪುಸ್ತಕ ಪ್ರಕಾಶನ, ಮೈಸೂರು.

49. ರಾಜೇಶ್ವರ್ ರಾವ್ ಸಿ., 1972, *ದಿ ಹಿಸ್ಟಾರಿಕ್ ತೆಲಂಗಾಣ ಸ್ಟ್ರಗಲ್ : ಸಮ್ ಯೂಸ್‌ಫುಲ್ ಲೆಸನ್ಸ್ ಫ್ರಮ್ ಇಟ್ಸ್ ರಿಚ್ ಎಕ್ಸ್‌ಪೀರಿಯೆನ್ಸ್*, ನ್ಯೂ ಡೆಲ್ಲಿ.

50. ರಾಮಮೂರ್ತಿ ಪಿ., 1987, *ದಿ ಫ್ರೀಡಂ ಸ್ಟ್ರಗಲ್ ಅಂಡ್ ದಿ ದ್ರವಿಡಿಯನ್ ಮೂವ್‌ಮೆಂಟ್*, ಓರಿಯಂಟ್ ಲಾಂಗ್‌ಮನ್, ನ್ಯೂ ಡೆಲ್ಲಿ.

51. ರಾಮಭದ್ರಯ್ಯ ಸಿ, 1990, *ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆ*, ಕೆಪಿಆರ್‌ಎಸ್, ಬೆಂಗಳೂರು.

52. ರಣದಿವೆ ಬಿ.ಟಿ., 1979, ಕ್ಲಾಸ್, ಕ್ಯಾಸ್ಟ್ ಅಡ್ ಪ್ರಾಪರ್ಟಿ ರಿಲೇಷನ್ಸ್, *ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ಫೆಬ್ರವರಿ

53. ರಣಜಿತ್ ಗುಹಾ (ಸಂ), 1982, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 1, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

54. ರಣಜಿತ್ ಗುಹಾ (ಸಂ), 1983, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 2, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

55. ರಣಜಿತ್ ಗುಹಾ (ಸಂ), 1984, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 3, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

56. ರಣಜಿತ್ ಗುಹಾ (ಸಂ), 1985, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 4, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

57. ರಣಜಿತ್ ಗುಹಾ (ಸಂ), 1987, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 5, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

58. ರಣಜಿತ್ ಗುಹಾ (ಸಂ), 1989, *ಸಬಾಲ್ಟರ್ನ್ ಸ್ಟಡೀಸ್*, ಸಂಪುಟ 6, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

59. ರಸೂಲ್ ಎಂ.ಎ., 1989, *ಎ ಹಿಸ್ಟರಿ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ*, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

60. ಸುಭೋಧ್ ರಾಯ್, (ಸಂ), 1985 (1976), *ಕಮ್ಯುನಿಸಂ ಇನ್ ಇಂಡಿಯಾ 1919–24*, ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.

61. ಸಾಕಿ, 1998, *ಮೇಕಿಂಗ್ ಹಿಸ್ಟರಿ, ಕರ್ನಾಟಕಾಸ್ ಪೀಪಲ್ ಅಂಡ್ ದಿಯರ್ ಹಿಸ್ಟರಿ*, ಸಂ. 1 ಮತ್ತು 2, ವಿಮುಕ್ತಿ ಪ್ರಕಾಶನ, ಬೆಂಗಳೂರು.

62. ಸುಮಿತ್ ಸರ್ಕಾರ್, 2014 (1983), *ಮಾಡರ್ನ್ ಇಂಡಿಯಾ 1885–1947*, ಪಾಲ್‌ಗ್ರೇವ್ ಮ್ಯಾಕ್‌ಮಿಲನ್, ಯು.ಕೆ.

63. ಮೋಹಿತ್ ಸೇನ್, 2003, *ಎ ಟ್ರಾವೆಲರ್ ಅಂಡ್ ದಿ ರೋಡ್ – ದಿ ಜರ್ನಿ ಆಫ್ ಎನ್ ಇಂಡಿಯನ್ ಕಮ್ಯುನಿಸ್ಟ್*, ರೂಪಾ ಅಂಡ್ ಕಂ. ಬೆಂಗಳೂರು.

64. ಸುಕೋಮಲ್ ಸೇನ್, 1979 (1977), *ವರ್ಕಿಂಗ್ ಕ್ಲಾಸ್ ಆಫ್ ಇಂಡಿಯಾ, ಹಿಸ್ಟರಿ ಆಫ್ ಎಮರ್ಜೆನ್ಸ್ ಅಂಡ್ ಮೂವ್‌ಮೆಂಟ್ 1830–1970*, ಕಲ್ಕತ್ತಾ.

65. ಶಂಕರನಾರಾಯಣ ರಾವ್ ಎನ್.ಪಿ., 1989, *ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು*, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

66. ಶಿರಿ ಜಿ., 2003, *ಪರಿಶ್ರಮದ ಹಾದಿಯಲ್ಲಿ ಮುನ್ನಡೆದ ಹೆಜ್ಜೆಗಳು, ಕಾಮ್ರೇಡ್ ಸಿಂಪ್ಸನ್ ಸೋನ್ಸ್ ಜೀವನ ಕಥನ*, ಜನಜಾಗೃತಿ ವೇದಿಕೆ, ಮಂಗಳೂರು.

67. ಶಿವ ವರ್ಮ (ಸಂ), 2007, *ಭಗತ್ ಸಿಂಗ್*, ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ, ನ್ಯೂ ಡೆಲ್ಲಿ.

68. ಶ್ರೀಕಂಠಯ್ಯ ಎಲ್.,1957, *ಕಮ್ಯೂನಿಸಂ*, ಮೈಸೂರು ವಿಶ್ವವಿದ್ಯಾಲಯ.

69. ಶ್ರೀರಾಮರೆಡ್ಡಿ ಜಿ.ವಿ., 2014, *ಅವಿಭಜಿತ ಕೋಲಾರ ಜಿಲ್ಲೆ ಕಮ್ಯುನಿಸ್ಟ್ ಚಳುವಳಿಯ ನೆನಪುಗಳು*, ಸಿಪಿಐ(ಎಂ), ಚಿಕ್ಕಬಳ್ಳಾಪುರ.

70. ಶ್ರೀಯಾನ್ ಕೆ.ಆರ್., 2017, *ನನ್ನ ಜೀವನ ಕಥನದ ನೆನಪಿನಂಗಳದಿಂದ*, ಕ್ರಿಯಾ ಪುಸ್ತಕ, ಬೆಂಗಳೂರು

71. ಶ್ರೀಯಾನ್ ಕೆ.ಆರ್., 2016, *ಎ.ಕೃಷ್ಣಶೆಟ್ಟಿ, ಜನಮನ ಗೆದ್ದ ನಾಯಕ*, ಜನಶಕ್ತಿ ಪ್ರಕಾಶನ, ಬೆಂಗಳೂರು.

72. ಸಿದ್ಧಯ್ಯ, 2002, *1979 ರ ಮೈಕೋ ಹೋರಾಟ*, ಕ್ರಿಯಾ ಪ್ರಕಾಶನ, ಬೆಂಗಳೂರು.

73. ಸಿನ್ಹಾ ಎಲ್.ಪಿ, 1965, *ದಿ ಲೆಫ್ಟ್–ವಿಂಗ್ ಇನ್ ಇಂಡಿಯಾ(1919–47)*, ನ್ಯೂ ಪಬ್ಲಿಷರ್ಸ್, ಮುಝುಫರ್‌ಪುರ್.

74. **ಸೋಮಶೇಖರ್ ಹೆಚ್.ವಿ., 2002, *ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರು*, ಕಾಮ್ರೇಡ್ ಎಸ್.ಲಕ್ಷ್ಮಯ್ಯ, ಚಿಕ್ಕಬಳ್ಳಾಪುರ.**

75. ಸುಧಿ ಪ್ರಧಾನ್, (ಸಂ), 1960, *ಮಾರ್ಕ್ಸಿಸ್ಟ್ ಕಲ್ಚರಲ್ ಮೂವ್‌ಮೆಂಟ್ ಇನ್ ಇಂಡಿಯಾ*. ಸಂ. 1

76. ಸುಂದರಯ್ಯ ಪಿ., 1972, *ತೆಲಂಗಾಣ ಪೀಪಲ್ಸ್ ಸ್ಟ್ರಗಲ್ ಅಂಡ್ ಇಟ್ಸ್ ಲೆಸನ್ಸ್*, ಫೌಂಡೇಷನ್ ಬುಕ್ಸ್, ನ್ಯೂ ಡೆಲ್ಲಿ.

77. ಸುಂದರಯ್ಯ ಪಿ., *ವಿಪ್ಲವ ಪಥಂಲೋ ನಾ ಪಯಣಂ*, ಭಾಗ–1.

78. ಸುಂದರಯ್ಯ ಪಿ., 1991, *ವೈ ಐ ರಿಸೈನ್ಡ್ ಫ್ರಂ ಜಿ.ಎಸ್. ಅಂಡ್ ಪಿ.ಬಿ.*, ಮೈ ರೆಸಿಗ್ನೇಷನ್, ಇಂಡಿಯಾ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ.

79. ಹರ್ಕಿಷನ್ ಸಿಂಗ್ ಸುರ್ಜಿತ್, 1996, *ಸಮತೆಯ ನಾಡಿನ ಉದಯಕ್ಕಾಗಿ*, (ಅನು: ವಿಶ್ವ ಕುಂದಾಪುರ), ಕ್ರಿಯಾ ಪ್ರಕಾಶನ, ಬೆಂಗಳೂರು.

80. ಉಗ್ರಪ್ಪ ಎಂ.ಎನ್., 2008, *ಅರಮನೆಯ ಅಂಗಳದಲ್ಲಿ ಕೆಂಪು ಹೂಗಳ ಕನಸು*, ಸಿಪಿಐ(ಎಂ) ಪ್ರಕಾಶನ, ಮೈಸೂರು.

81. ಉಪಾಧ್ಯಾಯ ಎನ್.ಕೆ., 1996, *ನಾನು ನಡೆದು ಬಂದ ದಾರಿ*, ಕ್ರಿಯಾ ಪ್ರಕಾಶನ, ಬೆಂಗಳೂರು.

82. ವಿಜಯ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು ಮತ್ತು ಸಂಪುಟ ಸಂಪಾದಕರು), 2010, *ಭಾರತ ಉಪಖಂಡದ ಆಧುನಿಕ ಚರಿತ್ರೆ*, ಚರಿತ್ರೆ ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪಿ.

83. ವಿಜಯ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು), ಚಿನ್ನಸ್ವಾಮಿ ಸೋಸಲೆ (ಸಂಪುಟ ಸಂಪಾದಕರು), 2010, *ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು*, ಚರಿತ್ರೆ ಸಂಪುಟ 6, ಕನ್ನಡ ವಿಶ್ವವಿದ್ಯಾಲಯ, ಹಂಪಿ.

84. ವಿಜಯ ಪೂಣಚ್ಚ ತಂಬಂಡ, 2014, *ಆಧುನಿಕ ಕೊಡಗು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

85. ವಿಜಯ ಪೂಣಚ್ಚ ತಂಬಂಡ, 2017, *ವರ್ಗದಿಂದ ಸಂಸ್ಕೃತಿಯೆಡೆಗೆ ಸಬಾಲ್ಟರ್ನ್ ಅಧ್ಯಯನ, ಮಾರ್ಕ್ಸಿಸ್ಟ್ ಮತ್ತು ಮಾರ್ಕ್ಸಿಸ್ಟೇತರ ವಿಮರ್ಶೆಗಳು* ಕನ್ನಡ ವಿಶ್ವವಿದ್ಯಾಲಯ, ಹಂಪಿ.

86. ವಿಶ್ವ ಕುಂದಾಪುರ, 2014, *ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ*, ಕ್ರಿಯಾ ಪ್ರಕಾಶನ, ಬೆಂಗಳೂರು.

87. ವಿಠಲ ಭಂಡಾರಿ, 2011, *ಹಸಿವಿನ ಹಾಡು–ಪಾಡು*, ಪ್ರೇಜಸ ಪ್ರಕಾಶನ, ಬೆಂಗಳೂರು.

88. ಸೀತಾರಾಂ ಯೆಚೂರಿ, 2008, *ಸೋಷಿಯಲಿಸಂ ಇನ್ ದಿ ಎರಾ ಆಫ್ ಗ್ಲೋಬಲೈಸೇಷನ್, ಸೋಷಿಯಲಿಸಂ ಇನ್ ಎ ಚೇಂಜಿಂಗ್ ವರ್ಲ್ಡ್*, ಪ್ರಜಾಶಕ್ತಿ ಬುಕ್ ಹೌಸ್, ಹೈದರಾಬಾದ್.

ಆ) ಲೇಖನಗಳು

1. ಅಚ್ಯುತ, 'ಕೆಜಿಎಫ್‌ನ ಕಾರ್ಮಿಕ ಚಳುವಳಿ ಕಮ್ಯುನಿಸ್ಟರ ಪಾತ್ರ', **ಐಕ್ಯರಂಗ** ಮೇ ವಿಶೇಷಾಂಕ, 3–5–1987.

2. ಅಜೊಯ್ ಆಶೀರ್ವಾದ್ ಮಹಾಪ್ರಶಸ್ತ, 'ರೈಟರ್ಸ್ ಫಾರ್ ಚೇಂಜ್', **ಫ್ರಂಟ್‌ಲೈನ್**, ಸಂಪುಟ 28, ಸಂಚಿಕೆ 26, ಡಿಸೆಂಬರ್ 17–30, 2011.

3. ಗೋವಿಂದರಾಜು ಸಿ.ಆರ್., 'ಕರ್ನಾಟಕ ಏಕೀಕರಣ ಚಳುವಳಿ: ಕೆಲವು ಟಿಪ್ಪಣಿಗಳು', 2010, ವಿಜಯ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು ಮತ್ತು ಸಂಪುಟ ಸಂಪಾದಕರು), **ಭಾರತ ಉಪಖಂಡದ ಆಧುನಿಕ ಚರಿತ್ರೆ,** ಚರಿತ್ರೆ ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 426–434

4. ಜಾನಕಿ ನಾಯರ್, 'ಕಂಟೆಂಡಿಂಗ್ ಐಡಿಯಾಲಜೀಸ್? ದಿ ಮಾಸ್ ಅವೇಕನರ್ಸ್ ಯೂನಿಯನ್ ಅಂಡ್ ದಿ ಕಾಂಗ್ರೆಸ್ ಇನ್ ಮೈಸೂರ್ 1936–1942', **ಸೋಷಿಯಲ್ ಸೈಂಟಿಸ್ಟ್,** ಸಂಪುಟ 22, ನಂ.7–8, ಜುಲೈ–ಆಗಸ್ಟ್ 1994.

5. ಐಜಾಜ್ ಅಹಮದ್, 'ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಇನ್ ಇಟ್ಸ್ ಓನ್ ಟೈಮ್, ಅಂಡ್ ಇನ್ ಅವರ್ಸ್', 1999, ಪ್ರಕಾಶ್ ಕಾರಟ್ (ಸಂ), ಎ ವರ್ಲ್ಡ್ ಟು ವಿನ್, **ಲೆಫ್ಟ್‌ವರ್ಡ್,** ನ್ಯೂಡೆಲ್ಲಿ, ಪುಟಗಳು 14–47

6. ಇರ್ಫಾನ್ ಹಬೀಬ್, 'ರೀಡಿಂಗ್ ಆಫ್ ಹಿಸ್ಟರಿ ಇನ್ ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ', 1999, ಪ್ರಕಾಶ್ ಕಾರಟ್ (ಸಂ), ಎ ವರ್ಲ್ಡ್ ಟು ವಿನ್, **ಲೆಫ್ಟ್‌ವರ್ಡ್,** ನ್ಯೂಡೆಲ್ಲಿ, ಪುಟಗಳು 48–67

7. ಇರ್ಫಾನ್ ಹಬೀಬ್, 'ಪ್ರಾಬ್ಲಮ್ಸ್ ಆಫ್ ಮಾರ್ಕ್ಸಿಸ್ಟ್ ಹಿಸ್ಟೋರಿಯೋಗ್ರಫಿ', **ಸೋಷಿಯಲ್ ಸೈಂಟಿಸ್ಟ್,** ನಂ. 187, 1988, ಪುಟಗಳು 3–13.

8. ಇರ್ಫಾನ್ ಹಬೀಬ್, 'ದಿ ಲೆಫ್ಟ್ ಅಂಡ್ ದಿ ನ್ಯಾಷನಲ್ ಮೂವ್‌ಮೆಂಟ್', **ಸೋಷಿಯಲ್ ಸೈಂಟಿಸ್ಟ್,** ಮೇ–ಜೂನ್, 1998. ಪುಟಗಳು 3–33.

9. ಜೋಷಿ ಪಿ.ಸಿ., 'ದಿ ಕಯ್ಯೂರ್ ಹೀರೋಸ್', **ಲೇಬರ್ ಮಂತ್ಲಿ,** ಆಗಸ್ಟ್ 1943, ಪು. 251–253.

10. ದುರ್ಗಾಪ್ರಸಾದ್, 'ಚಕ್ಕೇರ ಬಿದ್ದಪ್ಪ ಮೊಣ್ಣಯ್ಯ – ಈ ಸ್ವಾತಂತ್ರ್ಯ ಹೊರಾಟಗಾರ ಮತ್ತು ಕಮ್ಯುನಿಸ್ಟನ ಅರಿಯದ ಮುಖ', **ಕೊಡಗು ಸಮಾಚಾರ,** 27–11–2002.

11. ಅನೂಪ್‌ಲಾಲ್, 'ದಿ ನ್ಯಾಷನಲಿಸ್ಟ್ ಜೋಸೆಫೈಟ್, ಪಿ.ಸುಂದರ ರಾಮಿ ರೆಡ್ಡಿ', ಸೈಂಟ್ ಜೋಸೆಫ್ಸ್ ಕಾಲೇಜ್, ಬೆಂಗಳೂರು, ಸ್ಮರಣ ಸಂಚಿಕೆ, 2013–14, ಪು. 129–130.

12. ರಾಮರಾವ್ ಎಂ.ಎಸ್., 'ಏಕೈಕ ಕನ್ನಡ ನಾಡು ನುಡಿ ಗುಡಿಗಾಗಿ, ಕನ್ನಡ ಜನತೆ ಕಾದಿದ ಸಮರ', **ಜನಶಕ್ತಿ,** ನವೆಂಬರ್ 1, 1956, ಭಾರತ ಕಮ್ಯುನಿಸ್ಟ್ ಪಕ್ಷ ಪ್ರಕಟಿತ, ಹುಬ್ಬಳ್ಳಿ.

13. ಬಸವಪುನ್ನಯ್ಯ ಎಂ., 'ದಿ ಸ್ಟೇಟ್‌ಮೆಂಟ್ ಆಫ್ ಪಾಲಿಸಿ ರಿವ್ಯೂಡ್', **ಮಾರ್ಕ್ಸಿಸ್ಟ್,** ಸಂಪುಟ 3, ಸಂಖ್ಯೆ 3–4, ಏಪ್ರಿಲ್ 1986.

14. ಹರ್ಕಿಷನ್‌ಸಿಂಗ್ ಸುರ್ಜಿತ್, 'ಎನ್ ಐಕಾನ್ ಆಫ್ ಮಿಲಿಯನ್ಸ್', ಏಪ್ರಿಲ್ 17, 1998 **ಫ್ರಂಟ್‌ಲೈನ್.**

15. ದಿಲೀಪ್ ಸುಬ್ರಮಣಿಯನ್, 'ದಿ ಮೈಕೋ ಸ್ಟ್ರೈಕ್: ಎ ರೆಟ್ರೋಸ್ಪೆಕ್ಟೀವ್', **ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,** ಸಂ. 15(22), ಮೇ 31, 1980.

16. ನಾಯ್ಕ್ ಜೆ.ವಿ., 'ಲೋಕಮಾನ್ಯ ತಿಲಕ್ ಆನ್ ಕಾರ್ಲ್ ಮಾರ್ಕ್ಸ್ ಅಂಡ್ ಕ್ಲಾಸ್ ಕಾನ್‌ಫ್ಲಿಕ್ಟ್', **ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,** ಸಂ. 34, ಮೇ 1, 1999.

17. ಮೈಕೆಲ್ ಬಿ. ಫರ್ನಾಂಡೀಸ್, 'ದಿ ಪಬ್ಲಿಕ್ ಸೆಕ್ಟರ್ ಸ್ಟ್ರೈಕ್: ಫ್ಯಾಕ್ಟ್ಸ್ ಅಂಡ್ ಲೆಸನ್ಸ್', **ದಿ ಅದರ್‌ಸೈಡ್,** (ಸಂ) ಜಾರ್ಜ್ ಫರ್ನಾಂಡಿಸ್, ನ್ಯೂ ಡೆಲ್ಲಿ.

18. ಪ್ರಕಾಶ್ ಕಾರಟ್, 'ಆನ್ ದಿ ಪ್ರೋಗ್ರಾಂ ಆಫ್ ದಿ ಸಿಪಿಐ', **ಮಾರ್ಕ್ಸಿಸ್ಟ್,** XXXII 1, ಜನವರಿ–ಮಾರ್ಚ್ 2016.

19. ರವೀಂದರ್ ಕುಮಾರ್, 'ದಿ ಬಾಂಬೆ ಟೆಕ್ಸ್‌ಟೈಲ್ ಸ್ಟ್ರೈಕ್, 1919', **ಇಂಡಿಯನ್ ಎಕನಾಮಿಕ್ ಅಂಡ್ ಸೋಷಿಯಲ್ ಹಿಸ್ಟರಿ ರಿವ್ಯೂ,** ಮಾರ್ಚ್ 1971.

20. ರಾಜ್‌ಪುರೋಹಿತ್ ಎ.ಆರ್., ಲ್ಯಾಂಡ್ ರಿಫಾರ್ಮ್ ಅಂಡ್ ಚೇಂಜಿಂಗ್ ಅಗ್ರೇರಿಯನ್ ರಿಲೇಷನ್ಸ್, ಮಾಡಿಫೈಡ್ ವರ್ಶನ್ ಆಫ್ ದಿ ಪೇಪರ್ ಪ್ರಸೆಂಟೆಡ್ ಅಟ್ ದಿ ಥರ್ಡ್ ದಾಮೋದರನ್ ಮೆಮೋರಿಯಲ್ ಸಿಂಪೋಸಿಯಂ ಆನ್ 'ಪೆಸೆಂಟ್ರಿ ಅಂಡ್ ಸ್ಟ್ರಗಲ್ ಫಾರ್ ನ್ಯೂ ಇಂಡಿಯಾ' ಹೆಲ್ಡ್ ಅಟ್ ಜವಹರಲಾಲ್ ನೆಹರೂ ಯೂನಿವರ್ಸಿಟಿ, ನ್ಯೂ ಡೆಲ್ಲಿ, ಏಪ್ರಿಲ್ 12–13, 1980.

21. ರಾಜನ್ ಎಂ.ಎ.ಎಸ್., 1979, 'ದಿ ಲ್ಯಾಂಡ್ ರಿಫಾರ್ಮ್ ಲಾ ಇನ್ ಕರ್ನಾಟಕ', ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

22. ಜಯಂತನುಜ ಬಂಡೋಪಾಧ್ಯಾಯ, 'ಕ್ಲಾಸ್ ಸ್ಟ್ರಗಲ್ ಅಂಡ್ ಕ್ಯಾಸ್ಟ್ ಅಪ್ರೆಷನ್: ಇಂಟೆಗ್ರಲ್ ಸ್ಟ್ರಾಟಜಿ ಆಫ್ ದಿ ಲೆಫ್ಟ್', **ಮಾರ್ಕ್ಸಿಸ್ಟ್,** ಸಂಪುಟ 18, ನಂ. 03–04, ಜುಲೈ–ಡಿಸೆಂಬರ್ 2002.

23. ವಸಂತರಾಜ್ ಎನ್.ಕೆ., 'ತೆಲಂಗಾಣ ಹೋರಾಟ', 2010, ವಿಜಯ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು ಮತ್ತು ಸಂಪುಟ ಸಂಪಾದಕರು), **ಭಾರತ ಉಪಖಂಡದ ಆಧುನಿಕ ಚರಿತ್ರೆ,** ಚರಿತ್ರೆ ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 257–274.

24. ಸುರೇಂದ್ರರಾವ್ ಬಿ., 'ಭಾರತದ ರಾಷ್ಟ್ರೀಯತೆಯ ವಿವಿಧ ಆಯಾಮಗಳು', 2010, ವಿಜಯ ಪೂಣಚ್ಚ ತಂಬಂಡ (ಪ್ರಧಾನ ಸಂಪಾದಕರು ಮತ್ತು ಸಂಪುಟ ಸಂಪಾದಕರು), **ಭಾರತ ಉಪಖಂಡದ ಆಧುನಿಕ ಚರಿತ್ರೆ,** ಚರಿತ್ರೆ ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 1–14.

25. ಸುಮಿತ್ ಸರ್ಕಾರ್, 'ದಿ ಕಮ್ಯುನಿಸ್ಟ್ಸ್ ಅಂಡ್ 1942', **ಸೋಷಿಯಲ್ ಸೈಂಟಿಸ್ಟ್,** ನಂ. 136, 1984, ಪು.47–48.

26. ನಾಯರ್ ವಿ.ಜೆ.ಕೆ., 'ದಿ ಪಾರ್ಟಿ ಆಫ್ ದಿ ವರ್ಕಿಂಗ್ ಕ್ಲಾಸ್', ಅಪ್ರಕಟಿತ ಲೇಖನ.

ಇ) ಪ್ರೌಢ ಪ್ರಬಂಧಗಳು ಮತ್ತು ಪ್ರಬಂಧಗಳು

1. ನರಸಯ್ಯ, ಇನುಗುರ್ತಿ, 2010, 'ಲೆಫ್ಟ್ ಅಂಡ್ ನ್ಯಾಷನಲ್ ಮೂವ್‌ಮೆಂಟ್ಸ್ ಇನ್ ಮದ್ರಾಸ್ ಪ್ರೆಸಿಡೆನ್ಸಿ, 1930–1947: ಎ ಸ್ಟಡಿ ಇನ್ ಪೊಲಿಟಿಕ್ಸ್ ಆಫ್ ಹೆಜಿಮನಿ', ಪಿಹೆಚ್.ಡಿ. ಮಹಾಪ್ರಬಂಧ, ಚರಿತ್ರೆ ವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ, ಹೈದರಾಬಾದ್.

2. ಶೋಭಾ ಪಿ.ಎನ್., 1994, 'ಲೆಫ್ಟ್ ಮೂವ್‌ಮೆಂಟ್ ಇನ್ ಪ್ರಿನ್ಸ್ಲಿ ಮೈಸೂರು 1932–1947', ಪಿಹೆಚ್.ಡಿ. ಮಹಾಪ್ರಬಂಧ, ಚರಿತ್ರೆ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

3. ಅಜಯ್ ಕುಮಾರ್ ಕೆ., 2008, 'ದಿ ಲೆಫ್ಟ್ ಮೂವ್‌ಮೆಂಟ್ ಇನ್ ಮಲಬಾರ್ (1938–1964) – ಆಂಟಿಸಿಡೆಂಟ್ಸ್ ಅಂಡ್ ಸ್ಟ್ರಾಟಜೀಸ್ ಆಫ್ ಮೊಬಿಲೈಸೇಷನ್', ಪಿಹೆಚ್.ಡಿ. ಮಹಾಪ್ರಬಂಧ, ಚರಿತ್ರೆ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

4. ಮದನ್ ಪಿ., 'ಬೆಂಗಳೂರಿನ ಬಿನ್ನಿ ಮಿಲ್: ಒಂದು ಅಧ್ಯಯನ', ಎಂ.ಫಿಲ್. ನಿಬಂಧ, ಚರಿತ್ರೆ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

❖ ❖ ❖